ಉತ್ತರ ಕನ್ನಡ ಜಿಲ್ಲೆಯಲ್ಲಿ ಶಾಸ್ತ್ರೀಯ ಸಂಗೀತದ ಬೆಳವಣಿಗೆ

೧೯೪೫ ರಿಂದ ೧೯೯೮

ಕನ್ನಡ ವಿಶ್ವ ವಿದ್ಯಾಲಯಕ್ಕೆ ಒಪ್ಪಿಸಿದ ಪಿ ಎಚ್, ಡಿ. ಮಹಾ ಪ್ರಬಂಧ.

ಪ್ರಬಂಧ ಮಂಡನಕಾರರು

ಶ್ರೀ ಕೃಷ್ಣಮೂರ್ತಿ ಭಟ್ಟ ಎಂ.ಎ. ಸಂಗೀತ ರತ್ನ

ಹಾಸಣಗಿ ಅಂಚೆ. ಮಂಚಿಕೇರಿ ಮಾರ್ಗ

ಯಲ್ಲಾಪುರ ತಾಲೂಕ (ಉ.ಕ)

೫೮೧ ೩೪೭

ಮಾರ್ಗದರ್ಶಕರು

ಪಂ। ಗಣಪತಿ ಭಟ್ಟ ಖ್ಯಾತ ಗಾಯಕರು

ಆಕಾಶವಾಣಿ ಹಾಗೂ ದೂರದರ್ಶನದ

ರಾಷ್ಟ್ರೀಯ ಸಂಗೀತ ಕಲಾಕಾರರು

ಹಾಸಣಗಿ ಅಂಚೆ

ಯಲ್ಲಾಪುರ ತಾಲೂಕ

೧೯೯೮-೧೯೯೯

ಲಲಿತಕಲಾ ಸಂಗೀತ ನಿಕಾಯ

ಕನ್ನಡ ವಿಶ್ವವಿದ್ಯಾಲಯ ಹಂಪಿ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಶಾಸ್ತ್ರೀಯ ಸಂಗೀತದ ಬೆಳವಣಿಗೆ

೧೯೪೫ ರಿಂದ ೧೯೯೮

ಕನ್ನಡ ವಿಶ್ವ ವಿದ್ಯಾಲಯಕ್ಕೆ ಒಪ್ಪಿಸಿದ ಪಿ ಎಚ್, ಡಿ. ಮಹಾ ಪ್ರಬಂಧ.

ಪ್ರಬಂಧ ಮಂಡನಕಾರರು

ಶ್ರೀ ಕೃಷ್ಣಮೂರ್ತಿ ಭಟ್ಟ ಎಂ.ಎ. ಸಂಗೀತ ರತ್ನ
ಹಾಸಣಗಿ ಅಂಚೆ. ಮಂಚಿಕೇರಿ ಮಾರ್ಗ
ಯಲ್ಲಾಪುರ ತಾಲೂಕ (ಉ.ಕ)
೫೮೧ ೩೪೭

ಪಂ। ಗಣಪತಿ ಭಟ್ಟ ಖ್ಯಾತ ಗಾಯಕರು
ಆಕಾಶವಾಣಿ ಹಾಗೂ ದೂರದರ್ಶನದ
ರಾಷ್ಟ್ರೀಯ ಸಂಗೀತ ಕಲಾಕಾರರು
ಹಾಸಣಗಿ ಅಂಚೆ
ಯಲ್ಲಾಪುರ ತಾಲೂಕ

೧೯೯೮-೧೯೯೯
ಲಲಿತಕಲಾ ಸಂಗೀತ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ.

ಮಾರ್ಗದರ್ಶಕರ ಪ್ರಮಾಣಪತ್ರ

ಸ್ವತಹ ಸಂಗೀತಗಾರರೂ ಆದ ಶ್ರೀ ಕೃಷ್ಣಮೂರ್ತಿ ಭಟ್ಟರು ಸಿದ್ಧಪಡಿಸಿದ 'ಉತ್ತರಕನ್ನಡ ಜಿಲ್ಲೆಯಲ್ಲಿ ಶಾಸ್ತ್ರೀಯ ಸಂಗೀತದ ಬೆಳವಣಿಗೆ,' ಮಹಾಪ್ರಬಂಧ, ರಚನೆಯ ಚೌಕಟ್ಟಿನಲ್ಲಿ ಉತ್ತಮವಾಗಿ ಮೂಡಿಬಂದಿದೆ. ಉತ್ತರಕನ್ನಡ ಜಿಲ್ಲೆಯ ಶಾಸ್ತ್ರೀಯ ಸಂಗೀತದ ಇತಿಹಾಸ, ಇಲ್ಲಿಯವರೆಗೆ ನಡೆದುಕೊಂಡು ಬಂದ ದಾರಿ, ಶಾಸ್ತ್ರೀಯ ಸಂಗೀತ, ಸಾಂಸ್ಕೃತಿಕ ಸಂಘಟನೆಗೆ ಒಳಪಟ್ಟಂತೆ ಹಲವು ಅಧ್ಯಾಯಗಳನ್ನು ಮಹಾಪ್ರಬಂಧದ ರಚನೆಯಲ್ಲಿ ಮಾಡಲಾಗಿದೆ. ಸಂಗೀತದ ಮಹತ್ವ, ಪರಂಪರೆ, ಕಲೆ ಹಾಗೂ ಜಿಲ್ಲೆಯಲ್ಲಿ ಶಾಸ್ತ್ರೀಯ ಸಂಗೀತದ ಬೆಳವಣಿಗೆಗೆ ಸಹಾಯಕವಾದ ಅನೇಕ ಅಂಶಗಳನ್ನು ಮಹಾಪ್ರಬಂಧದಲ್ಲಿ ಪ್ರಸ್ತಾಪಿಸಲಾಗಿದೆ. ಪಾಶ್ಚಾತ್ಯ ಸಂಸ್ಕೃತಿಯ ವಿಪರೀತ ಹಾವಳಿಯ ಇಂದಿನ ದಿನಗಳಲ್ಲಿ ಶಾಸ್ತ್ರೀಯಸಂಗೀತ, ಪರಂಪರೆ, ಭಾರತೀಯ ಸಂಸ್ಕೃತಿಯ ಬಗೆಗಿನ ಅಧ್ಯಯನದ ಕಾಳಜಿಗೆ ವಿಶೇಷ ಮಹತ್ವವಿದೆ.

ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ 'ಉತ್ತರಕನ್ನಡ ಜಿಲ್ಲೆಯ ಶಾಸ್ತ್ರೀಯ ಸಂಗೀತದ ಬೆಳವಣಿಗೆ' ಈ ಮಹಾಪ್ರಬಂಧವು ಸರಳವಾಗಿ ಜಿಲ್ಲೆಯ ಶಾಸ್ತ್ರೀಯ ಸಂಗೀತ ಹಾಗೂ ಬೆಳವಣಿಗೆಯ ವಿಧಾನವನ್ನು ತಿಳಿಸಿದ್ದು, ಕನ್ನಡ ವಿಶ್ವವಿದ್ಯಾಲಯದ ಪಿ. ಎಚ್, ಡಿ. ಮಹಾಪ್ರಬಂಧದ ಪದವಿಗೆ ಈ ಅಧ್ಯಯನ ಅರ್ಹವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ವಂದನೆಗಳು

Ganapati Bhat

ಹಾಸಣಗಿ
ಕರ್ನಾಟಕ[illegible]ರಾಜ್ಯೋತ್ಸವ
೧ ನವಂಬರ ೧೯೯೯

ಎಂ. ಗಣಪತಿ ಭಟ್ಟ ಹಾಸಣಗಿ
ಆಕಾಶವಾಣಿ ಹಾಗೂ ದೂರದರ್ಶನದ
ರಾಷ್ಟ್ರೀಯ ಸಂಗೀತ ಕಲಾಕಾರರು

ಅಭ್ಯರ್ಥಿಯ ಪ್ರಮಾಣಪತ್ರ

ಉತ್ತರಕನ್ನಡ ಜಿಲ್ಲೆಯಲ್ಲಿ ಶಾಸ್ತ್ರೀಯ ಸಂಗೀತದ ಬೆಳವಣಿಗೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಜಿಲ್ಲೆಯ ಖ್ಯಾತ ಸಂಗೀತಗಾರರಾದ ಪಂ. ಗಣಪತಿ ಭಟ್ಟ ಹಾಸಣಗಿ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು ಈ ಮಹಾಪ್ರಬಂಧವನ್ನು ಇದೂವರೆಗೆ ಯಾವದೇ ಪದವಿಗಾಗಿ ಸ್ಪರ್ಧೆಗಾಗಿ ಸಲ್ಲಿಸಿರುವದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಪಿ.ಎಚ್,ಡಿ ಪದವಿಗಾಗಿ ಸಿದ್ಧಪಡಿಸಲಾದ ಈ ಮಹಾಪ್ರಬಂಧವನ್ನು ಮಾರ್ಗದರ್ಶಕರ ಅನುಮತಿ ಪಡೆದು ಹಂಪೆಯ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸುತ್ತಿದ್ದೇನೆ.

ವಂದನೆಗಳೊಂದಿಗೆ .

ಬೊಮ್ಮನಹಳ್ಳಿ
ಕರ್ನಾಟಕ ರಾಜ್ಯೋತ್ಸವ
೧ ನವಂಬರ ೧೯೯೯

ಕೃಷ್ಣಮೂರ್ತಿ ಭಟ್ಟ

ನೆನಕೆ ಕೃತಜ್ಞತೆಗಳು

ಸಂಗೀತ ಭಾವಭಾಷೆ. ಹಾಡುವವರಿಗೆ ಭಾಷಣಮಾಡುವುದು ಬರೆಯುವುದು ಸ್ವಲ್ಪ ದೂರವೇ. ಸಂಗೀತಗಾರನಾದ ನನಗೆ ಕಾಲೇಜಿನಲ್ಲಿ ಪಾಠಮಾಡಿಯೂ ಅನುಭವ ಇರುವುದರಿಂದ ಮಹಾಪ್ರಬಂಧ ರಚನೆಗೆ ಮನಸ್ಸು ಮಾಡಿದೆ. ನಾಲ್ಕುವರ್ಷಗಳ ಸುದೀರ್ಘ ಅವಧಿಯಲ್ಲಿ ಮಹಾಪ್ರಬಂಧದ ರಚನೆಯನ್ನು ಎತ್ತಿಕೊಂಡು, ಇದೀಗ ಪೂರ್ತಿಗೊಂಡ ಮಹಾಪ್ರಬಂಧವನ್ನು ಮಾರ್ಗದರ್ಶಕರ ಅನುಮತಿಯ ಮೇರೆಗೆ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧದಲ್ಲಿ ಸಂಗೀತಗಾರನಾದರೂ ವಸ್ತುಸ್ಥಿತಿಯ ಪ್ರತಿಪಾದನೆಗೆ ಭಾಷಾಶುದ್ದಿ ಹಾಗೂ ಸಾಹಿತ್ಯಿಕ ಸಂಗೀತದ ಪಾರಿಭಾಷಿಕ ಶಬ್ದಗಳಿಗೆ ಲಕ್ಷ್ಯಕೊಟ್ಟು ಪ್ರಾಮಾಣಿಕವಾಗಿ ಅಧ್ಯಯನ ಮಾಡಿ ಬರವಣಿಗೆಗೆ ಇಳಿಸಿದ್ದೇನೆ. ನನ್ನ ಬರವಣಿಗೆಯಲ್ಲಿ ಹಾಗೂ ಕಂಪ್ಯೂಟರ್‌ನ ತಪ್ಪಿನಿಂದ ಪದಗಳ ಜೋಡಣೆಯಲ್ಲಿ ನನ್ನ ಕಣ್ಣುತಪ್ಪಿ ಏನಾದರೂ ವ್ಯತ್ಯಾಸವಾದಲ್ಲಿ ಹಂಸಕ್ಷೀರ ನ್ಯಾಯದಂತೆ ಸ್ವೀಕರಿಸಿ ಸಿದ್ಧಗೊಳಿಸಿದ ಮಹಾಪ್ರಬಂಧವನ್ನು ಸ್ವೀಕರಿಸುವಿರಾಗಿ ನಂಬಿದ್ದೇನೆ. ಉತ್ತರಕನ್ನಡ ಜಿಲ್ಲೆಯ ಶಾಸ್ತ್ರೀಯಸಂಗೀತದ ಬೆಳವಣಿಗೆ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸುವ ಶುಭಸಂದರ್ಭದಲ್ಲಿ ದಿವಂಗತರಾದ ನನ್ನ

ಮಾತೋಶ್ರೀ ಶ್ರೀಮತಿ ಮಹಾದೇವಿ ಭಟ್ಟ

ಹಾಗೂ

ಪೂಜ್ಯ ತೀರ್ಥರೂಪರಾದ ಶ್ರೀ ಗಣಪತಿ ಭಟ್ಟ

ಇವರನ್ನು ಸ್ಮರಿಸಿ ಅವರ ಪಾದಕಮಲಾರವಿಂದಗಳಿಗೆ ವಂದಿಸುತ್ತೇನೆ.

ಪಿ.ಎಚ್. ಡಿ. ಮಹಾಪ್ರಬಂಧ ರಚನೆಗೆ ಸಹಾಯಕರಾದ

೧) ಪೂಜ್ಯ ಅಣ್ಣ-ಅತ್ತಿಗೆ, ಮಗಳು ಕು. ಮೈತ್ರಿ ಹಾಗೂ ನನ್ನ ಅಕ್ಕಂದಿರಿಗೆ ಹಾಗೂ ಮನೆಯವರಿಗೆ

೨) ಪಿ.ಎಚ್. ಡಿ ಮೊದಲಹಂತದ ಉಸ್ತುವಾರಿ ನೋಡಿಕೊಂಡ ಪ್ರೋ. ಜಯಕುಮಾರ ಕ.ವಿ.ವಿ.ಹಂಪೆ ಇವರಿಗೆ

೩) ಪಿ.ಎಚ್. ಡಿ ಮಹಾಪ್ರಬಂಧ ರಚನೆಗೆ ಮಾರ್ಗದರ್ಶಕರೂ ಹಾಗೂ ನನ್ನ ಸಂಗೀತಗುರುಗಳೂ ಆದ ಪೂಜ್ಯ ಶ್ರೀ ಪಂ. ಗಣಪತಿ ಭಟ್ಟ ಹಾಸಣಗಿ ಹಾಗೂ ಮನೆಯವರಿಗೆ

೪) ಮಹಾಪ್ರಬಂಧ ರಚನೆಯ ಮೊದಲಹಂತದ ಕ್ಷೇತ್ರಕಾರ್ಯಕ್ಕೆ ಹೋದಾಗ ಅಗತ್ಯ ಮಾಹಿತಿಗಳನ್ನು ಒದಗಿಸಿದ ಜಿಲ್ಲೆಯ ಹಿರಿಯ ಕಲಾಕಾರರು ಹಾಗೂ ಸಂಗೀತ ಸಂಘಟಕರಿಗೆ

೫) ಮಹಾಪ್ರಬಂಧದ ರಚನೆಗೆ ಭಾಷೆಯ ತೊಡಕನ್ನು ನಿವಾರಿಸಿದ ಕನ್ನಡ ಪಂಡಿತ ಮಿತ್ರರಿಗೆ

೬) ಅಗತ್ಯ ಸಲಹೆ ಸೂಚನೆಗಳನ್ನು ಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮಿತ್ರರಿಗೆ

೭) ಹೊನ್ನಾವರದ ನನ್ನ ವಾಸ್ತವ್ಯ ಮನೆಯ ಮಾಲಿಕರು ಸಂಗೀತಾಸಕ್ತರೂ ಆದ ಶ್ರೀ ಕೃಷ್ಣಾನಂದ ಮಾವಿನಕುರ್ವೆ ಹಾಗೂ ಮನೆಯವರಿಗೆ

೮) ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಾವಿದ್ಯಾಲಯ ಹೊನ್ನಾವರದ ಸಂಗೀತ ವಿಭಾಗದ ಸಹೋದ್ಯೋಗಿಗಳಿಗೆ, ಆಡಳಿತ ಮಂಡಳಿಯವರಿಗೆ ಹಾಗೂ ಪ್ರಾಚಾರ್ಯರಿಗೆ

೯) ದಿ. ಡಾಃ ಕುಸುಮ್ ಸೊರಬ ಸ್ನೇಹಕುಂಜ ಕಾಸರಕೋಡ ಹಾಗೂ ಸ್ನೇಹಕುಂಜ ಬಳಗಕ್ಕೆ

೧೦) ಹೊನ್ನಾವರದಂತಹ ಊರಿನಲ್ಲಿ ವಿಳಂಬವಾದರೂ ಪ್ರಪ್ರಥಮವಾಗಿ ಪಿ.ಎಚ್. ಡಿ. ಮಹಾ ಪ್ರಬಂಧದ ಲೇಖನವನ್ನು ಕಂಪ್ಯೂಟರ್ ಮೂಲಕ ಮುದ್ರಿಸಿಕೊಟ್ಟ ತೇಲಂಗ ಝೆರೋಕ್ಸ್ ಹಾಗೂ ಸಿಬ್ಬಂದಿಗಳಿಗೆ

೧೧) ಅಂದವಾಗಿ ರಟ್ಟು ಕಟ್ಟಿ ಬೈಂಡಿಂಗ್ ಮಾಡಿದ ಶ್ರೀ ರಾಘವೇಂದ್ರ ಪ್ರಿಂಟಿಂಗ್ ಪ್ರೆಸ್ ಹೊನ್ನಾವರ ಇವರಿಗೆ

೧೨) ಕಲಾಕಾರ ಶ್ರೀ ಎ.ಕೆ.ಶೇಟ್, ಪ್ರಿಯಶಿಷ್ಯ ಶೇಷಾದ್ರಿ , ಹೊನ್ನಾವರ ಪರಿಸರಕ್ಕೆ ಹಾಗೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲ ಮಿತ್ರರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತದೆ.

ವಂದನೆಗಳೊಂದಿಗೆ,

ಕೃಷ್ಣಮೂರ್ತಿ ಭಟ್ಟ
ಎಂ.ಎ. ಸಂಗೀತರತ್ನ
ರಾಷ್ಟ್ರೀಯ ಯುವಕಲಾಕಾರ ಪ್ರಶಸ್ತಿ ವಿಜೇತ
ಆಕಾಶವಾಣಿ ಕಲಾಕಾರರು.

ಬೊಮ್ಮನಹಳ್ಳಿ
ಕರ್ನಾಟಕ[redacted]ರಾಜ್ಯೋತ್ಸವ
ನವಂಬರ ೧, ೧೯೯೯

ಪ್ರಸ್ತಾವನೆ

ಉತ್ತರಕನ್ನಡ ಜಿಲ್ಲೆ ಹನ್ನೊಂದು ತಾಲೂಕುಗಳನ್ನು ಹೊಂದಿದ್ದು ಇಲ್ಲಿನ ಉತ್ತಮ ವಾತಾವರಣದಿಂದ 'ಕರ್ನಾಟಕದ ಕಾಶ್ಮೀರ' ಎಂಬ ಹೆಗ್ಗಳಿಕೆಯನ್ನು ಪಡೆದಿದೆ. ಸಾಂಸ್ಕೃತಿಕವಾಗಿ ದೊಡ್ಡ ಪರಂಪರೆಯನ್ನು ಹೊಂದಿದ ಈ ಜಿಲ್ಲೆಗೆ ಶಾಸ್ತ್ರೀಯ ಸಂಗೀತದ ಪ್ರವೇಶ ಸ್ವಲ್ಪ ತಡವಾಗಿಯೇ ಆಗಿದೆ. ಜನಪದ ಪ್ರಕಾರದ ನೃತ್ಯ, ಗೀತ ಮುಂತಾದವುಗಳು ಅಧಿಕವಾಗಿ ಸಾಂಸ್ಕೃತಿಕ ಪರಿಸರ ನಿರ್ಮಾಣವಾಗಲು ಕಾರಣವಾದುದರಿಂದ ಪ್ರಸ್ತುತ ಮಹಾಪ್ರಬಂಧದಲ್ಲಿ ಇಲ್ಲಿನ ಜನಪದ ಪ್ರಕಾರಗಳು, ಉತ್ಸವಗಳು, ಕಲೆಗಳನ್ನೊಳಗೊಂಡಂತೆ ಅನೇಕ ವಿಷಯಗಳ ಬಗೆಗೂ ಅಧ್ಯಯನಕ್ಕೆ ಪೂರಕವಾಗಿ ವಿವರಿಸಲಾಗಿದೆ. ಈ ಮಹಾಪ್ರಬಂಧದಲ್ಲಿ ಜಿಲ್ಲೆಯಲ್ಲಿನ ಶಾಸ್ತ್ರೀಯ ಸಂಗೀತದ ಬೆಳವಣಿಗೆಯ ಜೊತೆಗೆ ಶಾಸ್ತ್ರೀಯಸಂಗೀತದ ಉತ್ಪತ್ತಿ, ಬೆಳವಣಿಗೆ, ಸಂಗೀತಶಿಕ್ಷಣವ್ಯವಸ್ಥೆ, ಸಂಗೀತಪಾಠಶಾಲೆ, ಸಾಂಸ್ಕೃತಿಕ ಸಂಘಟನೆಗಳು ಮುಂತಾದವುಗಳ ಬಗೆಗೂ ಅಧ್ಯಯನದಲ್ಲಿ ಉ.ಕ. ಜಿಲ್ಲೆಯಲ್ಲಿನ ಶಾಸ್ತ್ರೀಯಸಂಗೀತದ ಬೆಳವಣಿಗೆಗೆ ಪೂರಕವಾಗಿ ವಿವರಿಸಲಾಗಿದೆ. ಉತ್ತರಕನ್ನಡ ಜಿಲ್ಲೆಯ ಶಾಸ್ತ್ರೀಯ ಸಂಗೀತಕ್ಕೆ ಪೂರಕವಾದ ಅನೇಕ ಮಾಹಿತಿಗಳು ಅಧ್ಯಯನಕ್ಕೆ ಹೊರತಾದವಿಷಯಗಳಂತೆ ಮೇಲ್ನೋಟಕ್ಕೆ ಕಂಡರೂ ಸಹ ಸೂಕ್ಷ್ಮವಾಗಿ ಅವಲೋಕಿಸಿದಾಗ ಜಿಲ್ಲೆಯ ಶಾಸ್ತ್ರೀಯಸಂಗೀತದ ಮೂಲ ಹಾಗೂ ಅಭಿವೃದ್ಧಿಗೆ ಇವು ಸಹಾಯಕವಾಗಿಯೇ ಇದೆ ಎಂಬುದನ್ನು ಮನಗಾಣಬಹುದು. ಪ್ರಸ್ತುತ ಮಹಾಪ್ರಬಂಧದಲ್ಲಿ ಸಂಗೀತ ಹಾಗೂ ಶಾಸ್ತ್ರೀಯ ಸಂಗೀತದ ಬೆಳವಣಿಗೆಗೆ ಪೂರಕವಾದ ಅಂಶಗಳನ್ನು ವಿವರಿಸಲಾಗಿದೆ.

ಅಧ್ಯಯನದ ಉದ್ದೇಶ ಹಾಗೂ ವ್ಯಾಪ್ತಿ

ಪ್ರಸ್ತುತ ಅಧ್ಯಯನದಲ್ಲಿ ೧೯೪೫ ರಿಂದ ೧೯೯೮ ರ ಅವಧಿಯಲ್ಲಿನ ಉ.ಕ. ಜಿಲ್ಲೆಯಲ್ಲಿ ಆದ ಶಾಸ್ತ್ರೀಯ ಸಂಗೀತದ ಬೆಳವಣಿಗೆಯನ್ನು ಮಹಾಪ್ರಬಂದದಲ್ಲಿ ವಿವರಿಸಲಾಗಿದೆ. ಪ್ರತಿಯೊಂದಕ್ಕೂ ಕಂಪ್ಯೂಟರ್, ಕ್ಯಾಲಕ್ಯೂಲೇಟರ್ ಮುಂತಾದ ಆಧುನಿಕ ಪ್ರಯೋಗಗಳೇ ಅಧಿಕವಾಗಿರುವ ಇಂದಿನ ಕಾಲದಲ್ಲಿ ಮನುಷ್ಯರ ನಡುವಿನ ಸಂಬಂಧ ಅರ್ಥ ಹಾಗೂ ಕ್ರಿಯಾಶಕ್ತಿ ನಶಿಸುತ್ತಾ ಬಂದಿದೆ. ಕಂಪ್ಯೂಟರ್‌ನ ಜೊತೆ ಯುವಜನತೆಗೆ

ನಮ್ಮ ಸಂಸ್ಕೃತಿ ಹಾಗೂ ಸಂಪ್ರದಾಯದ ಕಲೆ, ಪರಂಪರೆಯ ಬಗೆಗಿನ ಮಹತ್ವವನ್ನು ತಿಳಿಸುವುದು ಅಗತ್ಯವಾಗಿದೆ. ಇಲ್ಲವಾದಲ್ಲಿ ಮುಂದಿನ ಜನಾಂಗಕ್ಕೆ ಕೇವಲ ಬಾಯಿಮಾತಿನಿಂದ ನಮ್ಮ ಪರಂಪರೆಯ ಇತಿಹಾಸದ ಮಹತ್ವವನ್ನು ತಿಳಿಸುವ ಪ್ರಸಂಗ ಬರಬಹುದು.

ಇಂತಹ ವಿಷಮ ಪರಿಸ್ಥಿತಿಯಲ್ಲಿಯೂ ಸಹ ನಾವು ಧೃತಿಗೆಡದೇ ನಮ್ಮ ಸಂಸ್ಕೃತಿಯ ರಕ್ಷಣೆಗೆ ಮುಂದಾಗಲೇಬೇಕಾಗಿದೆ. ನಮ್ಮ ಭವ್ಯ ಸಂಸ್ಕೃತಿ, ಪರಂಪರೆ ಮುಂದುವರಿಯಲು ಹಾಗೂ ಇಂದಿನ ಯುವಜನತೆಗೆ ನಮ್ಮ ಸಂಸ್ಕೃತಿಯ ಅರಿವನ್ನು ಮೂಡಿಸಲು, ಭಾರತೀಯ ಕಲೆ, ನೃತ್ಯಗಳಿಗೆ ಮಹತ್ವದ ಸ್ಥಾನವನ್ನು ಕೊಟ್ಟು ಅದರ ಬೆಳವಣಿಗೆಗೆ ಶ್ರಮಿಸಲೇಬೇಕಾಗಿದೆ. ನಾಗರೀಕ ಪ್ರಜ್ಞೆ ಇರುವ ಪ್ರತಿಯೊಬ್ಬನೂ ಸಹ ಇಂತಹ ಕಲೆ, ಸಂಸ್ಕೃತಿಯ ಬೆಳವಣಿಗೆಗೆ ಶ್ರಮಿಸಬೇಕು. ಕಲೆ,. ಕಲಾವಿದರಿಗೆ ಪ್ರೋತ್ಸಾಹ ನೀಡಿದಾಗ ಮಾತ್ರ ಕಲೆ ಬೆಳೆದು ಬೆಳಗಲು ಸಾಧ್ಯ. ಸುಗಮಸಂಗೀತ, ಚಿತ್ರಪಠಸಂಗೀತ, ಇವುಗಳೆಲ್ಲದರ ತಾಯಿಬೇರು ಶಾಸ್ತ್ರೀಯಸಂಗೀತ, ಶಾಸ್ತ್ರೀಯಸಂಗೀತದಂತಹ ಕಲೆಯನ್ನು ಕರಗತಗೊಳಿಸಿಕೊಳ್ಳಲು ತಾಳ್ಮೆ, ಸಹನೆ, ಅಭ್ಯಾಸ ಏಕಾಗ್ರತೆ, ಕಂಠ ಸಾಧನೆಗಳಂತಹ ಅನೇಕ ಸಂಗತಿಗಳು ಬೇಕಾಗುತ್ತದೆ. ಇವುಗಳನ್ನೆಲ್ಲ ಸಾಧಿಸಿದ ವಿದ್ಯಾರ್ಥಿ ಸಂಗೀತಗಾರನಾಗಬಲ್ಲ. ಸಂಗೀತಗಾರನಾಗುವುದು ಒಂದು ಅಧ್ಯಾಯವಾದರೆ ಮುಂದೆ ಸಮಾಜದಲ್ಲಿ ಸಂಗೀತಗಾರನಾಗಿ ಬೆಳಕಿಗೆ ಬರುವುದು ಮುಂದಿನ ಹಂತ. ಶಾಸ್ತ್ರೀಯಸಂಗೀತದಂತಹ ಶುದ್ಧ ಕಲೆಯ ಆರಾಧನೆ ಹಾಗೂ ಅದರ ಮಹತ್ವದ ಬಗ್ಗೆ ಅರಿವಾಗಬೇಕು. ಜನರು ಪರಸ್ಪರ ಒಬ್ಬರನ್ನೊಬ್ಬರು ಗೌರವದಿಂದ ಅರಿತುಕೊಂಡು ನಡೆಯಬೇಕು. ದ್ವೇಶ ಅಸೂಯೆಗಳು ದೂರವಾಗಿ ಪರಸ್ಪರ ತಿಳುವಳಿಕೆ, ಸೌಹಾರ್ದಯುತ ಸಂಬಂಧಗಳು ಬೆಳೆಯಬೇಕು. ನಮ್ಮ ಸಂಸ್ಕೃತಿ, ಪರಂಪರೆಯ ವಿಶೇಷತೆ ಹಾಗೂ ಮಹತ್ವವನ್ನು ತಿಳಿಸುವುದೇ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಅಧ್ಯಯನಕ್ಕೆ ಉಪಯೋಗಿಸಿಕೊಂಡ ಆಕರಗಳು

ಉತ್ತರಕನ್ನಡ ಜಿಲ್ಲೆಯಲ್ಲಿನ ಶಾಸ್ತ್ರೀಯ ಸಂಗೀತದ ಬೆಳವಣಿಗೆಗೆ ಸಂಬಂಧಿಸಿದಂತೆ ಜಿಲ್ಲೆಯ ಕಲಾಕಾರರ, ಕಲಾಸಂಘಟಕರ ಕಲಾಪ್ರೇಮಿಗಳ ಮುಕ್ತ ಸಂದರ್ಶನವೇ ಅಧ್ಯಯನದ ಮುಖ್ಯ ಆಕರವನ್ನಾಗಿ ಬಳಸಿಕೊಳ್ಳಲಾಗಿದೆ. ಇಷ್ಟೆ ಅಲ್ಲದೇ ಸಂಗೀತ ಶಾಲೆಗಳು, ಸಾಂಸ್ಕೃತಿಕ ಸಂಘಟನೆಗಳು, ಸಂಗೀತ ಕಲಾಕಾರರು ಅಲ್ಲದೇ ಸಂಗೀತದ ಮೇಲಿನ ಗ್ರಂಥಗಳನ್ನೂ ಸಹ ಅಧ್ಯಯನಕ್ಕೆ ಮುಖ್ಯ ಆಕರವನ್ನಾಗಿ ಪಡೆಯಲಾಗಿದೆ.

ಅಧ್ಯಯನಕ್ಕೆ ಆಯ್ದುಕೊಂಡ ವಿಧಿ-ವಿಧಾನಗಳು

ಉತ್ತರಕನ್ನಡ ಜಿಲ್ಲೆಯ ಶಾಸ್ತ್ರೀಯಸಂಗೀತ ಅಧ್ಯಯನಕ್ಕೆ ಸಂಬಂಧಿಸಿದಂತೆ ಮುಖ್ಯವಾಗಿ ೧. ಪ್ರಾಥಮಿಕ ಮಾಹಿತಿ ಸಂಗ್ರಹಣೆ, ೨. ಮೌಖಿಕ ಪ್ರಶ್ನಾವಳೀ ವಿಧಾನ, ೩. ಪತ್ರ ಮುಖೇನ ಪ್ರಶ್ನಾವಳಿ, ೪. ಸಂದರ್ಶನ , ೫. ಅನುಭವಿಕರಿಂದ ಮಾಹಿತಿ ಸಂಗ್ರಹಣೆ ಹಾಗೂ ಗ್ರಂಥಗಳ ಪ್ರಯೋಜನವನ್ನು ಬಳಸಿಕೊಳ್ಳಲಾಗಿದೆ.

ಅಧ್ಯಯನದ ಮಹತ್ವ

ಶಾಸ್ತ್ರೀಯ ಸಂಗೀತದ ಬೆಳವಣಿಗೆಯ ಅಧ್ಯಯನವು ವರ್ತಮಾನ ಕಾಲದಲ್ಲಿ ಮಹತ್ವ ಪಡೆದಿದೆ. ಬದಲಾಗುತ್ತಿರುವ ಇಂದಿನ ದಿನಗಳಲ್ಲಿ ನಮ್ಮ ಸಂಸ್ಕೃತಿ ಪರಂಪರೆ, ಕಲೆಗಳ ಬಗೆಗಿನ ಮಹತ್ವದ ಅರಿವು ಆಗಬೇಕಾಗಿದೆ. ಹೆಚ್ಚಿನ ಯುವಜನತೆ ನಮ್ಮ ಸಂಸ್ಕೃತಿಯನ್ನು ಬಿಟ್ಟು ವಿದೇಶಿ ಸಂಸ್ಕೃತಿಯತ್ತ ವಾಲುತ್ತಿರುವುದು ಕಂಡುಬರುತ್ತಿದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ನಮ್ಮ ಸಂಸ್ಕೃತಿ, ಕಲೆ, ಪರಂಪರೆಯನ್ನು ಉಳಿಸಿ, ಬೆಳೆಸಿಕೊಳ್ಳುವುದು ಅಗತ್ಯವಾಗಿದೆ. ವಿದೇಶಿ ಸಂಸ್ಕೃತಿಯ ಕಪಿಮುಷ್ಟಿಯಿಂದ ಪಾರುಮಾಡಲು ಯುವಜನತೆಯನ್ನು ಸನ್ಮಾರ್ಗದತ್ತ ನಡೆಸಲು ಶಾಸ್ತ್ರೀಯ ಸಂಗೀತದಂತಹ ಕಲೆ ಬಹುಮಹತ್ವದ ಪಾತ್ರವನ್ನು ವಹಿಸುತ್ತದೆ. ನಮ್ಮ ನಾಡು, ನುಡಿ, ಸಂಸ್ಕೃತಿ ಪರಂಪರೆಗಳ ಮಹತ್ವ ಹಾಗೂ ಅಧ್ಯಯನಗಳು ಇಂದಿನ ದಿನಗಳಲ್ಲಿ ಮಹತ್ವ ಪಡೆದಿದೆ. ಈ ಕುರಿತು ಅಧ್ಯಯನದಲ್ಲಿ ವಿವರಿಸಲಾಗಿದೆ.

ಉತ್ತರಕನ್ನಡ ಜಿಲ್ಲೆಯ ಶಾಸ್ತ್ರೀಯ ಸಂಗೀತದ ಬೆಳವಣಿಗೆಗೆ ಪೂರಕವಾಗಿ ಮೂಡಿಬಂದ ಅಧ್ಯಾಯಗಳು

ಸಂಗೀತದ ಉತ್ಪತ್ತಿ , ಪರಂಪರೆ, ಉ.ಕ.ಜಿಲ್ಲೆಯ ಶಾಸ್ತ್ರೀಯ ಸಂಗೀತದ ಇತಿಹಾಸ, ಉ.ಕ.ಜಿಲ್ಲೆಯ ಬುಡಕಟ್ಟು ಹಾಗೂ ಹಿಂದುಳಿದ ವರ್ಗದವರ ಜೀವನಸಂಗೀತ , ಜಿಲ್ಲೆಯ ಕಲೆಗಳು, ಉತ್ಸವಗಳು, ಸಂಗೀತದ ಘರಾನೆಗಳು, ಶಾಲಾಕಾಲೇಜುಗಳಲ್ಲಿನ ಸಂಗೀತವಿಭಾಗ, ಸಂಗೀತ ಪಾಠಶಾಲೆ, ಸಾಂಸ್ಕೃತಿಕ ಸಂಘಟನೆ, ಜಿಲ್ಲೆಯ ಪ್ರಮುಖ ಸಂಗೀತಗಾರರು ಮುಂತಾದ ಅಧ್ಯಾಯಗಳೂ ಸೇರಿದಂತೆ ಇಪ್ಪತ್ನಾಲ್ಕು ಪ್ರಮುಖ ಅಧ್ಯಾಯಗಳನ್ನು ಜಿಲ್ಲೆಯ ಶಾಸ್ತ್ರೀಯಸಂಗೀತದ ಬೆಳವಣಿಗೆಗೆ ಪೂರಕವಾಗಿ ಮಾಡಲಾಗಿದೆ.

ಮಹಾಪ್ರಬಂಧದಲ್ಲಿ ಉಪಯೋಗಿಸಿದ ಸಂಕ್ಷಿಪ್ತ ಪದದ ವಿವರಣೆ

ಉ.ಕ. ಜಿಲ್ಲೆ	-	ಉತ್ತರಕನ್ನಡ ಜಿಲ್ಲೆ
ಕ. ಶಾಸ್ತ್ರೀಯ ಸಂಗೀತ	-	ಕರ್ನಾಟಕೀ ಶಾಸ್ತ್ರೀಯ ಸಂಗೀತ
ಹಿಂ. ಶಾಸ್ತ್ರೀಯ ಸಂಗೀತ	-	ಹಿಂದುಸ್ತಾನೀ ಶಾಸ್ತ್ರೀಯಸಂಗೀತ

ಪರಿವಿಡಿ


ಪುಟಸಂಖ್ಯೆ

ಅಧ್ಯಾಯ ೧

ಸಂಗೀತದ ಉತ್ಪತ್ತಿ,

ಶಾಸ್ತ್ರೀಯ ಸಂಗೀತ, ಸಂಗೀತಶಾಸ್ತ್ರ, ವೇದಕಾಲದ ಸಂಸ್ಕೃತಿ
ಭಾರತೀಯ ಸಂಗೀತ, ಆಧ್ಯಾತ್ಮ ಸಂಗೀತ

ಸಂಗೀತದ ಉತ್ಪತ್ತಿ



ಸಂಗೀತದ ಉತ್ಪತ್ತಿಯನ್ನು ಮೇಲ್ಕಾಣಿಸಿದ ಪ್ರಕಾರವಾಗಿ ವಿವರಿಸಬಹುದು. ನಾದದಿಂದ ಶ್ರುತಿ, ಶ್ರುತಿಯಿಂದ ಸ್ವರ, ಸ್ವರಗಳಿಂದ ಸಪ್ತಕ, ಸಪ್ತಕದಿಂದ ಥಾಟ್, ಥಾಟ್‌ಗಳಿಂದ ರಾಗ ಹೀಗೆ ನಮ್ಮ ಭಾರತೀಯ ಸಂಗೀತವು ಒಂದು ಕ್ರಮಬದ್ಧವಾದ ಪರಂಪರೆಯನ್ನು ಹೊಂದಿದೆ.

<u>ನಾದ:-</u> ನಿಯಮಿತ ಸ್ಥಿರ ಆಂದೋಲನ ಸಂಖ್ಯೆಯ ಮತ್ತು ಸಂಗೀತೋಪಯೋಗಿಯಾದ ಮಧುರ ಧ್ವನಿಗೆ ನಾದವೆನ್ನುವರು. ನಾದ ಶಬ್ದದಲ್ಲಿಯ 'ನ' ಕಾರವು ಪ್ರಾಣವಾಚಕವಾಗಿದ್ದು, 'ದ' ಕಾರವು

ಅಗ್ನಿವಾಚಕವಾಗಿದೆ. ಹೀಗೆ ಪ್ರಾಣ ಹಾಗೂ ಅಗ್ನಿಗಳ ಸಂಯೋಗದಿಂದ ನಾದವು ಹುಟ್ಟುತ್ತದೆ. ಸಂಗೀತ ರತ್ನಾಕರದಲ್ಲಿ ಸಾರಂಗದೇವನು ಹೇಳಿದಂತೆ,

ನಕಾರಂ ಪ್ರಾಣನಾಮಾನಂ ದಕಾರ ಮಾನಲಂ ವಿದುಃ।

ಜಾತಃ ಪ್ರಾಣಾಗ್ನಿ ಸಂಯೋಗಾತ್ತೇನ ನಾದೋಽಭಿದೀಯತೆ॥ - ಸಂಗೀತ ರತ್ನಾಕರ

ಹೀಗೆ ಹುಟ್ಟಿದ ನಾದವು ಊರ್ಧ್ವಮುಖಿಯಾಗಿ ಚಲಿಸುವಾಗ ನಾಭಿ, ಹೃದಯ, ಕಂಠ ಮೂರ್ಧ್ವಗಳ ಮುಖಾಂತರವಾಗಿ ಧ್ವನಿಯಾಗಿ ಹುಟ್ಟುತ್ತದೆ. ಕೇಶಿರಾಜನೂ ಕೂಡ,

ಜೀವನಿಷ್ಠದಿಂ ನಾಭಿಮೂಲದೊಳುಂ ಕಹಳೆಯ ।

ಪಾಂಗಿನೊಳ್ ಶಬ್ದದ್ರವ್ಯಂ ಜನಿಯಿಸುಗುಂ ।

ಎಂದು ನಾದೋತ್ಪತ್ತಿಗೆ ನಾಭಿಯೇ ಮೂಲಸ್ಥಾನವಾಗಿದೆ ಎಂದು ಹೇಳಿದ್ದಾನೆ. ನಾದದಲ್ಲಿ ಎರಡು ಪ್ರಕಾರಗಳಿವೆ.

ಅ) ಆಹತನಾದ ಬ) ಅನಾಹತನಾದ

ಆಹತನಾದವು ಮನುಷ್ಯ ನಿರ್ಮಿತವಾದ ಶ್ರವಣಸಾಧ್ಯ ನಾದವಾಗಿದ್ದು ಇದು ಸಂಗೀತೋಪಯೋಗಿಯಾಗಿದೆ. ಇನ್ನು ಅನಾಹತ ನಾದವು ಶ್ರವಣಾತೀತವಾಗಿದ್ದು ವಿಶ್ವದತುಂಬೆಲ್ಲ ತಾನೇತಾನಾಗಿರುವ ಒಂದು ಅವ್ಯಕ್ತನಾದವಾಗಿದೆ. ಈ ನಾದವು ಧ್ಯಾನಗೋಚರವಾಗಿದೆ. ಮತ್ತು ಕೇವಲ ಯೋಗಿಗಳಿಗೆ ಮಾತ್ರ ಶ್ರವಣಸಾಧ್ಯವಾಗಿದ್ದು ಮುಕ್ತಿದಾಯಕವಾಗಿದೆ. ಇದನ್ನೇ ' ಓಂ' ಕಾರ ನಾದವೆನ್ನಲಾಗಿದೆ.

ಸಂಗೀತ ಕಲೆಯ ಉತ್ಪತ್ತಿ

ಸಂಗೀತವು ಅತ್ಯಂತ ಪುರಾತನ ಕಲೆಯಾಗಿದ್ದು, ಇದರ ಉತ್ಪತ್ತಿಯನ್ನು ತಿಳಿಸುವ ಖಚಿತವಾದ ಮಾಹಿತಿ ದೊರಕುವುದಿಲ್ಲ. ಈ ವಿಶ್ವದ ಹುಟ್ಟನೊಂದಿಗೆ ಸಂಗೀತವು ಹುಟ್ಟಿಕೊಂಡು ಬಂದಿದ್ದು , ವೇದಕಾಲದ ಪುರಾಣ ಪುಣ್ಯಕಥೆಗಳ ಆಳದಲ್ಲಿ ಅದರ ಮೂಲವು ಮುಳುಗಿಹೋಗಿದ್ದು, ಐತಿಹಾಸಿಕ ಸತ್ಯಕ್ಕೆ ವ್ಯತಿರಿಕ್ತವಾಗಿದೆ. ಭಾರತೀಯ ಸಂಗೀತಕಲಾವಿದನು ನಾದವನ್ನು ಬ್ರಹ್ಮನೆಂದು ಗುರುತಿಸಿ ಸಂಗೀತವನ್ನು ಭಕ್ತಿ ಶ್ರದ್ಧೆಗಳಿಂದ,

ಇಂದಿನವರೆಗೂ ಆರಾಧಿಸುತ್ತಾ ಬಂದಿದ್ದಾನೆ. ಸಂಗೀತದ ಉತ್ಪತ್ತಿಯ ಕುರಿತು ಮುಖ್ಯವಾಗಿ ಎರಡು ದೃಷ್ಟಿಯನ್ನು ಕಾಣಬಹುದು.

ಅ) ಪೌರಾಣಿಕ ದೃಷ್ಟಿ ಬ) ವೈಜ್ಞಾನಿಕ ದೃಷ್ಟಿ

ಸಂಗೀತದ ಹುಟ್ಟು ದೇವದೇವತೆಗಳ ಕತೆಗಳ ಆಧಾರದ ಮೇಲೆ ಪೌರಾಣಿಕ ದೃಷ್ಟಿಕೋನವನ್ನು ಕಂಡುಕೊಳ್ಳಬಹುದಾಗಿದೆ. ಬ್ರಹ್ಮ , ವಿಷ್ಣು, ಮಹೇಶ್ವರರು ಆದ್ಯ ದೇವತೆಗಳಾಗಿದ್ದು, ಶ್ರೀ ಬ್ರಹ್ಮನು ಸೃಷ್ಟಿಯ ಚರಾಚರ ವಸ್ತುವಿನ ಮೂಲಕರ್ತನಾಗಿದ್ದಾನೆ. ಶ್ರೀವಿಷ್ಣು ಚರಾಚರ ವಸ್ತುವಿನ ರಕ್ಷಕನಾಗಿದ್ದಾನೆ. ಮಹೇಶ್ವರನು ಇವೆಲ್ಲದರ ಲಯಕರ್ತನಾಗಿದ್ದಾನೆ. ಈ ತ್ರಿಮೂರ್ತಿಗಳಲ್ಲಿ ಯಾರಿಂದ ಸಂಗೀತ ಉತ್ಪತ್ತಿಯಾಯಿತು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಇವೆ. ಸದಾಶಿವನ ಪಂಚಮುಖಗಳಿಂದ ಮೂಲವಾಗಿ ಐದು ರಾಗಗಳು ಮೊದಲು ಹುಟ್ಟಿಕೊಂಡವು. ಪೂರ್ವ ಮುಖದಿಂದ ಬೈರವರಾಗ, ಪಶ್ಚಿಮ ಮುಖದಿಂದ ಹಿಂಡೋಲರಾಗ, ಉತ್ತರ ಮುಖದಿಂದ ಮೇಘರಾಗ , ದಕ್ಷಿಣದಿಂದ ದೀಪಕರಾಗ ಮತ್ತು ಆಕಾಶಮುಖದಿಂದ ಶ್ರೀರಾಗಗಳು ಹುಟ್ಟಿಕೊಂಡವು ಎಂಬುದು ಪುರಾಣ ಪುಣ್ಯಕಥೆಗಳಿಂದ ತಿಳಿದುಬರುತ್ತದೆ. ಅಂತೆಯೇ "**ಸಾಮವೇದಾತ್ ಇದಂ ಗೀತಂ ಸಂಜಗ್ರಹ ಪಿತಾಮಹ** " ಅಂದರೆ ಬ್ರಹ್ಮನು ಸಂಗೀತವನ್ನು ಸಾಮವೇದದಿಂದ ಎತ್ತಿಕೊಂಡನೆಂದು, ಸಾಮವೇದವೇ ಸಂಗೀತಕ್ಕೆ ಮೂಲ ಉತ್ಪತ್ತಿಸ್ಥಾನವೆಂದೂ, ಸ್ವರಮೇಲ ಕಲಾನಿಧಿಯ ಲೇಖಕ ರಾಮಾಮತ್ಯನು ಅಭಿಪ್ರಾಯಪಡುತ್ತಾನೆ.

ನಾವು ಸಂಗೀತದ ಉಗಮದ ಬಗೆಗೆ ಇನ್ನೂ ಅನೇಕ ಅಭಿಪ್ರಾಯಗಳನ್ನು ಸಂಗ್ರಹಿಸಬಹುದು. ಇಲ್ಲಿ ಸಂಗೀತವು ದೇವ ದೇವತೆಗಳಿಂದ ಉತ್ಪತ್ತಿಯಾಯಿತು ಎಂಬುದು ಸಂಗೀತಕಲೆಯ ವಿಷಯದಲ್ಲಿ ಇರಿಸಿಕೊಂಡ ಕಲಾ ಆರಾಧಕರ ಭಕ್ತಿ, ಪರವಶತೆಯ ನಂಬುಗೆಯಾಗಿದೆ. ಭಾರತೀಯ ಕಲಾವಿದನು ಧಾರ್ಮಿಕ ಮನೋವೃತ್ತಿಯವನಾದುದರಿಂದ ಆತನು ಇಂತಹ ನಂಬುಗೆಗಳಲ್ಲಿ ವಿಶ್ವಾಸವನ್ನಿಟ್ಟುಕೊಂಡು ಬಂದಿದ್ದಾನೆ. ಈ ನಂಬುಗೆ ಆತನ ಧಾರ್ಮಿಕ ಭಾವನೆಯ ಪ್ರತೀಕವಾಗಿದೆಯೇ ಹೊರತು ಅದಕ್ಕೆ ಬೇರೆ ಅರ್ಥವಿಲ್ಲ.

ಅಡಿ ಟಿಪ್ಪಣಿ : ಧಾರ್ಮಿಕ ದಂತ ಕಥೆಗಳನ್ನಾಧರಿಸಿ ....

ವೈಜ್ಞಾನಿಕವಾಗಿ ಸಂಗೀತದ ಉತ್ಪತ್ತಿಯ ವಿಷಯದಲ್ಲಿ ಒಂದು ನಿರ್ಣಯಕ್ಕೆ ಬರಲಾಗಿದೆ. ಡಾರ್ವಿನ್‌ನ ಮಾನವನ ವಿಕಾಸಕ್ರಮವನ್ನು ಆಧಾರವಾಗಿಟ್ಟುಕೊಂಡು ಹೇಳುವುದಾದರೆ ಸಂಗೀತದಹುಟ್ಟು ಆದಿಮಾನವನಿಂದ ನಿಸರ್ಗದಲ್ಲಿಯೇ ಆವಿಷ್ಕರಿಸಲ್ಪಟ್ಟಿತೆಂದೂ, ಸಂಗೀತಕ್ಕೆ ಮೂಲವಾದ ಸಪ್ತಸ್ವರಗಳನ್ನು ಆತನು ನಿಸರ್ಗದಲ್ಲಿಯ ಪಶುಪಕ್ಷಿಗಳಿಂದ ಕಂಡುಕೊಂಡನೆಂದು ತಿಳಿದುಬರುತ್ತದೆ.

* ಷಡ್ಜ ಸ್ವರವು ನವಿಲಿನಿಂದ, ರಿಷಬವು ಜಾತಕಪಕ್ಷಿಯಿಂದ, ಗಾಂಧಾರವು ಆಡಿನಿಂದ, ಮಧ್ಯಮವು ಕ್ರೌಂಚ ಪಕ್ಷಿಯಿಂದ , ಪಂಚಮ ಸ್ವರವು ಕೋಗಿಲೆಯಿಂದ, ದೈವತವು ಕಪ್ಪೆಯಿಂದ ಮತ್ತು ನಿಷಾದ ಸ್ವರವು ಆನೆಯಿಂದ ಹುಟ್ಟಿದವು.

ಮಯೂರಃ ಷಡ್ಜ ಮಾಖ್ಯಾತಃ ಋಷಬಂ ವಕ್ತಿಜಾತಕಃ|

ಛಾಗೋ ಗಾಂಧಾರಮಾಚಷ್ಟೇ ಕ್ರೌಂಚೋವದತಿ ಮಧ್ಯಮಮ್‌ಃ|

ಕೋಕಿಲಃ ಪಂಚಮಂ ಬ್ರೂತೇ ಭೇಕೋವದತಿ ಧೈವತಮ್‌ಃ|

ನಿಶಾದೊ ಭಾಷತೇ ಹಸ್ತಿತ್ವೇತದ್ ಬ್ರಹ್ಮಾದಿ ಸಮ್ಮತಮ್‌ಃ||

-ಸಂಗೀತಸಾರ ಸಂಗ್ರಹ, ಸಂ ಸ್ವಾಮೀ ಪ್ರಜ್ಞಾನಂದ(ಪುಟ ೮ ಪದ್ಯಗಳು ೬೩, ೬೪)

ಈ ಶ್ಲೋಕವು ಸಂಗೀತದ ಉಗಮ ನಿಸರ್ಗದಲ್ಲಿಯೇ ಆವಿಷ್ಕಾರವಾದುದರ ಬಗೆಗೆ ತಿಳಿಸುತ್ತದೆ. ಸಂಗೀತದ ಉಗಮದಬಗೆಗೆ ನಮ್ಮ ವಿಚಾರಣೆಯನ್ನು ಶಾಸ್ತ್ರೀಯ ಜಿಜ್ಞಾಸೆಯ ಓರೆಗಲ್ಲಿಗೆ ತಿಕ್ಕಿ ನೋಡಿದಾಗ, ನಮಗೆ ಇದರ ನಿಜಾಂಶ ಅರಿವಾಗದೇ ಇರದು. ಮತ್ತು ಸಂಗೀತಕ್ಕೆ ಮೂಲ ಪ್ರೇರಣೆ ಹಾಗೂ ಸ್ಫೂರ್ತಿ ನಿಸರ್ಗವೇ ಎಂಬುದು ಮನದಟ್ಟಾಗುವುದು.

ಈ ಪ್ರಥ್ವಿಯ ಮೇಲೆ ಮಾನವನು ಉದಯವಾದಂದಿನಿಂದಲೂ ಆತನು ಈ ಗುಂಜಾರವದಲ್ಲಿ ಬೆಳೆದುಕೊಂಡು ಬಂದನು. ಮಂದೆ ಕಾಲಾವಧಿಯಲ್ಲಿ ಈ ಗುಂಜಾರವದತ್ತ ಆತನ ಲಕ್ಷವು ಹರಿದಾಗ ಆತನಿಗೆ ವಿಸ್ಮಯವಾಗಿಸಿರಬೇಕು. ಬರಬರುತ್ತ ಈ ಗುಂಜಾರವವನ್ನು ಆತನು ತನ್ನ ಸುತ್ತ ಮುತ್ತಲಿನ ಪಶು-ಪಕ್ಷಿಗಳ ಕೂಜನದಲ್ಲಿಯೂ, ಹಳ್ಳ ಕೊಳ್ಳಗಳ ತುಂಬ ಪ್ರಪಾತ

ಅಡಿ ಟಿಪ್ಪಣಿ : ೧ ಸಂಗೀತದ ಉತ್ಪತ್ತಿಯ ವಿವಿಧ ವಾದಗಳನ್ನು ಉಲ್ಲೇಖಿಸಿ..........

ಜಲಪಾತಗಳಲ್ಲಿಯೂ, ಸಮುದ್ರದ ತೆರೆಗಳ ಅಲೆಯ ಉದ್ಘೋಶದಲ್ಲಿ ಆತ ಗುರುತಿಸಿದನು. ನಂತರ ಆತನು ತನ್ನ ಸುತ್ತ ಮುತ್ತಲಿನ ಈ ಎಲ್ಲ ವಾತಾವರಣದಿಂದ ಪ್ರಭಾವಿತನಾಗಿ ತಾನೂ ನಿಸರ್ಗದೊಂದಿಗೆ ದನಿಗೂಡಿಸಲು ಕಲಿತನು. ಅನುಕರಣೆಯಿಂದ ಆತನ ಕಲ್ಪನಾಶಕ್ತಿ ಬೆಳಗಿ ಅದಕ್ಕೆ ಬುದ್ಧಿಯ ಮೆರಗು ಕೊಡಲು ತೊಡಗಿದನು. ಮುಂದೆ ಎಷ್ಟೋ ಕಾಲದ ನಂತರ ಇದೇ ಸಮಯಕ್ಕೆ ಭಾಷೆಯೂ ಅಸ್ತಿತ್ವದಲ್ಲಿ ಬಂದು, ತಮ್ಮಲ್ಲಿ ಉಂಟಾದ ಭಾವನೆಗಳನ್ನು, ಸರಿಯಾಗಿ ವ್ಯಕ್ತಮಾಡುವಲ್ಲಿ ಹೆಚ್ಚು ಸಮರ್ಥನಶೀಲನಾಗುತ್ತಾ ಮುಂದುವರೆದನು. ನಿಸರ್ಗದಲ್ಲಿ ಸಂಗೀತದಿಂದ ಪ್ರಭಾವಿತನಾಗಿ ಸ್ವರತಾಲ- ಲಯಗಳ ತರಂಗದಾಟಿಯಲ್ಲಿ ಆತನು ತನ್ನ ಬದುಕನ್ನು ಹೊಂದಿಸಿಕೊಂಡು ಬಾಳತೊಡಗಿದನು. ಆದಿ ಮಾನವನು ತೀವ್ರತರ ಭಾವನೆಗಳಿಂದ ಪ್ರೇರಿತನಾದಾಗ ಆತನ ದೇಹದ ನರನರಗಳಲ್ಲಿಯ ರಕ್ತದ ಚಲನೆ, ಎದೆಯ ಬಡಿತ ಎಲ್ಲವೂ ಆತನನ್ನು ಸ್ವರ - ತಾಲ - ಲಯದ ದಾಟಿಯನ್ನು ಮುಪ್ಪುರಿಗೊಳಿಸಿದವು. ತತ್ಪರಿಣಾಮವಾಗಿ ಆತನು ಹಾಡಿನೊಂದಿಗೆ ಕುಣಿಯಲು ಕಲಿತನು. ಈ ಹಾಡು ಕುಣಿತಗಳು ಆತನ ಜೀವನದ ನಾಡಿ-ಮಿಡಿತಗಳಾಗಿದ್ದುಕೊಂಡು ಇಂದಿಗೂ ನಡೆದುಕೊಂಡು ಬಂದಿದೆ. ಹೀಗೆ ಆತನು ತನಗೆ ಅರಿವಿಲ್ಲದಂತೆ ಸಂಸ್ಕೃತಿಯ ಜೀವನದಬೀಡಿನತ್ತ ಸಾಗುತ್ತನಡೆದನು. ಸಂಘಜೀವಿಯಾಗಿ ಒಂಟಿ ಜೀವನದ ಬೇಸರವನ್ನು ಬಿಸುಟಿಹಾಕಿದನು. ತನ್ನ ಹಾಗೂ ಸಂಗಡಿಗರ ಸುಖ ದುಃಖಗಳಲ್ಲಿ ಸಮಭಾಗಿಯಾಗಿ ತನ್ನಲ್ಲಿ ಉಂಟಾದ ಭಾವಾವೇಶದ ವಿದ್ಯುತ್ ಲಹರಿಯನ್ನು ಜನಪದ ಲೋಕಗೀತ ಸಂಗೀತದ ಮುಕಾಂತರ ಹರಿಸಿ, ಹಗುರನಾದನು.

ಹೀಗೆ ಸಂಗೀತವು ನಿಸರ್ಗದಲ್ಲಿ ಹುಟ್ಟಿಕೊಂಡು ಮಾನವನ ದೈಹಿಕ, ಬೌದ್ಧಿಕ ಮತ್ತು ಮಾನಸಿಕ ವಿಕಾಸದೊಂದಿಗೆ ಬೆಳೆದುಬಂದು , ಋಗ್ವೇದದ ಸ್ತೋತ್ರಗಾನದವರೆಗೆ ಮುನ್ನಡೆದು ಭರತಮುನಿಯ ಪರಿಶ್ರಮ ಹಾಗೂ ಪ್ರತಿಭೆಯಿಂದ ಶಾಸ್ತ್ರೀಯ ರೂಪವನ್ನು ಪಡೆಯಿತು, ಮುಂದೆ ಅನೇಕ ವಿದ್ವನ್ಮಣಿಗಳಿಂದ ವೇದಕಾಲದ ಸಂಗೀತ, ವಿಸ್ತಾರ ಹೊಂದುತ್ತ ಇಂದಿನ ಮಟ್ಟಕ್ಕೆ ವಿಕಾಸ ಹೊಂದಿದೆ.

ಸಂಗೀತದಲ್ಲಿ **ಸ್ವರಮಾತಾ ಲಯಪಿತಾ** ಎಂಬ ಮಾತು ಪ್ರಖ್ಯಾತವಾಗಿದೆ. ಸಂಗೀತದಲ್ಲಿ ಸ್ವರ ಹಾಗೂ ಶೃತಿ ಇವೆರಡೂ ಅತ್ಯಂತ ಅವಶ್ಯದ ಹಾಗೂ ಮಹತ್ವದ ಸಂಗತಿಗಳಾಗಿವೆ. ಶೃತಿ ಮಾತಾ ಲಯ ಪಿತಾ ಎಂದು ಹೇಳುವಂತೆ ಶೃತಿ ಮತ್ತು ಲಯಗಳು ಸಂಗೀತಮನೆತನಕ್ಕೆ ತಾಯಿ-ತಂದೆಗಳಂತಿವೆ. ಸಂಗೀತದಲ್ಲಿಯ

ರಂಜಕತೆಯೂ ಈ ಎರಡು ಅಂಶಗಳನ್ನು ಅವಲಂಬಿಸಿದೆ. ತಾಲ ಹಾಗೂ ಶ್ರುತಿಗಳ ಪರಿಪೂರ್ಣ ಜ್ಞಾನವು ಮೋಕ್ಷಮಾರ್ಗಕ್ಕೆ ಹೆದ್ದಾರಿಯಾಗಿದೆ ಎಂಬುದನ್ನು ಯಾಜ್ಞವಲ್ಕ ಸ್ಮೃತಿಯ ಈ ಶ್ಲೋಕದಿಂದ ತಿಳಿಯಬಹುದಾಗಿದೆ.

*೧ **ವೀಣಾವಾದನತತ್ವಜ್ಞ ಶ್ರುತಿಜಾತಿ ವಿಶಾರದಃ/**

ತಾಲಜ್ಞಶ್ಚಾಪ್ರಯಾಸೇನ ಮೋಕ್ಷಮಾರ್ಗಂ ನಿಯಚ್ಛತಿ//

ಕಾಲಕ್ಕೆ ಮೂಲವಾಗಿ ಲಯವೇ ಆಧಾರವಾಗಿದೆ. ಈ ತಾಲ-ಲಯದ ಆಧಾರದಮೇಲೆಯೇ ಇಡೀ ವಿಶ್ವಜೀವನವೇ ನಿಂತಿದೆ. ಗ್ರಹಗ್ರಹಗಳ ಭ್ರಮಣಗತಿಗಳಲ್ಲಿ ಕಿಂಚಿತ್ ಹೆಚ್ಚು ಕಡಿಮೆಯಾದರೂ ಪ್ರಳಯವೇ ಸರಿ. ಹೀಗೆ ತಾಲ-ಲಯಗಳು ಇಡೀ ಜೀವನದಲ್ಲಿಯೇ ಹಾಸುಹೊಕ್ಕಾಗಿದೆ. ಈ ಸೃಷ್ಟಿಯ ಹುಟ್ಟಿನೊಂದಿಗೆ ಮೂಲವಾಗಿ ಲಯವು ಹುಟ್ಟಿಕೊಂಡು ಸಾಗಿಬಂದು ವಿಶ್ವಜೀವನವನ್ನು ತಾಲ-ಲಯದಲ್ಲಿ ನಡೆಸುತ್ತದೆ. ಸಂಗೀತ ಸಾಹಿತ್ಯಾದಿ ಕಲೆಗಳು ನಾಡಿನ ಸಂಸ್ಕೃತಿಯ ಹೆಗ್ಗುರುತುಗಳಾಗಿವೆ. ಮಾನವನ ಸಾಂಸ್ಕೃತಿಕ ಜೀವನದಲ್ಲಿ ಲಲಿತಕಲೆಗಳು ಬಹುಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತವೆ. ಕಲೆಯ ಅಭ್ಯಾಸ ಹಾಗೂ ಕೇಳುವಿಕೆಯಿಂದ ದಿನನಿತ್ಯದ ದುಡಿತದಿಂದ ದೈಹಿಕವಾಗಿ ಹಾಗೂ ಮಾನಸಿಕವಾಗಿ ಉಂಟಾಗುವ ತೊಂದರೆಗಳನ್ನು ಸ್ವಲ್ಪ ಸಮಯದವರೆಗಾದರೂ ನಿವಾರಿಸಬಹುದಾಗಿದೆ. ಲಲಿತಕಲೆಗಳಲ್ಲಿ ಸಂಗೀತವು ಶ್ರೇಷ್ಠಕಲೆಯಾಗಿದ್ದು ಮೋಕ್ಷ ಮಾರ್ಗದ ಸೋಪಾನಕ್ಕೂ ಸಂಗೀತ ದಾರಿಮಾಡಿಕೊಡುತ್ತದೆ. ಸಂಗೀತದಿಂದ ನಮ್ಮ ತ್ರಿಕರ್ಣಗಳು ಪರಿಶುದ್ಧವಾಗುತ್ತವೆ. ಶಾರೀರಿಕ ರೋಗ ರುಜನಗಳು ಗುಣವಾಗುತ್ತವೆ. ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಸಹ ಸಂಗೀತದ ಪವಾಡ, ಸದೃಶ ಶಕ್ತಿ ಸಾಮರ್ಥ್ಯಗಳನ್ನು ನಾವು ಅಳೆದು ನೋಡಬಹುದಾಗಿದೆ.

*೨ ಸಂಗೀತವು ಈ ವಿಶ್ವದೊಂದಿಗೆ ಹುಟ್ಟಿಕೊಂಡು ಬಂದಿದೆ. ನಮ್ಮ ಭಾರತೀಯ ಸಂಗೀತವು ಒಂದು ಖಚಿತವಾದ ಶಾಸ್ತ್ರೀಯ ಸ್ವರೂಪವನ್ನು ಹೊಂದಿಕೊಂಡು ಬೆಳೆದುಬಂದುದು ವೇದಕಾಲದಿಂದಲೇ. ಭರತ ಮುನಿಗಳಂತಹ ಪ್ರತಿಭಾನ್ವಿತ ಯೋಗಿಗಳ ಪ್ರತಿಭೆಯಿಂದ. ವೇದಕಾಲಸಂಗೀತವು ಒಂದು ವ್ಯವಸ್ಥಿತ ಶಾಸ್ತ್ರೀಯ ಚೌಕಟ್ಟಿಗೆ ಒಳಪಟ್ಟು ಇಂದಿನವರೆಗೂ ಬೆಳೆದುಬಂದುದನ್ನು ನೋಡಬಹುದಾಗಿದೆ ಮತ್ತು ಕೇಳಬಹುದಾಗಿದೆ.

ಭಾರತದಲ್ಲಿ ಮುಸ್ಲಿಂಆಡಳಿತದ ಪರಿಣಾಮವಾಗಿ ಭಾರತೀಯ ಸಾಂಸ್ಕೃತಿಕ ಜೀವನದಲ್ಲಿ ವಿಶೇಷ ಬದಲಾವಣೆಯಾಯಿತು. ಸಂಗೀತಕಲೆಯ ಬಗ್ಗೆ ಜನಸಾಮಾನ್ಯರಲ್ಲಿದ್ದ ದೃಷ್ಟಿ ಬೇರೆಯಾಯಿತು. ಸಂಗೀತ

ಅಡಿ ಟಿಪ್ಪಣಿ : *೧ ಯಾಜ್ಞವಲ್ಕ್ಯ ಸ್ಮೃತಿಯ ಶ್ಲೋಕವನ್ನಾಧರಿಸಿ ....
*೨ ಜ್ಞಾನ ಗಂಗೋತ್ರಿ ಭಾಗ ೫. ಕಲೆ, ಸಂಗೀತದ ಉತ್ಪತ್ತಿಯನ್ನಾಧರಿಸಿ ....

ಕಲೆಯ ಧಾರ್ಮಿಕ ದೃಷ್ಟಿಯು ಅಳಿದು ಅಲ್ಲಿ ವ್ಯವಹಾರಿಕ ದೃಷ್ಟಿಯು ತಲೆದೋರಿತು. ಮುಂದೆ ಭಾರತದ ಮೇಲೆ ಆಂಗ್ಲ ಸಂಸ್ಕೃತಿಯ ಪರಿಣಾಮವಾದುದರಿಂದ ಸಾಮಾಜಿಕ , ರಾಜಕೀಯ ಪರಿಸ್ಥಿತಿಯು ಹದಗೆಟ್ಟರೂ ಸಹ ಕಲೆಗಳ ಬಗೆಗೆ ಇದ್ದ ಜನಸಾಮಾನ್ಯರ ದೃಷ್ಟಿ ಅಚಲವಾಗಿ ಉಳಿದುಕೊಂಡು ಬಂದಿತು. ಈ ಮಧ್ಯೆ ಪಂ/ **ಭಾತಖಾಂಡೆ**, ಪಂ/ ವಿ.ಡಿ. **ಪಲೂಸ್ಕರ್** ಮೊದಲಾದವರು ಮುಂದೆ ಬಂದು ಸಂಗೀತದ ಬಗೆಗಿನ ಜನಸಾಮಾನ್ಯರ ಕೀಳುದೃಷ್ಟಿಯನ್ನು ಕಿತ್ತುಹಾಕಲು ಸಾಕಷ್ಟು ಶ್ರಮಿಸಿದರು. ತತ್ಪರಿಣಾಮವಾಗಿ ಸಂಗೀತ ಕಲೆಯು ಗೌರವಸ್ಥ ಕಲೆಯಾಗಿ ಉಳಿದು ಬೆಳೆದುಕೊಂಡು ಬಂದಿತು.

ನಮ್ಮ ಭಾರತೀಯ ಪ್ರಾಚೀನ ಸಂಗೀತವು ಭಕ್ತಿರಸ ಪ್ರಧಾನವಾಗಿದ್ದು ಆರಾಧ್ಯದೇವತೆಗಳ ಪೂಜೆ ಪುನಸ್ಕಾರಗಳಂತಹ ಧಾರ್ಮಿಕ ವಿಧಿಕಾರ್ಯಗಳಿಗೆ ಮರ್ಯಾದಿತವಾಗಿತ್ತು. ಅಷ್ಟವಿದಾರ್ಚನೆಗಳಲ್ಲಿ ನೃತ್ಯ ಸಂಗೀತಾದಿ ಕಲೆಗಳು ಮಹತ್ವದ ಸ್ಥಾನಮಾನಗಳನ್ನು ಹೊಂದಿದ್ದವು. ಆಗಿನ ಕಾಲದಲ್ಲಿ ಸಂಗೀತ ಕಲಾವಿದರು ಭಕ್ತಿಪರವಶತೆಯಿಂದ ನಿಂತುಕೊಂಡೇ ತಮ್ಮ ಸಂಗೀತ ಸೇವೆಯನ್ನು ಸಲ್ಲಿಸುತ್ತಿದ್ದರು.

* ಸಂಗೀತದ ಮಾಹತ್ವವನ್ನು ಅರಿತ ಶಿವಶರಣರು, ಸಂತರು , ಹರಿದಾಸಾದಿ ವಿಭೂತಿಪುರುಷರು ಸಂಗೀತವನ್ನು ಒಂದು ಯೋಗವೆಂದು ತಿಳಿದು ಸಂಗೀತಾರಾಧನೆ ಮಾಡುತ್ತಿದ್ದರು. ಶ್ರೀ ನಿಜಗುಣ ಶಿವಯೋಗಿಗಳು, ಕರ್ನಾಟಕ ಸಂಗೀತದ ಪಿತಾಮಹನೆಂದೆನಿಸಿರುವ ಪುರಂದರ ದಾಸರು, ತ್ಯಾಗರಾಜರು ಮುಂತಾದವರು ಸಂಗೀತದಿಂದ ದೇವ ದೇವನ ಸಾನಿಧ್ಯವನ್ನು ಸಾಧಿಸಿದರು. ಶರಣ ಸಕಲೇಶ ಮಾದರಸರು ಸಂಗೀತದ ಮಹತ್ವವನ್ನರಿತು ಸಂಗೀತದ ಬಗೆಗೆ ಆಳವಾದ ಅಭ್ಯಾಸವನ್ನು ಮಾಡಿದ್ದರು. ಇವರ ಕಾಲದಲ್ಲಿ ಸಂಗೀತವು ಒಂದು ಉನ್ನತಮಟ್ಟವನ್ನು ಮುಟ್ಟಿತ್ತು ಎಂಬುದು ನಮಗೆ ಶಿವಶರಣರ ವಚನಗಳಿಂದಲೂ, ಉಗಾಭೋಗಗಳಿಂದಲೂ ತಿಳಿದು ಬರುತ್ತದೆ. ಭಕ್ತೆ **ಮೀರಾಬಾಯಿ , ಸೂರದಾಸ, ತುಳಸೀದಾಸ, ಕಬೀರದಾಸ,** ಚೈತನ್ಯ ಮಹಾಪ್ರಭು ಮುಂತಾದ ವಿಭೂತಿ ಪುರುಷರು ಹಾಡುಗಳನ್ನು ರಚಿಸಿ ಅವುಗಳನ್ನು ಏಕನಾದ ಮುಂತಾದ ವಾದ್ಯಗಳಲ್ಲಿ ಶಾಸ್ತ್ರೀಯವಾಗಿ ಹಾಡಿ ಅಮರರಾಗಿದ್ದಾರೆ. ಅನುಭವ ಮಂಟಪದ ಮಹಾ ತತ್ವ ಜ್ಞಾನಿಯಾದ ಶ್ರೀ ಅಲ್ಲಮಪ್ರಭು ದೇವರು ೧೨ ನೇ ಶತಮಾನದ ಶ್ರೇಷ್ಠ ವಾದನಕಾರರಾಗಿದ್ದಾರೆಂಬುದು ತಿಳಿದುಬರುತ್ತದೆ.

ಅಡಿ ಟಿಪ್ಪಣಿ: * ಆಧ್ಯಾತ್ಮ ಹಾಗೂ ಸಂಗೀತದ ವಿಚಾರಗಳನ್ನಾಧರಿಸಿ ....

ನವಿಲಿನಿಂದ ಷಡ್ಜದ ಉತ್ಪತ್ತಿಯಾಯಿತು. *೧ ಆನೆಯಿಂದ ನಿಷಾದ ಸ್ವರವು ಉತ್ಪತ್ತಿಯಾಯಿತು ಎಂಬ ಅಭಿಪ್ರಾಯ ಸಪ್ತ ಸ್ವರಗಳಿಗೂ, ನಿಸರ್ಗದಲ್ಲಿಯ ಪಶುಪಕ್ಷಿಗಳಿಗೂ ಇರುವ ತುಲನಾತ್ಮಕ ಸಂಬಂಧದಿಂದ ಸಾಹಿತ್ಯಿಕ ಮೌಲ್ಯವನ್ನು ಹೊಂದಿದೆಯೇ ವಿನಾಃ , ಪ್ರತ್ಯಕ್ಷವಾಗಿ ಈ ಪಶುಪಕ್ಷಿಗಳ ಧ್ವನಿಗಳು ತರಬೇತಿ ಹೊಂದಿದ ಕಂಠಕ್ಕಾಗಲೀ, ತಂತಿವಾದ್ಯದಿಂದ ನುಡಿಯುವ ಸ್ವರಕ್ಕಾಗಲಿ ಸರಿದೂಗಲಾರವು. ಪ್ರಪಂಚದ ಬಾಹ್ಯ ಗದ್ದಲವನ್ನವಲೋಕಿಸಿದಾಗ ಈ ಪಶುಪಕ್ಷಿಗಳ ಕೂಜನವು ಮಧುರವಾಗಿ ಕೇಳುತ್ತದೆ. ಶಾಸ್ತ್ರೀಯ ದೃಷ್ಟಿಯಿಂದ ಸಂಗೀತದಲ್ಲಿ ಇವಕ್ಕೆ ಯಾವ ಸ್ಥಾನಮಾನಗಳೂ ಇಲ್ಲ. ಆದರೆ ಸಂಗೀತೋಪಯೋಗಿ ಸಪ್ತಸ್ವರಗಳಿಗೆ ಈ ಪಶುಪಕ್ಷಿಗಳ ಧ್ವನಿಗಳು ಅತ್ಯಂತ ಸಮೀಪವರ್ತಿಯಾಗಿದ್ದು, ಸಪ್ತಸ್ವರಗಳ ಉತ್ಪತ್ತಿಯ ದೃಷ್ಟಿಯಿಂದ ಈ ಮಾತು ನಿಸರ್ಗಕ್ಕೂ ಮತ್ತು ಸಂಗೀತಕ್ಕೂ ಇರುವ ನಿಕಟ ಸಂಬಂಧವನ್ನು ಸಮರ್ಥಿಸುತ್ತದೆ.

ಶಾಸ್ತ್ರೀಯ ಸಂಗೀತ

ಸಂಗೀತದಲ್ಲಿ ಸ್ವರ ಹಾಗೂ ಲಯಗಳನ್ನು ಕೇವಲ ರಾಗಗಳ ಮುಖಾಂತರ ಕಂಠ ಮಾಧ್ಯಮದಿಂದ ಪ್ರಕಟಿಸುವ ವಿಧಾನವನ್ನೇ ಗಾಯನ ಎನ್ನಲಾಗಿದೆ. ಸಂಗೀತದಲ್ಲಿಯ ಅನೇಕ ಪದ್ಧತಿಗಳಲ್ಲಿ ಅತೀ ವಿಶಾಲವೂ, ಗಹನವೂ ಆದ ವಿಭಾಗವನ್ನು ನಾವು ಶಾಸ್ತ್ರೀಯ ಗಾಯನ ಎಂದು ಪರಿಗಣಿಸುತ್ತೇವೆ. ಶಾಸ್ತ್ರೀಯ ಸಂಗೀತದ ಮೂಲ ರೂಪವೇ ಶಾಸ್ತ್ರೀಯ ಗಾಯನವಾಗಿರುತ್ತದೆ. ಶಾಸ್ತ್ರೀಯ ಸಂಗೀತದ ಗಾಯನ ರೂಪವನ್ನು ಗಾಯಕಿ ಎಂದು ಕರೆಯಲಾಗಿದೆ.

ಶಾಸ್ತ್ರೀಯ ಸಂಗೀತ ಗಾಯನ ಪದ್ಧತಿಯು ಬೆಳೆದು ಬಂದ ದಾರಿಯು ಬಹಳ ಕ್ಲಿಷ್ಟತಮವಾಗಿದೆ. ಅಂದಿನಿಂದ ಇಂದಿನ ವರೆಗಿನ ಸಂಪೂರ್ಣ ಇತಿಹಾಸವನ್ನು ಸರಳವಾಗಿ ತಿಳಿಯಲು ಬರುವಂತಿಲ್ಲ.

ಶಾಸ್ತ್ರೀಯ ಗಾಯನ ಪದ್ಧತಿಯಲ್ಲಿ ಈ ಧ್ರುಪದ್ ಧಮಾರ್, ಖ್ಯಾಲ್ , ತರಾನಾ ಮುಂತಾದವುಗಳನ್ನು ಒಳಗೊಂಡಿರುತ್ತದೆ. ಇಂದು ಭಾರತದ ತುಂಬೆಲ್ಲಾ ಖ್ಯಾಲ್ ಗಾಯಕಿ ಪದ್ಧತಿಯು ಹೆಚ್ಚು ಪ್ರಚಲಿತವಾಗಿದೆ. ಶಾಸ್ತ್ರೀಯ ಗಾಯನದ ಪ್ರಕಾರಗಳಾದ ಇವುಗಳನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ.

ಅಡಿಟಿಪ್ಪಣಿ : * ಶಾಸ್ತ್ರೀಯ ಸಂಗೀತದ ಉತ್ಪತ್ತಿಯ ವಿವಿಧ ಅಭಿಪ್ರಾಯವನ್ನಾಧರಿಸಿ ಸ್ಪಷ್ಟಪಡಿಸಿದ ಅಭಿಪ್ರಾಯ ....

ನೊಂ - ತೊಂ

ಇದೊಂದು ವಿಶಿಷ್ಟ ರೂಪದ ಗಾಯನ ಪದ್ಧತಿ. ಇದನ್ನು ಅತಿ ಪುರಾತನವಾದ ಗಾಯನ ಪದ್ಧತಿ ಎಂದು ಪರಿಗಣಿಸಲಾಗುತ್ತದೆ. ಪುರಾತನ ಕಾಲದಲ್ಲಿ ಸಂಗೀತದಲ್ಲಿಯ ರಾಗಗಳನ್ನು ಮತ್ತು ಅವುಗಳ ಎಲ್ಲ ರೂಪಗಳನ್ನು ' ಓಂ ಅನಂತ ಹರಿ ನಾರಾಯಣ' ಎಂಬ ಪದಗಳಿಂದಲೇ ಪ್ರಾರಂಭಿಸುತ್ತಿದ್ದರು. ರಾಗ ರೂಪಗಳನ್ನು ಆಲಾಪ, ತಾನು ಮುಂತಾದ ವಿಧಾನಗಳ ಮೂಲಕ ನೊಂ- ತೊಂ ಶಬ್ಧಗಳ ಉಪಯೋಗಗಳಿಂದ ಪ್ರಕಟಪಡಿಸುವ ಗಾಯನಕ್ಕೆ ನೊಂ- ತೊಂ ಎನ್ನುವರು. ಲಯಬದ್ಧವಾದ ಕೆಲಸ, ತಾನು ಇವುಗಳನ್ನು ಒಂದು ಲಯದ ಕ್ರಮದಲ್ಲಿಯೇ ತೋರಿಸುವ ಪರಿಪಾಠವಿದೆ. ಇದರಲ್ಲಿಯೂ ನ್ಯಾಸ , ವಿನ್ಯಾಸ, ಮೂರ್ಛನಾ, ಖಟಕ, ಗಮಕ, ಆಂದೋಲನ ಈ ಮುಂತಾದ ರಾಗಗಳ ಕ್ರಿಯಾರೂಪಗಳನ್ನು ಉಪಯೋಗಿಸುತ್ತಾರೆ. ಈ ಪದ್ಧತಿಯು ಇಂದು ಖ್ಯಾಲ್ ಗಾಯನದಲ್ಲಿ ಎಲ್ಲೆಡೆಯಲ್ಲಿ ಕೇಳಸಿಗದಿದ್ದರೂ ಆಗ್ರಾಘರಾಣೆಯ ಗಾಯಕಿಯಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವುದನ್ನು ಕೇಳುತ್ತೇವೆ

ಧ್ರುಪದ್ ಮತ್ತು ಧಮಾರ್

ಶಾಸ್ತ್ರೀಯ ಸಂಗೀತದ ಪುರಾತನ ಪ್ರಕಾರದಲ್ಲಿ ದೃಪದ್ ಮತ್ತು ಧಮಾರ್ ಶೈಲಿಗಳು ಉತ್ತಮ ಪ್ರಕಾರದ ಶೈಲಿಯಾಗಿ ಹೊರಹೊಮ್ಮಿದೆ. ಗಾಯಕಿಯ ಈ ಹಂತದಲ್ಲಿ ಸೂರ್‌ದೊಂದಿಗೆ ಚೀಜ್ ಹಾಗೂ ತಾಲದ ಸಂಯೋಗ ಪ್ರಾರಂಭವಾಗುತ್ತದೆ. ದೃಪದ್ ಅಥವಾ ಧಮಾರ್‌ದಲ್ಲಿ ಚೀಜುಗಳಲ್ಲಿ ಸ್ಥಾಯೀ-ಅಂತರಾ ಕಚಿತ್ತಾಗಿ ಅಭೋಗಿ-ಸಂಚಾರಿಗಳಿರುತ್ತದೆ. ಇದರಲ್ಲಿ ಆಲಾಪ ತಾನ್ ಇವುಗಳ ಬಳಕೆ ಇರುವುದಿಲ್ಲ. ಆದರೂ ಆರಂಭದಲ್ಲಿ ನೊಂ-ತೊಂ ಪದ್ಧತಿಯ ಆಲಾಪ ಮಾಡಿ ಬಂದೀಷ್‌ನ್ನು ಪ್ರಸ್ತುತಪಡಿಸುವಾಗ ಭೋಲತಾನ್‌ಗಳ ಪ್ರಯೋಗವನ್ನು ಮಾಡುವುದನ್ನು ನೋಡುತ್ತೇವೆ. ಅನೇಕ ಸೂಕ್ಷ್ಮ ಕೆಲಸಗಳನ್ನು ಚೀಜ್‌ನ ಜೊತೆಯಲ್ಲಿ ರಮ್ಯವಾಗಿ ತೋರಿಸುತ್ತಾರೆ. ದೃಪದ್ ತಾಲ, ಧಮಾರ್ ತಾಲ , ಆಡಾಚೌತಾಲ ಮುಂತಾದ ತಾಲಗಳಲ್ಲಿ ದ್ರುಪದ್ ಹಾಗೂ ಧಮಾರ್‌ಗಳನ್ನು ಹಾಡುತ್ತಾರೆ.

<u>ಸಂಗೀತ ಶಾಸ್ತ್ರ</u>

ಸಂಗೀತವು ಗಾಯಕನ ಅಂತಶ್ಚೈತನ್ಯದಿಂದ ಚಿಮ್ಮುವ ಅಲೌಕಿಕ ಅನುಭವದ ಒಂದು ರಸಗಡಲಾಗಿದೆ. ಸಂಗೀತಗಾರನು ತಾನು ಅನುಭವಿಸುವ ರಸಾನುಭವವನ್ನು ತನ್ನ ಕಲೆಯ ಮೂಲಕ ಶ್ರೋತೃಗಳೂ ಅನುಭವಿಸುವಂತೆ ಮಾಡುತ್ತಾನೆ. ಸಂಗೀತದ ಮುಖಾಂತರ ಕಲಾವಿದನ ಭಾವಾವೇಶದ ವಿದ್ಯುತ್ ಸ್ಪರ್ಷದಿಂದ ಶ್ರೋತೃಗಳ ಸಮಾನ ಭಾವಗಳು ಬೆಳಗಿ ಲಾಸ್ಯವಾಡುವವು. ದುಃಖಪೂರಿತ ಆಲಾಪದಿಂದ ಕರುಣರಸ ಭಕ್ತಿಪೂರ್ವಕ ರಾಗಾಲಾಪನೆಯಿಂದ ವೀರರಸ ಹೀಗೆ ಒಂದೊಂದು ಭಾವದಿಂದ ಒಂದೊಂದು ರಸ ಉತ್ಪತ್ತಿಯಾಗುತ್ತದೆ.

*೧ ಸಾಹಿತ್ಯದಲ್ಲಿ ನವರಸಗಳಿವೆ. ಒಂದೊಂದು ರಸಕ್ಕೂ ಪ್ರತ್ಯೇಕವಾದ ಸ್ಥಾನಮಾನಗಳೇ ಇದೆ. ಆದರೆ ಸಂಗೀತದಲ್ಲಿ ಶೃಂಗಾರ , ವೀರ , ಕರುಣ ಹಾಗೂ ಶಾಂತ ರಸಗಳು ಪ್ರಧಾನವಾದ ರಸಗಳು. ಉಳಿದ ರಸಗಳು ಈ ಪ್ರಧಾನರಸಗಳಲ್ಲಿಯೇ ಅಂತರ್ಗತವಾಗಿದೆ.

ಸ್ವರ ಮಾತಾ ಲಯ ಪಿತಾ ಎಂಬಂತೆ ಸಂಗೀತಕ್ಕೆ ಸ್ವರ ತಾಯಿಯಾದರೆ ಲಯ ತಂದೆಯಸ್ಥಾನದಲ್ಲಿದೆ. ಲಯದಲ್ಲಿ ಮುಖ್ಯವಾಗಿ ವಿಲಂಬಿತ, ಮದ್ಯ ಮತ್ತು ದೃತ್ ಹೀಗೆ ಮೂರು ಹಂತಗಳಿವೆ. ರಾಗದಲ್ಲಿ ರಸಪ್ರತಿಪಾದನೆಯ ದೃಷ್ಟಿಯಿಂದ ಈ ಮೂರು ಹಂತಗಳು ಬಹು ಮಹತ್ವದ ಅಂಗಗಳಾಗಿವೆ.

*೨ ತಥಾ ಲಯಾ ಹಾಸ್ಯ ಶೃಂಗಾರ ಯೋರ್ಮದ್ಧಸಮಾಃ
ಬೀಭತ್ಸ ಭಯಾನಕ ಯೋರ್ವಿಲಂಬಿತಃ
ವೀರ ರೌದ್ರಾದ್ ಭೂತೇಷು ಚದ್ರುತಃ

ವಿಷ್ಣು ಧರ್ಮೋತ್ತರ.

ವಿಲಂಬಿತ ಲಯವು ಬೀಭತ್ಸ ಮತ್ತು ಭಯಾನಕ ರಸವನ್ನು , ಮದ್ಯ ಲಯವು ಹಾಸ್ಯ ಹಾಗೂ ಶೃಂಗಾರ ರಸಗಳನ್ನು ಮತ್ತು ದೃತ್ ಲಯವು ವೀರ ಮತ್ತು ರೌದ್ರ ರಸವನ್ನು ಪ್ರತಿಪಾದಿಸುತ್ತದೆ.

ಹೀಗೆ ಭಾರತೀಯ ಸಂಗೀತವು ಮಾದುರ್ಯದ ಜೊತೆಗೆ ಸುಸಂಯೋಜಿತ ಸ್ವರ ಸಂವಿಧಾನದಿಂದ ಅಲಂಕಾರ ಪರಿಪೂರ್ಣವಾಗಿದ್ದು, ಪರಮಾನಂದಪ್ರಾಪ್ತಿಯ ಸಾಧನವಾಗಿದೆ.

ಅಡಿ ಟಿಪ್ಪಣಿಃ *೧ ಸಂಗೀತ ಶಾಸ್ತ್ರ ದರ್ಪಣ ಲೇ. ಪ್ರೊ. ಎ.ಯು . ಪಾಟೀಲ, ಸಂಗೀತದಲ್ಲಿ ರಸದ ಕಲ್ಪನೆ. ಪುಟ ೧೩೦
*೨ ವಿಷ್ಣು ಧರ್ಮೋತ್ತರ ಶ್ಲೋಕವನ್ನಾಧರಿಸಿ ....

ವೇದಕಾಲದ ಸಂಸ್ಕೃತಿ

ವೇದ ಎಂದರೆ ಜ್ಞಾನ. ಇದು ಸಂಸ್ಕೃತದ 'ವಿದ್' ಎಂಬ ಶಬ್ದದಿಂದ ಬೆಳಕಿಗೆ ಬಂದಿದೆ. ಋಕ್, ಯಜುರ್ವ್, ಸಾಮ ಮತ್ತು ಅಥರ್ವಣವೇದ ಎಂದು ನಾಲ್ಕು ವೇದಗಳಿವೆ. ಈ ವೇದಗಳಿಂದ ಪೂರ್ವಕಾಲದ ಧಾರ್ಮಿಕ, ರಾಜಕೀಯ ಜೀವನದ ಪರಿಚಯವನ್ನು ಪಡೆಯಬಹುದು. ಯಜುರ್ವೇದವು ಯಜ್ಞ ಹಾಗೂ ಧರ್ಮ ಆಚರಿಸುವ ವಿಧಾನಗಳಿಂದ ಒಳಗೊಂಡಿದೆ. ಸಾಮವೇದದಲ್ಲಿ ನೂರಾರು ಸೂಕ್ತಗಳಿದ್ದವು. ಅಥರ್ವಣವೇದದಲ್ಲಿ ವಿದ್ಯೆ, ತತ್ವಜ್ಞಾನ, ಮಂತ್ರ ಇತ್ಯಾದಿಗಳಿಂದ ಕೂಡಿದೆ. ಕ್ರಿ.ಶ. ಪೂ. ೧೫೦೦ ರಲ್ಲಿ ರಚಿಸಿದ ಬ್ರಾಹ್ಮಣ್ಯ ಯಾಗಗಳು ಧಾರ್ಮಿಕ ಜೀವನದ ಪ್ರತಿಬಿಂಬವಾಗಿದೆ. ಈ ಕಾಲದಲ್ಲಿ ಜಾತಿಪದ್ಧತಿ ಬಗ್ಗೆ ನಿಶ್ಚಿತವಾದ ಆಧಾರಗಳಿಲ್ಲ. ಆದರೂ ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಆರ್ಯರು ವಿವಿದ ಬಣ್ಣಗಳ ವೇಶಭೂಷಣಗಳನ್ನು ತೊಡುತ್ತಿದ್ದರು. ಪಗಡೆಯಾಟ, ಮನೆಯ ನಿರ್ಮಾಣ, ಸಂಗೀತ, ನೃತ್ಯ ಮುಂತಾದ ಕಲೆಯಲ್ಲಿ ಪಳಗಿರುವುದು ಕಂಡುಬರುತ್ತದೆ. ಕಾದಾಟ ಮಾಡುವುದಕ್ಕಿಂತ ಸುಖ, ಶಾಂತಿಜೀವನ ಸಾಗಿಸುವುದರಲ್ಲಿ ಇವರು ಹೆಚ್ಚಿನ ಆಸಕ್ತಿವಹಿಸಿರುವುದು ಕಂಡುಬರುತ್ತದೆ. ವೇದಕಾಲದಲ್ಲಿ ಜೀವನ ಸರಳವಾಗಿತ್ತು. ಬ್ರಹ್ಮಚರ್ಯ, ಗ್ರಹಸ್ಥ, ವಾನಪ್ರಸ್ಥ, ಸನ್ಯಾಸಿ ಇವೇ ನಾಲ್ಕು ಆಶ್ರಮ ಪದ್ಧತಿಗಳನ್ನು ಕೌಟುಂಬಿಕ ಜೀವನದಲ್ಲಿ ಅಳವಡಿಸಿದ್ದರು. ವೇದಕಾಲದಲ್ಲಿ ಧಾರ್ಮಿಕ ಪ್ರವೃತ್ತಿಯ ಚಿತ್ರಗಳನ್ನು ಹೆಚ್ಚಾಗಿ ನೋಡಬಹುದಿತ್ತು. ಚರ್ಮದ ಮೇಲೆ ರಚಿಸಿರುವ ಕಲಾಕೃತಿಗಳು ಈ ಕಾಲದ ಕಲಾಪ್ರೌಢಿಮೆಗೆ ನಿದರ್ಶನವಾಗಿದೆ. ವಸಿಷ್ಟರ, ಋುಷಿಗಳ ಪರ್ವತ, ಸೂರ್ಯೋದಯ ಇವುಗಳ ಚಿತ್ರ ಪ್ರಾಚೀನ ಕಲೆಯ ಹಿರಿಮೆಯನ್ನು ವ್ಯಕ್ತಪಡಿಸುತ್ತವೆ. ಸಾಮವೇದವು ಸಂಗೀತ ವೇದವಾಗಿತ್ತೆಂದು ತಿಳಿಯುತ್ತದೆ. ವೇದಕಾಲದಲ್ಲಿ ಉದಾತ್ತ , ಅನುದಾತ್ತ ಹಾಗೂ ಸ್ವರಿತ ಎಂದು ಮೂರು ಸ್ವರಗಳಿರುವುದನ್ನು ನೋಡಬಹುದಾಗಿದೆ. ಈ ಮೂರು ಸ್ವರಗಳಲ್ಲಿಯೇ ಸಂಗೀತವನ್ನು ವೈದಿಕ ಕಾಲದಲ್ಲಿ ಹಾಡುತ್ತಿದ್ದರು.

ಭಾರತೀಯ ಸಂಗೀತ

ಎಲ್ಲ ರಾಷ್ಟ್ರಗಳ ಸಂಗೀತದಂತೆ ಭಾರತದಸಂಗೀತಕ್ಕೂ ಜನಪದಗಾಯನವೇ ಮೂಲ. ವ್ಯಾಪಕ ಇತಿಹಾಸವುಳ್ಳ ಭಾರತದಲ್ಲಿ ಪ್ರಾಚೀನ ಜನತೆಯ ಸಂಗೀತದ ರೂಪು ಹೇಗಿತ್ತೆಂಬುದನ್ನು ಖಚಿತವಾಗಿ ಹೇಳುವುದು ಕಷ್ಟ. ಆದರೆ ಈ ಬಗೆಗೆ ಕೆಲವು ಊಹೆಗಳನ್ನು ಮಾಡಬಹುದು. ಇದಕ್ಕೆ ಮುಖ್ಯ ಆಧಾರ, ಆಧುನಿಕ ಪ್ರಭಾವಕ್ಕೆ ಇನ್ನೂ ಒಳಗಾಗದೆ ಇರುವ ಅರಣ್ಯವಾಸಿಗಳು, ಗಿರಿಜನರ ಸಂಗೀತ, ಶಾಸ್ತ್ರೀಯ ಸಂಗೀತದಲ್ಲಿ ಉಪಯೋಗಿಸುವ ಏಳು ಸ್ವರಗಳ ಬದಲು ಐದೇ ಸ್ವರಗಳ ಉಪಯೋಗವನ್ನು ಈ ಸಂಗೀತದಲ್ಲಿ ಕೇಳಬಹುದು. ಇವರ ಕೆಲವು ಪದಗಳು ವೇದಪಠಣದ ದಾಟಿಗೆ ಅತೀ ಸಮೀಪವಿದೆ. ಭಾರತೀಯ ಸಂಗೀತದ ಉಗಮ ಸಾಮವೇದದಲ್ಲಿ ಎಂಬುದು ಪರಂಪರಾಗತ ನಂಬಿಕೆ. ವೇದಕಾಲದ ಸಂಗೀತದ ಛಾಯೆ ನಮಗೆ ತಿಳಿಯುವುದು ಪರಂಪರಾಗತವಾಗಿ ಬಂದಿರುವ ವೇದಪಠಣ ಮತ್ತು ಅದಕ್ಕೆ ಸಮಕಾಲೀನವೆಂದು ಊಹಿಸಬಹುದಾದ ಕೆಲವು ಗುಡ್ಡ ಗಾಡು ತಂಡಗಳಲ್ಲಿ ಪ್ರಚಲಿತವಿರುವ ಸಂಗೀತದಿಂದ ಎನ್ನಬಹುದು. ನಮಗೆ ಈಗ ಉಪಲಬ್ದವಿರುವ ಅತ್ಯಂತ ಪ್ರಾಚೀನ ಗ್ರಂಥ ಭರತನ ನಾಟ್ಯಶಾಸ್ತ್ರ ಇದು ಕ್ರಿ.ಶ. ೩ ನೇ ಶತಮಾನದ ಗ್ರಂಥವಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ಭರತನ ಅನಂತರ ರಚಿತವಾದ ಕೆಲವು ಮುಖ್ಯ ಗ್ರಂಥಗಳೆಂದರೆ ಮತಂಗಮುನಿಯ ಬೃಹದ್ದೇಶಿ, ನಾರದನ ನಾರದೀಯಶಿಕ್ಷಾ ಮುಖ್ಯವಾದವುಗಳು. ಇವುಗಳನ್ನು ಅವಲೋಕಿಸಿದರೆ ಭಾರತೀಯ ಸಂಗೀತ ಈ ಅವಧಿಯಲ್ಲಿ ಒಂದು ಅಚ್ಚುಕಟ್ಟಾದ ರೂಪಪಡೆಯಿತೆಂಬುದನ್ನು ಗುರುತಿಸಬಹುದು. ಹಾಗೆಯೇ ಭಾರತದ ಎಲ್ಲೆಡೆ ಏಕರೂಪದ ಸಂಗೀತವಿರುವುದು ಸ್ಪಷ್ಟವಾಗುತ್ತದೆ. ಈ ಕಾಲದಿಂದ ಮುಂದೆ ಸಂಗೀತ ಶಾಸ್ತ್ರ ಕುರಿತು ಅನೇಕ ಗ್ರಂಥಗಳು ಹೊರಬಂದಿದೆ. ಸಾರಂಗದೇವನ 'ಸಂಗೀತರತ್ನಾಕರ' ಇದೇ ಕಾಲದಲ್ಲಿ ಪ್ರಕಟವಾಯಿತು.

ಭಾರತೀಯ ಸಂಗೀತದ ಮೂಲ ಕರ್ನಾಟಕ ಸಂಗೀತವೆನ್ನಲಾಗಿದೆ. ಏಕೆಂದರೆ ಕರ್ನಾಟಕವೆಂಬುದು ಹಿಂದಿನ ಕಾಲದಲ್ಲಿ ದಕ್ಷಿಣಾಪಥಪೂರ್ಣವಾಗಿಯೂ, ಆರ್ಯಾವರ್ತದ ಹಲವುಭಾಗವೂ ಸೇರಿದ್ದ ಮಹಾಸಂಸ್ಥಾನವಾಗಿತ್ತೆಂಬುದು ಚರಿತ್ರೆಗಳಿಂದ ತಿಳಿದುಬರುತ್ತದೆ. ಸಂಗೀತದ ಲಕ್ಷ ಲಕ್ಷ ಪಂಡಿತರೆಲ್ಲರೂ ಕರ್ನಾಟಕದವರು. ಇವರಿಂದ ಪ್ರಚಾರವಾದ ಶಾಸ್ತ್ರಭಾಗವನ್ನು ಹಾಗೂ ಕೃತಿಭಾಗವನ್ನು ಬೆಳೆಸಲು

ಆಶ್ರಯವಿತ್ತವರು ಬಹುತೇಕ ಕರ್ನಾಟಕದವರೇ ಆಗಿದ್ದಾರೆ. ಕ್ರಿ.ಶ. ೧೩ನೇ ಶತಮಾನದಲ್ಲಿ *ಗೋಪಾಲನಾಯಕನೆಂಬ ಕರ್ನಾಟಕ ಪಂಡಿತನಿಂದ ಹಿಂದುಸ್ಥಾನೀ ಸಂಗೀತವು ಉದಯವಾಯಿತು ಎನ್ನಲಾಗಿದೆ.

ವಿಶಿಷ್ಟವಾದ ಲಕ್ಷಣಗಳುಳ್ಳ , ಹಾಗೂ ಭಾರತದಲ್ಲಿ ಪ್ರಚಾರದಲ್ಲಿರುವ ಸಂಗೀತವನ್ನು ಭಾರತೀಯ ಸಂಗೀತವೆನ್ನುವರು. ಈ ಪದ್ಧತಿಯ ಮೂಲ ತತ್ವಗಳು ಒಂದೇ ಆದರೂ ಸಂಪ್ರದಾಯ ಬೇಧದಿಂದ ನಮ್ಮ ರಾಷ್ಟ್ರದಲ್ಲಿ ಶಾಸ್ತ್ರೀಯ ಸಂಗೀತ ಎರಡು ಪದ್ಧತಿಗಳಾಗಿ ಬೆಳೆದುಬಂದಿದೆ.

೧) ಹಿಂದುಸ್ಥಾನಿ ಸಂಗೀತ

೨) ಕರ್ನಾಟಕ ಸಂಗೀತ. ಉತ್ತರಾಧೀ ಮತ್ತೊಂದು ದಕ್ಷಿಣಾದಿ ಎಂದು.

ಇವೆರಡೂ ಸಂಗೀತ ಪದ್ಧತಿಗಳಿಗೆ ಆಧಾರವಾಗಿ ಉಪಯೋಗಿಸುವ ಪ್ರಾಚೀನ ಗ್ರಂಥಗಳು ಕೆಲವಿವೆ. * ಭರತನ **ನಾಟ್ಯಶಾಸ್ತ್ರ** , ಮತಂಗನ **ಬ್ರಹದ್ದೇಶಿ** , ನಾರದನ **ನಾರದೀಯ ಶಿಕ್ಷಾ** ಮುಂತಾದವುಗಳು ಪ್ರಾಚೀನವಾದವುಗಳು. ಅನಂತರ ೧೩ನೇ ಶತಮಾನದಲ್ಲಿ ಸಾರಂಗದೇವನಿಂದ ರಚಿತವಾದ **ಸಂಗೀತರತ್ನಾಕರ** ಸಂಗೀತಕ್ಕೆ ಹೆಚ್ಚಿನಬೆಳಕನ್ನು ನೀಡಿತು. ಬೇರೆ ಬೇರೆ ಪ್ರಚಾರಗಳಿಗೆ ಅಷ್ಟಾಗಿ ಮಣಿಯದೇ ಭಾರತೀಯ ಸಂಗೀತವನ್ನು ಹೆಚ್ಚು ಶುದ್ಧವಾಗಿ ಉಳಿಸಿಕೊಂಡು ಬಂದಿರುವ ಪದ್ಧತಿ **ಕರ್ನಾಟಕ ಸಂಗೀತ**. ಈ ಪರಂಪರೆಯಲ್ಲೇ ನಡೆಯುತ್ತಿದ್ದ ಉತ್ತರ ಭಾರತದ ಸಂಗೀತದಲ್ಲಿ ವ್ಯತ್ಯಾಸಗಳುಂಟಾದುದು ಮಹಮ್ಮದೀಯರ ದಾಳಿಗೆ ಉತ್ತರ ಭಾರತ ಒಳಗಾದ ಮೇಲೆ ಮತ್ತು ಪ್ರಭಾವ ಬೆಳೆದ ಮೇಲೆಯೇ ಆಗಿದೆ, ಹೀಗೆ ಪ್ರಭಾವ ಬೀರಿದ ಮಹಮ್ಮದೀಯ ಸಂಗೀತಜ್ಞರಲ್ಲಿ ಅಮೀರ ಖುಸ್ರೊ ಪ್ರಧಾನವಾದವನು. ಹದಿಮೂರನೆಯ ಶತಮಾನದ ಉತ್ತರಾರ್ಧದಲ್ಲಿ ಬಾಳಿದ ಇವನು ಪರ್ಶಿಯ ಅಂದರೆ ಇರಾನಿನ ಸಂಗೀತದ ಅನೇಕ ಅಂಶಗಳನ್ನು ಭಾರತೀಯ ಸಂಗೀತದಲ್ಲಿ ಅಳವಡಿಸಲು ಯತ್ನಿಸಿದ. ಸ್ವತಃ ಕವಿಯಾಗಿದ್ದ ಖುಸ್ರೊ ಹಾಡುಗಳನ್ನೂ ರಚಿಸಿದ್ದ. ಅವುಗಳಲ್ಲಿ ಹಲವಾರು ಉಪಲಬ್ಧವಿದೆ. ಅವನು ಹಲವಾರು ರಾಗಗಳನ್ನೂ, ತಾಳಗಳನ್ನೂ ರೂಪಿಸಿದ ಎನ್ನುವುದು ಪರಂಪರಾಗತ ನಂಬಿಕೆ.

ಮೊಗಲರ ಆಳ್ವಿಕೆಯ ಆರಂಭದ ಕಾಲದಲ್ಲಿ ಉತ್ತರಭಾರತದ ಅರಸರೂ, ನವಾಬರೂ ಸಂಗೀತಕ್ಕೆ ಒಳ್ಳೆಯ ಪ್ರೋತ್ಸಾಹಕೊಟ್ಟರು. ಅನಂತರ ಅಕ್ಬರನ ಕಾಲದಲ್ಲಿ ಮೊಗಲಸಾಮ್ರಾಜ್ಯ ಸ್ಥಿರಪಟ್ಟಮೇಲೆ ಅವನಿಂದಲೂ

ಅಡಿ ಟಿಪ್ಪಣಿ: * ಜ್ಞಾನ ಗಂಗೋತ್ರಿ ಅಧ್ಯಾಯ ೫ ಕಲೆ, ಸಾಹಿತ್ಯ, ಸಂಗೀತ ಅಧ್ಯಾಯದಿಂದ ....

ಸಂಗೀತಕ್ಕೆ ತುಂಬಾ ಪ್ರೋತ್ಸಾಹ ಮನ್ನಣೆಗಳು ದೊರೆತವು. ಹಿಂದೂಸ್ತಾನಿ ಸಂಗೀತದ ದಿವ್ಯಜ್ಯೋತಿ ತಾನಸೇನ್ ಇದ್ದುದು ಅಕ್ಬರನ ಆಸ್ಥಾನದಲ್ಲೇ. ಈ ಕಾಲದ ಅನೇಕಮಂದಿ ಸಂಗೀತಗಾರರು ಉತ್ತರಾದೀ ಸಂಗೀತದ ಉನ್ನತಿಗೆ ಕಾರಣರಾದರು. ತಾನಸೇನನ ಗುರು ಸ್ವಾಮೀ ಹರಿದಾಸ, ಶಾಸ್ತ್ರ ಗ್ರಂಥ ಬರೆದ ಪುಂಡಲೀಕ ವಿಠಲ ಉತ್ತಮ ಸಂಗೀತಗಾರರಾಗಿದ್ದರು. ಬ್ರಿಜ್‌ಚಂದ್ , ಸಮ್ಮೋಹನಸಿಂಹ, ವೀಣಾಕಾರ , ಶ್ರೀಚಂದ ಮುಂತಾದ ಪ್ರಮುಖರು ಈ ಸಂಗೀತದ ಉನ್ನತಿಗೆ ಕಾರಣರಾದರು.

ದೇವರನ್ನು ನಾದಬ್ರಹ್ಮ ಎಂದು ಕರೆದಿರುವ ದೇಶ ಭಾರತ. ಇಲ್ಲಿ ಸಂಗೀತಕ್ಕೆ ವೇದ ಕಾಲದಿಂದಲೂ ಹಿರಿಯ ಸ್ಥಾನವಿದೆ. ಭಾರತೀಯ ಸಂಗೀತ ಶಾಸ್ತ್ರವನ್ನು ಗಾಂಧರ್ವ ಎನ್ನುತ್ತಿದ್ದರು. ಗಾಂಧರ್ವಕ್ಕೆ ಸಾಮಗಾನವೇ ಮೂಲ ಎನ್ನುವುದು ಸಾಮಾನ್ಯ ತಿಳುವಳಿಕೆ. ಸಾಮದಲ್ಲಿ ಹಾಡುವುದು ವೇದಮಂತ್ರಗಳು, ಇತರ ಸ್ತುತಿ ಗೀತೆಗಳು ಗಾಂಧರ್ವದ ಗೇಯವಸ್ತುಗಳು. ಸಾಮಗಾನದ ತಳಹದಿಯ ಮೇಲೆಯೇ ಗಾಂಧರ್ವತತ್ವ ರೂಪಿತವಾಯಿತು. ಭರತ ಮುನಿಯೇ ಗಾಂಧರ್ವ ತತ್ವದ ಆದ್ಯ ಪ್ರವರ್ತಕ.

*೧ ಶತಮಾನಗಳುದ್ದಕ್ಕೂ ಪರಕೀಯರ ದಾಳಿಯಿಂದ ಜರ್ಜರಿತವಾದ ದೇಶದಲ್ಲಿ ಸಂಗೀತ ಏಕಮುಖವಾಗಿ ವಿಕಾಸಹೊಂದಲಿಲ್ಲ. ಭಾರತೀಯ ಸಂಗೀತ ಅವನತಿಯ ದಾರಿ ಹಿಡಿದಿದ್ದ ಹದಿಮೂರನೇ ಶತಮಾನದಲ್ಲಿ ಸಾರಂಗದೇವ ಸಂಗೀತರತ್ನಾಕರವನ್ನು ರಚಿಸಿದನು.

ಮುಂದೆ ಭಾರತೀಯ ಸಂಗೀತ ಎರಡು ಸ್ಪಷ್ಟಕವಲಾಗಿ ಬೆಳೆಯಿತು. ಹಿಂದುಸ್ತಾನೀ ಹಾಗೂ ಕರ್ನಾಟಕ ಸಂಗೀತ ಎಂದಾಯಿತು. ಸ್ವಾಮೀ ಹರಿದಾಸ ಹಾಗೂ ತಾನಸೇನರಂತಹ ಅಪ್ಪಟಗಾಯಕರು ಹಿಂದುಸ್ತಾನಿ ಸಂಗೀತದ ಧ್ವಜವಾಹಕರಾದರು. ಮೊಗಲರ ಆಳ್ವಿಕೆಯಲ್ಲಿ ಹಿಂದುಸ್ತಾನಿ ಸಂಗೀತಕ್ಕೆ ರಾಜಾಶ್ರಯ ದೊರೆಯಿತು. ಉತ್ತರದಲ್ಲಿ ಹಿಂದೂಸ್ತಾನಿ ಸಂಗೀತ , ದಕ್ಷಿಣದಲ್ಲಿ ಕರ್ನಾಟಕ ಸಂಗೀತ ಬೆಳೆಯಲಾರಂಭಿಸಿತು. ತ್ಯಾಗರಾಜರು ಕರ್ನಾಟಕ ಸಂಗೀತದ ಶಕಪುರುಷರಾದರು. ಮುತ್ತುಸ್ವಾಮಿದೀಕ್ಷಿತ , ಶ್ಯಾಮಾಶಾಸ್ತ್ರಿ ಮೊದಲಾದ ಸಂಗೀತ ದಿಗ್ಗಜರು ಕರ್ನಾಟಕ ಸಂಗೀತಕ್ಕೆ ಮೇಲ್ಪಂಕ್ತಿ ಹಾಕಿದರು.

*೨ ಭಾರತೀಯ ಸಂಗೀತದ ವಿಕಾಸವನ್ನು ವಿವರಿಸುವ ಪುರಾತನ ಗ್ರಂಥಗಳ ಪ್ರಕಟಣೆಗೆ ಕಾರಣರಾದವರು ಆಚಾರ್ಯಭಾತಖಾಂಡೆ. ಕರ್ನಾಟಕ ಸಂಗೀತದ ಕುರಿತಾದ ಅಪೂರ್ವ ಗ್ರಂಥಗಳೂ ಅವರಿಂದ ಪ್ರಕಾಶಿತವಾದವು.

ಅಡಿಟಿಪ್ಪಣಿ *೧ ಭಾರತೀಯ ಸಂಗೀತದ ಚರಿತ್ರೆ ಡಾ: ಬಿ.ಡಿ. ಪಾಠಕ್ ಅವರು ಸಂಗೀತದ ಇತಿಹಾಸವನ್ನು ಚರ್ಚಿಸುತ್ತಾ........
*೨ ಜ್ಞಾನ ಗಂಗೋತ್ರಿ ಅಧ್ಯಾಯ ೫ ಸಂಗೀತದ ಬಗ್ಗೆ ವಿವರಿಸುತ್ತ ....

ಹಿಂದುಸ್ತಾನಿ ಹಾಗೂ ಕರ್ನಾಟಕ ಎರಡೂ ಸಂಗೀತದಲ್ಲೂ ರೂಪ ಕವಚವಾದುದು ಗುರು ಶಿಷ್ಯ ಪರಂಪರೆ. ಗುರುವಿನ ಗುಲಾಮನಾಗಿದುಡಿಯುತ್ತ ಶಿಷ್ಯ ಕಲಾಸಾಧಕನಾಗುವ ಪದ್ಧತಿ ಅಮೋಘವಾದುದು. ಅಲ್ಲಾವುದ್ದೀನ್‌ಖಾನ್, ವಿಷ್ಣು ದಿಗಂಬರ ಫಲೂಸ್ಕರಂತಹ ಕಲಾತಪಸ್ವಿಗಳು ಮನೋರಂಜನೆಯ ಮನೆಯಲ್ಲಿ ಬಂದಿಯಾಗಿದ್ದ ಔತ್ತರೇಯ ಸಂಗೀತವನ್ನು ಪವಿತ್ರದ ಎತ್ತರಕ್ಕೆ ಒಯ್ದರು. ಈಗ ಪ್ರತಿವರ್ಷ ನಡೆಯುವ ತ್ಯಾಗರಾಜ ಆರಾಧನೆ, ತಾನಸೇನ ಆರಾಧನೆಗಳು ನಮ್ಮ ಆತ್ಮಾಭಿಮಾನಗಳನ್ನು ತಟ್ಟಿ ಎಚ್ಚರಿಸುತ್ತವೆ. ನಮ್ಮ ಸಂಗೀತದ ಹಿರಿಮೆಯನ್ನು ಲೋಕಕ್ಕೆ ಸಾರುತ್ತವೆ. ಶಾಸ್ತ್ರೀಯ ಪರಿಶುದ್ಧತೆ ಭಾರತೀಯ ಸಂಗೀತದ ಉಸಿರು. ಇಷ್ಟಾದರೂ ನಮ್ಮ ಸಂಗೀತಗಾರರು ಇತರರ ಸಂಗೀತವನ್ನು ತಿರಸ್ಕರಿಸುವದಿಲ್ಲ. ಈ ಪ್ರವೃತ್ತಿ ತೀರಾ ಆಧುನಿಕವೂ ಅಲ್ಲ. ಸ್ವಾತಂತ್ರ ಪೂರ್ವದಲ್ಲಿ ಸಂಗೀತಗಾರರಿಗೆ ರಾಜಾಶ್ರಯ ದೊರೆಯುತ್ತಿತ್ತು. ಉತ್ತಮ ಪ್ರತಿಭೆಗೆ ಸರಿಯಾದ ಮಾನ ಸನ್ಮಾನಗಳು ಯಥೋಚಿತವಾಗಿ ದೊರಕುತ್ತಿತ್ತು, ಆದರೆ ಇಂದು ಕಾಲ ಬದಲಾಗಿದೆ. ಸಂಗೀತಗಾರ ತನ್ನ ಉದರ ಪೋಷಣೆಯ ಬಗೆಗೂ ಲಕ್ಷ ವಹಿಸಲೇಬೇಕಾಗಿದೆ. ಗುರುಮುಖೇನ ಹತ್ತು-ಹನ್ನೆರಡು ವರ್ಷ ಕಲಿತ ನಂತರ ಶಾಲಾ ಕಾಲೇಜುಗಳಲ್ಲಿ ಅಥವಾ ಆಕಾಶವಾಣಿ, ದೂರದರ್ಶನದ ನಿಯಮಕ್ಕೆ ಹೊಂದಿಕೊಂಡು ತನ್ನ ಸಂಗೀತಸಾಧನೆ ಮಾಡಬೇಕಾಗಿದೆ. ಎಷ್ಟೋ ಪ್ರತಿಭೆಗಳಿಗೆ ಅವಕಾಶವಿಲ್ಲದೇ ಅವಕಾಶವಂಚಿತವಾಗುವುದನ್ನು ನೋಡಬಹುದು. ಇಂತಹ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರ ಕಂಡುಕೊಳ್ಳಲು ಕಲಾಕಾರರ, ಸಮಾಜದಲ್ಲಿನ ಬುದ್ಧಿಜೀವಿಗಳ ಸಮೀತಿ ನೇಮಿಸಿ ಕಲಾಕಾರರಿಗೆ ಹೆಚ್ಚಿನ ಉದ್ಯೋಗಾವಕಾಶವನ್ನು ಮಾಡಿಕೊಡಬೇಕಾದುದು ಇಂದಿನ ನಾಗರೀಕತೆಯ ಆಳ್ವಿಕೆಯ ಸರ್ಕಾರದ ಆದ್ಯಕರ್ತವ್ಯ. ಈ ದಿಶೆಯಲ್ಲಿ ಸರ್ಕಾರ, ಸಮಾಜ ಕಾರ್ಯ ಪ್ರವೃತ್ತವಾಗಬೇಕಾಗಿದೆ. ಅಂದರೆ ಮಾತ್ರ ನಮ್ಮ ಸಂಸ್ಕೃತಿ ,ಪರಂಪರೆ ಉಳಿದು ಬೆಳೆಯಲು ಸಾಧ್ಯ.

<u>ಧಾರ್ಮಿಕ ದೃಷ್ಟಿಕೋನ : -</u>

ಭಾರತೀಯ ಶಾಸ್ತ್ರಗಳಲ್ಲಿ ಸಂಗೀತವು ಹೆಚ್ಚಿನ ಜನಪ್ರಿಯತೆಯನ್ನು ಮಹತ್ವವನ್ನುಗಳಿಸಿದೆ. *ಹಿಂದೂಗಳ ಆರಾಧ್ಯ ದೇವತೆಗಳೆನಿಸಿದ ಪರಶಿವನ ಕೈಯಲ್ಲಿ ಡಮರುಗ, ಸರಸ್ವತಿಯ ಹಸ್ತದಲ್ಲಿ ವೀಣೆ, ಶ್ರೀ ಕೃಷ್ಣನ ಕೈಯ್ಯಲ್ಲಿ ಕೊಳಲು, ನಂದೀಶ್ವರನ ಸೊಂಟದಲ್ಲಿ ಮೃದಂಗ ಇರುವುದನ್ನು ಇಲ್ಲಿ ಗಮನಿಸಬಹುದು. ಶಿವತಾಂಡವ ನೃತ್ಯ

ಅಡಿ ಟಿಪ್ಪಣಿ: * ಸಂಗೀತದ ಉತ್ಪತ್ತಿಯ ಬಗೆಗಿನ ಧಾರ್ಮಿಕ ದಂತ ಕತೆಗಳನ್ನಾಧರಿಸಿ ....

ಇವುಗಳು ಸಂಗೀತದಂತೆಯೇ ನೃತ್ಯದ ಪ್ರಾಚೀನತೆಯನ್ನು ಕೈಯ್ಯೆತ್ತಿ ಸಾರಿ ಹೇಳುತ್ತವೆ. ಈ ನಿದರ್ಶನಗಳು ಸಂಗೀತದ ಮತ್ತು ನೃತ್ಯದ ಹಿರಿಮೆ ಹಾಗೂ ಗರಿಮೆಗಳಿಗೆ ನಿದರ್ಶನವಾಗಿದೆ. ಅಲ್ಲದೇ ಹಿಂದೂ ಸಂಸ್ಕೃತಿಯಲ್ಲಿ ಸಂಗೀತಕ್ಕಿರುವ ಸಬಂಧಕ್ಕೆ ಸಾಕ್ಷಿಯಾಗಿವೆ.

ಭಾರತೀಯ ಸಂಗೀತಕ್ಕೆ ಸಾಮವೇದವು ಮಾತೃಸ್ಥಾನವೆಂದು ತಜ್ಞರು ಹೇಳುತ್ತಾರೆ. ವೇದ ಮಂತ್ರಗಳಲ್ಲಿ ಕಂಗೊಳಿಸುವ ಉಧಾತ್ತ, ಅನುಧಾತ್ತ ಮತ್ತು ಸ್ವರಿತ ಇವು ಸಂಗೀತದ ತಾಯಿಬೇರಿನಂತಿವೆ. ಶಬ್ದವು ಬ್ರಹ್ಮರೂಪವಾದದ್ದು, ಅಕ್ಷರಗಳು ಪರಶಿವನ ಡಮರುಗಳಲ್ಲಿ ಹುಟ್ಟಿದವುಗಳೆಂದು ಆಚಾರ್ಯ ಪಾಣಿನಿ ಹೇಳುತ್ತಾರೆ.

ಸಂಗೀತವು ಹಾಡುವವರನ್ನು ಮತ್ತು ಕೇಳುವವರನ್ನು ಇಬ್ಬರನ್ನೂ ಸಂತೋಷಗೊಳಿಸುತ್ತದೆ. ಸಂಗೀತದ ಶ್ರವಣದಿಂದ ಮನಸ್ಸಿಗೆ ಶಾಂತಿಯೂ , ಆನಂದವೂ ಉಂಟಾಗುತ್ತದೆ. 'ಸಂಗೀತಮಪಿ ಸಾಹಿತ್ಯಾಃ ಸರಸ್ವತಾಃ ಸ್ತನದ್ವಯಂ' ಎಂಬ ಮಾತಿದೆ. ಇದರ ಅರ್ಥ ಸಂಗೀತ ಮತ್ತು ಸಾಹಿತ್ಯವು ವಿದ್ಯಾಭಿಮಾನದೇವತೆಯಾದ ಸರಸ್ವತಿಯ ಎರಡು ಸ್ತನಗಳಂತೆ ಎಂಬುದಾಗಿದೆ. ಇದರಿಂದ ಸಂಗೀತ ಶಾಸ್ತ್ರದ ಬ್ರಹತ್ತು ಹಾಗೂ ಮಹತ್ತುಗಳನ್ನು ನಾವು ಸುಲಭವಾಗಿ ತಿಳಿಯಬಹುದಾಗಿದೆ.

<u>ಆಧ್ಯಾತ್ಮ ಮತ್ತು ಸಂಗೀತ</u>

ಆತ್ಮನನ್ನು ಅಧಿಕರಿಸಿದುದು ಆಧ್ಯಾತ್ಮ. ಆಧ್ಯಾತ್ಮಕ್ಕೆ ಸಂಬಂಧವುಳ್ಳದ್ದು ಆಧ್ಯಾತ್ಮ ಗೀತ_ (ನಾದ)ಕ್ಕೆ ಸಂಬಂಧಿಸಿದುದು ಸಂಗೀತ. ಸಂಗೀತಕ್ಕೆ ಮೂಲವಾದ ನಾದ ಆತ್ಮದಿಂದ ಉದಯಿಸುತ್ತದೆ. ಆತ್ಮ ಜನ್ಯಆಕಾಶ. ಆ ಆಕಾಶನಿಷ್ಪನಾದ ಆಕಾಶಕ್ಕೆ ವಾಯುಸ್ಪಂದನವಾಗಿ ನಾದ ಅಭಿವ್ಯಕ್ತವಾಗುತ್ತದೆ. ಅದೇ ಆಹತನಾದವೆಂದೆನಿಸುತ್ತದೆ. ಆ ನಾದದಿಂದ ಶಬ್ದ, ಶಬ್ದಗಳಿಂದ ಸಂಗೀತ ಸಾಹಿತ್ಯಗಳು ಇವೆರಡೂ ಪರಮಾತ್ಮನಿಗೆ ಪ್ರಿಯವಾದವುಗಳು. ಹಿಂದಿನದು ಹೆಚ್ಚಾಗಿ ಆಧ್ಯಾತ್ಮಸಂಗೀತ, ಇಂದಿನದು ಹೆಚ್ಚಾಗಿ ಲೌಕಿಕ ಸಂಗೀತ. ಹಿಂದಿನ ಗೀತಗಳಲ್ಲಿ ಆಧ್ಯಾತ್ಮ ತುಂಬಿ ತುಳುಕುತ್ತಿತ್ತು. ಗೀತ ಸಂಗೀತ ವಿಶೇಷಣದಿಂದಾಗಿ ಸಂಗೀತವಾಗಿ ಆಧ್ಯಾತ್ಮದ ಒಂದಂಗವಾಗಿ ಬೆಳಗಿತು. ಸ್ಫೂರ್ತಿ ಸಾಮಗ್ರಿಯಾಗಿ ರೂಪಿತವಾಯಿತು. ರಸದ ಬುಗ್ಗೆಯಾಗಿ ಹೊರಹೊಮ್ಮಿತು.

ಆಧ್ಯಾತ್ಮ ಗೀತಗಳಲ್ಲಿ ರಾಗ ಮಿಳಿತವಾಗಿ ಆಧ್ಯಾತ್ಮ ಸಂಗೀತ ಪ್ರವಹಿಸಿತು. ಅದರಿಂದಾಗಿ ಸಂಗೀತ ಪ್ರವಾಹಗಂಗೋತ್ರಿ ಆಧಾತ್ಮವೆನ್ನುವವರೆಗೂ ಸಂಬಂಧ ಸನ್ನಿಹಿತವಾಗಿ ಸಂವರ್ದಿಸಿತು. ಸಂಗೀತವು ಆಧ್ಯಾತ್ಮದ ಪ್ರಚಾರ ಸವಿಯನ್ನು ಹೆಚ್ಚಿಸಿತು. * ಆಧ್ಯಾತ್ಮನ ಮೊದಲ ಹೆಜ್ಜೆ ಭಜನೆ. ಭಜನಕ್ಕೆ ಮೂರು ಕರಣಗಳು (ಅ) ಕಾಯ (ಆ) ವಾಕ್ (ಇ) ಮನ. ಕಾಯ ಸೇವೆ ಹೊರಗಿನದು; ಮನದ (ಧ್ಯಾನದ) ಸೇವೆ ಒಳಗಿನದು. ವಾಕ್‌ಸೇವೆ ಉಭಯಾತ್ಮಕವಾದುದು ಅಲ್ಲದೇ ಸಾಹಿತ್ಯ ಸಂಗೀತಭಾವದಿಂದಲೂ ಉಭಯಾತ್ಮಕವಾಗಿದೆ.

ಷಡ್ಜಾದಿ ನಿಷಾದಾಂತ ಸಪ್ತಸ್ವರಗಳಿಗೆ ಆಧಾರವಾದುದು ಓಂಕಾರ. ಇದರಿಂದಾಗಿ ಓಂಕಾರ ಸಂಗೀತಕ್ಕೂ , ಆಧ್ಯಾತ್ಮಕ್ಕೂ ಮೂಲಾಧಾರವಾಗಿದೆಯೆಂದು ಅರಿಕೆಯಾಗುತ್ತದೆ. ಓಂಕಾರ ಗಾನಕ್ಕೆ ಉದ್ಗೀತ ಎಂದು ಹೆಸರು. ಉದ್ಗೀತ ಮತ್ತು ಸಂಗೀತ ಎರಡೂ ಸಂವಾದಿ ಪದಗಳು. ಏಕಾರ್ಥನಿಷ್ಟಗಳು, ಉದ್ಗೀತೋಪಾಸನೆ ಆಧ್ಯಾತ್ಮೋಪಾಸನೆಯೆಂದು ಶ್ರುತಿಸಿದ್ಧವಾಗಿದೆ. ರಸಗಳಲ್ಲಿ ಸಂಗೀತರಸ, ಸುಖಗಳಲ್ಲಿ ಆಧ್ಯಾತ್ಮಸುಖ ಮಿಗಿಲಾದವುಗಳು. ಉತ್ತರ ಕನ್ನಡ ಜಿಲ್ಲೆಯಲ್ಲಿ ಶಾಸ್ತ್ರೀಯ ಸಂಗೀತಕ್ಕೂ ಮೊದಲು ಭಜನೆ ಸಂಗೀತ ಪ್ರಚಾರದಲ್ಲಿದ್ದು ಇದನ್ನು ಹೆಚ್ಚಾಗಿ ಆಧ್ಯಾತ್ಮಿಕ ಕಾರ್ಯಕ್ರಮದಲ್ಲಿ ಮಾಡಲಾಗುತ್ತಿತ್ತು. ಇಂದಿಗೂ ಸಹ ಎಲ್ಲರೂ ಸೇರಿ ಸಾಮೂಹಿಕವಾಗಿ ಈ ಭಜನೆ ಕಾರ್ಯಕ್ರಮವನ್ನು ಭಕ್ತಿ ನಿಷ್ಠೆ ಶ್ರದ್ಧೆಗಳಿಂದ ಪಾರಂಪರಿಕವಾಗಿ ಮಾಡಿಕೊಂಡು ಬರಲಾಗುತ್ತಿದೆ. ಮೃದಂಗ, ತಾಳ, ಡೋಲಕ, ಏಕನಾದ್, ಮುಂತಾದವುಗಳನ್ನು ಭಾರಿಸುತ್ತ ದೇವೋಪಾಸನೆಯನ್ನು ಮಾಡುತ್ತಿದ್ದರು. ಗಂಡಸರು ಸಾಮೂಹಿಕವಾಗಿ ಭಜನೆ ಮಾಡಿದರೆ, ಹೆಂಗಸರು ದೇವದೇವತೆಗಳ ಪೂಜೆಯ ಸಂದರ್ಭದಲ್ಲಿ ಸುಶ್ರಾವ್ಯವಾಗಿ ಹಾಡುಗಳನ್ನು ದೇವರ ಸ್ತುತಿಗಳಿರುವ ಗುಣಗಾನವನ್ನು ಮಾಡುವ ಭಜನೆಗಳನ್ನು ಪರಂಪರಾಗತವಾಗಿ ಹಾಡುತ್ತ ಬಂದಿದ್ದಾರೆ. ಹಳ್ಳಿಗಳಲ್ಲಿ ಇಂತಹ ಪದ್ಧತಿ ಇಂದಿಗೂ ಸಹ ಮುಂದುವರಿದುಕೊಂಡು ಬಂದಿದ್ದು ಒಳ್ಳೆಯ ಬೆಳವಣಿಗೆಗೆ ಪೂರಕವಾಗಿದೆ.

ಅಡಿ ಟಿಪ್ಪಣಿ: * ಸೂರ್ಯ ಸಿಂಹಾಸನಾಧೀಶ್ವರ – ಶ್ರೀ ಜ. ಚ.ನಿ. ಅವರ ಲೇಖನವನ್ನಾಧರಿಸಿ, ಸಂಗೀತ ರತ್ನ ಡಾಃ ಮಲ್ಲಿಕಾರ್ಜುನ ಮನ್ಸೂರ ಅಭಿನಂದನಾ ಗ್ರಂಥದಲ್ಲಿ , ಪುಟ ೨೨೯

ಅಧ್ಯಾಯ ೨

ಪರಂಪರೆ, ಉತ್ತರಕನ್ನಡ ಜಿಲ್ಲೆಯ ಸಾಮಾಜಿಕ ಪರಿಸರ ಹಾಗೂ ಕಲೆ

ಪರಂಪರೆ

ಪೂರ್ವಿಕರಿಂದ ಕಾಲಾನುಗತವಾಗಿ ಬಂದಿರುವ ಅಭಿಪ್ರಾಯ , ನಂಬಿಕೆ, ಆಚಾರ ರೂಢಪದ್ಧತಿ ಎನ್ನುವ ಅರ್ಥಗಳನ್ನು ಪರಂಪರೆ ಪದ ಒಳಗೊಳ್ಳುತ್ತದೆ. ಲಿಖಿತ ರೂಪದಲ್ಲಿಲ್ಲದ , ಆದರೆ ಕಟ್ಟಳೆಯ ಹಿರಿತನಗಳಿಸಿರುವ ತತ್ವಬೋಧೆ , ಉಪದೇಶ ಪರಂಪರಾಗತ ಬೋಧೆ ಎಂದು ಅರ್ಥವಾಗುತ್ತದೆ. ಮಾನವ ಜೀವನದಲ್ಲಿ ಪರಂಪರೆ ಬಹಳ ಹಿಂದಿನಿಂದಲೂ ಹಾಸುಹೊಕ್ಕಾಗಿ ಬೆರೆತುಕೊಂಡು ಬಂದಿದೆ. ಐತಿಹಾಸಿಕ ಪರಂಪರೆ ಭದ್ರವಾದ ಬುನಾದಿಯ ಮೇಲೆ ನಿಂತಿದೆ. ಮನುಷ್ಯನ ಬೆಳವಣಿಗೆಯ ಕಥೆಯನ್ನು ನಿರೂಪಿಸುವಲ್ಲಿ ಪರಂಪರೆಗೆ ಮಹತ್ವದ ಸ್ಥಾನವಿದೆ. ಅತ್ಯುತ್ತಮ ಜೀವಂತ ಪರಂಪರೆಯಲ್ಲೂ ಒಳ್ಳೆಯದರ ಹಾಗೂ ಕೆಟ್ಟದರ ಮಿಶ್ರಣವಿರುವುದು ಕಂಡುಬರುತ್ತದೆ. ಸಮಾಜದ ಮೇಲೆ ಪರಂಪರೆಯ ಪ್ರಭಾವ ಬಲವಾಗಿ ಇರುತ್ತದೆಂಬುದು ನಿಜ. ಆದರೆ ಅದು ಮೀರಲಾಗದ, ಮೀರಬಾರದ ಕಟ್ಟಲ್ಲ. ಅದನ್ನು ವಿಮರ್ಶೆಗೆ ಒಳಗುಮಾಡಿ ಬದಲಾಯಿಸುವದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಹೀಗೆ ಕಾಲ ಕಾಲಕ್ಕೆ ಬದಲಾಗುವಂತವನ್ನು ಸಂಪ್ರದಾಯವೆಂದೂ ಈ ಎಲ್ಲ ಬದಲಾವಣೆಗಳ ಹಿಂದಿರುವ ಸನಾತನ ಸತ್ಯವನ್ನು ಪರಂಪರೆ ಎಂದು ಕರೆಯಬಹುದು.

ಇತಿಹಾಸಪೂರ್ವ ನಾಗರೀಕತೆಯಲ್ಲಿ ಪರಂಪರೆ ಎನ್ನುವುದು ಬಲು ಶಕ್ತಿಯುತವಾದ ಅಂಶವಾಗಿತ್ತು. ಶೀಘ್ರವಾಗಿ ಬದಲಾವಣೆ ಹೊಂದುತ್ತಿರುವ ಇಂದಿನ ಆಧುನಿಕ ಸಮಾಜದಲ್ಲಿ ಕೂಡ ಮಾನವನ ಧಾರ್ಮಿಕ, ನೈತಿಕ, ಸಾಮಾಜಿಕ ನಡವಳಿಕೆಗಳ ಮೇಲೆ ಪರಂಪರೆ ತನ್ನ ಪ್ರಭಾವವನ್ನು ಇನ್ನೂಸಹ ಸ್ವಲ್ಪಮಟ್ಟಿಗೆ ಉಳಿಸಿಕೊಂಡಿದೆ. ಸಂಗೀತ ಸಾಹಿತ್ಯ ಹಾಗೂ ಕಲೆಗಳಲ್ಲಿ ಪರಂಪರೆಯ ಪಾತ್ರ ಮಹತ್ವವಾದುದು. ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ರಾಷ್ಟ್ರ ಪ್ರದೇಶಗಳಿಗೆ ತಮ್ಮದೇ ಆದ ಪರಂಪರೆ ಇದೆ.

ರಾಮಾಯಣ ಮಹಾಭಾರತಗಳಲ್ಲಿ ಸೂಚಿತವಾಗಿರುವ ಪರಂಪರೆ ಸತ್ಯ , ಧರ್ಮ ವೈರಾಗ್ಯ, ತ್ಯಾಗ, ಶೌರ್ಯ ಮುಂತಾದ ಶ್ರೇಷ್ಠ ಮೌಲ್ಯಗಳು ಭಾರತೀಯ ಜನಜೀವನದಲ್ಲಿ ಬೇರೂರಿದೆ.

ಟಿಪ್ಪಣಿ: ಪರಂಪರಯ ಬಗೆಗಿನ ಪ್ರೌಢ ಲೇಖನದ ಅಭಿಪ್ರಾಯವನ್ನಾಧರಿಸಿ ....

ಪರಂಪರೆಯನ್ನು ಧಾರ್ಮಿಕ ಮತ್ತು ಸಾಮಾಜಿಕ ಎಂದು ವಿಭಾಗಿಸಿದರೂ ಸಹ ಇವೆರಡೂ ಪರಸ್ಪರ ಪೂರಕವಾಗಿವೆ. ಒಂದು ಇನ್ನೊಂದರ ಮೇಲೆ ಪರಿಣಾಮ ಬೀರುತ್ತವೆ. ಉದಾಃ ಕರ್ನಾಟಕದಲ್ಲಿ ಹುಟ್ಟಿ ಬೆಳೆದ ಶರಣಪರಂಪರೆ, ದಾಸಪರಂಪರೆ. ಇದು ಧರ್ಮ,ತತ್ವ, ಸಾಮಾಜಿಕ ಜೀವನದ ಮೇಲೆ ಪರಿಣಾಮವನ್ನುಂಟುಮಾಡುವುದನ್ನು ಕಾಣಬಹುದಾಗಿದೆ. ಇನ್ನು ಜನಪದಸಂಸ್ಕೃತಿಯ ಪರಂಪರೆ ಗಮನಾರ್ಹವಾದ ಅಂಶ. ಅದರ ಪರಂಪರೆ, ಜಾನಪದ ಕಥೆ ಸಂಗೀತಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಪರಂಪರಾಗತವಾಗಿ ಬಂದವುಗಳು. ಕರ್ನಾಟಕದ ಯಕ್ಷಗಾನ ಕಲೆ ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಜನಪದ ನೃತ್ಯಗಳು, ಬಯಲಾಟ ಗುಡಿ ಕೈಗಾರಿಕೆ, ಕುಶಲಕಲೆ ಇವು ಪರಂಪರೆಯಾಗಿ ನಡೆದುಬಂದಿವೆ. ಭಾರತ ಮಾತ್ರವಲ್ಲದೆ ಪ್ರಪಂಚದ ಎಲ್ಲಾ ರಾಷ್ಟ್ರ ಜನಾಂಗಗಳಲ್ಲೂ , ಸಂಗೀತ , ಶಿಲ್ಪ, ವಾಸ್ತುಶಿಲ್ಪ ಮುಂತಾದವುಗಳು ಪರಂಪರಾಗತವಾಗಿ ನಡೆದುಬಂದಿರುವುದನ್ನು ಕಾಣಬಹುದಾಗಿದೆ.

ಯಾವುದೇ ಪರಂಪರೆ ಪದ್ಧತಿಗೆ ಧಕ್ಕೆಯುಂಟಾಗುವುದು ದೀರ್ಘಕಾಲದ ಅನುಸರಣೆಯ ಫಲವಾಗಿ, ತನ್ನ ಸತ್ವವನ್ನು ಕಳೆದುಕೊಂಡು ಅದು ಶುಷ್ಕವಾದಾಗ, ಅರ್ಥಹೀನ ಆಚರಣೆಯಾದಾಗ, ಸಾಮಾಜಿಕ ಕ್ರಾಂತಿ ,ಮತ್ತಿತರ ಅಲ್ಲೋಲ ಕಲ್ಲೋಲಗಳಾದಾಗ, ಅಂಥ ಸಂದರ್ಭದಲ್ಲಿ ಹೊಸ ವಿಚಾರಸರಣಿ ಹುಟ್ಟಿಕೊಳ್ಳುತ್ತದೆ. ಈ ವಿಚಾರ ಸರಣಿಗೆ ಪುಷ್ಠಿ , ಪ್ರಾಬಲ್ಯದೊರೆತಾಗ, ಹಿಂದಿನ ಸಂಪ್ರದಾಯಗಳು ಬದಲಾಗಿ ಹೊಸ ಸಂಪ್ರದಾಯ, ಪರಂಪರೆ ಆರಂಭವಾಗುತ್ತದೆ. ಇದು ಪೂರ್ಣವಾಗಿ ಹೊಸದೇಆಗಬೇಕು. ಹಳೆಯದನ್ನೆಲ್ಲ ನಿರ್ಮೂಲನ ಮಾಡಬೇಕೆಂದಲ್ಲ. 'ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು' ಎಂಬಂತೆ ಹಳೆಯ ಪರಂಪರೆಯ ಉತ್ತಮಾಂಶಗಳನ್ನು ಅಳವಡಿಸಿಕೊಂಡು ಹೊಸ ಅಂಶಗಳನ್ನೂ ಸೇರಿಸಿಕೊಂಡು ಅದನ್ನು ಮುಂದುವರಿಸಬೇಕಾಗುತ್ತದೆ. ಈ ದೃಷ್ಟಿಕೋನದಲ್ಲಿ ನೋಡಿದಾಗಲೂ ಪರಂಪರೆ ಪೂರ್ಣವಾಗಿ ನಾಶವಾಗುವುದಿಲ್ಲ. ಅದು ಕಾಲಕಾಲಕ್ಕೆ ಹೊಸ ಹೊಸ ರೂಪದಲ್ಲಿ ಬೆಳೆಯುತ್ತ ಹೋಗುತ್ತದೆ ಎನ್ನಬಹುದು. ಉ.ಕ. ಜಿಲ್ಲೆಯಲ್ಲಿ ಸಂಗೀತ ಹಳೆಯದನ್ನು ಇಟ್ಟುಕೊಂಡು ಕಾಲಕ್ಕನುಗುಣವಾಗಿ ಹೊಸತನ್ನು ಸೇರಿಸಿಕೊಳ್ಳುತ್ತ ಮುನ್ನಡೆದಿದೆ. ಶಾಸ್ತ್ರೀಯ ಗಾಯಕರೂ ಕೂಡ ಶ್ರೋತೃಗಳ ಅಪೇಕ್ಷೆಯ ಮೇರೆಗೆ ಭಕ್ತಿ ಸಂಗೀತ ಹಾಗೂ ಭಾವ ಸಂಗೀತವನ್ನೂ ಪ್ರಸ್ತುತಪಡಿಸುತ್ತಾರೆ. ಶಾಸ್ತ್ರೀಯ ಸಂಗೀತದ ಪರಂಪರೆಯಲ್ಲೂ ಕಾಲಕ್ಕನುಗುಣವಾಗಿ ಬದಲಾಗಿರುವುದನ್ನು ಗುರುತಿಸಬಹುದು.

ಉತ್ತರ ಕನ್ನಡ ಜಿಲ್ಲೆಯ ಸಾಮಾಜಿಕ ಪರಿಸರ ಹಾಗೂ ಕಲೆ

ಗಿರಿಕಂದರಗಳು ಜಲಪಾತಗಳು ಹಳ್ಳಕೊಳ್ಳಗಳೇ ಅಧಿಕವಾಗಿರುವ ಈ ಜಿಲ್ಲೆಯು ಇತ್ತೀಚೆಗೆ ರಸ್ತೆ ಸಾರಿಗೆ ಸಂಪರ್ಕಗಳನ್ನು ಹೊಂದುತ್ತಲಿದೆ. ಪ್ರವಾಸಿಗರನ್ನು ಆಕರ್ಷಿಸುವ ಅನೇಕ ತಾಣಗಳು ಇಲ್ಲಿವೆ. ನದಿಗಳಿಗೆ ಸೇತುವೆಗಳಾಗುತ್ತಲಿವೆ. ಆಧುನಿಕತೆಯ ಗಾಳಿ ಜನಸಾಮಾನ್ಯರಲ್ಲೂ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡುತ್ತಲಿದೆ. ಇತ್ತೀಚಿನ ದಿನಗಳಲ್ಲಿ ಹಳ್ಳಿಗಳಿಗೂ ಅಧುನಿಕತೆಯ ಸೋಂಕು ತಟ್ಟುತ್ತಲಿದ್ದು ಭತ್ತಕುಟ್ಟುವದು, ಹಿಟ್ಟು ಬೀಸುವದು, ಗಾಣ ಹೊಡೆಯುವದು ಮುಂತಾದ ಕಲೆಗಳು ಮಾಯವಾಗುತ್ತಲಿವೆ. ಕಬ್ಬಿನ ಗಾಣದ ಆಲಮನೆ ಮೊದಲು ಪ್ರತೀಯೊಬ್ಬರ ಮನೆಯಲ್ಲೂ ಸರ್ವೇಸಾಮಾನ್ಯವಾಗಿತ್ತು. ಆದರೆ ಇಂದಿನ ದಿನಗಳಲ್ಲಿ ಇವು ಮಾಯವಾಗುತ್ತಲಿವೆ. ಮದುವೆ ಮುಂಜಿಗಳಲ್ಲಿ ಹಿಂದೆಲ್ಲಾ ಹಾಡುಗಳೇ ತುಂಬಿರುತ್ತಿತ್ತು . ಆದರೆ ಇಂದಿನ ದಿನಗಳಲ್ಲಿ ಹಾಡಿನ ಜಾಗದಲ್ಲಿ ಕ್ಯಾಸಟ್‌ಗಳೇ ಆಕ್ರಮಿಸಿವೆ ಈ ಗುಡ್ಡಗಾಡುಗಳ ಮಧ್ಯದಲ್ಲಿ ಕಾಂಕ್ರೀಟ ಕಟ್ಟಡಗಳು ತಲೆ ಎತ್ತುತ್ತಲಿವೆ, ವ್ಯಾಪಾರೋದ್ಯಮ ಬೆಳೆದಿದೆ. ದಾಂಡೇಲಿಯ ಕಾಗದ ಕಾರಖಾನೆ, ಪ್ಲ್ಯಾವುಡ್ ಕಾರಖಾನೆ, ಲಿಂಗನಮಕ್ಕಿ ಜಲಾಶಯ, ಕಾಳೀ ಜಲವಿದ್ಯುತ್ ಯೋಜನೆ, ಕಡಲುಹಕ್ಕಿ ನೌಕಾನೆಲೆ, ಕೈಗಾ ಅಣುಸ್ಥಾವರ ಶರಾವತಿ ಟೇಲರೇಸ್ ಮುಂತಾದ ಬೃಹತಯೋಜನೆಗಳು ಇಲ್ಲಿಯಬುಡಕಟ್ಟು ಜನಾಂಗ ಮೀನುಗಾರರು ಹಾಗೂ ಹಳ್ಳಿಗರ ಜೀವನದಲ್ಲಿ ಬೀರುಗಾಳಿಯನ್ನೇ ಎಬ್ಬಿಸಿದೆ. ಯಾಂತ್ರೀಕೃತ ಮೀನುಗಾರಿಕೆಯಿಂದ ಬಡ ಮೀನುಗಾರರ ಬದುಕಿನಲ್ಲಿ ತೀವ್ರ ಬದಲಾವಣೆಯಾಗುತ್ತಲಿದೆ. ಅವರ ಕಲೆಗಳೂ ಕಣ್ಮರೆಯಾಗುತ್ತಲಿವೆ.

ಅರಣ್ಯ ಬೆಳೆಸುವ ನೆಪದಲ್ಲಿ ಹಳ್ಳಿಯ ಜನಸಾಮಾನ್ಯರಿಗೆ ಗುಡ್ಡಗಾಡುಗಳಲ್ಲಿ ಬದುಕುವ ಬುಡಕಟ್ಟುಗಳಿಗೆ ಅರಣ್ಯ ಪ್ರದೇಶದಲ್ಲಿ ಅವಕಾಶ ದೊರೆಯದೇ ಅವರು ಅರಣ್ಯಉತ್ಪನ್ನಗಳಿಂದ ವಂಚಿತರಾಗುತ್ತಿದ್ದಾರೆ. ಆದರೆ ದೊಡ್ಡ ಪ್ರಮಾಣದ ಅರಣ್ಯ ಗುತ್ತಿಗೆದಾರರು ಅರಣ್ಯಗಳನ್ನು ಗುತ್ತಿಗೆ ಪಡೆದು ಅರಣ್ಯ ಸಂಪತ್ತನ್ನು ಲೂಟಿ ಮಾಡಿ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಇವರು ದೊಡ್ಡ ಪ್ರಮಾಣದ ಅರಣ್ಯ ನಾಶಕ್ಕೂ ಕಾರಣರಾಗಿದ್ದಾರೆ. ಬೆಲೆಬಾಳುವ ಶ್ರೀಗಂಧ, ಬೀಟೆ, ಚಂದನ, ಬೆತ್ತ, ಬಿದುರುಗಳು ದುಡ್ಡಿದ್ದ ಅರಣ್ಯ ಗುತ್ತಿಗೆದಾರರಿಗೆ ಮಾರಲಾಗುತ್ತಿದೆ. ಅವುಗಳಿಗೆ ಸಂಭದಿಸಿದ ಕುಶಲಕೈಗಾರಿಕೆಗಳೂ ಸಹ ಗುತ್ತಿಗೆದಾರರ

ನಿಯಂತ್ರಣದಲ್ಲಿವೆ. ಇದರಿಂದಾಗಿ ಗುಡಿ ಕೈಗಾರಿಕೆ ಸತ್ವಗುಂದಿ ಈ ಕೈಗಾರಿಕೆಗಳನ್ನು ಅವಲಂಬಿಸಿದವರ ಬದುಕು ಕಳಾಹೀನವಾಗುತ್ತಲಿದೆ. ಈ ಜಿಲ್ಲೆಗೆ ಬರಲಿರುವ ಬೇಡ್ತಿ ಯೋಜನೆ ಒಮ್ಮೆ ಕಾರ್ಯಗತಗೊಂಡು ಬಹಿಷ್ಕಾರ ವಿರೋಧದಿಂದ ಸ್ಥಗಿತಗೊಂಡಿದೆ. ಉಕ್ಕುಸ್ಥಾವರ ಯೋಜನೆಯ ಸ್ಟಾರ ಹೊಟೇಲ್ ಮುಂತಾದ ಯೋಜನೆಗಳು ನಮ್ಮ ರಾಜಕೀಯ ತಲಬುದಾರರ ಹುಕ್ಕೆಯಿಂದ ಇಲ್ಲಿ ಬರಬಹುದಾದ ಹಲವಾರು ಯೋಜನೆಗಳಿಂದ ಇನ್ನೂ ಯಾವ ಯಾವ ಬದಲಾವಣೆಗಳು ಬರಲಿವೆಯೋ ಕಾದು ನೋಡಬೇಕಾಗಿದೆ. ಬೆಳವಣಿಗೆ ಆಗಬೇಕು ನಿಜ. ಆದರೆ ಪರಿಸರ ಪೂರಕ ವಾಯುಮಾಲೀನ್ಯವಾಗುವಂತಹ ಬೃಹತ ಯೋಜನೆಗಳು ಇವು ಜಿಲ್ಲೆಯನ್ನು ವ್ಯಾಪಿಸಿ ಇಲ್ಲಿನ ಶ್ರೀಸಾಮಾನ್ಯನ ಕನಸುಗಳನ್ನು ಜೀವನವನ್ನು ಅತಿಕ್ರಮಿಸಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಆರೋಗ್ಯವಂತನಾಗಿರಲು ಕನಿಷ್ಟವಾದ ವಾತಾವರಣವನ್ನಾದರೂ ಈ ಪರಿಸರ ಹಾಳು ಮಾಡುವ ಯೋಜನೆಗಳು ನೀಡುತ್ತಿವೆಯೇ? ವಿಚಾರಿಸಬೇಕಾಗಿದೆ. ಇಷ್ಟೆಲ್ಲಾ ವಿನಾಶವಿದೆಯೆಂಬುದು ಗೊತ್ತಿದ್ದರೂ ಇಂದು ಈ ಬೃಹತ ಯೋಜನೆಗಳ ಅನಿವಾರ್ಯತೆ ಅವಶ್ಯಕತೆಗಳು ಇವೆಯೇ ಎಂಬುದನ್ನು ತರ್ಕಿಸಲೇಬೇಕು. ಅಣುಸ್ಥಾವರದಂತಹ ಯೋಜನೆಗಳು ಸೀಬರ್ಡ್, ನೌಕಾನೆಲೆ, ಶರಾವತಿ ಟೇಲರೇಸ್ ಮುಂತಾದ ಬೃಹತ ಯೋಜನೆಗಳಿಂದ ಜಿಲ್ಲೆಗೆ ವೈರಿಗಳು ದಾಳಿ ಮಾಡುವ ಭಯವೂ ಇದ್ದೇ ಇದೆ. ಎಷ್ಟೇ ಕಷ್ಟ ಬಂದರೂ ಸಹ ಇಲ್ಲಿನ ಕಷ್ಟಗಳನ್ನು ಎದುರಿಸುವವರು ಇಲ್ಲಿನ ಶ್ರೀಸಾಮಾನ್ಯನು ಹಾಗೂ ಮಧ್ಯಮ ವರ್ಗದವರು ಮತ್ತು ಬಡವರು. ಜೀವನವೇ ದುಸ್ತರವಾದಾಗ ಕಲೆಯಂತಹ ಸೃಜನಶೀಲತೆಯನ್ನು ಬೆಳೆಸಿಕೊಂಡು ಹೋಗುವದು ಕಷ್ಟದ ಕೆಲಸವೇ ಆಗಿದೆ. ಬಡ ಅಶಕ್ತ ಕಲಾಕಾರರನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುವ ಕೆಲಸವನ್ನು ಸರ್ಕಾರ, ಕಲಾರಸಿಕರು ಮಾಡಬೇಕಾಗಿದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂಗೀತ, ನೃತ್ಯ ಅಕಾಡೆಮಿಗಳೂ ಇಂತಹ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕಾಗಿದೆ. ಇನ್ನೂ ಇಲ್ಲಿಗೆ ಆಗಮಿಸಿದ ಪಾಶ್ಚಾತ್ಯ ಶಿಕ್ಷಣ ಔದ್ಯೋಗಿಕರಣದಿಂದ ಅವತರಿಸಿದ ಆಧುನೀಕತೆಯಿಂದ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆ ಅನಿವಾರ್ಯವಾಗುತ್ತಲಿದೆ. ಪರಂಪರೆಯಿಂದ ಬಂದ ನಮ್ಮ ನಂಬಿಕೆಗಳು ಧಾರ್ಮಿಕ ಆಚರಣೆಗಳು ಇಂದು ಬದಲಾಗುತ್ತಿದೆ . ಹಳೆಯ ಜೀವನ ಮೌಲ್ಯಗಳು ತಲೆಕೆಳಗಾಗುತ್ತಿದೆ. ಜನಪದ ನಮ್ಮ ಬದುಕಿನಲ್ಲಿ ಗಾಢವಾಗಿ ಬೆರೆತಿದ್ದರೂ ಆಧುನೀಕತೆಯ ಗಾಳಿಯಿಂದ ನಮ್ಮ ಹಲವಾರು ಕಲೆಗಳು ಮಾರ್ಪಾಡು ಹೊಂದುತ್ತಿರುವದರ ಜೊತೆಗೆ ಅನೇಕ ಕಲೆಗಳು

ಮಾಯವಾಗುತ್ತಿರುವದು ಸುಳ್ಳಲ್ಲ. ಈ ಕಲೆಗಳನ್ನು ಪರಂಪರಾಗತವಾಗಿ ಬೆಳೆಯಲು ಅದನ್ನು ಉಳಿಸಲು ಪ್ರಜ್ಞಾವಂತ ನಾಗರಿಕರು ಸಹಕರಿಸುವದು ಅವಶ್ಯವಾಗಿದೆ.

ಈ ಜಿಲ್ಲೆಯ ಪ್ರಾಕೃತಿಕವಾಗಿ, ಕರಾವಳಿ, ಮಲೆನಾಡು ಹಾಗೂ ಬಯಲುಸೀಮೆ, ಹೀಗೆ ಈ ಮೂರನ್ನು ಒಳಗೊಂಡಿದೆ. ಇಲ್ಲಿನ ಹಸಿರು ಮುರಿಯುವ ಕಾಡು , ಬೋರಿಡುವ ಕಡಲು, ನದಿ , ಸಾಗರ,ಹೊಳೆ, ಹಳ್ಳಗಳು, ಇಲ್ಲಿ ಚದುರುತ್ತಿರುವ ವಿಭಿನ್ನ ಜಾತಿಜನಾಂಗಗಳು, ಹುಟ್ಟುಸಾವು ಮುಂತಾದ ಜೀವನಾವರ್ತನಗಳು ಇಲ್ಲಿಯ ಹಲವಾರು ಕಲೆಗಳ ಉಗಮಕ್ಕೆ ಪ್ರೇರಣೆಯನ್ನು ನೀಡಿದೆ.

ಮೂಲಭೂತವಾಗಿ ನಾವು ವಿಚಾರಿಸಿದಾಗ , ಒಂದು ನಾಡಿನ ಪರಿಸರ , ಋುತುಮಾನ , ಜನಾಂಗ ಮನೋದರ್ಮಗಳಿಗನುಗುಣವಾಗಿ ಕಲೆಗಳು ಪ್ರದೇಶ ಇಲ್ಲವೇ ಜನಾಂಗನಿಷ್ಟವಾಗಿ ಬೆಳೆಯುತ್ತವೆ ಎಂಬುದು ಅನುಭವ ವೇದ್ಯವಾಗಿದೆ. ಪ್ರಾದೆಶೀಕ ನೆಲೆಯಲ್ಲಿ ಕರ್ನಾಟಕದ ಜನಪದ ಕಲೆಗಳನ್ನು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ ಕರ್ನಾಟಕಗಳಾಗಿ ವಿಂಗಡಿಸಬಹುದು. ಉತ್ತರ ಕನ್ನಡ ಜಿಲ್ಲೆ ಕರಾವಳಿ ಕರ್ನಾಟಕದಲ್ಲಿದೆ.

ಇಲ್ಲಿಯ ಧಾರ್ಮಿಕ ಕಲೆಗಳು ಹಬ್ಬ ಹರಿದಿನಗಳ ಸಂದರ್ಬಗಳಲ್ಲಿ ಪ್ರದರ್ಶಿತವಾಗುತ್ತದೆ. ಗ್ರಾಮಕ್ಕೆ ಬಂದೊದಗಿದ ಕ್ಷಾಮ ರೋಗಗಳ ನಿವಾರಣೆಗಾಗಿ , ಸಾಂಕ್ರಾಮಿಕ ರೋಗಗಳ ನೀವಾರಣೆಗಾಗಿ ,ಐಶ್ವರ್ಯ, ಫಲಸಮೃದ್ಧಿಗಾಗಿ ಕಲೆಗಳನ್ನು ಪ್ರದರ್ಶಿಸಿ ದೇವತೆಗಳನ್ನು ಪುಷ್ಟಿಗೊಳಿಸುವ ಹೇತುವಿನಿಂದ ಪ್ರದರ್ಶಿತವಾಗುವ ಕಲೆಗಳು ಈ ಜಿಲ್ಲೆಯಲ್ಲಿ ಅಧಿಕವಾಗಿದೆ.

ಜನಪದ ಕಲೆಗಳ ಉಗಮ , ವಿಕಾಸದ ವಿಷಯದಲ್ಲಿ ಉತ್ತರ ಕನ್ನಡ ಜಿಲ್ಲೆಯ ಬಂಡಿಹಬ್ಬ , ಮಾರೀಜಾತ್ರೆ , ಹಗಣ ಮುಖವಾಡ ಕುಣಿತ, ಸುಗ್ಗಿ ಕುಣಿತ, ಯಕ್ಷಗಾನ ಬಯಲಾಟದಂತಹ ಕಲೆಗಳು ಹೆಚ್ಚಿನ ಬೆಳಕನ್ನು ನೀಡುತ್ತದೆ.

* ಯುರೋಪಿನ ಕೆಲ ಬುಡಕಟ್ಟಿನವರು ಬರಗಾಲ ಬಂದಾಗ ಮರದ ಮೇಲೆ ಕುಳಿತು ನೀರು ಸುರಿಸಿ ಮನೆಯನ್ನು ಹೊಳೆಯುವ ವಾದ್ಯಗಳನ್ನು ಬಾರಿಸಿ ಗುಡುಗು ಮಿಂಚನ್ನು ಅನುಸರಿಸಿತ್ತಾರೆ. ಇದೇ ಮಾದರಿಯಲ್ಲಿ ಈ ಜಿಲ್ಲೆಯ ಒಕ್ಕಲು ಮಕ್ಕಳು ನಾಡುಸುಬಿಕ್ಷವಾಗಲೆಂದು ಸುಗ್ಗಿಯ ಕಾಲಕ್ಕೆ ಕಾಡು ಮರಗಳನ್ನು ಹಾಗೂ ಹೂಗೊಂಚಲಗಳನ್ನು ಹೋಲುವ ತುರಾಯಿಗಳನ್ನು ಕಟ್ಟಿಕೊಂಡು ಗುಮಟೆ , ಮದ್ದಳೆಗಳ ಮೊಳಗು ಹಾಗೂ

ಅಡಿ ಟಿಪ್ಪಣಿ: * ಕವಳಪೇಳಿ ಲೇಖನ ಡಾ: ಎನ್. ಆರ್. ನಾಯ್ಕ

** ಫೈನ್ ಆರ್ಟ್ಸ್ ಇನ್ ಎನ್ಸಿಯಂಟ್ ಇಂಡಿಯಾ - ಅನಿಲ್ ಬರನ್ ಗಂಗೋಲಿ ಇವರ ಲೇಖನವನ್ನಾಧರಿಸಿ .....

ಬೆಂಡು ,ಬೇಗಡೆಗಳ ಥಳಕಿನಿಂದ , ಗುಡುಗು , ಮಿಂಚುಗಳನ್ನು ಅನುಕರಿಸುತ್ತ ನವಿಲು ಕುಂಚವನ್ನು ಹಿಡಿದು ಹೈಲ ಹಾಕಿ ನವಿಲಿನ ಕುಣಿತವನ್ನು ಅನುಕರಿಸಿ ಮಳೆ, ಬೆಳೆಯ ಸಮೃದ್ಧಿಯನ್ನು ಹಾರೈಸುವ ಸುಗ್ಗಿ ಕುಣಿತವನ್ನು ಕುಣಿಯುತ್ತಾರೆ. ಜಿಲ್ಲೆಯ ಮತ್ತೊಂದು ಪ್ರತಿಷ್ಠಿತ ಹಬ್ಬವಾದ ಬಂಡೀಹಬ್ಬದಲ್ಲಿ ವ್ಯವಸಾಯಕ್ಕೆ ಸಂಭಂದಿಸಿದ ಕೆಲವು ಆಚರಣೆಗಳನ್ನು ನಡೆಸುತ್ತಾರೆ. ಇಂತಹ ಧಾರ್ಮಿಕ ಆಚರಣೆಗಳ ವಾಸ್ತವ ಮತ್ತು ಅದರ ಅನುಕರಣೆಯ ಮೂಲಕ ಪುನರ್‌ಸೃಷ್ಟಿ , ತನ್ಮೂಲಕ ಅಗೋಚರ ಸೃಷ್ಟಿಯನ್ನು ಸಂತೃಪ್ತಿಗೊಳಿಸಿ, ಫಲೀಕರಣವನ್ನು ಸಾದಿಸುವ ಆದಿಮಾನವನ ವಿಶಿಷ್ಟ ನಂಬಿಕೆಗಳನ್ನು ಬಿಚ್ಚಿಡುತ್ತವೆ. ಪ್ರಕೃತಿಯನ್ನು ಆರಾದಿಸಿ ಅದರ ನಿಗೂಡ ಶಕ್ತಿಯನ್ನು ಮಾಂತ್ರಿಕ ಉಪಾಸನೆಯಿಂದ ಒಲಿಸಿಕೊಳ್ಳುವ, ನಿಯಂತ್ರಿಸುವ ಬಗೆಯಲ್ಲಿ ಇದೂ ಒಂದಾಗಿದೆ. ಪ್ರಕೃತಿಯೊಡನೆ ತಾದಾತ್ಮ್ಯವನ್ನು ತೋರಲು ಹೊಂದಿದ ನಿಷ್ಠೆ ಗಮನಾರ್ಹವಾಗಿದೆ. ನಿಸರ್ಗದ ಚಲನವಲನಗಳನ್ನು ಅನುಕರಿಸಿ ಅದರೊಡನೆ ಭಾವ ಸಮಾದಿಯನ್ನು ಹೊಂದಿ ಸಂತೃಪ್ತಿಯನ್ನು ಪಡೆಯಲು ಇವರು ಅನೇಕ ತರಹದ, ಮಾಯ, ಮಾಟ ತಂತ್ರಗಳನ್ನು ಅನುಸರಿಸಿದ್ದನ್ನು ಈ ಆಚರಣೆಯ ಹಿನ್ನೆಲೆಯಲ್ಲಿ ಗುರುತಿಸಬಹುದು.

ಭರತನ ನಾಟ್ಯಶಾಸ್ತ್ರದ ರಂಗಭೂಮಿಗೆ ಸಂಬಂದಿಸಿದ ಕಥಾ ನಿರೂಪಣೆಯಲ್ಲಿ ಬಯಲಾಟಗಳ ಸುಳಿವಿದ್ದು, ಅದು ನಮ್ಮಜಾನಪದ ರಂಗಪರಂಪರೆ, ನಾಟ್ಯಶಾಸ್ತ್ರಕ್ಕಿಂತ ಪೂರ್ವದಲ್ಲಿಯೇ ವಿಕಸನಗೊಂಡಿರಬಹುದಾದ ಸಾಧ್ಯತೆಯನ್ನು ಅನಾವರಣಗೊಳಿಸುತ್ತದೆ. ಕರ್ನಾಟಕದ ಗಂಡುಕಲೆಯಾದ ಕರಾವಳಿಯ ಯಕ್ಷಗಾನ ಕಲೆ ಮಾತ್ರ ಜನಪದ ಕಲೆಗಳಲ್ಲಿ ಕಿರೀಟಪ್ರಾಯವಾಗಿ ವಿಕಸನಗೊಂಡು ಅಂತರಾಷ್ಟ್ರೀಯ ಖ್ಯಾತಿಯನ್ನು ಗಳಿಸಿಕೊಂಡಿದ್ದು ಕನ್ನಡಿಗರ ಹೆಮ್ಮೆಯ ಸಂಗತಿಯಾಗಿದೆ.

ಸುಮಾರು ಎರಡೂವರೆಸಾವಿರ ವರ್ಷಗಳ ಹಿಂದಿನ ಸಿಂದೂತೀರದ ಹರಪ್ಪಾದಲ್ಲಿ ಲಭ್ಯವಾದ ನರ್ತಕಿಯದಿರಬಹುದೆಂದು ತರ್ಕಿಸಲಾದ ಪ್ರತಿಮೆಯ ಮುಂಗೈಬಳೆ, ತೋಳ್ಬಳೆ,ತುರುಬು, ಮುಂತಾದ ಪ್ರಸಾಧನಗಳು, ಉತ್ತರಕನ್ನಡ ಜಿಲ್ಲೆಯ ಹಾಲಕ್ಕಿ ಗ್ರಹಿಣಿಯ ಮುಂಗೈಬಳೆ ,ತೋಳ್ಬಳೆ,ತಾಳಿ,ತುರುಬುಗಳನ್ನು ಹೊಲುತ್ತಿರುವುದು ಗಮನಾರ್ಹವಾಗಿದೆ. ಸ್ಯಂದವಸಂಸ್ಕೃತಿಯ ಚಿತ್ರಲಿಪಿಯ ಆದಾರದ ಮೇಲೆ ಫಾದರ್ ಹೆರಾಸ್ ಎಂಬ ವಿದ್ವಾಂಸರು ಅಲ್ಲಿಯಸಂಸ್ಕೃತಿ ದ್ರಾವಿಡರ ಅದರಲ್ಲಿಯೂ ಕನ್ನಡಿಗರ ಸಂಸ್ಕೃತಿಯೆಂದು ಪ್ರತಿಪಾದಿಸಿದ್ದು ಇಲ್ಲಿ ನೆನೆಯಬಹುದಾಗಿದೆ. ನಾಟ್ಯ ಗ್ರಹದ ಸೃಷ್ಟಿಯಾದದ್ದು ಈ ದೇಶದಲ್ಲಿ ಎಂದು ನಾಟ್ಯಶಾಸ್ತ್ರದಲ್ಲಿ

ಪುರಾವೆಯಿದೆ. ಅಭಿಜಾತ ಕಲೆಗಳು ನಾಟ್ಯಗ್ರಹದಲ್ಲಿ ಸುಸಜ್ಜಿತವಾದ ವೇದಿಕೆಯಮೇಲೆ ಪ್ರದಶಿಂತವಾದರೆ, ಜನಪದ ಕಲೆಗಳು ಬಯಲಲ್ಲಿ ಆಡಲ್ಪಡುತ್ತವೆ.

*ಈ ಜಿಲ್ಲೆಯ ಪ್ರದರ್ಶನ ಕಲೆಗಳಲ್ಲಿ ಯಕ್ಷಗಾನ, ಸುಗ್ಗಿಯ ಕುಣಿತ ಹಾಗೂ ಡೊಳ್ಳಿನ ಕುಣಿತಗಳು ಅಂತರ್‌ರಾಷ್ಟ್ರಿಯ ಖ್ಯಾತಿಯನ್ನುಗಳಿಸಿ ಪೌರಜನಪದರಾದಿಯಾಗಿ ಲಕ್ಷಾಂತರ ಜನರಿಗೆ ಮನರಂಜನೆಯನ್ನೊದಗಿಸಿದೆ. ಜಿಲ್ಲೆಯ ಯಕ್ಷಗಾನ ಕಲಾವಿದರಲ್ಲಿ ಶ್ರೀ ಶಿವರಾಮ ಹೆಗಡೆ, ಶ್ರೀ ಶಂಬು ಹೆಗಡೆ, ಶ್ರೀ ಮಹಾಬಲ ಹೆಗಡೆಯವರು ರಾಷ್ಟ್ರಪ್ರಶಸ್ತಿ ವಿಜೇತರಾಗಿದ್ದಾರೆ. ಇನ್ನೂ ಅನೇಕ ಕಲಾವಿದರು ಉತ್ತಮ ಪ್ರದರ್ಶನವನ್ನು ನೀಡುತ್ತಿದ್ದಾರೆ. ಯಾವುದೊಹಂತದಲ್ಲಿ ಕಲಾವಿದರಿಗೆ ಜೀವನವನ್ನುನಡೆಸುವದು ದುರ್ಬಲವಾದಾಗ ತಮ್ಮ ಕಲೆಯನ್ನು ಉದರನಿಮಿತ್ತ ಜೀವನದ ವೃತ್ತಿಯನ್ನಾಗಿಸಿಕೊಂಡು ಕಲೆಗಳ ಪೋಷಣೆ ಮಾಡಿದ ಕಲಾವಿದರೂ ಇಲ್ಲಿದ್ದಾರೆ.

ಇವರಲ್ಲಿ ಹಕ್ಕಿನರಸಣ್ಣ, ಕರಡಿಕುಣಿಸುವವರು, ಯಲ್ಲಮ್ಮ, ಜೋಗತಿಯವರು, ಡೊಂಬರಾಟದವರು ಮುಂತಾದವರು ಪ್ರಮುಖರು. ಹಿಂದೆ ಸುಗ್ಗಿ ಹಬ್ಬ-ಹರಿದಿನ, ತೇರು, ಜಾತ್ರೆಯ ಸಂದರ್ಬಗಳಲ್ಲಿ ಈ ವೃತ್ತಿಕಲಾವಿದರು ಹಳ್ಳಿಗಳಿಗೆ ಬಂದು ತಮ್ಮ ಕಲಾಪ್ರದರ್ಶನ ಮಾಡಿ ಹಳ್ಳಿಗರನ್ನು ಮೆಚ್ಚಿಸಿ ಅವರಿಂದ ದವಸ ಧಾನ್ಯಗಳನ್ನು ಪಡೆಯುತ್ತಿದ್ದರು. ಜೀವನೊಪಾಯಕ್ಕೆ ಅದು ಅವರಿಗೆ ಅನಿವಾರ್ಯವಾಗಿತ್ತು. ಆದರೆ ಇಂದು ಇಂತಹ ಕಲಾವಿದರು ಕುಟುಂಬ ಬೇರೆ ಉದ್ಯೋಗದಲ್ಲಿ ನಿರತವಾದುದರಿಂದ ಇಂತಹ ಕಲೆಗಳು ಕಣ್ಮರೆಯಾಗುತ್ತಲಿವೆ. ಕಲಾವಿದರು ಬೇರೆ ವೃತ್ತಿಯನ್ನು ಆಶ್ರಯಿಸಿ ತಮ್ಮ ಬದುಕನ್ನು ಉನ್ನತನೆಲೆಯನ್ನು ಕಂಡುಕೊಂಡಸಂಗತಿ ಸಂತೋಷವಾದರೂ ಕಿನ್ನರಿಜೋಗಿಗಳಂಥವರ ಶಥಾಪರಂಪರೆ ಇಂದು ಮಾಯವಾಗುತ್ತಿರುವದು ಖೇದದ ಸಂಗತಿಯಾಗಿದೆ.

ಉತ್ತರ ಕನ್ನಡ ಜಿಲ್ಲೆ ವಿವಿಧ ಜಾತಿ , ಮತ ,ಪಂಥಗಳ ಅಡುಕಳವಾಗಿದೆ. ಇಲ್ಲಿಯ ಪ್ರತಿಯೊಂದು ಜಾತಿಯವರಿಗೂ ಅವರದೇ ಆದ ಸಾಮಾಜಿಕ ಉಪಭಾಷೆ, ಸಾಹಿತ್ಯ ಹಾಗೂ ಕಲೆಗಳಿವೆ. ಭಿನ್ನ ಸಾಂಸ್ಕೃತಿಕ ನೆಲೆಗಟ್ಟು ಇದೆ. ಹೀಗಾಗಿ ಇಲ್ಲಿನ ಜನಪದ ಸಾಹಿತ್ಯ ,ಕಲೆಗಳು ವೈವಿಧ್ಯ ವೃಶಿಷ್ಟತೆಯನ್ನೊಳಗೊಂಡಿದ್ದು, ತನ್ನ ಸಾಂಸ್ಕೃತಿಕ ಅಸಲುತನವನ್ನು ಜೊತೆಗೆ ಸಂಕೀರ್ಣ ಸ್ವರೂಪವನ್ನೂ ಕನ್ನಡನಾಡಿಗೇ ಮಾದರಿಯಾಗುವಂತೆ

ಅಡಿಟಿಪ್ಪಣಿ: * ಜಿಲ್ಲೆಯ ವಿವಿಧ ಕಲಾಕಾರರ ಸಂದರ್ಶನವನ್ನಾಧರಿಸಿ ....

ಉಳಿಸಿಕೊಂಡು ಬೆಳೆಸಿಕೊಂಡು ಬಂದಿದೆ. ಜನಪದ ಭಾಷೆ ನೆಲೆಯಲ್ಲಿ ಈ ಜಿಲ್ಲೆ ಹೊಂದಿದ ವೈವಿಧ್ಯವನ್ನು ಕನ್ನಡ ನಾಡಿನ ಯಾವ ಜಿಲ್ಲೆಯೂ ಹೊಂದಿಲ್ಲವೆಂದರೆ ಸತ್ಯವನ್ನೇ ಹೇಳಿದಂತಾಗುತ್ತದೆ. ಇಲ್ಲಿ ನಾಲ್ಕೈದು ಚದರುಮೈಲು ಕ್ಷೇತ್ರದಲ್ಲಿಯೇ ಹತ್ತಾರುಬಗೆಯ ಸಾಮಾಜಿಕಭಾಷೆಗಳಿದ್ದು .ಜನಪದ ವಿಜ್ಞಾನಿಗಳಂತೆ ಬಾಷಾ ವಿಜ್ಞಾನಿಗಳಿಗೂ ಬೇಕಷ್ಟು ಕನ್ನೆನೆಲ ಒದಗಿಸಿದೆ. ಆದರೆ ಆಯ್ಲಿಕಡೆಯ ನಾಗರಿಕತೆಯ ಆಕ್ರಮಣದಿಂದಾಗಿ ಹಿಂದಿನ ಸಾಂಸ್ಕತಿಕವಿವಿಕ್ತತೆ ಕ್ರಮೇಣಕರಗುತ್ತ ಒಂದುಬಗೆಯ ಸಮ್ಮಿಶ್ರ, ಸಂಕೀರ್ಣ ರೂಪುಗೊಳ್ಳುತ್ತಿರುವದು ಹೊರನೋಟಕ್ಕೆ ಗೋಚರಿಸುತ್ತಿದೆಯಾದರೂ, ಜಾನಪದಆಳಕ್ಕಿಳಿದು ತಳಮಟ್ಟಶೋದಿಸಿ ನೋಡಿದರೆ ಭಿನ್ನತೆ ಹೊಡೆದುತೋರುವಂತಿದೆ. ಈ ಸಂಕೀರ್ಣತೆ ,ಸಮ್ಮಿಶ್ರತೆ ಏನಿದ್ದರೂ ಅದು ಗೋಚರಿಸುವದು ಪೌರರಲ್ಲಿ ಮಾತ್ರ, ಜನಪದರಲ್ಲಲ್ಲ.

*ವಿಫಲ ಸಂಖ್ಯೆಯಲ್ಲಿ ಉಪಲಬ್ಧವಿರುವ ಈ ಜಿಲ್ಲೆಯ ಜಾನಪದ ಗೀತೆಗಳೆಡೆ ಕನ್ನಡಿಗರ ಗಮನ ಸೆಳೆದ ಮೊದಲಿಗರೆಂದರೆ ಶ್ರೀ ವಿ.ವಿ. ತೊರ್ಕೆಯವರು. ಇವರು ಭತ್ತ ಕುಟ್ಟುವಾಗ , ಹಿಟ್ಟುಬೀಸುವಾಗ , ಮಕ್ಕಳನ್ನು ಆಡಿಸುವಾಗ ಹಾಡುವ ಕೆಲವು ತ್ರಿಪದಿಗಳನ್ನು ಸಂಗ್ರಹಿಸಿ 'ಹಳ್ಳಿಯ ಹಾಡುಗಳು' ಎನ್ನುವ ಶೀರೊನಾಮೆಯಲ್ಲಿ ಕಿರುಹೊತ್ತಿಗೆಯೊಂದನ್ನು ೧೯೩೩ ರಲ್ಲಿ ಪ್ರಕಟಿಸಿ .ಉತ್ತರ ಕನ್ನಡ ಜಿಲ್ಲೆಯ ಜಾನಪದ ಗವಾಕ್ಷವೊಂದನ್ನು ತೆರೆದರು.

ಮ.ಗ. ಶೆಟ್ಟಿಯವರು ಜನಪದೀಯ ಅನೇಕ ಸಂದರ್ಬಗಳಲ್ಲಿ ಹಾಡುವ ಹಾಡುಗಳನ್ನು ಕಲೆಹಾಕಿ ೧೯೩೮ ರಲ್ಲಿ ಸಣ್ಣ ಸಂಕಲನವೊಂದನ್ನು ಹೊರತಂದರು. ಕುಮಟೆಯ ಜಿ.ಆರ್.ಹೆಗಡೆಯವರೂ ಕೆಲವು ಜನಪದ ಗೀತೆಗಳನ್ನು ಸಂಗ್ರಹಿಸಿ ಆಗಾಗ ಪತ್ರಿಕೆಗಳಲ್ಲಿ ಪ್ರಕಟಿಸುತಿದ್ದರು. ಸ್ವತಃ ಕವಿಗಳು, ಸಮಾಜ ಸೇವಕರು ಆದ ಸ.ಪ.ಗಾಂವಕರು ಸ್ವತಃ ಜನಪದವನ್ನು ಸಂಗ್ರಹ ಮಾಡಿ , ಪ್ರಕಟಿಸದಿದ್ದರೂ ಜನಪದವಿಷಯವಾಗಿ ಹೆಚ್ಚಿನ ಮುತುವರ್ಜಿವಹಿಸಿ ಅದನ್ನು ಸಂಗ್ರಹಿಸಲು ಯುವಪೀಳಿಗೆಗೆ ಚಾಲನೆಕೊಟ್ಟದ್ದನ್ನು ಸ್ಮರಿಸಲೇಬೇಕು.

ಅಡಿಟಿಪ್ಪಣಿ: ಜಾನಪದ ಪ್ರಕಾಶನ, ಉದಯಗಿರಿ ಹೊನ್ನಾವರ ಇವರಿಂದ ಸಂಗ್ರಹಿಸಿದ್ದು ....

* ಈಗ ಈ ಜಿಲ್ಲೆಯ ಜನಪದ ಸಾಹಿತ್ಯ ಕಲೆಗಳನ್ನು ಶಾಸ್ತ್ರೀಯವಾಗಿ ಸಂಗ್ರಹಿಸಲು ಪ್ರಕಟಿಸಿದವರಲ್ಲಿ ಡಾಃ ಎಲ್.ಆರ್.ಹೆಗಡೆ, ಡಾಃ ಎನ್.ಆರ್.ನಾಯಕ ಹಾಗೂ ಡಾಃ ಎಲ್. ಜಿ.ಭಟ್ಟ, ಡಾಃ ಝುಮೀರುಲ್ಲಾ ಷರೀಪ, ವಿ.ಗ.ನಾಯಕ, ಶಾಂತಿ ನಾಯಕ, ಡಾಃ ಶಾಲಿನಿ ರಘುನಾಥ ಮುಂತಾದವರು ಪ್ರಮುಖರಾಗಿದ್ದಾರೆ. ಈವರೆಗೆ ಜನಪದಕ್ಕೆ ಸಂಬಂದಿಸಿದ ಸುಮಾರು ಆರವತ್ತು ಎಪ್ಪತ್ತು ಗ್ರಂಥಗಳು ಈ ಜಿಲ್ಲೆಯಿಂದ ಪ್ರಕಟವಾಗಿದೆ. ಎರಡು, ಮೂರು ಕೃತಿಗಳನ್ನು ರಾಜ್ಯಸರ್ಕಾರ ಗುರುತಿಸಿ ರಾಜ್ಯಪ್ರಶಸ್ತಿಯನ್ನು ನೀಡಿದೆ. ಬಹುಷಃ ಜಿಲ್ಲಾಮಟ್ಟದಲ್ಲಿ ಇಷ್ಟು ವ್ಯಾಪಕ ಕ್ಷೇತ್ರಕಾರ್ಯ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿ ಆಗದೆ ಎಂದರೆ ಅತಿಶಯೋಕ್ತಿಯಲ್ಲ.

'ಜನಪದಶ್ರೀ' ಪ್ರಶಸ್ತಿ ವಿಜೇತ ಜಿಲ್ಲೆಯ ಕಲಾವಿದೆ



ಶ್ರೀಮತಿ ಸುಕ್ರಿ ಬೊಮ್ಮ ಗೌಡ

ಅಡಿಟಿಪ್ಪಣಿಃ ಜನಪದ ಪ್ರಕಾಶನ ಡಾಃ ಎನ್. ಆರ್. ನಾಯಕ, ಉದಯಗಿರಿ ಹೊನ್ನಾವರ ಇವರಿಂದ ಸಂಗ್ರಹಿಸಿದ್ದು

ಅಧ್ಯಾಯ ೨

ಉ.ಕ.ಜಿಲ್ಲೆಯ ಶಾಸ್ತ್ರೀಯ ಸಂಗೀತದ ಇತಿಹಾಸ

<u>ಉತ್ತರ ಕನ್ನಡ ಜಿಲ್ಲೆಯಲ್ಲಿ ಶಾಸ್ತ್ರೀಯ ಸಂಗೀತ</u>

- ೧೯೪೫ - ೧೯೯೮.

ಉತ್ತರ ಕನ್ನಡ ಜಿಲ್ಲೆ ಹನ್ನೊಂದು ತಾಲೂಕುಗಳಿಂದ ಕೂಡಿದ್ದು ಇಲ್ಲಿನ ಪ್ರಕೃತಿಸಂಪತ್ತು ಉತ್ತಮ ಹವಾಮಾನದಿಂದ 'ಕರ್ನಾಟಕದ ಕಾಶ್ಮೀರ' ಎಂಬ ` ಹೆಗ್ಗಳಿಕೆಗೆ ಪಾತ್ರವಾಗಿದೆ. ಸಾಂಸ್ಕೃತಿಕವಾಗಿ ಉತ್ತಮ ಪರಿಸರಇದ್ದರೂ ಶಾಸ್ತ್ರೀಯಸಂಗೀತದ ಪ್ರವೇಶ ಈ ಜಿಲ್ಲೆಯಲ್ಲಿ ಸ್ವಲ್ಪ ವಿಳಂಬವಾಗಿಯೇಆಯಿತು. ಯಕ್ಷಗಾನ ಇಲ್ಲಿಯ ಜನರ ಆಸಕ್ತಿಯ ಕಲೆಯಾಗಿದೆ. ನಾಟಕ, ಬಯಲಾಟ, ಜನಪದ ಪ್ರಕಾರದ ಹಾಡು ಹಾಗೂ ನೃತ್ಯಗಳ ಮಧ್ಯದಲ್ಲಿಯೇ ಶಾಸ್ತ್ರೀಯ ಸಂಗೀತ ಇಲ್ಲಿ ಸಾವಕಾಶವಾಗಿ ಬೆಳವಣಿಗೆ ಹೊಂದುತ್ತ ನಡೆಯಿತು. ಈ ಶಾಸ್ತ್ರೀಯ ಸಂಗೀತದ ಬೆಳವಣಿಗೆಗೆ ಸಹಕರಿಸಿದವ್ಯಕ್ತಿಗಳು, ಸಾಮಾಜಿಕಪರಿಸರ , ಸಂಘಸಂಸ್ಥೆಗಳು ಮುಂತಾದ ವಿಷಯಗಳ ಬಗ್ಗೆ ಅಧ್ಯಯನ ಮಾಡಲಾಗಿದೆ. ಭಾರತೀಯ ಸಂಗೀತದಲ್ಲಿ ಹಿಂದೂಸ್ಥಾನೀಸಂಗೀತ ಹಾಗೂ ಕರ್ನಾಟಕೀಸಂಗೀತ ಎಂಬ ಎರಡು ಪದ್ಧತಿಗಳಿವೆ. ಹಿಂದೂಸ್ಥಾನೀ ಸಂಗೀತ ಉತ್ತರ ಭಾರತದಲ್ಲೆಲ್ಲ ವ್ಯಾಪಕವಾಗಿ ಪ್ರಚಾರದಲ್ಲಿದೆ. ಈ ಸಂಗೀತವನ್ನು ಉತ್ತರಾದೀ ಸಂಗೀತವೆಂತಲೂ, ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಪ್ರಚಾರವಿರುವ ಸಂಗೀತವನ್ನು ದಕ್ಷಿಣಾದೀ ಸಂಗೀತವೆಂತಲೂ ಕರೆಯಲಾಗಿದೆ. ಕರ್ನಾಟಕದಲ್ಲಿ ಹಿಂದೂಸ್ಥಾನಿ ಹಾಗೂ ಕರ್ನಾಟಕೀ ಈ ಎರಡೂ ಪದ್ಧತಿಯ ಸಂಗೀತಗಳೂ ಪ್ರಚಾರದಲ್ಲಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ ಹಿಂದೂಸ್ಥಾನಿಸಂಗೀತ ವ್ಯಾಪಕವಾಗಿ ಪ್ರಚಾರದಲ್ಲಿದೆ. ಈ ಜಿಲ್ಲೆಯ ಕೆಲಭಾಗದಲ್ಲಿ ಮಾತ್ರ ವಿರಳವಾಗಿ ಕರ್ನಾಟಕೀ ಸಂಗೀತ ಪದ್ಧತಿಯ ಸಂಗೀತಶಾಲೆ ಹಾಗೂ ಗಾಯಕರು, ವಾದಕರೂ ಕಾಣಸಿಗುತ್ತಾರೆ.

ಹಿಂದೂಸ್ಥಾನೀಸಂಗೀತವು ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವರೀತಿಯಾಗಿ ಬೆಳವಣಿಗೆಯಾಯಿತು, ಈ ಬೆಳವಣಿಗೆಗೆ ಕಾರಣೀಭೂತವಾದ ಸಂಘ ಸಂಸ್ಥೆಗಳನ್ನು ಇಲ್ಲಿ ವಿವರಿಸಬೇಕಾಗಿದೆ. ಸುಮಾರು ೧೯೪೫ ನೇ ಇಸ್ವಿಯಿಂದ ಹಿಂದೂಸ್ಥಾನೀ ಶಾಸ್ತ್ರೀಯ ಸಂಗೀತವು ಈ ಜಿಲ್ಲೆಯಲ್ಲಿ ಅಸ್ತಿತ್ವ ಪಡೆದುಕೊಳ್ಳುತ್ತ ಬಂದಿತೆಂದರೂ ಸಹ ಸಮಗ್ರವಾಗಿ ಜಿಲ್ಲೆಯನ್ನು ವ್ಯಾಪಿಸಲು ಮುಂದಿನ ಅರ್ಧಶತಮಾನಗಳೇ ಬೇಕಾದವು.

ಉತ್ತರಕನ್ನಡ ಜಿಲ್ಲೆ ೧೧ ತಾಲೂಕುಗಳನ್ನು ಹೊಂದಿದ್ದರೂ ಕೂಡಾ, ಹಿಂದುಸ್ಥಾನೀ ಶಾಸ್ತ್ರೀಯ ಸಂಗೀತ ಗಟ್ಟಿಯಾಗಿ ಬೇರೂರಿ ಕಾರ್ಯಪ್ರವೃತವಾಗಿದ್ದುದು ಸಿರ್ಸಿ, ಯಲ್ಲಾಪುರ, ಹೊನ್ನಾವರ, ಕುಮಟಾ, ಹಾಗೂ

ಅಡಿ ಟಿಪ್ಪಣಿ: ಉತ್ತರಕನ್ನಡ ಜಿಲ್ಲೆಯ ಶಾಸ್ತ್ರೀಯ ಸಂಗೀತದ ಇತಿಹಾಸದ ಅಧ್ಯಯನದಿಂದ ....

ಸಿದ್ದಾಪುರ ತಾಲೂಕುಗಳಲ್ಲಿ ಮಾತ್ರ. ಉಳಿದೆಡೆ ತೀರಾ ಇತ್ತೀಚೆಗೆ ಸಂಗೀತ ಪ್ರಸಾರ ಕಾರ್ಯ ಪ್ರಾರಂಭವಾಗಿದೆ.

ಉತ್ತರಕನ್ನಡದ ಕರಾವಳಿ, ಐದು ತಾಲೂಕುಗಳನ್ನುಹೊಂದಿದೆ. ಈ ತಾಲೂಕುಗಳಿಗೆ ಘಟ್ಟದ ಕೆಳಗಿನ ತಾಲೂಕುಗಳು ಎಂಬ ಹೆಸರಿದೆ. ಕಾರವಾರ, ಅಂಕೋಲಾ, ಹೊನ್ನಾವರ, ಕುಮಟಾ, ಭಟ್ಕಳ್ ಈ ತಾಲೂಕುಗಳು ಐತಿಹಾಸಿಕವಾಗಿಯೂ ಪ್ರಸಿದ್ದವಾಗಿದೆ. ಇವು ಪ್ರಾಚಿನ ರೇವುಪಟ್ಟಣಗಳಾಗಿದ್ದವು. ಭೌಗೋಳಿಕವಾಗಿ ಕೊಂಕುಳ್ಳವಾಗಿದ್ದರಿಂದ ಇವುಗಳನ್ನು 'ಕೊಂಕಣ' ಎಂದು ಕರೆಯಲಾಗುತ್ತದೆ. ೧೯೯೮ ರಿಂದ ಕೊಂಕಣರೇಲ್ವೆ ಇಲ್ಲಿ ಪ್ರಾರಂಭವಾಗಿದೆ. ನಾಡಿನ ಖ್ಯಾತಕಲಾಕಾರರಿಗೆ ಈ ಜಿಲ್ಲೆಗೆ ಬಂದು ಕಾರ್ಯಕ್ರಮವನ್ನುನೀಡಲು ಈ ಕೊಂಕಣರೇಲ್ವೆಯಿಂದಾಗಿ ಅನುಕೂಲವಾಗಿದೆ.

ಕಾರವಾರ, ಕುಮಟಾ ಮತ್ತು ಹೊನ್ನಾವರತಾಲೂಕುಗಳಲ್ಲಿ ಸಂಗೀತ ಪ್ರಸಾರಕಾರ್ಯ ಸಮಾಧಾನಕರವಾಗಿ ಮುಂದುವರಿಯುತ್ತಿದೆ. ಆದರೆ ಭಟ್ಕಳ. ಮತ್ತು ಅಂಕೋಲಾತಾಲೂಕುಗಳಲ್ಲಿ ಶಾಸ್ತ್ರೀಯಸಂಗೀತವು ಇನ್ನೂ ಬೆಳೆಯಬೇಕಾಗಿದೆ. ರಾಜಕೀಯವಾಗಿ , ಭಟ್ಕಳತಾಲೂಕು ಯಾವಗಲೂ ಪ್ರಸಿದ್ದವಾಗಿಯೇ ಇದೆ. ಭಟ್ಕಳತಾಲೂಕು ಸೇರಿದಂತೆ ಜಿಲ್ಲೆಯ ಅನೇಕತಾಲೂಕುಗಳಲ್ಲಿ ಭಜನಸಂಗೀತ ಹಾಗೂ ಭಕ್ತಿಸಂಗೀತವು ಮೊದಲಿನಿಂದಲೂ ಪ್ರಚಾರದಲ್ಲಿದೆ. ಈ ಭಜನ್ ಹಾಗೂ ಭಕ್ತಿಸಂಗೀತಗಳು ಮುಂದೆ ಶಾಸ್ತ್ರೀಯ ಸಂಗೀತ ಬೆಳೆಯಲು ಸಹಾಯಕವಾಯಿತು.

"ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರಿಯಸಿ"

ಎಂಬಂತೆ ನಮ್ಮ ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲಾದದ್ದು. ಈ ದೃಷ್ಟಿಯಲ್ಲಿ ಉತ್ತರಕನ್ನಡಜಿಲ್ಲೆ ಇಲ್ಲಿ ಜನಿಸಿದವರಿಗಷ್ಟೇ ಅಲ್ಲ, ಸರ್ವರಿಗೂ ಸ್ವರ್ಗವಾಗಿದೆ. ಒಂದೆಡೆ ಭೋರ್ಗರೆಯುವ ಅರಬ್ಬೀಸಮುದ್ರ ಇನ್ನೊಂದೆಡೆ ಸಸ್ಯಶ್ಯಾಮಲಳಾಗಿ ಮೆರೆಯುವ ಸಹ್ಯಾದ್ರಿ, ಇವುಗಳನಡುವೆ ಕಿರಿದಾದಪಟ್ಟಿಯಲ್ಲಿ ಅಲ್ಲಲ್ಲಿ ದೂರ ದೂರ ನೆಲೆಸಿರುವ ವಿವಿಧ ಭಾಷೆಗಳನ್ನಾಡುವ ವಿವಿಧಸಂಸ್ಕೃತಿಯನ್ನುಹೊಂದಿದ ಜನತೆ, ಪರಸ್ಪರ ಆತ್ಮೀಯತೆಯನ್ನು ಹೊಂದಿದ ಸಹಾಯಕ ಪ್ರವೃತ್ತಿಯುಳ್ಳ ನೆರೆ, ಇದಕ್ಕಿಂತ ಇನ್ನೇನು ಬೇಕು ?. ಉತ್ತರಕನ್ನಡ ಕಲೆಯ ಬೀಡು. ಯಕ್ಷಗಾನ ಇಲ್ಲಿಯ ಹೆಮ್ಮೆಯ ಕಲೆ. ಹೆಸರಾಂತ ಭಾಗವತರೂ, ಮದ್ದಳೆಗಾರರೂ ಇಲ್ಲಿದ್ದಾರೆ.

ಅಡಿ ಟಿಪ್ಪಣಿ: ಜಿಲ್ಲೆಯ ಶಾಸ್ತ್ರೀಯಸಂಗೀತದ ಬಗೆಗಿನ ಲೇಖಕರ ಅಭಿಪ್ರಾಯ ....

ಯಕ್ಷಲೋಕದ ವಾಗ್ಗೇಯಕಾರರೂ ಇಲ್ಲಿದ್ದಾರೆ. ಸುಗ್ಗಿಕುಣಿತದಂತಹ ಜಾನಪದಕುಣಿತಗಳು ಇಲ್ಲಿಂದ ದಿಲ್ಲಿಯವರೆಗೂ ಹೋಗಿ ಜನಮೆಚ್ಚುಗೆಯನ್ನು ಪಡೆದಿದ್ದುಉಂಟು. ಹೀಗೆ ಸಾಂಸ್ಕೃತಿಕವಾಗಿ ಉತ್ತಮ ಪರಿಸರವುಳ್ಳ ಈ ಜಿಲ್ಲೆಗೆ ಶಾಸ್ತ್ರೀಯಸಂಗೀತ ಸ್ವಲ್ಪ ವಿಳಂಬವಾಗಿಯೇ ಬಂತೆಂದರೂ ತಪ್ಪಾಗಲಾರದು. ಸಂಗೀತ ಕ್ಷೇತ್ರದಲ್ಲಿ ತಡವಾಗಿಯಾದರೂ ಕ್ರಮೇಣ ಉತ್ತಮ ವಾತಾವರಣ ನಿರ್ಮಾಣವಾಗಿ ಮುಂದೆ ಉತ್ತಮ ಬೆಳವಣಿಗೆಯ ಹಂತಗಳನ್ನು ನಾವು ನೋಡಬಹುದಾಗಿದೆ.

ಸಂಗೀತವು ಜಾಗತಿಕ ವ್ಯಾಪ್ತಿಯುಳ್ಳ ಕಲೆ. ಅದಕ್ಕೆ ಭಾಷಾಬೇದವಿಲ್ಲ, ಮತಬೇದವಿಲ್ಲ. ಭಾಷೆಯ ಹಂಗಿಲ್ಲದೇ ಬೆಳೆದುಬಂದ ಕಲಾಪ್ರಕಾರ ಶಾಸ್ತ್ರೀಯಸಂಗೀತವಾಗಿದೆ. ಶಾಸ್ತ್ರೀಯಸಂಗೀತಗಾರರು ಸಾಹಿತ್ಯವನ್ನು ಗೌಣವಾಗಿ ಕಾಣುತ್ತಾರೆ ಎಂಬ ಮಾತನ್ನು ತೆಗೆದುಹಾಕುವಂತಿಲ್ಲ. ಆದರೆ ಇಂದು ಶಾಸ್ತ್ರೀಯಸಂಗೀತಗಾರರು ಸಾಹಿತ್ಯಕ್ಕೂ ಮಹತ್ವಕೊಟ್ಟು ಹಾಡುವುದರಿಂದ ಸಂಗೀತಕ್ಕೆ ಇನ್ನೂ ಹೆಚ್ಚಿನ ಮಹತ್ವಬಂದಿದೆ. ಸಂಗೀತಕ್ಕೆ ಬಡವ ಬಲ್ಲಿದನೆಂಬುವದಿಲ್ಲ. 'ಶಿಶುರ್ವೇತ್ತಿ ಪಶುರ್ವೇತ್ತಿ' ಈಗಹುಟ್ಟಿದ ಶಿಶುವಿನಿಂದ ಸಾಮಾನ್ಯಪಶುವಿನ ತನಕವೂ ಸಂಗೀತದಿಂದ ಸಂತೃಪ್ತಿ ಪಡಬಲ್ಲದು. ಸಂಗೀತಕ್ಕೆ ವಯೋಬೇಧವಿಲ್ಲ. ಸುಖದುಖಃಗಳ ವ್ಯತ್ಯಾಸವಿಲ್ಲ. ಹುಟ್ಟು ಸಾವಿನ ಪರಿಭೇದವಿಲ್ಲ. ಜೋಗುಳವು ಉಂಟು. ಚರಮಗೀತೆಯೂ ಉಂಟು. ಮುಂಜಾವು ಸಂಜೆಯ ಬೇದವಿಲ್ಲ, ಉದಯರಾಗಉಂಟು, ಸಂಧ್ಯಾರಾಗಉಂಟು. ಸಂಗೀತ ಸಾರ್ವಕಾಲಿಕ , ಸಾರ್ವದೇಶಿಕ ಹಾಗೂ ಸಾರ್ವತ್ರಿಕ.

ಒಂದು ದೃಷ್ಟಿಯಲ್ಲಿ ಉತ್ತರಕನ್ನಡಜಿಲ್ಲೆ ಕರ್ನಾಟಕೀಗೂ ಸಲ್ಲ, ಹಿಂದುಸ್ತಾನೀಗೂ ಒಲ್ಲ ಎಂಬಂತಿದೆ. ಈ ಜಿಲ್ಲೆ ಅಭಕ್ಕೂ ಇಲ್ಲ , ಶುಭಕ್ಕೂ ಇಲ್ಲ ಎಂದೆನಿಸುತ್ತದೆ. ಯಾವನಿಗೆ ಹೊಟ್ಟೆಗೆ ಸಮೃದ್ಧವಾಗಿ ಸಿಗುತ್ತದೊ ಅವನು ಸಾಹಿತ್ಯದ ಬಗ್ಗೆ ಸಂಗೀತದ ಬಗ್ಗೆ ವಿಚಾರಮಾಡಬಲ್ಲ. ಸಾಹಿತ್ಯ ಸಂಗೀತಗಳಂತೂ ಹೊಟ್ಟೆಯಪಾಡಿಗೆ ಅಲ್ಲವೇಅಲ್ಲ. ಸಾಹಿತ್ಯ ಸಂಗೀತಗಳಿಂದಲೇ ಶ್ರೀಮಂತನಾಗುವವನು ಲಕ್ಷಕ್ಕೊಬ್ಬರೋ , ಸಾವಿರಕ್ಕೊಬ್ಬರೋ ಸಿಗಬಹುದು. ಈ ಜಿಲ್ಲೆಯ ಶ್ರೀಸಾಮಾನ್ಯ ಹೊಟ್ಟೆಪಾಡಿಗೇ ಹೋರಾಟ ನಡೆಸುತ್ತಿದ್ದಾನೆ. ಸಾಹಿತ್ಯ ಸಂಗೀತಗಳು ಹೊಟ್ಟೆಪಾಡಿಗಂತೂ ಅಲ್ಲವೇಅಲ್ಲ. ಇದರಿಂದ ಸಾಮಾನ್ಯವರ್ಗದಲ್ಲಿ ಶಾಸ್ತ್ರೀಯ ಸಂಗೀತ ಸ್ವಲ್ಪ ದೂರವಾಗಿಯೇ ಉಳಿಯಿತು. ಯಕ್ಷಗಾನವನ್ನು ರಾತ್ರಿಯಿಂದ ಬೆಳಗಿನತನಕ ಆಸ್ವಾದಿಸುತ್ತಾರೆ. ಇಂತಹ ಸಂದರ್ಭದಲ್ಲಿಯೂ ಸಹ ಶಾಸ್ತ್ರೀಯಸಂಗೀತ ಇಲ್ಲಿ ಬೆಳೆದು ಬರಲು ಇಲ್ಲಿನ ಅನೇಕ ಸಂಗೀತಗಾರರು ಸಂಘಟಕರುಗಳ ಪಾತ್ರ

ಅತ್ಯಂತ ಹಿರಿದಾಗಿದೆ. ಸಂಗೀತರತ್ನಾಕರ ಗ್ರಂಥವು * "ಗೀತಂ ವಾದ್ಯಂ ನೃತ್ಯಂ ಚ ತ್ರಯಂ ಸಂಗೀತ ಮುಚ್ಯತೆ" ಎಂದು ವ್ಯಾಖ್ಯಾನಿಸುತ್ತದೆ. ಗಾಯನ, ವಾದನ ಹಾಗೂ ನರ್ತನ ಈ ಮೂರರ ತ್ರಿವೇಣಿ ಸಂಗಮವೇ ಸಂಗೀತ. ಸಂಗೀತವು ಪರಿಪೂರ್ಣವಾಗಬೇಕಾದರೆ ಈ ಮೂರರಸಂಗಮ ಬೇಕೇಬೇಕು. ಆದರೆ ಖ್ಯಾಲ್‌ಗಾಯಕೀ ಮಂದಿರೀ ಸಂಗೀತ, ದರ್ಬಾರೀ ಸಂಗೀತಗಳು ಸುಮಾರು ಹದಿನಾಲ್ಕು ಮತ್ತು ಹದಿನೈದನೇ ಶತಮಾನದಲ್ಲಿ ಪ್ರಚಲಿತವಾದ ಸಂದರ್ಭಕ್ಕೆ ಕೇವಲ ಗಾಯನವಾದನಗಳ ಮಟ್ಟಿಗೆ ಸಂಗೀತ ಶಬ್ದದ ಪ್ರತೀತಿ ಪ್ರಾರಂಭವಾಯಿತು. ಇಂದು ನೃತ್ಯಕ್ಕೆ ಗೀತವಾದ್ಯಗಳು ಬೇಕೇಬೇಕು. ಆದರೆ ಸಂಗೀತಕ್ಕೆ ನೃತ್ಯ ಅನಿವಾರ್ಯವೇನೂ ಅಲ್ಲ. ಗಾಯನ ವಾದನಗಳೆರಡೇ ಇಂದಿನ ರೂಢಿಯ ಸಂಗೀತ. ಭಾರತೀಯ ಸಂಗೀತದಲ್ಲಿ ಪ್ರಮುಖವಾಗಿ ಎರಡು ಪದ್ಧತಿಗಳು. ಕರ್ನಾಟಕೀಸಂಗೀತ ಮತ್ತು ಹಿಂದುಸ್ಥಾನಿಸಂಗೀತವೆಂಬುದನ್ನು ಸಾರ್ವತ್ರಿಕವಾಗಿ ಮನ್ನಿಸಲಾಗಿದೆ. ಕರ್ನಾಟಕೀ ಸಂಗೀತಎಂದರೆ ಇದು ಕರ್ನಾಟಕಕ್ಕೇಮಾತ್ರ ಸೀಮಿತವಾಗಿದೆ ಎಂದುತಿಳಿದರೆ ತಪ್ಪಾಗುತ್ತದೆ. ಈ ಸಂಗೀತದಲ್ಲಿ ಲಯಪ್ರಧಾನ, ಸಾಹಿತ್ಯಕೃತಿಪ್ರಧಾನವಾದ ಕರ್ನಾಟಕೀಸಂಗೀತ, ಇಂದು ದಕ್ಷಿಣಭಾರತದಲ್ಲೆಲ್ಲಾ ಪ್ರಚಲಿತವಿದ್ದ ದಕ್ಷಿಣಾದೀಸಂಗೀತ ಎಂದು ಕರೆಸಿಕೊಂಡಿದೆ. ಇದು ತಮಿಳುನಾಡು, ಕೇರಳ , ಆಂಧ್ರಪ್ರದೇಶದ ಹಲವುಭಾಗ ಹಾಗೂ ಕರ್ನಾಟಕದ ಕೆಲವು ಭಾಗಗಳಲ್ಲಿ ಹೆಚ್ಚು ಪ್ರಚಲಿತವಿದೆ. * ಹಿಂದುಸ್ಥಾನೀಸಂಗೀತವು ಸ್ವರಸಾಧನೆಯಲ್ಲೇ ಸ್ವರ್ಗವನ್ನು ಕಾಣುವಂತಹ ಸಂಗೀತವಾಗಿದೆ. ಸೂರಗಯಾ ತೋ ಸಿರಗಯಾ ಎಂಬ ತತ್ವದ ಸ್ವರಪ್ರಧಾನವಾದ ಸ್ವರಸಾಧನೆಯಲ್ಲಿಯೇ ಆಯುಷ್ಯವನ್ನು ಕಳೆಯುವಂತಹಸಂಗೀತ ಇದಾಗಿದೆ. ಗಝಲ್, ಠುಮ್ರಿ, ಟಪ್ಪಾ ಮುಂತಾದ ಪರಿಭೇದಗಳನ್ನು ಹೊಂದಿದ ಈ ಪದ್ಧತಿ ಇಂದು ಭಾರತದತುಂಬೆಲ್ಲಾ ವ್ಯಾಪಕವಾಗಿದೆ. ಇದನ್ನು ಉತ್ತರಾದೀಸಂಗೀತವೆಂತಲೂ ಕರೆಯಲಾಗುತ್ತದೆ. ಹಿಂದಿನ ಕಾಲದಲ್ಲಿ ರಾಜಮಹಾರಾಜರ ಕೃಪಾಕಟಾಕ್ಷಕ್ಕೆ ಪಾತ್ರರಾಗಲು ಸಂಗೀತಗಾರರು ಅವಕಾಶಕ್ಕಾಗಿ ಕಾಯುತ್ತಿದ್ದರು. ಕರ್ನಾಟಕೀ ಹಾಗೂ ಹಿಂದುಸ್ಥಾನೀ ಈ ಎರಡೂ ಪದ್ಧತಿಯ ಪಂಡಿತರುಗಳು ತಾಮೇಲೆ ತಾನೇ ಶ್ರೇಷ್ಠ ಎಂಬ ಅಹಂಭಾವನೆಯಲ್ಲಿರುತ್ತಿದ್ದುದು ಇತಿಹಾಸದಿಂದ ತಿಳಿಯುತ್ತದೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬಂತೆ 'ಪಂಡಿತಂ ಪಂಡಿತಂ ದೃಷ್ಟ್ವಾ ಶ್ವಾನವತ್ ಗುಗ್ಗುರಾಯತೆ ' ಎಂಬಂತೆ ಪರಸ್ಪರ ಕಚ್ಚಾಡುವ ಕಾಲವೊಂದಿತ್ತು. ಆದರೆ ಇಂದು ಈ

ಅಡಿ ಟಿಪ್ಪಣಿ: * ಸಂಗೀತ ರತ್ನಾಕರ ಲೇ. ಸಾರಂಗದೇವ .
ಇಂದಿನ ಶಾಸ್ತ್ರೀಯ ಸಂಗೀತದ ಬಗೆಗಿನ ಲೇಖಕರ ಅಭಿಪ್ರಾಯವನ್ನಾಧರಿಸಿ ....

ಎರಡೂಪ್ರಕಾರದ ಸಂಗೀತಗಾರರೂ ಪರಸ್ಪರಅರಿತುಕೊಂಡು ಶಾಸ್ತ್ರಾಭ್ಯಾಸಮಾಡಿ ಸಮಾನಮನಸ್ಕ ರಾಗಗಳನ್ನು ಆಯ್ದುಕೊಂಡು ಜುಗಲಬಂದಿ ಕಛೇರಿಯನ್ನು ನಡೆಸುತ್ತಿರುವುದು ಕಂಡುಬರುತ್ತದೆ.

*ಖ್ಯಾತಗಾಯಕರಾದ ಪಂ: ಬೀಮಸೇನ ಜೋಷಿ, ಡಾ: ಬಾಲಮುರಲೀ ಕೃಷ್ಣ ಇವರುಗಳು ಜುಗಲಬಂದಿ ಸಂಗೀತಕಛೇರಿಯನ್ನು ನಡೆಸುತ್ತಾರೆ. ಪಂ: ಹರಿಪ್ರಸಾದ ಚೌರಾಸಿಯಾರ ಜತೆಗೆ ಪಂ: ಟಿ. ಆರ್. ಮಹಾಲಿಂಗಂ ಕೊಳಲು ನುಡಿಸುತ್ತಾರೆ. ಅನೇಕ ಹಿರಿಯದರ್ಜೆ ಕಲಾಕಾರರು ಇತರರ ಕಾರ್ಯಕ್ರಮವನ್ನು ಆಲಿಸುತ್ತಾರೆ. ಪರಸ್ಪರ ಸಂಗೀತದ ತಿಳುವಳಿಕೆ ಮಾಡಿಕೊಳ್ಳುತ್ತಾರೆ . ಒಳ್ಳೆಯದನ್ನು ಹೊಗಳುತ್ತಾರೆ. ಕರ್ನಾಟಕಸಂಗೀತದ ನೆಲವೆಂದುಕೊಂಡ ಬೆಂಗಳೂರು ಮೈಸೂರುಗಳಲ್ಲಿ ಹಿಂದುಸ್ಥಾನೀಸಂಗೀತಗಾರರ ಕಾರ್ಯಕ್ರಮ ನಡೆಯುತ್ತದೆ. ಹಿಂದುಸ್ಥಾನೀಸಂಗೀತದ ನೆಲವಾದ ದಿಲ್ಲಿಯಲ್ಲಿ ಭಾರತರತ್ನ ಡಾ: ಎಂ. ಎಸ್. ಸುಬ್ಬಲಕ್ಷ್ಮೀಯವರ ಸಂಗೀತ ಕಛೇರಿ ಯಶಸ್ವಿಯಾಗಿ ನಡೆಯುತ್ತದೆ. ಈ ಕಾಲ ಸಂಗೀತಕ್ಕೆ ಸುಬಿಕ್ಷಕಾಲ ಪರಸ್ಪರ ಒಬ್ಬರನ್ನೊಬ್ಬರು ಅರಿತು ನಡೆಯುತ್ತಾರೆ.

ಇಂದು ಈ ಜಿಲ್ಲೆಯಲ್ಲಿ ರಾಷ್ಟ್ರ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದ ಕಲಾವಿದರು ಬಂದು ತಮ್ಮ ಸಂಗೀತ ಕಛೇರಿಯನ್ನು ನಡೆಸಿಕೊಡುತ್ತಾರೆ. ಇಲ್ಲಿಯ ಕಲಾವಿದರೂಸಹ ರಾಷ್ಟ್ರಮಟ್ಟದಲ್ಲಿ ಇಂದು ಖ್ಯಾತರಾಗಿದ್ದಾರೆ. ಅನೇಕ ಸಂಘ ಸಂಸ್ಥೆಗಳು ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸುತ್ತವೆ. ಬ್ರಹತ್ ಪ್ರಮಾಣದಲ್ಲಿ ೧೦ ರಿಂದ ೧೫ ಸಹಸ್ರ ಜನರು ಶಾಸ್ತ್ರೀಯ ಸಂಗೀತ ಕೇಳಿ ಆನಂದಿಸಿದ ಉದಾಹರಣೆಯೂ ಇಲ್ಲಿದೆ. ತಂಪಾದ ವಾತಾವರಣದಿಂದ ಪರಸ್ಪರ ಸಹಕಾರಮನೋವೃತ್ತಿಯಲ್ಲಿ ಜೀವನ ಸಾಗಿಸುತ್ತಿರುವ ಇಲ್ಲಿಯ ಜನರು ಸ್ನೇಹಮಯವಾಗಿ ವ್ಯಕ್ತಿತ್ವವನ್ನು ಹೊಂದಿದವರು. ತಮ್ಮ ದಿನನಿತ್ಯದ ವ್ಯವಹಾರಗಳನ್ನು ಪರಸ್ಪರಸಹಕಾರ ಸಹಾಯನೀಡುವ ಪ್ರವೃತ್ತಿಯ ಇಲ್ಲಿನಜನರಿಗೆ ಯಕ್ಷಗಾನ ಕಲೆಯ ಬಗೆಗೆ ಬಹಳ ಆಸಕ್ತಿ. ರಾತ್ರಿಯಿಂದ ಬೆಳಗಿನತನಕ ಯಕ್ಷಗಾನವನ್ನು ನೋಡಿ ಆನಂದಿಸುತ್ತಾರೆ. ಇಲ್ಲಿಯ ಕಲಾಕಾರರು ಇಂದು ರಾಷ್ಟ್ರಮಟ್ಟದಲ್ಲಿ ಖ್ಯಾತರಾಗಿ ರಾಷ್ಟ್ರ ಪ್ರಶಸ್ತಿಯನ್ನುಗಳಿಸಿದ್ದಾರೆ.

ಅಡಿಟಿಪ್ಪಣಿ: ದೇಶದ ಖ್ಯಾತ ಕಲಾಕಾರರ ಸಂಗೀತ ಕಛೇರಿ ಹಾಗೂ ಧ್ವನಿಮುದ್ರಣಗಳ ಶ್ರವಣದಿಂದ ......

ಉತ್ತರಕನ್ನಡಜಿಲ್ಲೆಯ ಶಾಸ್ತ್ರೀಯಸಂಗೀತದ ಇತಿಹಾಸ

ಶಾಸ್ತ್ರೀಯ ಸಂಗೀತವು ಈ ಜಿಲ್ಲೆಯಲ್ಲಿ ಸುಮಾರು ೧೯೪೫ ರ ಸುಮಾರಿಗೆ ತನ್ನ ಅಸ್ತಿತ್ವವನ್ನು ಪಡೆದುಕೊಳ್ಳುತ್ತಾ ಬಂದಿದ್ದನ್ನು ನಾವು ಇತಿಹಾಸವನ್ನು ನೋಡಿದಾಗ ತಿಳಿಯುವದು. ಅದಕ್ಕೂ ಮೊದಲು ಇಲ್ಲಿ ಶಾಸ್ತ್ರೀಯಸಂಗೀತದ ಕಲ್ಪನೆಯ ಬಗೆಗೆ ಯಾವಸುಳಿವೂ ದೊರಕುವುದಿಲ್ಲ. ಹಿರಿಯ ಸಂಗೀತಗಾರರನ್ನು, ಸಂಗೀತ ವಿಮರ್ಶಕರನ್ನು ವಿಚಾರಿಸಿದಾಗ ಭಾರತಕ್ಕೆ ಸ್ವಾತಂತ್ರ್ಯ ಬರುವದಕ್ಕಿಂತ ಎರಡುವರ್ಷ ಮೊದಲೇ ಇಲ್ಲಿ ಶಾಸ್ತ್ರೀಯ ಸಂಗೀತ ಹಾಗೂ ಶಾಸ್ತ್ರೀಯ ಸಂಸ್ಕೃತಿಯ ಕಲ್ಪನೆ ಬಂತೆಂದು ಹೇಳುತ್ತಾರೆ. ಜನಪದಕಲೆಗಳು, ಯಕ್ಷಗಾನ ನಾಟಕಗಳು ಇಲ್ಲಿ ಬಹಳದಿನಗಳ ಹಿಂದಿನಿಂದಲೇ ಅಸ್ತಿತ್ವದಲ್ಲಿರುವುದು ಕಂಡುಬರುತ್ತದೆ. ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ ಹವ್ಯಕ ನಾಟಕ ಕನ್ನಡದ ಮೊಟ್ಟಮೊದಲ ನಾಟಕಕೃತಿಯಾಗಿದೆ. ಇದು ಹವ್ಯಕ ಭಾಷೆಯಲ್ಲಿದೆ. ಅಂತೆಯೇ ಪತ್ರಿಕೋದ್ಯಮದಲ್ಲಿಯೂ ಈ ಜಿಲ್ಲೆ ಸುಮಾರು ಒಂದೂವರೆ ಶತಮಾನಗಳ ದಾಖಲೆನೀಡುತ್ತದೆ. ಇದನ್ನೆಲ್ಲ ಗಮನಿಸಿದಾಗ ಹಿಂದೂಸ್ತಾನೀಶಾಸ್ತ್ರೀಯಸಂಗೀತ ಸ್ವಲ್ಪತಡವಾಗಿಯೇ ಈ ಜಿಲ್ಲೆಯ ಸಂಪರ್ಕಕ್ಕೆ ಬಂದುದು ನಮಗೆ ಗೋಚರವಾಗುತ್ತದೆ. ಈ ಶತಮಾನದ ಪೂರ್ವಾರ್ದದ ಕೊನೆಯ ದಶಕಗಳಲ್ಲಿ ಶಾಸ್ತ್ರೀಯ ಸಂಗೀತ ಅಸ್ತಿತ್ವದಲ್ಲಿಬಂತೆಂದು ಗುರುತಿಸಿದರೂ ಕೂಡ, ಸಮಗ್ರವಾಗಿ ಜಿಲ್ಲೆಯನ್ನು ವ್ಯಾಪಿಸಲು ಮುಂದಿನ ಅರ್ದ ಶತಮಾನಗಳೇ ಬೇಕಾಗಿರುವುದನ್ನು ಇತಿಹಾಸದಿಂದ ತಿಳಿಯಬಹುದು.

*ಈ ಶತಮಾನದ ಪೂರ್ವಾರ್ದದಲ್ಲಿ ಸಂಗೀತ ಕ್ಷೇತ್ರಕ್ಕೆ ಕೊಡುಗೆಕೊಟ್ಟ ಅನೇಕ ಸಂಗೀತವಿದ್ವಾಂಸರನ್ನು ಹೆಸರಿಸಬಹುದು. ಗೋಕರ್ಣದ ವಿರೂಪಾಕ್ಷ ಪುರಾಣಿಕ ಮಾರಿಗೋಳಿಯವರು ಅಂದಿನ ದಿನದಲ್ಲಿಯೇ ಉತ್ತಮ ವಾಯಲಿನ್ ವಾದಕರಾಗಿದ್ದರು. ವಾಯಲಿನ್‌ವಾದನದಲ್ಲಿ ಅವರು ಮಾಡಿದ ಸಾಧನೆಯನ್ನು ಅನೇಕರು ಇಂದಿಗೂ ಅವರನ್ನು ನೆನೆಪಿಸುತ್ತಾರೆ. ಅವರ ಪರಂಪರೆ ಸಂಗೀತಕ್ಷೇತ್ರಕ್ಕೆ ಕೊಡುಗೆಯಾಗಿದೆ. ಅವರ ಶಿಷ್ಯರಾದ ದಿಃ ವಿಘ್ನೇಶ್ವರ ಪಂಡಿತರು ಪ್ರತಿಭಾವಂತರಾಗಿದ್ದು ಮುಂಬೈನ ಸಂಗೀತವಿದ್ಯಾಲಯದಲ್ಲಿ ಶಿಕ್ಷಕರಾಗಿದ್ದರು. ಅವರು ಈ ಜಿಲ್ಲೆಯ ಸಂಗೀತಕ್ಕೆ ಅನೇಕಶಿಷ್ಯರನ್ನು ಮತ್ತು ಸಂಗೀತದ ತಿಳುವಳಿಕೆಯನ್ನು ಮಾಡಿಕೊಟ್ಟಿದ್ದಾರೆ.

ಅಡಿಟಿಪ್ಪಣಿ: ಶಾಸ್ತ್ರೀಯಸಂಗೀತದ ಬೆಳವಣಿಗೆ ಕುರಿತ ಸಂದರ್ಶನಗಳಿಂದ, ಸಂದರ್ಶಕರು ಶ್ರೀ ನಾರಾಯಣ ಪಂಡಿತ, ಗೋಕರ್ಣ

ದಿಃ ಗಿರಿಯನ್‌ಗಂಪರೂ ನುರಿತ ವಾಯಲಿನ್‌ವಾದಕರಾಗಿದ್ದರು. ದಿಃ ವಿಘ್ನೇಶ್ವರ ಬಡತಿ ಅಂದಿನ ಕಾಲದಲ್ಲಿಯೇ ನುರಿತ ಸಿತಾರ್‌ವಾದಕರಾಗಿದ್ದರು. ಇವರು ಕವಿಗಳೂ ಆಗಿದುದು ವಿಶೇಷವಾಗಿದೆ.

ದಿಃ ಶಾಂತಾರಾಮ ಭಟ್ಟರು ಗಾಯಕರಾಗಿದ್ದರು. ಇವರೆಲ್ಲರೂ ಸ್ವತಹ ತಾವು ಸಂಗೀತದಲ್ಲಿ ತಿಳಿದುಕೊಂಡಿದುದಲ್ಲದೇ ಅನೇಕ ಶಿಷ್ಯರನ್ನು ತಯಾರಿಸಿ ಗೋಕರ್ಣದ ಸುತ್ತೆಲ್ಲ ಸಂಗೀತದ ಕಂಪನ್ನೇ ಹರಿಸಿದ್ದರು. ಜಿಲ್ಲೆಯ ತಾಲೂಕಾ ಸ್ಥಳವಾದ ಗೋಕರ್ಣ ಆಧ್ಯಾತ್ಮವಾಗಿಯೂ ತುಂಬಾ ಮಹತ್ವವನ್ನು ಪಡೆದಿದೆ. ಶಿವನ * ಆತ್ಮಲಿಂಗವಿರುವುದು ಈ ಪುಣ್ಯಕ್ಷೇತ್ರದಲ್ಲಿಯೇ. ಶಿವನ ಆತ್ಮಲಿಂಗ ಪ್ರತಿಷ್ಟೆಯಲ್ಲಿ ಆಧ್ಯಾತ್ಮಿಕ ಕಥೆಯು ಆತ್ಮಲಿಂಗದ ಸ್ಥಾಪನೆಯಹಿನ್ನೆಲೆಗೆ ಹಿಡಿದಕನ್ನಡಿಯಂತಿದೆ. ರಾವಣನು ಘೋರ ತಪಸ್ಸನ್ನುಮಾಡಿ ಶಿವನ ಆತ್ನಲಿಂಗವನ್ನು ಒಲಿಸಿಕೊಳ್ಳುತ್ತಾನೆ. ತನ್ನ ತಾಯಿಯು ಮರಳಿನ ಲಿಂಗವನ್ನು ಮಾಡಿ ಪೂಜಿಸುತ್ತಿರುವದನ್ನು ಕಂಡು ಮರಳಿನ ಲಿಂಗವೇಕೆ? ಅಮ್ಮ ಶಿವನ ಆತ್ಮಲಿಂಗವನ್ನೇ ತರುತ್ತೇನೆ ಎಂದು ಅಮ್ಮನಿಗೆ ವಚನ ಕೊಟ್ಟು ಘೋರ ತಪಸ್ಸನ್ನಾಚರಿಸಿ ಶಿವನಿಂದ ಆತ್ಮಲಿಂಗವನ್ನೇ ಪಡೆಯುತ್ತಾನೆ. ಇದರಿಂದ ವಂಚಿತರಾದ ದೇವತೆಗಳು ಉಪಾಯವಾಗಿ ಮುಸ್ಸಂಜೆಯ ಹೊತ್ತಿನ ಸಂಧ್ಯಾವಂದನೆ ತಪ್ಪದೇ ಮಾಡುವ ರಾವಣನ ನಿಯಮತಿಳಿದು ಸೂರ್ಯನಿಗೆ ಮರೆ ಮಾಡಿ ಕೃತಕ ಸಂಜೆಯನ್ನಾಗಿಸಿದರು. ರಾವಣ ಸೂರ್ಯನಿಗೆ ಅರ್ಗ್ಯ ಕೊಡಲೆಂದು ಲಿಂಗವನ್ನು ತನ್ನ ಕೈಯಿಂದ ಅಲ್ಲಿಯೇಸುತ್ತಾಡುತ್ತಿದ್ದ ಬ್ರಾಹ್ಮಣವಟುವಿನವೇಷದ ಗಣಪತಿಯಕೈಯಲ್ಲಿ ಕೊಟ್ಟು ತಾನು ಅರ್ಗ್ಯ ಎರೆದು ಬರುವವರೆಗೆ ನೀನೀದನ್ನು ಇಟ್ಟಿಕೊ. ಅರ್ಗ್ಯ ಎರೆದು ಆದ ನಂತರ ನಾನಿದನ್ನು ಒಯ್ಯುತ್ತೇನೆಂದು ವಟುವಿಗೆ ತಿಳಿಸಿದ. ಉತ್ತರವಾಗಿ ವಟುವು ನಾನು ಮೂರು ಕೂಹೂ (ಕೂಗು) ಹಾಕುತ್ತೇನೆ ಮೂರನೇ ಕರೆಗೂ ನೀನು ಬರದಿದ್ದಲ್ಲಿ ನಾನು ಆತ್ಮಲಿಂಗವನ್ನು ಕೆಳಗೆ ಇಡುತ್ತೇನೆಂದು ತಿಳಿಸುತ್ತಾನೆ. ಎಂದಿಗೂ ಕೆಳಗಿಡಬೇಡಾ ಎಂಬ ವಚನದೊಂದಿಗೆ ರಾವಣ ಅರ್ಗ್ಯಯೆರೆಯಲು ಸಮುದ್ರದ ತೀರಕ್ಕೆ ಹೋಗುತ್ತಾನೆ . ಆತ ಸಂಧ್ಯಾವಂದನೆಗಿಳಿದಾಗ ಎರಡು ಕೂಗನ್ನು ಹಾಕಿ ಆತ ಇನ್ನೇನು ಬರುವಷ್ಟರಲ್ಲಿ ಮೂರನೇ ಕರೆಯನ್ನು ಕರೆದು ಬಹಳಷ್ಟು ಭಾರವಾಗಿದೆ, ತನ್ನಿಂದಾಗದು ಎಂದು ಹೇಳುತ್ತಾ ಆತ್ಮಲಿಂಗವನ್ನು ಅಲ್ಲೇಕೆಳಕ್ಕೆ ಇರಿಸಿಬಿಡುತ್ತಾನೆ. ಇದರಿಂದಾಗಿ ಶಿವನ ಆತ್ಮ ಲಿಂಗವು ಗೋಕರ್ಣ ಕ್ಷೇತ್ರದಲ್ಲಿ ಪ್ರತಿಷ್ಟಾಪನೆ ಆಯಿತೆಂದು ಹೇಳಲಾಗಿದೆ. ಒಮ್ಮೆ ನೆಲಕ್ಕೆ ಆತ್ಮಲಿಂಗ ಇಳಿಯಿತೆಂದರೆ ಅದನ್ನು ಯಾರಿಗೂ ತೆಗೆಯಲು ಶಕ್ಯವಿಲ್ಲದ ಕಾರಣ ರಾವಣ ತನ್ನೆಲ್ಲಾ ಶಕ್ತಿ

ಅಡಿಟಿಪ್ಪಣಿಃ * ಗೋಕರ್ಣ ಕ್ಷೇತ್ರದ ಬಗೆಗಿರುವ ಪುರಾಣ ಪುಣ್ಯ ಕಥೆ ಹಾಗೂ ದಂತ ಕಥೆಗಳನ್ನಾಧರಿಸಿ .....


ಹಾಕಿ ಮಿಟುಕಾಡಿದರೂ ಆತ್ಮಲಿಂಗವನ್ನು ತೆಗೆಯಲಾರದೇ ಹಿಂದಿರುಗುತ್ತಾನೆ. ಅದ್ಯಾತ್ಮಿಕವಾಗಿ ಇನ್ನೂ ಅನೇಕ ಕಥೆಗಳು ಗೋಕರ್ಣಕ್ಷೇತ್ರಕ್ಕಿದೆ. ಶ್ರೀ ಮಹಾಬಲೇಶ್ವರ ಇಲ್ಲಿನ ಮುಖ್ಯ ದೇವ. ಇಂತಹ ಧಾರ್ಮಿಕ ಹಿನ್ನೆಲೆಯಿರುವ ಇಲ್ಲಿನ ಕ್ಷೇತ್ರಕ್ಕೆ ಆಧ್ಯಾತ್ಮಿಕ ಹಿನ್ನೆಲೆಯಿರುವವರೇ ಸಂಗೀತಗಾರರಾಗಿರುವದು ಒಂದು ವಿಶೇಷ ಎನ್ನಬಹುದು. ಅಲ್ಲಿನ ಗುಡಿ ಗೋಪುರಗಳಲ್ಲಿ ಶಿವರಾತ್ರಿ ಮಹಾಜಾತ್ರೆಯಲ್ಲಿ ಮಹಾಗಣಪತಿ ಪೂಜೆಯ ಸಂಧರ್ಬದಲ್ಲಿ ಸಂಗೀತ ಹಾಗೂ ಭಜನೆ ಕಾರ್ಯಕ್ರಮಗಳು ಶ್ರೀಕ್ಷೇತ್ರದಲ್ಲಿ ನಡೆಯುತ್ತಲೇಇರುವದು ಇಲ್ಲಿ ಸಂಗೀತದ ಬೆಳವಣಿಗೆಗೆ ಸಹಾಯಕಾರೀಯಾಯಿತೆನ್ನಬಹುದು.

* ಶ್ರೀಮತಿ ನಾರ್ವೆಕರ್ ಅಂದಿನಕಾಲದಲ್ಲಿ ಖ್ಯಾತ ಗಾಯಕಿಯಾಗಿದ್ದರು. ಸ್ತ್ರೀಯರಿಗೆ ಅಷ್ಟೊಂದು ಸ್ಥಾನಮಾನವಿಲ್ಲದ ಅಂದಿನದಿನದಲ್ಲಿಯೇ ಅವರು ಉತ್ತಮ ಗಾಯಕಿಯಾಗಿ ಸಂಗೀತದಪ್ರಚಾರ ಮಾಡಿದರು. ಉತ್ತರಕನ್ನಡ ಜಿಲ್ಲಾಸ್ಥಳವಾದ ಕಾರವಾರದಲ್ಲಿಯೂ ಶಾಸ್ತ್ರೀಯಸಂಗೀತ ಇತ್ತೀಚಿಗೆ ಬೆಳೆದುಬಂದಿದೆ. ಮೊದಲು ಇಲ್ಲಿ ಶಾಸ್ತ್ರೀಯಸಂಗೀತಕ್ಕೆ ಜನರು ಆಕರ್ಷಿತರಾಗಲಿಲ್ಲ. ಭಕ್ತಿಸಂಗೀತ , ಭಜನ, ದೇವರನಾಮ ಮುಂತಾದ ಲಘು ಸಂಗೀತದ ಪ್ರಕಾರಗಳನ್ನೇ ಸುಲಭವಾಗಿ ಹೇಳುತ್ತಿದ್ದರು. ಆದರೂ ಅಂದಿನ ದಿನಗಳಲ್ಲಿ ದಿ. ರಾಮ ಮರಾಠೆ ಮತ್ತು ಲಕ್ಷ್ಮಣ ಮರಾಠೆ ಮುಂತಾದ ಗಾಯಕರೂ ಹಾಗೂ ಸಂಗೀತದ ಪ್ರಚಾರಕರೂ ಆಗಿ ಅಂದಿನ ದಿನದಲ್ಲಿ ಸಂಗೀತಕ್ಕೆ ಸೇವೆ ಸಲ್ಲಿಸಿದ್ದನ್ನು ನಾವು ಗುರುತಿಸಬಹುದಾಗಿದೆ. ಮರಾಠಿಸಂಸ್ಕೃತಿಯಿಂದ ಪ್ರಭಾವಿತವಾದ ಕಾರವಾರದಲ್ಲಿ ದಿ. ಹಳದೀಪುರ್ ಅಲ್ಲದೇ ಗೋವಾದಿಂದ ಬಂದುಹೋಗುವ ಸಂಗೀತ ಪಂಡಿತರುಗಳು ಸಂಗೀತವನ್ನು ಕಲಿಸುತ್ತಿದ್ದರು. ದಿ. ವಾಸುದೇವರಾವ ಹಳದೀಪುರ್ ಎಂಬ ಸಂಗೀತ ವಿದ್ವಾಂಸರು ತಮ್ಮ ಮನೆಗೆ ದೊಡ್ಡ ದೊಡ್ಡ ವಿದ್ವಾಂಸರನ್ನು ಕರೆದು ತಮ್ಮ ಬಂಧುಗಳ, ಸಂಗೀತಾಭಿಮಾನಿಗಳೂ ಸೇರಿದಂತೆ ಆಸಕ್ತರೆಲ್ಲರಿಗೂ ಸಂಗೀತ ಕೇಳಿಸುತ್ತಿದ್ದರುಎಂಬುದು ಈ ಜಿಲ್ಲೆಯ ಜಿಲ್ಲಾಸ್ಥಳದಲ್ಲಿ ಸಂಗೀತದಬೆಳವಣಿಗೆಗೆ ಸಹಾಯಕವಾಯಿತೆನ್ನಬಹುದು. ಹಿಂದಿಚಿತ್ರರಂಗದ ಹಿನ್ನಲೆಗಾಯಕಿ ,ಶ್ರೀಮತಿ ಅನುರಾಧಾ ಪೌಡವಾಲರವರು ಮೂಲತಹ: ಈ ಜಿಲ್ಲೆಯ ಕಾರವಾರದವರು. ಕಾರವಾರದ ಸದಾಶಿವಗಡದಲ್ಲಿರುವ ಬಾಪೂಜೀಡಿಗ್ರಿ ಕಾಲೇಜಿನಲ್ಲಿ ೧೯೬೫ ರಿಂದ ಕಾಲೇಜಿನಲ್ಲಿ ಸೆಂಗೀತವಿಭಾಗ ಆರಂಭವಾದುದು ಇತ್ತೀಚಿನದಿನಗಳಲ್ಲಿ ಸಂಗೀತದಬಗ್ಗೆ ಅಲ್ಲಿ ಸಂಗೀತಪರಿಸರ ನಿರ್ಮಾಣವಾಗಲು ಸಹಾಯಕವಾಗಿದೆ. ಕಾರವಾರ ಅಂಕೋಲಾಗಳಲ್ಲಿ ದಿನಕರ ಕಲಾನಿಕೇತನ

ಅಡಿಟಿಪ್ಪಣಿ: * ಜಿಲ್ಲೆಯ ಹಿರಿಯ ಸಂಗೀತಗಾರರ ಸಂದರ್ಶನದಿಂದ ತಿಳಿದುಕೊಂಡ ಅಂಶ. ಸಂದರ್ಶನ- ಪಂ. ಆರ್.ಟಿ. ಹೆಗಡೆ ಶೀಗೇಹಳ್ಳಿ.

ಈ ಜಿಲ್ಲೆಯ ಬುದ್ಧಿಜೀವಿ, ಮಾಜಿ ಎಂ.ಪಿ.ಹಾಗೂ ಲೇಖಕ ದಿನಕರ ದೇಸಾಯಿಯವರ ಹೆಸರಲ್ಲಿ ಈ ಕಲಾಸಂಸ್ಥೆ ಉತ್ತಮ ಸೇವೆಯನ್ನು ನಾಡಿಗೆ ನೀಡುತ್ತಲಿದೆ. ಇಲ್ಲಿನ ಸಂಗೀತಶಾಲೆಯಲ್ಲಿ ಆರ್.ಪಿ.ಅಸುಂಡಿ ಹಾಗೂ ವಿ.ಜಿ.ಪಾಟೀಲ ಮುಂತಾದದವರ ನೇತ್ರತ್ವದಲ್ಲಿ ಸಂಗೀತಶಾಲೆ ನಡೆಯುತ್ತಿದೆ. ಇಂತಹ ಸಂಗೀತಶಾಲೆಯಿಂದ ಅನೇಕರು ಸಂಗೀತಕಲಿತು ಇಂದು ಸಂಗೀತಗಾರರಾಗಲು ಪ್ರಯತ್ನಿಸುತ್ತಿದ್ದಾರೆ. ಎಲ್ಲರೂ ಸಂಗೀತಗಾರರಾಗದಿದ್ದರೂ ಉತ್ತಮ ಸಂಗೀತಕೇಳುಗ, ಶ್ರೊತೃವಾದರೆ ಅದೇ ಒಂದು ಉತ್ತಮ ಬೆಳವಣಿಗೆಯಾದೀತು. ಅಶ್ಲೀಲ ಚಿತ್ರಗಳು ಮಾದಕದ್ರವ್ಯ ಸೇವನೆ , ಮುಂತಾದ ದುಶ್ಚಟಗಳಿಂದ ಮುಕ್ತವಾಗಲು ಇಂದು ಒಳ್ಳೆಯ ಸಂಸ್ಕಾರ ಹಾಗೂ ಸಂಸ್ಕೃತಿಯನ್ನು ಬೆಳೆಸಬೇಕಾಗಿದೆ. ಇಂದಿನ ಯುವಕರಲ್ಲನೇಕರಿಗೆ ಶಾಸ್ತ್ರೀಯ ಸಂಗೀತದಂತಹ ಉತ್ತಮ ಅಭಿರುಚಿಯನ್ನು ಬೆಳೆಸಿಕೊಳ್ಳಲು ಇಂತಹ ಸಂಗೀತ ಶಾಲೆಗಳು ನೆರವಾಗುತ್ತಿವೆ. ಶಿರ್ಶಿ ಕಾಲೇಜಿನ ನಿವೃತ್ತ ತಬಲಾ ಪ್ರಾಧ್ಯಾಪಕ ದಿಃ ಶ್ರೀ ಎಸ.ಪಿ. ವೆರ್ಣೇಕರ ಅವರು ತಮ್ಮ ಪ್ರಾಧ್ಯಾಪಕ ಹುದ್ದೆಯಿಂದ ನಿವೃತ್ತಿಆದನಂತರ ಕಾರವಾರದಲ್ಲಿ ನೆಲೆಸಿ ಅನೇಕ ಸಂಗೀತಾಸಕ್ತರನ್ನು ತರಬೇತುಗೊಳಿಸುತ್ತಿದ್ದುದು ಇತಿಹಾಸವಾಗಿದೆ. ಹೀಗೆ ಅನೇಕ ಮಹಾನುಭಾವರ ಶ್ರಮದಿಂದ ಜಿಲ್ಲೆಯಲ್ಲಿ ಶಾಸ್ತ್ರೀಯ ಸಂಗೀತ ಬೆಳೆಯಲು ಸಹಾಯಕವಾಯಿತು.

ಶ್ರೀ ಎಸ್. ಪಿ. ವೆರ್ಣೇಕರ್



ಅಧ್ಯಾಯ ೪

ಸಂಗೀತದ ಮೌಲ್ಯ

ಸಾಂಸ್ಕೃತಿಕ ಬೌದ್ಧಿಕ ಹಾಗೂ ಆಧ್ಯಾತ್ಮಿಕ ದೃಷ್ಟಿಯಲ್ಲಿ,ಸಂಗೀತದಲ್ಲಿ ರಸಭಾವ

ಸಂಗೀತದ ಮೌಲ್ಯಗಳು ಸಾಂಸ್ಕೃತಿಕ ಭೌದ್ಧಿಕ ಹಾಗೂ ಆಧ್ಯಾತ್ಮಿಕ ದೃಷ್ಟಿಯಲ್ಲಿ

ಸಂಗೀತ ಒಂದು ಅಂತರ್‌ರಾಷ್ಟ್ರೀಯ ಕಲೆ. ಕೆಲವೇ ದೇಶಗಳಲ್ಲಿ ಶಾಸ್ತ್ರೀಯಸಂಗೀತ ಪದ್ಧತಿಯನ್ನು ರೂಪಿಸಿಕೊಂಡಿದ್ದರೂ ಅತ್ಯಂತ ಹಿಂದುಳಿದ ದೇಶಗಳಲ್ಲೂಸಹ ಅಲ್ಲಿನ ಜನಜೀವನದಲ್ಲಿ ಸಂಗೀತದ ಪ್ರಮುಖ ಪಾತ್ರವನ್ನು ನಾವು ಕಾಣಬಹುದಾಗಿದೆ. ಸಂಗೀತ ಜಾತಿ , ಮತ, ಧರ್ಮ ರಾಷ್ಟ್ರೀಯತೆಗಳ ಎಲ್ಲೆಯನ್ನುಮೀರಿ ಎಲ್ಲರಿಗೂ ಆನಂದವನ್ನುಂಟುಮಾಡುತ್ತದೆ. ಸಂಗೀತವು ಭಾವಭಾಷೆಯಾಗಿದೆ. ಭಾಷೆ ಮತ್ತು ಪ್ರಾಂತೀಯ ಅಡಚಣೆಗಳು ಅದಕ್ಕಿರುವುದಿಲ್ಲ. ಸಂಗೀತ ಮನುಷ್ಯವರ್ಗದವರಿಗಲ್ಲದೆಯೇ ಪ್ರಾಣಿಗಳಿಗೂ, ಪಶು ಪಕ್ಷಿಗಳಿಗೂ ಆನಂದವನ್ನುಂಟುಮಾಡುವ ಮಹಾಕಲೆಯಾಗಿದೆ. ಉತ್ತಮ ಸಂಗೀತಗಾರರು ವಿಶ್ವಕುಟುಂಬಿಗಳು, ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ವ್ಯಕ್ತಿಗಳು. ರಾಜನಿಗೆ ದೇಶದಲ್ಲಿಮಾತ್ರ ಗೌರವವಿದೆ, ಆದರೆ ವಿದ್ವಾಂಸರಿಗೆ ಹೋದೆಡೆಯಲ್ಲೆಲ್ಲಾ ಗೌರವವಿದೆ ಎಂಬ ಪ್ರಸಿದ್ಧ ಹೇಳಿಕೆ ನಿಜವಾಗಿಯೂ ಅಕ್ಷರಶಹ ಸಂಗೀತಗಾರನಿಗೆ ಅನ್ವಯಿಸುತ್ತದೆ. ಒಳ್ಳೆಯ ಸಂಗೀತಕಲಾವಿದ ಬೇರೆಬೇರೆ ಜನಗಳ, ಬೇರೆಬೇರೆ ದೇಶಗಳ ಸಂಗೀತವನ್ನು ಕಲಿಯುವುದರಿಂದ ಆಯಾ ಜನಾಂಗದ ಮನೋಭಾವ ಮತ್ತು ಗುಣಗಳನ್ನು ಅರಿತುಕೊಳ್ಳಬಹುದಾಗಿದೆ. ಶ್ರಮ ಹಾಗೂ ನಿರಂತರ ಸಾಧನೆಯಿಂದ ಮತ್ತು ಶಿಸ್ತಿನಿಂದ ಸಂಗೀತಕಲಾವಿದನು ಒಳ್ಳೆ ಸಾಂಘಿಕ ಧರ್ಮವನ್ನು ಬೆಳೆಸಿಕೊಂಡು ಜನರಲ್ಲಿ ಒಳ್ಳೆಯರೀತಿಯಲ್ಲಿ ನಡೆದುಕೊಳ್ಳುತ್ತಾನೆ. ಕಲಾಪ್ರೇಮಿ ಪ್ರಪಂಚದ ಎಲ್ಲಜನಗಳಲ್ಲಿ ಕಂಡುಬರುವ ಸೌಹಾರ್ದಯುತ ಸಂಬಂಧ, ಆದರ್ಶ, ದೇಶದ ಏಕತೆ ಹಾಗೂ ಸಮಗ್ರತೆಯ ಪ್ರತೀಕವೇ ಆಗಿದೆ. ದ್ವೇಶ, ಅಸೂಯೆ ಮುಂತಾದ ದುಷ್ಟ ಭಾವನೆಗಳಿಗೆ ಉತ್ತಮ ಸಂಗೀತಗಾರನಲ್ಲಿ ಸ್ಥಾನವಿರುವುದಿಲ್ಲ.

ಸಂಗೀತ ಕಲೆಯು ಭೌದ್ಧಿಕವಾಗಿಯೂ ಮನುಷ್ಯನಿಗೆ ಆನಂದವನ್ನುಂಟುಮಾಡುತ್ತದೆ. ಇದರಲ್ಲಿ ಪ್ರೌಢ ವ್ಯಾಸಂಗಕ್ಕೆ ಹೆಚ್ಚಿನಅವಕಾಶಗಳಿವೆ. ಸ್ವರ, ಲಯವೈವಿಧ್ಯಗಳು, ಹೊಸಹೊಸರಾಗಗಳು, ಕ್ಲಿಷ್ಟವಾದತಾಳಗಳು ಮುಂತಾದವುಗಳಲ್ಲಿ ಬೌದ್ಧಿಕಪ್ರಯೋಗ ಮತ್ತು ಅಧ್ಯಯನಗಳು ಬಹಳ ಬೋಧಕಪ್ರಧಾನವಾಗಿರುತ್ತದೆ. ಹೊಸಶೈಲಿಯರಚನೆ ಹೊಸಪಲ್ಲವಿಗಳು ಹೊಸವಾದ್ಯ ಹಾಗೂ ರಾಗದ ಆವಿಷ್ಕಾರ, ರಾಗದಉತ್ಪತ್ತಿ, ಕಾಲನಿಯಮ ಇತ್ಯಾದಿ ವಿಷಯಗಳು ಸಂಗೀತಕಲಾವಿದನಿಗೆ ಉನ್ನತ ಬೌದ್ಧಿಕ ಮಟ್ಟವನ್ನು ಉಂಟುಮಾಡುತ್ತದೆ.

ಸಂಗೀತದ ಮೌಲ್ಯಗಳು

ಭಾರತೀಯಸಂಗೀತವು ಮುಖ್ಯವಾಗಿ ಆಧ್ಯಾತ್ಮಿಕಉನ್ನತಿಗೆ ಒಂದು ಸಾಧನವೆಂದು ಪರಿಗಣಿಸಲಾಗಿದೆ. ಸಂಗೀತದಲ್ಲಿ ವೈದಿಕಗಾನ, ವ್ಯಾಖ್ಯಾಗಾನ ಮತ್ತು ಲೌಕಿಕಗಾನಗಳೆಂಬ ಮೂರು ವಿಧಾನಗಳನ್ನು ಕಾಣಬಹುದು. ಸಾಮಗಾನ, ವೈದಿಕಗಾನವೆಂದೂ, ಋಷಿಪ್ರೊಕ್ತವಾದ ಗದ್ಯಪದ್ಯಾದಿಗಳು, ರಾಮಾಯಣ ಮಾಹಾಭಾರತಗಳು ವ್ಯಾಖ್ಯಾಗಾನವೆಂದೂ, ಆಯಾ ದೇಶಭಾಷೆಗಳಲ್ಲಿ ರಚಿತವಾದ ಸಂಗೀತ ಲೌಕಿಕಗಾನವೆಂದೂ ಹೇಳಲ್ಪಟ್ಟಿವೆ.

*ಗೀತಗಾನೇನ ಯೋಗಸ್ಯಾತ್ ಯೋಗಾದೇವ ಶಿವೈಕ್ಯತಾ |

ಗೀತಜ್ಞೋಯದಿ ಯೋಗೇನ ಸಯಾತಿ ಪರಮೇಶ್ವರಂ ||

...... ಸೂತ ಸಂಹಿತೆ

ಅಂದರೆ ಭಕ್ತಿಯಿಂದ ದೇವತೆಗಳನ್ನು ಕುರಿತು ಗಾನಮಾಡುವವನಿಗೆ ಚಿತ್ತೈಕಾಗ್ರತೆ ಉಂಟಾಗುತ್ತದೆ. ಇಂತಹ ಸಂಗೀತ ಯೋಗವೆನಿಸಿಕೊಳ್ಳುತ್ತದೆ. ಈ ಯೋಗದಿಂದ ಪರಮಾತ್ಮನಲ್ಲಿ ಐಕ್ಯವಾಗಬಹುದು. ಇದೂ ಅಲ್ಲದೇ ಸಾಕ್ಷಾತ ಭಗವಂತನು ಹೇಳಿರುವಂತೆ

ನಾಹಂವಸಾಮಿ ವೈಕುಂಠೇ ನಯೋಗಿಹೃದಯೇರವೌ |

ಮದ್ಭಕ್ತಾ ಯತ್ರಗಾಯಂತಿ ತತ್ರತಿಷ್ಠಾಮಿ ನಾರದ ||

ಅಂದರೆ ನಾನು ವೈಕುಂಠದಲ್ಲಿ ಇಲ್ಲ, ಯೋಗಿಗಳ ಹೃದಯದಲ್ಲೂ ಇಲ್ಲ, ಸೂರ್ಯಮಂಡಲದಲ್ಲೂ ಇಲ್ಲ, ನನ್ನ ಭಕ್ತ ಎಲ್ಲೆಲ್ಲಿ ಗಾನಮಾಡುತ್ತಾನೋ ಅಲ್ಲೆಲ್ಲಾ ನಾನಿರುತ್ತೇನೆ. ಈ ಮಾತು ನಿಜಕ್ಕೂ ಸಂಗೀತದ ಹಿರಿಮೆಯನ್ನು ಬಿಂಬಿಸುತ್ತದೆ.

ತ್ರಿವರ್ಗ ಫಲದಾಸ್ಸಲ್ವೇ ಜ್ಞಾನಯಜ್ಞ ಜಪಾದಯ |

ಏಕಂ ಸಂಗೀತ ವಿಜ್ಞಾನಂ ಚತುರ್ವರ್ಗ ಫಲಪ್ರದಂ ||

ಎಂದು ಶಿವಸಮ್ಮಿತೆಯಲ್ಲಿ ಹೇಳಿರುವಂತೆ ದಾನಯಜ್ಞೋಪಾದಿಗಳು , ತ್ರಿವರ್ಗಫಲವಾದ ಧರ್ಮ , ಅರ್ಥ,

ಅಡಿ ಟಿಪ್ಪಣಿ: * ಸೂತ ಸಂಹಿತೆಯ ಶ್ಲೋಕವನ್ನಾಧರಿಸಿ.......

ಕಾಮಗಳನ್ನು ಮಾತ್ರ ಉಂಟುಮಾಡಿದರೆ ಸಂಗೀತವು ಇವುಗಳ ಜತೆಗೆ ನಾಲ್ಕನೇಯದಾದ ಮೋಕ್ಷವನ್ನೂಸಹ ಕೊಡುತ್ತದೆ. ಎಂದು ಹೇಳಿರುವುದು ಸಂಗೀತಕಲೆಯ ಆಧ್ಯಾತ್ಮಿಕ ಮೌಲ್ಯವನ್ನು ಎತ್ತಿಹಿಡಿಯುತ್ತದೆ.

ಸಂಗೀತದಲ್ಲಿ ರಸಭಾವ

ಸಾಹಿತ್ಯ ಮತ್ತು ಲಲಿತಕಲೆಗಳಲ್ಲಿ ರಸವು ಭಾವವನ್ನುಅವಲಂಬಿಸಿದ್ದು ಸಂಗೀತದಲ್ಲಿ ರಾಗರಸಾಭಿವ್ಯಕ್ತಿಯಲ್ಲಿ ಭಾವವು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ನಮ್ಮ ಸಂಸ್ಕೃತ ಗ್ರಂಥಕಾರರು ಚರ್ವಣ ಮತ್ತು ಅಸ್ವಾಧನ ಶಬ್ದಗಳನ್ನು ರಸದ ಪರ್ಯಾಯವಾಚಕ ಶಬ್ದಗಳೆಂದು ಹೇಳಿದ್ದಾರೆ. ಸಂಗೀತದಲ್ಲಿಯ ಭಾವನೀಯ ಚರ್ವಣದಿಂದ ನಮಗೆ ರಸಸ್ವಾಧನೆ ದೊರಕುತ್ತದೆ.

*ಲೌಕಿಕದಲ್ಲಿ ಭಾವವು ಕೆಲವುಸಲ ಸುಖಮಯವಾಗಿರಬಹುದು. ಆದರೆ ಸಾಹಿತ್ಯ ಹಾಗೂ ಕಲಾಪ್ರಪಂಚದಲ್ಲಿ ಅದು ಯಾವಾಗಲೂ ಆನಂದವನ್ನು ಕೊಡುತ್ತದೆ, ಕರುಣರಸವೂ ಆನಂದವನ್ನೇ ಕೊಡುತ್ತವೆ. ಕರುಣರಸದ ಪ್ರಭಾವದಿಂದ ಕೆಲವುಸಲ ಕಣ್ಣಲ್ಲಿ ನೀರು ಬರಬಹುದು. ಆದರೆ ಆ ಕಣ್ಣೀರು ದುಃಖಾಶ್ರುವಾಗಿರದೆ ಆನಂದಾಶ್ರುವಾಗಿರುತ್ತದೆ. ಇದನ್ನೇ ನಾವು ಪನ್ನೀರು ಎನ್ನುತ್ತೇವೆ. ನಾವು ನಮ್ಮ ನಿತ್ಯಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಸಂತೋಷದಿಂದ ಹರ್ಷ, ದುಃಖದಿಂದ ದುಃಖದೊರೆಯುತ್ತದೆಯಲ್ಲದೇ ಇದಕ್ಕೆ ವ್ಯತಿರಿಕ್ತವಾಗಿ ನಡೆಯುವುದಿಲ್ಲ. ಆದರೆ ಕಲಾಪ್ರಪಂಚದಲ್ಲಿ ಆನಂದವನ್ನುಳಿದು ಇನ್ನಾವ ಪ್ರಾಪಂಚಿಕ ಭಾವನೆಗಳಿಗೂ ಅಲ್ಲಿ ಎಡೆಯಿಲ್ಲ. ಆನಂದವೇ ರಸದ ಮೂಲವಾಗಿದೆ. ದುಃಖಮಯ ಸನ್ನಿವೇಶದಿಂದ ನಮ್ಮ ಮನಸ್ಸು ನೊಂದುಕೊಂಡರೂ ಸಹ ಸಂಗೀತದಲ್ಲಿಯ ಕರುಣರಸವನ್ನು ಅನುಭವಿಸಿದಾಗ ಆನಂದದ ರಸಗಡಲಲ್ಲಿ ನಾವು ತೇಲಿಹೋಗುತ್ತೇವೆ.

ರಸಾನುಭವಕ್ಕೆ ಹೃದಯಸಂವಾದ ಅಥವಾ ತನ್ಮಯತೆಯೂ ಅತ್ಯವಶ್ಯಕಗುಣವಾಗಿದ್ದು ಇದನ್ನು ಸಾಧಿಸಲಾರದವನು ರಸಾನುಭವವನ್ನು ರಸದ ಆನಂದವನ್ನು ಸಾಧಿಸಲಾರನು ಮತ್ತು ಪಡೆಯಲಾರನು.

ಅಡಿಟಿಪ್ಪಣಿ : * ಸಂಗೀತ ಶಾಸ್ತ್ರದರ್ಪಣ ಲೇ. ಪ್ರೊ. ಎ.ಯು. ಪಾಟೀಲ, ಅಧ್ಯಾಯ ೧೫ ಪುಟ ೧೨೫

ಸಂಗೀತದಲ್ಲಿ ಮೂಲಭೂತ ರಸಭಾವಗಳು

ಸಂಗೀತದಲ್ಲಿ ರಾಗಗಳ ರಚನೆಗೆ ರಸಾನುಭೂತಿಯೂ ಮೂಲಕಾರಣವಾಗಿದೆ. ಸಂಗೀತವು ಭಾವಭಾಷೆಯಾಗಿದೆ. ನಮ್ಮ ಮನಸ್ಸಿನ ಚಿತ್ತವೃತ್ತಿಯನ್ನೇ ಭಾವವೆಂದು ಹೇಳಬಹುದಾಗಿದೆ. ಈ ಭಾವವನ್ನು ೨ ತೆರನಾಗಿ ವಿಂಗಡಿಸಲಾಗಿದೆ. ೧) ಸ್ಥಾಯಿಭಾವ ೨) ವ್ಯಭಿಚಾರಿ ಭಾವ ಅಥವಾ ಸಂಚಾರೀಭಾವ.

೧. **ಸ್ಥಾಯೀಭಾವ :** ಶಿಲಾಲಿಪಿಯಂತೆ ನಮ್ಮ ಮನಸ್ಸಿನಲ್ಲಿ ನಿರಂತರವಾಗಿ ನಿಲ್ಲಬಲ್ಲ ಸುಸ್ಥಿರಭಾವಗಳಿಗೆ ಸ್ಥಾಯೀಭಾವವೆಂದು ಕರೆಯಬಹುದು.

೨. **ವ್ಯಭಿಚಾರಿ ಅಥವಾ ಸಂಚಾರೀಭಾವ :** ತಾತ್ಕಾಲಿಕವಾಗಿ ನೀರಮೇಲಣ ತೆರೆಗಳಂತೆ ಬಂದುಹೋಗುವ ಅನಿಯಮಿತ ಭಾವಗಳಿಗೆ ವ್ಯಬಿಚಾರಿಭಾವ ಎಂದು ಕರೆಯಬಹುದು.

*೧ ಸಾಹಿತ್ಯದಲ್ಲಿ ನವರಸಗಳಿಗೆ ಒಂದಕ್ಕೊಂದು ಪ್ರತ್ಯೇಕವಾದ ಸ್ಥಾನಮಾನಗಳಿವೆ. ಸಂಗೀತದಲ್ಲಿ ಶೃಂಗಾರ, ವೀರ , ಕರುಣ ಮತ್ತು ಶಾಂತರಸಗಳು ಮಾತ್ರ ಪ್ರಧಾನರಸಗಳಾಗಿ, ಇನ್ನುಳಿದ ರಸಗಳು ಈ ಪ್ರಧಾನ ರಸಾಂತರ್ಗತವಾಗಿಯೇ ಬೆಳಗುವವು.

*೨ ಮನಸ್ಸಿನ ಮೇಲಿನ ರಸಗಳ ಪರಿಣಾಮವನ್ನು ಕುರಿತು ವಿವೇಚಿಸಿ ರಸಗಳನ್ನು ಪ್ರಮುಖವಾಗಿ ಎರಡು ಗುಂಪುಗಳಲ್ಲಿ ವಿಂಗಡಿಸಬಹುದಾಗಿದೆ.

೧. ಉತ್ಸಾಹಕರ ೨. ನಿರುತ್ಸಾಹಕರ

ಶೃಂಗಾರ , ವೀರ , ಹಾಸ್ಯ ಮತ್ತು ಶಾಂತರಸಗಳು ಮನವನ್ನು ಗೆಲುವಾಗಿರಿಸಿ ಮನೋಲ್ಲಾಸಕಾರಿಯಾದ ಪ್ರಭಾವಶಾಲೀ ರಸಗಳಾಗಿವೆ. ಇನ್ನುಳಿದ ರಸಗಳು ಇವುಗಳಿಗೆ ವ್ಯತಿರಿಕ್ತವಾಗಿವೆ.

ಅಡಿ ಟಿಪ್ಪಣಿ: *೧ ಸಂಗೀತ ಶಾಸ್ತ್ರ ದರ್ಪಣ ಲೇ. ಪ್ರೊ. ಎ.ಯು. ಪಾಟೀಲ, ಅಧ್ಯಾಯ 15,

*೨ ಸಂಗೀತ ಶಾಸ್ತ್ರಕ್ಕೆ ಅನುಕೂಲಕ್ಕಾಗಿ ಮಾತ್ರ ಈ ರೀತಿ ವಿಂಗಡಣೆ ಮಾಡಲಾಗಿದೆ. ಲೇಖಕರ ವಿವರಣೆ

ಸಂಗೀತದಲ್ಲಿಯ ಸ್ವರಗಳ ಸಮೂಹದೊಂದಿಗೆ ರಸಗಳೂ ಅಂತರ್ಗತವಾಗಿದೆ.

ಸ್ವರಗಳು	ರಸಗಳು
ಷಡ್ಜ	ವೀರ
ರಿಶಭ	ಅದ್ಭುತ
ಗಾಂಧಾರ	ರೌದ್ರ
ಮಧ್ಯಮ , ಪಂಚಮ	ಹಾಸ್ಯ , ಶೃಂಗಾರ
ದೈವತ , ನಿಶಾದ	ಭೀಬತ್ಸ ಮತ್ತು ಕರುಣ.

ಸಂಗೀತದಲ್ಲಿಯ ಸಪ್ತಸ್ವರಗಳನ್ನು ಅವುಗಳ ರಸಭಾವಗಳೊಂದಿಗೆ ನಮ್ಮ ಪುರಾತನರು ಈ ಮೇಲಿನಂತೆ ಸಂಯೋಜಿಸಿದ್ದಾರೆ. ರಸಭಾವಗಳಿಗೆ ಭಿನ್ನಾಭಿಪ್ರಾಯಮಂಡಿಸುವ ವಿದ್ವಾಂಸರೂ ಇದ್ದಾರೆ.

ಹಿಂದುಸ್ಥಾನೀ ಸಂಗೀತದ ಸ್ವರಗಳ ಭಾವನೆ

ಹಿಂದುಸ್ತಾನೀ ಸಂಗೀತದ ಏಳೂ ಸ್ವರಗಳು ಒಂದೊಂದು ರಸಪೋಷಕ ಹಾಗೂ ಭಾವನೆಗಳನ್ನು ವ್ಯಕ್ತಪಡಿಸುವಂತಿದ್ದು ಅವುಗಳನ್ನು ಈ ಕೆಳಗಿನಂತೆ ವಿವರಿಸಬಹುದು.

*೧) ಷಡ್ಜ :- ಷಣ್ಣಾಂ ಸ್ವರಾಣಾಂ ಜನಕಃ ಷಡ್ಜಿರ್ವಾ ಜನ್ಯತೇ ಸ್ವರೈಃ| ಎಂಬಂತೆ ಷಡ್ಜವು ಸಪ್ತಸ್ವರಗಳಲ್ಲಿಯ ಇನ್ನುಳಿದ ಆರು ಸ್ವರಗಳಿಗೆ ಮೂಲಾಧಾರವಾಗಿದೆ. ಷಡ್ಜ ಸ್ವರದ ಸ್ಥಾನಮಾನದ ಮೇಲೆಯೇ ಇನ್ನುಳಿದ ಸ್ವರಗಳ ಸ್ಥಾನಮಾನಗಳು ನಿರ್ಧರಿಸಲ್ಪಡುತ್ತದೆ. ಈ ಸ್ವರವು ಅಚಲವಾಗಿದ್ದು ಸರ್ವಸಂಗಪರಿತ್ಯಾಗಿಯಾಗಿ ಯೋಗ ಸಮಾದಿಯಲ್ಲಿ ಮಗ್ನವಾದ ಯೋಗಿಯಸ್ಥಾನದಲ್ಲಿದೆ. ವಾಸ್ತವಿಕವಾಗಿ ಷಡ್ಜವು ಗಂಭೀರ ಪ್ರಕೃತಿಯ ಸ್ವರವಾಗಿದ್ದು ಶಾಂತರಸ ಪ್ರತಿಪಾದಕವಾಗಿದೆ.

೨) **ಕೋಮಲ ರಿಷಭ :** ಈ ಸ್ವರವು ತಾಮಸ ಸ್ವಭಾವದಿದ್ದು ಬಸವನ ಹುಳುವಿನಂತೆ ಮಂದಗಾಮಿಯಾಗಿ ಮನೋವೃತ್ತಿಯಲ್ಲಿ ವ್ಯಾಕುಲಿತ ನಿರುತ್ಸಾಹದಿ ಮತ್ತು ಅರ್ಧನಿದ್ರಾವಸ್ಥೆಯ ಮನೋಭಾವ ನಿರೂಪಣಾತ್ಮಕವಾಗಿದ್ದು ಕರುಣ ಮತ್ತು ಶೋಕರಸ ಪ್ರಬೋಧಕವಾಗಿದೆ.

ಅಡಿ ಟಿಪ್ಪಣಿ: * ಸಂಗೀತ ಶಾಸ್ತ್ರ ದರ್ಪಣ ಲೆ. ಪ್ರೊ. ಎ.ಯು. ಪಾಟೀಲ, ಅಧ್ಯಾಯ 15, ಹಿಂದುಸ್ತಾನಿ ಸಂಗೀತದ ಸ್ವರಗಳ ಭಾವನೆಗಳನ್ನು ವಿವರಿಸುತ್ತ......

೩) **ಶುದ್ಧರಿಷಭ :-** ಈ ಸ್ವರವು ಪ್ರಜ್ಞೆಯಮನೋಭಾವವನ್ನು ಸೂಚಿಸುತ್ತದೆಯಾದರೂ ಇಚ್ಛೆಗೆ ವಿರೋಧವಾಗಿ ನಿದ್ರಾಬಂಗವಾದಾಗ ಎಚ್ಚೆತ್ತು ಕಣ್ಣುಜ್ಜಿಕೊಳ್ಳುತ್ತ ಆಕಳಿಸುತ್ತಿರುವ ಮನೋಭಾವಸೂಚಕ ಸ್ವರವಾಗಿದ್ದು ವೀರರಸ ಪ್ರಬೋದಕವಾಗಿದೆ.

೪) **ಕೋಮಲಗಂಧಾರ :-** ಇದು ನಿಸ್ಸಹಾಯಕತೆಯ ದಿಗ್ಭ್ರಮೆಗೊಂಡ ಲಲನೆಯ ಕನಿಕರದ ಅವಸ್ಥಾ ನಿರೂಪಣೆಯ ಸ್ವರವಾಗಿದೆ. ಕರುಣ ಶಾಂತರಸಗಳನ್ನು ಪೋಷಿಸುತ್ತದೆ.

೫) **ಶುದ್ಧಗಾಂಧಾರ :-** ಈಸ್ವರ ಯಾವಾಗಲೂ ಚಿಕಿತ್ಸಕಮನೋಭಾವದ ಉತ್ಸಾಹಕರ ಮತ್ತು ಸರಸ ಮನೋವೃತ್ತಿಯದಾಗಿದೆ. ಇದರ ಪ್ರಯೋಗದಲ್ಲಿ ಇಡೀ ವಾತಾವರಣ ಗೆಲುವಾಗಿ ಮನೋಲ್ಲಾಸಕಾರಕವಾಗುತ್ತದೆ. ಇದು ವೀರ ಮತ್ತು ಕರುಣಾರಸಗಳನ್ನು ವ್ಯಕ್ತಪಡಿಸುತ್ತದೆ.

೬) **ಶುದ್ಧ ಮಧ್ಯಮ : -** ಉದಾತ್ತ , ಗಂಧಾರ ಮತ್ತು ಸ್ಥಿಮಿತ ಮನೋಭಾವದ ಶಕ್ತಿಯುತ ಸ್ವರವಾಗಿದೆ. ಇದು ಶೃಂಗಾರ ಮತ್ತು ಹಾಸ್ಯರಸಗಳನ್ನು ಪರಿಪೋಷಿಸುವ ಸ್ವರವಾಗಿದೆ.

೭) **ತೀವ್ರ ಮಧ್ಯಮ :** ಇದು ಭಾವನಾತ್ಮಕ ಸ್ವರವಾಗಿದ್ದು ಸ್ವಭಾವದಿಂದ ಚಂಚಲವಾಗಿದೆ. ಇದು ಶ್ರಂಗಾರ ಹಾಗೂ ಹಾಸ್ಯ ರಸವನ್ನು ವ್ಯಕ್ತಪಡಿಸುತ್ತದೆ.

೮) **ಪಂಚಮ:-** ಇದು ಸದಾ ಷಡ್ಜದ ಸ್ನೇಹಿಯಾಗಿದ್ದು ಸಪ್ತ ಸ್ವರಗಳ ಗೃಹವನ್ನಲಂಕರಿಸುವ ಗೃಹಿಣಿಯಂತಿದ್ದು ಎಲ್ಲ ಸ್ವರಗಳಿಗೂ ಆಶ್ರಯದಾತೆಯಂತಿದೆ. ಸ್ವಭಾವದಿಂದ ಪ್ರಸನ್ನಾತ್ಮಕವಾಗಿದ್ದು, ಶಾಂತರಸ ಪರಿಪೋಷಕ ಸ್ವರವಾಗಿದೆ.

೯) **ಕೋಮಲ ದೈವತ :-** ಈ ಸ್ವರವು ದುಃಖ ಹಾಗೂ ಕರುಣರಸ ಪರಿಪೋಷಕ ಸ್ವರವಾಗಿದೆ. ದುಃಖತಪ್ತ ಹೃದಯಿಗಳ ಮನೋಭಾವವನ್ನು ಈ ಸ್ವರವು ಪರಿಣಾಮಕಾರಕವಾಗಿ ವ್ಯಕ್ತಮಾಡಬಲ್ಲದು.

೧೦) **ಶುದ್ಧ ದೈವತ :** ಸ್ವಭಾವದಿಂದ ಕ್ರೂರ,ಸ್ವಾರ್ಥಮಾರ್ಗ , ಕಾಮುಕತೆಯ ಮನೋಧರ್ಮದ ಸ್ವರವಾಗಿದೆ.

೧೧) **ಕೋಮಲ ನಿಷಾದ:** ಈ ಸ್ವರವು ಸ್ವಭಾವದಿಂದ ಶಾಂತ ಮತ್ತು ವಾತ್ಸಲ್ಯ ಪೂರ್ಣವಾಗಿದೆ. ಈ ಸ್ವರವು ಕರುಣ , ಶ್ರಂಗಾರ ಆನಂದದ ರಸಗಳಲ್ಲಿ ಸಖ್ಯಭಾವವನ್ನು ತೋರುತ್ತದೆ.

೧೨) **ತೀವ್ರ ನಿಷಾದ:** ಇದು ಹರಿತ ಮನೋಭಾವದ ಸ್ವರವಾಗಿದೆ. ಈ ಸ್ವರವು ಕೇಳುಗರಲ್ಲಿ ಹರಿತಗೊಂಡು ಅವರ ಶ್ರವಣೇಂದ್ರಿಯಗಳು ತಾರಷಡ್ಜಕ್ಕೆ ಹಾತೊರೆಯುವಂತೆ ಮಾಡುತ್ತದೆ.

೧೩) **ತಾರಷಡ್ಜ :** ಈ ಸ್ವರದ ಪ್ರಯೋಗದಲ್ಲಿ ಷಡ್ಜವು ತನ್ನ ಮೂಲಸ್ಥಾನದ ಎರಡುಪಟ್ಟು ಸ್ಥಾನದಲ್ಲಿ ತಿರುಗುತ್ತ ಒಂದುಸಪ್ತಕದ ಸಮಾಪ್ತಿಯನ್ನು ಸೂಚಿಸುತ್ತದೆ. ತಾರಷಡ್ಜದ ಪ್ರಯೋಗದಿಂದ ರಾಗವು ತನ್ನ ರಸಭಾವದೊಂದಿಗೆ ಚಿಮ್ಮಿ ತನ್ನ ಸ್ವರೂಪದ ಸಮಗ್ರತೆಯಲ್ಲಿ ಕೇಳುಗರನ್ನು ಸೆರೆಹಿಡಿದು ರಾಗ ರಸಭಾವದಲ್ಲಿ ಅವರನ್ನು ಮೈಮರೆಯುವಂತೆ ಮಾಡುತ್ತದೆ.

ನಮ್ಮ ಪುರಾತನ ಸಂಗೀತಶಾಸ್ತ್ರಕಾರರು ಈ ಸ್ವರಗಳ ಸ್ವಭಾವ ಮತ್ತು ಗುಣಧರ್ಮಗಳನ್ನು ಶಾಸ್ತ್ರೀಯವಾಗಿ , ಕೂಲಂಕುಶವಾಗಿ ಪರಿಶೀಲಿಸಿ, ಅವುಗಳ ಭಾವ ಹಾಗೂ ರಸಗಳನ್ನು ಕುರಿತು ಈ ಮೇಲಿನಂತೆ ಹೇಳಿದ್ದಾರೆ. ಶಾಸ್ತ್ರೀಯ ಸಂಗೀತದ ಸಂಶೋಧನಾತ್ಮಕ ಅಧ್ಯಯನಕ್ಕೆ ಹಿಂದುಸ್ಥಾನೀಸಂಗೀತದ ಸ್ವರಗಳು ವ್ಯಕ್ತಪಡಿಸುವ ಭಾವನೆ ಸಹಾಯಕವಾಗಿವೆ. ರಾಗದ, ಸ್ವರದ ಶುದ್ಧತೆಯನ್ನು ಕಾಪಾಡಿಕೊಂಡು ಬಂದ ಚತುರ ಗಾಯಕರು ಈ ಸ್ವರಭಾವಗಳನ್ನು ಅನುಸರಿಸಿ ರಾಗವನ್ನು ಅಭಿವ್ಯಕ್ತಪಡಿಸುತ್ತಾರೆ. ಶುದ್ಧ ಶಾಸ್ತ್ರೀಯಸಂಗೀತವನ್ನು ಆಲಿಸಿ ಅವುಗಳು ವ್ಯಕ್ತಪಡಿಸುವ ಭಾವನೆಯನ್ನು ಚಿಕಿತ್ಸಾತ್ಮಕವಾಗಿ ಪರಿಶೀಲಿಸಿದಾಗ ಮಾತ್ರ ಈ ರಾಗರಸಭಾವಗಳು ವ್ಯಕ್ತಪಡಿಸುವ ಭಾವನೆಯನ್ನು ಮೇಲಿನಂತೆ ಅರ್ಥೈಸಬಹುದಾಗಿದೆ.

ಅಧ್ಯಾಯ ೫

ಉತ್ತರಕನ್ನಡ ಜಿಲ್ಲೆಯ ಸಾಂಸ್ಕೃತಿಕ ಪರಿಸರ

ಉತ್ತರಕನ್ನಡ ಜಿಲ್ಲೆಯ ಸಾಂಸ್ಕ್ರತಿಕ ಪರಿಸರ

ಉತ್ತರಕನ್ನಡ ಕಲೆಯ ಬೀಡು. ಅನಾದಿಕಾಲದಿಂದಲೂ ಹರಿದುಬಂದ ಬದುಕಿನ ಸಾಂಸ್ಕೃತಿಕ ನದಿ, ಜನರ ನಡೆ, ನುಡಿ ಸುಖಸಂತೋಷ ಸಂಸ್ಕಾರಗಳಿಗೆ ನೀರೆರೆದು ಪೋಷಿಸಿದ್ದು ಇಲ್ಲಿನ ಕಲೆ ಹಾಗೂ ಸಂಸ್ಕೃತಿ. ಜನಪದ ಸರ್ವಕಲೆಗಳ ತಾಯಿಬೇರು. ಆಧುನಿಕ ಮಾನವನಲ್ಲಿ ಆದಿ ಮಾನವತನ ಸುಪ್ತವಾಗಿರುವಂತೆ ಆಧುನಿಕ ಕಲೆ, ವಿಜ್ಞಾನ, ತಾಂತ್ರಿಕ ಜ್ಞಾನಗಳಿಗೆ ಜಾನಪದವೇ ಸುಪ್ತ ಚೈತನ್ಯವಾಗಿದೆ. ಮನುಷ್ಯ ಹುಟ್ಟಿದಾಗಲೇ ಎಲ್ಲವನ್ನು ಕಲಿಯಲಿಲ್ಲ. ಚಿಕ್ಕ ಹಸುಳೆ ಹಸಿವೆಯಾದಾಗ ಸರಾಗವಾಗಿ ಅಳುತ್ತದೆ. ಹೊಟ್ಟೆ ತುಂಬಿದಾಗ ಆನಂದದಿಂದ ಆಲಾಪಿಸುತ್ತದೆ. ಕೈಕಾಲನ್ನು ಕುಪ್ಪಳಿಸಿ ನರ್ತಿಸುತ್ತದೆ. ಹೀಗೆ ಮಾನವನಲ್ಲಿ ಸಂಗೀತ, ಗಾಯನ ನರ್ತನ ಹಸುಳೆಯಿದ್ದಾಗಲೇ ಪ್ರಾರಂಭವಾಗಿ ಬೆಳೆಯುತ್ತಾ ಅದು ಇನ್ನೂ ಪ್ರಭಲವಾಯಿತು. ಕುಣಿತವೇ ಜಾನಪದ ಕಲೆಯಲ್ಲಿ ಅತಿಮೊದಲಿನದು ಎನ್ನಬಹುದು. ಆಂಗಿಕಾಬಿನಯದ ಹಿನ್ನೆಲೆಯಲ್ಲಿ ಕಾಕು- ಕೇಕೆ ಮಾತು ಮೊಳಕೆಯೊಡೆಯಿತು. ಸಂತೋಷ ಇಲ್ಲವೇ ದುಃಖ ಅತಿಯಾದಾಗ ಮಾತು ಹಾಡಿನ ರೂಪದಲ್ಲಿ ಹೊಮ್ಮುತ್ತದೆ. ಇದು ಪ್ರಕೃತಿ ಸಹಜಗುಣ. ಭಾವದ ಲಯಕ್ಕೆ ಅನುಗುಣವಾಗಿ ರಾಗ-ತಾಳಗಳು ಹುಟ್ಟಿಕೊಂಡವು. ಇವುಗಳನ್ನು ಅನುಸರಿಸಿ ನಿಸರ್ಗವನ್ನು ಪ್ರಾಣಿಸಂಕುಲವನ್ನು ಅಣುಕಿಸಿ ಅನುಕರಿಸಿ, ಕುಣಿತಗಳು ಬೆಳೆಯಿತು. ಈ ಕುಣಿತಗಳೆಲ್ಲ ಮೊದಲಿಗೆ ಆಟವೆಂದೆನಿಸಿಕೊಂಡಿತು. ಅನುಕರಣೆ ಕಲೆಯ ಗುಣ.

ಜನಸಾಮಾನ್ಯರ ಬಾಯಿಂದ ಬಾಯಿಗೆ ಬಂದದ್ದೇ ಜಾನಪದ. ಜಾನಪದ ಕಲೆಗಳಲ್ಲಿ ದೇವತಾರಾಧನೆಗೆಂದು ಜನಿಸಿದವು ಹಲವು , ಮನರಂಜನೆಗೆಂದು ಹುಟ್ಟಿದವು ಕೆಲವು , ಮತ್ತೆ ಕೆಲವು ನಿತ್ಯಜೀವನದ ಶ್ರಮ ನಿವಾರಣೆಗಾಗಿ ರೂಪಿಸಿಕೊಂಡವು. ಇನ್ನು ಕೆಲವು ಕಲೆಗಳು ಉಪಜೀವನ ದಾರಿಯನ್ನು ಅನುಸರಿಸಿ ಬಂದವುಗಳಾಗಿವೆ. ಕಲೆಯು ದೇವತಾರ್ಚನೆಯ ಅಂಗವಾಗಿ ಮೊದಲು ಕುಣಿತ ಹಾಡು ಸಾಹಿತ್ಯಗಳು ರೂಪುಗೊಂಡು ನಂತರ ಶಿಷ್ಟಕಲೆಗಳಾಗಿ ಅವು ಬೆಳೆದವು. ಶಾಸ್ತ್ರೀಯ ಸಂಗೀತ, ಸಾಹಿತ್ಯ ನರ್ತನಗಳಿಗೆಲ್ಲ ತಾಯಿಬೇರು ಅಲ್ಲಿನ ಪ್ರದೇಶದ ಜಾನಪದವೇ ಎನ್ನಬೇಕು. ಕಲೆಗಳು ಆ ಆ ಪ್ರದೇಶದಿಂದ ಜೀವತಳೆದು ಮುಂದೆ ಶಾಸ್ತ್ರೀಯ ವಿನ್ಯಾಸ ಕಟ್ಟುಗಳಿಗೆ ಒಳಪಟ್ಟು ಶಾಸ್ತ್ರೀಯ ಕಲೆಗಳಾದವು. ಕಲೆ, ಸಂಸ್ಕೃತಿ, ಬದುಕು ಇವೆಲ್ಲ

ಒಂದೊಂದು ಪ್ರದೇಶದ ಜನರ, ನಡೆ-ನುಡಿ, ಪರಿಸರ, ಬಾಳಿನ ಕ್ರಮ ಸಂಪ್ರದಾಯಗಳು ಒಂದೊಂದು ಬಗೆಯಾಗಿರುತ್ತವೆ. ಅದಕ್ಕನುಸರಿಸಿ ಅವರ ಸಾಹಿತ್ಯ ಸಂಗೀತ, ನೃತ್ಯಗಳ ವಿಧಾನ ಸಂಪ್ರದಾಯಗಳೂ ಬೇರೆ ಬೇರೆಯಾಗುವವು. ಅಲ್ಲಿಯ ಸಂಗೀತ ಪರಿಕರ , ಕುಣಿತದ ವೈಖರಿ, ಉಡಿಗೆ-ತೊಡಿಗೆ, ಆಚಾರ-ವಿಚಾರ, ವ್ಯವಹಾರಗಳಿಗನುಗುಣವಾಗಿ ಕಲೆ ಬೆಳೆಯುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಂಸ್ಕೃತಿಕ ಪರಿಸರ ನಿರ್ಮಾಣವಾಗಲು ಇಲ್ಲಿನ ಅನೇಕ ಜನಪದ ನೃತ್ಯ, ಸಂಗೀತ ಮುಂತಾದವುಗಳು ಸಹಾಯಕವಾದವು. ಇವುಗಳಲ್ಲಿ ಕೆಲವನ್ನು ಇಲ್ಲಿ ವಿವರಿಸಲಾಗಿದೆ.

೧. ಗುಮಟೆಪಾಂಗು :- ಈ ಜಿಲ್ಲೆಯ ಒಂದು ವಿಶೇಷವಾದ್ಯ ಗುಮಟೆ. ಗುಮಟೆಯನ್ನು ಬಾರಿಸಿ ಗುಮಟೆಯ ಗತ್ತಿನಲ್ಲಿ ಗಂಡಸರು ಹೇಳುವ ಪದಗಳು ಈ ಜಿಲ್ಲೆಯಲ್ಲಿ ವಿಫಲವಾಗಿದೆ. ಎರಡೂವರೆಯಿಂದ ಮೂರು ಅಡಿ ಉದ್ದವಾಗಿರುವ ಹೂಜಿ ಆಕಾರದ ಎರಡೂ ಬದಿಗಳಲ್ಲಿ ಬಾಯಿತೆರೆದಿರುವ ವಾದ್ಯವಾದ ಇದರ ರಚನೆ ಮನೋಹರವಾಗಿದೆ. ಗುಮಟೆ ಭಾರಿಸಿಕೊಂಡು ಪದಹೇಳುವಮೇಳದಲ್ಲಿ ಒಬ್ಬಹೇಳಿದ ಪದದಸಾಲನ್ನು ಇನ್ನುಳಿದವರು ಹಾಡುತ್ತಾರೆ. ಅಂಕೋಲಾ ಮತ್ತು ಗೋಕರ್ಣ ಸೀಮೆಯಲ್ಲಿಯ ಗುಮಟೆ ಮೇಳದಲ್ಲಿ 'ಕೂಡ' ಎಂಬವನೊಬ್ಬ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಗುಮಟೆಯವರ ಎದುರಿಗೆ ಚಕ್ರಾಕಾರದಲ್ಲಿ ಸುತ್ತುತ್ತ ಮೇಳದವರಿಗೆ ಉತ್ಸಾಹ ತುಂಬಲು ಶಹಬಾಸ್ ಹೇಳುತ್ತ ಕುಣಿಯುತ್ತಾನೆ.

* ಉತ್ತರಕನ್ನಡ ಜಿಲ್ಲೆಯ ಘಟ್ಟದಕೆಳಗಿನ ತಾಲೂಕುಗಳಲ್ಲಿ ಹಳ್ಳೇರ್, ಮುಕ್ರಿ, ಅಂಬಿಗ, ಕುಮಾರಪಂತ್, ನಾಮಧಾರಿ, ಹರಿಕಂತ್ರ, ಉಪ್ಪಾರ ವಿಶೇಷವಾಗಿ ಹಾಲಕ್ಕಿಒಕ್ಕಲಿಗರಲ್ಲಿ ಗುಮಟೆಪದ ಹೇಳುವ ಸಂಪ್ರದಾಯವಿದೆ. ಘಟ್ಟದ ತಾಲೂಕಿನಲ್ಲಿ ವಾಸಿಸುವ ಕುಣುಬಿ ಹಾಗೂ ಸಿದ್ದಿ ಜನಾಂಗದವರು ಗುಮಟೆಬಾರಿಸುತ್ತಾರೆ. ಈ ಗಮಟೆ ಬಾರಿಸುವಾಗ ಅಂಬಿಗರ ಕನ್ಯೆಯನ್ನು ವಿನೋದದಿಂದ ಮಾತನಾಡಿಸುವ ಒಂಬು ಪದ ಹೀಗಿದ್ದು ವಿನೋದವಾಗಿದೆ.

ಅಡಿಟಿಪ್ಪಣಿ: * ಉತ್ತರಕನ್ನಡ ಜಿಲ್ಲೆಯ ಜನಪದಕಲೆಗಳ ಲೇಖನವನ್ನಾಧರಿಸಿ......

*೧ ಸಾಣೆಕಟ್ಟೆಯ ಶಣ್ಣ ತಂಗಿ ಮಗುವೆ

ಶೆಟುಲಿ ತಂದಿಯೇನೆ?

ಹಾಸುಗಲ್ಲಮನೆ ಗಾಳಹಾಕುವನು

ನಿನ್ನ ಗಂಡನಾಗುನೇನೆ ?

ಕುದುರೆ ಹಳ್ಳದಲಿ ಜಿಗ್ಗ ಮಾಡುವಳು

ಅತ್ತೆಯಾಗುಳೇನೆ ?

ನಾಗರಬೈಲಲಿ ದನಕಾಯುವನು

ಮಾವನಾಗುನೇನೆ ?

ಅವರದೇ ಆದ ಗ್ರಾಮ್ಯ ಭಾಷೆಗಳಲ್ಲಿರುವ ಇಂತಹ ಪದ್ಯಗಳಿಗೆ ಯಾವದೇ ಶಾಸ್ತ್ರೀಯ ಕಟ್ಟಳೆಗಳು ಇರುವದಿಲ್ಲ. ಬಾಯಿಂದ ಬಾಯಿಗೆ ಒಬ್ಬರಿಂದ ಒಬ್ಬರಿಗೆ ಬಳುವಳಿಯಾಗಿ ಬಂದಿರುವ ಇಂತಹ ಪದ್ಯಗಳು ಅರ್ಥಗರ್ಭಿತವಾಗಿರುತ್ತವೆ. ಬಡತನದ ಗೋಳನ್ನು ತೋಡಿಕೊಳ್ಳುವ ಇನ್ನೊಂದು ಪದ ಹೀಗಿದೆ.

*೨ ಬಡವರ ಗೋಳು ಬಾಳಟ್ಟಾಯ್ತು ತಂಗಿ ತಂಗಿ |

ಭತ್ತದ ಚೀಲ ಲೇವಿಗೋಯ್ತು ತಂಗಿ ತಂಗಿ |

ಅಂಗ್ಡಿ ಅಕ್ಕಿ ತುಟ್ಟಿಯಾಯ್ತು ತಂಗಿ ತಂಗಿ|

ಅನ್ನದ ಬಟ್ಲಿಗೆ ಕಂಟ್ರೋಲಾಯ್ತು ತಂಗಿ ತಂಗಿ|

ಸಾವ್ಕಾರರಲ್ಲಿ ಸವಲತ್ತಿಲ್ಲ ತಂಗಿ ತಂಗಿ|

ಮಕ್ಕ್ಳು-ಮರಿಗೆ ಉಪವಾಸಲ್ಲೆ ತಂಗಿ ತಂಗಿ|

ಒಡೆದಿರ್ ಮಕ್ಕಿಗೆ ಹೋಳ್ಗಿತುಪ್ಪ ತಂಗಿ ತಂಗಿ|

ಮುಕ್ರಿರ್ ಮಕ್ಳಿಗೆ ಹಳ್ಳದ ನೀರು ತಂಗಿ ತಂಗಿ|

ಅಡಿಟಿಪ್ಪಣಿ: *೧ ಜಿಲ್ಲೆಯ ಹಾಲಕ್ಕಿ ಒಕ್ಕಲಿಗ ಕಲಾಕಾರರಿಂದ ಸಂಗ್ರಹಿಸಿದ್ದು
*೨ ಜನಪದ ವಿದ್ವಾಂಸರಿಂದ ಸಂಗ್ರಹಿಸಿದ್ದು

ಹೀಗೆ ಸುತ್ತಲಿನ ಜಾತಿ ಜನಾಂಗಗಳ ನೀತಿ, ರೀತಿ, ಶೀಲ-ಸಂಸ್ಕಾರಗಳ ಬಗೆಗೆ ಹೇಳುವ ಗಮಟೆ ಪದಗಳು ಬಾಳಿನಲ್ಲಿ ಎಲ್ಲವೂ ಚೆಂದವಾಗಿ ಸರಿಯಾಗಿ ಇರಬೇಕೆಂಬುದು ಈ ಪದಗಳ ಆಶಯ.

* ಉಲಿಯು ಇಲ್ಲದ ಗುಮಟೆ ಎಟ್ಟು ಬಾರ್ಚಿದರೇನು?

ಅರ್ಥವಿಲ್ಲದ ಪದವ ಎಟ್ಟು ಹೇಳಿದರೇನು?

ಗೆಜ್ಜೆ ಇಲ್ಲದ ಕುಣಿತ ಎಟ್ಟು ಕುಣಿದರೇನು?

ಗೌಡರಿಲ್ಲದ ಕೂಟ ಎಟ್ಟು ಕೂಡಿದರೇನು?

ಗುಮಟೆಯವರು ಈ ಪದಗಳ ಅರ್ಥದ ಮರ್ಮವನ್ನು ಚೆನ್ನಾಗಿ ಅರಿತುಹಾಡುತ್ತ ಗಮಟೆಬಾರಿಸುವುದು ಮನರಂಜನೀಯವಾಗಿರುತ್ತದೆ.

ಗುಮಟೆಯ ಸಂಗಡ , ತಾಸೆ, ಚಂಡೆ, ಹಲಗೆ, ನಾಗಸ್ವರ, ಕೊಳಲು, ತಾಳ, ಮದ್ದಳೆ, ಕಂಜರ, ಶಂಖ ಮುಂತಾದ ವಾದ್ಯಗಳನ್ನು ಬಳಸಿ ಭಜನೆ ಮಾಡುವ ಪರಿಪಾಠವೂ ಇದೆ. ಈ ಗಮಟೆ ಸ್ವಲ್ಪ ಚಿಕ್ಕದಾಗಿರುತ್ತದೆ. ಗಣೇಶೋತ್ಸವ ದೀಪಾವಳಿ ಮುಂತಾದ ಹಬ್ಬಗಳಲ್ಲಿ ಮನೆಗಳಲ್ಲಿ ಗುಮಟೆಪಾಂಗಿನ ಭಜನೆ ನಡೆಯುತ್ತದೆ. ಉಚ್ಚವರ್ಗದ ಜನರೂ ಗುಮಟೆಪಾಂಗಿನ ಭಜನೆಯಲ್ಲಿ ಪಾಲ್ಗೊಂಡು ಆನಂದಿಸುವರು.

ಉ.ಕ. ಜಿಲ್ಲೆಯ ಗೋಕರ್ಣ, ಕುಮಟೆ, ಅಂಕೋಲೆ, ಕಾರವಾರ ಪರಿಸರದ ಹಳ್ಳಿಗಳಲ್ಲಿ ಜಾತ್ರೆಯ ಹಾಗೂ ದೇವರ ಉತ್ಸವದ ಸಂದರ್ಭಗಳಲ್ಲಿ ಗುಮಟೆಪಾಂಗಿನ ನಾದ ಹಗಲಿರುಳು ಕೇಳಿಬರುತ್ತದೆ. ಉಚ್ಚಮಟ್ಟದ ಜನರೂ ಗುಮಟೆ ಭಜನೆಯಲ್ಲಿ ಸೇರುವುದರಿಂದ ಪರಸ್ಪರ ಸಂಸ್ಕೃತಿ ವಿನಿಮಯವಾಗಿ ಒಳ್ಳೆಯ ಬೆಳವಣಿಗೆಗೆ ಪೂರಕವಾಗುತ್ತದೆ.

ಸುಗ್ಗಿ

ಸುಗ್ಗಿ- ಸುಗ್ಗಿ ಹಿಗ್ಗಿ ಬಂತು|

ಹಿಗ್ಗಿ ಬಾಗ್ಯ- ತುಂಬಿತಂತು. ನಾಡ ನೆನೆಯಲು ನಮ್ಮ ನಾಡನೆನೆಯಲು|

ಅಡಿಟಿಪ್ಪಣಿ: * ಡಾ: ಎನ್. ಆರ್. ನಾಯ್ಕರಿಂದ ಸಂಗ್ರಹಿಸಿದ್ದು ......

ಸುಗ್ಗಿಯ ಹಿಗ್ಗಿನಲ್ಲಿ ಸುಗ್ಗಿಯ ಈ ಹಾಡು ಎಲ್ಲರ ಮನತಣಿಸುತ್ತದೆ. ಹೋಳಿಹಬ್ಬದ ಹಿಂದಿನದಿನಗಳಲ್ಲಿ ಕರಾವಳಿಯಲ್ಲಿ ಕಂಗೊಳಿಸುವ ನಯನ-ಮನೋಹರ-ಚೈತನ್ಯಶಾಲಿ ಜನಪ್ರಿಯ ಕಲೆಯೇ ಸುಗ್ಗಿ.

ಉತ್ತರಕನ್ನಡ ತಿಟ್ಟಿನ ಸುಗ್ಗಿ-ಕುಣಿತ ತನ್ನದೇಆದ ವಿಶೇಷಛಾಪಿನೊಂದಿಗೆ ದೇಶ-ವಿದೇಶಗಳಲ್ಲೂ ಜನತೆಯಿಂದ ಮುಕ್ತಕಂಠ ಮೆಚ್ಚುಗೆಯನ್ನು ಪಡೆದಿದೆ. ಸುಗ್ಗಿಯಹಿನ್ನೆಲೆ, ಬೆಳೆಯನ್ನುಕೊಯ್ದು ಮನೆ-ತುಂಬಿಸುವಾಗ ಮನೆ ತುಂಬಿದ ಹಿಗ್ಗಿನಲ್ಲಿ ಈ ನರ್ತನ ಹುಟ್ಟಿಕೊಂಡಿತು. ಪ್ರಾರಂಭದಲ್ಲಿ ಭತ್ತದ ತೆನೆ, ತಳಿರು, ಹೂಗೊಂಚಲುಗಳಿಂದ ಸಿಂಗರಿಸಿಕೊಡು ಕುಣಿದಿರಬೇಕು. ಈಗ ಅವುಗಳನ್ನುಹೋಲುವ ಬೆಂಡಿನ ಬೇಗಡೆಯ ತುರಾಯಿಗಳನ್ನು ತಲೆಯಲ್ಲಿಯ ಕಿರೀಟದಮೇಲ್ಗಡೆಗೆ ಕಟ್ಟುವರು. ಈ ತುರಾಯಿಯ ಮೇಲ್ಗಡೆ ಬೆಂಡಿನ ಹೂವು ಹಕ್ಕಿಗಳು ತಲೆಯ ಹಿಂಬಾಗದಿಂದ ಬೆಂಡಿನ ಮಲ್ಲಿಗೆಹೂಗಳ ಸರಮಾಲೆಗಳನ್ನು ಇಳಿಬಿಟ್ಟಿರುತ್ತಾರೆ. ಮುಖಕ್ಕೆ ಬಣ್ಣ-ಬಡಿದು ಕೆಂಪು, ಹಸಿರು ಬಣ್ಣದ ಅಂಗಿತೊಟ್ಟು ಅದಕ್ಕೊಪ್ಪುವ ಬಣ್ಣದ ದಟ್ಟಅಂಚಿನ ಸೀರೆಯನ್ನು ಮೊಣಕಾಲಿನವರೆಗೆ ಗರಿಗರಿಯಾಗಿಸಿ ವಿಶಿಷ್ಟ ರೀತಿಯಲ್ಲಿ ಉಟ್ಟು ಕಾಲಿಗೆ ಗೆಜ್ಜೆ ಕಟ್ಟಿ, ಕೈಯಲ್ಲಿ ಕೋಲುಗಳನ್ನು ಹಿಡಿದು ಉತ್ಸಾಹದ ಬುಗ್ಗೆಗಳಂತೆ ಈ ಸುಗ್ಗಿಮಕ್ಕಳು ಕಂಗೊಳಿಸುವರು. ಹಿರೇಸುಗ್ಗಿ ಹಾಗೂ ಕಿರೇಸುಗ್ಗಿ ಎಂಬ ಎರಡು ಸುಗ್ಗಿ ಮೇಳಗಳಿವೆ.

ಸುಗ್ಗಿ ಮಕ್ಕಳು ಬಂದಾರು ನುಗ್ಗಿ-ಕಾಯ್ ಕೊಯ್ದಾರು ಎಂದಾಕ್ಷಣ ಮನೆ ಯಜಮಾನತಿ ತಾನು ಬೆಳೆಸಿದ ನುಗ್ಗಿ ಗಿಡವನ್ನು ನೋಡಲು ಹೋದಾಗ ಸುಗ್ಗಿಮಕ್ಕಳು ತಮಾಶೆ ಮಾಡುತ್ತಾರೆ. ಹೋಳಿಹಬ್ಬದ ಐದು ದಿನ ಮೊದಲು ಸುಗ್ಗಿಮೇಳ ಹೊರಟು ಕಾಮನನ್ನು ಸುಟ್ಟನಂತರ, ಸುಗ್ಗಿ-ಕುಣಿತ ಮುಕ್ತಾಯವಾಗುವುದು. ಸುಗ್ಗಿ ಮೇಳಕ್ಕೆ ಸುಗ್ಗಿಕುಣಿತದ ತರಬೇತಿ ವಾರ ಅಥವಾ ತಿಂಗಳುಗಳಮೊದಲಿಗೆ ಪ್ರಾರಂಭವಾಗುತ್ತದೆ. ಸುಗ್ಗಿ ಮೇಳದಲ್ಲಿ ಕುಣಿಯುವವನಿಗೆ ಯಾವುದೇ ಸೂತಕ ಅದಕ್ಕೆ ಇರಬಾರದು. ಪ್ರಾರಂಭದಲ್ಲಿ ತಂಡದ ಹಿರಿಯನು ಕರಿ ಅಕ್ಕಿಯನ್ನು ಮಂತ್ರಿಸಿ ಕುಣಿಯುವವರಿಗೆ ಹಾಗೂ ವಾದ್ಯ ನುಡಿಸುವವರಿಗೆ ಕೊಡುವನು. ಆಗ ಅವರೆಲ್ಲ ಕರಿಕಣ (ಕಳ) ಕ್ಕೆ ಬಂದು ವೇಷ ತೊಟ್ಟು ಮೊದಲರಾತ್ರಿ ಈ ಕರಿಕಣದಲ್ಲಿಯೇ ಕರಿದೇವ (ಕಾಮದೇವ) ರನ್ನು ಪ್ರತಿಷ್ಠಾಪಿಸಿ ಅಕ್ಕಿ, ಹಣ್ಣು, ಕಾಯಿಇಟ್ಟು ಪ್ರಾರ್ಥಿಸಿ ಪದಹೇಳಿ ಕುಣಿದು ರಾತ್ರಿ ಕಳೆಯುತ್ತಾರೆ. ನಂತರ ಆ ಸ್ಥಳದಿಂದ ಹೊರಟ ಸುಗ್ಗಿಮೇಳ ಊರೂರು ಸುತ್ತಲು ಹೊರಡುವಾಗ ಎಲ್ಲರಿಗೂ ತಿಳಿಯಲೆಂದು ಸನ್ನೆಕೋಲು ಮತ್ತು ಹೆದ್ದುಂಬೆ

ಎಂಬ ವಾದ್ಯಗಳನ್ನು, ಹಿರಿಮದ್ದಳೆ ಜಾಗಟೆಗಳನ್ನು ದೊಡ್ಡದಾಗಿಬಾರಿಸಿ, ಮೇಳದ ಯಾತ್ರೆಯಸಂದೇಶವನ್ನು ಸಾರುತ್ತಾರೆ. ಈ ಸುಗ್ಗಿಮೇಳ ದಾರಿಯಲ್ಲಿ ಸಾಗಿಬರುವಾಗ ಬಹುಸುಂದರವಾಗಿ ಕಾಣುತ್ತದೆ. ತಾಳ, ಜಾಗಟೆ, ಗುಮಟೆ,ಮದ್ದಳೆ, ತಾಷ್ಟೆ, ಹಿರಿಮೃದಂಗ, ನಾಗಸ್ವರಗಳ ಏರುನಾದದ ಹಿನ್ನೆಲೆಯಲ್ಲಿ ಮಂಡಲಾಕಾರವಾಗಿ ಮಣಿದು ಜಿಗಿದು ನರ್ತಿಸುವ ಸುಗ್ಗಿಮಕ್ಕಳಕುಣಿತ ತೀವ್ರಗತಿಗೆ ತಲುಪಿದಾಗ ತಲೆಯಲ್ಲಿಕಟ್ಟಿದ ತುರಾಯಿಯ ಓಡಾಟ, ಕೈಯಲ್ಲಿಯ ಕೋಲಿನತಾಕಲಾಟ, ಗೆಜ್ಜೆಯ ಹೆಜ್ಜೆಯಚಲನೆ ಎಲ್ಲವೂ ಮೇಳಯಿಸಿ ಗುಡಗಿನನುಳಿಗೆ ತುರಾಯಿಯ ವೇಶ ಭೂಷಣಗಳನ್ನು ಕಳಚಿಟ್ಟು ಕರಿಸುಟ್ಟುಸ್ನಾನಮಾಡಿ, ಸುಗ್ಗಿ ಹಬ್ಬಕ್ಕೆ ಮಂಗಳಹಾಡುವರು. ಧಾರ್ಮಿಕ ವಿದಿಯೆಂದು ಆಚರಿಸಲಾಗುವ ಈ ಸುಗ್ಗಿ ,ಕಲಾಪೂರ್ಣ ಮನರಂಜನೆಯಾಗಿದೆ. ಹೆಚ್ಚಾಗಿ ಹಾಲಕ್ಕಿ, ಕುಮಾರಪಂತ್, ಹರಿಕಾಂತ, ನಾಮಧಾರಿ, ಮುಕ್ರಿ, ಹಳ್ಳೇರ, ಅಂಬಿಗ, ಸಿದ್ದಿ, ಕುಣಬಿ, ಕೊಂಕಣಮರಾಠಾ ಮೊದಲಾದವರೂ ಸುಗ್ಗಿ ಕುಣಿಯುವರು. ಇಂದಿನ ದಿನಮಾನಗಳಲ್ಲಿ ಬಡತನದ ಬವಣೆಯಲ್ಲಿ ಬೇಯುತ್ತಿರುವ ಈ ಸುಗ್ಗಿ ಮೇಳದವರಿಗೆ ಪ್ರತಿವರ್ಷ ಮೇಳ ಹೊರಡಿಸುವುದು ಕಷ್ಟವಾಗಿದೆ. ಸುಗ್ಗಿಮೇಳಕ್ಕೆ ಬೇಕಾಗುವ ಸಾಮಾನುಗಳ ಸಲಕರಣೆಗಳ ದರ ಗಗನಕ್ಕೆ ಏರಿದೆ. ಬಡತನದ ಬಾಳಿನ ನೋವನ್ನು ಕ್ಷಣಕಾಲವಾದರೂ ಮರೆಸುವ ಸಾಮಾಜಿಕ ಸ್ನೇಹವನ್ನು ಬೆಸೆಯುವ ಬಣ್ಣದ ಬದುಕಿನ ಬೆಡಗಿನಿಂದ ಜನರನ್ನು ರಂಜಿಸುವ ಈ ಸುಗ್ಗಿಕುಣಿತ ನಶಿಸದಂತೆ ನೋಡಿಕೊಳ್ಳಬೇಕಾದದ್ದು ಸಮಾಜದ ಕರ್ತವ್ಯವಾಗಿದೆ. ಈ ಕುರಿತು ಸಂಬಂದಿತರು ಚಿಂತನ ನಡೆಸಿ ಇಂತಹ ಕಲೆಗಳು ಉಳಿದು ಬೆಳೆಯಲು ಅವಕಾಶ ಮಾಡಿಕೊಡಬೇಕು.

*ಹಿರೇಸುಗ್ಗಿ ಹಾಗೂ ಕಿರೇಸುಗ್ಗಿ ಎಂಬ ಎರಡುರೀತಿಯಲ್ಲಿ ಸುಗ್ಗಿ ಮೇಳವನ್ನು ಹೊರಡಿಸುವರು. ಪರಿಪೂರ್ಣ ವೇಶಭೂಷಣ ಸಹಿತ ವೈಭವದಿಂದ ಹಿರಿದಾಗಿ ಸುಗ್ಗಿ ಹಬ್ಬವನ್ನು ಆಚರಿಸುವುದೇ ಹಿರೇಸುಗ್ಗಿ., ಹೆಚ್ಚಿನ ವೇಷ ಭೂಷಣಗಳಿಲ್ಲದೇ ಸಾಮಾನ್ಯವಾಗಿ ಸುಗ್ಗಿ ಕುಣಿಯುವುದು ಕಿರೇಸುಗ್ಗಿ.. ಹಾಲಕ್ಕಿಒಕ್ಕಲ ಸುಗ್ಗಿಕುಣಿತಕ್ಕೆ ಚೋಹೋ-ಚೋ ಇಲ್ಲವೇ ಸೋಹೋ, ಸೋ ಎಂದು ಹಾಡುತ್ತಾರೆ. ಪಲ್ಲವಿಯ ತಾಳಕ್ಕೆ ಪದಗಳು ಬೇಕಾಗಿಲ್ಲ. ಆದರೂ ಸುಗ್ಗಿ ಕುಣಿಯುವಾಗ ತಂದಾನ ತಾನ ತಾನ ತಂದಾನೊ ಹಾಡುವುದು ಸಾಮಾನ್ಯವಾಗಿದೆ. ಈ ಕುಣಿತಕ್ಕಾಗಿಯೇ ರಚಿಸಿದಪದಗಳು ಬೇಕಷ್ಟಿವೆ. ದೇವರಸ್ತುತಿ ಭಜನೆ, ದಾಸರಪದ, ಕವನಗಳು, ಪ್ರಣಯಗೀತೆಗಳು ರಸವತ್ತಾಗಿದ್ದು ಸುಗ್ಗಿ ಕುಣಿತಕ್ಕೆ ಸೊಗಸಾಗಿ ಹೊಂದಿಸಲ್ಪಟ್ಟಿರುವವು.

ಅಡಿ ಟಿಪ್ಪಣಿ : ಡಾಃ ಗೋಪಾಲಕೃಷ್ಣ ಪಿ.ನಾಯಕ ಅವರಿಂದ ಸಂಗ್ರಹಿಸಿದ್ದು....

'ಗೀತಂ ವಾದ್ಯಂಚ ನೃತ್ಯಂಚ ತ್ರಯಂ ಸಂಗೀತಮುಚ್ಚತೇ'ಎಂದು ಸಂಗೀತರತ್ನಾಕರದ ಕರ್ತೃ ಸಾರಂಗದೇವನು ಹೇಳಿರುವಂತೆ ಸಂಗೀತ ಪರಿಪೂರ್ಣವಾಗಬೇಕಾದರೆ ಅದಕ್ಕೆ ಗಾಯನ ವಾದನ ಹಾಗೂ ನರ್ತನಗಳು ಬೇಕು. ನರ್ತನದ ಹಿನ್ನೆಲೆಯಾಗಿ ಸಂಗೀತವಿರುವುದನ್ನು ನಾವು ಕಾಣಬಹುದು. ಉತ್ತರ ಕನ್ನಡ ಜಿಲ್ಲೆಯ ಜಾನಪದ ಕಲೆಗಳಲ್ಲಿ ವೈವಿಧ್ಯಪ್ರಕಾರಗಳಿವೆ. ಜಾನಪದ ಗೀತ, ಕುಣಿತ; ಹಾಡುಗಳು ಹಳ್ಳಿಗಳಲ್ಲಿ ಸಾಂಸ್ಕೃತಿಕಪರಿಸರ ನಿರ್ಮಾಣವಾಗಲು ಸಹಾಯಕವಾದವು. ಇವುಗಳಲ್ಲಿ ಕೆಲವು ಜನಪದ ಕಲೆಗಳನ್ನು ಇಲ್ಲಿ ವಿವರಿಸಲಾಗಿದೆ.

೧. ಕಾಡ್ಯಾ ಕುಣಿತ :- ಕಾಡಿನಲ್ಲಿ ವಾಸಿಸುವಜನರು ದೆವ್ವ ಪಿಶಾಚಿಗಳಿಂದ ಮುಕ್ತಿಪಡೆಯಲು ಮುಕ್ರಿ, ಹಳ್ಳೇರ ಮೊದಲಾದ ಹಿಂದುಳಿದ ವರ್ಗಗಳಿಗೆ ಸೇರಿದ ಜನರು ಕಾಡ್ಯಾ ಕುಣಿತವನ್ನು ಮಾಡುತ್ತಾರೆ. ಹೊನ್ನಾವರ ಭಟ್ಕಳಗಳಲ್ಲಿಯೂ ಈ ಕುಣಿತವು ಕಂಡುಬರುವುದು. ತುಳಸೀಹಬ್ಬದಲ್ಲಿ ಎಂಟುದಿನಗಳ ಕಾಲ ಹಳ್ಳೇರ ಹಾಗೂ ಮುಕ್ರಿ ಕುಟುಂಬದವರಲ್ಲಿ ಜಟಗದೇವರ ಪೂಜೆ ಮಾಡಿ ಈ ಕುಣಿತವನ್ನು ಕುಣಿಯುವರು. ಈ ಶೈಲಿಯ ಕುಣಿತವು ಆಕರ್ಷಕವಾಗಿರುತ್ತದೆ. ಒಬ್ಬನಿಗೆ ಮಾವಿನತಳಿರಿನ ಉಡುಗೆಉಡಿಸಿ ಮುಖಕ್ಕೆ ಬಣ್ಣಬಳಿದು ಕೈಯಲ್ಲಿ ಕಾಡಿನ ಜಲ್ಲೆಯನ್ನು ಕೊಟ್ಟು ಅವನ ಸುತ್ತಲೂ ಅನೇಕರು ಕುಣಿಯುವರು. ಹಿನ್ನೆಲೆಯಾಗಿ ಒಬ್ಬ ಹೇಳುವ ಪದಕ್ಕೆ ಉಳಿದವರು ಧ್ವನಿಗೂಡಿಸುವರು. ಕೊಳಲು , ಗಿಡಿಬಿಡಿ, ಶಹನಾಯ್ ಮೊದಲಾದ ವಾದ್ಯಗಳನ್ನು ಬಾರಿಸಿ ಮೊದಲು ಅವರ ಜಾತಿಯ ಹಿರಿಯನ ಮನೆಯಮುಂದೆ ಕುಣಿದು ನಂತರ ಇತರರ ಮನೆಗೆ ಹೋಗಿ ಕುಣಿಯುವರು. ಕಾಡ್ಯಾ ಕುಣಿತದ ಹಾಡುಗಳು ಅನುಭವ ವೇದ್ಯವಾಗಿರುವುದು ಕಂಡುಬರುತ್ತದೆ.

* ಊರಿಗೆ ಬಂದ ಮಾರಿಯಾ

ತಿಂದೋಡಿಯೊ ಕಾಡಿಯಾ ಎಂದು ಹಾಡುತ್ತಾರೆ. ಎಲ್ಲರೂ ಸೇರಿ ದೊಡ್ಡ ಗುಲ್ಲೆಬ್ಬಿಸಿ ಹಾಡಿದರೆ ಕಾಡಿನ ಪ್ರಾಣಿಗಳು ನಾಶವಾಗುತ್ತದೆ ಎಂಬುದು ಈ ಜನರ ನಂಬಿಕೆಯಾಗಿರುವುದು ಹಿರಿಯರನ್ನು ವಿಚಾರಿಸಿದಾಗ ತಿಳಿಯುತ್ತದೆ. ಈ ಕುಣಿತವನ್ನು ಹಬ್ಬವನ್ನಾಗಿ ಆಚರಿಸುವ ಈ ಜನಾಂಗವು ಇದಕ್ಕೆ ಕಾಡಿನ ಹಬ್ಬ ಎನ್ನುತ್ತಾರೆ

ಅಡಿ ಟಿಪ್ಪಣಿ : ಜಾನಪದ ವಿದ್ವಾಂಸ ಡಾ. ಎನ್. ಆರ್. ನಾಯಕ ಅವರಿಂದ ಸಂಗ್ರಹಿಸಿದ್ದು

೨. ಬೇಡನ ಕುಣಿತ : ಹೋಳಿ , ದೀಪಾವಳಿ ಹಬ್ಬದವೇಷಗಳಲ್ಲಿ ಬೇಡನನೃತ್ಯ ಜನಮನ ಸೆಳೆಯುವುದು. ಬೇಡರಾಜನ ಸೋಗುಧರಿಸಿದವನು ಮುಖಕ್ಕೆ ಕೆಂಪು, ಬಿಳಿ ಬಣ್ಣಬಳಿದು ದಪ್ಪಮೀಸೆ ಹೊತ್ತು ಕಿರೀಟದಲ್ಲಿ ಪಕ್ಷಿಗಳ ಗರಿಗಳನ್ನು ಜೋಡಿಸಿ ಕೈಯಲ್ಲಿ ಡೋಲು, ಖಡ್ಗ - ಬಿಲ್ಲು ಬಾಣಗಳನ್ನು ಧರಿಸಿ ಸೊಂಟಕ್ಕೆ ಚಿಕ್ಕ ಗಂಟೆಯನ್ನು ಧರಿಸಿ ಕಾಲಿಗೆ ಗೆಜ್ಜೆಕಟ್ಟಿ ಭಯಂಕರ ವೀರಾವೇಶದಿಂದ ಕೇಕೆ ಹಾಕಿ ರಭಸದಿಂದ ಕುಣಿಯುವನು. ಅವನ ಸೊಂಟಕ್ಕೆ ನಾಲ್ಕು ದಿಕ್ಕಿನಲ್ಲಿಯೂ ಹಗ್ಗ ಬಿಗಿದು ನಾಲ್ಕು ಜನರು ಅವನು ಕುಣಿದಂತೆ ಹಗ್ಗ ಹಿಡಿದು ಸಾಗುವ ದೃಶ್ಯವನ್ನು ಕಂಡರೆ ಯಾವುದೋ ಸೆರೆಸಿಕ್ಕ ಬೇಡರ ರಾಜನನ್ನು ಹಿಡಿದು ತರುವಂತೆ ಗೋಚರಿಸುವುದು. ಜಿಲ್ಲೆಯ ಅನೇಕ ಕಡೆ ಈ ರೀತಿಯ ಕುಣಿತ ಮಾಡುವರು. ಸಿರ್ಸಿ ಸೀಮೆಯಲ್ಲಿ ಬೇಡರ ಕುಣಿತ ಮಾಡುವವರು ಒಬ್ಬ ವಿಧವೆಯನ್ನು ಬೇಡರವನು ಅಡ್ಡಗಟ್ಟಿ ಕಾಡುವಂತೆಯೂ ಅವಳು ಇವನಿಂದ ತಪ್ಪಿಸಿಕೊಳ್ಳುತ್ತಿರುವಂತೆ ಅಭಿನಯಿಸುವರು. ಹಿರಿಯರನ್ನೊಳಗೊಂಡಂತೆ ಯುವಕರೂ ಇದರಲ್ಲಿ ಭಾಗವಹಿಸುವರು.

೩. ಅಲಗುಂ ಕುಣಿತ :- ಅಲಗುಂ ಕುಣಿತವು ನಿಗ್ರೊ ಮೂಲದ ಸಿದ್ದಿ ಜನಾಂಗದಲ್ಲಿ ಕಾಣಬಹುದು. ಸಿದ್ದಿಗಳು ಹೆಚ್ಚಾಗಿ ಜನರಲ್ಲಿ ಬೆರೆಯುವುದು ಕಡಿಮೆ. ತಮ್ಮದೇ ಆದ ಆಡುಭಾಷೆ ಹೊಂದಿದ ಇವರು ತಮ್ಮ ಸ್ವಂತಿಕೆಯನ್ನು ಕಳೆದುಕೊಂಡು ಮತಾಂತರವಾಗಿದ್ದಾರೆ. * ಹಿಂದೂ ಸಿದ್ಧಿಗಳಾದ ಹೆಚ್ಚಿನ ಜನರೆಲ್ಲ ನಂತರ ಮತಾಂತರ ಹೊಂದಿ ಮುಸಲ್ಮಾನ ಸಿದ್ದಿ ಹಾಗೂ ಕ್ರಿಶ್ಚಿಯನ್ ಸಿದ್ದಿಗಳಾಗಿ ಪರಿವರ್ತನೆ ಹೊಂದಿದ್ದಾರೆ. ಸಾಮಾನ್ಯವಾಗಿ ಸಿರ್ಸಿ- ಯಲ್ಲಾಪುರ ತಾಲೂಕುಗಳಲ್ಲಿ ಈ ಜನಾಂಗವನ್ನು ಕಾಣಬಹುದು. ಇವರದೇ ಆದ ಸಂಪ್ರದಾಯವಿದೆ. ಮುಸ್ಲಿಂ ಸಂಸ್ಕಾರದ ಸಿದ್ದಿಗಳಲ್ಲಿ ಅಲಗುಂ ಕುಣಿತ ರೂಡಿಯಲ್ಲಿದೆ. ಪೀಠದೇವರ ಉತ್ಸವದಲ್ಲಿ ಅಲಗುಂ ಕುಣಿತದ ಸೇವೆ ಸಲ್ಲುತ್ತದೆ. ಈ ಕುಣಿತದ ಜನರು ಮೈತುಂಬ ಸೇಡಿಬಣ್ಣ ಹಚ್ಚಿಕೊಂಡು, ಅಂಗಿಚಡ್ಡಿ ಧರಿಸಿ ಟೊಂಕಕ್ಕೆ ದನಕ್ಕೆ ಕಟ್ಟುವ ಗಂಟೆಗಳನ್ನು ಕಟ್ಟಿಕೊಂಡು ಕಾಲಿಗೆ ಗೆಜ್ಜೆಕಟ್ಟಿ ತಲೆಯಲ್ಲಿ ಹಗ್ಗವನ್ನು ಗೋಪುರದಂತೆ ತ್ರಿಕೋನದಿಂದ ಮಾಡಿದ ಟೊಪ್ಪಿಗೆಯನ್ನು ಧರಿಸಿ ಕುಣಿಯುತ್ತಾರೆ. ಇದಕ್ಕೆ ಪ್ರತ್ಯೇಕ ವಾದ್ಯ ಬೇಕಾಗಿಲ್ಲ. ಅವರು ಕಟ್ಟಿಕೊಂಡ ಗೆಜ್ಜೆಯ ಧ್ವನಿಯು ಕುಣಿಯುವಾಗ ಆರ್ಭಟಗೊಳಿಸುತ್ತದೆ. ಉದ್ದನೆಯ ಚಾಟಿಯಿಂದ ತಮ್ಮ ಮೈಗೆ ಹೊಡೆದುಕೊಳ್ಳುತ್ತಾರೆ. ಈ ಚಾಟಿ ಹೊಡೆತದಿಂದ ಅವರ ವೇಶ .

ಅಡಿ ಟಿಪ್ಪಣಿ : ಯಲ್ಲಾಪುರದ ಸಿದ್ದಿ ಜನಾಂಗದ ಕಲಾವಿದರಾದ ಕುಸುಮ , ಬಾಬು ಮುಂತಾದವರಿಂದ ಸಂಗ್ರಹಿಸಿದ್ದು

ಕುಣಿತ, ಆಕಾರಗಳಿಂದ ಬಹುತೇಕ ಸಣ್ಣಮಕ್ಕಳು ಹೆದರಿ ಅಳಲು ಪ್ರಾರಂಭಿಸುತ್ತಾರೆ. ಈ ಕುಣಿತದ ಪ್ರಭಾವ ಮಕ್ಕಳಿಗೆ ಎಷ್ಟಾಗುತ್ತದೆಂದರೆ ಅವರು ಅಳುವಾಗ ಈ ಕುಣಿತದ ನೆನಪನ್ನು ಮಾಡಿದರೆ ಭಯದಿಂದ ಸುಮ್ಮನಾಗುತ್ತಾರೆ. ಲಯಕ್ಕೆ ಸರಿಯಾಗಿ ಪ್ರದಕ್ಷಣಾಕಾರವಾಗಿ ಕುಣಿಯುತ್ತಾ 'ಅಲಿ ಅಲಿ' ಎಂದು ಕುಣಿಯುತ್ತಾ ಮುಗಿಸುವಾಗ ಅಂಬಾಂಬೆ ಎಂದು ಗೆಜ್ಜೆಯನ್ನು ಕುಣಿಸುತ್ತಾರೆ. ಜೋರಾಗಿ ಕುಣಿಯುವಾಗ ರೌದ್ರವಾಗಿ ಕಾಣುವ ಆ ನೋಟ ರಂಜನೀಯವಾಗಿರುತ್ತದೆ. ಮೊಹರಂ ಹಬ್ಬದ ಮೊದಲು ಪ್ರತಿ ಮನೆಗಳ ಮುಂದೆ ಕುಣಿದು ದವಸಧಾನ್ಯ, ಎಣ್ಣೆಗಳನ್ನು ಶೇಕರಿಸಿ ಮೊಹರಂ ಹಬ್ಬದಂದು ಅಲ್ಲಾನಿಗೆ ಸಮರ್ಪಿಸುವುದು ಇವರ ವಾಡಿಕೆ. ಮೊಹರಂ ಹಬ್ಬದಂದು ವಿಶೇಷ ಕುಣಿತವನ್ನು ಮಾಡುತ್ತಾರೆ. ಪಕೀರಾ, ಹಸನ್ ಮುಂತಾದ ಹಲವರು ಅನೇಕ ವರ್ಷಗಳಿಂದ ಈ ಕುಣಿತವನ್ನು ಕುಣಿಯುತ್ತ ಬಂದಿದ್ದಾರೆ.

ಡಮಾಮಿ ಕುಣಿತ:- ಹಿಂದೂ ಸಂಸ್ಕಾರದ ಸಿದ್ದಿಗಳು ಹೆಚ್ಚಾಗಿ ಡಮಾಮಿ ಕುಣಿತವನ್ನು ಕುಣಿಯುತ್ತಾರೆ.ಡಮಾಮಿ ಒಂದು ವಾದ್ಯದ ಹೆಸರು. ಹಿಂದೂ ಹಬ್ಬಗಳಾದ ನವರಾತ್ರಿ, ಹೊಸವರ್ಷದ ಆರಂಭದ ಯುಗಾದಿಯಂದು ಹಿಂದುಸಂಸ್ಕಾರ ಹೊಂದಿದ ಸಿದ್ದಿಗಳು ಡಮಾಮಿ ಬಾರಿಸುತ್ತ ಕುಣಿಯುತ್ತಾರೆ. ಈ ಕುಣಿತದ ವಿಶೇಷವೆಂದರೆ ಸರದಿ ಪ್ರಕಾರವಾಗಿ ಇಬ್ಬಿಬ್ಬರು ಹೆಂಗಸರು ಸೇರಿ ಕುಣಿಯುವರು. ಗಂಡಸರೂ ಸಹ ಪಾಲ್ಗೊಳ್ಳುವರು.ಡಮಾಮಿ ಬಾರಿಸುತ್ತ ಬಾರಿಸುತ್ತ ಕುಣಿದಾಗ ಕೆಲವರಿಗೆ ಭಾರ(ಮೈಮೇಲೆ) ಬರುವುದುಂಟು. ದೈವೀಶಕ್ತಿ ಇದೆ ಎಂದು ತಿಳಿದ ಈ ಜನ ಪ್ರಶ್ನೆಕೇಳಿ ತಮ್ಮ ತೊಂದರೆಯ ನಿವಾರಣೆಯನ್ನು ಮಾಡಿಕೊಳ್ಳುವುದುಂಟು. ಅನೇಕ ತರಹದ ಹಾಡುಗಳನ್ನು ಹಾಡುವರು. ಇದರಲ್ಲಿನ ಒಂದು ಹಾಡು ಹೀಗಿದೆ.

*ಬರಬರಗಾಳಿಯೆ - ಹುಡುಹುಡು ಮಳೆಯೆ ।
ಭೂಮಿಮೇಲೆ ಬೀಳೆ ಮಳೆಯೆ ಏ ಮಳೆಯ್ಪ ।
ಭೂಮಿ ಮೇಲೆ ಸುರಿಸುರಿ ಮಳೆಯೆ, ದಗದಗ
ಮಳೆಯ್ಪ ಬಡತನ ಬಂತು ಮಳೆಯೆ, ಏ
ಮಳೆಯ್ಪ ಭೂಮಿಮೇಲೆ ಬೀಳೆ ಮಳೆಯೆ।

ಅಡಿ ಟಿಪ್ಪಣಿ : ಜಾನಪದ ಪ್ರಕಾಶನ ಉದಯ ... ಗ್ರಹಿಸಿದ್ದು.

ಪ್ರಕೃತಿಯ ವರ್ಣನೆ, ತಮ್ಮ ಕಷ್ಟ ಕಾರ್ಪಣ್ಯಗಳನ್ನು ನೀಗಿಸಲು, ಮಳೆರಾಯನ ವರ್ಣನೆ ಮಾಡಿ ಭೂಮಿತಾಯಿಗೆ ತಂಪನ್ನು ನೀಡು ಎಂದು ಡಮಾಮಿಕುಣಿತ ಹೊಡೆದು, ಹಬ್ಬವನ್ನಾಚರಿಸುವರು,

ಡೊಂಬರ ಕುಣಿತ : ಸಂಸಾರಸಮೇತ ಡೊಂಬರು, ಕೋಲುಬಾರಿಸಿ ಜನರನ್ನುಕೂಡಿಸಿ ತಮ್ಮ ಶಾರೀರಿಕ ಚಟುವಟಿಕೆ, ಕೈಚಳಕ, ನಾನಾ ರೀತಿಯ ಕಸರತ್ತುಗಳನ್ನು ಪ್ರದರ್ಶಿಸಿ ತಮಾಷೆಗಳಿಂದ ಜನರನ್ನು ರಂಜಿಸುವರು. ಉದರ ನಿಮಿತ್ತ ಬಹುಕೃತ ವೇಶ, ಹೀಗೆ ಮಾಡಿ ಹೊಟ್ಟೆ ಹೊರಕೊಳ್ಳುವರು.

ಡೊಳ್ಳು ಕುಣಿತ :- ಮರದಿಂದಮಾಡಿದ ದೊಡ್ಡಪಿಪಾಯಿಆಕಾರದ ಡೊಳ್ಳಿಗೆ ಎಡಭಾಗಕ್ಕೆ ಆಡಿನಚರ್ಮ ಹಾಗೂ ಬಲಭಾಗಕ್ಕೆ ಕುರಿಯಚರ್ಮ ಬಿಗಿದು ಬಲಗೈಯಿಂದ ಗುಣಿಬಡಿದು ಎಡಗೈಯಿಂದ ಆಡಿನಚರ್ಮಕ್ಕೆ ಹೊಡೆದು ಬಲವಾಗಿ ಬಾರಿಸುವರು. ಡೊಳ್ಳು ಕುಣಿತವನ್ನು ಘಟ್ಟದ ಮೇಲಿನ 'ಗಂಡುಕಲೆ' ಎಂದು ಬಣ್ಣಿಸಲಾಗಿದೆ. ಯುವಮೇಳಗಳಲ್ಲಿಯೂ ಇಂತಹ ಕಲೆಗೆ ಅವಕಾಶವಿಟ್ಟಿದುದು ಒಳ್ಳೆಯ ಬೆಳವಣಿಗೆಯಾಗಿದೆ. ಟೊಂಕಕ್ಕೆ ಡೊಳ್ಳನ್ನು ಕಟ್ಟಿಕೊಂಡು ವೃತ್ತಾಕಾರದಲ್ಲಿ ಇಲ್ಲವೇ ಒಬ್ಬರ ಹಿಂದೆ ಒಬ್ಬರು ನಿಂತು ದೊಡ್ಡದಾಗಿ ಡೊಳ್ಳಿನ ನಾದಮಾಡಿ ವಿವಿಧ ಬಂಗಿಯಲ್ಲಿನಿಂತು ಕುಣಿದು ಕುಪ್ಪಳಿಸಿ ವಿವಿಧರೀತಿಯ ಕಸರತ್ತನ್ನು ನೋಡಿಯೇ ಆನಂದಿಸಬೇಕು. ಡೊಳ್ಳಿನ ಕುಣಿತದಲ್ಲಿ ವೈವಿಧ್ಯಗಳಿದ್ದರೂ ಡೊಳ್ಳಿನ ಬಡಿತದಗತ್ತುಗಳಲ್ಲಿ ವಿವಿಧತೆ ಇಲ್ಲದ್ದರಿಂದ ಕಸರತ್ತಿಗೆ ಹೆಚ್ಚಿನ ಬಲಬಂದಿದೆ. ಡೊಳ್ಳಿನ ಪೆಟ್ಟು ಇಲ್ಲಿಂದ ದಿಲ್ಲಿಯವರೆಗೂ ಒಂದೇ ಆಗಿದೆ ಎನ್ನಬಹುದು.

*ಬಿಂಗೀಪದಃ ಮಲೆನಾಡಿನಲ್ಲಿ ಬಿಂಗೀಪದಕ್ಕೆ ಅಂಟಿಕೆ ಪಂಟಿಕೆ ಎಂದು ಕರೆಯುತ್ತಾರೆ. ಬಿಂಗೀಪದ ಹೇಳುವವರು ಕೈದೀಪ ಹಿಡಿದುಕೊಂಡು ದೀಪಾವಳಿ ಸಮಯದಲ್ಲಿ ಬೀದಿ-ಬೀದಿ ಸುತ್ತುತ್ತಾರೆ. ಅತಿ ದೂರದವರೆಗೂ ಕೇಳುವ ಸನ್ನೆಕೋಲು ಎಂಬ ವಾದ್ಯವನ್ನು ಊದುತ್ತ ಮನೆಮನೆಗೆ ಈ ಬಿಂಗೀ ಮೇಳ ಬರುವುದು. ಪದ ಹೇಳುವವರು ದೀಪವನ್ನು ಮುಂದಿಟ್ಟುಕೊಂಡು ಸಾಲಾಗಿ ಕುಳಿತುಕೊಂಡು ತಮ್ಮ ಗೌರವವನ್ನು ಸೂಚಿಸುವರು. ಮನೆಯ ಹಿರಿಯರು ಇವರು ಬಂದೊಡನೆ ಕಂಬಳಿ ಹಾಸಿ ದೀಪಹಚ್ಚಿ ಆತ್ಮೀಯತೆಯಿಂದ ಸ್ವಾಗತಿಸುವರು. ಈ ಕಲಾತಂಡದವರು ಬಲೀಂದ್ರನ ಪದಹೇಳಿ ನಂತರ ಇತರ ಪದಗಳನ್ನು ಹೇಳುತ್ತಿರುವಾಗ ಮನೆಯ ಯಜಮಾನ

ಅಡಿಟಿಪ್ಪಣಿಃ * ಸಾಂಪ್ರದಾಯಿಕವಾಗಿ ಬಿಂಗಿಪದ ಕಲೆಯ ಅಧ್ಯಯನದಿಂದ ....

ಬಿಂಗಿತಂಡದವರು ತಂದ ದೀಪವನ್ನು ತನ್ನ ಮನೆಯ ದೇವರಕೋಣೆಗೆ ಒಯ್ದು ಅದರ ಒಂದೆರಡು ಬತ್ತಿಗಳನ್ನು ಮನೆಯ ನಂದಾದೀಪಕ್ಕೂ , ನಂದಾದೀಪದ ಬತ್ತಿಯನ್ನು ಕೈದೀಪಕ್ಕೂ ಬದಲಿಸಿ ಎರಡೂ ದೀಪಕ್ಕೂ ಎಣ್ಣೆ ಹಾಕುವನು. ನಂತರ ಬಿಂಗಿತಂಡದ ದೀಪವನ್ನು ಮರಳಿಸುವಾಗ, ದವಸ, ಧಾನ್ಯ ನಾಣ್ಯಗಳಿಂದ ಗೌರವಿಸಿ ಕೈಮುಗಿಯುವನು. ಬಿಂಗಿಪದ ಹಾಡಿದರೆ ಬಲೀಂದ್ರ ಒಲಿದು ಸಕಲಇಷ್ಟಾರ್ಥಗಳನ್ನು ನೆರವೇರಿಸುವನೆಂಬ ಭಾವನೆ ಇನ್ನೂಇದೆ. ದಾರಿಯಲ್ಲಿ ಬಿಂಗಿದೀಪ ಆರಬಾರದು. ಅಂದರೆ ಬಾರೀ ಭಯವೂ , ಅನಾಹುತವವೂ ಎದುರಾಗುವುದು ಎಂಬುದು ನಂಬಿಕೆ. ಎರಡೂ ತಂಡದ ಬಿಂಗಿಗಳು ಪರಸ್ಪರ ಒಂದೇ ಕಡೆ ಸಂದಿಸಬಾರದು ಎಂಬ ನಿಯಮವಿದೆ. ಒಂದೊಮ್ಮೆ ಹಾಗೆ ಎದುರಾಗುವ ಸಂದರ್ಭ ಬಂದರೆ ಮತ್ತೊಬ್ಬರಿಗೆ ತಿಳಿಯಲೋಸುಗ ತಂಡದವರು ದೀಪಾಳಿ ,ದೀಪಾಳಿ - ದೀಪಾಳೋ ಎಂದು ಕೂಗುವರು. ಹಾಲು ಹಳ್ಳಾಗಲಿ, ಬೆಟ್ಟ ಬೆಳ್ಳಾಗಲಿ ಬೆಟ್ಟಕ್ಕೆ ಬಿಟ್ಟ ಕರು ತಪ್ಪದೇ ಮನೆಸೇರಲಿ ದೀಪಾಳಿ , ದೀಪಾಳಿ , ದೀಪಾಳೋ ಎಂದು ಹರಸುವರು. ಹೆಚ್ಚಾಗಿ ಸಿರ್ಸಿ, ಸಿದ್ದಾಪುರ ಯಲ್ಲಾಪುರ ತಾಲೂಕುಗಳಲ್ಲಿ ಬಿಂಗಿಪದ, ಕಥನ ಕವನಗಳು ಹೆಚ್ಚು ಪ್ರಚಾರದಲ್ಲಿದೆ. ಇತ್ತೀಚಿನ ದಿನಗಳಲ್ಲಿ ಈ ಬಿಂಗಿ ಪದ್ಧತಿ ವಿರಳವಾಗುತ್ತಿದೆ.

*ಜೋಗಿಪದ :- ತಂಬೂರಿ ಶ್ರುತಿಗೆ ಹಾಡು ಹೇಳುತ್ತ ಜೋಗಿಗಳು ಬಿಕ್ಷುಕ ವೃತ್ತಿಯಿಂದ ಜೀವಿಸುವರು. ಜೋಗಿ ಜಂಗಮನಾಗಿ, ದಾಸಯ್ಯನಾಗಿಹಾಡುಹೇಳುತ್ತ ತಂಬೂರಿ ಇಲ್ಲವೇ ಕಿನ್ನರಿಬಾರಿಸುತ್ತ ಬರುವವರೇ ಜೋಗಿಪದವನ್ನು ಹಾಡುವರು.

ಈ ಜಿಲ್ಲೆಯಲ್ಲಿ ಹವ್ಯಕರು, ಹಾಲಕ್ಕಿ ಒಕ್ಕಲು ನಾಮದಾರಿಗಳು, ನಾಡವರು, ಕುಮಾರಪಂತ, ಗೌಡಸಾರಸ್ವತ, ಶೇಣ್ವೆ, ಭಂಡಾರಿ ಹರಿಕಾಂತ, ಅಂಬಿಗ, ಹೊಲೇರ, ಗಾಬಿತ, ಚಮಗಾರ, ಹಳ್ಳೇರ, ಅಗೇರ, ಸಿದ್ದಿ, ನವಾಯತ, ದಾಲ್ಜಿ ,ಲಿಂಗಾಯತ, ಮುಸಲ್ಮಾನ, ಕ್ರಿಶ್ಚನ್ ಮೊದಲಾದ ಜಾತಿ ಜನಾಂಗಗಳಿವೆ. ಜಾತಿ ಜಾತಿಗೆ ವಿಶಿಷ್ಟವಾದ ಭಾಷೆ ಹಾಗೂ ಸಂಸ್ಕೃತಿ ಸಂಪ್ರದಾಯಗಳಿವೆ. ಮನೆಯಲ್ಲಿ ಮಾತನಾಡುವ ಭಾಷೆ ಬೇರೆ, ನಡೆಯುವ ರೀತಿ ನೀತಿಗಳು ಬೇರೆ ಬೇರೆಯಾಗಿದ್ದರೂ ವೈರತ್ವವಿಲ್ಲದೆ, ಐಕ್ಯತೆಯಿಂದ ಕರ್ನಾಟಕ ಸಂಸ್ಕೃತಿಗೆ ಆದರ್ಶಪ್ರಾಯರಾಗಿ ಇಲ್ಲಿನ ಜನತೆ ಬದುಕುತ್ತಿದ್ದಾರೆ.

ಅಡಿಟಿಪ್ಪಣಿ : * ಉತ್ತರಕನ್ನಡ ಜಿಲ್ಲಗೆ ಬಂದುಹೋಗುವ ಸಾಂಪ್ರದಾಯಿಕ ಜೋಗಿ ಕಲಾವಿದರ ಅಧ್ಯಯನದಿಂದ ....

ಜನಪದಕಲೆ ಉತ್ತರಕನ್ನಡದಲ್ಲಿ ಕಂಡಷ್ಟು ಇನ್ನೆಲ್ಲೂ ಕಂಡುಬರುವುದಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನವರು ಕರ್ನಾಟಕದ ಜನಪದ ಕಲೆಗಳನ್ನೆಲ್ಲ ಅಭ್ಯಸಿಸಿ ಸದ್ಯ ಸುಮಾರು ೧೪೮ (ಒಂದು ನೂರಾ ನಲ್ವತ್ತೆಂಟು) ಕಲೆಗಳು ಕರ್ನಾಟಕದಲ್ಲಿವೆ ಎಂದಿದ್ದಾರೆ. * ಇವುಗಳಲ್ಲಿನ ಅನೇಕವು ಈ ಜಿಲ್ಲೆಯ ಕೊಡುಗೆಯಾಗಿರುವುದು ಹೆಮ್ಮೆಯ ಸಂಗತಿ. ಇಲ್ಲಿನ ಕಲೆಗಳು ಬೆಳೆಯಲು ಕಾರಣ ಕರಾವಳಿ, ಮಲೆನಾಡು, ಬಯಲುಸೀಮೆಗಳ ಪರಿಸರದಪ್ರಭಾವ. ಈ ಮೂರೂ ಸೀಮೆಯ ಜನಪದ ಸಂಗಮವೇ ಈ ಜಿಲ್ಲೆಯ ಹಿರಿಮೆ. ಕಾರವಾರದ ಕಡೆ ಮರಾಠಿ ಹಾಗೂ ಗೋವೆ ಕೊಂಕಣಿ ಪ್ರಭಾವದಿಂದ ಮೂಡಿಬಂದ ಕಲೆಗಳು, ಮುಂಡಗೋಡದಲ್ಲಿ ಟಿಬೇಟ್‌ದಿಂದ ಬಂದ ಪರಂಪರಾಗತ ಕಲೆಗಳೂ ನೋಡಲು ಸಿಗುವವು.

ಬಯಲು ಸೀಮೆಯ ಹೋಳಿಹಬ್ಬದ ನಮೂನೆಯಲ್ಲಿ ಕರಾವಳಿಯಲ್ಲಿ ಸುಗ್ಗಿಹಬ್ಬವಾಗಿದೆ. ಮಾರಿಹಬ್ಬ, ಬಂಡಿಹಬ್ಬಗಳು ಹಾಡು, ಕುಣಿತಗಳಿಗೆ ಎಡೆಮಾಡಿ ಕೊಟ್ಟಿವೆ. ಈ ಜಿಲ್ಲೆಯ ಬಯಲುಸೀಮೆಯಲ್ಲಿ ಡೊಳ್ಳುಕುಣಿತ, ಗೀಗಿ ಮೇಳ, ಲಾವಣಿ, ಕರಡೀ ಮಜಲು, ಹುಲಿವೇಶ, ಕೋಲೆಬಸವ, ಮರಕಾಲು ಕುಣಿತಗಳು ಅಧಿಕವಾಗಿ ಕಂಡುಬಂದರೆ ಮಲೆನಾಡಿನಲ್ಲಿ ಬಿಂಗೀಪದ, ಡಮಾಮಿಕುಣಿತ, ಅಲಗುಂ ಕುಣಿತ, ಬೇಡರ ಕುಣಿತಗಳು ಪ್ರಮುಖವಾಗಿದೆ. ಸಂಗ್ಯಾಬಾಳ್ಯಾ , ಗುಂಡು ಬರಮನ ಕತೆ ಮೊದಲಾದ ಸಣ್ಣಾಟಗಳೂ ಇಲ್ಲಿ ಜನಪ್ರಿಯವಾಗಿದೆ. ಕಾರವಾರ ತಾಲೂಕಿನಲ್ಲಿ ಭಜನೆ, ಪುಗಡಿ, ಆಟಗಳು, ಕೋಲಾಟ, ಭಜನೆ ಹಾಡುಕುಣಿತಗಳು ಕೊಂಕಣಿ ಸಂಪ್ರದಾಯದಲ್ಲಿ ಪ್ರದರ್ಶಿಸಲ್ಪಡುತ್ತದೆ. ಕರಾವಳಿಯ ಯಕ್ಷಗಾನ, ಸುಗ್ಗಿ ಕುಣಿತ, ಗುಮಟೆಪಾಂಗುಗಳು ಪ್ರಪಂಚದ ಕಲಾರಸಿಕರ ಲಕ್ಷ್ಯವನ್ನು ಸೆಳೆಯಲು ಯಶಸ್ವಿಯಾಗಿದೆ. ಜನಪದ ಗೀತ, ಕುಣಿತ ಸಾಹಿತ್ಯಗಳೊಡನೆ ಜನಪದ ಚಿತ್ರ ಶಿಲ್ಪಾದಿ ಕಲೆಗಳೂ ಬೆಳೆದು ಬಂದಿದೆ.

ಗೋಪು ನೃತ್ಯ

ರಾಧೆ-ಕೃಷ್ಣರನ್ನು ಹಾಡಿಹೊಗಳುವ ಈ ನೃತ್ಯದ ಪದ್ಧತಿ ಗೋಪಿಕಾನೃತ್ಯವಾಗಿದೆ. ಗೋಪು ಎಂದರೆ ರಿಬ್ಬನ್ನಿನಂತೆ ಉದ್ದವಾದ ಬಟ್ಟೆ ಇಲ್ಲವೆ ಸೀರೆಗಳನ್ನು ಜಡೆ ಕೋಲಾಟದಲ್ಲಿ ಕಟ್ಟುವಂತ ಮೇಲೆಕಟ್ಟಿ ಅವುಗಳ ಇನ್ನೊಂದು ತುದಿಯನ್ನು ಕೈಯ್ಯಲ್ಲಿ ಹಿಡಿದು ಪದಹೇಳಿ ಕುಣಿದು ಗೋಪು (ಜಡೆ) ಹಣೆಯುವರು. ಹೆಚ್ಚಾಗಿ ಗಂಡು-

ಅಡಿಟಿಪ್ಪಣಿ: * ಡಾ: ಗೋಪಾಲಕೃಷ್ಣ ಪಿ. ನಾಯಕರಿಂದ ಸಂಗ್ರಹಿಸಿದ್ದು

ಹೆಣ್ಣುಗಳಿಬ್ಬರೂ ಜೊತೆಸೇರಿ, ಇಲ್ಲವೇ ಬೇರೆ ಬೇರೆಯಾಗಿಯೂ ಈ ನೃತ್ಯವನ್ನು ಮಾಡುತ್ತಾರೆ. ಜಡೆಗೋಪು, ನೆಲವುಗೋಪು, ಪಟ್ಟೆಗೋಪು ಹೀಗೆ ಅನೇಕ ಪ್ರಕಾರದ ಗೋಪನ್ನು ಹಣೆಯುತ್ತಾ ಹಾಡುತ್ತಾರೆ. ಈ ರೀತಿಯಾಗಿ ಗೋಪನ್ನು ಹೆಣೆಯುವಾಗ ಯಾವ ರೀತಿಯಿಂದ ಹಾಸುಹೊಕ್ಕಾಗಿ ಚಲಿಸುತ್ತಾರೊ. ಆ ಚಲನೆಯ ವಿರುದ್ಧದ ದಿಕ್ಕನ್ನು ಚಾಚೂತಪ್ಪದೇ ಚಲಿಸಿ, ಹೆಣೆದ ಗೋಪನ್ನು ಬಿಡಿಸಿ ತೋರಿಸುವ ತಂತ್ರಗಾರಿಕೆಯನ್ನು ಮೆಚ್ಚಲೇಬೇಕು. ಇತ್ತೀಚೆಗೆ ಇಂತಹ ನೃತ್ಯಪ್ರಕಾರವು ವಿರಳವಾಗುತ್ತದೆ. ಆದರೂ ಡಾಃ ಕುಸುಮ ಸೊರಬರ ಸ್ನೇಹಕುಂಜದಲ್ಲಿ ಗೋಪುನೃತ್ಯದ ತರಬೇತಿ ಹಾಗೂ ಸಾರ್ವಜನಿಕ ಪ್ರದರ್ಶನ ನೀಡುವಲ್ಲಿ ಅವರು ಕೈಗೊಂಡ ಪಾತ್ರ ಜಿಲ್ಲೆಯಲ್ಲಿನ ಈ ಕಲಾಪ್ರಕಾರ ಉಳಿದು, ಬೆಳೆಯಲು ಸಹಾಯಕವಾಗಿದೆ.

ತಾಳಮದ್ದಳೆ

ಕರಾವಳಿ ಜಿಲ್ಲೆಯ ಪ್ರಸಿದ್ಧ ಯಕ್ಷಗಾನ ಕಲೆಯ ಒಂದು ಭಾಗವೇ ಈ ತಾಳಮದ್ದಳೆ. ಮಳೆಗಾಲದಲ್ಲಿ ಹೆಚ್ಚಾಗಿ ನಡೆಸುವ ಈ ಕಾರ್ಯಕ್ರಮದಲ್ಲಿ ಯಕ್ಷಗಾನದ ವೇಷ-ಭೂಷಣಗಳು ಮಾತ್ರ ಇರುವದಿಲ್ಲ. * ಭಾಗವತನ ಹಿನ್ನೆಲೆಯಪದಕ್ಕೆ ಪಾತ್ರದಾರಿಗಳು ಕುಳಿತಲ್ಲಿಯೇ ಸಂಭಾಷಣೆಗಳ ಮೂಲಕ, ಪ್ರಸಂಗದಕಥೆಗಳನ್ನು ನಿರೂಪಿಸುತ್ತಾರೆ. ಹೆಚ್ಚಾಗಿ ರಾಮಾಯಣ ಮಹಾಭಾರತ ಹೀಗೆ ಪೌರಾಣಿಕ ಆಖ್ಯಾನವನ್ನೇ ಪ್ರಸ್ತುತಪಡಿಸುವರು. ಈ ತಾಳಮದ್ದಳೆ ಹಾಗೂ ಯಕ್ಷಗಾನ ಎರಡರಲ್ಲೂ ಇಂದು ಜನಜಾಗೃತಿಗೊಳ್ಳುವ , ಎಡ್ಸಾಯಣ, ಪರಿಸರ ಕುರಿತಾದ ಆಖ್ಯಾನಗಳನ್ನು ನುರಿತ ಕಲಾಕಾರರು ಅಭಿನಯಿಸುತ್ತಾರೆ. ಬದಲಾಗುತ್ತಿರುವ ಇಂದಿನ ದಿನಗಳಲ್ಲಿ ಇದು ಒಳ್ಳೆಯ ಬೆಳವಣಿಗೆಯೇ ಆಗಿದೆ. ಆದರೆ ಪೌರಾಣಿಕ ಪ್ರಸಂಗಗಳಲ್ಲಿರುವ ಗೌರವ, ಗಾಂಭೀರ್ಯತೆ ಇಂತಹ ಪ್ರಸಂಗದಲ್ಲಿ ಬರಲಾರದು. ಬುದ್ದಿಜೀವಿಗಳಿಗೆ ಇಂತಹ ಕಾರ್ಯಕ್ರಮ ಪ್ರಿಯವಾಗುತ್ತದೆ. ಭಾಗವತರು ಹಾಡುವಾಗ, ಹೆಚ್ಚಾಗಿ ಅಭಿನಯವನ್ನು ಮಾಡುತ್ತಲಿರುವ ಕಲಾಕಾರರೇ ಅರ್ಥದಾರಿಗಳಾದುದರಿಂದ ಅವರು ಕುಳಿತಲ್ಲಿಯೇ ಅಭಿನಯಗೈಯುವುದು ವಿನೋದಕರವಾಗಿರುತ್ತದೆ. ಉತ್ತರಕನ್ನಡ ಜಿಲ್ಲೆಯ ಈ ತಾಳಮದ್ದಳೆ, ದೇಶದಲ್ಲಿಯೇ ಪ್ರಸಿದ್ಧವಾಗಿದೆ. ವಿದೇಶದಲ್ಲಿಯೂ ಜನಪ್ರಿಯತೆಯನ್ನು ಗಳಿಸುತ್ತಲಿದೆ.

<u>ಹೋಳಿಹಬ್ಬ</u> :- ಭಾರತದ ತುಂಬೆಲ್ಲ ಹೋಳಿಹಬ್ಬ ಪ್ರಸಿದ್ಧವಾಗಿದೆ. ಶಿವಕಾಮನ ಪ್ರತೀಕವಾಗಿ ಊರವರೆಲ್ಲ

ಅಡಿ ಟಿಪ್ಪಣಿ : * ಉತ್ತರಕನ್ನಡ ಜಿಲ್ಲೆಯ ಸಾಂಪ್ರದಾಯಿಕ ತಾಳಮದ್ದಳೆ ಕಾರ್ಯಕ್ರಮದ ವೀಕ್ಷಣೆಯಿಂದ ....

ಸೇರಿ ಕಟ್ಟಿಗೆಯನ್ನು ಕೂಡಿಹಾಕಿ ಕಾಮನನ್ನು ಸುಟ್ಟು ಗುಲ್ಲೆಬ್ಬಿಸುತ್ತ ಬಣ್ಣದ ನೀರೆರೆಚುತ್ತಾ ನಾನಾರೀತಿಯ ವೇಷ ತೊಟ್ಟು ಈ ಹಬ್ಬವನ್ನು ಆಚರಿಸುವರು. ಉತ್ತರಕನ್ನಡದ ಘಟ್ಟದಮೇಲಿನ ತಾಲೂಕುಗಳಲ್ಲಿ ಬಣ್ಣದ ಓಕುಳಿಯಾಡುವ ಸಂಭ್ರಮ ಹೆಚ್ಚಾಗಿದೆ. ಘಟ್ಟದಕೆಳಗಿನ ತಾಲೂಕುಗಳಲ್ಲಿ ಕಾಮನನ್ನು ಸುಟ್ಟು ಕರಿಯನ್ನು ಮೈಗೆಲ್ಲಲೇಪಿಸಿಕೊಂಡು ವಿಧವಿಧದ ವೇಷದಲ್ಲಿ ಮನೆ-ಮನೆ ತಿರುಗಿ ಬೇಡುವರು. ಅಂತಹ ಸಂದರ್ಭದಲ್ಲಿ . ಅವರು ಹಾಡುವ ಪದಗಳು ಮನರಂಜನೀಯವಾಗಿರುವುದು. ಶಾಸ್ತ್ರೀಯಸಂಗೀತದ ಚೀಜ್‌ಗಳಲ್ಲೂ ಹೋಳಿಹಬ್ಬದ ವರ್ಣನೆಯನ್ನು ನಾವು ಇಂದಿಗೂ ಕೇಳಬಹುದಾಗಿದೆ.

* ಧುಮಸಾಯ್ಲೋ ತಮ್ಮಾ ದುಮಸಾಯ್ಲೋ
ಕಾಮನೋ ಬೀಮನೋ ದುಮಸಾಯ್ಲೋ
ಕಾಮಸತ್ತ ಮರುದಿನ ಬೆಲ್ಲಾಯ್ಸ ಉಣಿರೋ
ದುಮಸಾಯ್ಲೊ ತಮ್ಮ ದುಮಸಾಯ್ಲೋ
ಹೆಣ್ಣ ಕೇಳೋಕೆ ಹೋಗಿದ್ರೊ, ದುಮಸಾಯ್ಲೋ
ಹೆಣ್ಣ ಬಾಳದೊಡ್ಡ, ಗಂಡ ಬಾಳ ಸಣ್ಣ ದುಮಸಾಯ್ಲೋ
ಆಚೆಕೇರಿ ಮಗುವೆ ಈಚೆಗ್ಯಾಕೆ ಬಂದೆ?
ದುಮಸಾಯ್ಲೋ ತಮ್ಮ ಧುಮಸಾಯ್ಲೋ

ಈ ಪದದಲ್ಲಿ ಮೇಲಿಂದ ಮೇಲೆ ಬರುವ ಧುಮಸಾಯ್ಲೋ ಪದದ ಅರ್ಥವೇನೆಂಬುದು ಸ್ಪಷ್ಟವಾಗುವುದಿಲ್ಲ. ಜಿಲ್ಲೆಯ ಜನಪದತಜ್ಞ ಡಾಃ ಗೋಪಾಲಕೃಷ್ಣ ನಾಯಕರು ದಮ್ಮಿಸತೆನ್ನಿರೋ ತಮ್ಮಗಳಿರಾ ಎಂಬ ಹೋಳಿ ಹುಣ್ಣಿಮೆಯನ್ನು ಕುರಿತು ವಾದಿರಾಜರು ಹಾಡಿದ ಪದದ ಪಲ್ಲವಿ ಇದಾಗಿರಬಹುದೇ ? ಎಂದು ತರ್ಕಿಸುತ್ತಾರೆ. ಜಿಲ್ಲೆಯ ಕೇಂದ್ರ ಸ್ಥಳವಾದ ಕಾರವಾರದ ಕುಣುಬಿಯವರು ಹೋಳಿಯ ಕುಣಿತ ಮಾಡುವರು. ಬಿಳಿಯ ಡಾಲಂಗಿ ಮತ್ತು ಕೆಂಪುಬಣ್ಣದ ಸೀರೆಯನ್ನು ಅಡ್ಡಕಸೆ ಮಾಡಿ ಉಟ್ಟು ಬಿಳಿಶಲ್ಯಹಾಕಿ ರುಮಾಲಿನಲ್ಲಿ ಬಣ್ಣಬಣ್ಣದ ಹೂಗರಿಗಳಿಂದ ಶೃಂಗರಿಸಿಕೊಂಡು ಕೈಗೆ ಬಳೆ ಕಾಲಿಗೆ ಗೆಜ್ಜೆದರಿಸಿ ಗಮಟೆ ಬಾರಿಸಿ ತಮ್ಮ ಭಾಷೆಯ ಪದಗಳನ್ನು ಹೇಳುತ್ತ ಗುಂಪಿನೊಂದಿಗೆ ಕುಣಿಯುತ್ತಾರೆ. ಹಬ್ಬ ಮುಗಿದೊಡನೆ ಒಂದೆಡೆ ಕಟ್ಟಿಡುವರು. ಮುಂದಿನ ವರ್ಷ

ಅಡಿಟಿಪ್ಪಣಿಃ * ಡಾಃ ಶ್ರೀಪಾದ ಶೆಟ್ಟಿ ಇವರಿಂದ ಸಂಗ್ರಹಿಸಿದ್ದು ....

ಹಬ್ಬಕ್ಕೆ ಮತ್ತೆ ಅವುಗಳನ್ನು ತೆಗೆಯುವರು. ಕರಡೀವೇಷ ವಿಶೇಷವಾಗಿ ಅಂಕೋಲೆಸೀಮೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಅಲ್ಲಿ ಇದಕ್ಕೆ 'ಕರಡೀಹಬ್ಬ' ಎಂತಲೂ ಕರೆಯುತ್ತಾರೆ. ಹೋಳಿಹಬ್ಬವನ್ನು ಸಡಗರದಿಂದ ಉತ್ಸಾಹದಿಂದ ಆಚರಿಸುತ್ತಾರೆ.

ರಾಷ್ಟ್ರೀಯ ಯುವ ಕಲಾವಿದ ಪ್ರಶಸ್ತಿವಿಜೇತ ಜಿಲ್ಲೆಯ ಯುವಕಲಾಕಾರ
ಶ್ರೀ ಕೃಷ್ಣಮೂರ್ತಿ ಭಟ್ಟ



ನಂಬಿಕೆಗಳು ನಡುವಳಿಕೆಗಳು

* ನಮ್ಮ ದೇವರು ಭೂತ , ಪಿಶಾಚಿ, ಮಾಟ, ಮಂತ್ರಗಳು ಹಬ್ಬ ಹರಿದಿನಗಳು, ಸಂಪ್ರದಾಯ ಸಂಸ್ಕಾರಗಳು, ವಿಧಿ ನಿಷೇದಗಳೆಲ್ಲ ನಂಬಿಕೆಯ ಆಧಾರದ ಮೇಲೆಯೇ ನಿಂತಿದೆ. ಮನುಷ್ಯನ ಬದುಕಿಗೆ ನಂಬಿಕೆಯೇ ಊರುಗೋಲೆಂದರೆ ತಪ್ಪಾಗಲಿಕ್ಕಿಲ್ಲ. ಈ ನಂಬಿಕೆಗಳಲ್ಲಿ ಕೆಲವು ಮೂಡನಂಬಿಕೆಗಳಾದರೆ ಇನ್ನು ಕೆಲವು ಜೀವನೋಪಯೋಗಿಯಾಗಿದ್ದು ಇದು ಮನುಷ್ಯನ ಬದುಕಿಗೆ ವಿಶ್ವಾಸವನ್ನು ಆತ್ಮ ಸ್ಥೈರ್ಯವನ್ನು ತುಂಬುವಂತಹದು. ಆದ್ದರಿಂದ ಎಲ್ಲ ನಂಬಿಕೆಗಳನ್ನು ಅವೈಜ್ಞಾನಿಕವೆಂದು ತೆಗೆದುಹಾಕದೇ ಅವಮಾನವೀಯವಾದ, ಕ್ರೂರವಾದ ಕೆಲವು ಅವೈಜ್ಞಾನಿಕ ಮೂಡನಂಬಿಕೆಗಳನ್ನು ತ್ಯಜಿಸುವುದು ಒಳ್ಳೆಯ ಬೆಳವಣಿಗೆಗೆ ಪೂರಕವಾಗುವುದು. ನಂಬಿಕೆಯಿಲ್ಲದ ಮನುಷ್ಯನಿದ್ದಾನೆ ಎಂದರೆ ನಾವು ಬೇರಿಲ್ಲದ ಮರ ಇದೆ ಎಂಬುದನ್ನು ನಂಬಿದಷ್ಟೆ ಕಟು ಸತ್ಯವಾಗಬಹುದು. ನಾಡಿನುದ್ದಕ್ಕೂ ಹರಡಿಕೊಂಡಿರುವ ನಂಬಿಕೆಗಳನ್ನೆಲ್ಲ ಸಂಗ್ರಹಿಸಿ ಅವುಗಳ ಹಿನ್ನೆಲೆಯಲ್ಲಿದ್ದ ಮನೋವೈಜ್ಞಾನಿಕ ಅಂಶವನ್ನು ಗಣನೆಗೆ ತೆಗೆದುಕೊಂಡು ಮಾನವಸಂಸ್ಕೃತಿಯ ಉತ್ಥಾನಕ್ಕೆ ಸಹಾಯಕವಾಗಬಹುದಾದವುಗಳನ್ನು ಉಳಿಸಿಕೊಂಡು ಪ್ರಸಾರ ಮಾಡಿದಲ್ಲಿ, ಜನತೆಯ ಹಾಗೂ ಸಮಾಜದಲ್ಲಿ ಸಂಸ್ಕೃತಿವರ್ದನೆಗೆ ಸಹಾಯಮಾಡಿದಂತಾಗುತ್ತದೆ. ಈ ನಂಬಿಕೆಗಳಲ್ಲಿ ವೈಜ್ಞಾನಿಕ ಚಾಲನೆ ನೀಡಿದ ನಂಬಿಕೆಗಳೂ ಇದ್ದುದನ್ನು ನೆನೆಯಬಹುದು. ಅನೇಕ ಹಿರಿಯ ಕಲಾಕಾರರು ತಾವು ಕಲಿತ ಕಲೆಯನ್ನು ಶುದ್ಧವಾಗಿ, ವೈಚಾರಿಕತೆಯಿಂದ ಮತ್ತು ತಮ್ಮ ನಂಬಿಕೆಗಳಿಂದ ಇಂದಿಗೂ ಮುನ್ನಡೆಸಿಕೊಂಡು ಬಂದಿರುವುದನ್ನು ನೋಡಿದಾಗ ಇವರುಗಳು ನಡೆಸಿಕೊಂಡು ಬಂದ ಕಲೆ, ನಂಬಿಕೆ, ಆಚಾರ ವಿಚಾರಗಳೂ ಸಹ ಅಧ್ಯಯನಕ್ಕೆ ಯೋಗ್ಯವೇ ಆಗಿದೆ. ನಿರಕ್ಷರಿಯೂ ಕೂಡ ಕಲಾಪ್ರಪಂಚದಲ್ಲಿ ಸಾಮ್ರಾಟ ನೆನಿಸಿಕೊಂಡಿರುವ ಅನೇಕ ಉದಾಹರಣೆಗಳನ್ನು ನಾವಿಲ್ಲಿಕೊಡಬಹುದು. ಇದಕ್ಕೆಲ್ಲ ಮೂಲ ಅವರು ಅಭ್ಯಾಸ ಮಾಡಿದ ಕಲಾಪ್ರಕಾರದಲ್ಲಿ ಅವರು ತೋರಿಸಿದ ಶ್ರದ್ಧೆ, ನಂಬಿಕೆಗಳೇ ಹೊರತು ಮತ್ತಾವುದಲ್ಲ. ಆ ನಂಬಿಕೆ ಹಾಗೂ ಅಧ್ಯಯನದಿಂದಲೇ ವೃದ್ಧಕಲಾಕಾರರೂ ಕೂಡ ಯುವ ಕಲಾಕಾರರನ್ನೂ ನಾಚಿಸುವಂತಹ ಅಭಿನಯ ಹಾಗೂ ಪ್ರೌಢಿಮೆಯಲ್ಲಿ ಕಲಾರಂಗದಲ್ಲಿ ವಿಶಿಷ್ಟ ಛಾಪನ್ನು ಒತ್ತಿದ್ದಾರೆ.

ಅಡಿಟಿಪ್ಪಣಿ: * ವಿಚಾರಶೀಲ ಲೇಖನಗಳು ಹಾಗೂ ಲೇಖಕರ ವಿಚಾರಗಳನ್ನಾಧರಿಸಿ ......

ಶಾಸ್ತ್ರೀಯಸಂಗೀತವೇ ಇರಲಿ ಅಥವಾ ಶಾಸ್ತ್ರೀಯ ಪ್ರಕಾರದ ಯಾವುದೇ ಕಲೆಯ ಮೂಲ, ಜನಪದ ಕಲೆಯೆಂದರೆ ತಪ್ಪಾಗಲಾರದು. ಭೂಮಿಯಂತೆ ಫಲವತ್ತಾದ ಜನಪದಗೀತ, ಕಥೆಗಳಲ್ಲಿ ನಮ್ಮ ಜನಪದರು ತಮ್ಮ ಬದುಕನ್ನೇ ಕಟ್ಟಿಟ್ಟಿದ್ದಾರೆ. ಜನಪದರು ತಾವು ಕಾಣದ್ದನ್ನು ಕುರಿತು ಹೇಳಹೊರಟದ್ದು ತೀರ ಕಡಿಮೆ. ಬದುಕಿನಲ್ಲಿ ಕಂಡಂತಹ ಅನುಭವಗಳು ಸಿಹಿಯಾಗಿರಲಿ ಅಥವಾ ಕಹಿಯಾಗಿರಲಿ ನೀತಿಯುತವಾದದ್ದಿರಲಿ ಅಥವಾ ಅನೀತಿಯುತವಾದದ್ದಿರಲಿ ಎಲ್ಲವನ್ನೂ ಹಾಡಿದರು. ಪ್ರಜ್ಞಾಪೂರ್ವಕವಾಗಿ ಇವರು ಹಾಡನ್ನು ಬರೆಯಲಿಲ್ಲ. ತಮ್ಮ ಬದುಕಿನ ಒಂದಂಗವಾಗಿಯೆ ಹಾಡನ್ನು ಅಳವಡಿಸಿಕೊಂಡರು. ಸಹಜ ಸ್ಫೂರ್ತಿಯಿಂದ ಹಾಡಿದರು.

ರಾಜ ಮಹಾರಾಜರು ಆಳಿದ ಇಂದಿನ ಪ್ರಜಾಪ್ರಭುತ್ವದಲ್ಲಿ ಜನಸಾಮಾನ್ಯನೂ ಪ್ರಭುವಾಗಬಲ್ಲ. ಅರ್ಹತೆ ಇರಬೇಕು ಅಷ್ಟೆ. ದೇಶದ ಆಸ್ತಿ ಎಂದರೆ ಸಾಹಿತ್ಯ ಹಾಗೂ ಕಲೆಗಳು ಮತ್ತು ಸಂಸ್ಕೃತಿಗಳೇ ಆಗಿವೆ. ಆದರೆ ಇಂದು ಪ್ರಜಾಶಕ್ತಿಯಲ್ಲಿ ಜನಸಾಮಾನ್ಯನನ್ನು ಕಡೆಗಣಿಸಿದಂತೆಯೂ ಅವನ ಸಾಹಿತ್ಯ ಹಾಗೂ ಕಲೆಗಳನ್ನು ಕಡೆಗಣಿಸಲಾಗಿದೆ. ರಾಜಕೀಯವನ್ನು ಕಲಾಪ್ರಕಾರದಲ್ಲಿಯೂ ಬೆರೆಸಲಾಗುತ್ತಿದೆ. ಪ್ರತಿಭಾವಂತರಿಗೆ ಮರ್ಯಾದೆ ಸಿಗುವುದಿಲ್ಲ. ರಾಜಕೀಯದಿಂದ ಮೇಲೆ ಬರಲು ಕಲಾವಿದರೂ ಪೈಪೋಟಿ ನಡೆಸುತ್ತಿದ್ದಾರೆ.

* ಪ್ರಪಂಚದ ಶ್ರೇಷ್ಠ ವಿದ್ವಾಂಸರು ಯಾವುದನ್ನು ಶ್ರೇಷ್ಠ ಹಾಗೂ ಸರ್ವಕಾಲಿಕ ಮೌಲ್ಯವುಳ್ಳದ್ದು ಎಂದು ಎತ್ತಿ ತೋರಿಸುತ್ತಾರೆಯೋ ಅಂತಹ ಉನ್ನತ ಮಟ್ಟದ ಶಾಸ್ತ್ರೀಯ ಹಾಗೂ ಜನಪದ ಶೈಲಿ ನಮ್ಮಲ್ಲೂ ಇದೆ ಎನ್ನುವುದನ್ನು ನಾವು ಮನಗಾಣಬೇಕಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ವಿದೇಶೀಯರು ನಡೆದ ಜಾಡಿನಲ್ಲೇ ನಡೆದು ನಮ್ಮತನವನ್ನು ಕಳೆದುಕೊಂಡು ಅವರ ಅನುಯಾಯಿಗಳಾಗುವುದು ಬೇಡ. ಹಾಗಂತ ಪರಕೀಯವಾದದ್ದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಬೇಕೆಂದು ಹೇಳಲಾಗದು. ಅವರಲ್ಲಿರುವ ಒಳ್ಳೆಯದನ್ನು ಹಂಸಕ್ಷೀರ ನ್ಯಾಯದಂತೆ ಸ್ವೀಕರಿಸಬೇಕು. ಕೇವಲ ಅನುಕರಣೆ ಅನುಸರಣೆ ಬೇಡ. ನಮ್ಮ ಬದುಕಿಗೆ ಚೈತನ್ಯವನ್ನು ಸೊಗಸನ್ನು ಸಂತೃಪ್ತಿಯನ್ನು ನೀಡುವ ಜನಪದ ಹಾಗೂ ಶಾಸ್ತ್ರೀಯ ಕಲೆಗಳನ್ನು, ಸಂಸ್ಕೃತಿಗಳನ್ನು ಉಳಿಸಿಕೊಳ್ಳಬೇಕು. ಬೇಡದ್ದನ್ನು ಬಿಡಬಹುದು. ವ್ಯಕ್ತಿ ನಿಷ್ಠೆಯ ಭ್ರಮೆಬಿಟ್ಟು ವಸ್ತು ನಿಷ್ಠವಾಗಿ ನೋಡಿ ಸತ್ವಯುತವಾದುದನ್ನು ನಾವು ಸ್ವೀಕರಿಸಿದಾಗಲೇ ಬದಲಾವಣೆ ಹಾಗೂ ಬೆಳವಣಿಗೆಯನ್ನು ಹೊಂದಲು ಸಾಧ್ಯ. ಎಲ್ಲವನ್ನು ವಸ್ತುನಿಷ್ಠವಾಗಿ

ಅಡಿಟಿಪ್ಪಣಿ: * ಲೇಖಕರ ಅಭಿಪ್ರಾಯವನ್ನಾಧರಿಸಿ ....

ನೋಡಿ ಸತ್ವಯುತವಾದುದನ್ನು ಉಳಿಸಿಕೊಳ್ಳಬೇಕಾಗಿದೆ. ಅಂದಾಗ ಮಾತ್ರ ಸಮಾಜದಲ್ಲಿ ಸಂಸ್ಕೃತಿ, ಕಲೆಗಳ ಉತ್ತಮ ಬೆಳವಣಿಗೆ ಸಾಧ್ಯ. ಆರಂಭದಲ್ಲಿ ಇವುಗಳನ್ನು ರೂಡಿಸಿಕೊಳ್ಳುವುದು ತುಸುಕಷ್ಟವಾದರೂ ಬದುಕಿನ ಮುಂದಿನದಿನಗಳಲ್ಲಿ ಇವು ನಮಗೆ ಸಹಾಯಕ್ಕೆ ಬಂದೇ ಬರುವುದು. ಇಂತಹ ತತ್ವ, ಮೌಲ್ಯ, ಹಾಗೂ ಕಲೆಗಳನ್ನು ಬೆಳೆಸಿದಾಗ ಆರೋಗ್ಯಯುತ ಹಾಗೂ ಸತ್ವಯುತ, ಸಂಸ್ಕೃತಿಯುಳ್ಳ ಸಮಾಜ ನಮ್ಮದಾಗಬಹುದು.

ಸಂಪ್ರದಾಯ ಹಾಡುಗಳು :

ನಮ್ಮ ದೇಶದ ಎಲ್ಲ ಸಂಗೀತಕ್ಕೂ ಸಂಪ್ರದಾಯದ ಸುಭದ್ರವಾದ ಅಡಿಪಾಯವಿದೆ. ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ದಕ್ಷಿಣಾದೀ ಹಾಗೂ ಉತ್ತರಾದೀ ಎಂಬ ಎರಡು ವಿಧವಿದೆ. ಈ ಸಂಗೀತವಲ್ಲದೆ ನಾಟಕ ಸಂಗೀತ ಅಥವಾ ರಂಗಗೀತೆಗಳ ಪರಿಚಯವು ಪ್ರತಿಯೊಬ್ಬರಿಗೂ ಇರುತ್ತದೆ. ಇನ್ನು ಜನಪದ ಸಂಗೀತ ಇತ್ತೀಚಿನ ದಿನಗಳಲ್ಲಿ ಇದರ ಬಗೆಗೆ ಅಪಾರ ಆಸಕ್ತಿ ಹಾಗೂ ಅಧ್ಯಯನಗಳು ನಡೆಯುತ್ತಲಿದೆ. ಶಾಸ್ತ್ರೀಯ ಹಾಗೂ ಉಪಶಾಸ್ತ್ರೀಯ ಯಾವುದರ ವ್ಯಾಪ್ತಿಗೂ ಒಳಗಾಗದ ಕೆಲವು ಹಾಡುಗಳಿವೆ. * ಮನೆಯಲ್ಲಿ ಹೆಂಗಸರು ಪೂಜೆ ಮಾಡುವಾಗ ಹಾಡುವ ಹಾಡುಗಳು, ವ್ರತ ಮಾಡುವಾಗ ಹಾಗೂ ಹಬ್ಬ, ಹರಿದಿನಗಳಲ್ಲಿ ಹಾಡುವ ವ್ರತದ ಕತೆಗಳು, ರಾಮಾಯಣ, ಮಹಾಭಾರತ ಮುಂತಾದ ಪೌರಾಣಿಕ ಕಥೆಗಳ ಹಾಡುಗಳು ಮಕ್ಕಳನ್ನು ತೂಗುವಾಗ, ಸುಪ್ರಭಾತ ಸಮಯದಲ್ಲಿ , ಮದುವೆ, ಮಂಗಳಕಾರ್ಯದಲ್ಲಿ ಹಾಡುವ ಹಾಡುಗಳು, ಇಂದಿಗೂ ಈ ಜಿಲ್ಲೆಯಲ್ಲಿ ಹೇರಳವಾಗಿದೆ. ಸಂಸ್ಕಾರ ಹಾಗೂ ಸಂಸ್ಕೃತಿಯನ್ನು ಬೆಳೆಸಲು ಇವುಗಳೂ ಸಹ ಮುಖ್ಯಪಾತ್ರವನ್ನು ವಹಿಸುತ್ತವೆ. ವಯಸ್ಸಾದ ಅಜ್ಜಿಯರು, ತಾಯಂದಿರು ಹಾಡುವ ಹಾಡುಗಳು ಅತ್ಯಂತ ಸ್ವಾರಸ್ಯಕರವಾದವುಗಳು. ಇಂತಹ ಹಾಡುಗಳನ್ನು ಸಂಪ್ರದಾಯದ ಹಾಡುಗಳು ಎಂದು ಹೇಳುವುದು ವಾಡಿಕೆಯಾಗಿದೆ. ಈ ಹಾಡುಗಳಲ್ಲಿ ಹೆಚ್ಚಿನ ಸಂಖ್ಯೆಯವುಗಳಿಗೆ ಕರ್ತೃ ಯಾರು ಇದರ ಸಂಗೀತ ಹೇಗೆ ಪ್ರಾರಂಭವಾಯಿತು, ಮುಂತಾದ ವಿಷಯಗಳು ತಿಳಿದಿಲ್ಲ. ವಿಷಯದ ಅಧ್ಯಯನ ಇನ್ನೂ ನಡೆಯಬೇಕಾಗಿದೆ. ಹೀಗಾಗಿ ಜನಸಾಮಾನ್ಯರೇ ಇವನ್ನು ಹಾಡಿಕೊಳ್ಳುವುದರಿಂದ ಇದನ್ನು ಜನಪದ ಗೀತೆಗಳೆಂದೇ ಕರೆಯಬಹುದಾದರೂ ಇವುಗಳ ಸಂಗೀತಕ್ಕೆ ಶಾಸ್ತ್ರೀಯ ಸಂಗೀತದ ಬಲವಾದ ಹಿನ್ನೆಲೆ ಇರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದ್ದರಿಂದ ಇವುಗಳು ಶುದ್ಧ ಜನಪದ

ಅಡಿ ಟಿಪ್ಪಣಿ :- ಸಂಪ್ರದಾಯದ ಪರಂಪರೆಯ ಅಧ್ಯಯನದಿಂದ...........

ಗೀತೆಗಳಲ್ಲಿ ಶಾಸ್ತ್ರೀಯ ಸಂಗೀತದ ಹಿನ್ನೆಲೆ ಈ ಹಾಡುಗಳ ಸಂಯೋಜನೆಯಲ್ಲಿ ಕಂಡುಬಂದರೂ ಸಹ, ಶಾಸ್ತ್ರೀಯ ಸಂಗೀತವನ್ನು ಅರಿಯದ ಹೆಣ್ಣುಮಕ್ಕಳ ಈ ಹಾಡುಗಳು ಶುದ್ಧ ಶಾಸ್ತ್ರೀಯತೆಗೆ ಅಲ್ಪ ಸ್ವಲ್ಪ ಅಧ್ದಿಯನ್ನು ಮಾಡಿರುವುದು ಗಮನಕ್ಕೆ ಬಾರದೇಇರದು. ಝಂಪೆತಾಳದಲ್ಲಿ ನಿಧಾನಗತಿಯಲ್ಲಿ ಈ ಹಾಡುಗಳಿರುವವು. ಇವುಗಳನ್ನು ಸಂಪ್ರದಾಯದ ಹಾಡುಗಳೆಂದೇ ಇಂದಿಗೂ ಗುರುತಿಸಲಾಗುತ್ತದೆ. ಅದೂ ಅಚ್ಚ ಜನಪದ ಗೀತೆಗಳಾದ ರಾಗಿಬೀಸುವ ಪದಗಳನ್ನು ಈ ಹೆಣ್ಣುಮಕ್ಕಳೇ ಹಾಡುತ್ತಾರೆ. ಇವುಗಳನ್ನು ಸಂಪ್ರದಾಯದ ಹಾಡುಗಳೆಂದೇ ಕರೆಯಲಾಗಿದೆ.

ನಾಡಿನ ಸಂಗೀತ ಸಂಸ್ಕೃತಿ ರೂಪಗೊಳ್ಳುತ್ತಿದ್ದುದು ಈ ಸಂಪ್ರದಾಯದ ಹಾಡುಗಳಲ್ಲಿ. ಅವನ್ನು ಹಾಡುವ ಹೆಂಗಳೆಯರಿಗೆ ಸಂಗೀತದ ಪಾಠವಿಲ್ಲದಿದ್ದರೂ ಕಂಠಶ್ರೀ, ಸುನಾದ ಮನೋಧರ್ಮ ತಾನೇ ತಾನಾಗಿರುವುದು ಇಂದಿಗೂ ಅನುಭವಕ್ಕೆ ಬರುವ ವಿಷಯವಾಗಿದೆ. ಸಂಪ್ರದಾಯದ ಹಾಡುಗಳ ಹಾಡಿಗೆ ಒದಗಿಸುವ ಇಂತಹ ಭದ್ರವಾದ ಬುನಾದಿ, ಮನೆ ಮನೆಯಲ್ಲೂ ಹೆಂಗಸರು ಹಾಗೂ ಗೃಹಿಣಿಯರಿಗಿದ್ದರೆ ಸಂಗೀತದ ಹಾಗೂ ಸಂಸ್ಕೃತಿಯ ಸೆಲೆ ಬತ್ತದಿರುತ್ತದೆ. ಸಮಾಜದಲ್ಲಿ ಸಂಗೀತ ಹಾಗೂ ಸಂಸ್ಕೃತಿ ಉಳಿದು ಬೆಳೆಯುವುದು ಸುಲಭವಾಗುತ್ತದೆ. ಇಂದಿನ ಯುವ ಸಂಗೀತಗಾರರೂ , ಸಂಗೀತ ವಿದ್ಯಾರ್ಥಿಗಳೂ ಈ ಹಾಡುಗಳ ದಾಟಿಗಳಿಗೆ, ಉಳಿಕೆಗೆ, ಅಧ್ಯಯನಕ್ಕೆ ಮನಸ್ಸು ಕೊಟ್ಟರೆ ಇದುವರೆಗೂ ಸುಪ್ತವಾಗಿಯೇ ಇರುವ ಅನೇಕ ಸಂಗೀತ ತತ್ವಗಳು ಬೆಳಕಿಗೆ ಬರಬಹುದು.

ವೀಣೆ ದೊರೆಸ್ವಾಮಿ ಅಯ್ಯಂಗಾರ್



ಯಕ್ಷಗಾನ

ಕನ್ನಡ ಕರಾವಳಿಯ ಹೆಮ್ಮೆಯ ಕಲೆಯಾಗಿ ಯಕ್ಷಗಾನವು ಬೆಳೆದುನಿಂತಿದೆ. ಪೌರಾಣಿಕ ಕಥಾನಕದ ಸತ್ವದಿಂದಾಗಿ ಶ್ರೇಷ್ಠವಾದ ಮಾತುಗಾರಿಕೆ, ಭಾಗವತಿಕೆ, ಮದ್ದಳೆ, ಚಂಡೆ ಒಂದೇ ಎರಡೆ? ಕಲಾರಸಿಕರ ಕಣ್ಮನಗಳನ್ನು ತಣಿಸುತ್ತದೆ. ದೇಶ ವಿದೇಶಗಳಲ್ಲಿ ಈ ಕಲೆಗೆ ಇಂದು ಕಲಾಗೌರವ ಸಲ್ಲುತ್ತಿದೆ. ಈ ಯಕ್ಷಗಾನವು ತಮಿಳು, ಮರಾಠಿ ಹಾಗೂ ತೆಲಗು ಕಲೆಗಳ ಮೇಲೂ ಪ್ರಭಾವ ಬೀರಿದೆ.

ಯಕ್ಷಗಾನ ಎಂಬ ಹೆಸರು ತುಂಬಾ ವಿಚಾರಕ್ಕೆ ಎಡೆಮಾಡಿದೆ. ಯಕ್ಷಗಾನವು ಎಕ್ಕಲುಗಾಣದ ಸಂಸ್ಕೃತೀಕರಣವೆ? ಅಥವಾ ಜಕ್ಕ ಪದ ಯಕ್ಷವಾಯಿತೆ ? ಇಲ್ಲವೆ ಯಕ್ಷ ಎಂಬುದು ಯಜ್ಞ ಮಾಡು, ಪೂಜಿಸು ಎಂಬ ಅರ್ಥವಿರಬಹುದೇ ಎಂಬುದು ವಿಚಾರಕ್ಕೆ ಯೋಗ್ಯವಾದ ವಸ್ತುವಾಗಿದೆ. ಏನೇ ಇದ್ದರೂ ಯಕ್ಷಗಾನ ಸಂಗೀತ ಪ್ರಧಾನ ರಂಗಕಲೆ. ಬಯಲಿನಲ್ಲಿ ನಡೆಯುವುದರಿಂದ ಬಯಲಾಟವೆನಿಸಿದೆ.

ಯಕ್ಷಗಾನವು ತನ್ನದೇ ಆದ ವಿಶೇಷ ಛಾಪನ್ನು ಪ್ರೇಕ್ಷಕರಲ್ಲಿ ಒತ್ತಿದೆ. ಜಿಲ್ಲೆಯ ಅನೇಕ ಯಕ್ಷಗಾನ ಕಲಾವಿದರು ಇಂದು ರಾಷ್ಟ್ರ ಪ್ರಶಸ್ತಿಯನ್ನು ಪಡೆದು ಯಕ್ಷಗಾನದ ಕಂಪನ್ನು ದೆಹಲಿಯವರೆಗೆ ಹಬ್ಬಿಸಿದ್ದಾರೆ. ವೇಶಭೂಷಣ ಬೆಡಗು, ನರ್ತನದ ಸೊಬಗು, ಮಾತಿನ ಮೋಡಿ, ಜಾಣ್ಮೆಯ ಪ್ರಸಂಗ ಪದಗಳ ಸೊಗಸುಗಾರಿಕೆಗಳಿಂದ ಈ ಕಲೆ ಜನಮನಗಳನ್ನು ಗೆದ್ದು ಅವರನ್ನು ತಣಿಸಿದೆ. ಪೌರಾಣಿಕ ಪ್ರಸಂಗಗಳೇ ಹೆಚ್ಚಿರುವ ಯಕ್ಷಗಾನ, ಧಾರ್ಮಿಕ ಹಿನ್ನೆಲೆಯಿಂದಲೇ ಹುಟ್ಟಿಕೊಂಡಿದೆ. ಸಂಗೀತಾರಾಧನೆ, ನೃತ್ಯಸೇವೆ ಮಾಡಿಸಿದಂತೆ ಯಕ್ಷಗಾನ ಬಯಲಾಟಆಡಿಸುವ ಸೇವೆಯೂ ದೇವಾಲಯಗಳಲ್ಲಿ ನಡೆದು ಬಂದಿದೆ.* ಹೊನ್ನಾವರ ತಾಲೂಕಿನ ಗುಂಡಬಾಳದ ಹನುಮಂತ ದೇವರಿಗೆ ಯಕ್ಷಗಾನ ಸೇವೆ ಬಲು ಪ್ರಿಯವಾದುದು. ಬೇಸಿಗೆಯಲ್ಲಿ ನಾಲ್ಕೈದು ತಿಂಗಳು ಕಾಲ ಪ್ರತಿನಿತ್ಯ ಸೇವೆಯ ಆಟ ನಡೆಯುತ್ತಲೇ ಇರುತ್ತದೆ. ಇಷ್ಟೊಂದು ದಿನ ಹರಕೆ ಆಟ ನಡೆಯುವುದು ಒಂದು ವಿಶೇಷವೇ ಆಗಿದೆ. ಹಳ್ಳಿ ಹಳ್ಳಿಗಳಲ್ಲಿಯೂ ಬಯಲಾಟಗಳು ಆಗುತ್ತಲೇ ಇರುತ್ತದೆ.

ಯಕ್ಷಗಾನ ನಡೆಯುವ ಸ್ಥಳದ ಬಣ್ಣದ ಚೌಕಿಯಲ್ಲಿ ಮೊದಲು ಗಜಮುಖದವನಿಗೆ ಪ್ರಾರ್ಥನೆ ಸಲ್ಲಿಸಿಸುತ್ತಾರೆ. ಆರತಿ ಎತ್ತಿ ನಂತರ ಭಾಗವತರು ಚಂಡೆ, ಮದ್ದಳೆಯವರೊಂದಿಗೆ ರಂಗಸ್ಥಳಕ್ಕೆ ಬರುತ್ತಾರೆ.

ಅಡಿಟಿಪ್ಪಣಿಃ * ಗುಂಡಬಾಳದ ಹನುಮಂತ ದೇವರ ಸನ್ನಿಧಿಯಲ್ಲಿ ನಡೆಯುವ ಹರಕೆ ಬಯಲಾಟವನ್ನು ವೀಕ್ಷಿಸಿ ....

ಗಜಮುಖನ ಸ್ತುತಿಯ ನಂತರ, ಶ್ರೀಕೃಷ್ಣನ ಗುಣಗಾನದ ಹಾಗೂ ಆತನಿಗೆ ನಮಸ್ಕರಿಸುವ ಪದ್ಯವನ್ನು ಭಾಗವತರು (ಸೂತ್ರಧಾರ) ಹೇಳುತ್ತಲೇ ಕೋಡಂಗಿ, ಬಾಲಗೋಪಾಲರು ಮತ್ತು ಸ್ತ್ರೀ ವೇಶದವರು ರಂಗ ಸ್ಥಳಕ್ಕೆ ಬಂದು ಕ್ರಮವಾಗಿ ತಮ್ಮ ಅಭಿನಯಗಳನ್ನು ಮಾಡಿ ತೋರಿಸುತ್ತಾರೆ. ಇಷ್ಟೆಲ್ಲಾ ಆದ ಮೇಲೆ ಭಾಗವತರು ಕಥಾಪ್ರಸಂಗದ ಆರಂಭವನ್ನು ಮಾಡುತ್ತಾರೆ. ಭಾಗವತರು ಆ ದಿನದ ಪ್ರಸಂಗದ ಪದಗಳನ್ನು ಭಾವಪೂರ್ಣವಾಗಿ ಕುಣಿತದ ಭೋಲ್‌ಗಳೊಂದಿಗೆ ವೇಷದಾರಿಯನ್ನು ಕುಣಿಸಿ ಕತೆಯನ್ನು ಮುಂದುವರಿಸುವನು. ಹೊಸಪಾತ್ರಗಳು ಬಂದಾಗ, ಅವಶ್ಯವಿದ್ದಲ್ಲಿ ಪಾತ್ರದಾರಿ ಜೊತೆಗೆ ಸಂಭಾಷಣೆಯನ್ನು ನಡೆಸುವದು ಭಾಗವತನ ಕಾರ್ಯವೇ ಆಗಿದೆ. ನಟರ ಅಬಿನಯ, ಕುಣಿತ, ಮಾತುಗಾರಿಕೆ, ವೇಷಭೂಷಣಗಳಿಂದ ಹಾಗೂ ಭಾಗವತರ ಹಾಡುಗಾರಿಕೆ ಚಂಡೆ ಭೋರ್ಗರೆಯುವಿಕೆ, ಮೃದಂಗದ ಹಿತವಾದ ನುಡಿಸುವಿಕೆಯಿಂದ ಯಕ್ಷಗಾನಕ್ಕೆ ಕಳೆಯೇರಿ ಆಟ ಬೆಳಗಿನ ತನಕ ಸಾಗುತ್ತದೆ.

ಓಲೆಗರಿಗಳಲ್ಲಿ ಬರೆಯಲ್ಪಡದೆ ಬಾಯಿಂದ ಬಾಯಿಗೆ ಹರಿದುಬಂದು ಇಂದು ಮಾಯವಾಗಿರುವ ಕೃತಿಗಳೂ ನೂರಾರಿವೆ. ಕೆಲವು ಅಚ್ಚಾಗಿವೆ. ಯಕ್ಷಗಾನ ಆಟಕ್ಕೆ ಬೇಕಾದ, ಮಾತುಗಾರಿಕೆ, ಯಕ್ಷಗಾನ ಸಾಹಿತ್ಯವೂ ಈ ಜಿಲ್ಲೆಯಲ್ಲಿ ಶ್ರೀಮಂತವಾಗಿ ಬೆಳೆದಿದೆ. ಪೂರ್ವದ ಯಕ್ಷಗಾನ ಕವಿಗಳಲ್ಲಿ ಗೇರುಸೊಪ್ಪೆ ಸಾಂತಪ್ಪಯ್ಯ, ನಗರೆ ಸುಬ್ರಹ್ಮಣ್ಯ, ಎಣ್ಣೆಮಡಿ ವೆಂಕಟರಮಣಯ್ಯ, ಅಗ್ರಹಾರದ ವಿಷ್ಣು ಸಭಾಹಿತ ಮೊದಲಾದ ಪ್ರಮುಖರೂ ಇದ್ದಾರೆ. ಇಂದು ಕಡತೋಕಾ ಮಂಜುನಾಥ ಭಾಗ್ವತ, ಹೊಸ್ತೋಟದ ಮಂಜುನಾಥ ಭಾಗವತ , ಕೃಷ್ಣಭಾಗವತ ಬಾಳೆಹದ್ದ, ತಿಮ್ಮಪ್ಪ ಹೆಗಡೆ, ಹಿತ್ಲಳ್ಳಿ ಅನಂತ ಭಟ್ಟರು, ಗೋಣಸರಮನೆ ದಿ. ಪರಮೇಶ್ವರ ಅಜ್ಜ, ದಿ. ಕಾಳಿಂಗನಾವುಡ ಮೊದಲಾದ ಇನ್ನೂ ಅನೇಕರು ಪ್ರಸಂಗಗಳನ್ನು ಅದರ ಗುಣಮಟ್ಟವನ್ನು ಹೆಚ್ಚಿಸಿದ್ದಾರೆ. ದಿ.ಡಾಃ ಶಿವರಾಮ ಕಾರಂತರು ಯಕ್ಷಗಾನ ಬಯಲಾಟ ಬರೆದು ಪ್ರಕಟಿಸುವದಕ್ಕಿಂತ ಹತ್ತುವರ್ಷ ಮೊದಲು ಈ ಜಿಲ್ಲೆಯ ಶ್ರೀ ಕೃಷ್ಣಬಂಡಾರಿಯವರ ಯಕ್ಷಗಾನ ಕೈಪಿಡಿ ಹಾಗೂ ರಾ.ಭ ಹಾಸಣಗಿಯವರ ಯಕ್ಷನಾಟಕಗಳು ಎಂಬ ಯಕ್ಷಗಾನ ಗ್ರಂಥಗಳು ಪ್ರಕಟವಾದುದು ಇಲ್ಲಿ ಉಲ್ಲೇಖವಾಗಿದೆ. ಯಕ್ಷಗಾನ ಎಂಬ ಮಾಸಪತ್ರಿಕೆಯೂ ಇಲ್ಲಿ ಪ್ರಕಟವಾಯಿತು. ಪ್ರಪ್ರಥಮ ಯಕ್ಷಗಾನ ಸಮ್ಮೇಲನವು ಈ ಜಿಲ್ಲೆಯಲ್ಲೇ ನಡೆಯಿತು. ೧೯೫೯ ರಲ್ಲಿ ಜರುಗಿದ ಯಕ್ಷಗಾನಗೋಷ್ಟಿಯ ಸ್ವಾಗತಾಧ್ಯಕ್ಷರಾಗಿದ್ದ ದಿ.ವೆ. ಹಾಸಣಗಿ ಗಣಪತಿ ಭಟ್ಟರ ನೇತ್ರತ್ವದಲ್ಲಿ ಅದ್ದೂರಿಯಾಗಿ

ಅಡಿಟಿಪ್ಪಣಿಃ * ಜಿಲ್ಲೆಯ ಯಕ್ಷಗಾನ ಕಲಾಕಾರರು ಹಾಗೂ ಯಕ್ಷಗಾನ ಪರಂಪರೆಯ ಅಧ್ಯಯನದಿಂದ ಸಂಗ್ರಹಿಸಿದ್ದು ....


ಯಕ್ಷಗಾನ ಗೋಷ್ಠಿ ಭರತನಳ್ಳಿ ಸೀಮೆಯಲ್ಲಿ ನಡೆಯಿತು. ಶ್ರೀ ವೆಂಕಟ್ರಮಣ ಹೆಗಡೆ ಹೊಂಕಣಕೇರಿ (ಗಣಪತಿ ಭಟ್ಟರ ತಂದೆ) ಯಕ್ಷಗಾನ ಭಾಗವತರಾಗಿ ಹೆಸರುಗಳಿಸಿದ್ದರು. ಜಾಲಿಮನೆ ದಿ. ದೇವಪ್ಪ ಹೆಗಡೆ, ಹಿತ್ಲಳ್ಳಿ ಕೃಷ್ಣಪ್ಪ ಹೆಗಡೆ, ಕಾಶೀಮಠದ ದಿ. ಸುಬ್ರಾಯ ಭಟ್ಟರು, ಹಾಸ್ಯಗಾರ ಶ್ರೀ ಗೋವಿಂದ ಭಟ್ಟರು ಮೊದಲಾದವರಲ್ಲಿ ೫೯ ರ ದಶಕದಲ್ಲೆ ಈ ಜಿಲ್ಲೆಯಲ್ಲಿ ಬೆಳಕಿಗೆ ಬಂದಿದ್ದರು. ಈಗಲೂ ಅಲ್ಲಲ್ಲಿ ಯಕ್ಷಗಾನ ಮಾತ್ರವಲ್ಲದೆ ಅದರ ಬಗೆಗೆ ವಿಚಾರಗೋಷ್ಠಿಗಳೂ ನಡೆಯುತ್ತಿರುತ್ತದೆ. ಯಕ್ಷಗಾನದ ಸಭಾಲಕ್ಷಣವನ್ನು ಸಾಹಿತ್ಯಬದ್ಧವಾಗಿ ರೂಪಿಸಿದವರು ಇಲ್ಲಿಯವರು.

* ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಬಡುಗು-ತಿಟ್ಟು ಎಂದು ಕರೆಯುತ್ತಾರೆ. ಮದ್ದಳೆ, ತಾಳ, ಚಂಡೆ, ಹಾಗೂ ಶ್ರುತಿ ಇವು ಇಲ್ಲಿನ ಹಿನ್ನೆಲೆಯ ವಾದ್ಯಗಳಾಗಿವೆ. ಇವುಗಳ ಮಧ್ಯೆ ಸೂತ್ರದಾರರಾದ ಭಾಗವತರ ಹಾಡುಗಾರಿಕೆ ಸೊಗಸಾಗಿರುತ್ತದೆ. ಮುಖ್ಯ ಪಾತ್ರದಾರಿಯ ಪ್ರವೇಶದ ಸಂದರ್ಭದಲ್ಲಿ ತೆರೆಯ ಹಿಂದೆ ಪಾತ್ರಧಾರಿ ಮೊದಲು ಭಾಗವತರೆಡೆಗೆ ಮುಖಮಾಡಿ ಕುಣಿದು ನಂತರ ಪ್ರೇಕ್ಷಕರ ಕಡೆಗೆ ತಿರುಗಿ ಕುಣಿದು ತೆರೆಸರಿಸಿ ರಂಗ ಪ್ರವೇಶ ಮಾಡುವನು. ಇಂದ್ರನ ಒಡ್ಡೋಲಗ, ಪಾಂಡವರ ಒಡ್ಡೋಲಗ, ಕಿರಾತ, ಹನುಮಂತ, ಕೃಷ್ಣ ಮೊದಲಾದ ಪಾತ್ರಗಳ ಪ್ರವೇಶ ಕುಣಿತಗಳು ಆಕರ್ಷಕ ಹಾಗೂ ವೈವಿಧ್ಯಮಯವಾಗಿದೆ. ರಾಕ್ಷಸನ ಪ್ರವೇಶಕುಣಿತದಲ್ಲಿ ಮುಖಮಾರ್ಜನ, ಸ್ನಾನ, ಗಂಧಲೇಪನ, ಲಿಂಗಪೂಜೆ, ಸಂಧ್ಯಾವಂದನೆ ಮಾಡುವ ಪದ್ಧತಿಯೂ ಇದೆ. ಬೇಟೆ ಮಾಡುವುದು, ಪ್ರಮಾಣ ಮಾಡುವುದು, ಯುದ್ದ, ವನ ವಿಹಾರಾದಿಗಳನ್ನು ತೋರಿಸುವ ನಾನಾಬಗೆಯ ಕುಣಿತಗಳಿವೆ. ರಾಣಿಯರ ವನವಿಹಾರ ರಾಜರ ಲಾಲೀ ಕುಣಿತ ಮುಂತಾದ ಅಭಿನಯ ಶೃಂಗಾರರಸ ಉತ್ಪತ್ತಿಗೆ ಸಹಾಯಕವಾಗಿದೆ. ಇಂದು ಜಿಲ್ಲೆಯ ಯಕ್ಷಗಾನ ಪ್ರಮುಖ ಕಲಾವಿದರಲ್ಲಿ ಶ್ರೀ ಮಹಾಬಲಹೆಗಡೆ ಕೆರೆಮನೆ, ಶಂಭು ಹೆಗಡೆ ಕೆರೆಮನೆ, ಚಿಟ್ಟಾಣಿ ರಾಮಚಂದ್ರ ಹೆಗಡೆ ಇವರು ತಾರಾಮೌಲ್ಯದ ಜಿಲ್ಲೆಯ ಖ್ಯಾತ ಯಕ್ಷಗಾನ ಕಲಾವಿದರಾಗಿದ್ದಾರೆ. ದಿ. ಶಿವರಾಮ ಹೆಗಡೆ ಕೆರೆಮನೆ ಇವರ ಕೊಡುಗೆ ಯಕ್ಷಗಾನ ಪ್ರಪಂಚಕ್ಕೆ ಅಮೋಘವಾಗಿದೆ. ಇವರ ಪರಂಪರೆಯನ್ನು ಇಂದು ಶ್ರೀ ಮಹಾಬಲ ಹೆಗಡೆ, ಶಂಭು ಹೆಗಡೆ, ಶಿವಾನಂದ ಹೆಗಡೆ ಮುಂತಾದವರು ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯ ಮೂಲಕ ನಾಡಿಗೆ ಅಷ್ಟೆಅಲ್ಲದೆ ಪರ ರಾಷ್ಟ್ರಗಳಲ್ಲಿಯೂ ಯಕ್ಷಗಾನದ ಕಂಪನ್ನು ಮಾಡಿಕೊಡುವಲ್ಲಿ ಯಶಸ್ವಿಯಾಗುತ್ತಿದ್ದಾರೆ.

ಅಡಿಟಿಪ್ಪಣಿ: *ಜಿಲ್ಲೆಯ ಯಕ್ಷಗಾನ ಪರಂಪರೆಯ ಅಧ್ಯಯನ ಹಾಗೂ ಶ್ರೀ ಮಹಾಬಲ ಹೆಗಡೆ ಕೆರೆಮನೆ ಅವರ ಸಂದರ್ಶನದಿಂದ....

‘ಯಕ್ಷಗಾನ’





ಅಧ್ಯಾಯ ೬

ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಹಾಗೂ ಹಿಂದುಳಿದವರ್ಗದವರ ಜೀವನ ಹಾಗೂ ಸಂಗೀತ.

ಇವರ ಕಲ್ಯಾಣಕ್ಕಾಗಿ ಏನೆಲ್ಲ ಕಾರ್ಯಕ್ರಮ ಮಾಡಿದೆ? ಎಂಬುದನ್ನು ನಾವು ಚಿಂತಿಸಿದರೆ ತೃಪ್ತಿಕರ ಉತ್ತರವಂತೂ ದೊರಕಲಾರದು. ಅಂಕಿ ಅಂಶಗಳ ಮಾಹಿತಿಗಳನ್ನು ಅಧಿಕಾರಿಗಳು ಕೊಟ್ಟರೂ ಈ ಹಣ ನಿಜವಾಗಿ ಎಷ್ಟು ಸಂದಾಯವಾಗಿದೆ ಎಂಬುದನ್ನು ಚಿಂತಿಸಬೇಕಾಗಿದೆ. ಶೈಕ್ಷಣಿಕವಾಗಿ ತೀರ ಹಿಂದುಳಿದ ಇಲ್ಲಿಯ ಹಿಂದುಳಿದ ಬುಡಕಟ್ಟು ವರ್ಗದವರು ಉದ್ಯೋಗಾವಕಾಶದಿಂದಲೂ ವಂಚಿತರಾಗಿದ್ದಾರೆ. ಈ ಜನಾಂಗದಲ್ಲಿ ಸಂಘಟನೆಯ ಕೊರತೆಯೂ ಇದೆ. ಇತ್ತೀಚೆಗೆ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಪರಿಶಿಷ್ಟಜಾತಿ , ಪಂಗಡದ ಕಲಾಮೇಳಗಳನ್ನು ಮಾಡಿ ವಾದ್ಯೋಪಕರಣಗಳನ್ನು ಇವರಿಗೆ ಹಂಚುತ್ತಲಿದೆ. ಆದರೆ ಸರಿಯಾದ ಗುರುಗಳ ಮಾರ್ಗದರ್ಶನವಿರದೇ ಇವರು ಉತ್ತಮ ಕಲಾಕಾರರೂ ಆಗುವಲ್ಲಿ ಸಫಲರಾಗಿಲ್ಲ. ಅಕಾಡೆಮಿ ಹಾಗೂ ಸಂಸ್ಕೃತಿ ಇಲಾಖೆಯ ಉತ್ಸವಗಳು ಸರ್ಕಾರಿ ಉತ್ಸವಗಳಾಗದೇ ಜನರ ಉತ್ಸವವಾದಲ್ಲಿ ಇದೊಂದು ಪ್ರಯತ್ನ ಯಶಸ್ವಿಯಾದೀತು. ಅಜ್ಞಾನ ಮೂಡನಂಬಿಕೆಗಳಿಂದ ಇಲ್ಲಿನ ಹಿಂದುಳಿದಜನಾಂಗಗಳು ಕತ್ತಲೆಯಲ್ಲಿಯೇ ಕರಗಿ ಹೋಗುತ್ತಿದ್ದಾರೆ. ಆದರೆ ಹಾಗಾಗಬಾರದು. ಇವರ ಬದುಕು ಚಿಗುರಬೇಕು. ಇವರೂ ಬೆಳಕು ನೋಡಬೇಕು.

* ನಮ್ಮ ದೇಶದ ಬಿಹಾರ, ಮಧ್ಯಪ್ರದೇಶ, ಹಿಮಾಚಲ ಪ್ರದೇಶ ಹಾಗೂ ಈಶಾನ್ಯ ಭಾಗಗಳ ಗಿರಿಜನರ ಕುರಿತು, ವ್ಯಾಪಕ ಅಧ್ಯಯನ ನಡೆದಷ್ಟು ಪ್ರಮಾಣದಲ್ಲಿ ಕರ್ನಾಟಕದ ಅದರಲ್ಲಿಯೂ ಸಹ್ಯಾದ್ರಿಯ ಗಿರಿಜನರ ಕುರಿತು ನಡೆದಂತಿಲ್ಲ. ಸಹ್ಯಾದ್ರಿಯ ವನಶ್ರೇಣಿಯೊಡಲಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ವೈವಿಧ್ಯವನ್ನು ಕಾಪಾಡಿಕೊಂಡು ಬಂದ ಹಲವಾರು ಗಿರಿಜನ ಸಮಾಜಗಳಿವೆ. ಇವರ ಅಭಿವೃದ್ದಿಗಾಗಿ ಸರ್ಕಾರ, ಸಂಘ ಸಂಸ್ಥೆಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ. ಓದು ಬರಹವರಿಯದ ಬುಡಕಟ್ಟು ಜನಾಂಗದವರ ಮನಸ್ಸು ಹಸುಮಕ್ಕಳಂತೆ ಮುಗ್ದ. ಅವರ ಬದುಕಿನ ವಿಶ್ರಾಂತಿ ವೇಳೆಯಲ್ಲಿ ಅವರಿಗೆ ಒಡನಾಡಿಯಾಗಿ ಮಿಡಿಯುವ ವಾದ್ಯ, ಅವರೇ ತಯಾರಿಸಿದ ಮಣ್ಣಿನ ಗುಮಟೆ ಅಬಿಜಾತ ವಾದ್ಯದಂತೆ ನಾಗರೀಕ ಜಗತ್ತಿನಲ್ಲಿ ತಯಾರಾದ ಸಂಕೀರ್ಣವಾದ್ಯವಲ್ಲ. ಅವರು ಹಾಡುವ ಪದ ಅವರ ಸಮಾಜದ ವೀರರಿಗೆ ಸಂಬಂಧಪಟ್ಟಿದ್ದು. ಗುಮಟೆ ಪದ ಹಾಡಿದ ಹಾಲಕ್ಕಿಒಕ್ಕಲು ತಮ್ಮನ್ನು ಪಾಂಡವರ ಕುಲದವರೆಂದು ಹೇಳಿಕೊಳ್ಳುತ್ತಾರೆ. ಹಾಲಕ್ಕಿ

ಅಡಿ ಟಿಪ್ಪಣಿ : ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗ 'ಕವಳ ಪೇಳಿ' ಲೇಖನ ಡಾ. ಎಸ್.ಆರ್.ನಾಯಕ

ಒಕ್ಕಲಿಗರಂತೆ ಪಾಂಡವರೂ ಸಹ ಬುಡಕಟ್ಟಿನ ಕೆಲವು ಗುಣಧರ್ಮಗಳನ್ನು ಹೊಂದಿರುವುದನ್ನು ಇಲ್ಲಿ ಗಮನಿಸಬಹುದು. ಕುಲಚಿಹ್ನೆಯ ಆರಾಧನೆ ಬುಡಕಟ್ಟು ಲಕ್ಷಣಗಳಲ್ಲಿ ಒಂದಾಗಿದೆ. * ಪಾಂಡವರ ಕಪಿಧ್ವಜ, ದ್ವಾಲಕ್ಷಧ್ವಜ, ಸರ್ಪಧ್ವಜಗಳು ಕುಲಚಿಹ್ನೆಗಳಾಗಿರುವ ಸಾಧ್ಯತೆಯಿದೆ. ವರ್ತಮಾನ ಅಗತ್ಯಕ್ಕೆ ಮಾತ್ರ ಹೆಚ್ಚಿನ ಕಾಳಜಿವಹಿಸುವ ಇವರು, ಭವಿಶ್ಯದ ಪ್ರಯೋಜನಕ್ಕಾಗಿ ಸಂಪತ್ತನ್ನು ಕೂಡಿಹಾಕುವವರಲ್ಲ. ಸಾಮ್ರಾಜ್ಯಶ್ಯಾಹಿ ದೋರಣೆಯ ಬ್ರಿಟೀಷರು ಭಾರತವನ್ನಾಕ್ರಮಿಸಿ ನಾಡು ಹಾಗೂ ಕಾಡಿನ ಹಿಡಿತವನ್ನು ಸಾಧಿಸಿದ ಮೇಲೆ ಕಾಡಿನ ಸಂಪತ್ತನ್ನು ಅನುಭೋಗಿಸುವ ಇವರ ಹಕ್ಕನ್ನು ಕಸಿದುಕೊಂಡ ಪ್ರಯುಕ್ತ ಇವರಲ್ಲನೇಕರು ಅನಾಥರಾದರು. ಕಾಡಿನಲ್ಲಿ ಜೀವನ ಸಾಗಿಸುವುದು ಇವರಿಗೆ ದುರ್ಬಲವಾಗಿ ಕಾಡನ್ನು ತ್ಯಜಿಸಿ ಗ್ರಾಮಗಳಲ್ಲಿ ನೆಲೆಸಿ ಇಂದಿನ ಬದಲಾದ ಸ್ಥಿತಿಗೆ ಹೊಂದಿಕೊಂಡು ತಮಗೆ, ಸಂಪರ್ಕಬಂದ ಹಿಂದೂ ಜಾತಿಗಳಾಗಿಯೋ ಕ್ರೈಸ್ತ ಇಲ್ಲವೆ ಮಹಮದೀಯ ಮತ ಸ್ವೀಕರಿಸಿಯೋ ಜೀವನವನ್ನು ನೂಕಿದರು. ಇನ್ನೂ ಕೆಲವರು ಕಾಡಿನಲ್ಲಿಯೇ ನಿಂತು ಇನ್ನೊಬ್ಬರೊಡನೆ ಹೆಚ್ಚಾಗಿ ಬೆರೆಯದೆ, ತಮ್ಮ ಬುಡಕಟ್ಟು ಲಕ್ಷಣಗಳನ್ನು ತೊರೆಯದೆ ನಮ್ಮ ಶ್ರೇಣೆಕೃತ ಜಾತಿ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಬೆರೆಯದೇ, ತಮ್ಮ ಸಾಂಸ್ಕೃತಿಕ ಪ್ರತ್ಯೇಕತೆ ಹಾಗೂ ವೈಶಿಷ್ಟ್ಯಗಳನ್ನು ಉಳಿಸಿಕೊಂಡರು. ಇಂತಹ ಜನಾಂಗದವರೂ ಇಂದು ಶಾಸ್ತ್ರೀಯ ಹಾಗೂ ಉಪಶಾಸ್ತ್ರೀಯ ಸಂಗೀತ ಕಲಿಯಲು ಆಸಕ್ತಿ ತೋರುತ್ತಿರುವುದು ಗಮನಾರ್ಹವಾಗಿದೆ.

ಸಂಗೀತದ ಉನ್ನತ ಮಟ್ಟಕ್ಕೆ ಹೋಗಲು ಸಂಗೀತವೇ ಜೀವನವನ್ನಾಗಿ ಮಾಡಿಕೊಳ್ಳಲು ಶಕ್ಯವಿರದಿದ್ದರೂ ಕೂಡ ಇವರು ಸುಸಂಸ್ಕೃತ ಜನತೆಯೊಂದಿನ ನಿಕಟ ಸಂಪರ್ಕ, ಹಾಗೂ ಶಾಸ್ತ್ರೀಯ ಸಂಗೀತವನ್ನು ಕಲಿಯುವ ಇವರ ಆಸಕ್ತಿಯನ್ನು ಗಮನಿಸಿದರೆ ಉತ್ತಮ ಸಂಸ್ಕೃತಿ ನಡುವಳಿಕೆಗಳನ್ನು ಇವರು ರೂಡಿಸಿಕೊಳ್ಳುವಲ್ಲಿ ಆಸಕ್ತಿ ವಹಿಸುತ್ತಿರುವುದು ಉತ್ತಮ ಬೆಳವಣಿಗೆಗೆ ಪೂರಕವಾಗಿದೆ.

ಜಾತಿ ಪಂಗಡಗಳು ಮನುಷ್ಯನ ವೃತ್ತಿಯನ್ನಾಧರಿಸಿ ಬಂದವು. ಬುಡಕಟ್ಟು ಜನಾಂಗದವರು ಅಂತಿಮ ಹಂತದಲ್ಲಿ ಕಾಡಿನಲ್ಲಿ ನೆಲೆಸಿ ಕಾಡಾಡಿಗಳಾಗಿ ಬಿಲ್ಲು ಹಿಡಿದು ಬೇಟೆಯಾಡಿ ಬೇಡರು, ಬಿಲ್ಲವರು ಇಲ್ಲವರು ಎನಿಸಿಕೊಂಡರು. ದೀವಟಿ ದೀಹದ ಬೇಟೆಗಾರಿಕೆ ನಡೆಸಿ ದೀವರಾದರು. ಮುಂದೆ ಕೆಲವರು ಕಾನಿನಲ್ಲಿ ಬೇಟೆ

ಅಡಿ ಟಿಪ್ಪಣಿ : ಜಾನಪದ ಪ್ರಕಾಶನ ಉದಯಗಿರಿ ಹೊನ್ನಾವರ ಇವರಿಂದ ಸಂಗ್ರಹಿಸಿದ್ದು

ಹಾಗೂ ಬಗಿನಿಮರದಿಂದ ಹೆಂಡವನ್ನುತೆಗೆದು ಕಾನದೀವರಾದರು. *ಮತ್ತೆ ಕೆಲವರು ನಾಡಿಗೆಬಂದು ಒಕ್ಕಲುತನ ಹಾಗೂ ತೆಂಗಿನಮರದಿಂದ ಹೆಂಡ ತೆಗೆಯುವವೃತ್ತಿಯನ್ನು ಕೈಗೊಂಡು ತೆಂಗಿನದೀವರಾದರು. ಇವರೆಲ್ಲರೂ ಸಹ ಮುಂದೆ ತಿರುಪತಿ ವೆಂಕಟರಮಣನ ಭಕ್ತರಾಗಿ ನಾಮವನ್ನುಧರಿಸಿ ನಾಮಧಾರಿ ಎನಿಸಿಕೊಂಡರು. ಸಮುದ್ರ ಹಾಗೂ ನದಿಗಳಲ್ಲಿ ದೋಣಿಯಿಂದ ಮೀನವನ್ನುಹಿಡಿದು (ಅಂಬಿಕಇಗ) ಅಂಬಿಗರಾದರು. ಇನ್ನು ಕೆಲವರು ಕಾಡನ್ನು ಕಡಿದು ಸಣ್ಣ ಸಣ್ಣ ಹಳ್ಳಿಗಳನ್ನು ನಿರ್ಮಿಸಿಕೊಂಡು ಹಳ್ಳೇರ ಎಂದು ಕರೆದುಕೊಂಡರು. ಹಲವರು ಕಾಡಿನಲ್ಲಿ ಬೇಸಾಯಮಾಡುತ್ತ ಹಾಲು, ಹೈನದ ವೃತ್ತಿಯನ್ನು ಮಾಡಿಕೊಂಡು ಹಾಲಕ್ಕಿ (ಹಾಲು+ಅಕ್ಕಿ) ಆದರು. ಗ್ರಾಮವನ್ನು ನಾಡನ್ನಾಗಿ ಪರಿವರ್ತಿಸಿ ನಾಡನ್ನಾಳಿ ಬಾಳಿದವರು ನಾಡವರಾದರು. ನಾಡರಕ್ಷಣೆಯ ಗುರುತರ ಜವಾಬ್ದಾರಿ ಹೊತ್ತು ಕ್ಷಾತ್ರ ಜೀವನವನ್ನು ನಡೆಸಿ ಬಂಟರು ಎಂದು ಹೆಸರಾದರು. ದಕ್ಷಿಣ ಭಾರತವನ್ನಾಳಿದ ಬಹುತೇಕ ಅರಸು ಮನೆತನಗಳು ಬುಡಕಟ್ಟಿಗೆ ಸೇರಿದವರು. ಕನ್ನಡ ನಾಡನ್ನಾಳಿದ ಆಲುಪರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಗಂಗರು, ವಿಜಯನಗರದ ಸಂಗಮ, ಸಾಳ್ವ, ತುಳುವ ಅರವೀಡು ಮನೆತನದವರೆಲ್ಲ ಬುಡಕಟ್ಟುಮೂಲದವರು ಎನ್ನುವುದನ್ನು ಜಿಲ್ಲೆಯಬುಡಕಟ್ಟು ಹಾಗೂ ಹಿಂದುಳಿದ ವರ್ಗದವರ ಜೀವನ ಸಂಗೀತದಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ.

ಹಿಂದುಳಿದ ಹಾಗೂ ಬುಡಕಟ್ಟಿಗೆಸೇರಿದ ಅನೇಕರು ಈಗ ಸುಧಾರಿಸುತ್ತಿದ್ದಾರೆ. ಆದರೂ ತೀರ ಹಿಂದುಳಿದವರೆಂದು ಕರೆಯಲಾಗುವ ವಿದೇಶಿ ಮೂಲದ ಸಿದ್ದಿಯರು, ದೇಶೀಯ ಮೂಲದ ಹಳ್ಳೇರು, ಹಸಲರು, ಬಗ್ಗರು, ಮಲೆಕಡಿಯರು, ಹಾಲಕ್ಕಿಗಳು ಮುಂತಾದ ಬುಡಕಟ್ಟಿನವರಿಗೆ ಸಾಮಾಜಿಕ, ಶೈಕ್ಷಣಿಕ, ಮತ್ತು ರಾಜಕೀಯ ಮುಂತಾದ ವಿವಿದ ರಂಗಗಳಲ್ಲಿ ಅವಕಾಶ ಲಬಿಸಿ ಇಂದಲ್ಲ ನಾಳೆಯಾದರೂ ಅವರು ತಮ್ಮ ಉನ್ನತಿಕೆಯನ್ನು ಮೆರೆಯುವಲ್ಲಿ ಸಂದೇಹವಿಲ್ಲ. ಜನಪದ ಸಂಗೀತ ಲೋಕಗೀತ, ಸಂಪ್ರದಾಯದ ಹಾಡುಗಳ ಜೊತೆಗೆ ಇವರು ಲಘುಸಂಗೀತ ಹಾಗೂ ಶಾಸ್ತ್ರೀಯ ಸಂಗೀತದತ್ತಲೂ ಆಸಕ್ತಿವಹಿಸುತ್ತಿರುವುದು ಭವಿಶ್ಯದಲ್ಲಿ ಉತ್ತಮ ಬೆಳವಣಿಗೆಗೆ ಸಹಕಾರಿಯಾದೀತು. ಕರಾವಳಿ ಮತ್ತು ಮಲೆನಾಡಿನ ಹಾಲಕ್ಕಿ ಮುಂತಾದ ಬುಡಕಟ್ಟುಜನಾಂಗಗಳಲ್ಲಿ ಮನೆಮದ್ದು (ನಾಟೀಮದ್ದು) ಅನೇಕ ಕಾಯಿಲೆಗಳನ್ನು ಗುಣಪಡಿಸಿದೆ. ಆಧುನಿಕ ವೈದ್ಯರಿಂದ ಗುಣಪಡಿಸಲಾಗದ ಅನೇಕ ಕಾಯಿಲೆಗಳಿಗೆ ಅವರಲ್ಲಿ ಸಿದ್ಧೌಷದಗಳಿವೆ. ಇಲ್ಲಿನ ನಾಟೀವೈದ್ಯರು ಅರ್ಧಾಂಗವಾಯು, ಅರಿಸಿನಗುಂಡಿಕೆ ಹಾಗೂ

ಅಡಿಟಿಪ್ಪಣಿ: * ಜಾನಪದ ಪ್ರಕಾಶನ ಉದಯಗಿರಿ ಹೊನ್ನಾವರ ಇವರಿಂದ ಸಂಗ್ರಹಿಸಿದ್ದು ………

ಮುರಿದ ಎಲುಬನ್ನು ಕೂಡಿಸಲಿಕ್ಕೆ ಕೊಡುವಔಷದಗಳು ದೇಶ ವಿದೇಶಗಳಲ್ಲೂ ಹೆಸರುಪಡೆದಿದೆ. *ಹಳೆಯತಲೆಮಾರಿನ ಜನರು ಹೇಳುವಂತೆ ಹಿಂದೆ ಕೇನ್ಸರ್ , ಕ್ಷಯ ಮುಂತಾದ ಮಾರಕ ರೋಗಗಳಿಗೂ ಔಷದ ಕೊಡುವವರಿದ್ದರಂತೆ. ಈ ಮದ್ದುಗಾರರಲ್ಲಿ ಔಷದ ರಹಸ್ಯವನ್ನು ಬಹಿರಂಗಪಡಿಸಿದರೆ ರೋಗ ಪರಿಹಾರದ ಶಕ್ತಿ ಕಡಿಮೆಯಾಗುವುದೆಂಬ ಮೂಡನಂಬಿಕೆಯಿದ್ದುದರಿಂದ ಅನೇಕ ತರಹದ ಕಾಯಿಲೆಗೆ ಬರುವ ಗಿಡ ಮರದಿಂದ ತಯಾರಿಸುವ ಔಷದಗಳು ಅವರ ಹಿಂದೆಯೆ ಮರೆಯಾದುದನ್ನು ಕಾಣಬಹುದು. ಇವರಲ್ಲಿ ಪ್ರಚಲಿತವಿರುವ ಮದ್ದಿನ ಸಂಗ್ರಹವನ್ನು ಮಾಡಿದರೆ ವೈದ್ಯಕೀಯಲೋಕಕ್ಕೆ ಅದೊಂದು ಉತ್ತಮ ಕೊಡುಗೆಯಾದೀತು. ಇಲ್ಲಿನ ಬುಡಕಟ್ಟು ಆದಿವಾಸಿಮೂಲದ ಗಾಯಕರೂ ಸಹ ತಮ್ಮ ಕಂಠದ ಭದ್ರತೆಗೆ ಜೇಷ್ಟಮದ್ದು ಇನ್ನೂ ಅನೇಕತರಹದ ಗಿಡಮೂಲಿಕೆಯನ್ನು ಉಪಯೋಗಿಸುವುದು ಕಂಡುಬರುತ್ತದೆ. ಈ ನಾಟೀವೈದ್ಯರ ಮದ್ದುಗಳನ್ನು ವೈದ್ಯಕೀಯ ತಜ್ಞರ ಪ್ರಯೋಗಕ್ಕೆ ಗುರಿಪಡಿಸಿ ಅವುಗಳ ವಿಷಯದಲ್ಲಿ ಒಂದು ಸೈದ್ಧಾಂತಿಕ ತೀರ್ಮಾನಕ್ಕೆ ಬಂದಮೇಲೆ ಅವುಗಳ ಗುಣಮಟ್ಟವನ್ನು ವೈದ್ಯಕೀಯ ಪಂಡಿತರು ಪಥಕ್ಕರಿಸಿ ಹೊರಗೆಡವಿ ಅವುಗಳನ್ನು ಔಷದಗಳಾಗಿ ಬಳಸಲು ಅನುಮತಿ ನೀಡಿದರೆ, ವಿದೇಶ ಔಷದಗಳಿಗಾಗಿ ನಾವು ತೆರುವ ದುಭಾರಿಖರ್ಚು ಕಡಿಮೆಯಾಗಿ, ಜನಸಾಮಾನ್ಯರು ಕಡಿಮೆ ಖರ್ಚಿನಲ್ಲಿ ರೋಗವಿಮುಕ್ತಿ ಪಡೆಯಲು ಅನುಕೂಲವಾಗುತ್ತಿತ್ತು. ಸಣ್ಣ ಪುಟ್ಟ ಕಾಯಿಲೆಗಳಿಗೆ ಪೇಟೆ ಪಟ್ಟಣಗಳಿಗೆ ಸುತ್ತುವ ಪ್ರಾಯಾಸ ಹಾಗೂ ವೇಳೆಯ ಉಳಿತಾಯವೂ ಆಗುತ್ತಿತ್ತು.

ರಾಜ ಮಹಾರಾಜರು ಆಳಿದ ಇಂದಿನ ಪ್ರಜಾಪ್ರಭುತ್ವದಲ್ಲಿ ಜನಸಾಮಾನ್ಯನೆ ಪ್ರಭು. ಅವನ ಸಾಹಿತ್ಯ ಕಲೆಗಳೇ ಉನ್ನತಮಟ್ಟದಲ್ಲಿ ಬೆಳಗಬೇಕು. ಆದರೆ ಇಂದು ಹಾಗಾಗುತ್ತಿಲ್ಲ. ಪ್ರಜಾಸತ್ತೆಯಲ್ಲಿ ಜನಸಾಮಾನ್ಯರನ್ನು ಕಡೆಗಣಿಸಿದಂತೆ ಅವನ ಕಲೆ ಸಾಹಿತ್ಯಗಳನ್ನೂ ಕಡೆಗಣಿಸಲಾಗುತ್ತಿದೆ. ಇಂತಹ ಘಟನೆಗಳು ಆಗಬಾರದು. ಯಾವುದೇ ದೇಶದ ಶ್ರೀಮಂತಿಕೆ ಅಲ್ಲಿನ ಕಲೆ ಹಾಗೂ ಸಂಸ್ಕೃತಿಯ ಪ್ರತೀಕವಾಗಿರುತ್ತದೆ. ಹೀಗಿರುವಾಗ ಕಲೆಯಲ್ಲಿಯೂ ರಾಜಕೀಯದ ಪ್ರವೇಶ ನಿಲ್ಲಬೇಕು. ಅಂದಾಗ ಮಾತ್ರ ನಾವು ಕಲೆಗೆ ಕಲಾವಿದನಿಗೆ ಮರ್ಯಾದೆ ಕೊಟ್ಟಂತಾಗುತ್ತದೆ. ಇಲ್ಲದಿದ್ದರೆ ಹಣಕ್ಕಾಗಿ ಕಲೆಯ ಮಾರಾಟ ಹಾಗೂ ಕೊಲೆಯಾಗುವ ಸಂಭವವಿದೆ. ಉತ್ತಮ ಬೆಳವಣಿಗೆಯಾಗಬೇಕಾದರೆ ಕಲೆಯಲ್ಲಿನ ಕ್ಷುಲ್ಲಕ ರಾಜಕೀಯ ನಿಲ್ಲಬೇಕು. ಮರ್ಯಾದೆಯುತ ಸುಸಂಸ್ಕೃತ ಜನಾಂಗ ಉತ್ತಮಕಲೆಯನ್ನು ರಕ್ಷಿಸಲು ಸಾಧ್ಯ.

ಅಡಿಟಿಪ್ಪಣಿ: * ಜಿಲ್ಲೆಯ ಗಾಂವ್ಟಿ ವೈದ್ಯರಿಂದ ಸಂಗ್ರಹಿಸಿದ್ದು ....

ಉತ್ತರ ಕನ್ನಡದ ಆದಿವಾಸಿಗಳು ಒಂದುಕಾಲದಲ್ಲಿ ಅಸ್ಪ್ರಶ್ಯರೆನಿಸಿದವರು ಹೊಲೆಯರು. ಇಂದು ಈ ಜಿಲ್ಲೆಯಲ್ಲಿ ಇವರಸಂಖ್ಯೆ ಕಡಿಮೆ. ಒಂದುಕಾಲಕ್ಕೆಅವರು ಈ ಜಿಲ್ಲೆಯ ಆದಿವಾಸಿಗಳಾಗಿ ರಾಜಸತ್ತೆಯಲ್ಲಿದ್ದರೆಂದು ತಿಳಿದುಬರುತ್ತದೆ. ಇದನ್ನು ವಿದೇಶಿ ಪ್ರವಾಸಿ * ಬುಕಾನನ್ ಉಲ್ಲೇಖಿಸಿದ್ದಾನೆ. ಒಂದು ಕಾಲದಲ್ಲಿ ಅಸ್ಪ್ರಶ್ಯರೆನಿಸಿದ ಇವರುಇಂದು ಸರ್ಕಾರದ ಮೀಸಲಾತಿಯೋಜನೆಯಡಿ ಒಳ್ಳೆಯ ಉದ್ಯೋಗವನ್ನು ಮಾಡಿಕೊಂಡು ಸ್ವತಂತ್ರವಾದ ಜೀವನವನ್ನು ಮಾಡುತ್ತಿದ್ದಾರೆ. ಸಾಂಸ್ಕೃತಿಕವಾಗಿಯೂ ಮುಂದೆ ಬರಲು ಇವರಿಗೆ ನಮ್ಮ ಘನ ಸರ್ಕಾರ, ಅಕಾಡೆಮಿಗಳು ಕಾರ್ಯತತ್ಪರವಾಗಿವೆ. ವಾದ್ಯ ಸಲಕರಣೆಗಳನ್ನು ಈ ಜನಾಂಗಕ್ಕೆ ನೀಡುವುದು ಸಾಂಸ್ಕೃತಿಕವಾಗಿ ಶಿಬಿರಗಳನ್ನು ಏರ್ಪಡಿಸಿ ಅದರಲ್ಲಿ ಈ ಜನಾಂಗದವರೂ ಭಾಗವಹಿಸುವಂತೆ ಮಾಡುವಲ್ಲಿ ಕಲಾ ಸಂಘ ಸಂಸ್ಥೆಗಳು ನೆರವಾಗುತ್ತಲಿವೆ. ಇದರ ಸರಿಯಾದ ಉಪಯೋಗವಾದಾಗ ಮಾತ್ರ ಇಂತಹ ಪ್ರಯತ್ನಗಳು ಯಶಸ್ವಿಯಾಗುವುದು. ಇಂತಹ ಕಾರ್ಯದಲ್ಲಿ ಸಂಘಟನೆಗಳು ಹಾಗೂ ಕಲಾವಿದರು ಪ್ರಯತ್ನಿಸಬೇಕು. ಜನಪದ ಹಾಡು ಹಾಗೂ ವಾದ್ಯಗಳನ್ನು ಹೆಚ್ಚಾಗಿ ಈ ಜನರು ಉಪಯೋಗಿಸುತ್ತಾರೆ.

ಜನಪದ ವಾದ್ಯಗಳ ಶ್ರುತಿಲಯಗಳು ಜನಮನದಮೇಲೆ ಮಾಡುವ ಪರಿಣಾಮ ಅನನ್ಯವಾದುದು. ಜನಪದ ವಾದ್ಯಗಳ ಸಂಖ್ಯೆ ಅಪಾರ, ಡೊಳ್ಳು, ನಗಾರಿ, ಹಲಗೆ, ಭೇರಿ, ಮದ್ದಳೆ, ಕೋಲುಮದ್ದಳೆ, ಚಂಡೆ , ಹರೆ, ಹೆಬ್ಬೆರೆ ,ಗಮಟೆ, ಕೋಲುಗಮಟೆ, ಗಮಟೆಪಾಂಗು, ದಮ್ಮಡಿ, ತಾಳ, ಜಾಗಟೆ ತುತ್ತೂರಿ, ಕೊಂಟು ಕಹಳೆ, ಮುಖವೀಣೆ, ಇಂತಹ ಅನೇಕ ವಾದ್ಯಗಳು ,ತೇರು ಜಾತ್ರೆ, ಮಂಗಲಕಾರ್ಯ, ಕ್ರೀಡೆ ಉತ್ಸವಗಳಲ್ಲಿ ಬಳಕೆಯಾಗುತ್ತವೆ. ಜನಪದ ಪ್ರಕಾರದ ಅನೇಕ ವಾದ್ಯಗಳು ಶಾಸ್ತ್ರೀಯ ಸಂಗೀತದ ವಾದ್ಯಕ್ಕೆ ಸರಿಸಾಟಿಯಾಗಿದೆ. ಕರ್ನಾಟಕ ಶಾಸ್ತ್ರೀಯ ಸಂಗೀತಗಾರರು ಜನಪದ ಪ್ರಕಾರದ ಅನೇಕ ವಾದ್ಯಗಳನ್ನು ಉಪಯೋಗಿಸುವುದು ಜನಪದ ಹಾಗೂ ಶಾಸ್ತ್ರೀಯ ಸಂಗೀತದ ಪರಸ್ಪರ ತಿಳುವಳಿಕೆಗೆ ಅನುಕೂಲಮಾಡಿಕೊಡುತ್ತದೆ. ಇಂತಹ ಅನೇಕ ಪ್ರಯತ್ನಗಳು ಇಂದು ನಡೆಯುತ್ತಿರುವುದು ಪರಸ್ಪರ ತಿಳುವಳಿಕೆಗೆ ಹಾಗೂ ಉತ್ತಮ ಬೆಳವಣಿಗೆಗೆ ನಾಂದಿಯಾಗುವುದರಲ್ಲಿ ಸಂದೇಹವಿಲ್ಲ.

ಒಂದು ಕಾಲದಲ್ಲಿ ಹಿಂದುಸ್ತಾನೀ ಎಂದರೆ ಕರ್ನಾಟಕೀಯದವರು. ಕರ್ನಾಟಕೀಯವೆಂದರೆ ಹಿಂದುಸ್ತಾನಿ

ಅಡಿಟಿಪ್ಪಣಿ: *ಕವಳಪೇಳಿ ಡಾ: ಎನ್. ಆರ್. ನಾಯ್ಕ ಪುಟ ೧೦೨

ಸಂಗೀತಗಾರರು ಮೂಗುಮುರಿಯುವ ಕಾಲವೊಂದಿತ್ತು. ಆದರೆ ಇಂದು ಪರಿಸ್ಥಿತಿಬದಲಾಗಿದೆ. ಕರ್ನಾಟಕೀಯ ಹಾಗೂ ಹಿಂದುಸ್ತಾನೀ ಸಂಗೀತಗಾರರು ಒಂದೇವೇದಿಕೆಯಲ್ಲಿ ಕುಳಿತು ಜುಗಲಬಂಧಿ ಕಾರ್ಯಕ್ರಮವನ್ನು ಕೊಡುವುದನ್ನು ನೋಡಬಹುದು. ಸಮಪ್ರಕೃತಿಯ ಅನೇಕ ರಾಗಗಳನ್ನು ಇಬ್ಬರೂ ಸೇರಿ ಹಾಡುತ್ತಾರೆ. ಪರಸ್ಪರ ಇಬ್ಬರೂ ತಮ್ಮ ಗಾಯಕಿಯ ಬಗೆಗೆ ಚರ್ಚಿಸುತ್ತಾರೆ. ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುತ್ತಾರೆ. ಅಸ್ಪ್ರಶ್ಯರು ಎಂದೆನಿಸಿದ ಹೊಲೆಯರೂಕೂಡ ಒಂದು ಹೊಸಹೊಸ ಯೋಜನೆಗಳನ್ನು ಕಾರ್ಯಗೊಳಿಸುತ್ತ ಸುಸಂಸ್ಕೃತರಾಗುತ್ತಿದ್ದಾರೆ. ಜನಪದ ಸಂಗೀತದಲ್ಲಿ ಆಸಕ್ತಿ ಹೆಚ್ಚಾದರೂ ಇಂದು ಶಾಲಾ ಕಾಲೇಜುಗಳಲ್ಲಿ ಸಂಗೀತದ ಪ್ರಸಾರಕಾರ್ಯ ನಡೆಯುತ್ತಿರುವುದರಿಂದ ಇಲ್ಲಿಯೇಸಂಗೀತವನ್ನು ಒಂದುವಿಷಯವನ್ನಾಗಿ ತೆಗೆದುಕೊಂಡು ಪಿ.ಯು.ಸಿ. ಹಾಗೂ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಎಸ್.ಡಿ.ಎಂ. ಕಾಲೇಜು ಹೊನ್ನಾವರ, ಸಿರ್ಸಿಯ ಮೋಟಿನ್ಸರ ಸ್ಮಾರಕ ಕಲಾ ಕಾಲೇಜು ಹಾಗೂ ಕಾರವಾರದ ಬಾಪೂಜಿ ಕಾಲೇಜನಲ್ಲಿ ಪಠ್ಯಸಂಗೀತವಿಷಯದ ಭೋದನೆ ಇರುವುದು ಅನೇಕ ಸಂಗೀತಾಸಕ್ತ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಕಾಲೇಜುಗಳಲ್ಲಿ ಸಂಗೀತ ವಿಷಯವಿರುವುದರಿಂದ ವಿದ್ಯಾರ್ಥಿಗಳಿಗೆ ಸಂಸ್ಕೃತಿ ಹಾಗೂ ಸಂಗೀತ ಮತ್ತು ಕಲೆಗಳ ಬಗೆಗೆ ತಿಳಿದುಕೊಳ್ಳಲು ಅನುಕೂಲವಾಗುತ್ತದೆ.

ಅಧ್ಯಾಯ ೨

ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿ ಶಾಸ್ತ್ರೀಯಸಂಗೀತ

ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿ ಶಾಸ್ತ್ರೀಯ ಸಂಗೀತ

* ೧೯೪೫ ರ ಸುಮಾರಿಗೆ ಗಣಪತಿಮಾಸ್ತರ ಎಂಬುವವರು ಶಾರದಾ ಸಂಗೀತವಿದ್ಯಾಲಯವನ್ನು ಸಿರ್ಸಿಯಲ್ಲಿ ನಡೆಸುತ್ತಿದ್ದರು. ಇವರು ಮೂಲತಹ ಶಹನಾಯ್ ವಾದಕರಾಗಿದ್ದರು. ಕಲಿಸುವಿಕೆಯಲ್ಲಿ ಇವರು ಹಿಂದುಸ್ತಾನಿ ಸಂಗೀತದ ವಿವಿಧ ಪ್ರಕಾರಗಳನ್ನು ಕಲಿಸುತ್ತಿದ್ದರು. ಆ ಕಾಲದಲ್ಲಿಯೇ ವಿದ್ಯಾರ್ಥಿಗಳನ್ನು ಗಂಧರ್ವ ಮಹಾವಿದ್ಯಾಲಯದ ಪರೀಕ್ಷೆಗೆ ಕೂಡ್ರಿಸುತ್ತಿದ್ದರು. ಇವರ ನಂತರ ದೇವದಾಸ್‌ಚಿತ್ತರಗಿ ಎಂಬುವರು ಕೆಲವುಕಾಲ ಹಿಂದುಸ್ತಾನಿ ಗಾಯನವನ್ನು ಕಲಿಸುತ್ತಿದ್ದರಂತೆ. ಹಾರ್ಮೋನಿಯಂ ರಿಪೇರಿ ಅವರ ಮೂಲ ಕಸುಬಾಗಿದ್ದರೂ ಆಸಕ್ತ ವಿದ್ಯಾರ್ಥಿಗಳಿಗೆ ಗಾಯನವನ್ನು ಹೇಳಿಕೊಡುತ್ತಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಸಿರ್ಸಿಯಲ್ಲಿ ಶಾರದಾ ಸಂಗೀತ ವಿದ್ಯಾಲಯನಡೆಸುತ್ತಿದ್ದ ಗಣಪತಿಮಾಸ್ತರರು ಸಂಗೀತ ಪ್ರಸಾರಕಾರ್ಯದಲ್ಲಿ ಸಿರ್ಸಿಯಲ್ಲಿ ಹೆಚ್ಚಿನಪರಿಶ್ರಮ ಪಟ್ಟಿರುವುದು ಮನವರಿಕೆಯಾಗುತ್ತದೆ. ೧೯೪೮ ರಲ್ಲಿ ದಿ. ಮಹಾರುದ್ರಪ್ಪ ಪೂಜಾರ್ ಅವರು ಅರುಣೋದಯ ಸಂಗೀತ ವಿದ್ಯಾಲಯವನ್ನು ಸ್ಥಾಪಿಸಿದರು. ಶ್ರೀಯುತರು ಅನೇಕಶಿಷ್ಯರನ್ನು ತಯಾರಿಸಿದ್ದಾರೆ. ಅವರ ಸ್ಮರಣಾರ್ಥ ಇಂದು ಪ್ರೊ: ಸಂಜೀವ ಪೋತದಾರ್ ಸ್ವರಶ್ರದ್ಧಾಂಜಲಿ, ಸಂಗೀತೋತ್ಸವವನ್ನು ನಡೆಸುತ್ತ ಬಂದಿದ್ದಾರೆ. ಅನೇಕ ಹಿರಿಕಿರಿಯ ಕಲಾಕಾರರು ಅಂದು ಸಂಗೀತ ಸೇವೆಗೈಯ್ಯುತ್ತಾರೆ. ೧೯೫೨ರಲ್ಲಿ ಶ್ರೀ ಆರ್. ಟಿ. ಹೆಗಡೆ ಶಿಗೇಹಳ್ಳಿ ಇವರೂ ಸಿರ್ಸಿಯಲ್ಲಿ ಸಂಗೀತ ಶಾಲೆಯನ್ನು ಪ್ರಾರಂಭಿಸಿದರು. ಅವರ ಗುರುಗಳಾದ ಧಾರವಾಡದ ಶ್ರೀ ಚಂದ್ರಶೇಖರ ಪುರಾಣಿಕಮಠರು ಇಲ್ಲಿ ಸಂಗೀತ ಶಿಕ್ಷಕರಾಗಿ ಬಂದರು. ಅನೇಕರು ಆಗ ಹಿಂದುಸ್ತಾನೀ ಸಂಗೀತದತ್ತ ಒಲವು ಹರಿಸಿ ಸಂಗೀತವನ್ನು ಕಲಿಯಲು ಉತ್ಸುಕರಾದರು. ೧೯೫೮ ರಲ್ಲಿ ಶ್ರೀ ಜಿ. ಎಸ್. ಹೆಗಡೆ ಬೆಳ್ಳೇಕೇರಿಯವರು ಮುಂಬೈನಿಂದ ಸಂಗೀತವಿದ್ವಾಂಸರಾಗಿ ಸಿರ್ಸಿಗೆ ಬಂದು ಅಲ್ಲಿ ಸಂಗೀತ ವಿದ್ಯಾಲಯವನ್ನು ತೆರೆದರು. ಇವರು ಸಂಗೀತ ಕಲಿಯುವ ಮನಸ್ಥಿತಿಯಲ್ಲಿ ಮನೆಯಿಂದ ಓಡಿಹೋಗಿ ಮುಂಬೈನಲ್ಲಿ ತಮ್ಮಹೆಸರನ್ನು ಶ್ಯಾಮ ಜೋಶಿ ಎದು ಬದಲಾಯಿಸಿಕೊಂಡು ಸಂಗೀತಕಲಿತರು. ಇಂದಿಗೂ ಅವರು ಸಂಗೀತ ವಿದ್ಯಾಲಯವನ್ನು ನಡೆಸುತ್ತಾ ಬಂದಿದ್ದಾರೆ. ಗಾಯನ-ವಾದನ ಎರಡನ್ನು ಕಲಿಸುತ್ತ ಬಂದ

ಅಡಿಟಿಪ್ಪಣಿ: * ಜಿಲ್ಲೆಯ ಹಿರಿಯ ಸಂಗೀತಗಾರರಾದ ಪಂ. ಆರ್. ಟಿ. ಹೆಗಡೆ ಶೀಗೆಹಳ್ಳಿ ಹಾಗೂ ಪಂ. ಜಿ.ಎಸ್. ಹೆಗಡೆ ಬೆಳ್ಳೇಕೇರಿ.ಇವರ ಸಂದರ್ಶನವನ್ನಾಧರಿಸಿ ....

ಶ್ರೀಯುತರಿಗೆ ಅಕಾಡೆಮಿಯವರು ಪ್ರಶಸ್ತಿಯನ್ನಿತ್ತು ಗೌರವಿಸಿದ್ದಾರೆ. ದಿ. ಮೋಹನ್ ಚಿಕ್ಕರಮನೆ ಹಾಗೂ ಆಗ್ರಾಘರಾನೆಯ ಶ್ರೀ ಪಯ್ಯಾಜ್ ಖಾನ್‌ರಲ್ಲಿ ಸಂಗೀತ ಅಭ್ಯಾಸ ಮಾಡಿದ ಶ್ರೀ ಜಿ.ಎಸ್. ಹೆಗಡೆ ಬೆಳ್ಳೇಕೇರಿ ಇಂದಿಗೂ ಸಂಗೀತವಿದ್ಯೆಯನ್ನು ಅನೇಕರಿಗೆ ಧಾರೆಯೆರೆಯುತ್ತಿದ್ದಾರೆ. ಬ್ರಹ್ಮಚಾರಿಯಾದ ಅವರು ಬಹಳ ಕಟ್ಟುನಿಟ್ಟಳೆಗಳನ್ನು ಹೊಂದಿದ್ದಾರೆ. ಪ್ರತಿವರ್ಷ ಸಂಗೀತಕ್ಕೆ ಸಂಬಂಧಿಸಿದಂತೆ ವಾರ್ಷಿಕೋತ್ಸವವನ್ನು ಆಚರಿಸಿ ಕಲಿಯುವ ಎಲ್ಲ ಮಕ್ಕಳನ್ನು ಪ್ರೋತ್ಸಾಹಿಸುತ್ತಾರೆ. ಸಂಗೀತಕ್ಕೆ ಸಂಬಂಧಿಸಿದಂತೆ ಪುಸ್ತಕವನ್ನು ಹೊರತಂದಿದ್ದಾರೆ. ಪಂಡಿತ ಜಿ. ಎಸ್. ಹೆಗಡೆಯವರ ಶಿಷ್ಯ ಬಳಗ ದೊಡ್ಡದು. ಶ್ರೀ ಕಮಲಾಕರ ಭಟ್ಟರು ಅವರ ಹಿರಿಯ ಶಿಷ್ಯರಲ್ಲೊಬ್ಬರು. ಸಿರ್ಸಿಯ ಮೋಟಿನ್ಸರ್‌ಸ್ಮಾರಕ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದಲ್ಲಿ ಸಂಗೀತವಿಭಾಗ ಅನೇಕ ವರ್ಷಗಳಿಂದ ಅಸ್ತಿತ್ವದಲ್ಲಿದೆ. ಖ್ಯಾತ ಬೀನ್‌ವಾದಕ ದತ್ತೋಪಂತ ಪಾಠಕ್ ಅವರ ಮಗ ಡಾಃ ಬಿಂದುಮಾದವ ಪಾಠಕ್ ಇವರು ಇಲ್ಲಿ ಅನೇಕ ವರ್ಷಗಳಿಂದ ವಿಭಾಗದ ಮುಖ್ಯಸ್ಥರಾಗಿದ್ದರು. ಕಾರವಾರದ ಶ್ರೀ ವೆರ್ಣೇಕರ್‌ರವರು ತಬ್ಲಾ ಗುರುಗಳಾಗಿದ್ದರು. ಕಾಲೇಜಿನ ಕಾರ್ಯಾವದಿಯ ನಂತರ ಹಳ್ಳಿ ಹಳ್ಳಿಗಳಿಗೂ ಹೋಗಿ ಇವರು ಸಂಗೀತದ ಪ್ರಚಾರ ಮಾಡಿದರು. ಇದರಿಂದ ಸಿರ್ಸಿಯಲ್ಲಿ ಶಾಸ್ತ್ರೀಯ ಸಂಗೀತದ ಪರಿಸರ ಬೆಳೆಯಲು ಸಹಾಯಕವಾಯಿತು. ಇಂದು ಸಿರ್ಸಿಯಲ್ಲಿ ಅನೇಕ ಸಂಗೀತ ಶಾಲೆಗಳು ತಲೆಯೆತ್ತಿನಿಂತಿವೆ. ರಾತ್ರಿಯಿಡೀ ಸಂಗೀತಕಾರ್ಯಕ್ರಮ ನಡೆಯುತ್ತಿರುತ್ತದೆ. ಸಂಗೀತಶಾಲೆಯ ವಾರ್ಷಿಕೋತ್ಸವಗಳನ್ನು ಆಚರಿಸಲಾಗುತ್ತದೆ. ಸಾಮಾಜಿಕವಾಗಿ ಸ್ತ್ರೀಯರಿಗೆ ಅಷ್ಟೊಂದು ಸ್ಥಾನಮಾನವಿಲ್ಲದ ಕಾಲದಲ್ಲಿಯೂ ಸ್ತ್ರೀಯರು ಸಂಗೀತ ಕಲಿತು ಸಂಗೀತಗಾರ್ತಿಯರಾಗಿದ್ದನ್ನು ನೋಡಿದರೆ ಎಂತಹ ಕಠಿಣ ಪರಿಶ್ರಮ ಅವರಲ್ಲಿತ್ತು ಎಂಬುದು ಅರಿವಾಗದೇ ಇರದು. ಶುದ್ಧ ಸ್ವತಂತ್ರ ಜೀವನವನ್ನುನಡೆಸಲು ಶಾಸ್ತ್ರೀಯಸಂಗೀತ ಬಹಳ ಸಹಾಯಮಾಡುತ್ತದೆ. ಕಲಿಯುವಿಕೆಯಲ್ಲಿ ತನ್ಮಯತೆ , ಪೂಜ್ಯತೆ ಸರಳತೆಗಳು ಬೇಕು. ಸಂಗೀತವೂ ಒಂದು ತಪಸ್ಸು .ಇವುಗಳೆಲ್ಲದರ ಜೊತೆಗೆ ಸಾಧನೆಯನ್ನು ಮೈಗೂಡಿಸಿಕೊಂಡರೆ ಸಾಧಕ ಒಬ್ಬ ಸಂಗೀತಗಾರನಾಗಬಲ್ಲ. ಸಾಮಾಜಿಕನ್ಯಾಯ, ಸಾಮಾಜಿಕಬದುಕು ಇವು ಸಾರ್ವತ್ರಿಕವಾಗಿ, ವ್ಯಕ್ತಿಯಿಂದ ವ್ಯಕ್ತಿಯು ಇವುಗಳನ್ನು ಮಂಡಿಸುವಕ್ರಮ ವಿಭಿನ್ನವಾಗಿರುತ್ತದೆ. ಸಾಮಾಜಿಕವಾಗಿ , ಸಾಂಸ್ಕೃತಿಕವಾಗಿ ಬಹಳ ಅಧಃಪತನದಲ್ಲಿದ್ದ ಸಮಾಜಕ್ಕೆ ಶಾಸ್ತ್ರೀಯ

ಸಂಗೀತದಂತಹ ಕಲೆಯ ಸಂಸ್ಕಾರ ಪದ್ಧತಿ , ಜನತೆಯನ್ನು ಸನ್ಮಾರ್ಗದತ್ತನಡೆಯಲು ಸೂಚಿಸುವುದು. ಗುರುಕುಲ ಪದ್ಧತಿಯಲ್ಲಿನ ಸಂಗೀತಕಲಿಕೆ ಇಲ್ಲದಿದ್ದರೆ ಈ ವಿದ್ಯೆಯಲ್ಲಿ ಸಿದ್ಧಿಯನ್ನುಪಡೆಯುವದು ಕಷ್ಟವಾಗುತ್ತದೆ.

ಗಾಯಕ ರಾಗವನ್ನು ಪ್ರಸ್ತುತಪಡಿಸುವಾಗ ಜನರ ನಾಡಿಮಿಡಿತ ಬೇಕು ಬೇಡಗಳನ್ನು ತಿಳಿದು , ಸರಳ ರಾಗವನ್ನು ಪ್ರಸ್ತುತಪಡಿಸಬೇಕೆಂಬುದು ನಿಯಮ. *ಯಾವುದೇ ವಿಷಯವು ಸರಳವಾಗಿದ್ದರೆ ಅದು ಬಹಳ ಬೇಗ ಅರ್ಥವಾಗುತ್ತದೆ. ಶಾಸ್ತ್ರಗಳು ಇರುವುದು ಸುಖಕ್ಕಾಗಿ ವಿನಹ ವಸ್ತುವನ್ನು ಪರಿಸ್ಥಿತಿಯನ್ನು ಜಟಿಲಗೊಳಿಸಲು ಅಲ್ಲ. ಇವುಗಳನ್ನೆಲ್ಲ ಅರಿತುಕೊಂಡು ಗಾಯಕ ತನ್ನ ಕಾರ್ಯಕ್ರಮವನ್ನು ಪ್ರಾರಂಭಿಸಬೇಕು. ಗಾಯಕ-ಗಾಯಕರ ನಡುವಣ, ಶಾಲೆ-ಶಾಲೆಗಳ ನಡುವಿನಲ್ಲಿರುವ ತಪ್ಪುಕಲ್ಪನೆ-ದ್ವೇಶಭಾವ ಸಮಾಪ್ತಿಯಾಗಬೇಕು. ಉತ್ತಮವಾದ ಸಂಗೀತವನ್ನು ಎಲ್ಲರೂ ಮೆಚ್ಚಿಕೊಳ್ಳಬೇಕು. ಭಾರತೀಯಸಂಸ್ಕೃತಿಯ ಪ್ರತಿಕವೇ ನಮ್ಮ ಶಾಸ್ತ್ರೀಯಸಂಗೀತ. ಅನೇಕ ಯುವಕರು ಇಂದು ಪಾಶ್ಚಾತ್ಯ ಸಂಸ್ಕೃತಿಗೆ ಮರುಳಾಗಿ, ಮಾದಕದ್ರವ್ಯಗಳಂತಹ ದುಶ್ಚಟಕ್ಕೆ ಬಲಿಯಾಗಿ ಅರ್ಧಾಯುಷಿಗಳಾಗುತ್ತಿದ್ದಾರೆ. ಬದುಕಿನ ಪ್ರೀತಿ , ಅರ್ಥ ಸಂಬಂಧಗಳ ಕಲ್ಪನೆಯೇ ಇವರಿಗಿಲ್ಲದಂತೆ ವರ್ತಿಸುತ್ತಾರೆ. ಮಾದಕದ್ರವ್ಯ ಸೇವನೆಮಾಡುವವರಂತೂ ಪೈಶಾಚಿಕ ರೀತಿಯಲ್ಲಿ ವರ್ತಿಸುವುದನ್ನು ನೋಡಿದಾಗ ಮಾತ್ರ ನಮಗೆ ಸರಳತೆ ಸಂಸ್ಕೃತಿ ತತ್ವ, ಪದ್ಧತಿಗಳ ಕಡೆ ಗಮನ ಹೋಗುತ್ತದೆ. ಇವುಗಳ ಮಹತ್ವದ ಬಗ್ಗೆ ಅರಿವಾಗುತ್ತದೆ. ಸಣ್ಣವರಿರುವಾಗಲೇ ಮಕ್ಕಳನ್ನು ಉತ್ತಮ ಸಂಸ್ಕೃತಿ ಪದ್ಧತಿಗಳ ಕಡೆ ವಾಲಿಸಿದಾಗ ಮಾತ್ರ ಮುಂದೆ ಅವರು ಉತ್ತಮ ಭವಿಷ್ಯವುಳ್ಳ ಪ್ರಜೆಗಳಾಗಬಹುದು. ಈ ದಿಶೆಯಲ್ಲಿ ಸಂಸ್ಕೃತಿ ಇತಿಹಾಸ ಹಾಗೂ ಪರಂಪರೆಯ ಅಧ್ಯಯನ ತುಂಬಾ ಮಹತ್ವದ್ದಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಂದುಸ್ತಾನಿ ಸಂಗೀತಕ್ಕೆ ಸಂಬಂಧಿಸಿದಂತೆ ಸಿರ್ಸಿಯ ಕೇಂದ್ರ ಸ್ಥಾನದಲ್ಲಿ ಅನೇಕ ಕಾರ್ಯಕ್ರಮಗಳು ಜರುಗುತ್ತಿರುತ್ತವೆ. ಸಿರ್ಸಿಯಲ್ಲಿ ಸಂಗೀತಕಲಿಯವ ಆಸಕ್ತರಿಗೆ ಈ ಸಂಗೀತಶಾಲೆಗಳ ಅಸ್ತಿಸ್ವ ಮಹತ್ವದ್ದಾಗಿದೆ. ಅಂತಹವುಗಳಲ್ಲಿ ಬೆಳ್ಳೆಕೇರಿ ಸಂಗೀತ ಶಾಲೆ, ಸಾಯೀ ಸಂಗೀತ ವಿದ್ಯಾಲಯ, ಅರುಣೋದಯ ಸಂಗೀತ ವಿದ್ಯಾಲಯ, ಕಾಲೇಜ ಸಂಗೀತವಿಭಾಗ, ನಿನಾದ ಸಂಗೀತ ವಿದ್ಯಾಲಯ , ವಿಕಾಸ

ಅಡಿಟಿಪ್ಪಣಿ: * ಜಿಲ್ಲೆಯ ಶಾಸ್ತ್ರೀಯ ಸಂಗೀತದ ಕುರಿತು ಲೇಖಕರ ಅಭಿಪ್ರಾಯ ....

ಗಿಳಿಗುಂಡಿ ತಬ್ಲಾವಿದ್ಯಾಲಯ ಹೀಗೆ ಅನೇಕ ವಿದ್ಯಾಲಯಗಳು ಇಲ್ಲಿನ ಸಂಗೀತ ರಸಿಕರ ತೃಷೆಗೆ ನೀರೆರೆಯುತ್ತ ಬಂದಿವೆ. ಬೆಳವಣಿಗೆ ಆರೋಗ್ಯ ಪೂರ್ಣವಾಗಿರಬೇಕು. ಸಂಗೀತದ ತತ್ವ, ಸಿದ್ಧಾಂತ , ಏಕತೆಗಳಿಂದ ಬೆಳವಣಿಗೆ ಮುಕ್ತವಾಗಿರಬೇಕು. ಪರಸ್ಪರ ಒಬ್ಬರನ್ನೊಬ್ಬರು ಗೌರವದಿಂದ ಕಾಣುವಂತಹ ವಾತಾವರಣ ನಿರ್ಮಾಣವಾಗಬೇಕು. ಒಬ್ಬರಿಗೊಬ್ಬರು ಸಹಾಯ ಮಾಡುವ ಪ್ರವೃತ್ತಿ ಬೆಳೆಯಬೇಕು. ಶಾಸ್ತ್ರೀಯ ಸಂಗೀತಕ್ಕೆ ಜಾತಿ ಮತ ಬೇದವಿಲ್ಲ. ಕಲಿಯಲು ವಯಸ್ಸಿನ ನಿರ್ಬಂಧವೇನೂ ಇಲ್ಲ. ಪಂ. ಜಸರಾಜರಂತಹ ಹಿರಿಯ ಶ್ರೇಷ್ಟ ಕಲಾಕಾರರು ತಬ್ಲಾವಾದಕರಾಗಿ ನಂತರ ಸಂಗೀತವನ್ನುಕಲಿತು ಇಂದು ಶ್ರೇಷ್ಠಗಾಯಕರಾಗಿದ್ದಾರೆ. ಕಲಿಯುವವನಿಗೆ, ಸಂಶೋಧಕನಿಗೆ ಕಾಲ, ಬೇದಗಳನ್ನುಎಣಿಸಲು ಬರುವದಿಲ್ಲ. ಸತ್ಯ ತಿಳಿಯುವವರಿಗೆ ಸಂಶೋಧನೆ ಮಾಡುತ್ತಲೇ ಇರಬೇಕಾಗುತ್ತದೆ. ಸಂಶೋಧನೆ ಮಾಡುತ್ತಾ ಅದರ ಜ್ಞಾನವನ್ನು ಮೊದಲು ತಾನು ಅರ್ಥೈಸಿಕೊಂಡು ನಂತರ ಇತರರಿಗೂ ಅದರ ತಿಳುವಳಿಕೆಯನ್ನು ಕೊಟ್ಟಾಗಲೇ ಅದರ ಫಲ ಎಲ್ಲರಿಗೂ ಸಿಗಲುಸಾಧ್ಯ. ಕಲಾಕಾರ ಇಂತಹ ಪ್ರಯತ್ನವನ್ನು ಮಾಡುತ್ತಲೇ ಇರಬೇಕು. ಸಂಗೀತಕ್ಕೆ ಭಾಷೆ ಇಲ್ಲ. ಇದು ಭಾವಭಾಷೆ , *ಭಾಷೆಯ ಹಂಗಿಲ್ಲದೇ ಅಸ್ತಿತ್ವದಲ್ಲಿರುವ ಕಲೆ ಸಂಗೀತ. ಅಜ್ಞಾನವನ್ನು ತೊರೆದು ಸುಜ್ಞಾನದತ್ತ ಸಾಗುವ ಗುರಿ ಸಂಗೀತಗಾರರಲ್ಲಿರಬೇಕು. ಅಹಂಕಾರ ಪ್ರವೃತ್ತಿ ಸಂಗೀತಗಾರನಿಗೆ ಸಲ್ಲದು. ಸ್ವಾಭಿಮಾನಿಯಾಗಿರಬೇಕು ನಿಜ ಆದರೆ ದುರಾಭಿಮಾನ ಹೊಂದಿದರೆ ಅದು ಸಂಪೂರ್ಣ ಬೆಳವಣಿಗೆಗೆ ಮಾರಕವಾಗುವುದು. ಸಿದ್ದಾಪುರದಲ್ಲಿ ಶ್ರೀ ವಾಮನರಾವ್ ಬೆಟಗೇರಿ ಹಳೆಯತಲೆಮಾರಿನ ಸಂಗೀತೋಪಾಸಕರು. ಇವರು ಅನೇಕ ಸಂಗೀತಾಸಕ್ತರನ್ನು ತರಬೇತುಗೊಳಿಸಿದ್ದಾರೆ. ಇವರ ಸಾಧನೆಯನ್ನು ಮಾನ್ಯಮಾಡಿ ರಾಜ್ಯಸರ್ಕಾರದ ಅಕಾಡೆಮಿಪ್ರಶಸ್ತಿಯೂ ಇವರಿಗೆ ಸಂದಿದೆ. ಕುಳವೆ ಶ್ರೀ ಶಾಂತಾರಾಮಶಾಸ್ತ್ರಿಗಳು ಕೆಲವುಕಾಲ ಸಂಗೀತದ ತರಗತಿಗಳನ್ನು ನಡೆಸುತ್ತಿದ್ದರು. ಈಗ ಶ್ರೀ ಮೋಹನ ಹೆಗಡೆಯವರ ನೇತ್ರತ್ವದಲ್ಲಿ ಸಿದ್ಧಾಪುರ ಹಾಗೂ ಕಾನ್ಸೂರಿನಲ್ಲಿ ಸಂಗೀತ ಶಾಲೆಗಳು ನಡೆಯುತ್ತಲಿದೆ. ಸಿದ್ದಾಪುರದಲ್ಲಿ ಶ್ರೀ ಜಿ.ಎಸ್. ಹೆಗಡೆ ಬೆಳ್ಳಿಕೇರಿಯವರ ಶಿಷ್ಯ ಪ್ರಭಾಕರ ಭಟ್ಟ ಸಂಗೀತ ತರಗತಿಗಳನ್ನು ಕೆಲಕಾಲ ನಡೆಸುತ್ತಿದ್ದರು. ಈಗ ಶ್ರೀಪಾದ ಹೆಗಡೆ ಸೋಮನಮನೆ ಇಲ್ಲಿ ತರಗತಿಯನ್ನು ನಡೆಸಿದ್ದಾರೆ. ಮೋಹನ ಹೆಗಡೆ ಹುಣಸೆಕೊಪ್ಪ ತಬ್ಲಾ ಕ್ಲಾಸನ್ನು ನಡೆಸುತ್ತಿದ್ದಾರೆ. ಬಿದ್ರಕಾನದಲ್ಲಿ

ಅಡಿಟಿಪ್ಪಣಿ: *ಜಿಲ್ಲೆಯ ಶಾಸ್ತ್ರೀಯ ಸಂಗೀತದ ಮಾಹಿತಿಯ ಕ್ಷೇತ್ರ ಕಾರ್ಯದಿಂದ ಹಾಗೂ ಲೇಖಕರ ಅಭಿಪ್ರಾಯ .....

ಶ್ರೀ ವಿಘ್ನೇಶ್ವರ ಹೆಗಡೆ ಕೋಡೆಮನೆ ತರಗತಿಗಳನ್ನು ನಡೆಸುತ್ತಿದ್ದಾರೆ. ಇನ್ನೂ ಅನೇಕ ಸಂಗೀತ ಶಾಲೆಗಳ ಪರಿಣಾಮವಾಗಿ ಸಿದ್ದಾಪುರದಲ್ಲಿನ 'ಸಂಗೀತಸುಧಾ' ಸಂಘಟನೆ ಪ್ರತಿತಿಂಗಳು ಒಂದು ಸಂಗೀತ ಕಾರ್ಯಕ್ರಮವನ್ನು ಆಯೋಜಿಸಿ ಉತ್ತಮ ಸಂಗೀತವನ್ನು ಕೇಳಿಸುತ್ತಾ ಬಂದಿದ್ದಾರೆ. ಇದು ಸಂಗೀತಜಗತ್ತಿನ ಒಂದು ಉತ್ತಮ ಬೆಳವಣಿಗೆಯಾಗಿದೆ. ಸುಶೀಕ್ಷಿತ ಸಂಗೀತ ಪ್ರೇಕ್ಷಕರು ಇಲ್ಲಿ ಇದ್ದಾರೆ. ಜಿಲ್ಲೆಯ ಅನೇಕ ಸಂಗೀತಾಸಕ್ತರು ಸಂಗೀತದ ಪುಣ್ಯನೆಲ ಪುಣಾ ಮುಂಬೈಗಳಿಗೂ ಹೋಗಿ ಸಂಗೀತವನ್ನು ಆಲಿಸುವುದನ್ನು ಕಂಡರೆ ಇವರ ಅಭಿಮಾನ ಹಾಗೂ ಆಸಕ್ತಿಗಳ ಬೆಗೆಗೆ ಕಲ್ಪನೆ ಬಾರದೇ ಇರದು.

ಅಂಕೋಲಾದಲ್ಲಿ ಬಾಬಲಿ ಎಂಬುವವರು ಸಂಗೀತಾಸಕ್ತ ತಬ್ಲಾವಾದಕರು. ಇವರು ಅನೇಕರನ್ನು ತರಬೇತುಗೊಳಿಸಿದ್ದಾರೆ. ಶಾಸ್ತ್ರೀಯಸಂಗೀತ ಇಲ್ಲಿ ಸ್ವಲ್ಪಕಡಿಮೆ ಎಂದರೆ ತಪ್ಪಾಗಲಾರದು. *೧೯೪೦ ಕ್ಕೂ ಮೊದಲು ವೆಶ್ಯೆಯರು ಸಂಗೀತ ಹಾಡುತ್ತಿರುವುದನ್ನು ಅನುಭವಿಕರಿಂದ ಕೇಳಿ ತಿಳಿದುಕೊಳ್ಳಬಹುದಾಗಿದೆ. ಆದರೆ ಅದು ಶಾಸ್ತ್ರೀಯ ಸಂಗೀತವಾಗಿರಲಿಲ್ಲ . ಗಲಬೆ, ಗಲಾಟೆ, ಕಾಲೇಜಿನಲ್ಲಿ ನಡೆಯುವ ಅಹಿತಕರ ಘಟನೆಗಳು ಅಂಕೋಲಾ ತಾಲೂಕಿನಲ್ಲಿ ನಡೆಯುವದನ್ನು ನೆನೆಸಿಕೊಂಡಾಗ ಸಂಸ್ಕೃತಿ, ಸಂಗೀತ, ನೃತ್ಯದ ಮಹತ್ವ ತಿಳಿಯದೇ ಇರಲಾರದು. ಲಘು ಸಂಗೀತದಲ್ಲಿ ಸುಬ್ರಹ್ಮಣ್ಯ ಶೆಟ್ಟಿ, ಅಶೋಕ ಮಹಾಲೆ ಮುಂತಾದವರು ಪರಿಣತಿ ಪಡೆದಿದ್ದಾರೆ. ಈ ತಾಲೂಕಿನಲ್ಲಿ ಸಂಗೀತ ಇನ್ನೂ ಬೆಳೆಯಬೇಕಾಗಿದೆ. ಕುಮಟಾದಲ್ಲಿ ಹಿಂದಿನ ತಲೆಮಾರಿನ ಗಾಯಕ ಚಿತ್ತರಗಿ ಮೋಹನ, ಗಂಪ, ದೊಡ್ಡತಮ್ಮ ಭಂಡಾರಿ ಮುಂತಾದ ಗಾಯಕರನ್ನು, ವಾದಕರನ್ನು ನಾವು ಗುರುತಿಸಬಹುದು. ಹೆಚ್ಚಾಗಿ ಹಾರ್ಮೋನಿಯಂ ರಿಪೇರಿ ತಬ್ಲಾ ರಿಪೇರಿ ಮಾಡುವವರೇ ಸ್ವಲ್ಪಮಟ್ಟಿಗೆ ಸಂಗೀತದ ಪ್ರಸಾರಕಾರ್ಯದಲ್ಲಿ ನೆರವಾಗುತ್ತಿದ್ದರು. ಇತ್ತೀಚೆಗೆ ನಾದಶ್ರೀ ಕಲಾಕೇಂದ್ರ ಇಲ್ಲಿ ಚೆನ್ನಾಗಿ ನಡೆದುಕೊಂಡು ಬಂದಿದೆ. ಹೊನ್ನಾವರದ ಕಲಾಸಂಗಮದ ನೇತೃತ್ವದಲ್ಲಿ ಶಾಸ್ತ್ರೀಯ ಸಂಗೀತ, ಕಲಿಕಾ ಕೇಂದ್ರಗಳು ಅನೇಕ ಕಡೆ ವ್ಯವಸ್ಥಿತವಾಗಿ ನಡೆಯುತ್ತಿದೆ. ಭಟ್ಕಳ ಶಿರಾಲಿಗಳಲ್ಲಿಯೂ ಇಂತಹ ಕಲಿಕಾ ಕೇಂದ್ರಗಳು ನಡೆಯುತ್ತಿದ್ದು ಶಾಸ್ತ್ರೀಯ ಸಂಗೀತಾಸಕ್ತರನ್ನು ಬಡಿದೆಬ್ಬಿಸಲು ಅವರ ಆಸೆಗೆ ನೀರೆರೆಯಲು ಇಂತಹ ಸಂಸ್ಥೆಗಳು ಉತ್ತಮ ಕೆಲಸ ಮಾಡುತ್ತಲಿವೆ.

ಅಡಿಟಿಪ್ಪಣಿ: * ನೃತ್ಯಕಾರ ಗೋಪಾಲಕೃಷ್ಣ ನಾಯಕರಿಂದ ಸಂಗ್ರಹಿಸಿದ್ದು ....

ಯಲ್ಲಾಪುರ ತಾಲೂಕಿನ ಮುಖ್ಯ ಸ್ಥಳವಾದ ಯಲ್ಲಾಪುರದ ವಾಯ್.ಟಿ. ಎಸ್.ಎಸ್ ಪ್ರೌಢಶಾಲೆಯಲ್ಲಿ ಅನೇಕ ವರ್ಷಗಳಿಂದ ಸಂಗೀತ ವಿಷಯವಿದ್ದು ಶ್ರೀಮತಿ ಲತಾ ಉಡುಗೋಣ ಅಲ್ಲಿ ಸಂಗೀತ ಕಲಿಸುತ್ತಾರೆ. *ಇತ್ತೀಚೆಗೆ ೧೯೯೫ರಲ್ಲಿ ಅಸ್ತಿತ್ವದಲ್ಲಿ ಬಂದ ಸಂದೀಪಉಡುಪರ ನೇತೃತ್ವದಲ್ಲಿ ಶ್ಯಾಮಲಾ ಸಂಗೀತ ವಿದ್ಯಾಲಯ ಚೆನ್ನಾಗಿ ನಡೆಯುತ್ತಲಿದೆ. ಯಲ್ಲಾಪುರದ ರೋಟರಿ ಶಾಲೆಯಲ್ಲಿಯೂ ಸಂಗೀತ ಕಲಿಸುವ ವ್ಯವಸ್ಥೆ ಮಾಡಲಾಗಿದೆ. ಈ ತಾಲೂಕು ಸಂಗೀತದಲ್ಲಿ ಉತ್ತಮಕೃಷಿ ಮಾಡಿದೆ. ಯಕ್ಷಗಾನ ಭಾಗವತಿಕೆ, ಮದ್ದಳೆ, ಚಂಡೆ ಹೀಗೆ ಯಕ್ಷಗಾನಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟರೂಕೂಡ, ಸಂಗೀತವನ್ನು ಕೇಳುವ ಆಸಕ್ತಿ ಸರ್ವಸಾಮಾನ್ಯವಾಗಿ ಬಹುಜನರಲ್ಲಿ ಬೆಳೆದುಬಂದಿದೆ. ಪ್ರೀತಿ ಸಹಕಾರ ಮನೋಭಾವವುಳ್ಳ ಇಲ್ಲಿನ ಜನರು ಶಾಂತಿಪ್ರಿಯರು.

ಹೊನ್ನಾವರ ಕಲಭಾಗದ ಗೋವಿಂದ ಹೆಗಡೆಯವರು ಸಂಗೀತ ಪ್ರಸಾರಕ್ಕೆ ಹೆಚ್ಚಿನ ಸಹಕಾರ ನೀಡಿದ್ದಾರೆ. ಶ್ರೀ ಪುರಾಣಿಕ ಮಠರು ಅನೇಕ ಶಿಷ್ಯರನ್ನು ಇವರ ಮನೆಯಲ್ಲಿಯೇ ಇದ್ದು ತರಬೇತು ಗೊಳಿಸಿದ್ದಾರೆ. ಇವರ ಮಕ್ಕಳಲ್ಲಿ ಶ್ರೀ ಪರಮೇಶ್ವರ ಹೆಗಡೆ, ಗೋಪು ಹೆಗಡೆ, ಶ್ರೀಧರ ಹೆಗಡೆ, ಉಮಾಂಬ ಹೆಗಡೆ, ಮುಂತಾದವರು ಸಂಗೀತಗಾರರಾಗಿದ್ದಾರೆ.

ಹೊನ್ನಾವರ ತಾಲೂಕಿನ ಉತ್ತಮ ಸಂಗೀತ ಸಂಘಟಕರು ಪ್ರೊ: ಶಂಭು ಭಟ್ಟ ಕಡತೋಕಾ ಇವರು ಒಂದಲ್ಲಾಒಂದು ಸಂಗೀತ ಕಾರ್ಯಕ್ರಮವನ್ನು ನಡೆಸುತ್ತಲೇ ಇರುತ್ತಾರೆ. ೧೯೮೫ ರಲ್ಲಿ ಹೊನ್ನಾವರದಲ್ಲಿ ಕಲಾಸಂಗಮ ಸ್ಥಾಪನೆಯಾದಾಗಿನಿಂದ ಇದುವರೆಗೆ ಉತ್ತಮ ಸಂಘಟನೆಯನ್ನು ನಡೆಸುತ್ತಲೇ ಬಂದಿದ್ದಾರೆ. ಕರಾವಳೀತಾಲೂಕುಗಳಲ್ಲಿ ಸಂಗೀತ ಪ್ರಸಾರಕಾರ್ಯದಲ್ಲಿ ಇಲ್ಲಿನ ಕಲಾಸಂಗಮ ಉತ್ತಮ ಸಹಕಾರವನ್ನು ನೀಡುತ್ತ ಬಂದಿದೆ. ವಿ.ವಿ. ಪೈ, ಪಿ.ಡಿ. ಶ್ಯಾನಭಾಗ, ಚಂದಾವರ ಮುಂತಾದವರು ಇಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಕಟ್ಟಿಗೆ ಭಟ್ಟರು ಇಲ್ಲಿನ ಹಿರಿಯ ಸಂಗೀತಕಾರರು. ಶ್ರೀ ಜಿ. ಆರ್. ಭಟ್ಟ, ಎನ್. ಎಸ್. ಹೆಗಡೆ, ರಾಜು ಹೆಬ್ಬಾರ, ಜಿ.ಕೆ. ಹೆಗಡೆ ಮುಂತಾದ ಪ್ರತಿಭಾವಂತ ಕಲಾಕಾರರು ಇಲ್ಲಿದ್ದಾರೆ. ಹೊನ್ನಾವರ ಕಾಲೇಜಿನಲ್ಲಿರುವ ಸಂಗೀತ ವಿಭಾಗ ಈ ಭಾಗದಲ್ಲಿ ಸಂಗೀತ ಬೆಳವಣಿಗೆಗೆ ಉತ್ತಮ ಸಹಕಾರವನ್ನು ನೀಡಿದೆ. ಶ್ರೀ ರಾಜೀವ ಪುರಂದರೆ (ಪಂ. ಮಲ್ಲಿಕಾರ್ಜುನ ಮನ್ಸೂರರ ಶಿಷ್ಯ) ಇಲ್ಲಿಯ ಸಂಗೀತವಿಭಾಗದ

ಅಡಿಟಿಪ್ಪಣಿ: * ಜಿಲ್ಲೆಯ ಶಾಸ್ತ್ರೀಯ ಸಂಗೀತದ ಬೆಳವಣಿಗೆಯ ಕುರಿತು ನಡೆಸಿದ ಅಧ್ಯಯನದಿಂದ ……

ಮುಖ್ಯಸ್ಥರಾಗಿದ್ದರು. ಈಗ ಅವರಶಿಷ್ಯೆ ಶ್ರೀಮತಿ ಭಾರತಿ ಮೇಸ್ತಾ ಮುಖ್ಯಸ್ಥರಾಗಿದ್ದಾರೆ. ಅಶೋಕ ಹುಗ್ಗಣ್ಣವರ್, ಕೃಷ್ಣಮೂರ್ತಿ ಭಟ್ಟ, ಗೋಪು ಹೆಗಡೆ , ಅನಂತಮೂರ್ತಿ ಇವರುಗಳು ಸಂಗೀತ ಪ್ರಾಧ್ಯಾಪಕರಾಗಿದ್ದಾರೆ.

೧೯೬೪ ರಲ್ಲಿ ಹೊನ್ನಾವರದಲ್ಲಿ ಶ್ರೀ ಆರ್.ಎಸ್.ಹೆಗಡೆಯವರ ನೇತೃತ್ವದಲ್ಲಿ ಎಂ.ಪಿ.ಇ ಸೋಸೈಟಿಯವರ ಆಶ್ರಯದಲ್ಲಿ ಪದವಿ ಕಾಲೇಜನ್ನು ಸ್ಥಾಪಿಸಲಾಯಿತು. ಖ್ಯಾತ ಸಾಹಿತಿಗಳು, ವಿದ್ವಾಂಸರೂ ಆದ ಶ್ರೀ ವಿ. ಸೀತಾರಾಮಯ್ಯ ಅವರನ್ನು ಕಾಲೇಜಿನ ಪ್ರಾಂಶುಪಾಲರನ್ನಾಗಿ ನೇಮಿಸಲಾಯಿತು. ಕಾಲೇಜಿನ ಆಡಳಿತ ಮಂಡಳಿ ಹಾಗು ಪ್ರಾಂಶುಪಾಲರ ಕಳಕಳಿಯ ಪ್ರಯತ್ನದಿಂದ ೧೯೬೪ ರಿಂದಲೇ ಇಲ್ಲಿ ಸಂಗೀತ ವಿಭಾಗ ಪ್ರಾರಂಭವಾಯಿತು. ಆರಂಭದಲ್ಲಿ ಗೋಕರ್ಣದ ಶ್ರೀ ಕಟ್ಟಿಗೆ ಭಟ್ಟರು ಇಲ್ಲಿ ಸಂಗೀತವಿಭಾಗದ ಪ್ರಥಮ ಪ್ರಾಧ್ಯಾಪಕರಾಗಿ ನೇಮಕಗೊಂಡರು. ನಂತರ ಹಿಂದುಸ್ತಾನೀ ಶಾಸ್ತ್ರೀಯ ಸಂಗೀತದ ಖ್ಯಾತ ಗಾಯಕರಾದ ಪಂ: ಮಲ್ಲಿಕಾರ್ಜುನ್ ಮನ್ಸೂರ್ ಅವರ ಹಿರಿಯ ಶಿಷ್ಯ ಶ್ರೀ ರಾಜೀವ ಪುರಂದರೆಯವರು ಇಲ್ಲಿನ ಸಂಗೀತ ವಿಭಾಗದ ಮುಖ್ಯಸ್ಥರು ಹಾಗು ಪ್ರಾಧ್ಯಾಪಕರಾಗಿ ನೇಮಕಗೊಂಡರು. ಪುರಂದರೆಯವರ ನಿವೃತ್ತಿಯ ನಂತರ ಅವರ ಶಿಷ್ಯೆ ಶ್ರೀಮತಿ ಭಾರತಿ ಮೇಸ್ತಾ ಸಂಗೀತವಿಭಾಗದ ಮುಖ್ಯಸ್ಥರಾದರು. ಆಡಳಿತ ಮಂಡಳಿಯವರ ಸಹಕಾರದಿಂದ ಸಂಗೀತ ವಿಭಾಗದ ಉಪನ್ಯಾಸಕರ ಪ್ರಯತ್ನದಿಂದ ಈ ಸಂಗೀತ ವಿಭಾಗ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ.

ಸಿರ್ಸಿ ಕಾಲೇಜಿನ ಸಂಗೀತವಿಭಾಗದಿಂದಲೂ ಸಂಗೀತ ಪ್ರಸಾರಕಾರ್ಯಕ್ಕೆ ಉತ್ತಮ ಸಹಕಾರ ಸಿಕ್ಕಿದ್ದರಿಂದ ಆ ಭಾಗದಲ್ಲಿ ಸಂಗೀತದ ಬೆಳವಣಿಗೆಗೆ ಪೂರಕವಾದ ವಾತಾವರಣ ಬೆಳೆಯಿತು.



ಅಧ್ಯಾಯ ೮

ಕಲೆ,ಉತ್ತರ ಕನ್ನಡ ಜಿಲ್ಲೆಯ ಕಲೆಗಳು

<u>ಕಲೆ</u>

ಕಲೆಗೆ ಮೂಲಪ್ರೇರಣೆ ದೊರಕುವುದು ಅಪೂರ್ವ ಕಲಾಶಾಲೆಯಾದ ಪ್ರಕೃತಿಯಿಂದ. ಪ್ರಕೃತಿಯೊಡನೆ ಅವಿನಾಭಾವ ಸಂಬಂಧವುಳ್ಳ ಗುಹಾಮಾನವ ಪ್ರಕೃತಿಯ ರುದ್ರರಮ್ಯತೆಗಳಿಗೆ ಸ್ಪಂದಿಸಿ, ಬಾವೋನ್ಮಾದಕ್ಕೊಳಗಾಗಿ ಪ್ರಕೃತಿಯನ್ನು ಅನುಕರಿಸುತ್ತಾ ತನ್ನ ಭಾವನೆಗಳಿಗೆ ಅಭಿವ್ಯಕ್ತಿಯನ್ನು ನೀಡುತ್ತ ಬಂದನು. ಅವನ ಈ ಅನುಭವದ ಅನುಕರಣೆಯಲ್ಲಿಯೇ ಕಲಾಂಕುರವಿದೆ. ಚಿತ್ರ, ಶಿಲ್ಪ, ನೃತ್ಯ, ಸಂಗೀತ ಸಾಹಿತ್ಯಾದಿ ಕಲೆಗಳಲ್ಲೆಲ್ಲ ಕಾಣುವುದು ಈ ಅನುಕರಣೆಯನ್ನೇ. ಸಂವೇದನಾ ಶೀಲನಾದ ಮಾನವನು ಪಶು , ಪಕ್ಷಿ ಪ್ರಕೃತಿಯ ಸೌಂದರ್ಯಾನುಭವಗಳನ್ನು ಸುಂದರವಾಗಿ ಕೌಶಲ್ಯಪೂರ್ಣವಾಗಿ ಜಾಣ್ಮೆಯಿಂದ ಅನಾವರಣಗೊಳಿಸಿದಾಗ ಅದು ಕಲೆಯಾಗುತ್ತದೆ.

ಜಾನಪದ ಇಲ್ಲವೇ ಅಭಿಜಾತ ಯಾವುದೇ ಕಲೆಯಾದರೂ ಮೊದಲು ಹುಟ್ಟಿಕೊಂಡಿದ್ದು ದೈವೀ ಆರಾಧನೆಗಾಗಿಯೆ ಎನ್ನಬಹುದು. ಶಾಸ್ತ್ರೀಯ ಸಂಗೀತದಲ್ಲಿ ಖ್ಯಾಲ್‌ಗಾಯನಕ್ಕಿಂತ ಮೊದಲು ದ್ರುಪದ್, ಧಮಾರ್, ಶೈಲಿಗಳಿದ್ದುದು ಕಂಡುಬರುತ್ತದೆ. ಇವುಗಳು ಸಾಮಾನ್ಯವಾಗಿ ದೈವೀ ಆರಾಧನೆಯುಳ್ಳ ಬಂದೀಷ್‌ಗಳನ್ನು ಹೊಂದಿರುವುದನ್ನು ಕಾಣಬಹುದು. ಸಂಗೀತದಲ್ಲಿ ಆಹತ ಹಾಗೂ ಅನಾಹತ ಎಂಬ ಎರಡು ನಾದಗಳಿದ್ದು ಆಹತನಾದ ಸಂಗೀತಕ್ಕೆ ಉಪಯೋಗವಾಗುತ್ತದೆ. ಅನಾಹತನಾದವು ಕರ್ಕಶವಾಗಿದ್ದು ಇದು ಸಂಗೀತಕ್ಕೆ ಉಪಯೋಗವಾಗಿಲ್ಲ.

ದೈವೀ ಆರಾಧನೆಯು ಕಲೆಯಲ್ಲಿದ್ದರೂ , ಕ್ರಮೇಣ ಮಾನವ ಸೌಂದರ್ಯ ದೃಷ್ಟಿಯಿಂದ ನೋಡಿ ಆತ್ಮ ಸಂತೃಪ್ತಿಗಾಗಿ ಮತ್ತು ತನ್ನ ಮಹಾನಂದಕ್ಕಾಗಿ ಬಳಸಿಕೊಂಡ. ಕಾಲಕ್ರಮೇಣ ಕಲೆಯು ಅಭಿವೃದ್ಧಿ ಹೊಂದಿ ಧಾರ್ಮಿಕ ಉದ್ದೇಶವನ್ನು ಹೊಂದಿದ ಧಾರ್ಮಿಕ ಕಲೆ ಹಾಗೂ ಸತ್ಯ ಸೌಂದರ್ಯವನ್ನು ಪ್ರಕಟಿಸುವ ಲೌಕಿಕ ಕಲೆ ಎಂದು ಎರಡು ಬಗೆಯಲ್ಲಿ ಇವುಗಳನ್ನು ಕಲಾವಂತರು ಹಿತೈಷಿಗಳು ಗುರುತಿಸಿದರು.

ಧಾರ್ಮಿಕ ಕಲೆಗಳು ಧಾರ್ಮಿಕ ವಿಧಿಕ್ರಿಯೆಗಳಲ್ಲಿ ಜನ್ಮ ಪಡೆಯುತ್ತದೆ. ಆದಿ ಮಾನವ ತನ್ನ ಬದುಕಿನ ಶೈಶಾವಸ್ಥೆಯಲ್ಲಿ ಪ್ರಕೃತಿಯ ರುದ್ರತೆಗೆ ಹೆದರಿ, ರಮ್ಯತೆಗೆ ರಸರೋಮಾಂಚನಗೊಂಡು ಪ್ರಕೃತಿಯಲ್ಲಿಯೇ ಪರಮನನ್ನು ಕಂಡು ಅದನ್ನು ಸುಪ್ರೀತಗೊಳಿಸಲು ಅದನ್ನನುಕರಿಸಿದ ಮತ್ತು ಅದರ ಮಹತ್ವವನ್ನು ಹಾಡಿ

ಹೊಗಳಿದ . ಆಹಾರಕ್ಕಾಗಿ , ಮಳೆ , ಬೆಳೆಯ ಸಮೃದ್ಧಿಗಾಗಿ ಪ್ರಾರ್ಥಿಸಿದ. ಅವನ ಆರಾಧನೆಯಲ್ಲಿ ನೃತ್ಯ , ಗೀತ ತಾಳಕ್ಕೆ ತಕ್ಕ ಮೇಳಗಳೂ ಸೇರಿಕೊಂಡವು. ಅವನ ಹಸಿವೆಯನ್ನು ಹಿಮ್ಮೆಟ್ಟಿಸುವ ಬೇಟೆ ದೊರಕಿದಾಗ , ಬಿತ್ತಿದ ಬೆಳೆ ಕೈಗೆ ಬಂದಾಗ, ಶತ್ರುವಿನ ಮೇಲೆ ವಿಜಯವನ್ನು ಸಾಧಿಸಿದಾಗ , ತನ್ನ ಯಶಸ್ಸಿಗೆ ಬದುಕಿನ ಸಾಫಲ್ಯಕ್ಕೆ ಭಗವದನುಗ್ರಹವೇ ಕಾರಣವೆಂದು ಎಲ್ಲರೊಂದಿಗೆ ಕುಣಿದು ದೈವೀಶಕ್ತಿಯನ್ನು ಹಾಡಿ ಹೊಗಳಿದ. ಈ ಕುಣಿತ, ಹಾಡು ನರ್ತನ ಇವೇ ಮುಂದೆ ನೃತ್ಯ ಸಂಗೀತಾದಿ ಕಲೆಗಳಾದವು. ಕಾಲ ಕ್ರಮೇಣ ಹೊಸ ರೂಪು, ಆಯಾಮದೊಂದಿಗೆ ಇವು ಶಾಸ್ತ್ರೀಯತೆಯ ಬದ್ಧತೆಗೆ ಸಿಲುಕಿ ಕೆಲವು ಶಾಸ್ತ್ರೀಯ ಕಲೆಗಳಾದವು. ಜನಪದೀಯವಾಗಿ ಬೆಳೆದು ಬಂದ ಈ ಕಲೆಗಳು ಜನಪದರಿಗೆ ಕಲೆ, ಕಲೆಗಾಗಿ ಅಲ್ಲ, ಧಾರ್ಮಿಕ ಆವರಣ ನಿರ್ಮಾಣಕ್ಕಾಗಿ, ಅವರ ಬದುಕನ್ನು ನಿಯಂತ್ರಿಸಿ ಚೈತನ್ಯ ನೀಡುವ ದೈವೀ ಆರಾಧನೆಗಾಗಿ ಎಂಬುದು ಮನದಟ್ಟಾಯಿತು. ಮುಂದೆ ಕ್ರಮೇಣ ಮನೆ ಕೆಲಸಗಳ ಮಧ್ಯೆ ದೊರೆತ ವಿರಾಮ ಕೆಲಸದ ಹಂಚಿಕೆಗಳ ಕಾರಣದಿಂದಾಗಿ ಬೆಳೆದ ಸೌಂದರ್ಯ ಪ್ರಜ್ಞೆ ಲೌಕಿಕ ಕಲೆಗಳಿಗೆ ಅವಕಾಶ ಕಲ್ಪಿಸಿಕೊಟ್ಟಿತು.

ಉತ್ತರ ಕನ್ನಡ ಜಿಲ್ಲೆಯ ಕಲೆಗಳು

ಒಂದು ನಾಡಿನ ಪರಿಸರ, ಋತುಮಾನ , ಜನಾಂಗ ಮನೋಧರ್ಮಕ್ಕನುಗುಣವಾಗಿ ಕಲೆಗಳು ಪ್ರದೇಶ ಇಲ್ಲವೇ ಜನಾಂಗನಿಷ್ಟವಾಗಿ ಬೆಳೆಯುತ್ತವೆ. ಪ್ರಾದೇಶಿಕ ನೆಲೆಯಲ್ಲಿ ಕರ್ನಾಟಕದ ಜನಪದ ಕಲೆಗಳನ್ನು ಉತ್ತರ ಕರ್ನಾಟಕ , ದಕ್ಷಿಣ ಕರ್ನಾಟಕ , ಕರಾವಳಿ ಕರ್ನಾಟಕದ ಕಲೆಗಳೆಂದು ವಿಭಜಿಸಬಹುದು. ಈ ಉತ್ತರ ಕನ್ನಡ ಜಿಲ್ಲೆ ಕರಾವಳಿ ಕರ್ನಾಟಕದಲ್ಲಿದೆ.

ಪ್ರಾಕೃತಿಕವಾಗಿ, ಕರಾವಳಿ, ಮಲೆನಾಡು ಹಾಗೂ ಬಯಲು ಸೀಮೆಯನ್ನು ಈ ಜಿಲ್ಲೆ ಒಳಗೊಂಡಿದೆ. ಇಲ್ಲಿಯ ತಂಪಾದ ವಾತಾವರಣ ಹಸಿರು ಮುರಿಯುವ ಕಾಡುಗಳು, ಬೋರ್ಗರೆವ ಕಡಲು ಹೊಳೆ ಹಳ್ಳಗಳು ಆಗಾಗ ಸುರಿಯುವ ಜಡಿಮಳೆ,ಇಲ್ಲಿ ವಾಸಿಸುತ್ತಿರುವ ವಿಭಿನ್ನ ಜಾತಿ ಮತ್ತು ಪಂಗಡಗಳು, ಅವರು ಆಚರಿಸುವ ಹಬ್ಬ ಹರಿದಿನ ಜಾತ್ರೆಗಳ ವಿಧತೆ ಮತ್ತು ಜೀವನಾವರ್ತನಗಳು ಇಲ್ಲಿಯ ಹಲವಾರು ಕಲೆಗಳ ಉಗಮಕ್ಕೆ ಪ್ರೇರಣೆಯನ್ನು ನೀಡಿದೆ. ಇಲ್ಲಿಯ ಧಾರ್ಮಿಕ ಕಲೆಗಳು ಹಬ್ಬ ಹರಿದಿನ ಸಂದರ್ಭದಲ್ಲಿ ಪ್ರದರ್ಶಿತವಾಗುತ್ತದೆ.

ಗ್ರಾಮಕ್ಕೆ ಬಂದೊದಗಿದ ಕ್ಷಾಮ ಡಾಮರಗಳ ನಿವಾರಣೆಗಾಗಿ, ಸಾಂಕ್ರಾಮಿಕ ರೋಗಗಳ ಉಚ್ಚಾಟನೆಗಾಗಿ, ಫಲಸಮೃದ್ಧಿಗಾಗಿ ತಮ್ಮದೇ ಆದ ಶೈಲಿಗಳಲ್ಲಿ ಕಲೆಗಳನ್ನು ಪ್ರದರ್ಶಿಸುತ್ತಾರೆ. ದೇವತೆಗಳನ್ನು ಸಂತುಷ್ಟಿಗೊಳಿಸುವ ಕಲೆಗಳೇ ಉತ್ತರ ಕನ್ನಡದಲ್ಲಿ ಅಧಿಕವಾಗಿದೆ. ಜನಪದ ಕಲೆಗಳ ಉಗಮ, ವಿಕಾಸದ ವಿಷಯದಲ್ಲಿ ಉತ್ತರಕನ್ನಡ ಜಿಲ್ಲೆಯ ಬಂಡೀಹಬ್ಬ, ಮಾರೀಜಾತ್ರೆ, ಹಗಣ ಮುಖವಾಡ ಕುಣಿತ , ಸುಗ್ಗಿಕುಣಿತ, ಯಕ್ಷಗಾನ ಬಯಲಾಟದಂತ ಕಲೆಗಳು ಹೆಚ್ಚಿನ ಬೆಳಕನ್ನು ನೀಡುತ್ತದೆ.

* ಗುಡ್ನಗಾಡಿನ ಜನರು ಸಂಶೋಧಕರಿಗೆ ತಮ್ಮ ಗುಟ್ಟನ್ನು ಬಿಟ್ಟುಕೊಡಲಾರರು. ಅವರಿಗೆ ಸಂಶೋಧಕ, ಬುದ್ಧಿಜೀವಿ, ರಾಜಕಾರಣಿ ಮುಂತಾದ ಮುಂದುವರಿದ ಜನಾಂಗದ ಮೇಲೆ ವಿಶ್ವಾಸವಿಲ್ಲದಾಗಿದೆ. ಎಂದಾದರೂ ಒಮ್ಮೆ ಅವರನ್ನು ಬೇಟಿಯಾದರೆ, ಪುಸ್ತಕ,ಪೆನ್ನು ಮುಂತಾದವುಗಳನ್ನು ಕಂಡರೆ ಅವರಿಗೆ, ಇವರು ತಮ್ಮಮೇಲೆ ಏನೋ ಪಿತೂರಿನಡೆಸುವ ಸಲುವಾಗಿ ಬಂದಿದ್ದಾರೆಂಬ ಶಂಕೆಯಿಂದ ತಮ್ಮ ಯಾವ ಗುಟ್ಟನ್ನು ಜೀವನವಿಧಾನ ಆಚಾರ, ವಿಚಾರಗಳನ್ನು ಹೇಳಲು ನಿರಾಕರಿಸುತ್ತಾರೆ. ಉಪಾಯದಿಂದ ಸತ್ಯಹೇಳಿ ಅವರಮನಸ್ಸನ್ನು ಗೆದ್ದರೆ ಮಾತ್ರ ಅವರು ತಮ್ಮ ಆಚಾರ ವಿಚಾರಗಳನ್ನು ಹೇಳುತ್ತಾರೆ. ಆಗ ನಾವು ಗುಡ್ನಗಾಡು ಹಳ್ಳಿಯ ಜನರ ಕಲೆ ಸಂಸ್ಕೃತಿ ಆಚಾರಗಳ ಬಗ್ಗೆ ತಿಳಿದುಕೊಳ್ಳಬಹುದಾಗಿದೆ. ಕಪಟರಹಿತ ಮುಗ್ಧ ಜನರನ್ನು ಪ್ರಾಮಾಣಿಕವಾಗಿ ಕೆಲಸ ಮಾಡಿ ಜೀವನ ಸಾಗಿಸಿಕೊಂಡು ಬಂದ ಹಿರಿಯರು ದಣಿವಾರಿಸಲು ಸಂಘಜೀವಿಯಾಗಿ ಕಲೆಗಳನ್ನು ಜನಪದೀಯವಾಗಿ ತಮ್ಮದೇ ಆದ ಶೈಲಿಯಲ್ಲಿ ಹಾಡುವ, ನರ್ತಿಸುವ ಈ ಜನಾಂಗ, ಸಾಹಸಿಗಳು, ಪ್ರಕೃತಿಯನ್ನು ಆರಾದಿಸಿ ಅದರ ನಿಗೂಢ ಶಕ್ತಿಯನ್ನು ಮಾಂತ್ರಿಕ ಉಪಾಸನೆಯಿಂದ ಒಲಿಸಿಕೊಳ್ಳುವ ಮತ್ತು ನಿಯಂತ್ರಿಸುವ, ಅಂತೆಯೇ ಪ್ರಕೃತಿಯೊಡನೆ ತಾದಾತ್ಮ್ಯವನ್ನು ಹೊಂದಲು ಇವರು ತೋರಿದ ನಿಷ್ಠೆ ಆಗಾಧವಾದದ್ದು. ನಿಸರ್ಗದ ಚಲನವಲನಗಳನ್ನು ಅನುಕರಿಸಿ ಅವರೊಡನೆ ಭಾವಸಮಾಧಿಯನ್ನು ಹೊಂದಿ, ಸಂತೃಪ್ತಿ ಪಡೆಯಲು ಇವರು ಅನೇಕ ರೀತಿನೀತಿಗಳನ್ನು ಮಾಯ, ಮಾಟ ತಂತ್ರ, ಯಂತ್ರಗಳನ್ನು, ನೋಟಗಳನ್ನು ಅನುಸರಿಸಿದ್ದನ್ನು ಈ ಆಚರಣೆಗಳ ಹಿನ್ನಲೆಯಲ್ಲಿ ನಾವು ಕಾಣಬಹುದು.

ಉತ್ತರ ಕನ್ನಡ ಜಿಲ್ಲೆಯ ಹಿಂದುಳಿದ ವರ್ಗಗಳು ಆಚರಿಸುವ ಬಂಡೀಹಬ್ಬ ಹಾಗೂ ಮಾರೀಜಾತ್ರೆಯ ಕೆಲವು

ಅಡಿಟಿಪ್ಪಣಿ: * ಗುಡ್ನಗಾಡಿನ ಜನರ ಸಂದರ್ಶನದ ವೇಳೆಯಲ್ಲಿ ಆದ ಅನುಭವವನ್ನಾಧರಿಸಿ ....

*೧ಧಾರ್ಮಿಕ ವಿಧಿಕ್ರಿಯೆಗಳು ಕರ್ನಾಟಕದ ರಂಗಕಲೆಗಳ ಉಗಮ, ವಿಕಾಸ ಹಾಗೂ ಪ್ರಸರಣೆಯ ವಿಷಯದಲ್ಲಿ ಹೆಚ್ಚಿನ ಸಾಕ್ಷ್ಯವನ್ನೊದಗಿಸುತ್ತದೆ. ಈ ಸಂದರ್ಭದಲ್ಲಿ ವ್ಯವಸಾಯ, ಸತಿಪದ್ಧತಿ, ವೀರಪೂಜೆ, ಹಾಡು-ಹಗಣಗಳ ಪ್ರದರ್ಶನಗಳೂ ನಡೆಯುತ್ತದೆ. ವೀರರ ವೇಶಗಳಾದ ಕಳಸಗಳು, ಮುಖವಾಡಗಳು ಹೂವಿನ ಮಕ್ಕಳ ಕುಣಿತಗಳು, ಬಲಿಮಕ್ಕಳ ಕೂಗಾಟ, ಓಟಗಳು, ಮಾಸ್ತಿಯ ಮದುವೆ, ಮಾಸ್ತಿಕೊಂಡಕ್ಕೆ ಬೀಳುವುದು, ಗದ್ದೆ ಹೂಡುವುದು, ಬಿತ್ತುವುದು, ಹಕ್ಕಿ ಕಾಯುವುದು ಮುಂತಾದ ಆಚರಣೆಗಳನ್ನು ಅಭಿನಯಿಸಲಾಗುತ್ತದೆ. ಈ ಧಾರ್ಮಿಕ ವಿಧಿಕ್ರಿಯೆಗಳನ್ನು ಅಭಿನಯಿಸುವ ಸ್ಥಳಕ್ಕೆ "ಆಡುಕಟ್ಟೆ" ಎಂದು ಕರೆಯಲಾಗುತ್ತದೆ. ಇಲ್ಲಿ ನಡೆಯುವ ಹಗಣ, ಮರದ ಮೂಕವಾಡಿಸುವುದು ಮುಂತಾದ ರಂಗಕಲೆಗಳು ನಮ್ಮ ಪ್ರಾಚೀನ ರಂಗ ಕಲೆಗಳ ಪಳೆಯುಳಿಕೆಗಳಾಗಿವೆ. *೨ ಗ್ರೀಕ ರಂಗಭೂಮಿಯ ಮೂಲಕವೂ ಸಹ ಡಯೋನಿಸಿಯಸ ಎಂಬ ಫಲಕೊಡುವ ದೇವರ ಪ್ರೀತ್ಯರ್ಥವಾಗಿ ನಡೆಯುತ್ತಿದ್ದ ಧಾರ್ಮಿಕ ಆಚರಣೆಯಲ್ಲಿದೆ ಎಂದು ಹೇಳಲಾಗುತ್ತದೆ. ಈ ಸಂದರ್ಭದಲ್ಲಿ ಮೆರವಣಿಗೆಯಲ್ಲಿ ಹೋಗಿ ಬಲಿ ಕೊಡುವ ಸಂಪ್ರದಾಯ ಡಿಥಿಲ್ಯಾಂಡ ಎಂಬ ಹೆಸರಿನ ಮೇಳ ಭಜನೆ ನರಬಲಿ ಮುಂತಾದ ಆಚರಣೆಗಳು ಕರಾವಳಿಯ ಬಂಡಿಹಬ್ಬ ಹಾಗೂ ಮಾರಿಜಾತ್ರೆಯಲ್ಲಿ ಬಲಿಸಮರ್ಪಣೆ ಮಾಡಿ ಫಲೀಕರಣಕ್ಕಾಗಿ ಹಾರೈಸುವ ಆಚರಣೆಯನ್ನು ಹೋಲುತ್ತದೆ.

ಇಲ್ಲಿಯ ಗ್ರಾಮ ದೇವತೆಗಳ ಮೂರ್ತಿಗಳನ್ನು ದೇವತೆಗಳ ಮುಖವಾಡಗಳನ್ನು ಮಾಡಿ ಅವುಗಳನ್ನು ತರತರಹದ ಬಣ್ಣಗಳಿಂದ ಸಿಂಗರಿಸುವ ಗುಡಿಗಾರರ ಚಿತ್ರಕಲೆ, ಬಯಲಾಟ, ಹಗರಣ, ಸುಗ್ಗಿಯ ಕೋಲಾಟಗಳ ಸಂಧರ್ಬಗಳಲ್ಲಿ ಕಲಾವಿದರ ಮುಖಗಳನ್ನು ವಿವಿಧ ಮುಖವರ್ಣಿಕೆಗಳ ಮೂಲಕ ಸಿಂಗರಿಸುವಲ್ಲಿ ಇವರ ಜನಪದ ಚಿತ್ರಕಲಾ ನೈಪುಣ್ಯ ಸೂಕ್ಷ್ಮ ಕೆಲಸಗಳನ್ನು ಮೆಚ್ಚುವಂತಹದ್ದು . ಈ ಜಿಲ್ಲೆಯ ಗುಡಿಗಾರರ ಕುಶಲಕಲೆ ದೇಶ ವಿದೇಶಗಳಲ್ಲಿ ಹೆಸರು ಗಳಿಸಿದೆ . ಬೆಂಡು ಬೇಗಡೆಗಳಿಂದ ತಯಾರಿಸಿದ ಅಲಂಕಾರ ವಸ್ತುಗಳು . ಬೆಲೆಬಾಳುವ ಬೀಟೆ, ಶ್ರೀಗಂಧ, ಚಂದನ, ಹಸ್ತಿದಂತಗಳಲ್ಲೆ ಕೆತ್ತಿದ ಮೂರ್ತಿಗಳು ಇಂದು ಜಗತ್ಪ್ರಸಿದ್ಧವಾಗಿದೆ. ಹೊನ್ನಾವರ, ಕುಮಟಾ, ಮುಂತಾದ ಜಿಲ್ಲೆಯ ತಾಲೂಕ ಸ್ಥಳಗಳಲ್ಲಿ ಗುಡಿಗಾರರ ಅಂಗಡಿಗಳು ತುಂಬಾ ಲಾಭದಾಯಕವಾಗಿದೆ. ಹೀಗೆ ಉತ್ತರ ಕನ್ನಡ ಜಿಲ್ಲೆ ಜನಪದ ಕಲೆಗಳ ಸಮೃದ್ಧಿಯ ಕೇಂದ್ರವಾಗಿದೆ.

ಅಡಿಟಿಪ್ಪಣಿ: *೧ ಉತ್ತರ ಕನ್ನಡದ ಬಂಡೀಹಬ್ಬ ಆಚರಣೆಯ ವಿಧಾನಗಳನ್ನನುಸರಿಸಿ ....

*೨ ಡಾ: ಎನ್. ಆರ್. ನಾಯ್ಕರ ಬಂಡೀಹಬ್ಬದ ಲೇಖನದಲ್ಲಿ 'ಕವಳವೇಳಿ' ....

ಕಲೆಗಳ ಬೆಳವಣಿಗೆ ಹಾಗೂ ಪುನರ್ ಸಂಘಟನೆಗಾಗಿ ಕ್ರಮ

ನಗರೀಕರಣದಿಂದಾಗಿ ದುರ್ಬಲವಾಗುತ್ತಲಿರುವ ಕಲೆಗಳಿಗೆ ಚೈತನ್ಯ ನೀಡುವದು ಅತ್ಯವಶ್ಯಕವಾಗಿದೆ. ಇದಕ್ಕಾಗಿ ಸಂಘ ಸಂಸ್ಥೆಗಳು ಸರ್ಕಾರ ಈ ಕುರಿತು ಒಂದು ಕಾರ್ಯಕ್ರಮವನ್ನು ರೂಪಿಸಬೇಕಾಗಿದೆ. *ಇಂದಿನ ನಮ್ಮ ಪಂಚಾಯತ ರಾಜ್ಯ ವ್ಯವಸ್ಥೆಯಲ್ಲಿ ದೇಶದ ಜನಸಂಖ್ಯೆಯಲ್ಲಿ ಶೇಕಡಾ ೮೦ ರಷ್ಟಿರುವ ಹಳ್ಳಿಗಳಿಗೆ ಅವರ ಕಲಾಭಿವೃದ್ದಿಗಾಗಿ ಹಣವನ್ನು ತೆಗೆದಿರಿಸಬೇಕು. ದೂರದರ್ಶನ, ಆಕಾಶವಾಣಿ. ವೃತ್ತಪತ್ರಿಕೆಗಳಲ್ಲಿ ಕಲಾ ಪ್ರದರ್ಶನಕ್ಕೆ ಒಳ್ಳೇಯ ಅವಕಾಶವನ್ನು ಮಾಡಿಕೊಡಬೇಕು. ಜವಪದಕ್ಷೇತ್ರ ಹಾಗೂ ಶಾಸ್ತ್ರೀಯಸಂಗೀತ ನೃತ್ಯ. ಲಲಿತಕಲೆಗಳಲ್ಲಿ ಪರಿಣಿತಿ ಪಡೆದ ತಜ್ಞರನ್ನು ಬೇಟಿಮಾಡಿ ಅವರಿಂದ ಹಾಡುಗಳನ್ನು, ಅಭಿನಯವನ್ನು ಮಾಡಿಸಿ, ವಿಚಾರ ವಿನಿಮಯ ಮಾಡಿ ಸಾಧ್ಯವಾದಷ್ಟನ್ನು ಮುಂದಿನ ಪೀಳಿಗೆಗಾಗಿ ಮುದ್ರಣ ಮಾಡಿಕೊಳ್ಳಬೇಕು. ಸಂದರ್ಭ ಸನ್ನಿವೇಶಗಳನ್ನು ಇನ್ನಿತರ ವಿವರಗಳನ್ನು ಟಿಪ್ಪಣಿ ಮಾಡಿಕೊಂಡು ಸಂಗ್ರಹಿಸಬೇಕು.

ಸರಳ ಸ್ವಭಾವದ ಸಂವೇದನಾಶೀಲ ನಡೆ-ನುಡಿಗಳಲ್ಲಿ ಕಲಾತ್ಮಕತೆಯನ್ನು ಚಿಮ್ಮಿಸುವ ಅನೇಕರು ಬುಡಕಟ್ಟು . ಹಿಂದುಳಿದ ವರ್ಗಗಳ ಜನಾಂಗಗಳಲ್ಲಿಯೂ ಇರುವದು ಗಮನಾರ್ಹವಾಗಿದೆ. ಜನಪದ ಕಲೆ ಇವರ ಜೀವನದ ಅಂಗವಾಗಿ ಬೆರೆತು, ಇನ್ನೂ ಬೆಳಕುಕಾಣದ ಅಂತಹವರ ಬದುಕಿಗೆ ಬೆಳಕಿನಸೂಚಿಯಾಗಿ ಬಂದು, ಅವರ ಕತ್ತಲ ಬದುಕನ್ನು ಬೆಳಗುವಲ್ಲಿ ಮಹತ್ವಪೂರ್ಣ ಪಾತ್ರವನ್ನು ವಹಿಸಿದೆ.

ಜಾನಪದ ಕಲೆ ಎಲ್ಲ ಕಲೆಗಳಿಗೂ ಮೂಲವಾಗಿದೆ. ಶಾಸ್ತ್ರೀಯ ಸಂಗೀತದ ಜೊತೆಗೆ ಅಧುನಿಕಜಗತ್ತಿನಲ್ಲಿ ಜನಪದ ಕಲೆಗಳು ಜನಪ್ರಿಯತೆಯನ್ನು ಗಳಿಸಿಕೊಂಡು ಬಾಳ ಬೇಕಾದರೆ ಅವು ಕಾಲಮಾನ ಪರಿಸ್ಥಿತಿಗನುಗುಣವಾಗಿ ಕಲೆಯ ವಸ್ತು, ತಂತ್ರ, ಸಂಭಾಷಣೆ, ವೇಷ ಭೂಷಣಗಳಲ್ಲಿ ಕಲೆಗಳ ಮೂಲ ಸ್ವರೂಪಕ್ಕೆ ವ್ಯತ್ಯಯ ಬರೆದ ರೀತಿಯಲ್ಲಿ ಸಮಕಾಲೀನ ಸಂಗತಿಗಳನ್ನು ಹೊಂದಿಸಿಕೊಂಡು ಸಂದರ್ಭನುಸಾರವಾಗಿ ಸೂಕ್ತವಾಗಿ ಬದಲಾವಣೆಗಳೊಂದಿಗೆ ಮೈದುಂಬಿ ಬರಬೇಕು . ಹಾಗಂತ ಈ ಕಲೆಗಳನ್ನು ಜನಪ್ರಿಯಗೊಳಿಸುವ ತರಾತುರಿಯಲ್ಲಿ ಅವುಗಳ ಮೂಲಸ್ವರೂಪ. ವಸ್ತು ತಂತ್ರ ಸಿದ್ಧಾಂತಗಳಲ್ಲಿ ಬದಲಾವಣೆ ಮಾಡಿ ಮೂಲ ಕಲೆಯ ಕೊಲೆ ಮಾಡುವದರಲ್ಲಿ ಅರ್ಥವಿಲ್ಲ. ಕಲೆ ಒಂದು ಸಂಸ್ಕೃತಿಯ ಪ್ರತೀಕ . ಕಲೆಯ ಮೂಲ ಸ್ವರೂಪ ಬದಲಾದರೆ

ಅಡಿಟಿಪ್ಪಣಿ: * ಕಲೆಯಬಗೆಗಿನ ಪ್ರೌಢ ಲೇಖನ ಹಾಗೂ ಲೇಖಕರ ಅಭಿಪ್ರಾಯವನ್ನಾಧರಿಸಿ ......

ಕಲೆಯು ಯಾವ ಸಂಪ್ರದಾಯಕ್ಕೆ ಸೇರಿದ್ದು, ಸಾಂಸ್ಕೃತಿಕವಾಗಿ ಅದರ ಮಹತ್ವವೇನು, ಎಂಬುದನ್ನು ವಿಮರ್ಷಕರಿಗೂ ತಿಳಿಯುವುದು ಕಷ್ಟವಾಗುತ್ತದೆ ಮತ್ತು ಮೂಲ ಕಲೆಯ ಪ್ರಭಾವ ನಶಿಸುತ್ತದೆ. *ಬದಲಾವಣೆ ಆಗಬೇಕು ಆದರೆ ಅದು ಹೇಗೆ ಎಂಬುದನ್ನು ಬದಲಾಯಿಸುವಾಗ ಚಿಂತಿಸಬೇಕು. ಕಲೆಯ ಮೂಲ ಚೌಕಟ್ಟಿಗೆ, ಪಾತ್ರ ಪರಿಕಲ್ಪನೆಗೆ ವ್ಯತ್ಯಯಬಾರದ ಹಾಗೆ ಬದಲಾವಣೆಯನ್ನು ಮಾಡಿಕೊಂಡರೆ ತಪ್ಪೇನಿಲ್ಲ. ಯಾವುದೇ ಕಲೆಯನ್ನು ನೂರಕ್ಕೆ ನೂರರಷ್ಟು ಸಂರಕ್ಷಿಸುವುದು ಕಷ್ಟವೇ ಆಗಬಹುದು. ಉದಾಹರಣೆಗೆ ಜನಪದ ಕಲೆಗಳ ಹುಟ್ಟಿನಲ್ಲಿ ಒಂದು ಸಮೂಹದ ಕೈವಾಡವಿರುವುದರಿಂದ ಈ ಸಮೂಹ ಪ್ರೇಕ್ಷಕರ ಹಾಗೂ ನಮ್ಮ ಅಭಿರುಚಿಗೆ ಕಾಲಮಾನ ಪರಿಸ್ಥಿತಿಗೆತಕ್ಕಂತೆ ಬದಲಾವಣೆಮಾಡಿಕೊಂಡು ತಮ್ಮ ಸೃಜನಶೀಲತೆಯನ್ನು ಕಾಪಾಡಿಕೊಂಡು ಬರುತ್ತದೆ. ಆದ್ದರಿಂದಲೇ ಈ ಕಲೆಗಳು ನಿಂತು ನೀರಾಗದೇ ನಿತ್ಯ ನೂತನವಾಗಿ ಜೀವಂತವಾಗಿರುತ್ತದೆ. ಯಕ್ಷಾನಬಯಲಾಟ ಇಂದು ಜಾನಪದದಿಂದ ಅಭಿಜಾತದೆಡೆ ಸಂಕ್ರಮಣಗೊಳ್ಳುತ್ತಿರುವುದನ್ನು ಗಮನಿಸಬಹುದು.

ಕಲೆಯಿಂದ ಮನಸ್ಸು ಅರಳಬೇಕು. ವಿಶಾಲತೆ ಬರಬೇಕು. ಕಲೆಗಳ ಸಂರಕ್ಷಣೆ ಪ್ರೋತ್ಸಾಹ ಸಂಸ್ಕೃತಿಯ ಬೆಳವಣಿಗೆ ದೃಷ್ಟಿಯಿಂದ ಅಗತ್ಯವಾದರೂ ಎಲ್ಲ ಕಲೆಗಳನ್ನು ಉಳಿಸ ಬೆಳೆಸಬೇಕಾದ ಅವಶ್ಯಕತೆ ಕೆಲ ಕಲೆಗಳ ಬಗ್ಗೆ ಇಲ್ಲವೆನ್ನಬಹುದು. ಉದಾಹರಣೆಗೆ ವೇಶ್ಯಾವೃತ್ತಿಗೆ ನೀರೆರೆಯುವ ಜೋಗಲೆ ಕುಣಿತ, ತಿರುಪೆಯೆತ್ತಲು ಕುಮ್ಮಕ್ಕು ಕೊಡುವ ದುರಗಿ ಮುರಗಿ ಕುಣಿತ, ಹಿಂಸೆಯನ್ನು ಪ್ರೋತ್ಸಾಹಿಸುವ ಸಿಡಿಯಾಟ, ಕೋಳಿಅಂಕ, ಮುಂತಾದ ಕಲೆ-ಕ್ರೀಡೆಗಳನ್ನು ಪ್ರೋತ್ಸಾಹಿಸದಿರುವುದೇ ಉತ್ತಮ ಬೆಳವಣಿಗೆಗೆ ಪೂರಕವಾಗುವುದು.

ಉತ್ತರಕನ್ನಡ ಜಿಲ್ಲೆಯ ಯಕ್ಷಾನಾದಿ ಅನೇಕ ಕಲೆಗಳು ಕಾಲಪರಿಮಿತಿಗಳಿಗೊಳಪಡದೇ ರಾತ್ರಿಬೆಳಗಾಗುವರೆಗೂ ಮೈಮನಗಳು ಸೋಲುವವರೆಗೂ ನಡೆಯುತ್ತದೆ. ಇಲ್ಲಿನ ಅನೇಕ ಹಳ್ಳಿಗಳು ಗುಡ್ಡಗಾಡು ಪ್ರದೇಶದ ದೂರದೂರದ ಊರುಗಳಿಗೆ ಪ್ರಯಾಣ ಮಾಡುವ ಜನರು ಕಲಾಪ್ರದರ್ಶನ ರಾತ್ರಿ ಇರುವಾಗಲೇ ಮುಗಿದು ಹೋದರೆ ತಮ್ಮ ಊರುಗಳಿಗೆ ಹೋಗುವುದು ಕಷ್ಟಕರವಾಗುವ ಕಾರಣದಿಂದ ರಾತ್ರಿ ಬೆಳಗಿನ ತನಕ ಯಕ್ಷಾನದಂತಹ ಆಟಗಳು ನಡೆಯುತ್ತದೆ. ಆಧನಿಕ ಯುಗದ ಬಹುಜನರು ಇಂತಹ ದೀರ್ಘಕಾಲೀನ ರಂಗ ಚಟುವಟಿಕೆಗಳನ್ನು ಸಮಯಾಭಾವದ ನಿಮಿತ್ತ ನೋಡಲಾಗುವುದಿಲ್ಲ. ಆದ್ದರಿಂದ ಇಂತಹ ಕಲೆಗಳ ಅತಿಮಾತು,

ಅಡಿಟಿಪ್ಪಣಿ: ಲೇಖಕರ ಅಭಿಪ್ರಾಯವನ್ನಾಧರಿಸಿ ......

ಹಾಸ್ಯ, ಕುಣಿತ ಮುಂತಾದವುಗಳನ್ನು ಸ್ವಲ್ಪ ಪ್ರಮಾಣದಲ್ಲಿ ಮೊಟಕುಗೊಳಿಸಿ ಅವುಗಳ ಪ್ರಯೋಗವನ್ನು ಮೂರು ತಾಸು ಅಥವಾ ನಾಲ್ಕುತಾಸುಗಳಿಗೆ ಸೀಮಿತಗೊಳಿಸಿದರೆ ಅಲ್ಪ ವೇಳೆಯಲ್ಲಿ ಅಧಿಕ ಮನೋರಂಜನೆಯನ್ನು ಬಯಸುವ ಆಧುನಿಕ ಯುಗದ ಬಹುಮಂದಿ ಪ್ರೇಕ್ಷಕರು ಈ ಕಲೆಗಳ ಕಡೆಗೆ ಆಕರ್ಷಿತರಾಗುತ್ತಾರೆ. ಈ ದಿಸೆಯಲ್ಲಿ ಇತ್ತೀಚೆಗೆ ಇಂತಹ ಪ್ರಯತ್ನಗಳು ನಡೆಯುತ್ತಿರುವುದು ಉತ್ತಮ ಬೆಳವಣಿಗೆಗೆ ಪೂರಕವಾಗುತ್ತಿದೆ. ಕೆರೆಮನೆ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿಯವರು ಇತ್ತೀಚಿನ ದಿನಗಳಲ್ಲಿ ಸಮಯಮಿತಿ ಯಕ್ಷಗಾನ ಪ್ರದರ್ಶನವನ್ನು ನಿಡುತ್ತಿರುವದು ಇಂತಹ ಬೆಳವಣಿಗೆಗೆ ಪೂರಕವಾಗಿದೆ.

'ಭಾರತರತ್ನ' ಎಂ.ಎಸ್. ಸುಬ್ಬಲಕ್ಷ್ಮಿ



ಅಧ್ಯಾಯ ೯

ಉತ್ತರ ಕನ್ನಡ ಜಿಲ್ಲೆಯ ಉತ್ಸವಗಳು

ಉತ್ತರ ಕನ್ನಡ ಜಿಲ್ಲೆಯ ಉತ್ಸವಗಳು

ಉತ್ಸವ ಎನ್ನುವಪದಕ್ಕೆ ಹಬ್ಬ , ಜಾತ್ರೆ, ಸಮಾರಂಭ, ಸಂಭ್ರಮ ಸಡಗರ, ಉತ್ಸವ , ಮೆರವಣಿಗೆ ಹೀಗೆ ಅನೇಕ ಹೆಸರುಗಳಿವೆ. ಸಾಮಾನ್ಯವಾಗಿ ಜಾತ್ರೆ ಹಬ್ಬ ಸಮಾರಂಭಗಳಲ್ಲೆಲ್ಲ ಸಂಭ್ರಮ, ಸಡಗರ ಉತ್ಸಾಹಗಳು ಇದ್ದೇ ಇರುತ್ತದೆ. ಅನೇಕ ಸಂದರ್ಭಗಳಲ್ಲಿ ಮೆರವಣಿಗೆಯೂ ಇವುಗಳ ಒಂದಂಗವಾಗುವುದುಂಟು. ಆದ್ದರಿಂದ ಉತ್ಸವಗಳೆಂದರೆ ಹಲವು ಜನರು ಒಟ್ಟಿಗೇಸೇರಿ, ಒಂದು ನಿಗದಿತಅವಧಿಗೆ ನಿಶ್ಚಿತ ಉದ್ದೇಶಕ್ಕಾಗಿ ಸಡಗರ, .ಸಂಭ್ರಮದಿಂದ ಆಚರಿಸುವ ಹಬ್ಬ, ಜಾತ್ರೆ, ಸಮಾರಂಬಾದೀ ವಿಶಿಷ್ಟ ಕಾರ್ಯಕ್ರಮಗಳೇ ಆಗಿದೆ. ಉತ್ಸವ ಎಂದೊಡನೆಯೇ ಕ್ರಿಯಾಶೀಲಮನುಷ್ಯನಲ್ಲಿ ಉತ್ಸಾಹ ಮೂಡುವುದು ಸ್ವಾಭಾವಿಕವಾಗಿದೆ. ಉತ್ಸಾಹವು ಸಹಜಪ್ರವೃತ್ತಿಯೇ ಆಗಿದೆ. ಈ ಉತ್ಸಾಹ ಭಾವನೆಗಳನ್ನು ಪ್ರದರ್ಶಿಸಲು ಮಾನವನುಹೂಡಿದ ವಿಭಿನ್ನಕೂಟ (ಸೇರುವುದು) ಗಳನ್ನೇ ನಾವು ಉತ್ಸವಗಳೆಂದು ವ್ಯಾಖ್ಯಾನಿಸಬಹುದು. ಇಂತಹ ಉತ್ಸವಗಳಲ್ಲಿ ಪಲವಾರು ಜನರು ಭಾಗವಹಿಸಿ ಪರಸ್ಪರಬೆರೆತು ತಮ್ಮ ಧಾರ್ಮಿಕ ಭಕ್ತಿ ಭಾವಗಳನ್ನು ಸಾಹಿತ್ಯ ,ಕಲಾಪ್ರೇಮಗಳನ್ನು ಗುರುಹಿರಿಯರ ಬಗ್ಗೆ ಗೌರವಾದರಗಳನ್ನು ಪ್ರಕಟಿಸಿ, ಉತ್ಸಾಹದಿಂದ ಹಿಗ್ಗಿ ನಲಿಯುವುದು ಒಂದು ಸಂಪ್ರದಾಯವಾಗಿದೆ. ಇಂತಹ ಉತ್ಸವಗಳನ್ನು ಕಾಲ, ದೇಶ ,ಮತ ಭೇದಗಳಿಲ್ಲದೆ ನಾಗರೀಕ ಅನಾಗರೀಕರೆನ್ನದೆ ಎಲ್ಲರೂ ಕೂಡಿ ಆಚರಿಸುವ ಒಂದು ಸತ್ ಸಂಪ್ರದಾಯವಾಗಿದೆ. ಮಾನವ ಸಮಾಜಜೀವಿ, ದಿನನಿತ್ಯದ ವ್ಯವಹಾರದಲ್ಲಿ ನಮಗೆ ಅನೇಕ ತೊಂದರೆ, ನಷ್ಟ ಸುಖ ಇವೆಲ್ಲವನ್ನು ಅನುಭವಿಸಬೇಕಾಗುತ್ತದೆ. 'ಬಿತ್ತಿದ್ದನ್ನು ಬೆಳೆದುಕೊ' ಎಂಬ ಗಾದೆಯಂತೆ ನಾವು ಆಚರಿಸುವ ಸಂಪ್ರದಾಯಗಳೇ ನಿಯಮಗಳು. ಇವುಗಳ ಬಗೆಗಿನ ನಂಬಿಕೆಯಿಂದ ವ್ಯವಹರಿಸಿ ಅದರ ಫಲವನ್ನು ಆತ ಪಡೆಯಲೇಬೇಕು.

ಈ ಉತ್ಸವಗಳನ್ನು ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಹೀಗೆ ವಿಭಾಜಿಸಬಹುದು. ಹಿಂದಿನ ಕಾಲದಲ್ಲಿ ಎಲ್ಲ ಬಗೆಯ ಉತ್ಸವಗಳ ಹಿಂದೆ ಧಾರ್ಮಿಕಭಾವನೆಯ ಬೇರು ಇದ್ದೇ ಇರುತ್ತಿತ್ತು. ಮತೀಯ ಧಾರ್ಮಿಕ, ಉತ್ಸವಗಳಲ್ಲದೇ ನಾಮಕರಣ, ಚೌಲ, ಉಪನಯನ, ವಿವಾಹ ಪಟ್ಟಾಭಿಷೇಕ, ದಿಗ್ವಿಜಯಾದಿ ಲೌಕಿಕ ಉತ್ಸವಗಳೂ ಸಹ ಹಿಂದೆ ಧಾರ್ಮಿಕ ಅವಕುಂಠನಾಮೃತವಾಗಿರುತ್ತಿದ್ದವು.

ಆದರಿಂದಾಗಿಯೇ ಧಾರ್ಮಿಕತೆಯ ಆವರಣವುಳ್ಳ ಸಡಗರದ ಸಮಾರಂಭಗಳನ್ನು ಮಾತ್ರ ಉತ್ಸವಗಳೆಂಬ ಪರಿಪಾಠ ನಮ್ಮಲ್ಲಿಹೆಚ್ಚಾಗಿದೆ. ಇಂದು ಧಾರ್ಮಿಕತೆಯ ಆವರಣವಿರದ ಸ್ವಾತಂತ್ರ್ಯೋತ್ಸವ , ಗಣರಾಜ್ಯೋತ್ಸವ, ಮುಂತಾದ ರಾಷ್ಟ್ರೀಯ ಸಮಾರಂಭಗಳು ಶಾಲೆ, ಕಾಲೇಜುಗಳ ವಾರ್ಷಿಕೋತ್ಸವಗಳು, ಸಂಘ- ಸಂಸ್ಥೆಗಳ ಉದ್ಘಾಟನೆ ಕಾರ್ಯಕ್ರಮಗಳು, ಸಾಹಿತ್ಯ ಪ್ರಕಾರದ ಉತ್ಸವಗಳು, ಗಮಕಿ ಕವಿತೆ , ಕಲಾವಿದ, ಪ್ರಾಧ್ಯಾಪಕ, ಶಿಕ್ಷಕ ಮುಂತಾದವರಿಗೆ ಮಾಡುವ ಸಮಾರಂಭಗಳು, ಇತ್ತೀಚಿನ ದಿನಗಳಲ್ಲಿ ಜಿಲ್ಲೆಯಲ್ಲಿ ಆಚರಿಸುವ ಕರಾವಳೀ ಉತ್ಸವ ಮುಂತಾದವುಗಳೂ ಸಹ ಉತ್ಸವವೇ ಆಗಿದೆ. ಹೀಗೆ ವ್ಯಾಪಕ ವರ್ತುಲದಲ್ಲಿ ಸುತ್ತುವ ಉತ್ಸವಗಳನ್ನು ಪ್ರಮುಖವಾಗಿ ಧಾರ್ಮಿಕ ಹಾಗೂ ಲೌಕಿಕ ಉತ್ಸವಗಳೆಂದು ವಿವರಿಸಬಹುದು. ಜಿಲ್ಲೆಯಲ್ಲಿ ಸಂಸ್ಕೃತಿ ಹಾಗೂ ಸಂಗೀತದ ಬೆಳವಣಿಗೆಗೆ ಈ ಜಿಲ್ಲೆಯಲ್ಲಿ ಆಚರಿಸುವ ಉತ್ಸವಗಳು ಸಹಾಯವಾಗಿದೆ.

*ಈ ಜಿಲ್ಲೆಯಲ್ಲಿ ಬದುಕಿ ಬಾಳುತ್ತಿರುವ ವಿವಿದ ಪಂಗಡ ಧರ್ಮಗಳಿಗೆಸೇರಿದ ಎಲ್ಲರೂ ಧಾರ್ಮಿಕ ಹಾಗೂ ಲೌಕಿಕ ಉತ್ಸವಗಳನ್ನು ಆಚರಿಸುತ್ತಾರೆ. ಇವುಗಳೆಲ್ಲದರ ಬಗೆಗೆ ವಿವರವಾಗಿ ಹೇಳುವುದು ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಷ್ಟು ಸಮಂಜಸ, ಹಾಗೂ ಕಾರ್ಯಸಾದುವಲ್ಲದ ಕಾರಣ ಇವುಗಳ ವಿವರಣೆಯನ್ನು ಕೊಡಲಾಗಿಲ್ಲ. ಇಲ್ಲಿನ ಮುಸಲ್ಮಾನರು, ಕ್ರೈಸ್ತರು, ಮಧ್ವರು, ಹಿಂದುಗಳೂ ಎಲ್ಲರೂ ಈ ಬಗೆಯಾದ ಎರಡೂತರಹದ ಧಾರ್ಮಿಕ ಹಾಗೂ ಲೌಕಿಕ ಉತ್ಸವಗಳನ್ನೂ ಆಚರಿಸುತ್ತಾರೆ. ಇಲ್ಲಿನ ಬಹುಸಂಖ್ಯಾತ ಹಿಂದುಗಳು ಆಚರಿಸುವ ಧಾರ್ಮಿಕ ಉತ್ಸವಗಳನ್ನು ಸ್ಥೂರ್ತಿಗಾಗಿ ಮತ್ತೆ ಎರಡು ಪ್ರಕಾರವಾಗಿ ವಿಂಗಡಿಸಬಹುದು. ಧಾರ್ಮಿಕ ನಾಯಕ, ಜಯಂತಿ ಉತ್ಸವಗಳು ಒಂದು ಬಗೆಯಾದರೆ, ಹಿಂದೂ ಶೈವ, ವೈಷ್ಣವ, ಗಾಣಪತ್ಯ, ಮುಂತಾದಮತಗಳಿಗೆ ಸಂಬಂಧಿಸಿದ ದೇವಾಲಯಗಳಲ್ಲಿ ಹಾಗೂ ಗ್ರಾಮದೇವತೆಗಳ ಮಂದಿರಗಳಲ್ಲಿ ನಡೆಯುವ ವಿಭಿನ್ನ ಉತ್ಸವಗಳು ಇನ್ನೊಂದಾಗಿದೆ. ಇಂತಹ ಸಂದರ್ಭಗಳಲ್ಲಿ ದೇವಾಲಯ ಹಾಗೂ ಸಂಬಂಧಿತ ಉತ್ಸವದ ಎಲ್ಲ ಜನರೂ ಇಂತಹ ಉತ್ಸವಗಳಲ್ಲಿ ಪಾಲ್ಗೊಂಡು ತಮ್ಮ ಭಕ್ತಿ ನಿಷ್ಟೆಯನ್ನು ಪ್ರದರ್ಶಿಸುವುದರ ಜೊತೆಗೆ ಮನರಂಜನೆಯನ್ನು ಪಡೆಯುತ್ತಾರೆ. ಇಂತಹ ಉತ್ಸವಗಳ ಕೊನೆಯಲ್ಲಿ ಹೆಚ್ಚಾಗಿ ಸಂಜೆ ಅಥವಾ ರಾತ್ರಿಯಲ್ಲಿ ವಿವಿದ ಮನರಂಜನೆ ಸಂಗೀತ , ಮುಂತಾದ ಕಾರ್ಯಕ್ರಮವನ್ನು ವಿರ್ಪಡಿಸುವದು

ಅಡಿಟಿಪ್ಪಣಿ: * ಉತ್ತರಕನ್ನಡ ಜಿಲ್ಲೆಯ ಉತ್ಸವಗಳು ಲೇಖನದಲ್ಲಿ ಡಾಃ ಎಸ್. ಆರ್. ನಾಯಕರು ವಿವರಿಸುತ್ತ....

ಒಂದು ಕ್ರಮವಾಗಿದೆ. ಹೆಚ್ಚಾಗಿ ಭಕ್ತಿ ಸಂಗೀತ , ಭಜನೆ , ರಂಗಗೀತೆ ಹೀಗೆ ಇಂತಹ ಕಾರ್‍ಯಕ್ರಮಗಳನ್ನು ನಡೆಸಲಾಗುತ್ತದೆ. ಶಾಸ್ತ್ರೀಯ ಗಾಯಕರೂಕೂಡ ಅಂತಹ ಗ್ರಾಮಗಳಿಗೆಹೋಗಿ ತಮ್ಮ ಸಂಗೀತ ಸುದೆಯನ್ನು ಹರಿಸಿ, ಶಾಸ್ತ್ರೀಯ ಸಂಗೀತದ ಇಂಪು ಕಂಪುಗಳನ್ನು ಶ್ರೋತೃಗಳಿಗೆ ತಲುಪಿಸುವಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ.

ಜಯಂತಿ ಉತ್ಸವಗಳ ಹೊರತಾಗಿ ಬೇರೆ ಬೇರೆ ದೇವಾಲಯಗಳಲ್ಲಿ ಆಚರಿಸಲಾಗುವ ಗಣೇಶೋತ್ಸವ, ಶಿವಗಂಗೆಯರ ವಿವಾಹೋತ್ಸವ, ತುಲಸೀಮದುವೆ, ನವರಾತ್ರಿಉತ್ಸವ, ದೀಪೋತ್ಸವ, ಶಿವರಾತ್ರಿ ಉತ್ಸವ, ಸುಗ್ಗಿಯ ವಸಂತೋತ್ಸವ ,ರಥೋತ್ಸವ, ಬಂಡಿಯಹಬ್ಬದ ಉತ್ಸವ, ಸುಪ್ರಸಿದ್ಧ ದೇವಿಯ ಜಾತ್ರೋತ್ಸವ, ಮಾರೀಜಾತ್ರೋತ್ಸವ, ಮುಂತಾದ ಅನೇಕ ಉತ್ಸವಗಳನ್ನು ಇಲ್ಲಿ ಆಚರಿಸಲಾಗುತ್ತದೆ.

ಶಕ್ತಿದೇವತೆಗಳಾದ ದುರ್ಗಾ, ಮಹಾಮಾಯಾ, ಆರ್ಯದುರ್ಗಾ , ಶಾಂತಾದುರ್ಗಾ, ಮಾರಿಕಾಂಬಾ, ಕಾತ್ಯಾಯನೀ, ಮಹಾಲಕ್ಷ್ಮೀ, ಕಾಮಾಕ್ಷಿ, ಶಾರದಾಂಬಾ ಇತ್ಯಾದಿ ದೇವತಾ ಮಂದಿರಗಳಲ್ಲಿ ಅಶ್ವೀಜ ಶುದ್ಧ ಪ್ರತೀಪದೆಯಿಂದ ನವಮಿಯವರೆಗೆ ನವರಾತ್ರಿ ಉತ್ಸವ ನಡೆಯುತ್ತದೆ. ಶಕ್ತಿದೇವತೆಗಳನ್ನು ದಿನಕ್ಕೊಂದುರೂಪದಲ್ಲಿ ಸಿಂಗರಿಸಿ ಪೂಜಿಸುವದು ವಾಡಿಕೆ. ಶಕ್ತಿದೇವತೆಗಳು ಒಂಬತ್ತು ರೂಪಗಳನ್ನು ತಾಳಿ ಲೋಕಕಂಟಕರಾದ ಬಿಡಲಾಸುರ, ಮಹಿಷಾಸುರ, ರಕ್ತಬೀಜಾಸುರಾದಿಗಳನ್ನು ಸಂಹರಿಸಿದ ನೆನಪಿಗಾಗಿ ಒಂಬತ್ತು ದಿನಗಳವರೆಗೆ ಉತ್ಸವವನ್ನಾಚರಿಸುತ್ತಾರೆ. ಮಹಾನವಮಿಯ ದಿನ ಶಾರದಾಪೂಜೆ, ಆಯುಧ ಪೂಜೆ ಮಾಡುತ್ತಾರೆ. ಶಾಲೆಗಳಲ್ಲಿ ಶಾರದಾಪೂಜೆ, ನವರಾತ್ರಿ ಉತ್ಸವದಿ ರಂಗೇ ರಂಗು. ಸ್ತ್ರೀಯರನ್ನು ಈ ನವರಾತ್ರಿ ಉತ್ಸವದಲ್ಲಿ ದುರ್ಗಿಗಳೆಂದು ಪರಿಗಣಿಸಿ ಅವರಿಗೆ ಅರಿಶಿನಕುಂಕುಮವನ್ನಿಟ್ಟು ಮರ್ಯಾದಿಸುತ್ತಾರೆ. *ಖಂಡೆ ನವಮಿ ಎಂದು ಕರೆಯುವ ಮಹಾನವಮಿಯದಿನ ಹಿಂದಕ್ಕೆ ಮಹಾರಾಜರು ತಮ್ಮ ಯುದ್ಧೋಪಕರಣಗಳನ್ನು ಪೂಜಿಸಿ ದೇವಿಗೆ ಬಲಿಸಮರ್ಪಣೆ ಮಾಡಿ ವಿಜಯಪ್ರಾಪ್ತಿಗಾಗಿ ಪೂಜಿಸುತ್ತಿದ್ದರು. ವಿಜಯದಶಮಿಯಂದು ದಿಗ್ವಿಜಯಕ್ಕಾಗಿ ಸೀಮೋಲ್ಲಂಘನ ಮಾಡುತ್ತಿದ್ದರು. ಆದರೆ ಇಂದು ರಾಜರಿಲ್ಲದ ಇಂದಿನದಿನಗಳಲ್ಲಿ ವಿಜಯದಶಮಿಯಂದು ಸೀಮೋಲ್ಲಂಘನೆಯ ಸಂಕೇತವಾಗಿ ಭಕ್ತರು ಶಕ್ತಿದೇವತೆಯ ಉತ್ಸವಮೂರ್ತಿಯನ್ನು ಸಿಂಗರಿಸಿ ಪಾಲಕೆಯಲ್ಲಿಟ್ಟು ಮೆರವಣಿಗೆಯೊಂದಿಗೆ ಊರಲ್ಲೆಲ್ಲ ಸುತ್ತುತ್ತಾರೆ. ಶಮೀ ಪೂಜೆಯನ್ನು ಮಾಡುತ್ತಾರೆ.

ಅಡಿಟಿಪ್ಪಣಿ: * ಪುರಾಣ ಕಥೆಗಳ ದಂತಕಥೆಗಳು ಹಾಗೂ ಇತಿಹಾಸವನ್ನಾಧರಿಸಿ ......

ಇಷ್ಟಮಿತ್ರರು ಬಂಧು ಬಾಂದವರೆಲ್ಲ ಬನ್ನೀಪತ್ರೆಯನ್ನು ಪರಸ್ಪರ ವಿನಯಿಸಿಕೊಂಡು ಬನ್ನಿಕೊಟ್ಟು ಬಂಗಾರದಂತೆಇರೋಣ ಎಂದು ಪರಸ್ಪರ ಒಬ್ಬರನ್ನೊಬ್ಬರು ಅಭಿನಂದಿಸಿ ಹಿಂದಿನ ವೈರತ್ವಗಳಿದ್ದರೂ ಅವುಗಳನ್ನು ಮರೆಯಲು ಪ್ರಯತ್ನಿಸುತ್ತಾರೆ.

*ಜ್ಞಾನ ಮತ್ತು ಸಂಪತ್ತಿನ ಅಧಿದೇವತಾ ಗಣೇಶೋತ್ಸವವನ್ನು ಇಲ್ಲಿ ಅತಿ ವಿಜ್ರಂಬಣೆಯಿಂದ ಮಾಡುತ್ತಾರೆ. ನೆರೆಯ ರಾಜ್ಯವಾದ ಮಹಾರಾಷ್ಟ್ರದಷ್ಟು ವಿಜ್ರಂಭಣೆಅಲ್ಲದಿದ್ದರೂ ಭಕ್ತಿ, ಶ್ರದ್ಧೆ ಸಂತೋಷಗಳಿಂದ ಈ ಹಬ್ಬವನ್ನು ಹರ್ಷೋತ್ಸಾಹಗಳಿಂದ ಆಚರಿಸುತ್ತಾರೆ. ಸಾರ್ವಜನಿಕವಾಗಿಯೂ ಈ ಉತ್ಸವವನ್ನು ಜಾತಿ ಬೇಧಗಳನ್ನು ಮರೆತು ಆಚರಿಸುತ್ತಾರೆ. ಭಾದ್ರಪದ ಶುಕ್ಲ ತೃತೀಯಿಂದಾಚರಿಸಿ, ಅನಂತ ಚತುರ್ದಶಿಯವರೆಗೂ ಆಚರಿಸುವ ಸಂಪ್ರದಾಯವಿದೆ. ಅವರವರ ಅನುಕೂಲಕ್ಕೆ ತಕ್ಕಂತೆ ೩, ೫, ೭ ದಿನಗಳಿಂದ ತಿಂಗಳವರೆಗೂ ಗಣಪತಿ ಹಬ್ಬವನ್ನು ಆಚರಿಸುತ್ತಾರೆ. ಗಣಪತಿಯ ಪ್ರತಿಷ್ಠಾಪನೆಯ ದಿನದಂದು ಮಣ್ಣಿನಿಂದಮಾಡಿದ ಗಣಪತಿಯ ವಿಗ್ರಹವನ್ನು ಮೆರವಣಿಗೆಯಲ್ಲಿ ತಂದು ಪೀಠದಲ್ಲಿ ಪ್ರತಿಷ್ಠಾಪಿಸುತ್ತಾರೆ. ಶಾಸ್ತ್ರೋಕ್ತವಾದ ಪೂಜೆ ಪುನಸ್ಕಾರವನ್ನು ಮಾಡುತ್ತಾರೆ. ಗುಮಟೆಪಾಂಗ, ಭಜನೆ, ಸಂಗೀತಕಛೇರಿಗಳನ್ನು ಏರ್ಪಡಿಸಿ ಮನರಂಜನೆಯನ್ನೀಯುತ್ತಾರೆ. ಗಣಪತಿಯ ವಿಗ್ರಹವನ್ನು ನದಿಯಲ್ಲಿ ವಿಸರ್ಜನೆ ಮಾಡುವ ಕಾಲದಲ್ಲಿ ಮೆರವಣಿಗೆಯೊಂದಿಗೆ ಸಾವಿರಾರು ಜನರು ಸೇರಿ 'ಗಣಪತಿಬಪ್ಪಾ ಮೋರಯಾ, ಮೊರೆಯಾರೇ ಬಪ್ಪಾ ಮೊರೆಯಾರೆ' ಎಂದು ನರ್ತಿಸುತ್ತಾರೆ. ಮೆರವಣಿಗೆಯಲ್ಲಿ ತೆರಳಿ ಗಣಪತಿಯನ್ನು ವಿಸರ್ಜಿಸುತ್ತಾರೆ. ಬರೀ ಜಾತ್ರೆಯಾಗಿ ಮೂಡನಂಬಿಕೆಯಿಂದ ಪೂಜಿಸುವುದಕ್ಕಿಂತ , ಇತಿಹಾಸ, ತತ್ವ, ಭಕ್ತಿ, ಶ್ರದ್ಧೆಗಳಿಂದ ಇಂತಹ ಉತ್ಸವವನ್ನು ಆಚರಿಸಿದರೆ ಅದೊಂದು ಉತ್ತಮ ಬೆಳವಣಿಗೆಯಾಗುತ್ತದೆ. ಕೋಮುದ್ವೇಶ, ಜಾತಿನಿಂದನೆ, ದುಂದುವೆಚ್ಚ ಮಾಡಿ ಗಲಾಟೆ ಮಾಡುವುದಕ್ಕಿಂತ ಹಬ್ಬಗಳ ತತ್ವವನ್ನು ಅನುಸರಿಸಿ ಪೂಜಿಸಿದರೆ ಜೀವನ ಸಾರ್ಥಕವಾಗುವುದು. ಹೊನ್ನಾವರದ ಕಾಸರಕೋಡಿನ ಸ್ನೇಹಕುಂಜದಲ್ಲಿ ಮುಸ್ಲಿಂ, ಕ್ರೈಸ್ತ ಹಾಗೂ ಹಿಂದೂಗಳು ಸೇರಿ ಭಾವೈಕ್ಯತೆಯ ಗಣೇಶ ಹಬ್ಬವನ್ನು ವಿಜ್ರಂಭಣೆಯಿಂದ ಮೂರುದಿನಗಳವರೆಗೆ ವಿವಿಧ ಮನರಂಜನೆ ಕಾರ್ಯಕ್ರಮದೊಂದಿಗೆ ಆಚರಿಸಲಾಗುತ್ತದೆ. ವಿಗ್ರಹ ನಿರ್ಮಾಪಕ ಅಬ್ದುಲ್ ರಹಿಮ ಮೊದಲ ಮಹಾಪೂಜೆ

ಅಡಿಟಿಪ್ಪಣಿ: * ಜಿಲ್ಲೆಯ ಉತ್ಸವಗಳ ಬಗೆಗಿನ ತಿಳುವಳಿಕೆಯನ್ನಾಧರಿಸಿ .....

*೧ ಹರಿಜನ ಮಹಿಳೆಯರಿಂದ. ಇಲ್ಲಿನ ಗಣೇಶೋತ್ಸವ ಎಲ್ಲಗಣೇಶೋತ್ಸವಕ್ಕಿಂತ ಸ್ವಲ್ಪ ಭಿನ್ನವಾಗಿಯೇ ಇದೆ.

*೨ಕಾರ್ತಿಕಶುದ್ಧ ದ್ವಾದಶಿಯಿಂದ ಹುಣ್ಣಿಮೆಯವರೆಗೆ ತುಳಸಿಮದುವೆಯನ್ನು ವೈಷ್ಣವ ಮತಾವಲಂಬಿಗಳು, ದೇವಾಲಯಗಳಲ್ಲದೆ ತಮ್ಮ ತಮ್ಮ ಮನೆಗಳಲ್ಲಿಯೂ ಆಚರಿಸುತ್ತಾರ. ಅಂದು ತುಳಸೀಪೀಠಕ್ಕೆ ಶೃಂಗಾರ ಮಾಡಿ ತುಳಸಿಯ ಬೃಂದಾವನದಲ್ಲಿ ನೆಲ್ಲಿಕಾಯಿ , ಹುಣಸೆಕಾಯಿಯ ಜಲ್ಲುಗಳು , ಕಬ್ಬುಗಳನ್ನು ನಿಲ್ಲಿಸಿ, ಹೂಹಾರಗಳಿಂದ ಶ್ರಂಗರಿಸಿ, ಸಾಲಿಗ್ರಾಮದೊಡನೆ ತುಳಸಿಯ ಮದುವೆಯನ್ನು ಮಾಡುತ್ತಾರೆ. ತುಳಸಿ ಕಟ್ಟೆಯ ಸುತ್ತಲೂ ಸಾಲುದೀಪಗಳನ್ನಿಟ್ಟು ವಿವಿದ ದೀಪಾಲಂಕಾರಗಳಿಂದ ಪೂಜಿಸುತ್ತಾರೆ. ಶ್ರೀ ವಿಷ್ಣು ತುಳಸಿಯ ಸಮಾಗಮಕ್ಕಾಗಿ ಜನರು ಗೋವಿಂದಾ , ಗೋವಿಂದಾ ಎಂದು ಕರೆಯುತ್ತಾರೆ. ಮತ್ತು ಪೂಜಿಸುತ್ತಾರೆ. ಈ ಜಿಲ್ಲೆಯ ಅನೇಕ ಹಳ್ಳಿಹಳ್ಳಿಗಳಲ್ಲಿ ಭಜನಾ ಸಪ್ತಾಹಗಳಲ್ಲಿ ಅಶ್ವೀನ ಮತ್ತು ಕಾರ್ತಿಕ ಮಾಸದಲ್ಲಿ ದೀಪೋತ್ಸವ ಮತ್ತು ಭಜನೆಗಳು ನಡೆಯುತ್ತದೆ. ವನಬೋಜನ, ಬಜನಾ ಸಪ್ತಾಹ , ಸಂಗೀತಗೋಷ್ಠಿಗಳು ವನದುರ್ಗೆ ಮಂದಿರವಾದ ನೀಲಕೋಡದಲ್ಲಿ ಹದಿನೈದು ದಿನಗಳವರೆಗೆ, ಕಾರ್ತೀಕ ಮಾಸದಲ್ಲಿ ರಾತ್ರಿ ನಿತ್ಯ, ಅಯನ ದೀಪೋತ್ಸವಗಳು ನಡೆದರೆ ಕುಮಟಾದ ಮಹಾಲಸಾ ನಾರಾಯಣಿ ಶಾಂತೇರಿ ದೇವಾಲಯಗಳಲ್ಲಿ ಅಶ್ವೀನಶುದ್ಧ ಚತುರ್ದಶಿಯಿಂದ ಕಾರ್ತಿಕಶುದ್ಧ ಹುಣ್ಣಿಮೆಯವರಗೆ ದೀಪೋತ್ಸವ ನಡೆಯುತ್ತದೆ. ಕಾರ್ತಿಕ ಹುಣ್ಣಿಮೆಗೆ ಇಡಗುಂಜಿಯಲ್ಲಿ ಲಕ್ಷ ದೀಪೋತ್ಸವ, ಗೋಕರ್ಣದಲ್ಲಿ ತ್ರಿಪುರ ದಹನೋತ್ಸವ ಮಂಜಗುಣಿ, ಅಂಕೋಲಾ, ಕುಮಟಾ, ಹಾಸಣಗಿ, ಅರಳೀಮಕ್ಕಿ , ಮಂಚಿಕೇರಿ ಮುಂತಾದ ಅನೇಕಕಡೆ ದೀಪೋತ್ಸವ ವನಬೋಜನಗಳು ನಡೆಯುತ್ತಲಿರುತ್ತವೆ. . . ಕಾರ್ತೀಕ ಅಮವಾಸ್ಯೆಗೆ ಕುಮಟೆಯ ಶಂಕರನಾರಾಯಣ , ಶಿರಸಿ ಮಹಾಗಣಪತಿ ದೇವಾಲಯಗಳಲ್ಲಿ ಕಾರ್ತೀಕ ಪಾಡ್ಯ ಬಿದಿಗೆಗೆ ಕಾಗಾಲದ ದೇವಕೀಕೃಷ್ಣ ಅಂಕೋಲಾದ ಆರ್ಯದುರ್ಗಾ, ಶಾಂತಾದುರ್ಗಾ, ದೇವಾಲಯಗಳಲ್ಲಿ ದೀಪೋತ್ಸವ, ವನಬೋಜನಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ದೇವಸ್ತಾನ ಹಾಗೂ ರಸ್ತೆಯ ಬದಿಗಳಲ್ಲಿ ತಳಿರು, ತೋರಣಗಳಿಂದ ಹಾಗೂ ಸಾಲುದೀಪಗಳಿಂದ ಅಲಂಕರಿಸುತ್ತಾರೆ. ಅಲಂಕರಿಸಿದ ದೇವರ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿ, ಮಂಗಲವಾದ್ಯವನ್ನು ಮೊಳಗಿಸುತ್ತಾ ಬಿರುಸು, ಬಾಣ, ಮದ್ದುಗುಂಡುಗಳನ್ನು ಸುಡುತ್ತ

ಅಡಿಟಿಪ್ಪಣಿ: *೧ ಕಾಸರಕೋಡಿನ ಸ್ನೇಹಕುಂಜದ ಗಣೇಶೋತ್ಸವದ ವೀಕ್ಷಣೆಯಿಂದ ....
*೨ ಗೋಪಾಲಕೃಷ್ಣ ಪಿ. ನಾಯ್ಕರಿಂದ ಸಂಗ್ರಹಿಸಿದ್ದು ....

ನೂರಾರುಜನ ಸೇರಿ ಶ್ರೀ ದೇವರ ಮೆರವಣಿಗೆಯನ್ನು ಮಾಡುತ್ತಾ ಜೈಕಾರವನ್ನು ಹಾಕುತ್ತಾರೆ.

ಆಶ್ವೀನ ಕಾರ್ತಿಕ ಮಾಸಗಳಲ್ಲಿ ನಡೆಯುವ ವಿಭಿನ್ನ ಉತ್ಸವಗಳ ಸಮಯದಲ್ಲಿ ಹಾಲಕ್ಕಿ ಒಕ್ಕಲಿಗರ ಗುಮಟೆಯ ಹಾಗೂ ಅಗೇರು ಬಾರಿಸುವ ರಣಹಲಿಗೆಯ ಬುಲಂದ ಸ್ವರ ಕೇಳುಗರಿಗೆ ಉತ್ಸಾಹದ ಮಿಂಚಿನ ಹೊಳೆ ತುಳುಕಾಡಿಸುತ್ತದೆ.

ಮಾಘಬಹುಳ ನವಮಿಯಿಂದ ಒಂಬತ್ತುದಿನಗಳವರೆಗೆ ನಡೆಯುವ ಗೋಕರ್ಣದ ಶಿವರಾತ್ರಿ ಉತ್ಸವಕ್ಕೆ ಭಾರತದ ಮೂಲೆಮೂಲೆಗಳಿಂದ ಲಕ್ಷಗಟ್ಟಲೇ ಜನರು ಆಗಮಿಸಿ, ಲಿಂಗಪೂಜೆಯನ್ನು ಮಾಡುತ್ತಾರೆ. ಆಸ್ತಿಕರಾದ ಭಕ್ತರು ಶಿವರಾತ್ರಿಯಂದು ಸಮುದ್ರಸ್ನಾನಮಾಡಿ ಮಹಾಬಲೇಶ್ವರನ ದರ್ಶನ ಪಡೆದು ಕೃತಾರ್ಥರಾಗುತ್ತಾರೆ. ಅಂದು ರಾತ್ರಿಯಿಡೀ ಜಾಗರಣೆ ಮಾಡುತ್ತಾರೆ. ಕಲೋಪಾಸಕರಾದ ಪ್ರೇಕ್ಷಕರು ಈ ಸಮಯದ ರಥೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಿ ಆನಂದ ಪಡೆಯುತ್ತಾರೆ. ಶಿವರಾತ್ರಿಯ ಸಮಯದಲ್ಲಿ ರಾವಣನಿರ್ಮಿತ ಶಿವಕ್ಷೇತ್ರಗಳಾದ ಮುರ್ಡೇಶ್ವರ, ಗುಣವಂತೇಶ್ವರ, ಧಾರೇಶ್ವರ, ಸಜ್ಜೇಶ್ವರಗಳಲ್ಲಿಯೂ ಉತ್ಸವಗಳು ನಡೆಯುತ್ತವೆ. * ಶಿವರಾತ್ರಿಯ ಸಮಯದಲ್ಲಿ ಭಕ್ತರು ಮಹಾಬಲೇಶ್ವರನ ದರ್ಶನವನ್ನು ಪಡೆದಮೇಲೆ ಯಾಣದಭೈರವೇಶ್ವರ ಹಾಗೂ ಇಡಗುಂಜಿಯ ಮಹಾಗಣಪತಿ ದರ್ಶನವನ್ನು ಪಡೆಯುತ್ತಾರೆ. ಮಾಘ ಪಾಲ್ಗುಣ, ಚೈತ್ರ, ಮತ್ತು ವೈಶಾಖ ಮಾಸಗಳಲ್ಲಿ ಕೆಲವು ದೇವಾಲಯಗಳಲ್ಲಿ ವಸಂತೋತ್ಸವಗಳು ನಡೆಯುತ್ತದೆ.

ಪಾಲ್ಗುಣ ಮಾಸದಿಂದಲೇ ಕೆಲವರು ವಸಂತ ಮಾಸವನ್ನೆಣಿಸುವುದರಿಂದ ಪಾಲ್ಗುಣ ಶುದ್ಧ ನವಮಿಯಿಂದ ಹುಣ್ಣಿಮೆಯವರೆಗೆ ಉತ್ತರ ಕನ್ನಡದಲ್ಲಿ ಆಚರಿಸುವ ಸುಗ್ಗಿಯ ಉತ್ಸವವನ್ನು ನಾವು ವಸಂತೋತ್ಸವ ಎನ್ನಬಹುದಾಗಿದೆ. ಸುಗ್ಗಿಯ ಉತ್ಸವದಲ್ಲಿ ಹಾಲಕ್ಕಿ , ಒಕ್ಕಲಿಗ ನಾಮದಾರಿ ಮುಂತಾದ ಜನಾಂಗದವರು ಬಣ್ಣದ ಕಾಗದ ಬೆಂಡು ಬೇಗಡೆಗಳಿಂದ ತಯಾರಿಸಿದ, ಗಿಡ, ,ಮರ, ಹೂ ಚಿಗುರುಗಳನ್ನು ಹೋಲುವ ತುರಾಯಿಕಟ್ಟಿಕೊಂಡು ವಸಂತಬಸಗೆಯನ್ನು ಸಾರುವ ವಸಂತ ದೂತರಂತೆ ಕರಿದೇವರ ಮನೆಯಿಂದ ಮೇಳಕಟ್ಟಿಕೊಂಡು ಮನೆಮನೆಗಳಿಗೆ ಕೋಲಾಟ ಆಡುತ್ತ, ಸುಗ್ಗಿಯ ನೃತ್ಯವನ್ನು ಮಾಡುತ್ತಾಹೋಗಿ . ಸುಗ್ಗಿಯ

ಅಡಿಟಿಪ್ಪಣಿ: * ಧಾರ್ಮಿಕ ದಂತ ಕಥೆಗಳನ್ನಾಧರಿಸಿ ....

ಪೋಷಾಕು ತೊಟ್ಟು ಕೋಲಮೇಳದವರು ಪದಹೇಳುತ್ತ ಕೋಲಾಡಿದರೆ, ಕುಂಚದ ಮೇಳದವರು ನವಿಲು ಗಿರಿಗಳಿಂದ ತಯಾರಿಸಿದ ಕುಂಚಗಳನ್ನು ಕುಣಿಸುತ್ತ ವಿವಿದ ಭಂಗಿಗಳಲ್ಲಿ ತಮಟೆ ಡೋಲಕ್‌ಗಳನ್ನು ಬಾರಿಸುತ್ತಾ ಕುಣಿಯುತ್ತಾರೆ. ಹಾಲಕ್ಕಿ, ಸಿದ್ಧಿ, ಮರಾಠಿ, ಕುಣಬೀಜಾತಿಯ ಜನರು ಪೌರಾಣಿಕ ಸಂಗತಿಯ ಅಬಿನಯಗಳ ಚುಟುಕುಗಳನ್ನು, ಹಾಡುಗಳನ್ನು ಮನೆಮನೆಗಳ ಮುಂದೆ ಕುಣಿಯುತ್ತಾ ಹಾಡುತ್ತಾರೆ. ಸಂಗ್ಯಾಬಾಳ್ಯಾ ಯಕ್ಷಗಾನದ ಪದ್ಯವನ್ನೂ ಹೇಳುತ್ತ ಕುಣಿಯಲು ಮರೆಯುವುದಿಲ್ಲ. ಕರಡಿ ಕಪಿಗಳ ವೇಷತೊಟ್ಟು ಮರಕಾಲುಗಳನ್ನು ಕಟ್ಟಿಕೊಂಡು ಕುಣಿದು ನರ್ತಿಸುವ ಆ ನೋಟ ವೀಕ್ಷಕರಿಗೆ ವಸಂತಪ್ರಕೃತಿಯೇ ಜಂಗಮರೂಪದಿಂದ ಕುಣಿದಂತಾಗುತ್ತದೆ. ಬೆಳಂಬಾರದ ಹಾಲಕ್ಕಿಸುಗ್ಗಿ, ಅಂಕೋಲಾ ತಾಲೂಕು ಕಛೇರಿಯ ಮುಂದೆ ಕುಣಿಯುವಾಗ ಸುಗ್ಗಿಯ ಮೇಳದ ಕುಣಿತ ಹಾಗೂ ಎತ್ತಿನ ಗಾಡಿಗಳ ಮೇಲೆ ವಿಜ್ರಂಭಿಸುವ ವಿವಿಧ ವೇಷಗಳನ್ನು ನೋಡಲು ಸಾವಿರಾರು ಜನರ ಜಾತ್ರೆಯೂ ನೆರೆಯುತ್ತದೆ. ಕೆಲವರು ಸುಗ್ಗಿಯ ಕೊನೆಯ ದಿನ ಕರಡಿ ಹಬ್ಬವನ್ನು ಆಚರಿಸಿ ಹಗರಣವಾಡುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಸುಗ್ಗಿಯ ವಸಂತೋತ್ಸವ ಕನ್ನಡ ನಾಡಿನ ಹಿರಿಮೆ ಸಾಂಸ್ಕೃತಿಕ ಶ್ರೀಮಂತಿಕೆ ಹೃದಯವಂತಿಕೆಯನ್ನು ಎತ್ತಿ ತೋರಿಸುತ್ತದೆ.

* ಇಲ್ಲಿನ ಇನ್ನೊಂದು ಉತ್ಸವ ಜಾತ್ರೆ ರಥೋತ್ಸವ, ಇವು ದೊಡ್ಡ ಪ್ರಮಾಣದಲ್ಲಿ ನಡೆಯುತ್ತವೆ. ಇಲ್ಲಿ ನಡೆಯುವ ಶಿಷ್ಠರ ಜಾತಿ ರಥೋತ್ಸವಗಳು ಬ್ರಾಹ್ಮಣರ ಹಿರಿತನದಲ್ಲಿ ಆಗಮಾಕ್ತ ವಿಧಿ ವಿಧಾನಗಳಿಗನುಗುಣವಾಗಿ ನಡೆದರೆ ಜಾನಪದ ಬಂಡಿ ಜಾತ್ರೆಗಳು ಶೂದ್ರ ಮುಂದಾಳುಗಳು ಹಾಗೂ ಗುನುಗರ ಹಿರಿತನದಲ್ಲಿ ನಡೆಯುತ್ತದೆ. ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ಅವರವರ ಅನುಕೂಲಕ್ಕೆ ತಕ್ಕಂತೆ ರಥೋತ್ಸವದ ಅವಧಿ ಸುಮಾರು ಹತ್ತುದಿನಗಳವರೆಗೆ ನಡೆಯುತ್ತದೆ. ಶಿಷ್ಠರಲ್ಲಿ ಚಂಪಾಷಷ್ಠಿಯಂದು ಸಬ್ರಹ್ಮಣ್ಯದಲ್ಲಿ ಮಾಘಶುದ್ಧ ಹುಣ್ಣಿಮೆಗೆ ಉಳವಿಯಲ್ಲಿ, ಅಗ್ರಹಾರ ಮುಂತಾದೆಡೆ, ರಥ ಸಪ್ತಮಿಗೆ ಇಡಗುಂಜಿಯಲ್ಲಿ, ಗೋಕರ್ಣ ಮುಂತಾದೆಡೆ ನಡೆದರೆ ರಾಮನವಮಿಯಂದು ಭನವಾಸಿ ಹೊನ್ನಾವರಗಳಲ್ಲಿ, ಚೈತ್ರಶುದ್ಧ ಹುಣ್ಣಿಮೆಗೆ ಮಂಜಗುಣಿಯಲ್ಲಿ, ಮಾಘ ಬಹುಳ ಅಮಾವಾಸ್ಯೆಗೆ ಗೋಕರ್ಣದಲ್ಲಿ, ವೈಶಾಖ ಶುದ್ಧ ಚವತಿಗೆ ಕರ್ಕಿಯಲ್ಲಿ ಹೀಗೆ ಜಿಲ್ಲೆಯ ಅನೇಕಕಡೆ ಜಾತ್ರೋತ್ಸವ, ರಥೋತ್ಸವಗಳು ವೈಭವವಾಗಿ ನಡೆಯುತ್ತದೆ. ರಥಗಳು ಸಾಮಾನ್ಯವಾಗಿ ದೇವಸ್ಥಾನದ ಶಿಖರದ

ಅಡಿಟಿಪ್ಪಣಿ: * ಡಾ: ಎನ್ನಾರ್ ನಾಯಕ್ ಕವಳಪೇಳಿ ಪುಟ ೪೩

ಮಾದರಿಯಲ್ಲಿದ್ದು , ಬಟ್ಟೆ ತಳಿರುತೋರಣ, ಪತಾಕಿ, ಬಣ್ಣದ ಬಾವುಟಗಳಿಂದ ಬಿದಿರಿನಕಮಾನುಗಳ ಮೂಲಕ ನೇಯ್ದು, ಶೃಂಗರಿಸಿ ದೇವರ ಉತ್ಸವಮೂರ್ತಿಯನ್ನು ರಥದಮೇಲೆ ಕೂಡ್ರಿಸಿ ಭಕ್ತರು ರಥವನ್ನೆಳೆಯುತ್ತಾರೆ. ಅನೇಕರು ತಮ್ಮ ದೋಷ ನಿವಾರಣೆಗೆ ಹರಕೆ ಹೊತ್ತುಕೊಂಡು ಮಂಡಕ್ಕಿ ಕಡ್ಲೆ , ನೋಟುಗಳನ್ನು ದೇವರ ಉತ್ಸವ ಮೂರ್ತಿಯಕಡೆ ಹಾಕುತ್ತಾರೆ. ರಥವನ್ನೆಳೆಯುವಾಗ ಬಾವುಕ ಭಕ್ತರು ಬಾಳೆಹಣ್ಣಿಗೆ ದವಸವನ್ನು ಸಿಕ್ಕಿಸಿ, ರಥದ ಮೇಲೊಗೆಯುತ್ತಾರೆ. ದೇವರ ಉತ್ಸವಮೂರ್ತಿಯನ್ನು ಹೊತ್ತ ರಥ ಬೀದಿಯಲ್ಲಿಹೋಗುವಾಗ ದೇವಾಲಯವೇ ಭಕ್ತರೆಡೆಬಂದಂತೆ ಭಾಸವಾಗುತ್ತದೆ. ಓಣಿಯಲ್ಲೆಲ್ಲ ಪಲ್ಲಕ್ಕಿಯ ಮೂಲಕ ದೇವರ ಮೂರ್ತಿಯನ್ನು ಹೊತ್ತು ತರುವದಕ್ಕೋಸ್ಕರ ದೇವಾಲಯಕ್ಕೆ ಹೋಗಲಾದ ಸ್ಥಿತಿಯಲ್ಲಿರುವವರೂ ತಮ್ಮ ಮನೆಯಿಂದಲೇ ದೇವರನ್ನು ವೀಕ್ಷಿಸಿ ಆಶೀರ್ವಾದ ಪಡೆಯುತ್ತಾರೆ.

ಇನ್ನು ಜಾತ್ರೆಗಳಲ್ಲಿ ಮುಖ್ಯವಾಗಿ ಭಂಡಿಜಾತ್ರೆ ಹಾಗೂ ಮಾರೀಜಾತ್ರೆ ಪ್ರಮುಖವಾದವುಗಳು. ಮಾರೀಜಾತ್ರೋತ್ಸವವನ್ನು ಎರಡು, ಮೂರು , ಐದು ಇಲ್ಲವೇ ಹನ್ನೆರಡು ವರ್ಷಗಳಿಗೊಮ್ಮೆ ಭಕ್ತರಿಂದ ಮಾರಿಪಟ್ಟಿಯನ್ನು ಎತ್ತಿ ಆಚರಿಸುತ್ತಾರೆ. ನಾಡಿನಲ್ಲೇ ಸುಪ್ರಸಿದ್ಧವಾದ ಶಿರಸಿಯ ಮಾರಿಜಾತ್ರೆಯು ಎರಡು ವರ್ಷಗಳಿಗೊಮ್ಮೆ ಪಾಲ್ಗುಣ ಶುದ್ಧ ಒಂದು ಮಂಗಳವಾರ ಆರಂಭವಾಗಿ ಇನ್ನೊಂದು ಮಂಗಳವಾರಕ್ಕೆ ಮುಗಿಯುತ್ತದೆ. ಇಂದಿನ ಮಾರಿಜಾತ್ರೆಯಲ್ಲಿ ಅಗಮೊಕ್ತ ವಿಧಿವಿಧಾನಗಳು ಸೇರ್ಪಡೆಯಾದದ್ದು ಹೊರನೋಟಕ್ಕೆ ಕಾಣುತ್ತಿದ್ದರೂ ಪಂಚಮರು ಹಾಗೂ ಶೂದ್ರರ ಉಸ್ತುವಾರಿಯಲ್ಲಿ ನಡೆಯುವ ಈ ಜಾತ್ರೆಯಲ್ಲಿ ಜನಪದೀಯ ಅಂಶಗಳೂ ಸಾಕಷ್ಟಿವೆ. ಹೊರಬೀಡು, ರಥತಯಾರಿಕೆ, ಅಂಕೆ ಹಾಕುವುದು, ಮೇಟಿದೀಪ ,ವಿವಾಹ ರಥೋತ್ಸವ, ಬಲಿಸೇವೆ, ಹುಲುಸು ಮತ್ತು ಗಾಂವಮಾತಂಗಿ ಚಪ್ಪರಕ್ಕೆ ಬೆಂಕಿಯಿಡುವುದು, ಇಷ್ಟೇ ಅಲ್ಲದೆ ಜಾತ್ರಾ ವಿಸರ್ಜನೆ ಬೂಧೇವಿಗೆ ಹೆಚ್ಚು ಕೊಡುವುದು , ಜಾತ್ರಾ ವಿಸರ್ಜನೆ, ಡೊಳ್ಳಿನ ಕುಣಿತ, ಯಕ್ಷಗಾನ , ಜನಪದ ಗೀತಾಲಾಪ, ಮೈಮೇಲೆ ಬಾರಬಂದು ಕುಣಿಯುವುದು ಹೀಗೆ ಅನೇಕ ಅಂಶಗಳು ಅಪ್ಯಾಯಮಾನವಾಗಿರುವ ಸಿರ್ಸಿ ಜಾತ್ರೆ ನಾಡಿನ ಮೂಲೆ ಮೂಲೆಗಳಿಂದ ಲಕ್ಷಲಕ್ಷಗಟ್ಟಲೇ ಜನರನ್ನು ತನ್ನತ್ತ ಆಕರ್ಷಿಸುತ್ತದೆ. ಕರ್ನಾಟಕದಲ್ಲಿ ಅನೇಕ ಜಾತ್ರೆಗಳು ನಡೆಯುತ್ತದೆ. ಅಮ್ಮನ ಅಕ್ಕತಂಗಿಯರೆಂಬ ಒಂಬತ್ತು ಅಮ್ಮನವರ ಜಾತ್ರೆಯನ್ನು

ಯಲ್ಲಾಪುರ ಕಂಪ್ಲಿ , ಭಟ್ಕಳ್, ಬಿಳಗಿ ಮುಂತಾದೆಡೆಯಲ್ಲಿ ನಡೆದರೂ ಸಿರ್ಸಿಯ ಜಾತ್ರೆಯ ಕಳೆ ಹಾಗೂ ಪ್ರಸಿದ್ಧಿ ಇನ್ನಾವ ಜಾತ್ರೆಗೂ ಬಂದಿಲ್ಲ. ಸಿರ್ಸಿಯ ಜಾತ್ರೆಯನ್ನು ಜಗತ್ಪ್ರಸಿದ್ಧ ಜಾತ್ರೆಯೆಂದು ವರ್ಣಿಸಲಾಗಿದೆ. ಗ್ರಾಮದೇವತೆಯ ಉತ್ಸವಗಳಲ್ಲಿ ಬಂಡೀಹಬ್ಬದ ಆಚರಣೆ ಎರಡುದಿನದಿಂದ ಹನ್ನೆರಡು ದಿನಗಳವರೆಗೆ ನಡೆಯುತ್ತದೆ. ಈ ಉತ್ಸವವು ದೇಶಮಟ್ಟದಲ್ಲಿ ಪ್ರಸಿದ್ಧಿಪಡೆದಿದೆ. ಉತ್ಸವನಡೆಯುವಾಗ ನಿತ್ಯ ಕಲಶದೇವರ ಮೆರವಣಿಗೆಯಾಗುತ್ತದೆ. ಕೃಷಿಉತ್ಸವ ಇದಾದ್ದರಿಂದ ಆಡುಕಟ್ಟೆಯಲ್ಲಿ ಆರ್‌ಕಟ್ಟಿ ಹೂಡುವುದು ಗದ್ದೆ ಬಿತ್ತುವುದು , ಕೊಯ್ಯುವುದು, ಮುಂತಾದ ಕೃಷಿಕಾರ್ಯವನ್ನು ವೀರಸತಿ, ಕೆಂಡಹಾಯುವ ಸನ್ನಿವೇಶಗಳನ್ನು ಅನುಕರಿಸಲಾಗುತ್ತದೆ. ಹೂವಿನಮಕ್ಕಳ ಕುಣಿತವೂ ಆಗುತ್ತದೆ. ಮುಖವಾಡಗಳನ್ನು ವಾದ್ಯದ ಗತ್ತಿಗನುಗುಣವಾಗಿ ಗುನಗ ಆಡಿಸುತ್ತಾನೆ. ಬಂಡೀಹಬ್ಬದ ದಿನ ಕಲಶದೇವರು ಉಯ್ಯಾಲಚಪ್ಪರ ಹತ್ತುವ ಸನ್ನಿವೇಶ ಅತ್ಯಂತ ಆಕರ್ಷಣೀಯ. ಕೆಂಡ ಹಾಯುವುದೂ ಇದೆ. ಬಂಡೀಹಬ್ಬದ ಮಾರನೇ ದಿನ ಕೋಳಿಕುರಿಗಳ ಬಲಿಸಮರ್ಪಣೆಯಾಗುತ್ತದೆ. ಮೂಡನಂಬಿಕೆಯ ಈ ಕ್ರಮವನ್ನು ಇನ್ನೂ ಯಾರಿಂದಲೂ ಬಿಡಿಸಲಾಗಲಿಲ್ಲ. ಕೋಳಿಕುರಿಗಳ ಬಲಿಕೊಟ್ಟರೇನೇ ಅವರಿಗೆ ಸಮಾಧಾನವಾಗುತ್ತದೆ. ಹಿಂದಿನ ಕಾಲದಲ್ಲಿ ಬಂಡೀಹಬ್ಬದಲ್ಲಿ ನರಬಲಿಯಾಗುತ್ತಿದ್ದುದರ ಪಳೆಯುಳಿಕೆಗಳನ್ನು ಇಂದು ಬಂಡೀಹಬ್ಬದ ಚಡಂಗಗಳಲ್ಲಿ ಗುರುತಿಸಬಹುದಾಗಿದೆ. ಹನ್ನೆರಡುದಿನಗಳ ಪರ್ಯಂತನಡೆಯುವ ಅಂಕೋಲೆಯ ಬಂಡೀಹಬ್ಬ, ಹಾಲಕ್ಕಿ ಹಗಣಕ್ಕೆ ಪ್ರಖ್ಯಾತವಾದ ಹೊನ್ನಾವರದ ದೇವಿಕಾನ ಬಂಡೀಹಬ್ಬದ ಉತ್ಸವಗಳು ಹೆಸರಾಂತ ಉತ್ಸವಗಳು. ವೀರಪೂಜೆ ಹಾಗೂ ಭೂಮೀ ಪೂಜೆಗೆ ಬಂಡಿಹಬ್ಬದಲ್ಲಿ ವಿಶೇಷ ಮಾನ್ಯತೆಯನ್ನು ಕೊಡಲಾಗಿದೆ. ರಾತ್ರಿ ಯಕ್ಷಗಾನ ಬಯಲಾಟ ಹೀಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಸಂಗೀತವನ್ನು ಆಲಿಸುವ ಶ್ರೋತೃಗಳ ಸಂಖ್ಯೆಯೆ ಒಂದುಕಡೆಯಾಗಿದೆ. ಯಕ್ಷಗಾನ, ನಾಟಕ ಇಂತಹ ಜೀವಂತ ಕಲೆಯನ್ನು ಆಸ್ವಾದಿಸುವ ಶ್ರೋತೃಗಳೂ ನಮಗೆ ಕಾಣಸಿಗುತ್ತಾರೆ. ಇಂತಹ ಕಲೆಗಳನ್ನು ಪೋಷಿಸುವ, ಸಂಘಟಿಸುವ ,ಸಂಘಟಕರನ್ನು ನಾವು ಜಿಲ್ಲೆಯಲ್ಲಿ ಅಲ್ಲಲ್ಲಿ ಕಾಣಬಹುದು. ಶಾಸ್ತ್ರೀಯ ಸಂಗೀತದಂತಹ ಸಂಗೀತ ಕಾರ್ಯಕ್ರಮಕ್ಕೆ ಜಿಲ್ಲೆಯ ಅಷ್ಟೇ ಅಲ್ಲದೆ ಜಿಲ್ಲೆಯ ಹೊರಗಿನ ಪ್ರಜ್ಞಾವಂತ ಸುಶಿಕ್ಷಿತ ಪ್ರೇಕ್ಷಕರ ಸಂಖ್ಯೆಯ ಅಧಿಕಾವಾಗಿದೆ.

ಅಧ್ಯಾಯ ೧೦

ಹಿಂ. ಶಾಸ್ತ್ರೀಯ ಸಂಗೀತದಲ್ಲಿ ಘರಾನೆಗಳು ಹಾಗೂ ಸಂಗೀತದ ಪರಮಧ್ಯೇಯ

ಹಿಂದೂಸ್ತಾನೀ ಶಾಸ್ತ್ರೀಯ ಸಂಗೀತದಲ್ಲಿ ಘರಾನೆ

ಘರಾನೆ ಅಂದರೆ ಮನೆತನ ಎಂದು ಅರ್ಥೈಸಬಹುದು. ಹಿಂ. ಶಾಸ್ತ್ರೀಯ ಸಂಗೀತದಲ್ಲಿ ಆಗಿಹೋದ ಸುಪ್ರಸಿದ್ಧ ಕಲಾವಿದರುಗಳು ಗಾಯನ ಹಾಗೂ ವಾದನ ಶೈಲಿಗಳ ವಿಶಿಷ್ಟತೆಗಳನ್ನಾಧರಿಸಿ ಘರಾನೆಗಳು ಸಂಗೀತದಲ್ಲಿ ಅಸ್ತಿತ್ವದಲ್ಲಿ ಬಂದವು. ಹಿಂ. ಶಾಸ್ತ್ರೀಯ ಸಂಗೀತ ಪದ್ಧತಿಯಲ್ಲಿ ಕಿರಾಣಾ ಘರಾನೆ, ಆಗ್ರಾಘರಾನೆ, ಜೈಪುರ ಘರಾನೆ, ಗ್ವಾಲೇರ್ ಘರಾನೆ, ಪತಿಯಾಲಾ ಘರಾನೆ, ದಿಲ್ಲಿ ಘರಾನೆ, ಬೆಂಡಿಬಜಾರ್ ಘರಾನೆಗಳು ಪ್ರಮುಖವಾಗಿವೆ.

ಪ್ರತಿಯೊಂದು ಘರಾನೆಯ ಗಾಯನ ಹಾಗೂ ವಾದನ ಶೈಲಿಗಳು ಭಿನ್ನವಾಗಿದ್ದು ಅದು ತನ್ನದೇ ಆದ ವಿಶಿಷ್ಟ ಪರಂಪರೆಯ ಹಾಡುಗಾರಿಕೆ ಮತ್ತು ವಾದನಗಳನ್ನು ಅನುಸರಿಸುತ್ತವೆ. ಪ್ರತಿಯೊಬ್ಬ ಕಲಾವಿದನು ಘರಾನೆಯನ್ನು ಕಟ್ಟಲಾರ. ಒಂದು ಘರಾನೆಯ ಅಥವಾ ಮನೆತನದ ಪರಂಪರೆಯನ್ನು ಕಟ್ಟಲು ಆದರ್ಶಪದ್ಧತಿ ಅವಶ್ಯಕವಾಗಿರುತ್ತದೆ. ಪ್ರಚಲಿತವಾಗಿ ಘರಾನೆಗಳು ಸಂಗೀತ ಮನೆತನಗಳ ಶೈಲಿಗಳನ್ನು ವಿಶ್ಲೇಷಿಸಿದಾಗ ನಮಗೆ ಘರಾನೆಯ ಕೆಲ ಮಹತ್ವದ ಸಂಗತಿಗಳು ಗಮನಕ್ಕೆ ಬರುತ್ತವೆ.

೧. ಸ್ವರಗಳನ್ನು ಹಚ್ಚುವ ಪದ್ಧತಿ (ಡಂಗ)

೨. ಗಾಯನದಲ್ಲಿ ಬಂದೀಷ (ಬಿಗಿ)

೩. ರಾಗ ವಿಸ್ತಾರ ಪದ್ಧತಿ

೪. ತಾನ ಮತ್ತು ಭೋಲ್‌ತಾನಗಳ ಪದ್ಧತಿ

೫, ತಾಲ-ಲಯಗಳಲ್ಲಿನ ವಿಶೇಷತೆ.

ಮೇಲ್ಕಾಣಿಸಿದ ಅಂಶಗಳ ವಿಷಯದಲ್ಲಿ ಪ್ರತಿಯೊಂದು ಸಂಗೀತ ಮನೆತನವೂ ಒಂದರಿಂದ ಇನ್ನೊಂದು ಭಿನ್ನವಾಗಿದ್ದು ಕಂಡುಬರುತ್ತದೆ. ಈ ಭಿನ್ನತೆಯಲ್ಲಿಯೇ ಪ್ರತಿಯೊಂದು ಘರಾನೆ ಅಥವಾ ಮನೆತನಗಳ ಆದರ್ಶ ಹಾಗೂ ಪದ್ಧತಿಗಳು ಅಡಗಿದ್ದು, ಈ ಆದರ್ಶತೆಯ ಅಳಿವು ಉಳಿವು ಮತ್ತು ಅದರ ಉನ್ನತಿಗಾಗಿ ಪ್ರತಿಯೊಂದು

ಮನೆತನ (ಘರಾನೆ) ಗಳೂ ಶ್ರಮಿಸುತ್ತಲೇ ಬಂದಿದ್ದಾರೆ. ಈ ಅಂಶರದಿಂದಾಗಿಯೇ ಇಂದು ಸಂಗೀತದಲ್ಲಿ ಗುರು-ಶಿಷ್ಯ ಪರಂಪರೆ ಅಥವಾ ಘರಾನೆಗಳು ಉಳಿದು ಬೆಳೆದುಕೊಂಡು ಬಂದಿದೆ. ಉಸ್ತಾದ್ ಬಂದೇ ಅಲಿಖಾನ್ (ಬೀನ್‌ಕಾರರು) ಅವರಿಂದ ಅವಿಶ್ಕಾರವಾಗಿ ಕಿರಾಣಾ ಘರಾನೆಯು ಅಬ್ದುಲ್ ಕರಿಂ ಖಾನ್‌ರಿಂದ ಪ್ರಚಾರದಲ್ಲಿ ಬಂತು. ಈ ಘರಾನೆಗೆ ಇದರದೇ ಆದ ವೈಶಿಷ್ಟ್ಯಗಳಿದ್ದು ಇಂದು ನಾಡಿನ ಖ್ಯಾತ ಕಲಾಕಾರರಾದ ಡಾಃ ಗಂಗೂಬಾಯಿ ಹಾನಗಲ್ ಪಂ. ಭಿಮಸೇನ ಜೋಷಿ, ಪಂ. ಬಸವರಾಜ ರಾಜಗುರು ಮುಂತಾದ ಶ್ರೇಷ್ಠ ಕಲಾಕಾರರು ಈ ಘರಾನೆಯ ಸಂಗೀತವನ್ನು ಪ್ರಸ್ತುತಪಡಿಸುತ್ತ ಇಂದು ಪ್ರಸಿದ್ಧರಾಗಿದ್ದಾರೆ.

ಇಂದು ಅಭ್ಯಾಸ ಮಾಡುವ ಯುವಕಲಾಕಾರರು ಘರಾನೆಯ ಒಳಿತನ್ನು ಸ್ವೀಕರಿಸಿ ತಮ್ಮದೇ ಆದ ಶೈಲಿಯನ್ನು ಪ್ರಸ್ತುತಪಡಿಸಬೇಕಾಗಿದೆ. ಪ್ರತಿಯೊಂದು ಮನೆತನವೂ ತನ್ನ ಪರಂಪರೆಯ ಆದರ್ಶವನ್ನು ಉಳಿಸಿಕೊಂಡು ಬರಲು ಅದು ತನ್ನಮನೆತನ, ಪರಂಪರೆಯ ವಿಶೇಷತೆಯನ್ನು ತನ್ನ ಮನೆತನಕ್ಕೆ (ಘರಾನೆ) ಸೇರಿದ ಕಲಾವಿದರಿಗೆ ಮಾಡಿಕೊಡುತ್ತದೆ. ಆದರೆ ಎಷ್ಟೋ ಜನ ಕಲಾಕಾರರು ಘರಾನೆಯ ವೈಶಿಷ್ಟ್ಯಗಳನ್ನು ಸರಿಯಾಗಿ ಅರಿತುಕೊಳ್ಳದೇ ಕೇವಲ ಬಾಹ್ಯ ಸೌಂದರ್ಯವನ್ನು ಮಾತ್ರ ಅರಿತು ಅದರ ಅಂತಸತ್ವವನ್ನು ಅರಿಯದೆ ತೊಳಲಾಡುತ್ತಿರುವುದನ್ನು ಕಾಣಬಹುದಾಗಿದೆ. ಇದಕ್ಕೆ ಅನೇಕ ಕಾರಣಗಳಿರುವವು. ೧. ಪ್ರತಿಭಾವಂತ ಗುರುಗಳನ್ನು ಅನುಸರಿಸವ ಸಾಮರ್ಥ್ಯ ಶಿಷ್ಯನಲ್ಲಿಲ್ಲದಿರುವುದು. ೨. ಒಮ್ಮೊಮ್ಮೆ ಗುರುಗಳಲ್ಲಿನ ದೋಷಗಳನ್ನು ಅನುಸರಿಸಿ ಇದೇ ತನ್ನ ಮನೆತನದ ಪರಂಪರೆಯೆಂದು ತಿಳಿದು ಮೋಸಹೋಗುವುದು. ೩. ತಾನು ಸೇರಿದ ಮನೆತನದ ಪರಂಪರೆಯೇ ಸರ್ವಶ್ರೇಷ್ಠವೆಂದು ತಿಳಿದು ಇತರ ಪರಂಪರೆಯನ್ನು ಹಿಯಾಳಿಸುವುದು. ಘರಾನೆಯ ಸಂಗೀತಗಾಯಕ ಯಾವದೋಷವೂ ಇಲ್ಲದಂತೆ ಉತ್ತಮವಾಗಿ ಹಾಡಿದಾಗ ಮಾತ್ರ ಅದು ಜನರಲ್ಲಿ ಅಚ್ಚೊಳಿದು ಇರಲು ಸಾಧ್ಯ ಮತ್ತು ಅಂತಹ ಗಾಯನವನ್ನು ಜನರು ಮನ್ನಿಸಲು ಶಕ್ಯವಾಗುವುದು.

<u>ಹಿಂ. ಸಂಗೀತದ ಘರಾಣೆಗಳುಃ</u> - ಹಿಂದುಸ್ಥಾನಿ ಗಾಯನದಲ್ಲಿ ಸಾಕಷ್ಟು ಘರಾಣೆಗಳಿವೆ. ಆದೂ ಈ ಕೆಳಗೆ ಕಾಣಿಸಿದ ೬ ಘರಾಣೆಗಳು ಮಾತ್ರ ವಿಶೇಷ ಪ್ರಚಾರದಲ್ಲಿದೆ.

ಅಡಿಟಿಪ್ಪಣಿಃ ಸಂಗೀತ ಶಾಸ್ತ್ರ ದರ್ಪಣ ಎ.ಯು. ಪಾಟೀಲ, ಭಾರತೀಯ ಸಂಗೀತದ ಚರಿತ್ರೆ ......

ಹಿಂದುಸ್ತಾನಿ ಶಾಸ್ತ್ರೀಯಸಂಗೀತದ ಪ್ರಮುಖ ಘರಾನೆಗಳು

೧. ಗ್ವಾಲಿಯರ ಘರಾಣೆ

೨. ಜೈಪುರ ಘರಾಣೆ

೩. ಕಿರಾಣಾ ಘರಾಣೆ

೪. ಆಗ್ರಾ ಘರಾಣೆ

ವಿವಿಧ ಘರಾಣೆಗಳ ವಿಶೇಷತೆ

೧. **ಗ್ವಾಲಿಯರ ಘರಾಣೆ :-** ಈ ಘರಾಣೆಯಲ್ಲಿ ಜೋರಯುಕ್ತ ಹಾಗೂ ಮುಕ್ತಕಂಠದಿಂದ ಹಾಡುವ ಗಾಯನ ಪದ್ಧತಿ, ಧ್ರುಪದ ಅಂಗದ ಖ್ಯಾಲಗಳು, ಸರಳ ಮತ್ತು ಸಪಾಟ ತಾನುಗಳು, ಬೋಲತಾನಗಳಲ್ಲಿ ಲಯಕಾರಿ, ಗಮಕಗಳ ಪ್ರಯೋಗಗಳು ಹಾಗೂ ಖ್ಯಾಲ ಗಾಯನ ಆರಂಭವಾದ ಕೂಡಲೆ ಬಂದಿಶದ ಹಾಡುಗಾರಿಕೆ ಹೀಗೆ ಇರುತ್ತದೆ. ಈ ಘರಾಣೆಯ ಪ್ರಸಿದ್ಧ ಗಾಯಕರಲ್ಲಿ ನತ್ಥನ್ ಪೀರಭಕ್ಷ, ಹಸ್ಸುಖಾನ್, ಹದ್ದುಖಾನ್, ರಹಮತಖಾನ್, ಶಂಕರ ಪಂಡಿತ, ರಾಮಕೃಷ್ಣ ಬುವಾ ವಝೇ, ಬಾಲಕೃಷ್ಣ ಇಚಲಕರಂಜಿಕರ, ವ್ಹಿ.ಡಿ. ಪಲುಸ್ಕರ, ರಾಜಾ ಭೈಯಾ ಪೂಛವಾಲೆ, ವಿನಾಯಕರಾವ್ ಪಟವರ್ಧನ ಹಾಗೂ ಕರ್ನಾಟಕದ ನೀಲಕಂಠಬುವಾ, ಪಂಚಾಕ್ಷರಿ ಗವಾಯಿಗಳು, ಗುರುರಾವ್ ದೇಶಪಾಂಡೆ ಮುಂತಾದವರ ಹೆಸರುಗಳು ವಿಶೇಷ ಉಲ್ಲೇಖ ನೀಯವಾಗಿವೆ.

೨. **ಜೈಪುರ ಘರಾಣೆ :-** ಈ ಘರಾಣೆಯಲ್ಲಿ ಧ್ವನಿ ಹಚ್ಚುವ ಒಂದು ಸ್ವತಂತ್ರ ಪದ್ಧತಿ, ಮುಕ್ತಕಂಠದಿಂದ ಗಾಯನ, ಗೀತಗಳ ಸಂಕ್ಷಿಪ್ತ ಬಂದಿಶ, ವಕ್ರತಾನುಗಳು ಹಾಗೂ ಆಲಾಪದಿಂದ ಕೂಡಿದ ಸಣ್ಣ ಪುಟ್ಟ ತಾನುಗಳಿಂದ ರಾಗದ ಮುಂದುವರಿಸುವಿಕೆ ಹಾಗೂ ಖ್ಯಾಲ ಗಾಯನದ ಒಂದು ವಿಶೇಷ ಬಂದಿಶ ಇವುಗಳಿಂದ ಕೂಡಿರುತ್ತದೆ.

ಈ ಶೈಲಿಯ ಪ್ರಸಿದ್ಧ ಗಾಯಕರಲ್ಲಿ ಅಲ್ಲಾದಿಯಾಖಾನ, ಬುರ್ಜಿಖಾನ, ಕೇಸರಬಾಯಿ ಕೇರಕರ, ಮಲ್ಲಿಕಾರ್ಜುನ ಮನ್ಸೂರ, ನಿವೃತ್ತಿಬುವಾ ಸರನಾಯಕ ಮತ್ತು ಕಿಶೋರಿ ಅಮೋಣಕರ ಇವರ ಹೆಸರುಗಳು ವಿಶೇಷ ಉಲ್ಲೇಖನೀಯವಾಗಿದೆ.

೩. **ಕಿರಾಣಾ ಘರಾಣಾ:-** ಸ್ವರ ಹಚ್ಚುವ ತಮ್ಮದೇಆದ ಒಂದು ವಿಶಿಷ್ಟಪದ್ಧತಿ, ಒಂದೊಂದು ಸ್ವರದಿಂದ ಮತ್ತೊಂದು ಸ್ವರಕ್ಕೆ ಸಾವಕಾಶವಾಗಿ ಬಡತ ಮಾಡುವ ಶೈಲಿ ಆಲಾಪ ಪ್ರಧಾನ ಗಾಯನವಾಗಿದ್ದು ಠುಮ್ರಿ ಅಂಗದ ಹಾಡುಗಾರಿಕೆ ವಿಶೇಷ ಪೂರ್ಣವಾಗಿದೆ.

ಈ ಘರಾಣೆಯ ಆವಿಷ್ಕಾರವು ಪ್ರಸಿದ್ಧ ಬೀನಕಾರ ಉಸ್ತಾದ ಬಂದೇ ಅಲಿಖಾನ ಇವರಿಂದ ಆಯಿತೆಂದು ಹೇಳಲಾಗುತ್ತದೆ. ಈ ಘರಾಣೆಯ ಪ್ರಮುಖ ಗಾಯಕರಲ್ಲಿ ಅಬ್ದುಲ ಕರಿಂಖಾನ, ವಹೀದಖಾನ, ಸವಾಯಿ ಗಂಧರ್ವ, ಹೀರಬಾಯಿ ಬಡೋದೆಕರ, ಅಮೀರಖಾನ, ಸುರೇಶಬಾಬು ಮಾನೆ, ಹಾಗೂ ವರ್ತಮಾನ ಕಾಲದಲ್ಲಿ ಪಂಡಿತ ಭೀಮಸೇನ ಜೋಶಿ, ಡಾಃ ಗಂಗೂಬಾಯಿ ಹಾನಗಲ್ಲ ಹಾಗೂ ಡಾಃ ಬಸವರಾಜ ರಾಜಗುರು ಹಾಗೂ ಪ್ರಭಾ ಆತ್ರೆ ಇವರ ಹೆಸರುಗಳು ಉಲ್ಲೇಖನೀಯವಾಗಿವೆ.

೪. **ಆಗ್ರಾಘರಾಣೆ:-** ನೋಂ ತೋಂದಲ್ಲಿ ಆಲಾಪ ಗಾಯನ, ಬಂದಿಶ ಯುಕ್ತ ರಚನೆಗಳ ಗಾಯನ, ಮುಕ್ತಕಂಠ ಹಾಗೂ ಜೋರಯುಕ್ತ ಧ್ವನಿಯಿಂದ ಹಾಡುಗಾರಿಕೆ, ಖ್ಯಾಲದ ಹೊರತಾಗಿ ದ್ರುಪದ, ಧಮಾರ ಹಾಗೂ ಠುಮ್ರಿ ಹಾಡುವದರಲ್ಲಿ ಪ್ರಾವೀಣ್ಯತೆ ಮತ್ತು ಬೋಲತಾನಗಳ ಮೇಲೆ ವಿಶೇಷ ಗಮನ.

ಈ ಘರಾಣೆಯ ಆವಿಷ್ಕಾರವು ಹಾಜಿ ಸುಜಾನಖಾನರಿಂದ ಆಯಿತೆಂದು ಹೇಳಲಾಗುತ್ತದೆ. ಖುದಾ ಭಕ್ಷ, ನತ್ಥನಖಾನ, ಫಯಾಜಖಾನ, ವಿಲಾಯತ ಹುಸೇನಖಾನ ಹಾಗೂ ಕರ್ನಾಟಕದ ದಿ. ರಾಮರಾವ ನಾಯಕ, ಹನುಮಂತರಾವ ವಾಳ್ವೆಕರ ಮುಂತಾದ ಗಾಯಕರ ಹೆಸರುಗಳು ವಿಶೇಷ ಉಲ್ಲೇಖನೀಯವಾಗಿವೆ.

ವರ್ತಮಾನ ಯುಗದಲ್ಲಿ ಘರಾಣೆಗಳ ಔಚಿತ್ಯ

ಹಿಂದುಸ್ಥಾನಿ ಸಂಗೀತದಲ್ಲಿ ಘರಾಣೆಗಳ ಉದಯ ಹಾಗೂ ವಿಕಾಸವು ಸಂಗೀತದ ಗುರು ಶಿಷ್ಯ ಪರಂಪರೆ ಶಿಕ್ಷಣ ಪದ್ಧತಿಯಲ್ಲಿ ಮುಂದುವರಿಯಿತು. ಸಂಗೀತವು ಪ್ರಾತ್ಯಕ್ಷಿಕೆ ಹಾಗೂ ಪ್ರಯೋಗಾತ್ಮಕ ಕಲೆಯಾಗಿದ್ದು ಇದರಲ್ಲಿ ಪ್ರತಿಯೊಂದು ಸೂಕ್ಷ್ಮ ಸಂಗತಿಗಳು ಬರೆಯಲಿಕ್ಕಾಗುವದಿಲ್ಲ. ಇವುಗಳನ್ನು ಗುರುಮುಖವಾಗಿಯೇ ಕಲಿಯಬೇಕಾಗುತ್ತದೆ. ಆದ್ದರಿಂದಲೇ ಗುರುಶಿಷ್ಯ ಪರಂಪರೆಯ ಒಂದು ವಿಶೇಷ ಮಹತ್ವವು ಸಂಗೀತದಲ್ಲಿ ಕಂಡುಬರುತ್ತದೆ.

ಇಂತಹ ಒಂದು ಶಿಕ್ಷಣಪದ್ಧತಿಯಲ್ಲಿ ಗುರುಗಳು **ತಾಲೀಮೆ ಖಾಸೂಲಖಾನಿ** ಗೋಪನೀಯ ಶಿಕ್ಷಣ ತಾಲೀಮೆಖಾಸ ಮತ್ತು **ತಾಲೀಮೆ ಆಮ್** ಸಾರ್ವಜನಿಕ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷಣವನ್ನು ನೀಡುತ್ತಿದ್ದರು. ಸ್ವರಗಳನ್ನು ಹಚ್ಚುವ ಪದ್ಧತಿ ಬೀಜ ರಚನೆಗಳನ್ನು ಪ್ರಸ್ತುತಪಡಿಸುವ ವಿಧಾನ, ತಾನುಗಳ ವಿವಿಧ ಪ್ರಕಾರಗಳು, ರಾಗಗಳ ಶುದ್ಧತೆ ಹಾಗೂ ಅವುಗಳ ವ್ಯಾಕರಣ, ಕಲಾತ್ಮಕ ಪ್ರಸ್ತುತೀಕರಣ ಬೋಲ-ತಾನ ಹಾಗೂ ಲಯದ ಸೂಕ್ಷ್ಮತೆ ಮುಂತಾದ ಸಂಗತಿಗಳನ್ನು ಗುರುಗಳು ಸಮರ್ಪಕ ರೀತಿಯಿಂದ ಕಲಿಸುತ್ತಿದ್ದರು.

* ಭಾರತದ ಮಹಾರಾಜ, ನವಾಬ ಹಾಗೂ ಸಂಸ್ಥಾನಿಕರಕಾಲದಲ್ಲಿ ಸಂಗೀತಕಲಾವಿದರಿಗೆ ಆಶ್ರಯವಿರುತ್ತಿತ್ತು. ಇದರಿಂದಾಗಿ ಅವರಿಗೆ ವಾಸಿಸಲು ಮನೆ, ಊಟ ತಿಂಡಿಯ ಚಿಂತೆಯೇ ಇರುತ್ತಿರಲಿಲ್ಲ. ಆದ್ದರಿಂದ ಅವರು ಧಾರಾಳವಾಗಿ **ರಿಯಾಜ (ಅಭ್ಯಾಸ)** ಮಾಡುತ್ತಿದ್ದರು. ಹಾಗೂ ಅನೇಕ ಶಿಷ್ಯಂದಿರಿಗೆ ಒಳ್ಳೆಯ ಮಾರ್ಗದರ್ಶನ ಹಾಗೂ ಶಿಕ್ಷಣ ನೀಡಿ ತಯಾರು ಮಾಡುತ್ತಿದ್ದರು. **ರಿಯಾಜ** ಹೇಗೆ ಮತ್ತು ಎಷ್ಟು ಮಾಡಬೇಕು, ಇದರ ಮಾಹಿತಿ ಕೂಡಾ ಅವರು ನೀಡುತ್ತಿದ್ದರು.

ವರ್ತಮಾನ ಕಾಲದಲ್ಲಿ ಈ ಗುರುಶಿಷ್ಯ ಪರಂಪರೆಯು ಒಂದು ಚೌಕಟ್ಟಿಗೆ ಒಳಪಟ್ಟಿದೆ. ಸಂಸ್ಥಾಗತ ಸಂಗೀತ ಶಿಕ್ಷಣ ಪದ್ಧತಿಯಲ್ಲಿ ಒಳ್ಳೆಯವಿದ್ಯಾರ್ಥಿಗಳ ಆಯ್ಕೆ ಸರಿಯಾಗಿ ಆಗುವದಿಲ್ಲ. ಕ್ಲಾಸಿಗೆ ಬರುವ ಎಲ್ಲ ವಿದ್ಯಾರ್ಥಿಗಳಿಗೆ ಒಂದೇ ವೇಳೆಯಲ್ಲಿ ಸಂಗೀತದ ಶಿಕ್ಷಣವನ್ನು ಕೊಡಬೇಕಾಗುತ್ತದೆ. ಸಂಗೀತದ ವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ವಿಶಾರದ, ವಿದ್ವತ್, ಅಲಂಕಾರ, ಬಿ.ಎ.,ಎಂ.ಎ. ಮತ್ತು ಡಾಕ್ಟರೇಟ ಪದವಿ ಪ್ರಾಪ್ತ ಮಾಡುತ್ತಾರೆ. ಆದರೆ ಯಾವುದೇ ಒಂದು ಸಂಗೀತ ಸಭೆಯಲ್ಲಿ ಹಾಡಿ ಕಾರ್ಯಕ್ರಮವನ್ನು ರಂಜಿಸುವದು ಕೆಲವರಿಗೆ ಕಠಿಣವಾಗುತ್ತದೆ. ಇಂತಹ ವಿದ್ಯಾರ್ಥಿಗಳು ಡಿಗ್ರಿಗಳ ಆಧಾರದ ಮೇಲೆ ಉಚ್ಚ ಸಂಗೀತಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಲು ಪ್ರಾರಂಭ ಮಾಡಿದರೆ ಸಂಗೀತದ ಸ್ಥಿತಿಗತಿ ಏನಾಗುವದು ?

ಇತ್ತೀಚೆಗೆ ಭಾರತೀಯ ಸಂಗೀತದ ಮೂಲ ಸ್ವರೂಪವನ್ನು ಕಂಡು ಹಿಡಿಯುವದು ಒಂದು ಕಠಿಣ ಕೆಲಸವಾಗಿದೆ. ಏಕೆಂದರೆ ಒಬ್ಬ ಘರಾಣೆಯ ಒಬ್ಬ ವ್ಯಕ್ತಿ ಬೇರೆ ಘರಾಣೆಯ ಗಾಯಕನನ್ನು ಕೆಳಮಟ್ಟದ ದೃಷ್ಟಿಯಿಂದ ನೋಡುವ ಪ್ರವೃತ್ತಿಯಲ್ಲಿರುತ್ತಾನೆ. ಪರಂಪರಾಗತ ಗಾಯಕರು ತಮ್ಮ ಶಿಷ್ಯಂದಿರಿಗೆ ಬೇರೆ

ಅಡಿ ಟಿಪ್ಪಣಿ :- ಲೇಖಕರ ಅಭಿಪ್ರಾಯ ಹಾಗೂ ಚಿಂತನವನ್ನಾದರಿಸಿ.............

ಘರಾಣೆಯ ಗಾಯನ ಶೈಲಿಯನ್ನು ಕೇಳುವದಕ್ಕೆ ಬಂಧನವಿಡುತ್ತಾರೆ. ಏಕೆಂದರೆ ಬೇರೆ ಶೈಲಿಯ ಗಾಯನ ಪ್ರಭಾವ ಅವರ ಘರಾಣೆಯ ಮೇಲೆ ಬೀಳಕೂಡದೆಂಬುದು ಅವರ ಮನೋಭಾವ.

ಆದರೆ ಇತ್ತೀಚಿಗೆ ಸಂಗೀತವು ಆಕಾಶವಾಣಿ ಮೂಲಕ ಟೇಪರಿಕಾರ್ಡ್ಸ ಮೂಲಕ, ಟಿ.ವಿ. ಮತ್ತು ಸಂಗೀತ ಸಮ್ಮೇಳನಗಳಲ್ಲಿ ವಿವಿಧ ಘರಾಣೆಗಳ ಗಾಯನ ಶೈಲಿಯನ್ನು ಕೇಳುವ ಅವಕಾಶ ದೊರೆಯುತ್ತದೆ. ಸ್ವಾಭಾವಿಕವಾಗಿ ಸಂಗೀತದ ವಿದ್ಯಾರ್ಥಿಗಳು ಬೇರೆ ಬೇರೆ ಘರಾಣೆಗಳಲ್ಲಿದ್ದ ಸುಂದರ ಶೈಲಿಗಳನ್ನು ಅರಿವಿಲ್ಲದೆ ಅಳವಡಿಸಿಕೊಂಡು ಒಂದು ಮಿಶ್ರ ಶೈಲಿಯನ್ನು ಮಂಡಿಸುತ್ತಾರೆ. ಅನೇಕ ಶ್ರೇಷ್ಠ ಗಾಯಕರಲ್ಲಿ ಇಂತಹ ವಿವಿಧ ಶೈಲಿಗಳ ಮಿಶ್ರಣವು ಇದ್ದದ್ದು ಕಂಡುಬರುತ್ತದೆ. * ಉದಾಃ- ಬುರ್ಜಿಖಾನ ಹಾಗೂ ಮನ್ಸೂರವರ ಗಾಯನದಲ್ಲಿ ಜೈಪುರ ಶೈಲಿ ಜೊತೆಗೆ ಗ್ವಾಲಿಯರ ಶೈಲಿಯ ಮಿಶ್ರಣವಾದದ್ದು ಕಂಡುಬರುತ್ತದೆ, ಅದೇ ರೀತಿ ಕೇಸರಬಾಯಿ ಕೇರಕರರವರ ಗಾಯನದಲ್ಲಿ ಕಿರಾಣಾ ಮತ್ತು ಜೈಪುರ ಘರಾಣೆಯ ಮಿಶ್ರಣ, ಬಸವರಾಜ ರಾಜಗುರು ಅವರ ಗಾಯನದಲ್ಲಿ ಕಿರಾಣಾ ಹಾಗೂ ಗ್ವಾಲಿಯರ ಘರಾಣೆಯ ಶೈಲಿಯ ಮಿಶ್ರಣ ಕಂಡು ಬರುತ್ತದೆ.

ವಿದ್ಯಾರ್ಥಿಗಳು ಕೇವಲ ತಮ್ಮ ಗುರುಗಳ ಶೈಲಿಯ ಅಂಧ ಶ್ರದ್ಧಾಯುಕ್ತ ಅನುಸರಣೆ ಮಾಡಿದರೆ ಅದು ಯಾಂತ್ರಿಕವಾಗಿಯೂ ಹಾಗೂ ನೀರಸವಾಗಿರುವದು ಕಂಡುಬರುತ್ತದೆ. ಘರಾಣೆಯ ಕಲ್ಪನೆ ಈಗಿನ ಕಾಲದ ಬೌದ್ಧಿಕ ಯುಗದಲ್ಲಿ ಒಂದು ಅವಾಸ್ತವವಾದ ಕಲ್ಪನೆಯಾಗಿದ್ದು ಇದರ ಉಪಯುಕ್ತತೆ ಗಾಯಕನ ಮೆಚ್ಚುವಿಕೆ ಹಾಗೂ ಪ್ರವೃತ್ತಿಯ ಮೇಲೆ ಅವಲಂಬಿಸಿರಬಹುದಾಗಿದೆ. ಕೇವಲ ಘರಾಣೆಯ ಹೆಸರಿನಲ್ಲಿ ನೀರಸವಾದ ಗಾಯನವನ್ನು ಮಾಡುವದಕ್ಕಿಂತ ಬೇರೆ ಬೇರೆ ಘರಾಣೆಯಲ್ಲಿದ್ದ ರಂಜಕ ತತ್ವಗಳನ್ನು ಅಳವಡಿಸಿಕೊಂಡು ಸ್ವತಂತ್ರ ಹಾಗೂ ಸಮೃದ್ಧ ಗಾಯನವನ್ನು ಮಾಡುವದು ಅತೀ ಶ್ರೇಯಸ್ಕರವಾಗಿದೆ ಎಂದು ಅನ್ನಿಸುತ್ತದೆ.

ಇದಕ್ಕಾಗಿ ಸಂಗೀತ ಶಿಕ್ಷಣ ಪದ್ಧತಿಯಲ್ಲಿ ಏಕರೂಪಕತೆಯಿರಬೇಕು. ಪರಸ್ಪರ ದ್ವೇಷ ಹಾಗೂ ಪ್ರತಿದ್ವಂದ್ವಿತ್ವ ಸಮಾಪ್ತವಾಗಬೇಕು. ಘರಾಣೆಗಳ ಹೆಸರು ನಿರ್ಮೂಲನ ಮಾಡಿ ಅವುಗಳಲ್ಲಿ ಸಂಬಂಧಿತವಾದ ಒಳ್ಳೇ ಗುಣಗಳನ್ನು ಅಳವಡಿಸಿ ಏಕರೂಪದ ಭಾರತೀಯ ಸಂಗೀತವನ್ನು ಪ್ರಚಾರದಲ್ಲಿ ತಂದರೆ ಧರ್ಮ, ಜಾತಿ, ಪ್ರಾಂತೀಯತೆ ಮತ್ತು ರಾಷ್ಟ್ರೀಯತೆಯಲ್ಲಿರುವ ವಿಷ ಬೀಜಗಳನ್ನು ಸಮಾಪ್ತ ಮಾಡಬಹುದು.

ಅಡಿ ಟಿಪ್ಪಣಿ :- ಖ್ಯಾತ ಸಂಗೀತಕಲಾಕಾರರ ಧ್ವನಿಮುದ್ರಣದ ಶ್ರವಣದಿಂದ..................

ಸಂಗೀತದ ಪರಮಧ್ಯೇಯ

ನಾದೋಪಾಸನೆ ತನ್ಮೂಲಕ ಮೋಕ್ಷಸಾಧನೆ ಭಾರತೀಯ ಸಂಗೀತದ ಪರಮಧ್ಯೇಯ. ಅದರ ಉಗಮ ಯೋಗಶಾಸ್ತ್ರದಲ್ಲಿ ಕಾಣುವುದು. ನಾದದಲ್ಲಿ ಎರಡು ಪ್ರಕಾರ ಆಹತ ಹಾಗೂ ಅನಾಹತ. ಇವೆರಡೂ ಹೃದಯಾಂತರಾಳದಿಂದ ಹುಟ್ಟಿಕೊಳ್ಳುತ್ತದೆ. ಮೊದಲನೆಯದು ಭಾವಸಮಾದಿಯಾದ ಯೋಗಿಗಳಿಗೆ ಮಾತ್ರ ಗೋಚರವಾಗುತ್ತದೆ. ಎರಡನೇಯದು ರಂಜಕ ಕಟ್ಟಿಗೆಯಿಂದ ಬೆಂಕಿಯನ್ನು ಹೊರಡಿಸುವಂತೆ ವ್ಯಕ್ತಿಯ ಇಚ್ಛಾನುಸಾರ ಸ್ಮರಿಸಿ ಅಕ್ಷರ, ಶಬ್ದ, ವಾಕ್ಯ, ಶ್ರುತಿ, ಸ್ವರಾದಿಗಳ ರೂಪದಲ್ಲಿ ಪ್ರಕಟವಾಗುವುದು. ಸಮಗ್ರ ಸಂಗೀತ ಶಾಸ್ತ್ರಕ್ಕೆ ಇದೇ ತಳಹದಿ. ರತ್ನದಿಂದ ತೂರಿಬರುವ ಕಿರಣಗಳು ರತ್ನದೆಡೆ ಕರೆದೊಯ್ಯುವಂತೆ ಹೃದಯಸ್ಪರ್ಷಿ ಸಂಗೀತದಅಲೆಗಳು, ಸಾಧಕನನ್ನು ನಾದಬ್ರಹ್ಮನೆಡೆ ಕರೆದೊಯ್ಯುವುದು ಎಂದು ನಂಬಿದ ಕಲಾವಿದರು ನಾದೋಪಾಸಕರು.

* ರಾಗರಾಗಿಣಿ ಪದ್ಧತಿಯಲ್ಲಿರುವ ಸತಿಪತಿ ಭಾವ ಸಾದಕರು ಕಲ್ಪಿಸಿಕೊಳ್ಳಬೇಕಾದ ರಾಗ-ರಾಗಿಣಿ ಪ್ರತೀಕಗಳನ್ನು ಕುರಿತಿರುವ ಧ್ಯಾನಶ್ಲೋಕಗಳು, ಅವುಗಳನ್ನು ಹಾಡುವ ಸಮಯ ಋತು ಮೊದಲಾದವು ನವವಿದ ಭಕ್ತಿಯಿಂದ ನಮ್ಮ ಆರಾಧ್ಯ ದೇವತೆಗಳನ್ನು ಆರಾಧಿಸಲು ಸಾಧಕರಿಗೆ ಅತ್ಯಂತ ಉಪಕಾರವಾಗಿದೆ. ಕಾವ್ಯಾಲಂಕಾರ ಶಾಸ್ತ್ರದ ಮೇರೆಗೆ ರಾಗ ರಾಗಿಣಿಗಳಿಗೆ ಸತಿ -ಪತಿ ನಾಯಕ-ನಾಯಕಾ ಸಂಬಂಧವನ್ನು ಕಲ್ಪಿಸಲಾಗಿದೆ. ಪುರುಷ ರಾಗಗಳು, ದೀರ ಲಲಿತ, ದೀರಶಾಂತ ಧೀರೋದೃತ, ಧೀರೋಧಾತ್ತ ಇತ್ಯಾದಿಗಳ ಭಾವಾಭಿವೃದ್ಧಿಗೆ ಮಾಧ್ಯಮವಾಗಿದೆ. ಸ್ತ್ರೀ ರಾಗಗಳು ಅಬಿಸಾರಿಕಾ, ವಾಸಕಸಜ್ಜಿಕಾ ಉತ್ಕಲಠಿಕಾ, ಉಪ್ರಬ್ಧಾ ಖಂಚಿತಾ ಕಲಹಾಂತರಿಕಾ ಮಾಧ್ಯಮವಾಗಿದೆ. ಭಾವಗಳಿಗೆ ಅನುಗುಣವಾಗಿ ಶೃಂಗಾರಾದಿ ರಸಗಳು ನಿರೂಪಿಸಲ್ಪಟ್ಟಿವೆ. ಆಯಾ ರಾಗ- ರಾಗಿಣಿಗಳಿಗೆ ಹೇಳಿದ ರಸ-ಭಾವಗಳ ಯೋಗ್ಯ ಅಭಿವ್ಯಕ್ತಿಯಿಂದ ಉಂಟಾಗುವ ಆನಂದ ಶ್ರೋತೃ ಗಾಯಕ ಇವರಿಬ್ಬರಿಗೂ ಲಭಿಸಲೆಂದು ರಾಗವಿಂಗಡಣೆಯ ಈ ಪದ್ಧತಿಯ ಉದ್ದೇಶವೆಂಬಲ್ಲಿ ಎರಡು ಅಭಿಪ್ರಾಯಗಳಿಲ್ಲ. ಅಂತೆಯೇ ಶಾಸ್ತ್ರ ದೃಷ್ಟಿಯಿಂದ ಈ ದೃಷ್ಟಿ ಹಿಂದೆ ಬಿದ್ದಿದ್ದರೂ ಇದರ ಬುಡದಲ್ಲಿದ್ದ ತತ್ವಗಳಿಗೆ ಇಂದಿಗೂ ಮನ್ನಣೆ ಇದೆ. ಭತ್ತೀಸ್ ರಾಗಗಳು ರಾಗಗಳ ಸಂಖ್ಯೆ ಸ್ವರಪ್ರಸ್ತಾರ, ಹಾಡುವ ರೀತಿ

ಅಡಿ ಟಿಪ್ಪಣಿ :- ಭಾರತೀಯ ಸಂಗೀತದ ಉನ್ನತ ಲೇಖನ ಹಾಗೂ ಲೇಖಕರ ಅಭಿಪ್ರಾಯವನ್ನಾದರಿಸಿ..........

ಇತ್ಯಾದಿಗಳಲ್ಲಿ ಅನೇಕ ಮಾರ್ಪಾಟುಗಳಾಗಿದ್ದರೂ ಕನ್ನಡ ನಾಡಿನಲ್ಲಿ ಬತ್ತೀಸ್ ರಾಗಗಳೆಂಬ ಮಾತು ಇಂದಿಗೂ ನಾಣ್ಣುಡಿಯ ರೂಪದಲ್ಲಿ ಇಂದಿಗೂ ಬಳಕೆಯಲ್ಲಿ ಬಂದಿದೆ.

ಎನ್ನಕಾಯವಾ ದಂಡಿಗೆಯ ಮಾಡಯ್ಯಾ

ಬತ್ತೀಸ್ ರಾಗವ ಹಾಡಯ್ಯಾ ಎಂದು ಬಸವೇಶ್ವರರು 12ನೇ ಶತಮಾನದಲ್ಲಿಯೇ ಹಾಡಿದ್ದಾರೆ. ಅವರ ನಂತರರದವನಾದ ಹರಿಹರ, ಲಿಂಗಾರ್ಚನೆ ಮತ್ತು ರಗಳೆಗಳಲ್ಲಿ 'ಬತ್ತೀಸರಾಗದಿಂ ತುರ್ತು ನಿಮ್ಮಂ ಪಾಡಿ' ಎಂದು ಹಂಪೆಯ ವಿರುಪಾಕ್ಷನ ಪೂಜಾ ವೈಭವವನ್ನು ಬಣ್ಣಿಸಿರುವನು. ಆದರೂ ಈ ಬತ್ತೀಸ್ ರಾಗಗಳಾವವು? ಇವುಗಳ ಪುರಸ್ಕರ್ತರಾರು, ಇವೇ ಮೊದಲಾದವು ಇಂದಿಗೂ ಸಮಸ್ಯೆಯಾಗಿದೆ. ಸಂಗೀತವೊಂದು ಪರಿವರ್ತನಶೀಲ ಕಲೆ. ಸಂಗೀತವನ್ನು ಕುರಿತು ನಮ್ಮಲ್ಲಿ ಹೇರಳ ಸಾಹಿತ್ಯವಿದ್ದರೂ ಅದರಲ್ಲಿಯ ಅದಿಕಾಂಶ ವಿವರಗಳು ಬಳಕೆಯ ಅಭಾವದ ಮೂಲಕ ತಿಳಿಯದಾಗಿದೆ. ಕೆಲವುಗಳ ಸ್ವರೂಪ ಊಹಾತ್ಮಕವಾಗಿದೆ. ಮಿಕ್ಕವು ಕಲಾವಿದರ ಪ್ರತಿಭೆ ಮತ್ತು ಶಾಸ್ತ್ರವೆತ್ತ ರಸಿಕರ ಊಹಾತ್ಮಕವಿದೆ. ಅಭಿರುಚಿ, ಸೌಂದರ್ಯ ದೃಷ್ಟಿಗಳ ಪ್ರಭಾವದಿಂದ ತಮ್ಮ ಮೂಲಸ್ವರೂಪವನ್ನು ಬದಲಿಸಿಕೊಂಡಿದೆ. ಬತ್ತೀಸರಾಗದ ವಿಷಯವಾದರೂ ಇದಕ್ಕೆ ಹೊರತಾಗಿಲ್ಲ.

ಗಾನ ಸಾಮ್ರಾಟ್ ಪದ್ಮ ವಿಭೂಷಣ



ಪಂಡಿತ್ ಭೀಮಸೇನ್ ಜೋಶಿ

ಅಧ್ಯಾಯ ೧೧

ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಸಂಗೀತಸಂಸ್ಥೆಗಳು

<u>ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಸಂಗೀತ ಸಂಸ್ಥೆಗಳು</u>

<u>ಕಲಾಸಂಗಮ</u> : ಹೊನ್ನಾವರ ತಾಲೂಕಿನ ಸುತ್ತಮುತ್ತಲಿನ ಅಭಿಮಾನಿಗಳ ಹೆಮ್ಮೆಯ ಸಂಸ್ಥೆಯಾದ ಕಲಾಸಂಗಮವು ೧೯೮೫ ನವೆಂಬರ್ ೯ ರಂದು ಹೊನ್ನಾವರದಲ್ಲಿ ಉದಯಿಸಿತು. ಉತ್ತರಕನ್ನಡ ಜಿಲ್ಲೆ ಈ ಶತಮಾನದ ಉತ್ತರಾರ್ಧದಲ್ಲಿ ಶಾಸ್ತ್ರೀಯ ಸಂಗೀತದ ದೃಷ್ಟಿಯಲ್ಲಿ ಹಿಂದೆ ಬಿದ್ದಿತ್ತು . ಜಿಲ್ಲೆಯಲ್ಲಿನ ಅನೇಕ ಭಾಗಗಳಲ್ಲಿ ಸಂಗೀತಾಸಕ್ತರು ಬಹಳ ಸಂಖ್ಯೆಯಲ್ಲಿದ್ದರೂ, ಸಹ ಸಂಗೀತಸಂಘಟನೆಯ ಕೊರತೆ ಈ ಜಿಲ್ಲೆಯಲ್ಲಿತ್ತು. ಸಂಗೀತ ಕೇಳಲೋಸುಗ ಮುಂಬೈ, ಪುಣಾಗಳಿಗೂ ಜನರು ಹೋಗುತ್ತಿದ್ದರು. ಈ ಸಂಗೀತಾಭಿಮಾನಿಗಳೇ ತಮ್ಮ ಜಿಲ್ಲೆಗಳ ತಾಲೂಕಾಸ್ಥಳಗಳಲ್ಲಿ ಒಂದು ಸಂಗೀತಸಂಘಟನೆ ಹಾಗೂ ಸಂಗೀತಶಾಲೆಯನ್ನು ಸ್ಥಾಪಿಸಲು ನಿರ್ಧರಿಸಿ ಕಾರ್ಯಪ್ರವೃತ್ತರಾದರು. ಇಂತಹ ಸಂಘಟನೆಯಿಂದಲೇ ಇಂದು ಹೊನ್ನಾವರದ ಕಲಾಸಂಗಮ ಅಸ್ತಿತ್ವದಲ್ಲಿ ಬಂದಿದೆ. ೧೯೮೫ ರಲ್ಲಿ ಪ್ರೊ. ಎಸ್. ಆರ್ ನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ಉಸ್ತಾದ್ ಭಾಲೆಖಾನ್ ಅವರಿಂದ ಉದ್ಘಾಟನೆಗೊಂಡಿತು. ಹೊನ್ನಾವರದ ಸುತ್ತಮುತ್ತಲಿನ ಜನರ ಸಂಗೀತಾಸಕ್ತರ ಹಸಿವನ್ನು ತಣಿಸಲು ಹಾಗೂ ಉತ್ತಮ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಯೋಜನೆಯಿಂದ ಈ ಸಂಸ್ಥೆ ಉದಯಿಸಿತು

<u>ಉದ್ದೇಶ:</u> ಉತ್ತಮ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಿ ಜನರಲ್ಲಿ ಸಂಗೀತದ ಶುದ್ಧ ಅಭಿರುಚಿಯನ್ನು ಹೆಚ್ಚಿಸುವುದು. ಜನರಿಗೆ ಉತ್ತಮ ಶ್ರೋತೃಗಳಾಗುವಂತೆ ಸಂಸ್ಕಾರ ನೀಡುವುದು ಯುವ ಕಲಾವಿದರಿಗೆ ಕಾರ್ಯಕ್ರಮವನ್ನೀಯಲು ವೇದಿಕೆಯನ್ನು ಏರ್ಪಡಿಸುವುದು. ಇಲ್ಲಿಯ ಜನತೆಗೆ ಉತ್ತಮ ಸಂಗೀತಗಾರರ ಪರಿಚಯ ಹಾಗೂ ಅವರ ಹಾಡಿನ ಹಾಗೂ ವಾದನಗಳ ಪರಿಚಯ ಮಾಡುವುದು. ಯುವಕರಲ್ಲಿರುವ ಸಂಗೀತಾಭಿರುಚಿಯನ್ನು ಬಡಿದೆಬ್ಬಿಸಿ ಅವರು ಸದಭಿರುಚಿಯ ಸಂಗೀತ ಕಲಿಯಲು, ಕೇಳಲು ಅನುಕೂಲವಾಗುವಂತೆ ಸಂಗೀತಶಾಲೆಯನ್ನು ಸ್ಥಾಪನೆ ಮಾಡುವುದು. ಸಂಗೀತ ಪರೀಕ್ಷೆಗಳ ಕೇಂದ್ರ ತೆರೆದು ವಿದ್ಯಾರ್ಥಿಗಳನ್ನು ಪರೀಕ್ಷಾ ದೃಷ್ಟಿಯಲ್ಲಿಯೂ ತರಬೇತುಗೊಳಿಸುವುದು ಮುಂತಾದವುಗಳು ಕಲಾಸಂಗಮದ ಸ್ಥಾಪನೆಯ ಉದ್ದೇಶಗಳಾಗಿವೆ.

ಕಲಾ ಸಂಗಮ ಆಶ್ರಯದಲ್ಲಿ ೧೯೮೫ ರಿಂದ ೧೯೯೫ ರವರೆಗೆ ಜರುಗಿದ ಸಂಗೀತ ಕಚೇರಿಗಳು

೧೯೮೫	**ಉದ್ಘಾಟನಾ ಸಮಾರಂಭ**	ಅಧ್ಯಕ್ಷತೆ ಪ್ರೊ. ಎಸ್. ಆರ್. ನಾರಾಯಣರಾವ್
೯ ನವಂಬರ	ಸೀತಾರವಾದನ ಕಚೇರಿ	ಉಸ್ತಾದ ಬಾಲೇಖಾನ, ಶ್ರೀ ರವೀದ್ರ ಯಾವಗಲ್
೧೮೮೬	ಗಾಯನ	ಪದ್ಮಶ್ರೀ ಪಂಃ ಬಸವರಾಜ ರಾಜಗುರು
೧೧ ಜನವರಿ		ಶ್ರೀ ವಸಂತಃ ಕನಕಾಪುರ, ಶ್ರೀ ವಿಶ್ವನಾಥ ನಾಕೋಡ
೨೩ ಫೆಬ್ರುವರಿ	**ಸಂಗೀತ ಸೌರಭ**	ಹಿಂದುಸ್ತಾನೀ ವಿವಿಧ ಘರಾಣೆಗಳ ವಿವರಣಾತ್ಮಕ
		ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆ.
	ವಿದ್ವಾಂಸರು, ಕಲಾವಿದರು	ಡಾಃ ಬಿಂದುಮಾಧವ ಪಾಠಕ, ಪ್ರೊ.ಎ.ಯು.ಪಾಟೀಲ
		ಪಂ. ಇಂದುಧರ ನಿರೋಡಿ, ಪಂಃ ವಿನಾಯಕ ತೊರವಿ
		ಪಂ. ಪಂಚಾಕ್ಷರಿ ಮತ್ತಿಕಟ್ಟಿ, ಪಂಃ ಸಂಗಮೇಶ್ವರ
		ಗುರವ, ಶ್ರೀ ಸುಧಾಂಶು ಕುಲಕರ್ಣಿ, ಪ್ರೊ. ರಾಚಯ್ಯ
		ಹಿರೇಮಠ, ಪ್ರೊ. ಸಂಜೀವ ಪೋತದಾರ,
		ಶ್ರೀ ನಂದಿಕೇಶ್ವರ ಗುರವ
		ಶ್ರೀ ಸುಧೀಂದ್ರ ಮುಜುಮದಾರ
೧೩ ಜುಲೈ	ಗಾಯನ, ವಾದನ	ಶ್ರೀ ಜಿ.ಆರ್.ಭಟ್ಟ ಬಾಳೆಗದ್ದೆ, ಪ್ರೊ. ಆರ್.ವಿ.
		ಹೆಗಡೆ ಸಿರ್ಸಿ (ಸಿತಾರಿಸ್ಟ್) ಶ್ರೀ ಷ. ಗವಾಯಿಗಳು,
		ಶ್ರೀ ಎನ್.ಎಸ್. ಹೆಗಡೆ
೧೯೮೭	ಗಾಯನ, ವಾದನ	ಶ್ರೀ ಶೇಟ ಕಮಲಾಕರ ಗಂಗೊಳ್ಳಿ, ಶ್ರೀ ಎಂ. ಮೋಹನ
೧೭ ಜನವರಿ		ರಾವ್ ಮಂಗಳೂರು(ವ್ಯಾಲಿನ್)

೧೪ ಫೆಬ್ರುವರಿ	ಗಾಯನ	ಶ್ರೀ ಅನಂತ ತೇರದಾಳ, ಶ್ರೀ ಷಡಕ್ಷರೀ ಗವಾಯಿಗಳು
		ಶ್ರೀ ಜಿ.ಕೆ.ಹೆಗಡೆ
೨೭ ಜೂನ್	ಗಾಯನ	ಶ್ರೀ ಪರಮೇಶ್ವರ ಹೆಗಡೆ, ಶ್ರೀ ಷಡಕ್ಷರೀ ಗವಾಯಿಗಳು
		ಶ್ರೀ ಜಿ.ಕೆ.ಹೆಗಡೆ
೨೬ ಸಪ್ಟಂಬರ	ಗಾಯನ, ವಾದನ	ಶ್ರೀ ಚಂದ್ರಶೇಖರ ಪುರಾಣಿಕಮಠ, ಪ್ರೊ. ಶಂಭು ಭಟ್ಟ
		ಕಡತೋಕಾ (ಬಾನ್ಸುರಿ) ಶ್ರೀ ಷ. ಗ.
		ಶ್ರೀಎನ್.ಎಸ್. ಹೆಗಡೆ
೧೪ ನವಂಬರ	ಗಾಯನ	ಶ್ರೀ ಗಣಪತಿ ಭಟ್ಟ ಹಾಸಣಗಿ, ಶ್ರೀ ಷ. ಗ.,
		ಶ್ರೀ ಜಿ.ಜಿ. ಹೆಗಡೆ ಹಿತ್ಲಳ್ಳಿ
೧೯೮೮		ಶ್ರೀ ಸೋಮನಾಥ ಮರಡೂರ, ಶ್ರೀಮತಿ ಎಂ. ವಾಣಿ
೧೪ ಫೆಬ್ರುವರಿ	ಗಾಯನ, ನೃತ್ಯ	ಶ್ರೀ ರವಿ ಕೊಡ್ಲಗಿ, ಶ್ರೀ ಷ.ಗ. ಕೂಚುಪುಡಿ ನೃತ್ಯಃ
		ಲಕ್ಷ್ಮೀ ರಾಜಾಮಣಿ ನೃತ್ಯಶಾಲೆ ಬೆಂಗಳೂರು
೩೦ ಮಾರ್ಚ್	ಗಾಯನ, ವಾದನ	ಶ್ರೀಮತಿ ಪ್ರಣತಿ ಮ್ಹಾತ್ರೆ, ಶ್ರೀ ಬಂಡೋಪಂತ ಸೋಲಾ
		ಪುರಕರ (ಕ್ಲಾರಿಯೋನೆಟ್) ಕುಮಾರಿ ಕೇಲಕರ,
		ಶ್ರೀ ರಮಾಕಾಂತ ದೇವಳಕರ.
೧೧ ಸಪ್ಟಂಬರ	ಗಾಯನ	ಶ್ರೀ ಎಂ.ಪಿ.ಹೆಗಡೆ ಪಡಿಗೆರೆ, ಶ್ರೀ ಷ. ಗ.
		ಶ್ರೀ ಗಜಾನನ ಹೆಗಡೆ ಗಿಳಿಗುಂಡಿ
೧೯೮೯		ಶ್ರೀ ಡಿ.ಕುಮಾರದಾಸ ಶ್ರೀ ಷ.ಗ. ಶ್ರೀ ಎನ್.ಎಸ್.
೧೫ ಜನವರಿ	ಗಾಯನ	ಹೆಗಡೆ
೧ ಮೇ	ಗಾಯನ	ಶ್ರೀ ಕಮಲಾಕರ ಭಟ್ಟ, ಶ್ರೀಪ್ರಭಾಕರ ಭಟ್ಟ ಕೆರೆಕೈ
		ಸಹೋದರರು ಆಗ್ರಾ ಘರಾಣೆ ಜುಗಲಬಂದಿ
		ಶ್ರೀ ಸಿ.ಕೆ.ಹೆಗಡೆ, ಶ್ರೀ ನಾರಾಯಣ ಹಿರೇಗಂಗೆ.

೬ ಮೇ	ಗಾಯನ	ಪಂಃ ಪ್ರಭಾಕರ ಕಾರೇಕರ, ಶ್ರೀ ಅರವಿಂದ ಥತ್ತೆ,
		ಶ್ರೀ ಸುಭಾಸ ಕಾಮತ,
೧೬ ಅಕ್ಟೋಬರ	ಗಾಯನ	ಶ್ರೀಮತಿ ಗಂಗೂಬಾಯಿ ಹಾನಗಲ್, ಕು. ಕೃಷ್ಣಾ
		ಹಾನಗಲ್, ಪಂಃ ಶೇಷಗಿರಿ ಹಾನಗಲ್, ಶ್ರೀ ಷಡಕ್ಷರೀ
		ಗವಾಯಿಗಳು.
೧೯೯೦		ಶ್ರೀ ಚಂದ್ರಶೇಖರ ಪುರಾಣಿಕಮಠ, ಶ್ರೀ ಟಿ.ವಿ.ಕಬಾಡಿ
೧೧ ಮಾರ್ಚ್	ಗಾಯನ, ವಾದನ	ಮತ್ತು ಪ್ರೊ. ಶಂಭು ಭಟ್ಟ ಕಡತೋಕಾ (ವೈಲಿನ್,
		ಬಾನ್ಸುರಿ ಜುಗಲಬಿಂದಿ) ಪಂಃ ಜಿ.ಎನ್ . ಪರ್ವತಿಕರ,
		ಶ್ರೀ ಎನ್.ಎಸ್. ಹೆಗಡೆ
೮ ಮೇ	ಶಾಸ್ತ್ರೀಯ ನೃತ್ಯ	ನಾಗಮಣಿ ಮತ್ತು ಬಳಗ ಬೆಂಗಳೂರು
೧೯೯೧		ಶ್ರೀ ಎಮ್.ವೆಂಕಟೇಶ ಕುಮಾರ, ಶ್ರೀ ಷ. ಗ.
೨೫ ಫೆಬ್ರುವರಿ	ಗಾಯನ	ಶ್ರೀ ರಘುನಾಥ ನಾಕೋಡ
೩೦ ಮಾರ್ಚ	ವಾದನ	ಶ್ರೀ ನಿತ್ಯಾನಂದ ಹಳದೀಪುರ (ಬಾನ್ಸುರಿ)
		ಶ್ರೀ ಸದಾನಂದ ನಾಯಂಪಲ್ಲಿ
೨೬ ಅಕ್ಟೋಬರ	ಗಾಯನ	ಶ್ರೀಮತಿ ಪಿ. ತಾರಾ ರಾವ್, ಶ್ರೀ ಅಶೋಕ
		ಹುಗ್ಗಣ್ಣವರ್, ಶ್ರೀ ಷ.ಗ. ಶ್ರೀ ಎನ್.ಎಸ್. ಹೆಗಡೆ
೨೨ ಡಿಸೆಂಬರ	ಗಾಯನ	ಶ್ರೀ ಶ್ರೀಪಾದ ಹೆಗಡೆ ಕಂಪ್ಲಿ, ಶ್ರೀ ವಸಂತ ಕನಕಾಪುರ
		ಶ್ರೀ ಗೋಪಾಲಕೃಷ್ಣ ಹೆಗಡೆ
೧೯೯೨		ಪಂಃ ಪಂಚಾಕ್ಷರಿ ಮತ್ತಿಕಟ್ಟಿ, ಶ್ರೀ ಷ. ಗ. ಶ್ರೀ ಶಂಕರ
೨೮ ಮಾರ್ಚ್	ಗಾಯನ	ಕವಡೀಮಟ್ಟಿ
೨೨ ಅಗಸ್ಟ	ಗಾಯನ	ಶ್ರೀ ಮಹಾಬಲೇಶ್ವರ ಭಾಗ್ವತ, ಶ್ರೀ ಷ. ಗ.ಶ್ರೀ ರಂಗ ಪೈ

೨೭ ಸಪ್ಟಂಬರ	ವಾದನ	ಶ್ರೀ ಜಯಂತ ಕುಮಾರದಾಸ್ (ಸಿತಾರ) ಶ್ರೀ ರವೀಂದ್ರ ಯಾವಗಲ್
೧೯೯೩		ಶ್ರೀ ರಾಜು ಹೆಗ್ಗಾರ (ಜಲತರಂಗ) ಶ್ರೀ ಪಿ. ಜಿ.
೧೦ ಜನವರಿ	ವಾದನ, ಗಾಯನ	ಪಾಟೀಲ (ಗಾಯನ) ಶ್ರೀ ಎನ್.ಎಸ್. ಹೆಗಡೆ ಶ್ರೀ ರಾಜು ಹೆಬ್ಬಾರ, ಶ್ರೀ ಷ. ಗ.
೨೧ ಮಾರ್ಚ	ವಾದನ	ಡಾಃ ಬಿಂದುಮಾಧವ ಪಾಠಕ (ಸಿತಾರ್) ಶ್ರೀ ಆರ್.ವಿ. ಹೆಗಡೆ, ಶ್ರೀ ಅಲ್ಲಮಪ್ರಭು ಕಡಕೋಳ
೨೬ ಮಾರ್ಚ	ಗಾಯನ	ಶ್ರೀ ಚಂದ್ರಶೇಖರ ಪುರಾಣಿಕಮಠ, ಶ್ರೀ ರಂಚಯ್ಯ ಹಿರೇಮಠ ಶ್ರೀ ಎಂ.ಜಿ. ಹೆಗಡೆ ಉದ್ದೇಮನೆ
೭ ಅಗಸ್ಟ	ಗಾಯನ	ಶ್ರೀ ಬಸವರಾಜ ಗೋನ್ವಾಳು, ಶ್ರೀ ಷ. ಗ. ಶ್ರೀ ಎನ್.ಎಸ್. ಹೆಗಡೆ
೧೯೯೪		
೨೩ ಜನವರಿ	ಪ್ರಬಂಧ ಪ್ರಸ್ತುತಿ	ವಿಚಾರ ಸಂಕಿರಣಃ
೨೪	ಹಾಗೂ	ಕರ್ನಾಟಕ, ಹಿಂದೂಸ್ಥಾನೀ ಸಂಗೀತ ಸಾಮ್ಯ, ವೈಷಮ್ಯ
೨೫	ಗಾನಪ್ರಾತ್ಯಕ್ಷಿಕೆ	ಹಾಗೂ ಗೀತ ಪ್ರಕಾರಗಳು.
	ವಿದ್ವಾಂಸರು ಹಾಗೂ	ಶ್ರೀ ಆರ್.ವಿ. ಶೇಷಾದ್ರಿ ಗವಾಯಿಗಳು.
	ಕಲಾವಿದರುಃ	ಕು. ಶ್ಯಾಮಲಾ ಭಾವೆ, ಡಾಃ ಟಿ. ಶಚೀದೇವಿ ಶ್ರೀಮತಿ ಉಮಾ ಗೋಪಾಲಸ್ವಾಮಿ. ಶ್ರೀ ಎನ್.ಜಿ. ಮೋಡಕ, ಶ್ರೀ ಕಮಲಾಕರ ಭಟ್ಟ, ಶ್ರೀ ಟಿ.ಎನ್. ಪದ್ಮನಾಭನ್, ಕು. ಹಂಸಿನೀ ನಾಗೇಂದ್ರ, ಶ್ರೀ ಎಂ.ಪಿ. ಹೆಗಡೆ, ಶ್ರೀ ದಂಡಾಪುರ, ಶ್ರೀ ಎಂ.ಟಿ. ರಾಜಕೇಸರಿ, ಶ್ರೀ ವಿಶ್ವನಾಥ ನಾಕೋಡ. ಕು. ಸಂಗೀತಾ ಕಾಖಂಡಕಿ.

೧೩ ಅಗಸ್ಟ	ಗಾಯನ	ಶ್ರೀ ಮಾಧವ ಗುಡಿ, ಶ್ರೀ ಷ. ಗ. ಶ್ರೀ ಗೋಪಾಲಕೃಷ್ಣ ಹೆಗಡೆ
೨೪ ಡಿಸೆಂಬರ	ವಾದನ	ಶ್ರೀ ಶ್ರೀನಿವಾಸ ಜೋಶಿ (ಸಿತಾರ) ಶಶಿಕಾಂತ ಕುಲಕರ್ಣಿ
೧೯೯೫		ಅಧ್ಯಕ್ಷರುಃ ಶ್ರೀ ವ್ಹಿ.ಎಸ್. ಸೊಂದೆ.
೧೯ ಮಾರ್ಚ	ದಶಮಾನೋತ್ಸವ	ಉದ್ಘಾಟಕರುಃ ಶ್ರೀ ವೆಂಕಟೇಶ ಗೋಡಖಿಂಡಿ ಮು. ಅಃ ಶ್ರೀ ಎನ್.ಜಿ.ಕೊಲ್ಲೆ ಸನ್ಮಾನಃ- ಶ್ರೀ ಗಣಪತಿ ಭಟ್ಟ ಹಾಸಣಗಿ
	ಅಹೋರಾತ್ರಿ ಸಂಗೀತ ಕಾರ್ಯಕ್ರಮ	ಶ್ರೀ ಗಣಪತಿ ಭಟ್ಟ ಹಾಸಣಗಿ, ಶ್ರೀ ವೆಂಕಟೇಶ ಗೋಡ ಖಿಂಡಿ (ಕೊಳಲು, ಗಾಯನ) ಶ್ರೀ ಪರಮೇಶ್ವರ ಹೆಗಡೆ, ಶ್ರೀ ಜಿ. ಆರ್. ಭಟ್ಟ , ಶ್ರೀ ಎಂ.ಪಿ. ಹೆಗಡೆ ಶ್ರೀ ಅಶೋಕ ಹುಗ್ಗಣ್ಣವರ್, ಶ್ರೀ ಶಂಭು ಭಟ್ಟ (ಬಾನ್ಸುರಿ) ಶ್ರೀ ನಾರಾಯಣ ಪಂಡಿತ (ವಾಯೋಲಿನ್) ಶ್ರೀಆರ್.ವಿ.ಹೆಗಡೆ (ಸಿತಾರ) ಶ್ರೀ ಷಡಕ್ಷರಿ ಗವಾಯಿ ಶ್ರೀ ಎಂ. ಜಿ. ಹೆಗಡೆ ಉದ್ದೇಮನೆ ಶ್ರೀ ಎನ್. ಎಸ್ . ಹೆಗಡೆ, ಶ್ರೀ ಗೋಪಾಲಕೃಷ್ಣ ಹೆಗಡೆ, ಶ್ರೀ ಜಿ.ಕೆ.ಹೆಗಡೆ, ಶ್ರೀ ರಾಜು ಹೆಬ್ಬಾರ.
೧೧ ಸಪ್ಟಂಬರ	ಗಾಯನ	ಶ್ರೀ ಮಿಲಿಂದ ಚಿತ್ತಾ, ಶ್ರೀ ಷ. ಗ. ಶ್ರೀ ಗೋಪಾಲಕೃಷ್ಣ ಹೆಗಡೆ
೨೨ ಅಕ್ಟೋಬರ	ಗಾಯನ	ಪಂಃ ವಿನಾಯಕ ತೊರವಿ, ಶ್ರೀ ಷ.ಗ. ಶ್ರೀ ಬಿ. ಎಸ್. ಹೆಗಡೆ
೧೯೯೬		ಶ್ರೀ ಜಯತೀರ್ಥ ಮೇವುಂಡಿ, ಶ್ರೀ ಷ. ಗ.
೨೧ ಜನವರಿ	ಗಾಯನ	ಶ್ರೀ ರಾಜು ಹೆಬ್ಬಾರ

ಟಿಪ್ಪಣಿ :- ಕಲಾ ಸಂಗಮದ ದಶಮಾನೋತ್ಸವದ ಸ್ಮರಣ ಸಂಚಿಕೆಯನ್ನಾದರಿಸಿ.....................

ಸೌರಭ :-

ಉತ್ತರಕನ್ನಡ ಜಿಲ್ಲೆಯ ಕುಮಟೆಯಲ್ಲಿ ೧೯೬೭ ರಲ್ಲಿ ಸ್ಥಾಪಿತಗೊಂಡ ಸಂಸ್ಥೆ ಸಾಹಿತ್ಯ ರಂಗದ ಮೇರುಪರ್ವತ ಜ್ಞಾನಪೀಠ ಪ್ರಶಸ್ತಿಪುರಸ್ಕೃತ ಡಾ: ಶಿವರಾಮ ಕಾರಂತರಂತಹ ಮೇಧಾವಿಗಳನ್ನು ಡಾ: ಗಂಗುಬಾಯಿ ಹಾನಗಲ್ಲರವರಂತಹ ಸಂಗೀತಗಾರರನ್ನು ಸನ್ಮಾನಿಸಿ, ಪುರಸ್ಕರಿಸಿ ಅವರ ಅಮೂಲ್ಯ ಸಲಹೆ, ಸೂಚನೆಗಳನ್ನು ಪಡೆದುಕೊಂಡು ಯಶಸ್ವಿಯಾಗಿ ಮುನ್ನಡೆಯುತ್ತಿದೆ. ರಾಜಕೀಯ ಲಾಭದ ಆಶೆಯಿಲ್ಲದ ಶ್ರೇಷ್ಠವಾದ ಭಾರತೀಯಸಂಸ್ಕೃತಿಯ ಶಾಸ್ತ್ರೀಯಸಂಗೀತ, ಸಾಹಿತ್ಯ, ಯಕ್ಷಗಾನ ಮುಂತಾದ ಕಲೆಗಳನ್ನು ಪ್ರದರ್ಶಿಸಲೊಸುಗ ತನ್ಮೂಲಕ ಭಾರತಿಯ ಸಂಸ್ಕೃತಿಯ ಮಹೋನ್ನತ ಪರಂಪರೆಯನ್ನು ಮುನ್ನಡೆಸಬೇಕಾದ ಮಹತ್ತರ ಜವಾಬ್ದಾರಿ ಹಾಗೂ ಸಾಮಾಜಿಕ ಕಾಳಜಿಗೆಸ್ಪಂದಿಸಿ ಉದ್ಭವಗೊಂಡಿತು. ಈ ಸಂಸ್ಥೆಯವರು ಸಾರ್ವಜನಿಕ ಸಹಕಾರಕ್ಕಾಗಿ ಮಾಡಿದ ಮನವಿಯ ವಿವರ ಹೀಗಿದೆ.

ಸದುದ್ದೇಶ ಸಾಧನೆಗೆ ಸಹಕಾರಕ್ಕಾಗಿ ಮನವಿ

ನಾವಿಂದು ಸಾಮಾಜಿಕ ನೀತಿ ನಡತೆಗಳಲ್ಲಿ , ಸಾಂಸ್ಕೃತಿಕ ಗುಣಮಟ್ಟಗಳಲ್ಲಿ ನೈತಿಕ ಕುಸಿತವನ್ನು ಕಾಣುತ್ತಿದ್ದೇವೆ ಈ ಪರಿಸ್ಥಿತಿಯನ್ನು ದೆಹಲಿ ವಿಶ್ವ ವಿದ್ಯಾಲಯದ ಮಾಜಿ ಉಪಕುಲಪತಿಗಳೂ, ಖ್ಯಾತ ಶಿಕ್ಷಣ ತಜ್ಞರೂ ಆದ ಪ್ರೊ : ಉಪೇಂದ್ರ ಬಕ್ಷಿಯವರು ನಾಗರಿಕತೆಯಲ್ಲಿ ತಲೆದೋರಿರುವ ಬಿಕ್ಕಟ್ಟು ಎಂದು ಬಣ್ಣಿಸಿದ್ದಾರೆ. ಇಂದಿನ ಪರಿಸ್ಥಿತಿ ಅದಕ್ಕಿಂತಲೂ ಗಂಭೀರವಾದದ್ದು. ಜಗಕ್ಕೆಲ್ಲ ಆಧ್ಯಾತ್ಮಿಕ ಸಂದೇಶವನ್ನು ಸಾರುವ ಭಾರತೀಯ ಸಂಸ್ಕೃತಿಯ ಮಹೋನ್ನತ ಪರಂಪರೆಯನ್ನು ಮುನ್ನಡೆಸಬೇಕಾದ ಯುವಪೀಳಿಗೆಯು ಅತೀವ ಸಾಂಸ್ಕೃತಿಕ ಗೊಂದಲಕ್ಕೊಳಗಾಗಿದೆ. ಸಮೂಹ ಮನೋರಂಜನಾ ಉದ್ದಿಮೆಯಲ್ಲಿ ಹೆಚ್ಚುತ್ತಿರುವ ವ್ಯಾಪಾರೀಕರಣ (ವಾಣಿಜ್ಯೀಕರಣ) ಹಾಗೂ ತನ್ನಿಮಿತ್ತ ಕಲೆ ಮತ್ತು ಸಂಸ್ಕೃತಿಯಲ್ಲಿಯ ಅಶ್ಲೀಲತೆಯು ಪರಿಶುದ್ಧವಾದ ಕಲಾಭಿರುಚಿಯನ್ನು ಬಹ್ವಂಶ ನಾಶಮಾಡಿದೆ. ನೆಲೆ ತಪ್ಪಿಸಿದೆ. ಸಮಾಜ ಮತ್ತು ಕಲೆಯ ಪರಿಣತರೋರ್ವರು ಮಂಡಿಸಿರುವಂತೆ ಶಾಸ್ತ್ರೀಯ ಸಂಗೀತ, ಸಾಹಿತ್ಯ ನೃತ್ಯಾದಿ (ಕಲೆಗಳತ್ತ) (ಜನರ) ಒಲವನ್ನು ಹೆಚ್ಚಿಸುವದು. ತತ್‌ಕ್ಷಣದ ಅವಶ್ಯಕತೆಯಾಗಿದೆ. ಸಾಹಿತ್ಯ ಮತ್ತು ಕಲೆಗಳಿಗೆ ಅಪಾಯಕರವಾಗಿ ಕುಂದುತ್ತಿರುವ ಸದಭಿರುಚಿಗೆ

ಟಿಪ್ಪಣಿ :- ಸೌರಭ ಸಂಸ್ಥೆಯ ವಿಶ್ವಸ್ಥರಾದ ಶ್ರೀ ಡಿ.ಜಿ. ಹೆಗಡೆಯವರಿಂದ ಸಂಗ್ರಹಿಸಿದ್ದು..............

ಮೂಕ ಪ್ರೇಕ್ಷಕರಾಗುಳಿಯುವ ಬದಲು ಸಂಸ್ಕೃತಿಯ ಕ್ಷೇತ್ರದಲ್ಲಿಯ ಅನುಚಿತ ಆಗುಹೋಗುಗಳನ್ನು ತಡೆಗಟ್ಟುವದು ನಮ್ಮ ಕರ್ತವ್ಯ. ಈ ದಿಸೆಯಲ್ಲಿ ಪ್ರಯತ್ನಶೀಲರಾದ ನಾವು ಕೆಲವರ ಚಿಂತನ ಮಂಥನದ ಫಲವಾಗಿ ೧೯೯೬ ರಲ್ಲಿ ಉದಯಿಸಲು ಕಾರಣವಾಯಿತು ಈ ಸದಭಿರುಚಿಯ ಸಂಸ್ಕೃತಿಕ ಸಂಗಮ "ಸೌರಭ" . ಈ ೩ ವರ್ಷಗಳಲ್ಲಿ ಸೌರಭವು ಶ್ರೇಷ್ಠವಾದ ಭಾರತೀಯ ಸಂಸ್ಕೃತಿಯ, ಶಾಸ್ತ್ರೀಯ ಸಂಗೀತ, ಸಾಹಿತ್ಯ ಯಕ್ಷಗಾನಾದಿ ಕಾರ್ಯಕ್ರಮಗಳನ್ನು ರಾಷ್ಟ್ರೀಯ, ಅಂತರರಾಷ್ಟ್ರೀಯ ಖ್ಯಾತಿಯಕಲಾವಿದರಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಂಘಟಿಸಿದೆ. ಜನ ಸಾಮಾನ್ಯರ ಮತ್ತು ಕಲಾಭಿಜ್ಞರ ಏಕ ಪ್ರಕಾರದ ಪ್ರಶಂಸೆ, ಪ್ರೀತ್ಯಾದರಗಳಿಂದ ಪುಳಕಿತರಾಗಿದ್ದೇವೆ ಎನ್ನಲು ಹರ್ಷಿಸುತ್ತೇವೆ. ನಮ್ಮಿ ವಿನಮ್ರ ಪ್ರಯತ್ನಕ್ಕೆ ದೊರೆತಿರುವ ಜನ ಸ್ಪಂದನವು ಸೌರಭಕ್ಕೆ ಇನ್ನೂ ಹೆಚ್ಚಿನ ದೃಢ ಮತ್ತು ಸುಭದ್ರ ತಳಹದಿಯನ್ನೊದಗಿಸಲು ನಮ್ಮನ್ನು ಉತ್ತೇಜಿಸಿದೆ. ಸೌರಭದ ಸುಸೂತ್ರ (ಸರಾಗ) ಮತ್ತು ಪರಿಣಾಮಕಾರಿ ಕಾರ್ಯಾಚರಣೆಗಾಗಿ ರೂಪಾ ೧೦ ಲಕ್ಷದ ಶಾಶ್ವತ ನಿಧಿಯನ್ನು ಯೋಜಿಸಿದ್ದೇವೆ.

ಕಾರಣ ಈ ದಿಸೆಯಲ್ಲಿ ಸಾಂಸ್ಕೃತಿಕ ಪುನರುತ್ಥಾನದ ಆಂದೋಲನದಲ್ಲಿ ನಮ್ಮ ಸಹಭಾಗಿಗಳಾಗಲು ತಮ್ಮನ್ನು ವಿನಂತಿಸುತ್ತೇವೆ. ಸೌರಭದ ತೃತೀಯ ವಾರ್ಷಿಕೋತ್ಸವದ ನೆನಪಿಗಾಗಿ ಪ್ರಕಾಶಿಸಲ್ಪಡುವ ಕಲಾತ್ಮಕ ಸ್ಮರಣ ಸಂಚಿಕೆ ಸಾರ ಸೌರಭದಲ್ಲಿ ಜಾಹೀರಾತು ನೀಡುವದರ ಮೂಲಕ ಯಾ ಉದಾರ ದೇಣಿಗೆಯಿಂದ ನಿಮ್ಮ ಅಮೂಲ್ಯ ಬೆಂಬಲವನ್ನು ಒದಗಿಸಬಹುದು. ಮಹೋನ್ನತ ಭಾರತೀಯ ಪರಂಪರೆಯ ವಾರಸುದಾರರಾಗಿ (ವಿಶ್ವಸ್ಥರಾಗಿ) ತಮ್ಮ ಸಹಾಯ ಹಸ್ತವನ್ನು ಸೌರಭಕ್ಕೆ ಚಾಚುತ್ತೀರಿ ಎಂದು ಆಶಿಸುತ್ತೇವೆ.

ಉತ್ತರಕನ್ನಡ ಜಿಲ್ಲೆಯ ಎಲ್ಲಾ ಸಾಂಸ್ಕತಿಕ ಸಂಘಟಣೆಗಳ ರೂವಾರಿಗಳು ಇಲ್ಲಿನ ಸಂಗೀತಾಸಕ್ತ ಪ್ರಜ್ಞಾವಂತ ನಾಗರೀಕರೇ ಆಗಿದ್ದಾರೆ. ಜಿಲ್ಲೆಯ ಹಾಗೂ ಹೊರ ಜಿಲ್ಲೆಯ ದಾನಿಗಳು ಹಾಗೂ ಹಿತೈಶಿಗಳ ಧನ ಸಹಾಯ ಮತ್ತು ಸಹಕಾರದಿಂದ ಇಲ್ಲಿನ ಸಾಂಸ್ಕತಿಕ ಸಂಘಟನೆಗಳು ನಡೆಯುತ್ತಲಿವೆ. ಇಲ್ಲಿನ ಸಂಗೀತಗಾರರು, ಸಂಗೀತ ಸಂಘಟಕರ ಪಾತ್ರ ಸಾಂಸ್ಕತಿಕ ಸಂಘಟನೆಯಲ್ಲಿ ಅತ್ಯಂತ ಶ್ಲಾಘನೀಯವಾಗಿದೆ.

‘ಸೌರಭ ಸಂಘಟನೆ’ ನಡೆಸಿದ ಕಾರ್ಯಕ್ರಮಗಳ ವಿವರ

೧. ಸಂಗೀತ ಸೌರಭ	೧೦-೩-೯೬ ರವಿವಾರ ಶ್ರೀ ಶಾಂತಿಕಾ ಪರಮೇಶ್ವರೀ ಕಲ್ಯಾಣಮಂಟಪ ಗುಡಿಗಾರಗಲ್ಲಿ ಕುಮಟಾ	ಉದ್ಘಾಟನೆಃ ಶ್ರೀ ರಘುನಾಥ ನಾಕೋಡ ಮುಖ್ಯ ಅತಿಥಿಃ ಡಾಃಗೌರೀಶ ಕ್ಯಾಕಿಣಿ ಖ್ಯಾತ ಸಾಹಿತಿಗಳು	ಬಾನ್ಸುರಿವಾದನಃ ಪ್ರೊಃ ಎಸ್.ಶಂಭು ಭಟ್ಟ,ಕಡತೋಕ ತಬಲಾ ಸಾಥ್ಃ ಶ್ರೀ ರಾಜು ಹೆಬ್ಬಾರ್, ಕರ್ಕಿ ಗಾಯನಃ ಶ್ರೀಮತಿ ರೇಣುಕಾ ನಾಕೋಡ ತಬಲಾಃ ಶ್ರೀ ರಘುನಾಥ ನಾಕೋಡ ಹಾರ್ಮೋನಿಯಂಃ ಪ್ರೊಃ ಅಶೋಕ ಹುಗ್ಗಣ್ಣನವರ್ ತಬಲಾ ಸೋಲೋಃ ಶ್ರೀ ರಘುನಾಥ ನಾಕೋಡ
೨. ನಾದ ಸೌರಭ	೨೬-೫-೯೬ ರವಿವಾರ ಶ್ರೀ ಮಹಾಲಸಾ ನಾರಾಯಣೀ ಸಭಾಗ್ರಹ ಮೂರುಕಟ್ಟೆ, ಕುಮಟಾ	ಅಧ್ಯಕ್ಷತೆಃ ಡಾಃ ಅನಿಲ ಹೆಗಡೆ	ಗಾಯನಃ ಕುಃ ತನುಜಾ ದೀವಗಿ, ಮುಂಬಯಿ ತಬಲಾಃ ಶ್ರೀ ಗೋಪಾಲಕೃಷ್ಣ ಹೆಗಡೆ, ಕಲಭಾಗ ಹಾರ್ಮೋನಿಯಂಃಶ್ರೀಮತಿ ಇಂದೂಬಾಯಿ ಹೊನ್ನಾವರ ಶಾಸ್ತ್ರೀಯ ಗಾಯನಃ ಶ್ರೀ ಪರಮೇಶ್ವರ ಹೆಗಡೆ ಕಲಭಾಗ ತಬಲಾಃ ಶ್ರೀ ಗೋಪಾಲಕೃಷ್ಣ ಹೆಗಡೆ, ಕಲಭಾಗ ಹಾರ್ಮೋನಿಯಂಃ ಪ್ರೊಃ ಅಶೋಕ ಹುಗ್ಗಣ್ಣನವರ
೩. ಯಕ್ಷ ಸೌರಭ	೩೦-೯-೯೬ ರವಿವಾರ ಶಾಂತಿಕಾ ಪರಮೇಶ್ವರಿ ಕಲ್ಯಾಣ ಮಂಟಪ,ಕುಮಟಾ	ಮುಖ್ಯ ಅತಿಥಿಃ ಪ್ರೋಃ ಎಂ. ಗೋಪಾಲಾಚಾರ್ಯ,ಸಂಪಾದಕರು, ಸುಗುಣಮಾಲಾ ತ್ರೈಮಾಸಿಕ. ಸನ್ಮಾನ ಃಶ್ರೀ ಕೆರೆಮನೆ ಮಹಾಬಲ ಹೆಗಡೆ, ರಾಷ್ಟ್ರಪ್ರಶಸ್ತಿ ಪುರಸ್ಕೃತ ಯಕ್ಷಗಾನ ಕಲಾವಿದರು.	ಯಕ್ಷಗಾನ ಅಷ್ಟಾವಧಾನ ಅವಧಾನಿ ಃ ಡಾಃ ಕಬ್ಬಿನಾಲೆ ವಸಂತ ಭಾರದ್ವಾಜ ಶ್ರೀ ಕೆ.ಎಂ.ರಾಘವ ನಂಬಿಯಾರ್ ಪ್ರೋ ಃ ಎಂ.ಎ. ಹೆಗಡೆ, ಸಿದ್ದಾಪುರ, ಡಾಃ ಜಿ.ಎಸ್.ಹೆಗಡೆ, ಧಾರವಾಡ, ಪ್ರೋಃ ವಿ.ಆರ್. ಜೋಶಿ, ಕುಮಟಾ, ಡಾ ಃ ಜಿ.ಎಲ್.ಹೆಗಡೆ, ಕುಮಟಾ ಶ್ರೀ ವಿದ್ವಾನ್ ಗಣಪತಿ ಭಟ್ ಶ್ರೀ ಅನಂತ ಪದ್ಮನಾಭ ಪಾಠಕ್ ಶ್ರೀ ಮೋಹನ ಭಾಸ್ಕರ ಹೆಗಡೆ ಶ್ರೀ ನಂದಳಿಕೆ ಬಾಲಚಂದ್ರ ರಾವ್ ಶ್ರೀ ಗಜಾನನ ಹೆಗಡೆ ಕೋಣಾರೆ
೪. ನಾದ ಸೌರಭ ಸಹಯೋಗ ಜೇಸಿ ಮತ್ತು ನಾದಶ್ರೀ ಕುಮಟಾ	೯-೯-೯೬ ಸೋಮವಾರ	ಉದ್ಘಾಟನಃ ಪ್ರೋ.ಆರ್.ವಿ.ಹೆಗಡೆ ಶಿರಸಿ ಮುಖ್ಯಅತಿಥಿಗಳುಃ ಶ್ರೀ ಮೋಹನ ಶೆಟ್ಟಿ, ಪುರಸಭಾಧ್ಯಕ್ಷರು, ಕುಮಟಾ ಶ್ರೀ ವಿನಾಯಕ ಭಟ್, ಶಿರಸಿ	ಸಿತಾರ್‌ವಾದನಃ ಪ್ರೊಃ ಆರ್.ವಿ.ಹೆಗಡೆ, ಶಿರಸಿ ತಬಲಾಃ ಶ್ರೀ ಗೋಪಾಲಕೃಷ್ಣ ಹೆಗಡೆ ಗಾಯನಃ ಪ್ರೊಃ ಅಶೋಕ ಹುಗ್ಗಣ್ಣನವರ ತಬಲಾಃ ಶ್ರೀ ಗೋಪಾಲಕೃಷ್ಣ ಹೆಗಡೆ ಹಾರ್ಮೋನಿಯಂಃ ಶ್ರೀ ಷಡಕ್ಷರಿ ಗವಾಯಿಗಳು ಗಾಯನಃ ಕುಃ ಶಶಿಕಲಾ ಭಟ್ಟ ತಬಲಾಃ ಕುಃ ಸುರೇಶ ಭಟ್ಟ
೫. ಸಂಗೀತ ಸೌರಭ	ಶ್ರೀ ಮಂಕಿಕರ ಮನೆ ಕುಮಟಾ	ಅಧ್ಯಕ್ಷತೆ - ಡಾಃ ಕೆ.ಎನ್.ಬೈಲ್‌ಕೇರಿ	ಬಾನ್ಸುರಿ - ಪ್ರೊ. ಎಸ್.ಶಂಭು ಭಟ್ಟ ತಬಲಾ - ಶ್ರೀ ರಾಜು ಹೆಬ್ಬಾರ್, ಕರ್ಕಿ ಗಾಯನ ಪ್ರೋ ಅಶೋಕ ಹುಗ್ಗಣ್ಣನವರ್ ಹಾರ್ಮೋನಿಯಂ ಶ್ರೀ ಶಂಕರ ಹೆಗಡೆ ಗಾಯನ ಶ್ರೀ ಶೈಲೇಶ ಮಾವಿನಕುರ್ವಾ, ಮುಂಬಯಿ ತಬಲಾ ಃ ಶ್ರೀ ಶಂಕರ ಹೆಗಡೆ ಹಾರ್ಮೋನಿಯಂ ಪ್ರೋ ಃ ಅಶೋಕ ಹುಗ್ಗಣ್ಣನವರ್

ಟಿಪ್ಪಣಿ ಃ ಡಾಃ ಅನಿಲ ಹೆಗಡೆ, ಮೋಹನ ಹೆಗಡೆ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಸೌರಭ ಕುಮಟಾ ಇವರಿಂದ ಸಂಗ್ರಹಿಸಿದ್ದು

೬.ಭಕ್ತಿಗಾನ ಸೌರಭ	೨೬/೧೦/೯೬ ಗಿಬ್‌ಹೈಸ್ಕೂಲ್ ಕುಮಟಾ	ಸಾಯರು ವಿಷ್ಣು (ಕೇಶವ) ದೇವಸ್ಥಾನ ಸಹಾಯಾರ್ಥ	ಶ್ರೀ ಶ್ರೀ ಶ್ರೀ ವಿದ್ಯಾಭೂಷಣ ತೀರ್ಥ ಸ್ವಾಮಿಜಿ ,ಶ್ರೀ ಸುಬ್ರಮಣ್ಯ ಮಠ ಅವರಿಂದ
೭. ಯಕ್ಷನಾದ ಸೌರಭ	೧೬-೧-೯೭ ಪ್ರಗತಿ ವಿದ್ಯಾಲಯ,	ಮುಖ್ಯ ಅತಿಥಿಃ ಡಾ. ಮಹೇಶ ಉಪನ್ಯಾಸಕರು, ಕುಮಟಾ ಮೂರೂರು ಕಲ್ಲಬ್ಬೆ	ಗಾಯನ ಶ್ರೀ ಜಿ.ಕೆ. ಹೆಗಡೆ, ಕಡಮನೆ ತಬಲಾ ಶ್ರೀ ರಾಜು ಹೆಬ್ಬಾರ್ ಕರ್ಕಿ ಹಾರ್ಮೋನಿಯಂ ಶ್ರೀ ಎಂ.ಜಿ. ಹೆಗಡೆ, ಮಾನೀರ ಬಾನ್ಸುರಿ ಶ್ರೀ ಸುರೇಶ ಭಟ್ಟ, ಕಡತೋಕಾ ತಬಲಾ ಶ್ರೀ ರಾಜು ಹೆಬ್ಬಾರ್ ಕರ್ಕಿ ತಾಳಮದ್ದಳೆ ಭೀಷ್ಮಪರ್ವ ಭಾಗವತರು ಶ್ರೀ ಸರ್ವೇಶ್ವರ ಹೆಗಡೆ, ಕೋಣಾರೆ ಮೃದಂಗ ಶ್ರೀ ನರಸಿಂಹ ಹೆಗಡೆ, ಮೂರೂರು ಅರ್ಥದಾರಿಗಳು ಃ ಶ್ರೀ . ಎನ್. ಎಸ್. ಹೆಗಡೆ ಶ್ರೀ ವಿಷ್ಣು ಭಟ್ಟ, ನಿಲ್ಕೋಡ್, ಡಾಃ ಜಿ.ಎಲ್.ಹೆಗಡೆ ಕೆರೆಮನೆ, ವೆಂಕಟಾ ಭಟ್ಟ , ಶ್ರೀ ಸೀತಾರಾಮ ಹೆಗಡೆ, ಚಂದು, ಶ್ರೀ ಕೆ.ಜಿ. ಭಟ್ಟ
	೧೭-೧-೯೭ ಶುಕ್ರವಾರ ಹಿ.ಪ್ರಾ. ಶಾಲೆ,ಕೂಜಳ್ಳಿ	ಮುಖ್ಯ ಅತಿಥಿಗಳುಃ ಶ್ರೀ ಸುಬ್ರಾಯ ಭಟ್ಟ, ಕೂಜಳ್ಳಿ, ಕೃಷಿಕರು	ಗಾಯನಃ ಪ್ರೊಃ ಅಶೋಕ ಹುಗ್ಗಣ್ಣನವರು ತಬಲಾಃ ಶ್ರೀ ಗೋಪಾಲಕೃಷ್ಣ ಹೆಗಡೆ ಹಾರ್ಮೋನಿಯಂಃ ಶ್ರೀ ಷಡಕ್ಷರಿ ಗವಾಯಿಗಳು. ತಾಳಮದ್ದಳೆ - ಪಂಚವಟಿ ಭಾಗವತರುಃ ಶ್ರೀ ಉಮೇಶ ಭಟ್ ಶ್ರೀ ನಾಗೇಂದ್ರಾ ಭಟ್ ಮೃದಂತಃ ಶ್ರೀ ಅನಂತ ಪದ್ಮನಾಭ ಪಾಠಕ ಅರ್ಥಧಾರಿಗಳುಃ ಶ್ರೀ ಮಹಾಬಲ ಹೆಗಡೆ ಕೆರಮನೆ, ಶ್ರೀ ವೆಂಕಟಾಚಲ ಭಟ್, ಕೆರಮನೆ, ಶ್ರೀ ಜಿ.ಕೆ.ಹೆಗಡೆ, ಶ್ರೀ ಮೋಹನಹೆಗಡೆ, ಶ್ರೀ ತಿಮ್ಮಣ್ಣ ಭಟ್ ಕೂಜಳ್ಳಿ ಶ್ರೀ ಕೆ.ಟಿ.ಭಟ್
	೧೮-೧-೯೭ ಶನಿವಾರ ಶ್ರೀ ಕಾಂಚಿಕಾಂಬಾ ಕಲ್ಯಾಣ ಮಂಟಪ ಬಾಡ	ಅಧ್ಯಕ್ಷತೆಃ ಪ.ಪ. ನಿರ್ಮಲಾನಂದ ಸ್ವಾಮಿಗಳು, ಶ್ರೀಕ್ಷೇತ್ರ ಗೋರೆ ಸನ್ಮಾನಃ ಶ್ರೀ ವಿ.ಜಿ.ಹೆಗಡೆ ನಿವೃತ್ತ ಶಿಕ್ಷಕರು ಖ್ಯಾತ ಯಕ್ಷಗಾನ ಅರ್ಥ ಧಾರಿಗಳು ಇವರಿಗೆ	ಗಾಯನಃ ಶ್ರೀ ಕೆರೆಮನೆ ಮಹಾಬಲ ಹೆಗಡೆ ತಬಲಾಃ ಶ್ರೀ ವಿಷ್ಣು ಹೆಗಡೆ ಕೆರೆಮನೆ ಹಾರ್ಮೋನಿಯಂಃ ಶ್ರೀ ಷಡಕ್ಷರಿ ಗವಾಯಿಗಳು ತಾಳಮದ್ದಳೆ - ಕರ್ಣಪರ್ವ ಭಾಗವತರುಃ ಶ್ರೀ ಗೋಪಾಲಕೃಷ್ಣ ಭಟ್, ಕಡತೋಕಾ ಮೃದಂಗಃ ಶ್ರೀ ಶ್ರೀಪಾದ ಭಟ್, ಕಡತೋಕಾ ಅರ್ಥಧಾರಿಗಳುಃ ಶ್ರೀ ಕೆರೆಮನೆ ವೆಂಕಟಾಚಲ ಭಟ್ ಶ್ರೀ ಎನ್. ಎಸ್.ಭಟ್, ಡಾಃ ಜಿ. ಎಲ್. ಹೆಗಡೆ ಶ್ರೀ ಆರ್.ಆರ್. ಹೆಗಡೆ ಶಿರಸಿ, ಶ್ರೀ ಕೆ.ಟಿ.ಭಟ್ ಶ್ರೀ ಎನ್.ಆರ್. ಭಟ್ಟಕೆರೆ, ಹಾಗೂ ಶ್ರೀ ಆರ್.ಎಸ್. ಭಟ್ ಕೋಟೆ
	೧೯-೧-೯೭ ರವಿವಾರ ಶ್ರೀ ಶಾಂತಿಕಾ ಪರಮೇಶ್ವರಿ ಕಲ್ಯಾಣ ಮಂಟಪ ಕುಮಟಾ	ಅಧ್ಯಕ್ಷತೆ- ಶ್ರೀ ಆರ್.ಎಸ್ ಭಾಗ್ವತ, ಮಾಜಿ ವಿಧಾನಪರಿಷತ್ ಸದಸ್ಯರು	ಗಾಯನಃ ಕು. ಸಂಪದಾ ಭಟ್, ಧಾರವಾಡ ತಬಲಾಃ ಶ್ರೀ ರಾಜು ಹೆಬ್ಬಾರ್, ಕರ್ಕಿ ಹಾರ್ಮೋನಿಯಂಃ ಶ್ರೀ ಗಣೇಶ ದೇಸಾಯಿ

			<u>ತಾಳಮದ್ದಳೆ- ಭೀಷ್ಮ ವಿಜಯ</u> ಭಾಗವತರುಃ ಶ್ರೀ ನೆಟ್ಟೂರು ನಾರಾಯಣ ಭಾಗವತರು ಮೃದಂಗಃ ಶ್ರೀ ಕೃಷ್ಣ ಯಾಜಿ, ಇಡಗುಂಜಿ ಅರ್ಥಧಾರಿಗಳುಃ ಶ್ರೀ ಕೆರೆಮನೆ ಮಹಾಬಲಹೆಗಡೆ ಶ್ರೀ ಕೆರೆಮನೆ ಶಂಭು ಹೆಗಡೆ, ಶ್ರೀ ಮಾನೀರು ಈಶ್ವರ ಹೆಗಡೆ, ಶ್ರೀ ಮೋಹನ ಹೆಗಡೆ, ಹೆರವಟ್ಟಾ ಶ್ರೀ ಶಿವಾನಂದ ಹೆಗಡೆ ಕೆರೆಮನೆ, ಶ್ರೀ ನಾರಾಯಣ ಯಾಜಿ, ಸಾಲೇಬೈಲು.

<u>ದ್ವಿತೀಯ ವರ್ಷದ ಕಾರ್ಯಕ್ರಮಗಳು</u>

೧. ಸಂಗೀತ ಸೌರಭ	ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ನಾಗಪುರ ಇವರ ಸಹಯೋಗದಲ್ಲಿ ಶ್ರೀ ಶಾಂತಿಕಾ ಪರಮೇಶ್ವರಿ ಕಲ್ಯಾಣ ಮಂಟಪ ಕುಮಟಾ	ಮುಖ್ಯ ಅತಿಥಿಗಳುಃ ಡಾಃ ಕೆ. ಗಣಪತಿ ಭಟ್ ಧಾರವಾಡ	ಹಿಂದೂಸ್ತಾನೀ ಗಾಯನಃ ಉದಯೋನ್ಮುಕ ಕಲಾವಿದರಾದ ः ೧. ಕು. ಶಶಿಕಲಾ ಭಟ್, ಮೂರೂರು ೨. ಕು. ಗಾಯತ್ರಿ ಕಲ್ಯಾಣಪುರ ೩. ಶ್ರೀ ಅನಂತ ಹೆಬ್ಬಾರ, ಭಟ್ಕಳ ದೊಡ್ಡಾಟ
೨. ಸನ್ಮಾನ ಮತ್ತು ಯಕ್ಷಗಾನ	೧೪.೨.೯೮ ಶನಿವಾರ ಯಕ್ಷ ಸಂಪದ, ಬಾಡ ಇವರ ಸಹಯೋಗದಲ್ಲಿ ಶ್ರೀ ಕಾಂಚಿಕಾಂಬಾ ಕಲ್ಯಾಣ ಮಂಟಪ ಬಾಡ	ಅಧ್ಯಕ್ಷತೆಃ ಶ್ರೀ ಶ್ರೀ ಶ್ರೀ ರಾಮಾನಂದ ಸ್ವಾಮೀಜಿ,ದೀವಗಿ, ಕುಮಟಾ ಮುಖ್ಯ ಅತಿಥಿಗಳುಃ ಶ್ರೀ ದಿವಾಕರ ಹೆಗಡೆ, ಧಾರವಾಡ	ಸನ್ಮಾನಃ ಶ್ರೀ ನಾರಾಯಣ ಹಾಸ್ಯಗಾರ ಕರ್ಕಿ ಯಕ್ಷಗಾನಃ ಮಾಗಧವಧೆ
೩. ಸಂಸ್ಕೃತಿ ಸಂಭ್ರಮ	೧೦.೩.೯೮ ಶ್ರೀ ಶಾಂತಿಕಾ ಪರಮೇಶ್ವರಿ ಕಲ್ಯಾಣ ಮಂಟಪ, ಕುಮಟಾ ಕನ್ನಡ & ಸಂಸ್ಕೃತಿ ಇಲಾಖೆ ಕಾರವಾರ ಇವರಸಹಯೋಗ	ಅಧ್ಯಕ್ಷತೆಃ ಡಾಃ ಅನಿಲ ಹೆಗಡೆ	ಪ್ರವಚನಃ ಶ್ರೀ ಟಿ.ಜಿ.ಭಟ್ಟ, ಹಾಸಣಗಿ ವಿಷಯಃ ಸಂಗೀತ ಹಿಂದುಸ್ತಾನೀ ಸಂಗೀತಃ ಶ್ರೀ ಅಶೋಕ ಹುಗ್ಗಣ್ಣನವರ ನೃತ್ಯರೂಪಕಃ ಮಯೂರ ಪುಸ್ತಕ ಶ್ರೀ ವ್ಯಾ.ಕೆ.ಸಾಯಿಬಾಬಾ ಸಂಗಡಿಗರಿಂದ
೪. ದ್ವಿತೀಯ ವಾರ್ಷಿಕೋತ್ಸವ ವಿಶೇಷ ಯಕ್ಷಗಾನ ಸೌರಭ	೨೬.೪.೯೮ ರವಿವಾರ ಶ್ರೀ ಶಾಂತಿಕಾ ಪರಮೇಶ್ವರಿ ಕಲ್ಯಾಣ ಮಂಟಪ, ಕುಮಟಾ	ಅಧ್ಯಕ್ಷತೆಃ ಡಾಃ ಆರ್. ಗಣೇಶ ಶತಾವಧಾನಿ ಉದ್ಘಾಟಕರುಃ ಶ್ರೀ ಜಗದೀಪ ಸುವರ್ಣ	<u>ಯಕ್ಷ ಸೌರಭ</u> ತಾಳಮದ್ದಳೆಃ ಭೀಷ್ಮಪರ್ವ ಕಲಾವಿದರುಃ ಶ್ರೀ ನೆಟ್ಟೂರು ನಾರಾಯಣ ಭಾಗವತರು ಶ್ರೀ ಅನಂತ ಪದ್ಮನಾಭ ಪಾಠಕ್ ಶ್ರೀ ಮಹಾಬಲ ಹೆಗಡೆ, ಕೆರೆಮನೆ ಶ್ರೀ ವೆಂಕಟಾಚಲ ಭಟ್ಟ, ಕೆರೆಮನೆ ಶ್ರೀ ಆರ್. ಗಣೇಶ ಶ್ರೀ ಎನ್.ಎಸ್.ಭಟ್ಟ, ಬಾಡ ಡಾಃ ಜಿ.ಎಲ್. ಹೆಗಡೆ ಶ್ರೀ ವಸಂತ ಭಟ್ಟ, ತುಚ್ಚಮಠ <u>ಗಾನ ಸೌರಭಃ ಹಿದೂಸ್ತಾನೀ ಗಾಯನಃ</u> ಪ್ರೊಃ ಎಂ. ವೆಂಕಟೇಶ ಕುಮಾರ ಧಾರವಾಡ ತಬಲಾಃ ಶ್ರೀ ರಘುನಾಥ ನಾಕೋಡ ಹಾರ್ಮೋನಿಯಂಃ ಶ್ರೀ ಷಡಕ್ಷರಿಗವಾಯಿಗಳು

ತೃತೀಯ ವರ್ಷದ ಕಾರ್ಯಕ್ರಮಗಳು			
೧. ಯಕ್ಷನಾದ ಸೌರಭ (ಸರಣಿ ಕಾರ್ಯಕ್ರಮ)	೧೭.೧೨.೯೮ ಗುರುವಾರ ಶ್ರೀ ನಂದಿಕೇಶ್ವರ ದೇವಾಲಯ, ಕಲ್ಲಬ್ಬೆ	ಅಧ್ಯಕ್ಷತೆ ಡಾ॥ ಎಸ್. ವಿ.ಭಟ್ಟ ಮೂರೂರು	ಸಂಗೀತ ಶ್ರೀಮತಿ ತಾರಾ ಜಿ. ಭಟ್ಟ ತಬಲಾ॥ ಶ್ರೀ ಜಿ.ಕೆ. ಹೆಗಡೆ ಹಾರ್ಮೋನಿಯಂ॥ ಶ್ರೀಮತಿ ಲತಾ ಹೆಗಡೆ ತಾಳಮದ್ದಳೆ॥ ವಾಲಿಮೋಕ್ಷ ಭಾಗವತರು॥ ಶ್ರೀ ತಿಮ್ಮಪ್ಪ ಬಾಳೇಹದ್ದ ಮೃದಂಗ॥ ಶ್ರೀ ಗಣಪತಿ ಕಟ್ಟಾಳೆ ಅರ್ಥಧಾರಿಗಳು॥ ಶ್ರೀ ಕೆರೆಪ್ಪೆ ಕೃಷ್ಣ ಭಟ್ಟ ಡಾ॥ ಟಿ.ಟಿ. ಹೆಗಡೆ, ಶ್ರೀ ಸೀತಾರಾಮ ಚಂದು ಶ್ರೀ ಜಿ.ಜಿ. ವರ್ಧನ ಡಾ॥ ಜಿ.ಎಲ್. ಹೆಗಡೆ
೨. ಯಕ್ಷ ನಾದ ಸೌರಭ	೧೮.೦೨.೯೯ ಶುಕ್ರವಾರ ಶ್ರೀ ಕಾಂಚಿಕಾಂಬಾ ಕಲ್ಯಾಣ ಮಂಟಪ ಬಾಡ	ಅಧ್ಯಕ್ಷತೆ ಶ್ರೀ ಶಂಭು ಹೆಗಡೆ ಕೆರೆಮನೆ ಸನ್ಮಾನ ಶ್ರೀ ಕಿನ್ನೀರು ನಾರಾಯಣ ಹೆಗಡೆ	ಸಂಗೀತ ಪ್ರೊ॥ ಕೃಷ್ಣಮೂರ್ತಿ ಭಟ್ಟ ಆಕಾಶವಾಣಿ ಕಲಾವಿದರು ತಬಲಾ॥ ಪ್ರೊ॥ ಅನಂತಮೂರ್ತಿ ಶಾಸ್ತ್ರಿ ಹಾರ್ಮೋನಿಯಂ॥ ಶ್ರೀ ನಾಗರಾಜ ಹೆಗಡೆ ತಾಳದ್ದಳೆ॥ ಭೀಷ್ಮ ವಿಜಯ ಭಾಗವತರು॥ ಶ್ರೀ ಸರ್ವೇಶ್ವರ ಹೆಗಡೆ ಮೃದಂಗ॥ ಶ್ರೀ ನರಸಿಂಹ ಹೆಗಡೆ ಅರ್ಥಧಾರಿಗಳು॥ ಶ್ರೀ ಶಂಭು ಹೆಗಡೆ ಕೆರೆಮನೆ ಶ್ರೀ ಈಶ್ವರ ಹೆಗಡೆ, ಮಾನೀರು ಶ್ರೀದಿವಾಕರ ಹೆಗಡೆ, ಡಾ॥ ಜಿ.ಎಲ್.ಹೆಗಡೆ ಶ್ರೀ ಕೆ.ಟಿ.ಭಟ್ಟ, ಶ್ರೀ ಎಸ್.ಆರ್. ಭಟ್ಟ
	೦೯.೦೨.೯೯ ಶನಿವಾರ ಹಿರಿಯ ಪ್ರಾಥಮಿಕ ಶಾಲೆ, ಕೂಜಳ್ಳಿ	ಅಧ್ಯಕ್ಷತೆ ಶ್ರೀ ಎಸ್.ವಿ.ಭಟ್ಟ, ಕೂಜಳ್ಳಿ	ಸಂಗೀತ ಶ್ರೀ ಎಮ್. ಪಿ. ಹೆಗಡೆ ಶಿರಸಿ ತಬಲಾ॥ ಶ್ರೀ ಎನ್.ಎಸ್. ಹೆಗಡೆ ಹಾರ್ಮೋನಿಯಂ॥ ಶ್ರೀ ಎಂ.ಜಿ.ಹೆಗಡೆ ಉದ್ದೆಮನೆ ತಾಳಮದ್ದಳೆ! ಕರ್ಣಪರ್ವ ಭಾಗವತರು॥ ಶ್ರೀ ಸರ್ವೇಶ್ವರ ಹೆಗಡೆ ಮೃದಂಗ॥ ಶ್ರೀ ನರಸಿಂಹ ಹೆಗಡೆ ಅರ್ಥಧಾರಿಗಳು॥ ಶ್ರೀ ಮಹಾಬಲ ಹೆಗಡೆ ಕೆರೆಮನೆ ಶ್ರೀ ಎನ್.ಎಸ್. ಭಟ್ಟ, ಶ್ರೀ ಜಿ.ಕೆ. ಹೆಗಡೆ ಶ್ರೀ ಮೋಹನ ಹೆಗಡೆ, ಶ್ರೀ ನಾರಾಯಣ ಯಾಜಿ, ಶ್ರೀ ಕೆ.ಟಿ.ಭಟ್ಟ

೩.ಯಕ್ಷ ನಾದ ಸೌರಭ	ರವಿವಾರ ೨೦.೧೨.೯೯ ಹವ್ಯಕ ಸಭಾಮಂಟಪ ಮೂರೂರು ರಸ್ತೆ ಕುಮಟಾ	ಅಧ್ಯಕ್ಷತೆ ಡಾಃ ದೀಪಕ ನಾಯಕಕ ಕುಮಟಾ	ಸಂಗೀತ ಶ್ರೀ ಜಿ.ಆರ್. ಭಟ್ಟ, ಬಾಳೇಗದ್ದೆ ತಬಲಾಃ ಶ್ರೀ ಜಿ.ಕೆ.ಹೆಗಡೆ ಹಾರ್ಮೋನಿಯಂಃ ಶ್ರೀ ನಾಗರಾಜ ಹೆಗಡೆ ತಾಳಮದ್ದಳೆಃ ಸುಧನ್ವಮೋಕ್ಷ ಭಾಗವತರುಃ ಶ್ರೀ ಜಿ.ಎಸ್.ಭಟ್ಟ, ಕಡ್ತೋಕಾ ಮೃದಂಗಃ ಶ್ರೀ ಶ್ರೀಪಾದ ಭಟ್ಟ, ಕಡ್ತೋಕಾ ಅರ್ಥಧಾರಿಗಳುಃಪ್ರೊಃಎಂ.ಎಲ್. ಸಾಮಗ ಪ್ರೊಃ ಎಂ.ಎ.ಹೆಗಡೆ, ಸಿದ್ದಾಪುರ ಶ್ರೀ ಶ್ರೀಪಾದ ಹೆಗಡೆ, ಹಡಿನಬಾಳ ಶ್ರೀ ನಾರಾಯಣ ಭಟ್ಟ, ಸಂತೇಗುಳಿ ಶ್ರೀ ಸುಬ್ರಹ್ಮಣ್ಯ ಮೂರೂರು ಶ್ರೀ ಜಿ.ಎಸ್.ಹೆಗಡೆ, ಕಡತೋಕಾ
೪. ಸಂಗೀತ ಸೌರಭ	೧೦.೧.೧೯೯೯ ರವಿವಾರ ಶ್ರೀ ಶಾಂತಿಕಾ ಪರಮೇಶ್ವರಿ ಕಲ್ಯಾಣ ಮಂಟಪ, ಕುಮಟಾ	ಮುಖ್ಯ ಅತಿಥಿಗಳು ಶ್ರೀ ಆರ್.ಎಸ್. ಕಾಮತ್ ಕುಮಟಾ	ಸಂಗೀತ ಶ್ರೀಮತಿ ಸಂಧ್ಯಾ ಹೆಗಡೆ ತಬಲಾಃ ಶ್ರೀ ಮಧು ಕುಡಾಲ್‌ಕರ ಹಾರ್ಮೋನಿಯಂಃ ಶ್ರೀ ಎಸ್.ವಿ.ಪಾಟೀಲ ಸಂಗೀತ ಡಾಃ ಭಾರತಿ ವೈಶಂಪಾಯನ , ಕೊಲ್ಲಾಪುರ ತಬಲಾಃ ಶ್ರೀ ಮಹೇಶ ದೇಸಾಯಿ ಹಾರ್ಮೋನಿಯಂಃ ಶ್ರೀ ರವೀಂದ್ರ ಕಾಟೋಟಿ, ಬೆಳಗಾಂ.
೫. ಭಾರತದರ್ಶನ ಸೌರಭ	೨೧.೨.೧೯೯೯ ರವಿವಾರ ಹವ್ಯಕ ಸಭಾಮಂಟಪ ಕುಮಟಾ	ಮುಖ್ಯ ಅತಿಥಿಗಳುಃ ಶ್ರೀ ಅನಂತಕುಮಾರ ಹೆಗಡೆ ಮಾಜಿ ಸಂಸದರು	ಭಾರತ ದರ್ಶನ ಉಪನ್ಯಾಸಃ ಶ್ರೀ ವಿದ್ಯಾನಂದ ಶೆಣೈ, ಬೆಂಗಳೂರು



ಸಂಗೀತ ಗೆಳೆಯರ ಬಳಗ ಹೊನ್ನಾವರ

೧೯೯೮ ರಲ್ಲಿ ಸ್ಥಾಪಿತಗೊಂಡ ಸಂಗೀತ ಗೆಳೆಯರಬಳಗ ಉತ್ತಮವಾಗಿ ನಡೆಯುತ್ತಿದೆ. ೧೯೯೮ ರಲ್ಲಿ ಅಂತರ್‌ರಾಷ್ಟ್ರೀಯ ಖ್ಯಾತಿಯ ಹಾರ್ಮೋನಿಯಂ ವಾದಕ ಪಂ. ತುಳಸಿದಾಸ ಬೋರ್ಕರ್ ಅವರನ್ನು ಹಾಗೂ ಪಂ. ತಾರಾನಾಥರ ಶಿಷ್ಯ ಪಂ ಮೋಹನ ಬಳವಳ್ಳಿಯವರನ್ನು ಹೋನ್ನಾವರಕ್ಕೆ ಕರೆಯಿಸಿ ಅವರ ಬವ್ಯ ಪರಂಪರೆಯನ್ನು ಹಾಗೂ ಸಂಗೀತವನ್ನು ಹೊನ್ನಾವರದ ಜನತೆಗೆ ಉಣಬಡಿಸಿದ ಕೀರ್ತಿ ಈ ಸಂಗೀತ ಗೆಳೆಯರಬಳಗದ್ದು.

ಶಾಸ್ತ್ರೀಯ ಸಂಗೀತದ ಘನತೆ ಗೌರವ ಸಂಸ್ಕೃತಿ ಪರಂಪರೆಯನ್ನು ಮುಂದುವರಿಸುವ ಸದುದ್ದೇಶದಿಂದ ಹುಟ್ಟಿಕೊಂಡಿತು. ಈ ಗೆಳೆಯರ ಬಳಗ. ರಾಜಕೀಯ ಲಾಭದ ಉದ್ದೇಶವಿರದ. ಗೌರವಪರಂಪರೆಯನ್ನು ಮುಂದುವರಿಸಿಕೊಂಡು ಬರುವಲ್ಲಿನ ಇವರ ಈ ಪ್ರಯತ್ನಕ್ಕೆ ಸಾರ್ವಜನಿಕರಿಂದ ತನು ಮನ ಧನಗಳ ಆಶೀರ್ವಾದವನ್ನು ಬಯಸಿ, ವಿನಂತಿಸಿದೆ.

ಭಾರತೀಯ ಸಂಸ್ಕೃತಿ, ಕಲೆ, ಪರಂಪರೆಯನ್ನು ಉಳಿಸಿ, ಬೆಳೆಸಿ ಸುಸಂಸ್ಕೃತ ನಾಗರೀಕ ಪ್ರಜ್ಞೆಯನ್ನು ಬೆಳೆಸಲೋಸುಗ ಇರುವ ಇವರ ಕಾಳಜಿಗೆ, ಇವರು ಪಟ್ಟ ಶ್ರಮ ಮಾಡಿದಪ್ರಯತ್ನ ಅಭಿನಂದನೀಯ.

ಸಂಗೀತ ಗೆಳೆಯರಬಳಗದ ಕಾರ್ಯಕಾರೀ ಸದಸ್ಯರು

ಶ್ರೀ ಪ್ರೊ. ಶಂಭು ಭಟ್ಟ ಕಡತೋಕಾ

ಶ್ರೀ ರಾಜು ಹೆಬ್ಬಾರ ಕರ್ಕಿ,

ಶ್ರೀ ಪ್ರೊ. ಕೃಷ್ಣಮೂರ್ತಿ ಭಟ್ಟ, ಹೊನ್ನಾವರ

ಶ್ರೀ ಗೋಪಾಲಕೃಷ್ಣ ಹೆಗಡೆ ಕಲಭಾಗ

ಶ್ರೀ ಆರ್. ಡಿ. ಕಲ್ಯಾಣಪುರ, ಹೊನ್ನಾವರ

ಪಂ. ಬಸವರಾಜ ರಾಜಗುರು ಸಂಗೀತ ಪ್ರತಿಷ್ಠಾನ (ರ) ಹಾಸಣಗಿ ಯಲ್ಲಾಪುರ (ಉ.ಕ.)

೧೯೯೨ ರಿಂದ ಬಸವರಾಜ ರಾಜಗುರುಗಳ ಹಿರಿಯ ಶಿಷ್ಯರಾದ ಶ್ರೀ ಗಣಪತಿ ಭಟ್ಟ ಅವರ ನೇತೃತ್ವದಲ್ಲಿ ಹಾಸಣಗಿಯಲ್ಲಿ ಈ ಪ್ರತಿಷ್ಠಾನ ಸ್ಥಾಪನೆಯಾಗಿದೆ. ಪ್ರತಿವರ್ಷವೂ ಸಂಗೀತ ಸಮ್ಮೇಲನವನ್ನು ಏರ್ಪಡಿಸುತ್ತಬಂದ ಈ ಸಂಸ್ಥೆ ದೇಶದ ಮಹಾನ್‌ಕಲಾಕಾರರನ್ನು ಈ ಪುಟ್ಟ ಗ್ರಾಮಕ್ಕೆ ಕರೆಯಿಸಿ ಅವರ ಸಂಗೀತಕಾರ್ಯಕ್ರಮವನ್ನೇರ್ಪಡಿಸುತ್ತಿದೆ. ೧೯೯೨ ರಲ್ಲಿ ಮೆಗ್ಸೆಸ್ ಪ್ರಶಸ್ತಿ ಪುರಸ್ಕೃತ ಶ್ರೀ ಕೆ.ವಿ. ಸುಬ್ಬಣ್ಣ ಅವರ ಹಿರಿತನದಲ್ಲಿ ಪದ್ಮಭೂಷಣ ಶ್ರೀಮತಿ ಡಾಃ ಗಂಗೂಬಾಯಿ ಹಾನ್‌ಗಲ್ ಇವರಿಂದ ಉದ್ಘಾಟನೆಗೊಂಡು ಮೂರ್ತಸ್ವರೂಪ ಪಡೆಯಿತು. ಅನೇಕ ಸತ್ ಸಂಕಲ್ಪ ಕನಸುಗಳೊಂದಿಗೆ ಜನ್ಮತಳೆದ ಈ ಪ್ರತಿಷ್ಠಾನ ವರ್ಷದಿಂದ ವರ್ಷಕ್ಕೆ ತನ್ನ ಒಂದೊಂದೇ ಕನಸನ್ನು ನನಸುಮಾಡುತ್ತ ಸಾಗುತ್ತಿದೆ.

೧. ನಿಃಶುಲ್ಕವಾಗಿ ಈ ಭಾಗದಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಕಲಿಸಬೇಕೆಂಬ ಇಚ್ಛೆ ಸಂಗೀತ ಶಾಲೆಯ ಆರಂಭದಿಂದ ಈಡೇರಿದೆ. ನಿರ್ದಿಷ್ಟವಾಗಿ ಸಾಗುತ್ತಿದೆ.

೨. ರಾಷ್ಟ್ರ ಮಟ್ಟದ ಸಂಗೀತ ದಿಗ್ಗಜರನ್ನು ಈ ಭಾಗದ ಸಂಗೀತ ಪ್ರೇಮಿಗಳಿಗೆ ಪರಿಚಯಿಸಬೇಕೆಂಬ ಉದ್ದೇಶಕ್ಕೆ ಅನುಗುಣವಾಗಿ ಎರಡನೇ ವರ್ಷವೇ ಪಂಡಿತ ಭೀಮಸೇನ ಜೋಶಿಯವರನ್ನು ಕರೆಸಲಾಯಿತು. ಡಾಃ ಶಿವರಾಮಕಾರಂತರ ಅಧ್ಯಕ್ಷತೆಯಲ್ಲಿ ಜರುಗಿದ ಸುಮಾರು ೧೫ ಸಾವಿರ ಜನ ಸೇರಿದ ೧೯೯೩ ರ ಪ್ರತಿಷ್ಠಾನದ ವಾರ್ಷಿಕೋತ್ಸವ ಅಭೂತಪೂರ್ವ ಕಾರ್ಯಕ್ರಮವೆಂದು ನಾಡಿನಾದ್ಯಂತದ ಪತ್ರಿಕೆಗಳು ಮುಕ್ತ ಕಂಠದಿಂದ ಹೊಗಳಿವೆ. ವ್ಯಷ್ಠಿ-ಸಮಷ್ಠಿಗಳ ಅನನ್ಯ ಸಂಗಮವಾದ ಈ ಸಂಗೀತೋತ್ಸವದಲ್ಲಿ ಈ ಪ್ರದೇಶ ಒಂದಾಗಿ ದುಡಿದಿದೆ. ತನ್ಮೂಲಕ ಹೊಸ ಪ್ರಜ್ಞೆಯನ್ನು, ಹೊಸ ಜನ್ಮವನ್ನೇ ಪಡೆದಂತಹ ಅನುಭವವನ್ನು ಪಡೆದಿದೆ.

ಶ್ರೀ ಗಣಪತಿ ಭಟ್ಟರ ಸಾಧನೆಯನ್ನು ಗುರುತಿಸಿ ನಮ್ಮ ರಾಜ್ಯ ಸರಕಾರ ೧೯೯೩ ರಲ್ಲಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಪುರಸ್ಕರಿಸಿದ್ದು ಅಭಿಮಾನದ ಸಂಗತಿ. ಪಂ. ಗಣಪತಿ ಭಟ್ಟರ ನೇತೃತ್ವದಲ್ಲಿ ಒಂದುಕಮಿಟಿಯನ್ನು ನೇಮಿಸಿಕೊಂಡು ಈ ಪ್ರತಿಷ್ಠಾನ ಉತ್ತಮಕಾರ್ಯ ಮಾಡುತ್ತಿದೆ.

ಸ್ವರಸಂಗಮ ಕೂಜಳ್ಳಿ

ಶ್ರೀ ಎನ್.ಎಸ್. ಹೆಗಡೆ ಹಿರೇಮಕ್ಕಿ, ಷಡಕ್ಷರಿಗವಾಯಿ ಹಾಗೂ ಕೂಜಳ್ಳಿ ಊರನಾಗರಿಕರ ಸಹಕಾರದಿಂದ ಕುಮಟಾತಾಲೂಕ ಕೂಜಳ್ಳಿಯಲ್ಲಿ ಸಂಗೀತಶಾಲೆ ಹಾಗೂ ಸಾಂಸ್ಕೃತಿಕ ಸಂಘಟನೆ ಉತ್ತಮವಾಗಿ ೧೯೯೫ ರಿಂದ ಪ್ರಾರಂಭವಾಗಿದೆ. ಶ್ರೀ ಡಿ. ಕುಮಾರದಾಸ ಪಂ. ಪಂಚಾಕ್ಷರಿಸ್ವಾಮೀ ಮತ್ತೀಗಟ್ಟಿ, ಡಾಃ ಮುಕ್ತಾ ಮುಜುಮ್‌ದಾರ್, ರಘುಪತಿ ಹೆಗಡೆ ಮುಂತಾದ ಅನೇಕ ಕಲಾಕಾರರ ಸಂಗೀತಕಾರ್ಯಕ್ರಮವನ್ನೇರ್ಪಡಿಸಿದ ಹೆಗ್ಗಳಿಕೆ ಈ ಸ್ವರಸಂಗಮದ್ದಾಗಿದೆ.

ಸಂಗೀತಸುಧಾ ಸಿದ್ದಾಪುರ

ಸಿದ್ದಾಪುರದಲ್ಲಿ ಸಂಗೀತಸುಧಾ ಸಂಘಟನೆ ತರುಣಮಿತ್ರರೊಂದಿಗೆ ಪ್ರತೀತಿಂಗಳು ಒಂದು ಉತ್ತಮ ಸಂಗೀತಕಾರ್ಯಕ್ರಮವನ್ನು ನಡೆಸುತ್ತಬಂದಿದೆ. ಸಿದ್ದಾಪುರದಲ್ಲಿ ಶ್ರೀ ವಾಮನರಾವ್ ಬೆಟಗೇರಿ ಹಳೆಯತಲೆಮಾರಿನ ಸಂಗೀತೋಪಾಸಕರು. ಶ್ರೀ ಶಾಂತಾರಾಮ ಶಾಸ್ತ್ರಿ ಕುಳ್ವೆ, ಮೋಹನಹೆಗಡೆ ಹುಣಸೆಕೊಪ್ಪ, ಪ್ರಭಾಕರ ಭಟ್ ಕೆರೆಕೈ, ಶ್ರೀಪಾದ ಹೆಗಡೆ ಸೋಮನಮನೆ ಮುಂತಾದ ಕಲಾಕಾರರು ಇಲ್ಲಿ ಸಂಗೀತತರಗತಿಗಳನ್ನು ನಡೆಸಿಕೊಂಡು ಬಂದಿದ್ದಾರೆ.

ಸನಾತನ ಶಾಸ್ತ್ರೀಯ ಸಂಗೀತವಿದ್ಯಾಲಯ ಸಿರ್ಸಿ

ಸಂಗೀತಪ್ರಸಾರಯೋಜನೆಯಡಿಯಲ್ಲಿ ಸನಾತನ ಶಾಸ್ತ್ರೀಯ ಸಂಗೀತವಿದ್ಯಾಲಯ ಪ್ರತೀತಿಂಗಳು ಒಬ್ಬಯುವಕಲಾಕಾರರ ಹಾಗೂ ಒಬ್ಬನುರಿತ ಕಲಾಕಾರರ ಸಂಗೀತಕಾರ್ಯಕ್ರಮವನ್ನೇರ್ಪಡಿಸುತ್ತ ಬಂದಿದೆ. ಪಂ. ಜಿ.ಎಸ್.ಹೆಗಡೆಯವರ ಹಿರಿಯ ಶಿಷ್ಯ ಶ್ರೀ ಕಮಲಾಕರ ಭಟ್ಟರ ನೇತ್ರತ್ವದಲ್ಲಿ ಈ ಸಂಗೀತ ಸಂಸ್ಥೆ ಪ್ರತೀತಿಂಗಳು ಉತ್ತಮ ಕಾರ್ಯಕ್ರಮವನ್ನೇರ್ಪಡಿಸಿ ಸಂಗೀತವಿಷಯದಲ್ಲಿ ಒಂದುಕ್ರಾಂತಿಯನ್ನೇ ಎಬ್ಬಿಸಿದೆ. ಶ್ರೀ ಕಿರಣಭಟ್ಟ, ಕೃಷ್ಣಮೂರ್ತಿ ಹೆಗಡೆ, ಲಲಿತಾ ಹಿರೇಗಂಗೆ, ನಾರಾಯಣ ಹಿರೇಗಂಗೆ, ಮುಂತಾದ ಕಲಾಕಾರರು ಈ ಸಂಸ್ಥೆಯಲ್ಲಿ ಸಕ್ರೀಯರಾಗಿದ್ದಾರೆ.

ಟಿಪ್ಪಣಿಃ ಜಿಲ್ಲೆಯ ಸಂಗೀತಸಂಸ್ಥೆಗಳ ಮುಖ್ಯಸ್ಥರ ಸಂದರ್ಶನ ಹಾಗೂ ಕ್ಷೇತ್ರಕಾರ್ಯವನ್ನಾಧರಿಸಿ ......

ಅಧ್ಯಾಯ ೧೨

ಕರ್ನಾಟಕ ಶಾಸ್ತ್ರೀಯಸಂಗೀತ,
ಉ.ಕ. ಜಿಲ್ಲೆಯಲ್ಲಿ ಕ. ಶಾಸ್ತ್ರೀಯಸಂಗೀತ

ಕರ್ನಾಟಕ ಸಂಗೀತ

ಭಾರತೀಯ ಸಂಗೀತದ ಪರಂಪರೆ ದೀರ್ಘವಾದುದು. ವೇದಕಾಲದಲ್ಲೇ ಸಾಮವೇದವನ್ನು ಹಾಡುತ್ತಿದ್ದರು. ಸಾಮವೇದದ ಘೋಷಣೆಯಲ್ಲಿ ಬಳಕೆಯಲ್ಲಿದ್ದ ಸ್ವರಶ್ರೇಣಿಯನ್ನು ಅಳವಡಿಸಿಕೊಂಡು ಸಂಗೀತದ ಸ್ವರಸಪ್ತಕವನ್ನು (ಸ ರಿ ಗ ಮ ಪ ಧ ನಿ) ರಚಿಸಲಾಯಿತೆಂದು ನಂಬಲಾಗಿದೆ. ಮೊದಲನೆಯ ಆಧಾರ ಸ್ವರದಿಂದ ಅದರ ಆವರ್ತಕ. ಸ್ವರದವರೆಗಿನ ಅಂತರವನ್ನು ೨೨ ಸೂಕ್ತ ಸೋಪಾನಗಳಾಗಿ ಭಾವಿಸಿ ಇವುಗಳನ್ನು ಶ್ರುತಿ ಎಂದು ಕರೆಯುತ್ತಾರೆ. ಎಷ್ಟು ಶ್ರುತಿಗಳ ಪ್ರಮಾಣದಲ್ಲಿ ಸ್ವರವು ಗೋಚರಿಸುತ್ತದೆ ಎಂಬುದರ ನಿರ್ಧಾರವಾಗುತ್ತವೆ. ಈ ಏಳು ಸ್ವರಗಳ ವ್ಯವಸ್ಥಿತ ಸಮೂಹಕ್ಕೆ ಸ್ವರಗ್ರಾಮವೆಂದು ಪ್ರಾಚೀನ ಸಂಗೀತ ಶಾಸ್ತ್ರದಲ್ಲಿ ಸಂಜ್ಞೆ ಇತ್ತು.

ಷಡ್ಜ, ಶುದ್ಧರಿಷಬ, ಚತುಃಶ್ರುತಿ ರಿಶಬ, ಸಾಧಾರಣಗಾಂಧಾರ, ಅಂತರಗಾಂಧಾರ, ಶುದ್ಧಮಧ್ಯಮ, ಪ್ರತಿ ಮಧ್ಯಮ, ಪಂಚಮ ಶುದ್ಧದೈವತ, ಚತುಃಶ್ರುತಿದೈವತ, ಕೈಶಿಕನಿಷಾದ, ಕಾಕಲಿನಿಷಾಧ , ಈ ಹನ್ನೆರಡು ಸ್ವರಸ್ಥಾನಗಳು ನಮ್ಮ ಸಂಗೀತದಲ್ಲಿ ಬಳಕೆಯಲ್ಲಿವೆ. ದಕ್ಷಿಣ ಭಾರತದಲ್ಲಿ ಹಿಂದಿನಿಂದ ಪ್ರಚಲಿತವಿದ್ದ ಶಾಸ್ತ್ರೀಯ ಸಂಗೀತದ ಶಾಸ್ತ್ರ ಭಾಗದ ಮುನ್ನಡೆಗೆ ಬಹುಮಟ್ಟಿಗೆ ಕಾರಣರಾದವರು ಕರ್ನಾಟಕದವರು. ಆದ್ದರಿಂದ ಇದಕ್ಕೆ ಕರ್ನಾಟಕ ಸಂಗೀತ ಎಂಬ ಹೆಸರುಬಂತು.

ಕಾಲಕ್ರಮದಲ್ಲಿ ಭಾರತೀಯಸಂಗೀತದಲ್ಲಿ ಕರ್ನಾಟಕೀ, ಹಿಂದುಸ್ತಾನಿ ಎಂದು ಎರಡು ಪ್ರಕಾರವಾಯಿತು. ಭಾರತೀಯಸಂಗೀತದಲ್ಲಿ ರಾಗಕ್ಕೆ ಮಹತ್ವದಪಾತ್ರವಿದೆ. ಸ್ವರ ಎಂಬುದನ್ನು ಸ್ವತಂತ್ರವಾಗಿ ರಂಜನೆ ಈಯುವುದು ಎಂದು ವಿವರಿಸುವುದುಂಟು. ಇಂತಹ ಸ್ವರಗಳ ಇಂಪಾದ ಕೂಟದಿಂದ ರೂಪಗೊಳ್ಳುವ ಆಕಾರವೇ ರಾಗ. ರಾಗಗಳ ಪರಸ್ಪರ ವ್ಯತ್ಯಾಸ ಒಂದು ಸ್ವರಸಪ್ತಕದಲ್ಲಿ ಬರುವ ಸ್ವರಗಳು ಅವುಗಳ ಆರೋಹಣ ಅವರೋಹಣ ಮುಂತಾದವುಗಳಿಂದ ಸ್ಪಷ್ಟವಾಗುತ್ತದೆ. ಪ್ರತಿಯೊಂದು ರಾಗಕ್ಕೂ ತನ್ನದೇ ಆದ ಭಾವವಿದೆ. ಭಾವವೇ ರಾಗದ ಜೀವಾಳ. ರಾಗವನ್ನು ಹಾಡುವ ಬಗೆ, ಅದರಲ್ಲಿ ಬರುವ ಸ್ವರಸಮುದಾಯ ಅವುಗಳ ವಿವಿಧ ಸಂಯೋಜನೆಯು ಜೀವಸ್ವರಗಳಾಗುವವು, ಸ್ವರಕ್ಕೆ ಕೊಡುವ ಗಮಕಗಳಿಂದ ರಾಗಕ್ಕೆ ಹೆಚ್ಚಿನ ಇಂಪು ಬರುತ್ತದೆ. ಗಮಕವೆಂದರೆ ಸ್ವರವನ್ನು ಸುಂದರವಾಗಿ ಕಂಪಿಸುವುದು. ಇವು ಅನೇಕ. ಆದರೂ ಸುಮಾರು ೧೫ ನ್ನು ಈಗ ಹೆಚ್ಚಾಗಿ ಬಳಸಲಾಗುತ್ತದೆ.

ಟಿಪ್ಪಣಿ :- ಕರ್ನಾಟಕ ಸಂಗೀತ ಜ್ಞಾನಗಂಗೋತ್ರಿ, ಅಧ್ಯಾಯ ೫ ಪುಟ ೧೪೦..............

ಸಂಗೀತ ರತ್ನಾಕರ ಭಾರತೀಯ ಸಂಗೀತದ ಆಕರಗ್ರಂಥಗಳಲ್ಲಿ ಮುಖ್ಯವಾದದ್ದು. ಕರ್ನಾಟಕೀಸಂಗೀತದ ಇಂದಿನ ಪಾಠಕ್ರಮಕ್ಕೂ, ರೂಪಕ್ಕೂ ತಳಹದಿ ಹಾಕಿದವರು ಪುರಂದರದಾಸರು. ಇದಕ್ಕೆ ಮೊದಲೇ ವಿದ್ಯಾರಣ್ಯರು ಮೇಳರಾಗಗಳ ಸ್ವರೂಪವನ್ನು ಗುರುತಿಸಿದ್ದರು. ಅನಂತರ ಕಲ್ಲಿನಾಥ, ಪುಂಡಲೀಕ ವಿಠಲ , ರಾಮಾಮಾತ್ಯ, ಸೋಮನಾಥ, ಗೋವಿಂದ ದೀಕ್ಷಿತ್, ವೆಂಕಟಮುಖಿ, ತುಳಜ ಮುಂತಾದವರು ಸಂಗೀತಶಾಸ್ತ್ರ ಗ್ರಂಥಗಳನ್ನು ರಚಿಸಿ ದಾರಿ ತೋರಿಸಿದ್ದಾರೆ. ಕರ್ನಾಟಕೀಸಂಗೀತದಲ್ಲಿ ಇಂದು ಪಚ್ಚಿಮೀಲಿಯಂ ಆದಿತ್ಯಯ್ಯ, ರಾಮನಾಡು ಶ್ರೀನಿವಾಸ ಅಯ್ಯಂಗಾರ, ವೀಣಾ ಕುಪ್ಪಯ್ಯ, ಪಲ್ಲವಿ ಗೋಪಾಲಯ್ಯ ಮುಂತಾದವರ ವರ್ಣಗಳೂ, ತ್ಯಾಗರಾಜ, ಮುತ್ತುಸ್ವಾಮಿದೀಕ್ಷಿತ, ಪಟ್ಣಂಸುಬ್ರಹ್ಮಣ್ಯಅಯ್ಯರ್, ಮೈಸೂರುಸದಾಶಿವರಾಯ, ಮೈಸೂರುವಾಸುದೇವಾಚಾರ್ಯ ಮುಂತಾದವರ ಕೃತಿಗಳೂ, ಶ್ರೀಪಾದರಾಯ, ಪುರಂದರದಾಸ, ಕನಕದಾಸ, ವಿಜಯದಾಸ, ಜಗನ್ನಾಥದಾಸ, ಮುಂತಾದವರ ದೇವರ ನಾಮಗಳು, ವೀಣೆ ಶೇಷಣ್ಣ ಮುಂತಾದವರ ತಿಲ್ಲಾನಗಳು ಕರ್ನಾಟಕೀಸಂಗೀತದಲ್ಲಿ ಮುಖ್ಯ ಹಾಗೂ ಪ್ರಸಿದ್ಧವಾಗಿದೆ.

ಕರ್ನಾಟಕೀಸಂಗೀತವು ಇಂದು ಹಾಡುಗಾರಿಕೆ ಹಾಗೂ ವಾದ್ಯ ಸಂಗೀತ ಈ ಎರಡೂ ರೂಪಗಳಲ್ಲೂ ಬಳಕೆಯಲ್ಲಿದೆ. ನಾಟ್ಯ, ನಾಟಕ, ಲಘುಗೀತೆ, ಗೇಯ, ಪ್ರಾಚೀನ ಕಾವ್ಯವಾಚನ, ಆಧುನಿಕ ಕನ್ನಡ ಕವನಗಳ ಹಾಡುಗಾರಿಕೆ ಈ ಎಲ್ಲ ಕ್ಷೇತ್ರಗಳಲ್ಲಿ ಸಂಗೀತವನ್ನು ಯಶಸ್ವಿಯಾಗಿ ಅಳವಡಿಸಲಾಗಿದೆ.

<u>ಹಿಂದುಸ್ತಾನೀ ಹಾಗೂ ಕರ್ನಾಟಕೀಸಂಗೀತದ ಸಾಮ್ಯ ಹಾಗೂ ವೈಶಮ್ಯ</u>

ಹಿಂದೂಸ್ತಾನೀ ಥಾಟ್	ಕರ್ನಾಟಕ ಸಂಗೀತದ ಮೇಳಕರ್ತ
೧. ಯಮನ್	೬೫ ನೇ ಮೇಚಕಲ್ಯಾಣಿ
೨. ಬಿಲಾವಲ್	೨೯ ನೇ ದೀರ ಶಂಕರಾಭರಣ
೩. ಖಮಾಜ್	೨೮ ನೇ ಹರಿ ಕಾಂಬೋಜಿ
೪. ಬೈರವ	೧೫ ನೇ ಮಾಯಾಮಾಳವ ಗೌಳ
೫. ಪೂರ್ವಿ	೫೧ ನೇ ಕಾಮವರ್ದಿನಿ

*೬. ಮಾರ್ವಾ — ೫೩ ನೇ ಗಮನಶ್ರಮ

೭. ಕಾಫೀ — ೨೨ ನೇ ಖಹರಪ್ರಿಯ

೮. ಆಸಾವರಿ — ೨೦ ನೇ ನಟಭೈರವಿ

೯. ತೋಡಿ — ೪೫ ನೇ ಶುಭಪಂತುವರಾಳಿ

೧೦. ಭೈರವಿ — ೮ ನೇ ಹನುಮತೋಡಿ

ಕರ್ನಾಟಕೀಸಂಗೀತದಿಂದ ಅನೇಕ ಮೇಳಗಳನ್ನು, ರಾಗಗಳನ್ನು ಹಿಂದುಸ್ತಾನೀ ಸಂಗೀತ ಪದ್ಧತಿಯಲ್ಲಿ ಅಳವಡಿಸಲಾಗಿದೆ. ಎರಡೂ ಪದ್ಧತಿಗಳಲ್ಲೂ ಹೆಚ್ಚು ಪ್ರಚಾರದಲ್ಲಿರುವ ತಾಳಗಳು ಕೆಳಗಿನಂತಿವೆ.

ಹಿಂದೂಸ್ತಾನೀಸಂಗೀತ ಪದ್ಧತಿ	ಕರ್ನಾಟಕೀಸಂಗೀತ ಪದ್ಧತಿ
* ೧. ತ್ರಿತಾಲ ೧೬ ಮಾತ್ರೆಗಳು	ಆದಿತಾಳ, ಅಥವಾ ಚತುರಶ್ರ ,ತ್ರಿಪುಟ ತಾಳ
೨. ಏಕತಾಲ ೧೨ ಮಾತ್ರೆಗಳು	ಚತುರಜಾತಿ, ಅಟ್ಟತಾಳ
೩. ಝಪ್ತಾಲ ೧೦ ಮಾತ್ರೆಗಳು	ಮಿಶ್ರಜಾತಿ, ಝುಪತಾಳ
೪. ರೂಪಕ ಅಥವಾ ತೀವ್ರ ೭ ಮಾತ್ರೆಗಳು	ತ್ರಿಶ್ರಜಾತಿ,ತ್ರಿಪುಟ ತಾಳ
೫. ದೀಪಚಂದಿ೧೪ ಮಾತ್ರೆಗಳು	ಚಾಪುತಾಳ, ಮಿಶ್ರಜಾತಿ
೬. ಕೆಹರವಾ ೮ ಮಾತ್ರೆಗಳು	ಚತುರಶ್ರ ,ಏಕ್ತಾಲ,ಅಥವಾ ಆದಿತಾಲ
೭. ದಾದ್ರಾ ೬ ಮಾತ್ರೆಗಳು	ಚತುರಶ್ರ ,ರೂಪಕತಾಲ

ಕರ್ನಾಟಕೀಸಂಗೀತದಲ್ಲಿ ಸಾಹಿತ್ಯ ರಚನೆಗಳು ವೈವಿಧ್ಯಪೂರ್ಣವಾಗಿವೆ. ಹಿಂದುಸ್ತಾನಿಯಲ್ಲಿ ಗತ್ತು ಹಾಗೂ ಡಂಗ್‌ಗಳು ವಿಶೇಷವಾಗಿ ಬಳಕೆಯಲ್ಲಿದೆ. ಹಿಂದೂಸ್ತಾನೀ ಪದ್ಧತಿಯ ಧ್ರುಪದ್‌ಗಾಯನ, ಕರ್ನಾಟಕೀ ಸಂಗೀತದ ಪಲ್ಲವಿ ಗಾಯನವನ್ನು ಹೋಲುತ್ತದೆ. ಭಜನ್ ಹಾಗೂ ವಚನಗಳು ಎರಡೂ ಪದ್ಧತಿಯಲ್ಲಿಯೂ ಹೇಳಲ್ಪಡುತ್ತದೆ. ಹಿಂದೂಸ್ತಾನೀ ಸಂಗೀತದಲ್ಲಿ ಪಕ್ಕವಾದ್ಯದವರಿಗೆ ಹೆಚ್ಚು ಸ್ವಾತಂತ್ರವಿರುವುದಿಲ್ಲ. ಕರ್ನಾಟಕೀ ಸಂಗೀತದಲ್ಲಿ ಪಕ್ಕವಾದ್ಯದವರಿಗೂ ಸಮಾನ ಅವಕಾಶಗಳಿವೆ.

ಟಿಪ್ಪಣಿ :- ಸಂಗೀತಶಾಸ್ತ್ರ ದರ್ಪಣ ಲೇಖಕ ಎ.ಯು. ಪಾಟೀಲ ಕ. ಹಾಗೂ ಹಿಂ. ಸಂಗೀತದ ಸಾಮ್ಯ ಹಾಗೂ ವೈಶಮ್ಯ ಅಧ್ಯಾಯದ ಆಧಾರದ ಮೇರೆಗೆ ....

ಈ ಎರಡೂ ಪದ್ಧತಿಯಲ್ಲಿ ಸಮಾನವಾದ ಆದರೆ ಹೆಸರಿನಲ್ಲಿ ಮಾತ್ರ ವ್ಯತ್ಯಾಸವಿರುವ ರಾಗಗಳಿವೆ. ಉದಾಃ ಹಿಂಡೊಳರಾಗ, ಹಿಂದುಸ್ತಾನಿಯ ಮಾಲಕಂಸ, ಕರ್ನಾಟಕೀಯ ಮೋಹನರಾಗ, ಹಿಂದುಸ್ತಾನಿಯ ಭೂಪ್, ಶುದ್ಧಸಾವೇರಿ ಹಿಂದೂಸ್ತಾನಿಯ ದುರ್ಗ, ಕರ್ನಾಟಕೀಸಂಗೀತದ ಮಧ್ಯಮಾವಲಿ ಹಿಂದೂಸ್ತಾನಿಯ ಸಾರಂಗ, ಕರ್ನಾಟಕೀಸಂಗೀತದ ಸುನಾದವಿನೋದಿನಿ ಹಿಂದುಸ್ತಾನಿಯ ಹಿಂಡೋಲರಾಗವಾಗಿದೆ. ಹೀಗೆ ಅನೇಕ ರಾಗಗಳ ಹೋಲಿಕೆಯನ್ನು ಎರಡು ಪದ್ಧತಿಯಲ್ಲಿಯೂ ಕಾಣಬಹುದಾಗಿದೆ. ಉಭಯ ಪದ್ಧತಿಗಳಲ್ಲೂ ರಾಗಗಳನ್ನು ಕೊಟ್ಟು ತೆಗೆದುಕೊಳ್ಳುವ ಸಂಪ್ರದಾಯ ಹಿಂದಿನಿಂದಲೂ ಬೆಳೆದುಬಂದಿದೆ. ಹಿಂದುಸ್ತಾನೀಸಂಗೀತ ಪದ್ಧತಿಯಿಂದ ಕರ್ನಾಟಕೀಸಂಗೀತಕ್ಕೆ ಅಳವಡಿಸಿಕೊಂಡಿರುವ ಕೆಲವು ಮುಖ್ಯರಾಗಗಳಲ್ಲಿ ದ್ವಿಜಾವಂತಿ, ಯಮನ್ ಕಲ್ಯಾಣ, ಖಮಾಜ್, ಬೇಹಾಗ್, ಹಿಂ. ಕಾಪೀ, ಸಿಂದು ಬೈರವಿ , ತಿಲಂಗ, ದೇಶ್ ಮುಂತಾದವುಗಳು, ಇನ್ನು ಹಿಂದುಸ್ತಾನೀ ಪದ್ಧತಿಯವರು ಕರ್ನಾಟಕೀಸಂಗೀತ ಪದ್ಧತಿಯಿಂದ ತೆಗೆದುಕೊಂಡಿರುವ ಕೆಲವು ಮುಖ್ಯ ರಾಗಗಳು ಕೀರ್ವಾಣಿ, ಸಿಂಹೇಂದ್ರ ಮಧ್ಯಮ, ಅಭೋಗಿ, ಹಂಸಧ್ವನಿ ,ಸರಸ್ವತಿ, ಮುಂತಾದವುಗಳು.

ಹಿಂದುಸ್ತಾನೀ ಹಾಗೂ ಕರ್ನಾಟಕೀಸಂಗೀತಗಳೆರಡೂ ಸಹ ಒಂದಕ್ಕೊಂದು ಪೂರಕವಾಗಿಯೇ ಇದೆ. ಹೀಗಿರುವಾಗ ಹಿಂದುಸ್ತಾನಿಯವರು ಕರ್ನಾಟಕೀಸಂಗೀತ ಕೇಳಿದರೆ ಮೂಗುಮುರಿಯುವುದು, ಕರ್ನಾಟಕೀ ಸಂಗೀತವೇ ಶ್ರೇಷ್ಠ ಎಂಬ ಅಹಂ ಕರ್ನಾಟಕೀಸಂಗೀತಗಾರರಲ್ಲಿರುವುದು ಇಂತಹ ಮನೋಭಾವ ಎರಡೂ ಪ್ರಕಾರದ ಕಲಾಕಾರರಿಂದ ಹೊರಹೋಗಬೇಕು. ಸಂಗೀತದ ಅರ್ಥ, ಮಹತ್ವ, ರಾಷ್ಟ್ರೀಯ ಏಕತೆ ಸಮಗ್ರತೆಗಳ ವಿಶಾಲ ಅರ್ಥದಲ್ಲಿ ಸಂಗೀತವನ್ನು ಬೆಳೆಸಿಕೊಂಡು ಉತ್ತಮ ಪರಂಪರೆಗೆ ನಾಂದಿಹಾಕಬೇಕು. ಕರ್ನಾಟಕೀ ಅಥವಾ ಹಿಂದುಸ್ತಾನೀ ಯಾವುದೇ ಇದ್ದರೂಸಹ ನಮ್ಮದು "ಭಾರತೀಯಸಂಗೀತ" ಎಂಬ ಅಭಿಮಾನ ಎಲ್ಲರಲ್ಲೂ ಬೆಳೆದಾಗ ಮಾತ್ರ ಉತ್ತಮ ಬೆಳವಣಿಗೆಯಾಗುತ್ತದೆ. ಇಲ್ಲದಿದ್ದಲ್ಲಿ ರಾಜಕೀಯ ಸಂಕುಚಿತ ಬುದ್ಧಿಯಿಂದ ಯಾವ ಎತ್ತರಕ್ಕೆ ಹೋಗಬೇಕೋ ಅದಕ್ಕೆ ಹೋಗದೇ ತೊಳಲಾಡಬೇಕಾಗುತ್ತದೆ. ಕಲೆ ಇರುವುದು ಬರಿ "ವಿಲಾಸಕ್ಕಲ್ಲ ವಿಕಾಸಕ್ಕಾಗಿ" ಎಂದು ಕಲಾಕಾರ ಮತ್ತು ಸಂಘಟಕರು ತಿಳಿದಾಗ ಮಾತ್ರ ಸಂಗೀತದ ಉದ್ದೇಶ ಯಶಸ್ವಿಯಾಗುತ್ತದೆ.

ಅಧ್ಯಾಯ ೧೩

ಶಾಲಾ ಕಾಲೇಜುಗಳಲ್ಲಿಯ ಸಂಗೀತ ವಿಭಾಗ

ಉತ್ತರಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ

ಉತ್ತರಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತವು ಇನ್ನೂ ಶೈಷಾವಸ್ತೆಯಲ್ಲಿಯೇ ಇದೆ. ಜಿಲ್ಲೆಯ ಹೊನ್ನಾವರ, ಸಿರ್ಸಿ, ಸಿದ್ದಾಪುರ, ಯಲ್ಲಾಪುರ, ಮುಂತಾದ ಕಡೆಗಳಲ್ಲಿ ಕರ್ನಾಟಕ ಶಾಸ್ತ್ರೀಯಸಂಗೀತದ ತರಗತಿಗಳು ಪ್ರಾರಂಭವಾದರೂಸಹ ವಿದ್ಯಾರ್ಥಿಗಳ ಅಭಾವದಿಂದ ಪ್ರಾರಂಭವಾಗಿ ಕೆಲವೇ ತಿಂಗಳುಗಳಲ್ಲಿ ಸಂಗೀತಶಾಲೆ ಮುಚ್ಚಿದ ಉದಾಹರಣೆಗಳೂ ಬಹಳಸ್ಸಿವೆ. ಹಿಂದುಸ್ಥಾನಿ ಸಂಗೀತದ ನೆಲವಾದ ಈ ಜಿಲ್ಲೆಯಲ್ಲಿ ಕರ್ನಾಟಕ ಶಾಸ್ತ್ರೀಯಸಂಗೀತ ಇನ್ನೂ ಬಾಲ್ಯಾವಸ್ತೆಯಲ್ಲಿಯೇ ಇದೆ. ಆದರೂ ಜಿಲ್ಲೆಯ ಕೆಲ ಸ್ಥಳಗಳಲ್ಲಿ ಕರ್ನಾಟಕೀ ಸಂಗೀತಶಾಲೆ ನಡೆಯುತ್ತಿರುವುದು ಕಂಡುಬರುತ್ತದೆ.

ಶಾರದಾ ಸಂಗೀತ ವಿದ್ಯಾಲಯ

ಸಿರ್ಸಿಯಲ್ಲಿ ಮಿತ್ರಾ ಮ್ಯುಸಿಕಲ್ಸ್ ಅವರ ಸಹಯೋಗದೊಂದಿಗೆ ಕರ್ನಾಟಕೀ ಸಂಗೀತಪದ್ಧತಿಯ ಶಾರದಾ ಸಂಗೀತವಿದ್ಯಾಲಯ ಕಳೆದ ನಾಲ್ಕು ವರ್ಷಗಳಿಂದ ಅಸ್ತಿತ್ವದಲ್ಲಿದೆ. ಕರ್ನಾಟಕೀಯ ಪದ್ಧತಿಯ ಶಾಸ್ತ್ರೀಯಸಂಗೀತ, ದೇವರನಾಮ ಹಾಗೂ ವೀಣಾವಾದನದ ತರಬೇತಿಯನ್ನು ಇಲ್ಲಿ ಕೊಡಲಾಗುತ್ತದೆ. ತಿಲ್ಲಾನಾ ಪದ್ಧತಿಯನ್ನೂ ಇಲ್ಲಿ ಹೇಳಿಕೊಡಲಾಗುತ್ತದೆ. ಸಿದ್ದಾಪುರದ ಶ್ರೀಮತಿ ಜಯಲಕ್ಷ್ಮಿ ಹೆಗಡೆ ಇಲ್ಲಿ ಸಂಗೀತ ತರಗತಿಗಳನ್ನು ನಡೆಸಿಕೊಡುತ್ತಾರೆ. ಇಂದಿರಾ ಬೇಡ್ಕಣಿ, ಶ್ರೀಮತಿ ರಾವ್ ಇನ್ನೂ ಅನೇಕರು ಇಲ್ಲಿ ಕರ್ನಾಟಕ ಸಂಗೀತ ಅಭ್ಯಾಸ ಮಾಡುತ್ತಿದ್ದಾರೆ.

ಭರತನಾಟ್ಯ ತರಗತಿಗಳಿರುವ ಜಿಲ್ಲೆಯ ಅನೇಕ ಕಡೆ ಕರ್ನಾಟಕೀ ಸಂಗೀತಪದ್ಧತಿಯ ಹಾಡುಗಾರಿಕೆಯ ಗುರುಗಳನ್ನು ನಾವು ಕಾಣಬಹುದಾಗಿದೆ. ಹೊನ್ನಾವರದ ಆರ್ಟ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ಪಾರ್ವತಮ್ಮ ಎಂಬುವವರು ಅನೇಕ ದಿನಗಳವರೆಗೆ ಇಲ್ಲಿ ಸಂಗೀತಶಿಕ್ಷಣವನ್ನು ನೀಡುತ್ತಿದ್ದರು. ಮೈಸೂರು ಚಂದ್ರೇಗೌಡರ ಶಿಷ್ಯರು ಇಲ್ಲಿ ಕರ್ನಾಟಕೀ ಸಂಗೀತವನ್ನು ಇಲ್ಲಿ ಹೇಳಿಕೊಡುತ್ತಾರೆ. ನೆರೆಜಿಲ್ಲೆಗಳಿಂದಲೂ ಇಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತಗುರುಗಳು ಆಸಕ್ತ ಸಂಗೀತವಿದ್ಯಾರ್ಥಿಗಳ ಮನೆಗೇಬಂದು ಸಂಗೀತ ಕಲಿಸಿಕೊಟ್ಟ ಉದಾಹರಣೆಯು ಇಲ್ಲಿದೆ. ಉ.ಕ. ಜಿಲ್ಲೆಯಲ್ಲಿ ಕರ್ನಾಟಕಶಾಸ್ತ್ರೀಯ ಸಂಗೀತ ಇನ್ನೂ ಬೆಳೆಯಬೇಕಾಗಿದೆ.

ಉತ್ತರಕನ್ನಡ ಜಿಲ್ಲೆಯ ಶಾಲಾ ಕಾಲೇಜುಗಳಲ್ಲಿನ ಸಂಗೀತ ವಿಭಾಗ

ರಾಜ್ಯ ಸರ್ಕಾರದ ಆಳ್ವಿಕೆಗೆಒಳಗೊಂಡ ಕೆಲವೇ ಕೆಲವು ವಿದ್ಯಾಸಂಸ್ಥೆಗಳಲ್ಲಿ ಮಾತ್ರ ಸಂಗೀತಶಿಕ್ಷಣವನ್ನು ಕಲಿಸುವ ಏರ್ಪಾಡುಮಾಡಲಾಗಿದೆ. ಸಂಗೀತ, ಸಾಹಿತ್ಯಕ್ಕೆ ಪ್ರೋತ್ಸಾಹ ನೀಡುವ ಆಡಳಿತ ಮಂಡಳಿಯ ಶಾಲಾ, ಕಾಲೇಜುಗಳಲ್ಲಿ ಮಾತ್ರ ಈ ಸಂಗೀತವಿಭಾಗವು ಉತ್ತಮಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಂಗೀತಶಿಕ್ಷಣದ ಜ್ಞಾನವಿರದ ಪ್ರಾಂಶುಪಾಲರು,ಸಂಗೀತದ ತಿಳುವಳಿಕೆ ಇಲ್ಲದ ಆಡಳಿತ ಮಂಡಳಿಯ ಶಾಲಾ–ಕಾಲೇಜಿನಲ್ಲಿ ಸಂಗೀತಶಿಕ್ಷಣದ ವ್ಯವಸ್ಥೆ ಗಂಭೀರವಾಗಿದೆ. ಕ್ಷುಲ್ಲಕವಾಗಿ ಅನೇಕ ತರಹದ ಕಿರುಕುಳವನ್ನು ಸಂಗೀತವಿಭಾಗಕ್ಕೆ ನೀಡಿದ ಅನೇಕ ಉದಾಹರಣೆಗಳು ಇಲ್ಲಿವೆ. ಇಂತಹ ಕಿರುಕುಳದಿಂದ ಸಂಗೀತ ಕಲಿಸುವ ಗುರುಗಳು ಹಾಗೂ ವಿದ್ಯಾರ್ಥಿಗಳ ಮೇಲೆ ನೇರ ಪರಿಣಾಮವಾದ ಉದಾಹರಣೆಗಳೂ ಇವೆ. ಒಣಪ್ರತಿಷ್ಠೆ, ಅಜ್ಞಾನ ಮುಂತಾದ ಕ್ಷುಲ್ಲಕ ಕಾರಣಗಳಿಂದ ಇಂತಹ ಪ್ರಮಾದವಾಗಿದೆ ಎಂಬುದನ್ನು ಇಂತಹ ಸಂಘ ಸಂಸ್ಥೆಗಳಿಗೆ ಖುದ್ದಾಗಿ ಹೋಗಿ ವಿಚಾರಿಸಿದಾಗ ಅರಿವಾಗದೇ ಇರದು. ದ್ವೇಶ ಅಸೂಯೆಗಳು ಸಂಗೀತದಿಂದ ಮಾಯವಾಗಬೇಕು. ಪರಸ್ಪರ ಸಹಕಾರ, ಸಹಾಯಮಾಡುವ ಮನೋವೃತ್ತಿ ಬೆಳೆದು ಬರಬೇಕು. ಅಂದಾಗಲೇ ಇಂತಹ ಸಂಗೀತವಿಭಾಗ, ಸಂಗೀತಶಿಕ್ಷಣ ಬೆಳೆದು ಬಾಳಲು ಸಾಧ್ಯ. ಜಿಲ್ಲೆಯಲ್ಲಿನ ಕೆಲವೇ ಕೆಲವು ಸಂಗೀತ ಭೋಧನೆ ಇರುವ ಶಾಲೆಗಳನ್ನು ಇಲ್ಲಿ ವಿವರಿಸಲಾಗಿದೆ

ಶಾಲಾ ಕಾಲೇಜುಗಳಲ್ಲಿ ಪಠ್ಯಪುಸ್ತಕದ ಜೊತೆ ಒಂದು ವಿಷಯವಾಗಿ ಸಂಗೀತಶಿಕ್ಷಣವನ್ನು ಕೊಡುವ ಪದ್ಧತಿ ರೂಡಿಯಲ್ಲಿದೆ. ಇಂತಹ ಶಾಲಾ ಕಾಲೇಜುಗಳಲ್ಲಿ,

೧) ವಾಯ್.ಟಿ.ಎಸ್.ಎಸ್. ವಿದ್ಯಾಸಂಸ್ಥೆ ಯಲ್ಲಾಪುರದಲ್ಲಿರುವ ಸಂಗೀತ ಶಿಕ್ಷಣ ಪದ್ಧತಿ.

೨) ಸಿರ್ಸಿಯ ಮೋಟಿನ್ಸರ್ ಸ್ಮಾರಕ ಕಲಾ ಕಾಲೇಜಿನಲ್ಲಿ ಬೋಧಿಸುವ ಸಂಗೀತ ಪದ್ಧತಿ ಹಾಗೂ ಸಂಗೀತ ಶಿಕ್ಷಣ.

೩. ಎಂ.ಪಿ.ಇ. ಸೊಸೈಟಿಯ ಧರ್ಮಸ್ಥಳ ಮಂಜುನಾಥೇಶ್ವರ ಕಲಾ ಕಾಲೇಜಿನಲ್ಲಿ ಬೋಧಿಸುವ ಸಂಗೀತ ಶಿಕ್ಷಣ.

೩. ಕಾರವಾರದ ಬಾಪೂಜಿ ವಿದ್ಯಾ ಸಂಸ್ಥೆಯ ಸದಾಶಿವಗಡ ಪದವಿ ಕಾಲೇಜಿನಲ್ಲಿಯ ಸಂಗೀತ ವಿಭಾಗ.

ಉತ್ತರಕನ್ನಡ ಜಿಲ್ಲೆಯಲ್ಲಿನ ಶಾಲಾ–ಕಾಲೇಜುಗಳಲ್ಲಿ ಸಂಗೀತಶಿಕ್ಷಣ ಕಲಿಯಲು ಅವಕಾಶ ಮಾಡಿಕೊಟ್ಟ ಸಂಸ್ಥೆಗಳಲ್ಲಿ ಮೇಲೆ ಕಾಣಿಸಿದ ಶಿಕ್ಷಣ ಸಂಸ್ಥೆಗಳ ಪಾತ್ರ ಮುಖ್ಯವಾಗಿದೆ.

೧. ವಾಯ್. ಟಿ. ಎಸ್.ಎಸ್. ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಸಂಗೀತ ಶಿಕ್ಷಣ.

* ಉತ್ತರಕನ್ನಡ ಜಿಲ್ಲೆಯ ತಾಲೂಕಾ ಸ್ಥಳವಾದ ಯಲ್ಲಾಪುರದಲ್ಲಿರುವ ಈ ಶಿಕ್ಷಣ ಸಂಸ್ಥೆಯಲ್ಲಿ ೧೯೭೫ಕ್ಕೂ ಮೊದಲಿನಿಂದಲೇ ಅಂದಿನ ಪ್ರಾಚಾರ್ಯ ಶ್ರೀ ಪರಮಾನಂದರ ಪ್ರಯತ್ನದಿಂದ ಈ ಶಿಕ್ಷಣ ಸಂಸ್ಥೆಯಲ್ಲಿ ಸಂಗೀತ ಕಲಿಸಲು ಒಬ್ಬ ಸಂಗೀತ ಶಿಕ್ಷಕರನ್ನು ನೇಮಿಸಲಾಗಿದೆ. ಪ್ರೌಢಶಾಲೆಗಳಲ್ಲಿ ಪಠ್ಯದ ಜೊತೆಗೆ ಸಂಗೀತ ಶಿಕ್ಷಣವನ್ನೂ ಇಲ್ಲಿ ಬೋಧಿಸಲಾಗುತ್ತಿದೆ. ಹಿಂ. ಸಂಗೀತದ ರಾಗಗಳಲ್ಲಿನ ಛೋಟಾಖ್ಯಾಲ್, ಭಜನ್, ದೇವರನಾಮ, ವಚನ ದೇಶಭಕ್ತಿಗೀತೆ, ಭಕ್ತಿಗೀತೆ ಇವುಗಳನ್ನು ಇಲ್ಲಿ ಕಲಿಸಲಾಗುತ್ತಿದೆ. ಸಂಗೀತದಲ್ಲಿ ಮುಂದುವರಿಯಲು ಆಸಕ್ತಿಯಿದ್ದ ವಿದ್ಯಾರ್ಥಿಗಳು ಖಾಸಗಿಯಾಗಿ ಸಂಗೀತಗುರುಗಳ ಮನೆಯಲ್ಲಿಕಲಿತು ಕರ್ನಾಟಕ ಸರ್ಕಾರದ ಪ್ರೌಢಶಿಕ್ಷಣ
ಇಲಾಖೆಯವರು ನಡೆಸುವ ಜ್ಯೂನಿಯರ್, ಸೀನಿಯರ್ ಪರೀಕ್ಷೆಗಳಿಗೂ ಕುಳಿತು, ತಮ್ಮ ಪ್ರತಿಭೆಯನ್ನು ಮೆರೆದ ವಿದ್ಯಾರ್ಥಿಗಳು ಇಲ್ಲಿದ್ದಾರೆ. ಶ್ರೀಮತಿ ಲತಾ ಉಡಗೋಣ ಇಲ್ಲಿ ಸಂಗೀತ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪಠ್ಯೇತರ ಚಟುವಟಿಕೆಗಳಲ್ಲಿ ಸಂಗೀತ ಶಿಕ್ಷಣವಿದ್ದು ಸಾಂಸ್ಕೃತಿಕವಾಗಿ ಮುಂದುವರೆಯಲು ಸಾಂಸ್ಕೃತಿಕ, ತಾಜಾತನ, ಸಂಸ್ಕೃತಿಯನ್ನು ಕಲಿಯಲು ಶಾಲಾಕಾಲೇಜುಗಳಲ್ಲಿ ಇಂತಹ ಸಂಗೀತ ಶಿಕ್ಷಣ ಕಲಿಸುವ ವ್ಯವಸ್ಥೆ ಅವಶ್ಯವಾಗಿ ಬೇಕಾಗಿದೆ.

ಜಿಲ್ಲೆಯ ತಾಲೂಕಾ ಸ್ಥಳವೇ ಆದ ಮುಂಡಗೋಡಿನ ಸರ್ಕಾರಿ ಶಾಲೆಯಲ್ಲಿಯೂ ಸಂಗೀತ ಕಲಿಸುವ ವ್ಯವಸ್ಥೆಯಿತ್ತು. ಪಂ. ಬಸವರಾಜ ರಾಜಗುರುಗಳ ಶಿಷ್ಯ ಶ್ರೀ ಪರಮೇಶ್ವರ ಹೆಗಡೆ ಇಲ್ಲಿ ಅನೇಕ ವರ್ಷಗಳಿಂದ ಸಂಗೀತ ಶಿಕ್ಷಕರಾಗಿದ್ದರು. ಈ ಕೆಲವು ವರ್ಷಗಳ ಹಿಂದೆ ಅವರು ಬೆಂಗಳೂರಿಗೆ ಹೋಗಿ ನೆಲೆಸಿರುವುದರಿಂದ ಇಲ್ಲಿ ಸಂಗೀತ ಶಿಕ್ಷಣ ಕಲಿಸುವ ವ್ಯವಸ್ಥೆಯೇ ಇಲ್ಲವಾಗಿದೆ. ಜಿಲ್ಲೆಯ ತಾಲೂಕಾ ಸ್ಥಳವಾದ ಮುಂಡಗೋಡಿನಲ್ಲಿ

ಸಂಗೀತ ಕಲಿಸುವ ವ್ಯವಸ್ಥೆಯಿರದ ಕಾರಣ ಸಾಂಸ್ಕೃತಿಕವಾಗಿ ಈ ತಾಲೂಕಿಗೆ ಪೆಟ್ಟು ಬಿದ್ದಂತಾಗಿದೆ. ಆದರೂ ಖಾಸಗಿಯಾಗಿ ಭಾರತೀ ಗೋಕರ್ಣ , ಮುಂತಾದ ಕಲಾವಿದರು ಇಲ್ಲಿ ಸಂಗೀತದಲ್ಲಿ ಸಾಧನೆಮಾಡುತ್ತಿದ್ದಾರೆ ಹಾಗೂ ಅನೇಕರನ್ನು ತರಬೇತುಗೊಳಿಸುತ್ತಿದ್ದಾರೆ. ಇದು ಸಾಂಸ್ಕೃತಿಕವಾಗಿ ಪರಸ್ಪರ ನಿರ್ಮಾಣವಾಗಲು ಅನುಕೂಲವಾಗಿದೆ.

೨. ಸಿರ್ಸಿಯ ಎಂ. ಎಂ. ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿನ ಸಂಗೀತ ವಿಭಾಗ

ರಾಷ್ಟ್ರೀಯ ಖ್ಯಾತ ಬೀನ್ ವಾದಕ ಡಾಃ ಬಿಂದುಮಾಧವ ಪಾಠಕ್ ಅವರ ನೇತೃತ್ವದಲ್ಲಿ ಸಿರ್ಸಿಯ ಮೊಟಿನ್ಸರ ಸ್ಮಾರಕ ಕಲಾ ಕಾಲೇಜನಲ್ಲಿ ಸಂಗೀತವಿಭಾಗ ಆರಂಭವಾಯಿತು. ಇಲ್ಲಿ ಗಾಯನ, ತಬ್ಲಾ ಹಾಗೂ ಸಿತಾರ್ ವಾದನವನ್ನು ಕಲಿಸಲಾಗುತ್ತದೆ. ಡಾ : ಬಿಂದುಮಾಧವ ಪಾಠಕ್ ಅವರೇ ಇಲ್ಲಿನ ಸಂಗೀತ ವಿಭಾಗದ ಮುಖ್ಯಸ್ಥರಾಗಿ ಕೆಲಸ ನಿರ್ವಹಿಸಿದ್ದಾರೆ. ಇವರು ಆಕಾಶವಾಣಿಯಲ್ಲಿ ಬೀನ್ ಹಾಗೂ ಸಿತಾರ್ ವಾದಕರು. ಕಾಲೇಜಿನ ಸಂಗೀತವಿಭಾಗದಲ್ಲಿ ಸಿತಾರ್ ಪ್ರಾಧ್ಯಾಪಕರಾಗಿದ್ದಾರೆ. ವಿಶ್ವವಿದ್ಯಾಲಯದ ಸಂಗೀತವಿಭಾಗ ಪ್ರಾರಂಭವಾದ ಮೇಲಿಂದ ಶ್ರೀಯುತರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂಗೀತಜ್ಞರಾಗಿ, ಸಂಗೀತವಿಭಾಗದ ಮುಖ್ಯಸ್ಥರಾಗಿಯೂ ಕಾರ್ಯನಿರ್ವಹಿಸಿ ಈಗ ವಿಶ್ರಾಂತಿ ಜೀವನ ನಡೆಸುತ್ತಿದ್ದಾರೆ. ಗಾಯನ ವಿಭಾಗಕ್ಕೆ ಶ್ರೀ ಕೃಷ್ಣಮೂರ್ತಿ, ಬಿಜಾಪುರೆ, ಎಂ.ಪಿ. ಹೆಗಡೆ ಇವರುಗಳು ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದ್ದರು. ಪ್ರಸ್ತುತ ಶ್ರೀಮತಿ ಶೈಲಜಾ ಮಂಗಳೂರ ಅವರು ಗಾಯನ ವಿಭಾಗದ ಪ್ರಾಧ್ಯಾಪಕಿಯರಾಗಿದ್ದಾರೆ.

ಗಾಯನ ವಿಭಾಗದಲ್ಲಿ ಪಿ.ಯು.ಸಿ. ಹಾಗೂ ಪದವಿತರಗತಿಯ ಆಸಕ್ತ ಸಂಗೀತವಿಧ್ಯಾರ್ಥಿಗಳಿಗೆ ಐಚ್ಛಿಕ ವಿಷಯವಾಗಿ ಸಂಗೀತ ಭೋದನೆಮಾಡಲಾಗುತ್ತದೆ. ಖ್ಯಾಲ್, ಠುಮ್ರಿ, ಟಪ್ಪಾ, ದೃಪದ್, ಧಮಾರ್ ಮುಂತಾದ ಸಂಗೀತದ ಅಭ್ಯಾಸ ಪತ್ರಿಕೆಗನುಗುಣವಾಗಿ ಇಲ್ಲಿ ಸಂಗೀತ ವಿಷಯವನ್ನು ಭೋಧಿಸಲಾಗುತ್ತದೆ. ಸಿತಾರದಲ್ಲಿ ಜೋಡ್, ಜಾಲಾ, ಆಲಾಪ, ಗತ್, ಭಡಾಖ್ಯಾಲ್, ಛೋಟಾಖ್ಯಾಲ್, ಮಸೀತಿಖಾನೀಗತ್, ರಜಾಖಾನೀಗತ್, ಧುನ್‌ಗಳನ್ನು ಇಲ್ಲಿ ಪಿ.ಯು.ಸಿ ಹಾಗೂ ಪದವಿ ತರಗತಿಯ ಮಕ್ಕಳಿಗೆ ಹೇಳಿಕೊಡಲಾಗುತ್ತದೆ. ಡಾಃ ಬಿಂದುಮಾಧವ ಪಾಠಕ್ ಅವರು ವಿಶ್ವವಿದ್ಯಾಲಯದ ಸಂಗೀತ ವಿಭಾಗಕ್ಕೆ ಆಯ್ಕೆಯಾದ ನಂತರ, ಸಿರ್ಸಿಯಲ್ಲಿ

ಅವರ ಶಿಷ್ಯ ಪ್ರೊ: ಆರ್. ವಿ. ಹೆಗಡೆ ಹಳ್ಳದಕೈ ಅವರು ಸೀತಾರ್ ಪ್ರಾಧ್ಯಾಪಕರಾಗಿ ನೇಮಕಗೊಂಡು ಸೇವೆಸಲ್ಲಿಸುತ್ತಿದ್ದಾರೆ.

ತಬ್ಲಾ ವಿಭಾಗದಲ್ಲಿ ಖ್ಯಾತ ಕಲಾವಿದ ಬಸವರಾಜ ಬೆಂಡಿಗೇರಿಯವರ ಶಿಷ್ಯ ಶ್ರೀ ಸಂಜೀವ ಪೋತದಾರ್ ತಬ್ಲಾ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಸ್ವತಹ ಕಲಾಕಾರರಾದ ಸಿರ್ಸಿ ಕಾಲೇಜಿನ ಸಂಗೀತ ಪ್ರಧ್ಯಾಪಕರು ಸ್ವತಂತ್ರವಾಗಿ ದೇಶದ ಅನೇಕಕಡೆ ತಮ್ಮ ಸಂಗೀತ ಕಾರ್ಯಕ್ರಮವನ್ನು ನೀಡುತ್ತಿದ್ದಾರೆ.

ಅನೇಕವರ್ಷಗಳಿಂದ ಪ್ರತ್ಯೇಕಕೊಠಡಿ, ಸಂಗೀತ ವಿಭಾಗಕ್ಕೆ ಬೇಕೆಂಬ ಇವರ ಹಂಬಲ ಈಡೇರಿದೆ. ಇಂದು ಸಂಗೀತವಿಭಾಗ ತನ್ನದೇಆದ ಸ್ವತಂತ್ರಕಟ್ಟಡ ಹೊಂದಿ ಉತ್ತಮ ಸ್ಥಿತಿಯಲ್ಲಿದೆ. ಸಂಗೀತ ವಿದ್ಯಾರ್ಥಿಗಳಿಗೆ ಹಾಗೂ ಸಮಾಜಕ್ಕೆ ಸಂಗೀತದ ತಿಳುವಳಿಕೆ ನೀಡುವಲ್ಲಿ ಶ್ರಮಿಸುತ್ತಿದೆ. ಸಿರ್ಸಿ ನಗರದ ಸುತ್ತಮುತ್ತ ಸಂಗೀತದ ವಾತಾವರಣ ನಿರ್ಮಿಸಲು ಸಿರ್ಸಿ ಕಾಲೇಜಿನ ಸಂಗೀತ ವಿಭಾಗದ ಪಾತ್ರವೂ ಮಹತ್ವದ್ದಾಗಿದೆ.

ಪ್ರೊ. ಆರ್.ವಿ.ಹೆಗಡೆ, ಬೀನ್‌ವಾದನ



೩. ಎಸ್.ಡಿ.ಎಂ ಕಾಲೇಜಿನ ಸಂಗೀತ ವಿಭಾಗ

೧೯೬೪ ರಲ್ಲಿ ವಿ. ಸೀತಾರಾಮಯ್ಯನವರ ಪ್ರಾಂಶುಪಾಲತ್ವದಲ್ಲಿ ಪ್ರಾರಂಭವಾದ ಎಸ್.ಡಿ.ಎಮ್. ಕಾಲೇಜು ಹೊನ್ನಾವರ, ಪ್ರಾರಂಭದಿಂದಲೇ ವಿ.ಸೀ. ಯವರ ಪ್ರಯತಪೂರ್ವಕ ಶ್ರಮದಲ್ಲಿ ಸಂಗೀತ ವಿಭಾಗವನ್ನು ಈ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಗಿಟ್ಟಿಸಿಕೊಂಡಿದೆ. ಸಂಗೀತದಂತಹ ಸೂಕ್ಷ್ಮವಿಷಯವನ್ನು ಕಾಲೇಜಿನ ಪಠ್ಯಕ್ರಮಕ್ಕೆ ಸೇರಿಸುವಾಗ ಆಡಳಿತಾತ್ಮಕ ಅನೇಕಸಮಸ್ಯೆಗಳನ್ನು ಧೈರ್ಯವಾ ಪ್ರಾಮಾಣಿಕವಾಗಿ ಸ್ಪಂದಿಸಿ ಅವುಗಳನ್ನು ಎದುರಿಸಿದ ಕೀರ್ತಿ ಇಲ್ಲಿನ ಆಡಳಿತಮಂಡಳಿ ಹಾಗು ಪ್ರಾಂಶುಪಾಲರುಗಳದ್ದು. ಸಂಗೀತ ವಿಷಯದ ಪಾಠಪ್ರವಚನಗಳಲ್ಲಿ ತೊಂದರೆಮಾಡದೇ ವಿಶ್ವವಿದ್ಯಾಲಯಮಟ್ಟದಲ್ಲಿ ಇಲ್ಲಿನ ಸಮಸ್ಯೆಗಳನ್ನು ತಿಳಿಸಿ ನ್ಯಾಯಯುತ ಹೋರಾಟಕ್ಕಾಗಿ ಸ್ಪಂದಿಸಿದವರರಲ್ಲಿ ವಿಭಾಗದ ಮುಖ್ಯಸ್ಥರು ಹಾಗು ಇತರ ಉಪನ್ಯಾಸಕರ ಪಾಲೂ ದೊಡ್ಡದೇ. ಇವರ ಮಾರ್ಗದರ್ಶನದಲ್ಲಿಯೇ ಸಮಸ್ಯೆಗಳನ್ನು ಪರಿಹರಿಸಲಾಗುತ್ತದೆ. ೧೯೭೫ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪಂಃ ಮಲ್ಲಿಕಾರ್ಜುನ ಮನ್ಸೂರ್ ನೇತೃತ್ವದಲ್ಲಿ ಸಂಗೀತ ವಿಭಾಗದ ಸ್ನಾತಕೋತ್ತರ ಶಿಕ್ಷಣ ಪ್ರಾರಂಭವಾಯಿತು. ಇದಕ್ಕೂ ಮೊದಲಿನಿಂದಲೇ ಜನಪ್ರಿಯ ಲೇಖಕ ಹಾಗೂ ಪ್ರಾಂಶುಪಾಲರಾದ ವಿ. ಸೀತಾರಾಮಯ್ಯನವರು ಶ್ರಮದಿಂದ ೧೯೬೪ ರಿಂದಲೇ ಇಲ್ಲಿ ಸಂಗೀತವಿಭಾಗ ಪ್ರಾರಂಭವಾಗಿದೆ. ಜಿಲ್ಲೆಯಲ್ಲಿಯೇ ಪ್ರಥಮ ಸಂಗೀತವಿಭಾಗವನ್ನು ಹೊಂದಿದ ಕಾಲೇಜು ಇದಾಗಿದೆ.

ಆರಂಭದಲ್ಲಿ ಗೋಕರ್ಣದ ಶ್ರೀ ಕಟ್ಟಿಗೆ ಭಟ್ಟರು ಇಲ್ಲಿ ಸಂಗೀತಪ್ರಾಧ್ಯಾಪಕರಾಗಿ ನೇಮಕಗೊಂಡರು. ಗಾಯನ ವಾದನ ಎರಡನ್ನು ಶ್ರೀಯುತರು ಕಲಿಸುತ್ತಿದ್ದರು. ನಂತರ ಶ್ರೀ ರಾಜೀವ ಪುರಂದರೆಯವರು ಇಲ್ಲಿ ಗಾಯನ ವಿಭಾಗದ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಅಂದಿನಿಂದ ಇಂದಿನವರೆಗೆ ಗಾಯನ ಹಾಗೂ ವಾದನದಲ್ಲಿ ಸಂಗೀತ ಶಿಕ್ಷಣವನ್ನು ಇಲ್ಲಿ ಕೊಡಲಾಗುತ್ತದೆ. ಶ್ರೀ ರಾಜೀವ ಪುರಂದರೆಯವರು ಹೊನ್ನಾವರದ ಸುತ್ತಮುತ್ತ ಸಂಗೀತವಾತಾವರಣ ನಿರ್ಮಾಣಮಾಡಲು ಶ್ರಮಪಟ್ಟಿದ್ದಾರೆ. ಶ್ರೀ ಜಿ.ಆರ್ ಭಟ್ಟ, ಶ್ರೀಮತಿ ಭಾರತಿ ಮೇಸ್ತಾ ಮುಂತಾದ ಸಂಗೀತ ಕಲಾಕಾರರನ್ನು ತರಬೇತುಗೊಳಿಸಿದ್ದಾರೆ. ರಾಜೀವ ಪುರಂದರೆಯವರ ನಿವೃತ್ತಿಯ

ನಂತರ ಅವರಶಿಷ್ಯೆ ಶ್ರೀಮತಿ ಭಾರತಿ ಮೇಸ್ತಾ ಇಲ್ಲಿ ಸಂಗೀತವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದಾರೆ. ಇಂದು ಕರ್ನಾಟಕದಲ್ಲಿ ಸಂಗೀತ ವಿಷಯದ ಅತಿದೊಡ್ಡ ವಿಭಾಗವಾಗಿ ಹೊನ್ನಾವರಕಾಲೇಜಿನ ಸಂಗೀತ ವಿಭಾಗವು ಹೊರಹೊಮ್ಮಿದೆ. ಶ್ರೀಮತಿ ಭಾರತಿ ಮೇಸ್ತಾ, ಶ್ರೀ ಅಶೋಕ ಹುಗ್ಗಣ್ಣನವರ್ , ಶ್ರೀ ಕೃಷ್ಣಮೂರ್ತಿ ಭಟ್ಟ , ಗಾಯನ ವಿಭಾಗದ ಪ್ರಾಧ್ಯಾಪಕರಾದರೆ, ಶ್ರೀ ಗೋಪಾಲಕೃಷ್ಣ ಹೆಗಡೆ, ಶ್ರೀ ಎನ್. ಜಿ. ಅನಂತಮೂರ್ತಿ ತಬಲಾ ವಿಭಾಗದ ಪ್ರಾದ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಖ್ಯಾಲ್, ಠುಮ್ರಿ, ವಚನ, ಭಕ್ತಿಗೀತೆ ಭಾವಗೀತೆ, ತರಾನಾ ಮುಂತಾದ ಗಾಯನ ಪ್ರಕಾರವನ್ನು ಇಲ್ಲಿ ಬೋಧಸಲಾಗುತ್ತದೆ. ಪ್ರತಿ ವರ್ಷಇಲ್ಲಿನ ಸಂಗೀತ ವಿದ್ಯಾರ್ಥಿಗಳು ವಿಶ್ವವಿಧ್ಯಾಲಯದ ಮಟ್ಟದಲ್ಲಿ ಸಂಗೀತವಿಷಯದಲ್ಲಿ ಒಂದಲ್ಲ ಒಂದು ರ್‍ಯಾಂಕನ್ನುಗಳಿಸಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಇಲ್ಲಿ ಭೋದಿಸುದ ಪಾಧ್ಯಾಪಕರೂಸಹ ಉತ್ತಮ ಕಲಾಕಾರರಾಗಿದ್ದು ವಿಧ್ಯಾರ್ಥಿಗಳಿಗೆ ಸಂಗೀತ ಜ್ಞಾನವನ್ನು ಮನದಟ್ಟಾಗುವಂತೆ ಮಾಡಿಕೊಡುತ್ತಾರೆ. ಸ್ವತಂತ್ರವಾದ ಕಟ್ಟಡವನ್ನು ಸಂಗೀತವಿಭಾಗ ಹೊಂದಬೇಕಾಗಿದೆ. ಈ ಕುರಿತು ಆಡಳಿತಮಂಡಳಿ ಸಮಾಲೋಚಿನೆ ನಡೆಸಿದೆ. ಸ್ವತಂತ್ರ ಕಟ್ಟಡದೊಂದಿಗೆ ಸಂಗೀತ ವಿಭಾಗ ಇನ್ನೂ ಯಶಸ್ಸನ್ನು ಹೊಂದಲಿ ಎಂಬುದು ಆಶಯ.

ಎಸ್. ಡಿ. ಎಂ. ಸ್ಕೂಲ್ ಆಫ್ ಮ್ಯೂಸಿಕ್

ಎಸ್.ಡಿ. ಎಂ. ಮಹಾವಿದ್ಯಾಲಯದ ಹೊನ್ನಾವರಕಾಲೇಜಿನಲ್ಲಿ ಪಿ.ಯು.ಸಿಯಿಂದ ಪದವಿ ತರಗತಿಯವರೆಗೆ ಸಂಗೀತವನ್ನು ಕಲಾವಿಭಾಗದಲ್ಲಿ ಒಂದು ವಿಷಯವನ್ನಾಗಿ ತೆಗೆದುಕೊಳ್ಳಲು ಅವಕಾಶವಿದ್ದು ಈಗ ಆಸಕ್ತ ಬೇರೆ ತರಗತಿಯ ವಿದ್ಯಾರ್ಥಿಗಳೂಸಹ ಪಠ್ಯ ಪುಸ್ತಕದ ಹೊರತಾಗಿ ಸಂಗೀತವನ್ನು ಕಲಿಯಲು ಈ 'ಎಸ್. ಡಿ. ಎಂ. ಸ್ಕೂಲ್ ಆಫ್ ಮ್ಯೂಸಿಕ್' ಇದರಲ್ಲಿ ಅವಕಾಶ ಮಾಡಿಕೊಡಲಾಗಿದೆ. ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಲ್ಲೊಬ್ಬರಾದ ಶ್ರೀ ಉದ್ಯಾವರ ಇವರ ಪ್ರಯತ್ನದಿಂದ ಎಸ್. ಡಿ. ಎಂ. ಸ್ಕೂಲ್ ಆಫ್ ಮ್ಯೂಸಿಕ್ ೧೯೯೯ ರಿಂದ ಪ್ರಾರಂಭವಾಗಿದೆ. ಜ್ಯೂನಿಯರ್, ಸೀನಿಯರ್, ಹಾಗೂ ವಿದ್ವತ್ ಪದವಿಗಳಿಗೆ ಇಲ್ಲಿ ಸಂಗೀತ ತರಬೇತಿ ನೀಡಲಾಗುತ್ತಿದೆ. ಸಂಗೀತವಿಭಾಗದ ಪ್ರಾಧ್ಯಾಪಕರೇ ಇಲ್ಲಿ ಸಂಗೀತ ಭೋದನೆಯನ್ನು ಮಾಡುತ್ತಾರೆ.

ಕಾರವಾರದ ಬಾಪೂಜಿ ಪದವಿ ಕಾಲೇಜಿನಲ್ಲಿಯ ಸಂಗೀತ ವಿಭಾಗ

ರಾಜಕಾರಣಿ, ಸಂಗೀತದ ಅಭಿಮಾನಿ ಬಾಪೂಜಿ ಸಂಸ್ಥೆಯ ಅಧ್ಯಕ್ಷರೂ ಆದ ಶ್ರೀ ಪ್ರಭಾಕರ ರಾಣೆಯವರ ಪ್ರಯತ್ನದಿಂದ ೧೯೯೫ ರಿಂದ ಕಾರವಾರದ ಸದಾಶಿವಗಡದ ಬಾಪೂಜಿ ಪದವಿಕಾಲೇಜಿನಲ್ಲಿ ಸಂಗೀತವಿಭಾಗವನ್ನು ಪ್ರಾರಂಭಿಸಿದೆ. ಶ್ರೀ ಬಸವರಾಜ ಬಜಂತ್ರಿ , ಶಿವಾನಂದ ಹಿರೇಮಠ ಹಾಗೂ ನಾಗಭೂಷಣ ಹೆಗಡೆಯವರು ಕ್ರಮವಾಗಿ ೧೯೯೫ ರಿಂದ ೧೯೯೮ ರ ವರೆಗೆ ಸಂಗೀತ ಪ್ರಾಧ್ಯಾಪಕರಾಗಿ ಇಲ್ಲಿ ಸೇವೆಸಲ್ಲಿಸಿದ್ದಾರೆ.

ಸಂಗೀತವಿಷಯವನ್ನು ಭೋದಿಸಲು ಸರಿಯಾದವ್ಯವಸ್ಥೆಯನ್ನು ಆಡಳಿತಮಂಡಳಿ ಮಾಡಿಕೊಡಬೇಕಾಗಿದೆ. ಸಂಗೀತ ಪ್ರಾಧ್ಯಾಪಕರನ್ನು ಹಾಗೂ ಸಂಗೀತವಿಭಾಗವನ್ನು ಬೆಳೆಸಲು ಇಲ್ಲಿನ ಆಡಳಿತ ಮಂಡಳಿ ಶ್ರಮಿಸಿದರೆ ಮಾತ್ರ ಇಲ್ಲಿನ ಸಂಗೀತ ವಿಭಾಗ ಮುಂದುವರಿಯಲು ಸಾಧ್ಯ. ಸಂಗೀತ ವಿಷಯದ ಪಠ್ಯಕ್ರಮವನ್ನು ಪದವಿ ತರಗತಿಗಳಿಗೆ ಭೋದಿಸಲು ಅನುಕೂಲ ಮಾಡಿಕೊಟ್ಟ ಆಡಳಿತಮಂಡಳಿ, ಸಂಗೀತ ಪ್ರಾಧ್ಯಾಪಕರ ಸಮಸ್ಯೆಗಳನ್ನು ಹಾಗೂ ಸಂಗೀತವಿಭಾಗದ ಸಮಸ್ಯೆಗಳನ್ನೂ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನಮಾಡಿ ಸಂಗೀತವಿಭಾಗದ ಉಪಸ್ಥಿತಿ ಪದವಿಕಾಲೇಜಿನಲ್ಲಿ ಇರುವಂತೆ ಆಗಲಿ ಎಂಬ ಆಶಯ ಸಂಗೀತಾಭಾಮಾನಿಗಳದ್ದಾಗಿದೆ.

ಪ್ರತಿಬೋಧಯ ಹೊನ್ನಾವರ

ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಅರಳಿಸಲು ಹೊನ್ನಾವರದಲ್ಲಿ ಪ್ರತಿಬೋಧಯಸಂಸ್ಥೆ ಉದಯವಾಗಿದೆ. ೧೯೯೮ ರಿಂದ ವಿವಿಧ ತರಗತಿಗಳಿಗೆ ತರಬೇತಿ ನೀಡುತ್ತಬಂದ ಈ ಸಂಸ್ಥೆ ೧೯೯೯ ರಿಂದ ಭಾರತೀಯ ಶಾಸ್ತ್ರೀಯಕಲೆ ಹಾಗೂ ಸಂಗೀತ ವಿಷಯಗಳಲ್ಲಿಯೂ ತರಬೇತಿ ನೀಡುತ್ತ ಬಂದಿದೆ. ಶಾಸ್ತ್ರೀಯಸಂಗೀತ, ಶಾಸ್ತ್ರೀಯ ವಾದ್ಯಸಂಗೀತಗಳಾದ ತಬಲಾ, ಕೊಳಲು, ಹಾರ್ಮೋನಿಯಂ ಮುಂತಾದ ಶಾಸ್ತ್ರೀಯ ಕಲೆಗಳ ಅಧ್ಯಯನಕ್ಕೆ ಇಲ್ಲಿ ಅವಕಾಶ ಮಾಡಿಕೊಡಲಾಗಿದೆ. ಸಿಸ್ಟರ್ ಮಾರಿಯಾ ಗೊರಟ್ಟಿ ಮುಂತಾದವರು ಈ ಸಂಸ್ಥೆಯ ಮೇಲ್ವಿಚಾರಕರಾಗಿದ್ದಾರೆ. ಪ್ರಾಥಮಿಕ ತರಗತಿಗಳ ವಿದ್ಯಾರ್ಥಿಗಳಿಂದ ಹಿಡಿದು ಪ್ರೌಢ ವ್ಯಾಸಂಗ ಮಾಡುವ ವಿದ್ಯಾರ್ಥಿಗಳವರೆಗೆ ಇಲ್ಲಿ ವಿವಿಧ ವಿಷಯಗಳ ಬಗೆಗೆ ತರಬೇತಿಯನ್ನು ಕೊಡಲಾಗುತ್ತಿದೆ.

ಅಧ್ಯಾಯ ೧೪

ಸ್ನಾತಕೋತ್ತರ ಸಂಗೀತವಿಭಾಗ
ಮತ್ತು
ವಿದ್ಯಾಪೀಠಗಳಲ್ಲಿ ಸಂಗೀತ ಶಿಕ್ಷಣ

ಸ್ನಾತಕೋತ್ತರ ಸಂಗೀತವಿಭಾಗ ಮತ್ತು ವಿದ್ಯಾಪೀಠಗಳಲ್ಲಿ ಸಂಗೀತ ಶಿಕ್ಷಣ

ಪ್ರಾಚೀನ ಹಾಗೂ ಮಧ್ಯಕಾಲದಲ್ಲಿ ಸಂಗೀತದಶಿಕ್ಷಣವನ್ನು ಗುರುಶಿಷ್ಯಪರಂಪರೆಯಿಂದ ಮುಂದುವರೆಸಲಾಗುತ್ತಿತ್ತು. ಈ ಗುರುಕುಲ ಸಂಗೀತಶಿಕ್ಷಣ ಪದ್ಧತಿಯಲ್ಲಿ ವಿದ್ವಾಂಸರು ಯೋಗ್ಯ ವಿದ್ಯಾರ್ಥಿಗಳನ್ನು ಬಾಲ್ಯದಿಂದಲೇ ಗುರುತಿಸಿ ೧೨ ವರ್ಷಗಳ ಕಾಲ ವಿದ್ಯಾಭ್ಯಾಸಕ್ಕಾಗಿ ತಮ್ಮ ಬಳಿಯೇ ಇಟ್ಟುಕೊಳ್ಳುತ್ತಿದ್ದರು. ಆ ಕಾಲದಲ್ಲಿ ಸಂಗೀತದ ಸಭಾಗಾಯ ಅಂಗದ ಹೊರತಾಗಿ ಶಾಸ್ತ್ರದ ಅಂಗ ವಿಶೇಷ ಪ್ರಚಾರದಲ್ಲಿರಲಿಲ್ಲ. ಆದ್ದರಿಂದ ಸಂಗೀತಗಾರರು ತಮ್ಮ ಸಂಗೀತ ವಿದ್ಯಾರ್ಥಿಗಳನ್ನು ಶ್ರೇಷ್ಠಗಾಯಕ ಹಾಗೂ ವಾದಕರನ್ನಾಗಿ ಮಾಡುವುದು ಅವರ ಏಕಮೇವ ಉದ್ದೇಶವಾಗಿತ್ತು. ಗುರುಗಳ ಈ ಇಚ್ಛೆಯನ್ನು ಸಫಲಮಾಡುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಮಾತ್ರ ಸಂಗೀತ ಅಭ್ಯಾಸಕ್ಕಾಗಿ ಆರಿಸಲಾಗುತ್ತಿತ್ತು. ಆ ಕಾಲದಲ್ಲಿ ಈಗಿನಂತೆ ಪೂರ್ವಪರೀಕ್ಷೆಯ ಪದ್ಧತಿ ಇರುತ್ತಿದ್ದಿಲ್ಲ. ಆದರರೆ ಒಳ್ಳೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಆರಿಸುವ ಬೇರೆ ಬೇರೆ ತಂತ್ರಗಳು ಹಾಗೂ ಸಾಧನಗಳು ಸಂಗೀತ ವಿದ್ವಾಂಸರಲ್ಲಿರುತ್ತಿತ್ತು. ಆ ಕಾಲದಲ್ಲಿ ಸಂಗೀತ ಶಾಸ್ತ್ರದ ಪ್ರಚಾರ ಜನರಲ್ಲಿ ವಿಶೇಷವಾಗಿರಲಿಲ್ಲ. ಅವರು ಕೇವಲ ಸಂಗೀತದಪ್ರಾಯೋಗಿಕ ಭಾಗವನ್ನು ಮಾತ್ರ ಅರಿಯುತ್ತಿದ್ದರು. ಆದ್ದರಿಂದ ಸತತ ಅಭ್ಯಾಸಮಾಡುವ ಗುರುಜನರು ತಮ್ಮ ಕಲೆಯ ಪ್ರದರ್ಶನವನ್ನು ಸಫಲವಾಗಿ ಮಾಡುತ್ತಿದ್ದರು ಮತ್ತು ಆಯ್ಕೆಯಾದ ಶಿಷ್ಯರನ್ನು ಸಫಲ ಕಲಾಕಾರರನ್ನಾಗಿ ತಯಾರಿಸುತ್ತಿದ್ದರು. ತಮ್ಮ ಪರಂಪರೆಯನ್ನು ಮನೆತನದ ಗೌರವವನ್ನು ರಕ್ಷಣೆ ಮಾಡುತ್ತಿದ್ದರು.

ಬದಲಾಗುತ್ತಿರುವ ಇಂದಿನ ದಿನಮಾನಗಳಲ್ಲಿ ಗುರುಕುಲಪದ್ಧತಿ ನಶಿಸುತ್ತಾ ಬರಲಾರಂಭಿಸಿದೆ. ಇದರಿಂದ ಸಂಗೀತ ಶಿಕ್ಷಣದ ಆಮೂಲಾಗ್ರ ಪರಿವರ್ತನೆಗಳಾದವು. ಸಂಗೀತದ ಪ್ರಾಚೀನ ಶಿಕ್ಷಣ ಬದಲಾಗಿ ಹೊಸಪದ್ಧತಿಯ ಸಂಗೀತ ಶಿಕ್ಷಣ ಪ್ರಾರಂಭವಾಯಿತು. ಪಾಠಶಾಲೆ, ಶಾಲೆಗಳು ಮಹಾವಿದ್ಯಾಲಯಗಳು ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ವಿದ್ಯಾಪೀಠಗಳಲ್ಲಿ ಒಂದು ಹೊಸಪಠ್ಯಕ್ರಮ ಪ್ರಾರಂಭಿಸಲಾಯಿತು. ಈ ಹೊಸ ಪಠ್ಯಕ್ರಮದಲ್ಲಿ ಸಂಗೀತದ ಪ್ರಾಯೋಗಿಕ ಅಂಗದ ಜೊತೆಗೆ ಸಂಗೀತದ ಶಾಸ್ತ್ರವಿಭಾಗಕ್ಕೂ ಸಹ ಸಾಕಷ್ಟು ಗಮನಕೊಡಲಾಯಿತು. ಉತ್ತರ ಭಾರತದಲ್ಲಿ ಮದ್ರಾಸ್ ಮೈಸೂರ ಮುಂತಾದ ನಗರಗಳಲ್ಲಿ ಸಂಗೀತದ

ವಿದ್ಯಾಪೀಠಗಳನ್ನು ಸ್ಥಾಪಿಸಲಾಯಿತು. ಇದರ ಹೊರತಾಗಿ ಮುಂಬೈ, ಕರ್ನಾಟಕ , ಬೆಂಗಳೂರು, ಮೈಸೂರು, ತಿರುಚಿ , ಆಂಧ್ರ ಕಲಕತ್ತಾ ಮುಂತಾದ ನಗರಗಳಲ್ಲಿ ಸಂಗೀತ ಶಿಕ್ಷಣವನ್ನು ಖಾಸಗಿಯಾಗಿಯೂ ಕೊಡುತ್ತಿರುವುದು ಇದರ ಬೆಳವಣಿಗೆಗೆ ಪೂರಕವಾಯಿತು.

ಇಂದು ಸಂಗೀತಶಾಸ್ತ್ರ ಹಾಗೂ ಪ್ರಾಯೋಗಿಕ ಕಲೆಯ ಸಂಶೋಧನಕಾರ್ಯಮಾಡುವ ಸಂಸ್ಥೆಗಳು ಅನೇಕ ಕಡೆ ಸ್ಥಾಪಿಸಲ್ಪಟ್ಟಿವೆ. ಇದರಿಂದಾಗಿ ಯುವಜನರಲ್ಲಿ ಶಾಸ್ತ್ರೀಯ ಸಂಗೀತವನ್ನು ಸೈದ್ಧಾಂತಿಕವಾಗಿ ಕಲಿಯಲು ಅನುಕೂಲವಾಗುತ್ತದೆ. ೧೯೫೪ ರಿಂದ ಶಾಲಾಕಾಲೇಜು ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತಕಲೆಯನ್ನು, ಜಾಗೃತ ಮಾಡಲು ಅಂತರ್‌ವಿಶ್ವವಿದ್ಯಾಲಯದ ಸಂಘಟನೆ ಯುವಜನ ಮಹೋತ್ಸವದಲ್ಲಿ ಗಾಯನ, ವಾದನ ನೃತ್ಯ ಹಾಗೂ ನಾಟಕ ಮುಂತಾದ ಕಲೆಗಳ ಪ್ರದರ್ಶನಕ್ಕಾಗಿ ಅವಕಾಶವನ್ನೀಯಲಾಗುತ್ತಿದೆ. ಇದರಿಂದಾಗಿ ಯುವಜನಾಂಗದಲ್ಲಿ ಭಾರತೀಯಕಲೆ ಹಾಗೂ ರಾಷ್ಟ್ರೀಯ ಐಕ್ಯತೆಯ ಭಾವನೆ ಬೆಳೆಯಲು ಸಹಾಯಕವಾಗಿದೆ. ಭಾರತೀಯ ಸಂಗೀತವು ಭಾರತೀಯ ಸಂಸ್ಕೃತಿಯ ಪ್ರತೀಕವೇ ಆಗಿದೆ. ಶಾಲಾ ಕಾಲೇಜಿನಲ್ಲಿ ಅದು ಪ್ರವೇಶಿಸಿದರೂ ತನ್ನ ಗೌರವ, ಘನತೆ ಸಂಪ್ರದಾಯವನ್ನು ಗಾಳಿಗೆ ತೂರಲು ಆಗುವುದಿಲ್ಲ. ಬದಲಾಗಿ ಶಾಲಾ ಕಾಲೇಜುಗಳಲ್ಲಿಯೂ ನಮ್ಮ ಪರಂಪರೆ ಸಂಸ್ಕೃತಿಯ ಪತಾಕೆಯನ್ನು ಅದು ಹಾರಿಸುತ್ತಿದೆ. ಸಂಗೀತ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಲ್ಲಿಯೂ ಉತ್ತಮ ನಡುವಳಿಕೆ ಹಾಗೂ ಸಂಸ್ಕೃತಿಯನ್ನು ತೋರುತ್ತಿರುವುದು ಉತ್ತಮ ಬೆಳವಣಿಗೆಗೆ ಬುನಾದಿ ಆದೀತು.

ಕರ್ನಾಟಕದಲ್ಲಿ ಮಲ್ಲಿಕಾರ್ಜುನ ಮನ್ಸೂರ್ ಅವರ ಹಿರಿತನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂಗೀತವಿಭಾಗ ಪ್ರಾರಂಭವಾಯಿತು. ಇಲ್ಲಿ ಸಂಗೀತದ ಸ್ನಾತಕೋತ್ತರ ತರಗತಿಗಳು ಹಾಗೂ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸಗಳು ನಡೆಯುತ್ತಲಿದೆ. ಕರ್ನಾಟಕದ ಹಿಂದುಸ್ತಾನೀ ಸಂಗೀತ ವಿಷಯವಿರುವ ಎಲ್ಲ ಕಾಲೇಜುಗಳಲ್ಲಿ ಸಂಗೀತ ಭೋಧನೆ ಮಾಡುತ್ತಿರುವ ಉಪನ್ಯಾಸಕರುಗಳು ಹೆಚ್ಚಾಗಿ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಂಗೀತ ವಿಭಾಗದಲ್ಲಿ ಅಧ್ಯಯನ ಮಾಡಿದವರೇ ಆಗಿದ್ದಾರೆ. ಕರ್ನಾಟಕ ಕಾಲೇಜಿನಲ್ಲಿ ಸಂಗೀತದ ಮಹಾವಿದ್ಯಾಲಯವೇ ಇರುವುದು ಸಂಗೀತದ ಬಗೆಗೆ ಹೆಚ್ಚಿನ ತಿಳುವಳಿಕೆಗೆ ಅಣಿವು ಮಾಡಿಕೊಟ್ಟಿದೆ. ಗದಗದ ಪಂಚಾಕ್ಷರೀ ಗವಾಯಿಗಳ ಸಂಗೀತದ ಶಾಲೆಯಲ್ಲಿಯೂ ಸಂಗೀತ ಬೋಧನಾಕಾರ್ಯ ನಡೆದಿದೆ. ಇಲ್ಲಿಯೂ

ಸಹ ಸಂಗೀತ ಮಹಾವಿದ್ಯಾಲಯ ಅಸ್ತಿತ್ವಕ್ಕೆ ಬಂದಿದೆ.

ಹಂಪೆಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಗೀತದಬಗೆಗೆ ಪಿ.ಎಚ್. ಡಿ ಅಧ್ಯಯನ ಮಾಡಲು ಅವಕಾಶವಿದ್ದು ೧೯೯೬ ರಿಂದ ಇಲ್ಲಿ ಸಂಗೀತವಿಭಾಗವು ಪ್ರಾರಂಭವಾಗಿದೆ. ಪ್ರೊ. ಹನುಮಣ್ಣಾ ನಾಯಕ ದೊರೆ ಇಲ್ಲಿನ ಸಂಗೀತ ವಿಭಾಗದ ಮುಖ್ಯಸ್ತರಾಗಿ ಕೆಲಸಮಾಡುತ್ತಿದ್ದಾರೆ.

ಶಾಸ್ತ್ರೀಯ ಸಂಗೀತದಬಗೆಗೆ ಇಲ್ಲಿ ಹೆಚ್ಚಿನಅಧ್ಯಯನ ಶಾಸ್ತ್ರವಿಭಾಗದಲ್ಲಿ ಮಾಡಲು ಅಣಿವು ಮಾಡಿಕೊಡಲಾಗಿದೆ. ಪಿ.ಎಚ್.ಡಿ ಅಧ್ಯಯನಕ್ಕೆ ಹಲವಾರು ಪ್ರತಿಭಾವಂತ ಕಲಾಕಾರರು, ಆಸಕ್ತರು ಇಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಂಡು ಅಧ್ಯಯನ ಮಾಡುತ್ತಿದ್ದಾರೆ. ಪ್ರೊ. ಚಂದ್ರಶೇಖರ ಕಂಬಾರರು ಉಪಕುಲಪತಿಗಳಾಗಿದ್ದ ಸಮಯದಲ್ಲಿ ಇಲ್ಲಿ ಸಂಗೀತವಿಭಾಗ ಪ್ರಾರಂಭವಾಯಿತೆನ್ನುವುದನ್ನು ನೆನೆಸಬಹುದು. ಉತ್ತಮ ಗಾಯಕರೂ ಆದ ಶ್ರೀ ಹನುಮಣ್ಣಾ ನಾಯಕ ದೊರೆ ಮೊದಲು ಗುಲ್ಬರ್ಗಾದ ಖಾಸಗೀ ಕಾಲೇಜೊಂದರಲ್ಲಿ ಸಂಗೀತ ಪ್ರಾದ್ಯಾಪರರಾಗಿದ್ದರು. ಇವರ ಸಂಗೀತ ಸೇವೆಯನ್ನು ಗುರುತಿಸಿ ರಾಜ್ಯ ಪ್ರಶಸ್ತಿ ಹಾಗೂ ಇನ್ನು ಅನೇಕ ಪ್ರಶಸ್ತಿಗಳು ಬಂದಿವೆ.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ದಿ.ಪಂ. ಮಲ್ಲಿಕಾರ್ಜುನ ಮನ್ಸೂರ್‌ರ ಹಿರಿತನದಲ್ಲಿ ೧೯೭೬ ರಲ್ಲಿ ಸಂಗೀತ ಸ್ನಾತಕೋತ್ತರ ವಿಭಾಗ ಆರಂಭವಾಯಿತು.

ಸಂಗೀತದಲ್ಲಿ ಎಂ. ಎ. ಗಾಯನ ಹಾಗೂ ವಾದನ (ತಬಲಾ) ಸಂಗೀತರತ್ನ, ಮಧ್ಯಮ ಮುಂತಾದ ಡಿಗ್ರಿಗಳ ಪಠ್ಯಕ್ರಮವನ್ನು ಇಲ್ಲಿ ಬೋಧಿಸಲಾಗುತ್ತದೆ. ಶಾಲಾ ಕಾಲೇಜುಗಳಲ್ಲಿ ಹೇಗೆ ಸಂಗೀತವಿಷಯದ ಬೋಧನೆ ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಿಕೊಡಲಾಗುತ್ತದೆ. ಭಾರತದ ಶ್ರೇಷ್ಠ ಅಗ್ರಪಂಕ್ತಿಯ ಗಾಯಕರಾದ ಪಂ ಮಲ್ಲಿಕಾರ್ಜುನ ಮನ್ಸೂರ್ ಪದ್ಮಭೂಷಣ , ಪಂ. ಡಾಃ ಬಸವರಾಜ ರಾಜಗುರು, ಡಾಃ ಶ್ರೀಮತಿ ಗಂಗೂಬಾಯೀ ಹಾನಗಲ್, ಪಂ. ಪಂಚಾಕ್ಷರೀ ಸ್ವಾಮಿ ಮತ್ತಿಪಟ್ಟಿ ರಾಜೀವ ಪುರಂದರೆ, ಪಂ. ಸಂಗಮೇಶ್ವರ ಗುರವ, ಶ್ರೀಮತಿ ಜಾನಕಿ ಅಯ್ಯರ್ ಮುಂತಾದವರ ಹಿರಿತನದಲ್ಲಿ ಇಲ್ಲಿ ಸಂಗೀತವಿಭಾಗ ಅತ್ಯಂತ ಪ್ರಭಾವಶಾಲಿಯಾಗಿ ನಡೆಯುತ್ತ ಬಂತು. ಸಂಗೀತ ಶಾಸ್ತ್ರಜ್ಞರಾದ ಡಾಃ ಬಿಂದುಮಾದವ ಪಾಠಕ್ ಹಾಗೂ ಡಾಃ

ಎ.ಯು ಪಾಟೀಲರು ಆಡಳಿತಾತ್ಮಕವಾಗಿ ಹಾಗೂ ಅಧ್ಯಾಪಕರಾಗಿ ಈ ವಿಭಾಗವನ್ನು ಮುಂದುವರೆಸಿಕೊಂಡು ಬಂದರು. ಇಂದು ಡಾಃ ಮೀರಾ ಶಿವಶಂಕರ ಗುಂಡಿ, ಹಾಗೂ ಈರಣ್ಣ ಹೂಗಾರ (ಪಂ. ಹೂಗಾರರ ಮಗ) ಇಲ್ಲಿ ಸಂಗೀತ ಪ್ರಾದ್ಯಾಪಕರಾಗಿ ಕೆಲಸಮಾಡುತ್ತ ಬಂದಿದ್ದಾರೆ. ಪಂಃ ಚಂದ್ರಶೇಖರ ಪುರಾಣಿಕ ಮಠರು ಗೌರವ ಪ್ರಾಧ್ಯಾಪಕರಾಗಿ ಸಂಗೀತಪಾಠ ಹೇಳುತ್ತಾರೆ.



ಪದ್ಮಭೂಷಣ ಡಾ. ಮಲ್ಲಿಕಾರ್ಜುನ ಮನ್ಸೂರ್

ಅಧ್ಯಾಯ ೧೫

ಉ.ಕ. ಜಿಲ್ಲೆಯ ಪ್ರಮುಖ ಸಂಗೀತ ಪಾಠಶಾಲೆಗಳು

ಸಂಗೀತ ಪಾಠಶಾಲೆ

ಲಲಿತಕಲೆಗಳಲ್ಲೆಲ್ಲ ಸಂಗೀತಕಲೆಯು ಅತ್ಯಂತ ಶ್ರೇಷ್ಠವಾದ ಕಲೆಯಾಗಿದೆ. ಮಾನವನ ಭಾವರಸಗಳು ಅತ್ಯಂತ ಪರಿಣಾಮಕಾರಕವಾಗಿ ಕಲೆಯಮೂಲಕ. ಬಾಹ್ಯದಲ್ಲಿ ಅಭಿವ್ಯಕ್ತಿಪಡಿಸುವಲ್ಲಿ ಸಂಗೀತ ಕಲೆಯಷ್ಟು ಇನ್ನಾವ ಕಲೆಗಳೂ ಸಫಲತೆಯನ್ನು ಹೊಂದಿಲ್ಲ. ಇದು ಅನುಭವ ವೇದ್ಯವಾದ ವಿಷಯವಾಗಿದೆ. ಸಂಗೀತದಿಂದ ನಮ್ಮ ತ್ರಿಕರ್ಣಗಳು ಏಕೀಕೃತವಾಗಿ, ಮಹಾನಂದಪ್ರಾಪ್ತಿಯ ಹಿರಿಯ ಹೆದ್ದಾರಿಯಲ್ಲಿ ಮುನ್ನಡೆಯುತ್ತೇವೆ. ಈ ದೃಷ್ಟಿಯಿಂದ ಸಂಗೀತವು ಒಂದು ಸಹಜಯೋಗ ಪರಮಾನಂದವಾಗಿದ್ದು ಪರಮಾನಂದ ಪ್ರಾಪ್ತಿಯ ಒಂದು ಹಿರಿಯ ಸಾಧನಮಾರ್ಗವಾಗಿದೆ.

ಕಲಾವಿದನು ತಾನುಹಾಡುವ ರಾಗದ ರಸಭಾವದ ಅಂತಸ್ಸತ್ವವನ್ನು ಆತ್ಮಸಾಕ್ಷಾತ್ ಮಾಡಿಕೊಂಡಾಗಲೇ ಆತನಿಗೆ ಅಲೌಕಿಕವಾದ ಒಂದು ಆನಂದವು ದೊರೆಯುತ್ತದೆ. ಮುಂದೆ ಈ ಆನಂದವು ಕೇವಲ ಕಲಾವಿದನಿಗೆ ಸೀಮಿತವಾಗಿರದೇ ಅದು ಆತನ ಕಲೆಯ ಮೂಲಕ ಶ್ರೋತೃ ವರ್ಗಗಳಿಗೂ ಆನಂದವನ್ನುಂಟುಮಾಡುತ್ತದೆ. ಈ ಆನಂದವು ಕೇವಲ ಅನುಭವಜನ್ಯವಾಗಿದ್ದು , ಬಾಹ್ಯದಲ್ಲಿ ಶಬ್ದಭಂಡಾರಗಳಿಂದ ವರ್ಣಿಸುವುದು ಅಸದಳವಾಗಿದೆ. ಆಧುನಿಕ ಕಾಲದಲ್ಲಿ ಸಂಗೀತ ಬೆಳವಣಿಗೆಯಬಗೆಗೆ ಅನೇಕ ಪ್ರಯತ್ನಗಳು ನಡೆದು ಇಂದು ಶಾಸ್ತ್ರೀಯ ಸಂಗೀತವು ಮನೆಮಾತಾಗಿದೆ. ಸಂಗೀತಕಲೆಯ ಈ ರೀತಿಯ ಜನಪ್ರಿಯತೆ ಮತ್ತು ಬೆಳವಣಿಗೆಗಳನ್ನು ಕಂಡರೆ, ಆನಂದವೆನಿಸಿದರೂ, ಈಗಿನ ಸಂಗೀತ ಕಲೆಯಲ್ಲಿಯ ಸತ್ವಹೀನತೆಯನ್ನು ಕಂಡರೆ ವಿಷಾದವೆನಿಸದೇ ಇರದು. ಸಂಗೀತ ಪರಂಪರಾಗತ ಗುರು-ಶಿಷ್ಯರ ಪದ್ಧತಿ ಬಿದ್ದುಹೋಗಿದ್ದು ಹಣಕೊಟ್ಟು ಕಲಿಯುವ ಕಲಿಸುವ ಪದ್ಧತಿಯಿಂದ ಕಲಿಸುವವರ ಮತ್ತು ಕಲಿಯುವವರ ನಡುವಿನ ಮಧುರ ಬಾಂಧವ್ಯಕ್ಕೆ ಕೊಡಲಿ ಏಟು ಬಿದ್ದಂತಾಗಿದೆ. ಗುರುಕುಲ ಪದ್ಧತಿಯಲ್ಲಿ ಗುರುವಿನಸಾನಿಧ್ಯದಲ್ಲಿ ಶಿಷ್ಯನು ನಿರಂತರವಾಗಿ ತನ್ನ ಕಲೆಯವಿಷಯದಲ್ಲಿ ಚಿಂತಾಮಗ್ನನಾಗಿರುತ್ತಿದ್ದ ಮತ್ತು ಗುರುವಿನ ಸಮರ್ಥ ಮಾರ್ಗದರ್ಶನದಲ್ಲಿ ನಿರಾತಂಕವಾಗಿ ತನ್ನ ಕಲೆಯನ್ನು ಆತ್ಮಸಾತ್ ಮಾಡಿಕೊಳ್ಳುತ್ತಿದ್ದನು.

* ಆಧುನಿಕ ಶಿಕ್ಷಣ ಪದ್ಧತಿಯಂತೆ ತಾನು ಕಲಿಯುವ ಕಲೆಯ ವಿಷಯಕ್ಕೆ ಯಾವದೃಷ್ಟಿಯಿಂದಲೂ

ಅಡಿಟಿಪ್ಪಣಿ: * ಗುರುಕುಲ ಪದ್ಧತಿಯಲ್ಲಿನ ಸಂಗೀತ ಕಲಿಕೆಯ ಅಧ್ಯಯನದಿಂದ ......

ಅವಸರಪಡಬೇಕಾಗಿರಲಿಲ್ಲ. ಸಂಗೀತದಲ್ಲಿಯ ಒಂದೊಂದು ಹಂತವೂ ವ್ಯವಸ್ಥಿತವಾಗಿ ಪರಿಪೂರ್ಣಗೊಳ್ಳದೇ ಗುರುವು ಮುಂದಿನ ಹಂತಕ್ಕೆ ಹೋಗುತ್ತಿರಲಿಲ್ಲ. ಒಂದು ಹಂತವು ಇಷ್ಟೇ ಅವಧಿಯಲ್ಲಿ ಮುಗಿಯಬೇಕು. ಮತ್ತು ಮುಗಿಸಬೇಕು ಎಂಬ ಯಾವ ಕಟ್ಟುಪಾಡೂ ಇರುತ್ತಿರಲಿಲ್ಲ. ಗುರುಶಿಷ್ಯರ ಸಂಗೀತ ಶಿಕ್ಷಣವು ನಿರಾತಂಕವಾಗಿ, ನಿರಾಯಾಸವಾಗಿ, ಶಿಷ್ಯನಿಗೆ ಬರುವಷ್ಟು ಕಾಲವೂ ನಡೆಯುತ್ತಿತ್ತು. ಹೀಗಾಗಿ ಗುರುವು ತನ್ನ ಜೀವನಾವಧಿಯಲ್ಲಿ ಹಲವಾರು ಯೋಗ್ಯಶಿಷ್ಯರನ್ನು ತಯಾರುಮಾಡಲು ಸಮರ್ಥನಾಗುತ್ತಿದ್ದನು. ಶಿಷ್ಯರೂ ಕೂಡ ಅದೇ ಪರಂಪರೆಯನ್ನು ಪರಿಗ್ರಹಿಸುತ್ತಿದ್ದರಿಂದ ಕಲೆಯು ಪರಂಪರಾಗತವಾಗಿ ಉಳಿದು ಬೆಳೆದುಕೊಂಡು ಬರುತ್ತಿತ್ತು. ಆದರೆ ಆಧುನಿಕ ಸಂಗೀತ ಪದ್ಧತಿಯನ್ನು ಗುರುಶಿಷ್ಯ ಪರಂಪರೆಗೆ ತುಲನಾತ್ಮಕವಾಗಿ ಹೋಲಿಸಿ ನೋಡಿದರೆ ಇವುಗಳ ನಡುವಿನ ಕಂದಕದ ಅರಿವಾಗದೇ ಇರದು. ಶಾಲಾ ಕಾಲೇಜುಗಳಲ್ಲಿ ಸಂಗೀತ ಸಂಸ್ಥೆಗಳಲ್ಲಿ ಸಂಗೀತ ಕಲೆಯು ನಿರ್ದಿಷ್ಟ ಪಡಿಸಿದ ಒಂದು ಅಭ್ಯಾಸಪತ್ರಿಕೆಗೆ ಒಳಪಟ್ಟಿದ್ದು ಒಂದು ನಿರ್ಧಿಷ್ಟ ಪಡಿಸಿದ ಅವಧಿಯಲ್ಲಿ ಅದು ಮುಗಿಯಬೇಕು. ಇದರ ಜೊತೆಗೆ ಸಾಮೂಹಿಕ ಅಭ್ಯಾಸ (Group teaching) ಇರುವುದರಿಂದ ವೈಯಕ್ತಿಕವಾಗಿ ವಿದ್ಯಾರ್ಥಿಗಳತ್ತ ಲಕ್ಷ್ಯ ಪೂರೈಸಲು ವೇಳೆ ಸಾಲದೇ ಹೋಗಿ ಸಂಗೀತ ಶಿಕ್ಷಣವು ಕೇವಲ ಸ್ವರಗಳ ಡೊಂಬರಾಟವಾಗುತ್ತದೆ. ರಸಭಾವದ ದೃಷ್ಟಿಯಿಂದ ಅದು ಶುಷ್ಕವಾಗುತ್ತದೆ. ಹೀಗಾಗಿ ಸಂಗೀತ ಕಲೆಯು ಇಂದು ಸಾಕಷ್ಟು ಬೆಳೆದುಬಂದಿದ್ದರೂ ದರ್ಜೆಯ ದೃಷ್ಟಿಯಿಂದ ಅದು ಯಾವ ಒಂದು ನಿಧಿಷ್ಟ ಮಟ್ಟಕ್ಕೂ ಬಂದಿಲ್ಲವೆಂದೇ ಹೇಳಬೇಕು. ಈ ಬಗೆಯ ಸಂಗೀತ ಶಿಕ್ಷಣದಿಂದ ಯಾವಕಲಾವಿದನೂ ಉತ್ತಮ ಕಲಾಕಾರನಾಗಲು ಅನರ್ಹನಾಗುತ್ತಾನೆ. ಉತ್ತಮ ಕಲಾಕಾರನಾಗಿದ್ದವರು ಗುರುಗಳ ಸಾನಿಧ್ಯದಲ್ಲಿ ಕಲಿತವರೇ ಆಗಿರುತ್ತಾರೆ.

ಸಮಾಜದಲ್ಲಿ ಇಂದು ಎಲ್ಲವೂ ಪರಿವರ್ತನಶೀಲವಾಗಿದೆ. ಸಂಗೀತಕಲೆಯೂ ಇದಕ್ಕೆ ಹೊರತಾಗಿಲ್ಲ. ಅಂದಿನ ಗುರುಕುಲಪದ್ಧತಿಯಲ್ಲಿನ ಅಂಶಗಳು ಇಂದಿನ ಶಾಲಾಕಾಲೇಜುಪದ್ಧತಿಯ ಸಂಗೀತಶಿಕ್ಷಣದಲ್ಲಿ ಕಂಡುಬರುತ್ತಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಆದರೂಸಹ ಇಂದಿನ ದಿನಮಾನಗಳಲ್ಲಿಯೂ ಸಂಗೀತಶಿಕ್ಷಣದಲ್ಲಿ ಗುರುಕುಲಪದ್ಧತಿ ಅಂದಿನಷ್ಟು ಘಾಡವಾಗಿ ಇಲ್ಲದಿದ್ದರೂಸಹ ನಿಕಟಸಂಬಂಧ ಸಂಪರ್ಕಗಳು ಗುರುಶಿಷ್ಯರಲ್ಲಿ ಇರುವುದನ್ನು ನಾವು ಸಂಗೀತಶಿಕ್ಷಣದಲ್ಲಿ ಮಾತ್ರ ಕಾಣಬಹುದಾಗಿದೆ.

ಉತ್ತರಕನ್ನಡ ಜಿಲ್ಲೆಯ ಪ್ರಮುಖ ಸಂಗೀತಪಾಠಶಾಲೆಗಳು

ಸಾಯೀ ಸಂಗೀತ ವಿದ್ಯಾಲಯ

೧೯೫೨ ರಲ್ಲಿ ಪಂಃ ಆರ್.ಟಿ. ಹೆಗಡೆ ಶೀಗೇಹಳ್ಳಿಯವರ ನೇತೃತ್ವದಲ್ಲಿ ಸಿರ್ಸಿಯಲ್ಲಿ 'ಸಾಯೀ ಸಂಗೀತವಿದ್ಯಾಲಯ' ಪ್ರಾರಂಭವಾಯಿತು. ಖ್ಯಾತ ವಕೀಲರು, ವೈದ್ಯರು ಮುಂತಾದ ಸಮಾಜದ ಗಣ್ಯರನ್ನೊಳಗೊಂಡ ಈ ವಿದ್ಯಾಲಯ ಸಿರ್ಸಿಯಲ್ಲಿ ಸಂಗೀತಾಸಕ್ತ ವಿದ್ಯಾರ್ಥಿಗಳಿಗೆ ಪಾಠ ಪ್ರವಚನವನ್ನು ಹೇಳುತ್ತ ಬಂದಿದೆ. ಪಂಃ ಆರ್. ಟಿ. ಹೆಗಡೆ ಶಿಗೇಹಳ್ಳಿ ಇವರ ಶಿಷ್ಯರಾದ ಶ್ರೀ ಎಂ. ಪಿ. ಹೆಗಡೆ ಪಡಿಗೇರಿ ಆಕಾಶವಾಣಿ ಕಲಾವಿದರು ಆರ್.ಟಿ. ಹೆಗಡೆಯವರ ಅನಾರೋಗ್ಯದ ಕಾರಣ ಈಗ ಇವರೇ ಇಲ್ಲಿನ ಸಂಗೀತ ಪಾಠಶಾಲೆಯ ಮುಖ್ಯಗುರುಗಳು. ಸಿರ್ಸಿಯಂತಹ ಪಟ್ಟಣದಲ್ಲಿ ಶಾಸ್ತ್ರೀಯ ಸಂಗೀತದಂತಹ ಕಲೆಯ ಬೆಳವಣಿಗೆಗೆ ಸಹಾಯಕವಾಗಿ ಈ ಸಂಗೀತ ಶಾಲೆ ನಿಂತಿದೆ. ಪ್ರತಿವರ್ಷ ತನ್ನಶಾಲೆಯ ವಾರ್ಷಿಕೋತ್ಸವವನ್ನು ಆಚರಿಸುತ್ತಬಂದ ಈ ಸಂಗೀತಪಾಠಶಾಲೆ ದೇಶದ ಒಳ್ಳೆಯ ಕಲಾಕಾರರನ್ನು ಸಿರ್ಸಿಗೆ ಕರೆಯಿಸಿ ತಮ್ಮ ವಿದ್ಯಾರ್ಥಿ ಹಾಗೂ ಗುರುಗಳ ಜೊತೆಯಲ್ಲಿ ಅವರ ಕಾರ್ಯಕ್ರಮವನ್ನೂ ಏರ್ಪಡಿಸುವಂತಹ ಉತ್ತಮ ಪರಂಪರೆ ಹಾಕಿಕೊಂಡಿದೆ. ಸಂಗೀತದಲ್ಲಿ ಅನೇಕ ಶಿಷ್ಯರನ್ನು ಕಲಾಕಾರರನ್ನು ತರಬೇತಿಗೊಳಿಸಿದ ಈ ಸಂಗೀತಶಾಲೆಯ ಅನೇಕರು ಆಕಾಶವಾಣಿಯಿಂದಲೂ ತಮ್ಮ ಕಾರ್ಯಕ್ರಮವನ್ನು ನೀಡುತ್ತಿದ್ದಾರೆ. ಶ್ರೀ ಶ್ರೀಪಾದ ಹೆಗಡೆ ಸೋಮನಮನೆ, ಚಂದ್ರಕಲಾ ಹೆಗಡೆ, ಪ್ರಕಾಶ ಚಕ್ರವರ್ತಿ ಮುಂತಾದ ಕಲಾಕಾರರನ್ನು ನಾಡಿಗೆ ಕೊಟ್ಟಿದೆ. ಸಿರ್ಸಿಯಂತಹ ಪಟ್ಟಣದಲ್ಲಿ ಅನೇಕ ವರ್ಷಗಳಿಂದ ನಡೆದುಕೊಂಡು ಬಂದ ಈ ಸಂಗೀತವಿದ್ಯಾಲಯ ಉತ್ತಮವಾಗಿ ನಡೆಯುತ್ತಿದೆ.

ವಿಕಾಸ ತಬ್ಲಾ ವಿದ್ಯಾಲಯ

ಸಂಗೀತದ ತಬ್ಲಾವಾದ್ಯದ ಬನಾರಸ್ ಘರಾನೆಯ ಶಂಕರಕವಡಿಮಟ್ಟಿಯವರ ಶಿಷ್ಯರಾದ ಶ್ರೀ ಗಜಾನನ ಹೆಗಡೆ ಗಿಳಿಗುಂಡಿ ಸಿರ್ಸಿಯಲ್ಲಿ ತಬ್ಲಾ ವಿದ್ಯಾಲಯವನ್ನು ನಡೆಸುತ್ತ ಬಂದಿದ್ದಾರೆ. ಕಾಲೇಜಿಗೆ ಹೋಗುತ್ತಿರುವ ತರುಣ ವಿದ್ಯಾರ್ಥಿಗಳ ಪ್ರತಿಭೆಗೆ ಇಲ್ಲಿ ತಬ್ಲಾವಾದನದಮೂಲಕ ಸಂಗೀತಶಿಕ್ಷಣವನ್ನು ನೀಡಲಾಗುತ್ತಿದೆ. ಅನೇಕ

ವಿದ್ಯಾರ್ಥಿಗಳನ್ನು ಹೊಂದಿದ ಈ ವಿದ್ಯಾಲಯ, ಸಂಗೀತಕಲೆಯ ಸಾತ್ ಸಂಗತ್‌ಅನ್ನೂ ಹೇಳಿಕೊಡಲಾಗುತ್ತಿದೆ. ಭರತನಹಳ್ಳಿಯ ಪ್ರಗತಿ ಸಂಗೀತ ವಿದ್ಯಾಲಯದಲ್ಲಿಯೂ ಶ್ರೀ ಗಜಾನನ ಹೆಗಡೆ ತಬ್ಲಾ ಶಿಕ್ಷಕರಾಗಿ ಕೆಲಸ ಮಾಡುತ್ತ ಬಂದಿದ್ದಾರೆ. ಇವರ ತಮ್ಮ ಗುರುಪ್ರಸಾದ ಗಿಳಿಗುಂಡಿ ಮುಂಡ್ಗೆಯಲ್ಲಿ ಹಾರ್ಮೋನಿಯಂ ಅಭ್ಯಾಸ ಮಾಡುತ್ತಿದ್ದಾರೆ. ಪ್ರಕಾಶ ಹೆಗಡೆ, ರವಿ ಹೆಗಡೆ ಮುಂತಾದ ಸಂಗೀತಾಸಕ್ತ ಯುವಕರೂ ಇಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಅರುಣೋದಯ ಸಂಗೀತ ವಿದ್ಯಾಲಯ

ದಿಃ ಮಹಾರುದ್ರಪ್ಪ ಪೂಜಾರರಿಂದ ಪ್ರಾರಂಭವಾದ ಈ ಸಂಗೀತ ವಿದ್ಯಾಲಯವನ್ನು ಅವರ ಶಿಷ್ಯರಾದ ಪ್ರೊಃ ಸಂಜೀವ ಪೋತದಾರರು ನಡೆಸುತ್ತ ಬಂದಿದ್ದಾರೆ. ಶ್ರೀ ವಿಜಾಪುರೆ ಇಲ್ಲಿ ಗಾಯನ ಹಾಗೂ ಹಾರ್ಮೋನಿಯಂ ವಾದನವನ್ನು ಕಲಿಸುತ್ತಾರೆ. ಸಿರ್ಸಿಯ ಪ್ರಸಿದ್ಧ ಮಾರಿಕಾಂಬಾ ದೇವಾಲಯದ ಆವಾರದಲ್ಲಿ ನಡೆಯುತ್ತ ಬಂದ ಈ ಸಂಗೀತ ವಿದ್ಯಾಲಯ ಸಂಗೀತ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದೆ. ವಾರ್ಷಿಕೋತ್ಸವವನ್ನು ಏರ್ಪಡಿಸುತ್ತ, ಖ್ಯಾತ ಕಲಾಕಾರರ ಸಂಗೀತ ಕಾರ್ಯಕ್ರಮವನ್ನು ನೀಡುತ್ತಬಂದ ಈ ಸಂಗೀತವಿದ್ಯಾಲಯ ಅನೇಕ ಸಂಗೀತಾಸಕ್ತರನ್ನು ತರಬೇತುಗೊಳಿಸಿದೆ. ಪ್ರತಿವರ್ಷ ಮಹಾರುದ್ರಪ್ಪ ಪೂಜಾರರವರ ಹೆಸರಿನಲ್ಲಿ ಸಂಗೀತೋತ್ಸವವನ್ನು ಈ ವಿದ್ಯಾಲಯ ನೀಡುತ್ತಬಂದಿದೆ.

ನಿನಾದ ಸಂಗೀತ ವಿದ್ಯಾಲಯ

ಪಂಃ ಕುಮಾರ ಗಂಧರ್ವರ ಒಡನಾಡಿಗಳಾದ ಶ್ರೀ ಪಂಡಿತರು ಗೋಕರ್ಣದವರು. ಇವರು ಇಲ್ಲಿ ಸಂಗೀತವಿದ್ಯಾಲಯವನ್ನು ಸ್ಥಾಪಿಸಿ ವಾಯಲಿನ್ ವಾದ್ಯದ ಮೂಲಕ ಸಂಗೀತಪಾಠ ಮಾಡುತ್ತಿದ್ದಾರೆ. ಸಂಗೀತಶಿಕ್ಷಣದ ಬಗೆಗೆ ಉತ್ತಮ ಕನಸನ್ನು ಹೊಂದಿದ ಪಂಡಿತರು ಅನೇಕ ಶಿಷ್ಯರನ್ನು ತಯಾರಿಗೊಳಿಸುತ್ತಿದ್ದಾರೆ. ಶ್ರೀಪಾದ ಹೆಗಡೆ ಸೋಮನಮನೆ ಧಾರವಾಡ ಆಕಾಶವಾಣಿ ಕಲಾವಿದರು. ಇವರೇ ನಿನಾದ ಸಂಗೀತಶಾಲೆಯಲ್ಲಿ ಸಂಗೀತಪಾಠ ನಡೆಸಿಕೊಡುತ್ತಾರೆ. ಸಂಗೀತಶಾಲೆ ಉತ್ತಮವಾಗಿ ನಡೆದಿದೆ. ಸಾಯೀ ಸಂಗೀತ ವಿದ್ಯಾಲಯದ ಸಹಕಾರದೊಂದಿಗೆ ಸಂಗೀತಕಾರ್ಯಕ್ರಮ ವಾರ್ಷಿಕೋತ್ಸವವನ್ನು ಏರ್ಪಡಿಸುತ್ತ ಬಂದಿರುವ ಈ ವಿದ್ಯಾಲಯ

ಟಿಪ್ಪಣಿಃ ಜಿಲ್ಲೆಯ ಸಂಗೀತಶಾಲೆಗಳ ಮುಖ್ಯಸ್ಥರ ಸಂದರ್ಶನದಿಂದ ....

೧೯೯೫ ರ ನಂತರ ಸ್ಥಾಪಿತವಾಗಿದೆ. ಸಂಗೀತ ವಿದ್ಯಾರ್ಥಿಗಳನ್ನು ಕಲಾಕಾರರನ್ನಾಗಿ ಹಾಗೂ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿಯು ನಡೆಸುವ ಜ್ಯೂನಿಯರ ಸೀನಿಯರ್ ವಿದ್ವತ್ ಮುಂತಾದ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತರಬೇತುಗೊಳಿಸಲು ಈ ವಿದ್ಯಾಲಯ ಶ್ರಮಿಸುತ್ತಿದೆ.

ಕಾಸರಕೋಡಿನ ಸ್ನೇಹಕುಂಜ ಸಂಗೀತ ಪಾಠಶಾಲೆ

ಖ್ಯಾತ ಪರಿಸರ ಹೊರಾಟಗಾರ್ತಿ, ಸಾಮಾಜಿಕ ಕಾರ್ಯಕರ್ತೆ, ಸುಪ್ರಸಿದ್ದ ವೈದ್ಯೆಯಾಗಿ ಸೇವೆಸಲ್ಲಿಸಿದ ದಿ. ಡಾಃ ಕುಸುಮ ಸೊರಬರು ಸ್ನೇಹಕುಂಜ ಸಂಸ್ಥೆಯನ್ನು ಸ್ಥಾಪಿಸಿದರು. ಆರೋಗ್ಯಧಾಮ, ಶಿಕ್ಷಣ, ತೋಟಗಾರಿಕೆ ಮುಂತಾದ ಕ್ಷೇತ್ರಗಳನ್ನು ಹೊಂದಿದ ಈ ಸಂಸ್ಥೆಯಲ್ಲಿನ ಸಂಗೀತಶಾಲೆ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಸಂಸ್ಥೆಯ ದಾಯಿತರಬೇತಿ ವಿದ್ಯಾರ್ಥಿಗಳು, ಸಾಮಾಜಿಕ ಕಾರ್ಯಕರ್ತರು, ವೈದ್ಯರೂ ಸಹ ಇಲ್ಲಿ ಬೇದಭಾವವಿಲ್ಲದೇ ಸಂಗೀತ ಪಾಠ ಕಲಿಯಲು ಉತ್ತಮ ಅವಕಾಶವನ್ನು ಡಾಃ ಕುಸುಮ ಸೊರಬರು ಮಾಡಿಕೊಟ್ಟರು. ಅಂದಿನಿಂದ ಇಂದಿನತನಕ ಉತ್ತಮ ಸಾಂಸ್ಕೃತಿಕಪರಿಸರ ನಿರ್ಮಾಣವಾಗಲು, ಸಾಂಸ್ಕೃತಿಕ ಸಮೃದ್ದಿ ಈ ಸಂಸ್ಥೆಯಲ್ಲಿ ಹಾಗೂ ಸಮಾಜದಲ್ಲಿ ನೆಲೆಸಲು ಇಲ್ಲಿನ ಸಂಗೀತಶಾಲೆ ತನ್ನದೇಆದ ಸೇವೆಯನ್ನು ಸಲ್ಲಿಸುತ್ತಿದೆ. ಇದುವರೆಗೆ ಇಲ್ಲಿ, ಸಂಗೀತ ಗುರುಗಳಾಗಿ ಶ್ರೀ ಷಡಕ್ಷರಿ ಗವಾಯಿ ಶ್ರೀಮತಿ ಭಾರತಿ ಮೇಸ್ತ , ಶ್ರೀ ಪರಮೇಶ್ವರ ಹೆಗಡೆ, ಸುರೇಶ ಭಟ್ಟ ಕಡತೋಕಾ, ಜಿ.ಕೆ. ಹೆಗಡೆ ಒಂದೂರು, ಶ್ರೀ ಎಲ್ ಎಮ್. ಹೆಗಡೆ , ಶ್ರೀಮತಿ ಮೀರಾ ಕಲ್ಯಾಣಕರ್ ಹೀಗೆ ಅನೇಕ ಮಂದಿ ಸಂಗೀತ ಗುರುಗಳು ಇಲ್ಲಿ ಪಾಠ ಹೇಳಿದ್ದಾರೆ. ೧೯೯೬ ರಿಂದ ಡಾಃ ಕುಸುಮ ಸೊರಬರ ವಿನಂತಿಯ ಮೇರೆಗೆ ಹೊನ್ನಾವರ ಕಾಲೇಜಿನ ಸಂಗೀತ ಪ್ರಾದ್ಯಾಪಕ ಗಾಯಕ ಶ್ರೀ ಕೃಷ್ಣಮೂರ್ತಿ ಭಟ್ಟರು ಇಲ್ಲಿನ ಸಂಗೀತ ಶಾಲೆಯ ಗುರುಗಳಾಗಿ ನಿಯುಕ್ತಿಗೊಂಡರು. ಅನೇಕ ಸಂಗೀತ ವಿದ್ಯಾರ್ಥಿಗಳನ್ನು ಹೊಂದಿದ ಈ ಸಂಗೀತ ಶಾಲೆ ವಿದ್ಯಾರ್ಥಿಗಳನ್ನು ಸಂಗೀತ ಪರೀಕ್ಷೆ ಹಾಗೂ ಕಲಾಕಾರನನ್ನಾಗಿ ರೂಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ದಿಃ ಕುಸುಮ ಸೊರಬರ ನಿಧನದ ನಂತರವೂ ಸ್ನೇಹಕುಂಜದ ಆವಾರದಲ್ಲಿ ವರ್ಷಕ್ಕೆ ಎರಡು ಉತ್ತಮ ಸಂಗೀತ ಕಾರ್ಯಕ್ರಮವನ್ನು ಕೊಡುತ್ತ ಬಂದಿದೆ. ಯುವಜನ ಮೇಳ , ಸಾರ್ವಜನಿಕ ಗಣೇಶೋತ್ಸವ ಹೀಗೆ ಸಾರ್ವತ್ರಿಕ ಸಭೆ ಸಮಾರಂಭಗಳಲ್ಲಿಯೂ ಭಾಗವಹಿಸಿ ಇಲ್ಲಿನ ಸಂಗೀತ ಶಾಲೆಯ ವಿದ್ಯಾರ್ಥಿಗಳು ಉತ್ತಮ

ನಾಗರೀಕರಾಗಿ ಬಾಳುತ್ತಿದ್ದಾರೆ. ವಾರದಲ್ಲಿ ಒಂದು ಅಥವಾ ಎರಡು ದಿನ ನಡೆಯುವ ಈ ಸಂಗೀತ ಶಾಲೆಗೆ ಸ್ನೇಹಕುಂಜದ ವಿದ್ಯಾರ್ಥಿಗಳಲ್ಲದೇ ಸಾರ್ವತ್ರಿಕವಾಗಿಯೂ ವಿದ್ಯಾರ್ಥಿಗಳು ಬರಬಹುದಾಗಿದೆ. ಸುಗಮ ಸಂಗೀತ , ಲಕ್ಷಣಗೀತೆ, ಛೋಟಾಖ್ಯಾಲ್, ಭಡಾಖ್ಯಾಲ್, ಹೀಗೆ ಹಿಂದುಸ್ತಾನೀ ಶಾಸ್ತ್ರೀಯಸಂಗೀತದ ವಿವಿಧ ಪ್ರಕಾರಗಳನ್ನು ಇಲ್ಲಿ ಭೋದಿಸಲಾಗುತ್ತದೆ. ಶ್ರೀ ಕೃಷ್ಣಮೂರ್ತಿ ಭಟ್ಟರು ಇಲ್ಲಿ ಸಂಗೀತ ಪಾಠ ಹೇಳಿದರೆ, ಶ್ರೀ ಎಲ್.ಎಮ್. ಹೆಗಡೆ ತಬ್ಲಾ ಸಾಥ್ ನೀಡುತ್ತಾರೆ. ಉತ್ತಮ ಪರಂಪರೆಯ ಹಾದಿಯಲ್ಲಿ ನಡೆಯುತ್ತಬಂದ ಈ ಸಂಗೀತಶಾಲೆಯ ಕಾರ್ಯವೈಖರಿ ಸಾರ್ವತ್ರಿಕವಾಗಿಯೂ ಪ್ರಶಂಸೆಗೆ ಪಾತ್ರವಾಗಿದೆ. ಜಿಲ್ಲೆಯ ಕಲಾಕಾರರಾದ ಶ್ರೀ ಕೃಷ್ಣಮೂರ್ತಿ ಭಟ್ಟ, ಶ್ರೀ ಜಿ. ಆರ್. ಭಟ್ಟ ಬಾಳೇಗದ್ದೆ, ಶ್ರೀ ಎನ್ ಶಂಭು ಭಟ್ಟ ಕಡತೋಕಾ, ಶ್ರೀ ಎಲ್. ಎಮ್ ಹೆಗಡೆ, ರಾಜು ಹೆಬ್ಬಾರ , ನಾಗರಾಜ ಹೆಗಡೆ , ನಿತ್ಯಾನಂದ ಭಟ್ಟ ಮುಂತಾದವರ ಕಾರ್ಯಕ್ರಮಗಳು ಇಲ್ಲಿ ಯಶಸ್ವಿಯಾಗಿ ನಡೆದಿದೆ. ಸ್ನೇಹಕುಂಜದ ಸಂಸ್ಥೆಯ ವಿವಿಧ ಶಾಖೆಗಳಾದ ಕವಲಗೇರೆ , ಅನಿಲಗೋಡ, ಇಡಗುಂಜಿ ಮುಂತಾದ ಶಾಖೆಗಳಿಂದಲೂ ಇಲ್ಲಿ ಸಂಗೀತ ಕಲಿಯಲು ವಿದ್ಯಾರ್ಥಿಗಳು ಬರುತ್ತಾರೆ. ಸಂಗೀತ ಶಾಲೆಯ ಮುಂಚೂಣಿಯಲ್ಲಿ ಶ್ರೀಮತಿ ಚಂದ್ರಕಲಾ ಹೆಗಡೆ, ಶ್ರೀ ಡಾಃ ಮಹೇಶ ಪಂಡಿತ, ಡಾಃ ಸಾತಪ್ಪ, ಕವಿ ಪುಟ್ಟು ಕುಲಕರ್ಣಿ, ರವೀಂದ್ರ, ರಾಘವ ಮುಂತಾದವರಿದ್ದಾರೆ. ಅಂಗವಿಕಲ ಬುದ್ಧಿಮಾಂದ್ಯ ಮಕ್ಕಳಿಗೂ ಇಲ್ಲಿ ಸಂಗೀತ ಚಿಕಿತ್ಸೆ ಹಾಗೂ ಸಂಗೀತ ಪಾಠವನ್ನು ಹೇಳಿಕೊಡಲಾಗುತ್ತಿದೆ. ಸಂಗೀತಕಾರ್ಯಕ್ರಮ, ಸಂಗೀತಶಾಲೆ ಇಲ್ಲಿ ವ್ಯವಸ್ಥಿತವಾಗಿ ನಡೆಯಲು ಒಂದು ಭದ್ರತಾ ವ್ಯವಸ್ಥೆಗೆ, ಧನಸಹಾಯ ಹಾಗೂ ಅನುದಾನಕ್ಕಾಗಿ ಇಲ್ಲಿನ ಸಂಸ್ಥೆ ಸಾರ್ವತ್ರಿಕವಾಗಿ ಮನವಿ ಮಾಡಿದೆ. ಇವೆಲ್ಲ ಬಯಕೆಗಳು ಸಿದ್ದಿಸಲಿ , ಸೂರ್ಯ ಚಂದ್ರರಂತೆ ಸಂಗೀತ ಶಾಶ್ವತವಾಗಿ ಇಲ್ಲಿ ನೆಲೆಯೂರಲಿ ಎಂಬುದು ಸಂಗೀತ ಪ್ರೇಮಿಗಳ ಶುಭ ಹಾರೈಕೆ.

ಇತ್ತೀಚೆಗೆ ಹೆಚ್ಚು ಪ್ರಚಲಿತ ಹಾಗೂ ಪ್ರಸಿದ್ಧಿಗೆಬಂದ 'ಸಂಗೀತಚಿಕಿತ್ಸೆ' ಈ ಪ್ರಯೋಗವನ್ನೂ ಇಲ್ಲಿ ಅಳವಡಿಸಲಾಗುತ್ತಿದೆ. ಇಲ್ಲಿನ ಬುದ್ಧಿಮಾಂದ್ಯ ಮಕ್ಕಳು, ಅಂಗವಿಕಲ ಮಕ್ಕಳಿಗೆ ಇದರ ನೇರ ಪರಿಣಾಮವನ್ನು ಈ ಚಿಕಿತ್ಸೆಯಮೂಲಕ ಮಾಡಲಾಗುತ್ತದೆ. ಸಂಗೀತ ಚಿಕಿತ್ಸೆಯಬಗೆಗೆ ಇನ್ನೂ ಹೆಚ್ಚಿನ ಅಧ್ಯಯನಕ್ಕಾಗಿ ಇಲ್ಲಿನ ಸಂಸ್ಥೆಯವರು ಶ್ರಮಿಸಬೇಕಾಗಿದೆ.

ಪಂ : ಬಸವರಾಜ ರಾಜಗುರು ಸಂಗೀತ ಪಾಠಶಾಲೆ

ಉತ್ತರಕನ್ನಡ ಜಿಲ್ಲೆಯ ಮಂಚಿಕೇರಿ ಸಾಂಸ್ಕೃತಿಕಕಾರ್ಯಕ್ರಮ ಸಂಘಟನೆಯಲ್ಲಿ ಯಾವಾಗಲೂ ಮುಂಚೂಣಿಯಲ್ಲಿಯೇ ಇದೆ. ಪಂಃ ರಾಜಗುರುಗಳ ಹಿರಿಯ ಶಿಷ್ಯರಾದ ಶ್ರೀ ಗಣಪತಿ ಭಟ್ಟರು, ರಾಜಗುರುಗಳು ಕಾಲವಾದ ನಂತರ ಪಂ. ಬಸವರಾಜ ರಾಜಗುರು ಸಂಗೀತ ಪ್ರತಿಷ್ಠಾನವನ್ನು ೧೯೯೧-೯೨ ರಲ್ಲಿ ಸ್ಥಾಪಿಸಿದರು. ೧೯೯೫ ರಿಂದ ಇಲ್ಲಿ ಮಂಚಿಕೇರಿಯ ರಾಜ ರಾಜೇಶ್ವರಿ ವಿದ್ಯಾಸಂಸ್ಥೆ ಆವಾರದಲ್ಲಿ ಉದ್ಘಾಟನೆಗೊಂಡ ಈ ಸಂಗೀತ ಶಾಲೆ, ಧರ್ಮಾರ್ಥ ಸಂಗೀತ ಶಾಲೆಯಾಗಿ ನಡೆಯುತ್ತಿದೆ. ಶ್ರೀ ಆರ್.ವಿ ಅಸುಂಡಿ ಇಲ್ಲಿ ಸಂಗೀತಪಾಠ ಹೇಳಿಕೊಡುತ್ತಿದ್ದರು. ಶ್ರೀ ಗಣಪತಿ ಭಟ್ಟರೂ ಇಲ್ಲಿ ಉಪಸ್ಥಿತರಿದ್ದು ಸಂಗೀತಶಾಲೆಯ ಚಟುವಟಿಕೆಗಳನ್ನು ಗಮನಿಸುತ್ತಾರೆ. ಶ್ರೀ ಜಿ.ಜಿ.ಹೆಗಡೆ ಹಿತ್ಲಳ್ಳಿ, ಇವರ ಶಿಷ್ಯ ಪರಮೇಶ್ವರ ಹೆಗಡೆ ಗೋರ್ಸಗದ್ದೆ ಇಲ್ಲಿ ತಬ್ಲಾ ಶಿಕ್ಷಣವನ್ನು ನೀಡುತ್ತಾರೆ. ಕರ್ನಾಟಕ ರಾಜ್ಯ ಸರ್ಕಾರದ ಜ್ಯೂನಿಯರ್, ಸೀನಿಯರ್, ವಿದ್ವತ್ ಪಠ್ಯಕ್ರಮದ ಜೊತೆಗೆ ಕಲಾಕಾರನಾಗಿ ಬೆಳೆಯಲು ಈ ಸಂಗೀತಶಾಲೆ ವಿದ್ಯಾರ್ಥಿಗಳಿಗೆ ಸಹಾಯಮಾಡುತ್ತದೆ. ಈ ಸಂಗೀತ ಶಾಲೆಯ ಉದ್ಘಾಟನೆ ಸಮಾರಂಭದಲ್ಲಿ ಡಿ.ಡಿ. ಪಿ. ಐ. ಜಿ.ಎಲ್. ಹೆಗಡೆ , ಶ್ರೀ ಪ್ರಮೋದ ಹೆಗಡೆ , ಪ್ರಭಾಕರ ರಾಣೆ ಮುಂತಾದ ಗಣ್ಯರು ಹಾಜರಿದ್ದು ಸಂಗೀತಶಾಲೆಗೆ ಶುಭಕೋರಿದರು. ಕಾರ್ಯಕ್ರಮದ ನಂತರ ಶ್ರೀ ಕೃಷ್ಣಮೂರ್ತಿ ಭಟ್ಟ ಹಾಗೂ ನಾಗಭೂಷಣ ಹೆಗಡೆಯವರ ಶಾಸ್ತ್ರೀಯ ಸಂಗೀತಕಾರ್ಯಕ್ರಮ ನಡೆಯಿತು. ಕಾರಣಾಂತರದಿಂದ ಸದ್ಯ ಸ್ಥಗಿತಗೊಂಡ ಈ ಸಂಗೀತಪಾಠಶಾಲೆ ಮತ್ತೊಮ್ಮೆ ಪ್ರಾರಂಭವಾಗುವ ಎಲ್ಲ ಲಕ್ಷಣಗಳೊಂದಿಗೆ ಮೈತಾಳುತ್ತಿದೆ

ಈ ಸಂಸ್ಥೆಯಲ್ಲಿ ಸಂಗೀತಕಲಿತು ಇಂದು ಸಂಗೀತಕಾರ್ಯಕ್ರಮ ಕೊಡುವವರೆಗೆ ತಯಾರಾದ ಕಲಾಕಾರರಲ್ಲಿ ಶ್ರೀ ಸತೀಶ ಭಟ್ಟ, ರೇಖಾ ಹೆಗಡೆ, ಗಣಪತಿ ಭಟ್ಟ, ಗೋಪಾಲಕೃಷ್ಣ ಭಟ್ಟ ಮುಂತಾದವರು ಪ್ರಮುಖರಾಗಿದ್ದಾರೆ. . ಸಮಾಜದಲ್ಲಿ ಸಂಗೀತದ ವಿದ್ಯೆಯಂತಹ ತಿಳುವಳಿಕೆಗೆ ಸಹಕರಿಸಲು ಇಂತಹ ಶಾಲೆಗಳು ಮುಂದುವರೆಯಬೇಕು ಎಂಬುದು ಆಶಯ.

ಪ್ರಗತಿ ಸಂಗೀತ ವಿದ್ಯಾಲಯ

ಶ್ರೀ ನಾರಾಯಣ ಹೆಗಡೆ ಕುಂದರಗಿ ಅವರ ಪರಿಶ್ರಮದಿಂದ ಯಲ್ಲಾಪುರತಾಲೂಕು ಕುಂದರಗಿಯಲ್ಲಿ ಸ್ಥಾಪಿತಗೊಂಡ ಪ್ರಗತಿ ವಿದ್ಯಾಲಯದಲ್ಲಿ ಪ್ರಗತಿ ಸಂಗೀತ ವಿದ್ಯಾಲಯ ಎಂಬ ಸಂಗೀತ ಪಾಠಶಾಲೆಯನ್ನು 1990 ಕ್ಕೂ ಮೊದಲಿನಿಂದಲೇ ಪ್ರಾರಂಭಿಸಿದೆ. ಶ್ರೀ ಆರ್.ಪಿ. ಅಸುಂಡಿ, ಸುಜಾತಾ ಹೆಗಡೆ ಪ್ರಕಾಶ ಹೆಗಡೆ ಇಲ್ಲಿ ಸಂಗೀತ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ಪ್ರೌಢಶಾಲೆ ವಿದ್ಯಾರ್ಥಿಗಳಿಗೂ ಇಲ್ಲಿ ಸಂಗೀತ ಶಿಕ್ಷಣವನ್ನು ನೀಡಲಾಗುತ್ತಿದೆ. ಕರ್ನಾಟಕ ಸರ್ಕಾರದ ಜ್ಯೂನಿಯರ್, ಸೀನಿಯರ್ , ವಿದ್ವತ್ ಪರೀಕ್ಷೆಗಳಿಗೆ ಪೂರಕವಾದ ಸಂಗೀತ ಪಠ್ಯಕ್ರಮವನ್ನು ಇಲ್ಲಿ ಬೋಧಿಸಲಾಗುತ್ತಿದೆ. ಇತ್ತೀಚೆಗೆ ನೃತ್ಯವನ್ನೂಸಹ ಇಲ್ಲಿ ಕಲಿಸಲಾಗುತ್ತಿದ್ದು ಉತ್ತಮ ಅಭಿರುಚಿ, ಸಂಸ್ಕಾರದ ಬೆಳವಣಿಗೆಗೆ ಪ್ರಗತಿ ವಿದ್ಯಾಸಂಸ್ಥೆ ಶ್ರಮಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಶ್ಯಾಮಲಾ ಸಂಗೀತ ವಿದ್ಯಾಲಯ

ಯಲ್ಲಾಪುರದಲ್ಲಿ ೧೯೯೫ ರ ನಂತರ ಶ್ರೀ ಸಂದೀಪ ಉಡುಪಿ ಅವರ ನೇತೃತ್ವದಲ್ಲಿ ಶ್ಯಾಮಲಾ ಸಂಗೀತ ಸಂಸ್ಥೆ ಹುಟ್ಟಿಕೊಂಡಿತು. ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ಈ ಸಂಸ್ಥೆಯನ್ನು ಉದ್ಘಾಟಿಸಿದರು. ಈ ಸಂಸ್ಥೆಯ ವತಿಯಿಂದ ನಡೆಯುವ ಸಂಗೀತ ಕಾರ್ಯಕ್ರಮದಲ್ಲಿ ದೇಶದ ಅನೇಕ ಕಲಾಕಾರರು ಭಾಗವಹಿಸಿದ್ದಾರೆ. ಇಲ್ಲಿ ಸಂಗೀತ ಪಾಠ ಹೇಳಿಕೊಡಲಾಗುತ್ತದೆ. ಸಂದೀಪ ಉಡುಪರ ಶಿಷ್ಯೆ ವಾಣಿ ಹರ್ಡೇಕರ್ ಉತ್ತಮ ಕಲಾಕಾರ್ತಿಯಾಗಿದ್ದಾರೆ. ಯಲ್ಲಾಪುರದ ಸುತ್ತಮುತ್ತಲಿನ ಪರಿಸರದಲ್ಲಿಯೂ ಇವರ ಕಾರ್ಯಕ್ರಮ ನಡೆಯುತ್ತಿರುತ್ತದೆ.

೧೯೯೯ ರಲ್ಲಿ ಈ ಸಂಸ್ಥೆಯ ಮುಖ್ಯ ಗುರುಗಳಾದ ಸಂದೀಪ್ ಉಡುಪರು ನಿಧನರಾದನಂತರ ಇವರ ಶಿಷ್ಯೆ ಕು. ವಾಣೀ ಹರ್ಡೀಕರ್ ಮುಂದುವರೆಸಿಕೊಂಡು ಬಂದಿದ್ದಾರೆ. ಅನಂತ ವೈದ್ಯ ಮುಂತಾದವರು ಈ ಸಂಸ್ಥೆಯಲ್ಲಿ ಸಕ್ರೀಯರಾಗಿದ್ದಾರೆ.

<u>ಶ್ರೀ ಪುರಂದರ ವಿಠ್ಠಲ ಸೇವಾಶ್ರಮ</u>

ಹೊನ್ನಾವರ ತಾಲೂಕಿನ ಗುಂಡಿಬೈಲ ಉತ್ತರಕೊಪ್ಪದಲ್ಲಿ ಶ್ರೀ ವಸಂತ ಭಟ್ಟ (ಭಜನಾ ಕಲಾಕಾರರು) ಇವರ ನೇತೃತ್ವದಲ್ಲಿ ೧೯೯೫ ರ ನಂತರ ಪ್ರಾರಂಭವಾಗಿದೆ. ಬಜನಾ ಕಾರ್ಯಕ್ರಮವಲ್ಲದೇ ಹಿಂದುಸ್ಥಾನೀ ಸಂಗೀತವನ್ನು ಈ ಸೇವಾಶ್ರಮ ಪ್ರತಿವರ್ಷ ನಡೆಸುತ್ತಬಂದಿದೆ. ಜಿಲ್ಲೆಯ ಸುತ್ತಮುತ್ತಲಿನ ಹಿಂದುಸ್ತಾನೀ ಸಂಗೀತಗಾರರ ಕಾರ್ಯಕ್ರಮವನ್ನೇರ್ಪಡಿಸಿ ಸಂಗೀತರಸಿಕರ ತೃಷೆಗೆ ನೀರೆರೆದಿದೆ. ಈ ಸೇವಾಶ್ರಮದ ವತಿಯಿಂದ ಸಂಗೀತ ಪಾಠ ಹೇಳಲಾಗುತ್ತದೆ. ದಿ. ೧೫-೫-೯೯ ನೇ ಶನಿವಾರ ಪೂರ್ವಾಹ್ನ ೧೧ ಘಂಟೆಯಿಂದ ೧೬-೫-೯೯ ರವಿವಾರ ಬೆಳಿಗ್ಗೆ ೮ ಘಂಟೆಯವರೆಗೆ ಅವಿರತವಾಗಿ ಸಂಗೀತ ಕಾರ್ಯಕ್ರಮ ನಡೆಸಿದ ಕೀರ್ತಿ ಈ ಸಂಸ್ಥೆಯದು. ಶ್ರೀ ವಸಂತ ಭಟ್ಟ ಹಾಗೂ ನಾರಾಯಣ ಭಟ್ಟ ಗುಂಡಿಬೈಲ್ ಇವರು ಸ್ವತಹ ಕಲಾಕಾರರಾಗಿದ್ದು ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಖ್ಯಾತ ಕಲಾಕಾರರ ಕಾರ್ಯಕ್ರಮವನ್ನೇರ್ಪಡಿಸಿ ಅದರಲ್ಲಿ ಅಮೋಘ ಯಶಸ್ಸನ್ನು ಪಡೆದಿದ್ದಾರೆ. ಶ್ರಿ ಜಿ. ಆರ್. ಭಟ್ಟ ಬಾಳೆಗದ್ದೆ, ಕೃಷ್ಣಮೂರ್ತಿ ಭಟ್ಟ ಬೊಮ್ನಳ್ಳಿ , , ಶ್ರೀಮತಿ ಶೈಲಾ ಮಂಗಳೂರು, ಅಶೋಕ ಹುಗ್ಗಣ್ಣವರ್, ರವಿಕಿರಣ ಕಾರ್ಕಳ ಮುಂತಾದ ಸಂಗೀತಕಲಾಕಾರರ ಕಾರರ್ಯಕ್ರಮವು ಈ ಸಂಸ್ಥೆವತಿಯಿಂದ ನಡೆದಿದೆ. ಭಜನಾಕಲಾಕಾರರನ್ನು ಹಿಂ. ಸಂಗೀತದತ್ತ ವಾಲಿಸಲು , ಉತ್ತಮ ಸಂಸ್ಕಾರದ ಪ್ರಚಾರಕ್ಕೆ ಈ ಸಂಸ್ಥೆ ಶ್ರಮಿಸುತ್ತಿದೆ.

<u>ಶ್ರೀ ಮಾತಾ ಸಂಗೀತ ವಿದ್ಯಾಲಯ</u>

ಯಲ್ಲಾಪುರದ ವಾಯ್.ಟಿ.ಎಸ್.ಎಸ್. ಪ್ರೌಢಶಾಲೆಯ ಸಂಗೀತ ಶಿಕ್ಷಕಿ , ಶ್ರೀಮತಿ ಲತಾ ಉಡಗೋಣಿ, ಯಲ್ಲಾಪುರ ಶಹರದಲ್ಲಿ ಶ್ರೀ ಮಾತಾ ಸಂಗೀತ ವಿದ್ಯಾಲಯವನ್ನು ನಡೆಸುತ್ತಿದ್ದಾರೆ. ಅನೇಕ ವಿದ್ಯಾರ್ಥಿಗಳನ್ನು ತರಬೇತುಗೊಳಿಸಿದ ಈ ಸಂಗೀತ ಶಾಲೆ ಪ್ರತಿವರ್ಷ ಸಂಗೀತ ಶಾಲೆಯ ವಾರ್ಷಿಕೋತ್ಸವದ ನಿಮಿತ್ತ ಉತ್ತಮ ಕಲಾಕಾರರ ಕಾರ್ಯಕ್ರಮವನ್ನೇರ್ಪಡಿಸುತ್ತಿದೆ. ಶ್ರೀ ಎಂ. ಪಿ. ಹೆಗಡೆ , ಗಣಪತಿ ಭಟ್ಟರಲ್ಲೂ ಹೆಚ್ಚಿನ ಅಧ್ಯಯನ ನಡೆಸಿದ ಶ್ರೀಮತಿ ಲತಾ ಉಡುಗೋಣಿ ಸಂಗೀತ ಕಲಾಕಾರರು ಹಾಗೂ ಸಂಗೀತ ಪರೀಕ್ಷಕರೂ ಆಗಿದ್ದಾರೆ.

ಸಾಧನಾ ಸಂಗೀತ ಸಂಸ್ಥೆ

ಯುವಕ ಪ್ರಸನ್ನ ವೈದ್ಯರ ನೇತೃತ್ವದಲ್ಲಿ ಸಾಧನಾ ಸಂಗೀತ ಸಂಸ್ಥೆಯ ಮುಖ್ಯ ಕಛೇರಿ ವೈದ್ಯ ಹೆಗ್ಗಾರಿನಲ್ಲಿದೆ. ಗುಳ್ಳಾಪುರ, ವಜ್ರಳ್ಳಿ ಮುಂತಾದೆಡೆ ಸಂಗೀತ ಪಾಠವನ್ನು ಮಾಡುವ ಪ್ರಸನ್ನ, ಸಾಧನಾ ಸಂಗೀತ ಸಂಸ್ಥೆಯನ್ನು ಹುಟ್ಟುಹಾಕಿದ್ದಾರೆ. ರಂಗಾಯಣದ ಕಲಾಕಾರರಿಂದ ನಾಟಕ ತರಬೇತಿ, ಶ್ರೀ ಗಣಪತಿ ಭಟ್ಟರ ಸಂಗೀತ ಕಾರ್ಯಕ್ರಮ ಹೀಗೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮವನ್ನೇರ್ಪಡಿಸುವ ಕೀರ್ತಿ ಈ ಸಂಸ್ಥೆಯದು.

ಭಾರತೀಯ ಸಂಗೀತ ವಿದ್ಯಾಲಯ ವಜ್ರಳ್ಳಿ

ಅನಂತ ಕೋಮಾರ, ಗುರುಮೂರ್ತಿ ವೈದ್ಯ ಮುಂತಾದವರ ನೇತೃತ್ವದಲ್ಲಿ ವಜ್ರಳ್ಳಿಯಲ್ಲಿ ಈ ಸಂಗೀತ ವಿದ್ಯಾಲಯ ನಡೆಯುತ್ತಿದೆ. ಜ್ಯೂನಿಯರ್, ಸೀನಿಯರ್ ಪರೀಕ್ಷೆಯ ಪಠ್ಯದ ಜೊತೆಗೆ ಸುಗಮ ಸಂಗೀತವನ್ನು ಇಲ್ಲಿ ಕಲಿಸಲಾಗುತ್ತಿದೆ. ಮಂಜುನಾಥ ಗಾಂವ್ಕರ್, ಮಂಜಣ್ಣ ಮುಂತಾದವರು ಇಲ್ಲಿ ಸಕ್ರೀಯರಾಗಿದ್ದಾರೆ.

ಆರ್ಟ್ಸ್ ಇನ್‌ಸ್ಟಿಟ್ಯೂಟ ಹೊನ್ನಾವರ

೧೯೯೫ ರಲ್ಲಿ ಶ್ರೀ ಸುರೇಶ ನಾಯ್ಕ ಹಾಗೂ ಅವರ ಗೆಳೆಯರ ನೇತೃತ್ವದಲ್ಲಿ ಹೊನ್ನಾವರದ ವಡಗೆರೆಯಲ್ಲಿ ಆರ್ಟ್ಸ್ ಇನ್ಸ್ಟಿಟ್ಯೂಟ ಪ್ರಾರಂಭವಾಯಿತು. ಭರತನಾಟ್ಯ, ಕರ್ನಾಟಕ ಶಾಸ್ತ್ರೀಯ ಸಂಗೀತ , ಕೊಳಲು ಹಾರ್ಮೋನಿಯಂ , ಸುಗಮಸಂಗೀತ ಮುಂತಾದ ಶಾಸ್ತ್ರೀಯ ಕಲೆಗಳನ್ನು ಇಲ್ಲಿ ಭೋದಿಸಲಾಗುತ್ತಿದೆ. ಕರ್ನಾಟಕ ಶಾಸ್ತ್ರೀಯ ಸಂಗೀತ ಜಿಲ್ಲೆಯಲ್ಲಿ ಕಡಿಮೆ ಪ್ರಚಾರದಲ್ಲಿದೆ. ಮೂರು ವರ್ಷಗಳ ಕಾಲ ಉಡುಪಿಯ, ಪಾರ್ವತಮ್ಮ ಮುಂತಾದವರು ಇಲ್ಲಿ ಕರ್ನಾಟಕ ಸಂಗೀತ ಹೇಳಿಕೊಟ್ಟರು. ವಿದ್ಯಾರ್ಥಿಗಳ ಅಭಾವದಿಂದ ಕರ್ನಾಟಕ ಸಂಗೀತ ಈಗ ಸ್ಥಗಿತಗೊಂಡಿದೆ. ಬೇಟೆ ನೃತ್ಯ , ಮಯೂರ ನೃತ್ಯ ಹೀಗೆ ಅನೇಕ ಪ್ರಕಾರದ ಕಲೆಯನ್ನು ಸಾರ್ವತ್ರಿಕವಾಗಿ ಸ್ವಂತ ಆಸಕ್ತಿಯಿಂದ ನಡೆಸಿಕೊಂಡು ಬಂದಿರುವ ಈ ಸಂಸ್ಥೆ ಉತ್ತಮ ಉದ್ದೇಶದಿಂದ ಕೂಡಿದೆ.

ಟಿಪ್ಪಣಿ: ಜಿಲ್ಲೆಯ ಸಂಗೀತಶಾಲೆಯ ಮುಖ್ಯಸ್ಥರ ಸಂದರ್ಶನದಿಂದ .....

ಅಧ್ಯಾಯ ೧೬

ಸಂಗೀತ ಶಿಕ್ಷಣದ ಬಗೆಗೆ ಒಂದು ವಿವೇಚನೆ

ಸಂಗೀತ ಶಿಕ್ಷಣದ ಬಗೆಗೆ ಒಂದು ವಿವೇಚನೆ

ವಿಶ್ವದಲ್ಲಿ ಪ್ರತಿಯೊಂದೂ ಪರಿವರ್ತನಶೀಲವಾಗಿದೆ. ಸಂಗೀತವೂ ಇದಕ್ಕೆ ಹೊರತಾಗಿಲ್ಲ. ವೇದಕಾಲದಿಂದಲೂ ಅದು ನಡೆದುಕೊಂಡುಬಂದ ರೀತಿಯನ್ನುನೋಡಿದರೆ ನಮಗೆ ಇದರ ಸತ್ಯಾಂಶ ಗೋಚರಿಸದೇ ಇರದು. ವೇದಕಾಲೀನ ಪ್ರಬಂಧ ಗಾಯನ ಪದ್ಧತಿಯು ಕಾಲಾನಂತರದಲ್ಲಿ ಜಾತಿ ಗಾಯನ ಪದ್ಧತಿಗೆ ಜಾತಿ ಗಾಯನ ಪದ್ಧತಿಯು, ಧ್ರುಪದ್ ಗಾಯನ ಪದ್ಧತಿಗೆ ಧ್ರುಪದ್ ಗಾಯನ ಪದ್ಧತಿಯು ಆಧುನಿಕ ಖ್ಯಾಲ್‌ಗಾಯನ ಪದ್ಧತಿಗೆ ಆಧುನಿಕಖ್ಯಾಲ್ ಪದ್ಧತಿಯೂ ಹೀಗೆ ನಮ್ಮ ಪುರಾತನ ಸಂಗೀತ ಪರಂಪರೆಯು ವಿಕಾಸಹೊಂದುತ್ತ ಬಂದಿದ್ದು ಈ ಎಲ್ಲ ವೈವಿಧ್ಯತೆಗಳಲ್ಲಿಯೂ ಅದು ತನ್ನ ಸಂಸ್ಕೃತಿಯ ಸತ್ವವನ್ನು ಕಾಯ್ದುಕೊಂಡು ಬಂದಿದೆ. ಆಧುನಿಕವಾದ ಇಂದಿನ ದಿನಗಳಲ್ಲಿ ನಮ್ಮ ಸಂಗೀತ ವಿದ್ಯಾರ್ಥಿಗಳು ಮತ್ತು ತರುಣ ಕಲಾಕಾರರು ಈ ಸಂಸ್ಕೃತಿಯ ಸತ್ವವನ್ನು ಕಾಯ್ದುಕೊಂಡು ಹೋಗುವ ಗುರುತರವಾದ ಜವಾಬ್ದಾರಿ ಇದೆ. ಈ ದಿಸೆಯಲ್ಲಿ ನಮ್ಮ ಘನಸರ್ಕಾರ ಹಾಗೂ ಸಂಗೀತಾಸಕ್ತ ಸಂಘ ಸಂಸ್ಥೆಗಳು ಕೆಲಸ ಮಾಡಬೇಕಾಗಿದೆ.

ಇಂದಿನ ಸಂಗೀತ ಶಿಕ್ಷಣ ವ್ಯವಸ್ಥೆಯಲ್ಲಿ ಸೂಕ್ತವಾದ ಬದಲಾವಣೆಯನ್ನು ತರಬೇಕು. ಸಂಗೀತ ಶಿಕ್ಷಣವನ್ನು ಪ್ರಾಥಮಿಕ ಶಿಕ್ಷಣದ ಹಂತದಿಂದಲೇ ಕೊಡಬೇಕು. ಶಿವ ಶರಣರ ಜೀವನ, ಸಂಗೀತಗಾರರ ಸಾಧನೆ ಮತ್ತು ಸಂಗೀತದ ಮಹತ್ವದ ಕುರಿತು ನುರಿತ ಉಪಾಧ್ಯಾಯರಿಂದ ತಿಳಿಹೇಳಬೇಕು. ಹಾಗೂ ಸಂಗೀತ ಸಾಧನೆಯಲ್ಲಿ ತೊಡಗಲು ಅಂತಹ ವಾತಾವರಣವನ್ನು ಸೃಷ್ಟಿಸಬೇಕು. ಪುರಾತನ ಕಾಲದಲ್ಲಿ ಆಗಿಹೋದ ಸಂಗೀತಗಾರರ ಹಾಡುಗಳ ಧ್ವನಿಮುದ್ರಣ, ಘರಾನೆಗಳು, ಅವರು ನಡೆಸಿಕೊಂಡು ಬಂದ ಶೈಲಿಯ ಅಭ್ಯಾಸಮಾಡಬೇಕು. ಹಿಂದುಸ್ತಾನೀಸಂಗೀತದ ಚೀಜ್‌ಗಳೆಲ್ಲ ಮರಾಠಿ, ಬ್ರಿಜ್ ಭಾಷಾ ಹಾಗೂ ಹಿಂದಿಯಲ್ಲಿದ್ದು ಕನ್ನಡ ನಾಡಿನ ಮಕ್ಕಳಿಗೆ ಅದು ಸರಾಗವಾಗಿ ತಿಳಿಯಲು ಅಂತಹ ಬಂದೀಷಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಇಲ್ಲವೇ ಕನ್ನಡದಲ್ಲಿಯೇ ಅಂತಹ ಬಂದೀಷಗಳನ್ನು ರಚಿಸಿ ಸಂಗೀತವಿದ್ಯಾರ್ಥಿಗಳಿಗೆ ಅನುಕೂಲವಾಗುವ ವ್ಯವಸ್ಥೆಯನ್ನು ರೂಪಿಸಬೇಕು. ಈ ರೀತಿಯಾಗಿ ನಾವು ಪ್ರಯತ್ನಿಸಿದರೆ ಹಿಂದುಸ್ತಾನೀ ಸಂಗೀತಕ್ಕೆ ಕನ್ನಡದ ಕೊಡುಗೆಯಾದೀತು. ಪಕ್ಕದ ಮಹಾರಾಷ್ಟ್ರದಲ್ಲಿ ಸಂಗೀತದ ಪ್ರಸಾರ ಕಾರ್ಯವು ಹಾಗೂ

ಅದನ್ನು ಜನಪ್ರಿಯಗೊಳಿಸಲು ಸಾಹಿತ್ಯದ ರಚನೆ, ರಾಗ-ಸಂಯೋಜನೆ ಇವುಗಳೆಲ್ಲ ಯಶಸ್ವಿಯಾಗಿ ನಡೆಯುತ್ತಿದೆ. ಕರ್ನಾಟಕದಲ್ಲಿ ಇನ್ನು ಮುಂದೆ ಇದು ಬೆಳೆದುಬರಬೇಕಾಗಿದೆ.

ಕರ್ನಾಟಕ ಸಂಗೀತದಲ್ಲಿ ಈ ಬಗೆಯ ಪ್ರಯತ್ನಗಳು ಮೊದಲಿನಿಂದಲೂ ನಡೆದುಬಂದಿದೆ. ಸಂಗೀತಕಲೆಯು ಒಂದುಗೌರವಸ್ತ ಕಲೆಯೆಂದು ಅಷ್ಟವಿದಾರ್ಚನೆಯಲ್ಲಿ ಸಂಗೀತಕ್ಕೆ ಪ್ರಮುಖ ಸ್ಥಾನಮಾನವಿದೆಯೆಂದೂ ಅವರಿಗೆ ವಿಧಿತವಾದುದರಿಂದ ದಕ್ಷಿಣದಲ್ಲಿ ಸರ್ವೆಸಾಮಾನ್ಯವಾಗಿ ಪ್ರತಿಯೊಂದು ಮನೆತನವೂ ತನ್ನ ಮಕ್ಕಳಿಗೆ ಸಂಗೀತದ ಸಂಸ್ಕಾರವನ್ನು ಪ್ರಾರಂಭಿಕ ದಿಸೆಯಲ್ಲಿಯೇ ಮಾಡಿಕೊಡುತ್ತ ಬಂದಿದೆ. ಹೆಣ್ಣು ಮಕ್ಕಳಿಗಂತಲೂ ಸಂಗೀತ ಖಡ್ಡಾಯವಾಗಿ ಬರಲೇಬೇಕು. ವಧು ಪರೀಕ್ಷೆಯಲ್ಲಿ ಸಂಗೀತವೂ ಒಂದು ಮಹತ್ವದ ಅಂಶವಾಗಿ ಪರಿಗಣಿಸಲ್ಪಡುತ್ತದೆ. ಇದಲ್ಲದೇ ವೀಣಾವಾದನ, ಮೃದಂಗವಾನ ಹಾಗೂ ಶಾಸ್ತ್ರೀಯ ಗಾಯನದ ಶಿವ-ಶರಣರ ಗೀತೆಗಳು ಇವೆಲ್ಲವನ್ನು ಚಿಕ್ಕ ವಯಸ್ಸಿನಲ್ಲಿಯೆ ಕಲಿಸುವುದರಿಂದ ಒಂದು ಉನ್ನತ ಮಟ್ಟದ ಸಂಸ್ಕಾರವು ದೊರೆತು ಅವರ ಭವಿಶ್ಯಕ್ಕೆ ಇಂತಹ ಸಂಸ್ಕಾರ ಸಹಾಯಕಾರೀಯಾಗುವುದು.

ಕರ್ನಾಟಕ ಸಂಗೀತದ ವಿಷಯದಲ್ಲಿ ನಾವು ಗಮನಿಸಬೇಕಾದ ಮಹತ್ವದ ಅಂಶವೆಂದರೆ ಇಲ್ಲಿನ ಮನೆತನದ ಪ್ರತಿಯೊಬ್ಬ ತಂದೆತಾಯಿಗೂ ಸಂಗೀತದಬಗೆಗೆ ಅಪಾರವಾದ ಅಭಿಮಾನವಿದೆ. ಅಭಿರುಚಿಯಿದೆ. ತಮ್ಮ ಮಕ್ಕಳು ಸಂಗೀತ ಹಾಗೂ ನೃತ್ಯವನ್ನು ಖಡ್ಡಾಯವಾಗಿ ಕಲಿಸಬೇಕೆಂಬ ಹಂಬಲವಿದೆ. ಆದರೆ ಹಿಂದೂಸ್ತಾನೀಸಂಗೀತದಲ್ಲಿ ಇದರ ತದ್ವಿರುದ್ಧವಾಗಿದೆ. ಸಂಗೀತ ಕಲಿಯುವುದು ಕಲಿಸುವುದು ಕೀಳುಜನರಕಸುಬು ಎಂಬ ತಿಳುವಳಿಕೆ ಒಂದು ಕಾಲದಲ್ಲಿತ್ತು. ಹೀಗಾಗಿ ಗೌರವಸ್ತ ಮನೆತನದವರು ಸಂಗೀತ ಕಲಿಕೆಯಿಂದ ಬಹಳಷ್ಟು ದೂರದಲ್ಲಿದ್ದರು. ಇಂತಹ ಪರಿಸ್ಥಿತಿ ಈಗಿಲ್ಲ. ಸಂಗೀತ ಕಲೆಯು ಪರಮಾತ್ಮನಿಗೆ ಪ್ರೀತಿಯದು. ಅದು ನಮ್ಮ ಸಂಸ್ಕೃತಿಯ ಹೆಗ್ಗುರುತು ಎಂಬ ಅರಿವು ಈಗ ಬರಲಾರಂಭಿಸಿದ್ದು ಇಂದು ಹಿಂದೂಸ್ತಾನೀಸಂಗೀತವು ಮನೆಮನೆಯಲ್ಲಿ ಪ್ರಚಾರದಲ್ಲಿದ್ದು ಶಿಕ್ಷಣ ಕ್ಷೇತ್ರದಲ್ಲಿಯೂ ಅದಕ್ಕೆ ಸ್ಥಾನಮಾನಗಳು ದೊರೆಯುತ್ತಿವೆ. ಗೌರವಸ್ತ ಮನೆತನದವರೂ ಸಂಗೀತ ಕಲಿಯಲು ಮುಂದೆ ಬರುತ್ತಿದ್ದಾರೆ. ಇಂತಹ ಬದ್ರಬುನಾದಿಯನ್ನು ಚಿಕ್ಕವಯಸ್ಸಿನಲ್ಲಿಯೇ ಹಾಕಿಕೊಟ್ಟು ಅವರಿಗೆ ಯೋಗ್ಯ ಮಾರ್ಗದರ್ಶನ ನೀಡುತ್ತದೆ. ಕರ್ನಾಟಕೀ ಸಂಗೀತದಂತೆ ಹಿಂದೂಸ್ತಾನೀಸಂಗೀತವೂ ತನ್ನ

ಪೂರ್ವಾಪರ ಉಚ್ಚಸಂಸ್ಕೃತಿ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬರುವುದರಲ್ಲಿ ಯಾವ ಸಂದೇಹವೂ ಇಲ್ಲ.

ಹೊಟ್ಟೆಗೆ ಹಿಟ್ಟು ಅತ್ಯವಶ್ಯವಾಗಿರುವಂತೆ ಮನಸ್ಸಿಗೆ, ಹೃದಯಕ್ಕೆ ಕಲೆಯೂ ಅಷ್ಟೆ ಅವಶ್ಯಕವಾಗಿದೆ. ಸಂಗೀತಕಲೆಯು ವ್ಯಕ್ತಿಯಹೃದಯಕ್ಕೆ ಸುಸಂಸ್ಕೃತಿಯ ಒಂದು ಮೆರಗನ್ನು ತಂದುಕೊಡುತ್ತದೆ. ಹೃದಯ ಶ್ರೀಮಂತಿಕೆಯೇ ನಾಡಿನ, ಸಂಸ್ಕೃತಿಯ ಶ್ರೀಮಂತಿಕೆಯಾಗಿದೆ. ಆದ್ದರಿಂದ ಸಂಗೀತ ಅಥವಾ ಯಾವುದೇ ಕಲೆಯ ಬಗೆಗೆ ನಾವು ಅಭಿಮಾನ ತಾಳಿ ಆದರದಿಂದ ಹಾಗೂ ಭಕ್ತಿ ಶ್ರದ್ಧೆಯಿಂದ ಅದನ್ನು ಆರಾಧಿಸಬೇಕು. ಅಲ್ಲಿ ವಂಚನೆಗೆ, ಮೋಸಕ್ಕೆ ತಿಲಮಾತ್ರವೂ ಅವಕಾಶ ಕಲ್ಪಿಸಿಕೊಡಬಾರದು. ಸ್ವಾರ್ಥಕ್ಕಾಗಿ ಅಲ್ಲಸಲ್ಲದ ರಾಜಕಾರಣ ಮಾಡಿದಲ್ಲಿ ಸಂಗೀತ ಕಲೆಯ ಸರ್ವನಾಶವೇ ಆದೀತು.

ಯಾವುದೇ ಕಲೆ ಮಾಶ್ಯಸ್ವರೂಪವಾಗಿ, ಹೊರಹೊಮ್ಮಲು ಒಂದು ಪರಂಪರೆ ಅವಶ್ಯಕವಾಗಿದೆ. ಆದರೆ ಇಂದು ಚಿಕಿತ್ಸಕ, ಸಂಶೋಧಕ ಪ್ರವೃತ್ತಿ ಎಂದು ಹೇಳಿಕೊಳ್ಳುವ ಅನೇಕ ಸಂಗೀತಗಾರರು, ಪರಂಪರೆ ಎಂದಾಗ ಮೂಗು ಮುರಿಯುತ್ತಾರೆ. ಪರಂಪರೆ ಇದು ಕಲಾಪ್ರಕಾರದ ಮುನ್ನಡೆಗೆ ಅನಿವಾರ್ಯ ಹಾಗೂ ಅವಶ್ಯಕ. ಪರಂಪರೆಯ ಆಶ್ರಯದಲ್ಲಿಯೇ ವ್ಯಕ್ತಿಯ ಪ್ರತಿಭೆ ಅರಳುತ್ತದೆ. ಈ ವ್ಯಕ್ತಿಗತ ಪ್ರತಿಭೆಯೇ ಹಿಂದೂಸ್ತಾನೀ ಸಂಗೀತದಲ್ಲಿ ಘರಾಣೆಗಳ ಅಸ್ತಿತ್ವಕ್ಕೆ ಕಾರಣೀಭೂತವಾಗಿದೆ. ಇತ್ತೀಚೆಗೆ ಘರಾನೆಗಳ ಉಚ್ಚ ಸಂಸ್ಕೃತಿಯ ಪರಂಪರೆ ಕ್ಷೀಣಿಸುತ್ತಬಂದಿದೆ. ಇದನ್ನರಿತ ಸರ್ಕಾರ, ಸಂಘ ಸಂಸ್ಥೆಗಳೂ ಘರಾಣೆಯ ಬೆಳವಣಿಗೆಗಾಗಿ ಶಕ್ತಿಮೀರಿ ಪ್ರಯತ್ನಿಸುತ್ತದೆ. ಆದರೆ ಈ ಪ್ರಯತ್ನದಲ್ಲಿ ಎಷ್ಟು ಯಶಸ್ವಿಯಾಗಿದೆ ಎಂಬುದು ಸಂದೇಹಾಸ್ಪದವಾಗುತ್ತದೆ.

ಎಲ್ಲಿಯವರೆಗೆ ನಮ್ಮ ಜನರಲ್ಲಿ ಪ್ರಾಮಾಣಿಕತೆಯ ಹಾಗೂ ಹೃದಯ ಶ್ರೀಮಂತಿಕೆಯ ಕೊರತೆಯಿದೆಯೊ ಅಲ್ಲಿಯವರೆಗೆ ಸಂಗೀತ ಕಲೆ, ಅಷ್ಟೇ ಅಲ್ಲದೇ ಯಾವುದೇ ಕಲೆಯ ಭವಿತವ್ಯವು ನಿರಾಶಾದಾಯಕವಾಗಿದೆ. ಎನ್ನಬಹುದು. ಇನ್ನು ಅಭ್ಯಾಸ ಪತ್ರಿಕೆಗನುಗುಣವಾಗಿ ಶಾಲಾ ಕಾಲೇಜುಗಳಲ್ಲಿ ಸಂಗೀತ ಪದ್ಧತಿಯಲ್ಲಿ ಕೆಲವೊಂದು ದೋಷಗಳು ಕಾಣಸಿಗುತ್ತವೆ. ಇವುಗಳನ್ನು ನಿವಾರಿಸಲು ಸಮಾಜದ ಹಿತಚಿಂತಕರು ನುರಿತ ಕಲಾಕಾರರ ಒಂದು ಸಮಿತಿರಚಿಸಿ ಪ್ರಾಮಾಣಿಕವಾಗಿ ಇವುಗಳ ಸಮಸ್ಯೆಗಳ ಬಗೆಗೆ ಅಧ್ಯಯನನಡೆಸಿ ಒಂದು ಪರಿಹಾರ ಸೂತ್ರವನ್ನು ರೂಪಿಸಬೇಕು. ಸಂಗೀತಶಿಕ್ಷಣದ ಬಗೆಗೆ ಒಂದು ಏಕರೂಪದ ವ್ಯವಸ್ಥೆಯನ್ನು ರೂಪಿಸಬೇಕಾಗಿದೆ.

ಶಾಸ್ತ್ರೀಯ ಸಂಗೀತದ ಅಭಿವೃದ್ಧಿಗೆ ಒಂದುವಿವೇಚನೆ

ವೈವಿಧ್ಯದಬೀಡಾದ ಭಾರತದಲ್ಲಿ ಎರಡುಪ್ರಕಾರದ ಶಾಸ್ತ್ರೀಯ ಸಂಗೀತ ಶೈಲಿಗಳು ಬೆಳೆದುಕೊಂಡುಬಂದಿವೆ. ನಮ್ಮ ಕನ್ನಡನಾಡಿನಲ್ಲಿ ಉತ್ತರಾದಿ ಹಾಗೂ ದಕ್ಷಿಣಾದೀ ಎಂಬ ಎರಡೂ ಶೈಲಿಯ ಸಂಗೀತವೂ ಬೆಳೆದುಬಂದಿದೆ.

ದಿವಂಗತ ಉಬಯಗಾನ ವಿಶಾರದ ಶ್ರೀ ಪಂಚಾಕ್ಷರೀ ಗವಾಯಿಗಳು ಎರಡೂ ಶೈಲಿಯಲ್ಲಿ ತಮ್ಮ ಸಂಗೀತ ಕಛೇರಿಯನ್ನು ಮಾಡುತ್ತಿದ್ದರು. ಉತ್ತರಾದಿ ಮತ್ತು ದಕ್ಷಿಣಾದಿ ಒಬ್ಬ ತಾಯಿಯ ಅವಳೀಮಕ್ಕಳಿದ್ದಂತೆ. ಒಂದೇ ಮರದ ಎರಡು ಕೊಂಬೆಗಳಿದ್ದಂತೆ ಈ ಗಾಯನ ಪದ್ಧತಿಗಳು ಇಂದು ಬೆಳೆದುಬಂದಿದೆ. ಉತ್ತರಾದೀ ಹಾಗೂ ದಕ್ಷಿಣಾದೀ ಪದ್ಧತಿಗಳನ್ನು ಸಮ್ಮಿಳಿತಗೊಳಿಸಲು ಅನೇಕ ಹಿರಿಯವಿದ್ವಾಂಸರು ಪ್ರಯತ್ನಪಟ್ಟಿದುದನ್ನು ಸ್ಮರಿಸಬಹುದು. ಕೀರ್ತಿಶೇಷ ವೀಣಾ ಕೃಷ್ಣಮಾಚಾರರು ಇವೆರಡೂ ಸಂಗೀತವನ್ನು ಸಮ್ಮಿಳಿತವಾಗಬೇಕೆಂದು ಪ್ರಯತ್ನಪಟ್ಟು, ಅನೇಕ ಉತ್ತರಾದಿ ರಾಗಗಳಲ್ಲಿ ತೆಲಗುಜಾವಳಿಗಳನ್ನು ರಚಿಸಿದರು. ತೆಲಗು ಕೃತಿಗಳನ್ನು ಉತ್ತರಾದೀ ರಾಗಗಳಲ್ಲಿ ರಚಿಸಬೇಕೆಂದು ಅವರು ಬಹಳ ಉತ್ಸುಕರಾದುದನ್ನು ಅವರ ಶಿಶ್ಯರು ಹೇಳುತ್ತಾರೆ. ಇಂತಹ ಅನೇಕ ಪ್ರಯತ್ನಗಳು ಇಂದಿಗೂ ನಡೆಯುತ್ತಲೇ ಇದೆ. ಲೋಕೋಬಿನ್ನರುಚಿ ಎನ್ನುವುದು ಸಹಜ. ಆದರೆ ಈ ಕಾರಣದಿಂದ ಶಾಸ್ತ್ರೀಯ ಪದ್ಧತಿಗಳಿಗೆ ವ್ಯಥೆಯಾಗುವಂತಹ ಘಟನೆಗಳು ನಡೆಯಬಾರದು. ಶಾಸ್ತ್ರೀಯ ಸಂಪ್ರದಾಯವನ್ನು ಬಿಟ್ಟುಹೋಗುವುದು ಎಂದಿಗೂ ಅಪೇಕ್ಷಣೀಯವಾಗುವುದಿಲ್ಲ. ಶಾಸ್ತ್ರೀಯತೆಯನ್ನು, ಸತ್ ಸಂಪ್ರದಾಯಗಳನ್ನು ಉಳಿಸಿಕೊಳ್ಳುವುದು ಪರಂಪರೆಯ ದೃಷ್ಟಿಯಿಂದ ಅಗತ್ಯವಾಗಿದೆ. ಶಾಸ್ತ್ರೀಯಸಂಗೀತದ ಅಭ್ಯಾಸದಿಂದ ಮನರಂಜನೆಯಲ್ಲದೇ ಮಾನಸಿಕಪರಿಷ್ಕರಣ, ಶಾಂತಿ, ಹೃದಯ ನಿರ್ಮಲೀಕರಣ ಹಾಗೂ ಆತ್ಮೋದ್ಧಾರವಾಗುತ್ತದೆ.

ಶಾಸ್ತ್ರೀಯ ಸಂಗೀತದ ಪ್ರಸಾರಕ್ಕಾಗಿ ಮಾಡಬೇಕಾದ ಕಾರ್ಯ ಸಾಕಷ್ಟಿದೆ. ಕಲಾವಿದ ಬೆಳೆಯಲು ಸಂಗೀತ ಉಳಿಯಲು ಸರ್ಕಾರ, ರೇಡಿಯೋ, ಸಂಸ್ಥೆಗಳು, ಅಕಾಡೆಮಿಗಳು ವಿವಿದ ಯೋಜನೆಗಳನ್ನು ಹಾಕಿಕೊಂಡು ಕಾರ್ಯೋನ್ಮುಖರಾಗಬೇಕಾಗಿದೆ. ಶಾಲಾ-ಕಾಲೇಜುಗಳಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸಂಗೀತದ

ಪ್ರಸಾರಕಾರ್ಯ ನಡೆಯಬೇಕಾಗಿದೆ. ಶಾಸ್ತ್ರೀಯ ಸಂಪ್ರದಾಯಗಳನ್ನು ಉಳಿಸಿ ಸಂಗೀತವನ್ನು ಬೆಳೆಸಿಕೊಂಡು ಬಂದ ಮಹನೀಯರ ಸಂಗೀತದ ಧ್ವನಿಸುರಳಿಗಳನ್ನು ಸಂಗೀತಕಲಿಯುವ ವಿದ್ಯಾರ್ಥಿಗಳಿಗೆ ಕೇಳಿಸಬೇಕು. ಸಂಗೀತಗಾರರ ಜೀವನ ಆಚಾರಗಳ ಅಧ್ಯಯನ ಆಗಬೇಕು. ವಿವಿದಘರಾನೆಗಳ ಹಾಗೂ ಸಂಗೀತದ ಮಹತ್ವವನ್ನು ತಿಳಿಯಬೇಕು. ಹಿಂದೆ ಅನೇಕರು ಸಂಗೀತದಲ್ಲಿ ಮಹಾನ್ ಕಲಾಕಾರರಾಗಿ ಹೋದರು. ಅವರಿಗೆ ಜೀವನ ನಿರ್ವಹಣೆಯ ಜವಾಬ್ದಾರಿಗಳಿರಲಿಲ್ಲ. ಅನೇಕ ರಾಜ ಮಹಾರಾಜರು ಅಂತಹ ಪ್ರತಿಭಾವಂತ ವಿದ್ಯಾವಂತರಿಗೆ ಆಶ್ರಯಕೊಟ್ಟು ಸಾಂಪ್ರದಾಯಿಕವಾದ ಶಾಸ್ತ್ರೀಯಸಂಗೀತವನ್ನು ಬೆಳೆಸಲು ಸಹಾಯ ಮಾಡುತ್ತಿದ್ದರು. ಈ ವಿದ್ವಾಂಸರು ಅನೇಕ ಶಿಷ್ಯರನ್ನು ತಯಾರು ಮಾಡಿ ಶಿಷ್ಯನ ಪಾಂಡಿತ್ಯ ಅನೇಕ ಕಡೆ ತೋರ್ಪಡುವಂತೆ ಕಛೇರಿಗಳನ್ನು ಏರ್ಪಡಿಸಿ ನಂತರ 'ಗಂಡಾ ಬಂದನ' (ಗುರು ಶಿಷ್ಯನನ್ನು ಸ್ವೀಕರಿಸುವ ಸಮಾರಂಭ) ಮಾಡಿ ಗುರುಗಳಿಗೆ ಗುರುಕಾಣಿಕೆಯನ್ನು ನೀಡುತ್ತಿದ್ದರು. ಆದರೆ ಇಂದು ಪದ್ಧತಿ ಬದಲಾಗಿದೆ. ಒಂದು ವರ್ಷದಲ್ಲಿಯೇ, ರೇಡಿಯೋ, ಟಿ.ವಿ. ಕಲಾಕಾರರಾಗಲೂ ವಿದ್ಯಾರ್ಥಿಗಳು ಹಾತೊರೆಯುತ್ತಾರೆ. ಪಾಂಡಿತ್ಯವಿಲ್ಲದೇ ಪ್ರದರ್ಶನ ಇಂದಿನ ಅನೇಕ ಕಛೇರಿಗಳಲ್ಲಿ ನಡೆದಿದೆ.

ಹಿಂದಿನ ಪದ್ಧತಿ ಸಂಪೂರ್ಣವಾಗಿ ನಶಿಸಿದೆ ಎಂದು ಹೇಳಲಾಗದು. ಆಧುನಿಕತೆಗೆ ತಕ್ಕಂತೆ ಮಾರ್ಪಾಡಾಗುವುದು ಸಮಾಜದ ನಿಯಮವಾಗಿದೆ. ಅದಕ್ಕೆ ಹೊಂದಿಕೊಳ್ಳಲೇಬೇಕು. ಈಗಲೂ ಒಳ್ಳೆಯ ಸಂಪ್ರದಾಯದ ಶಾಸ್ತ್ರೀಯ ಸಂಗೀತ ಅಭ್ಯಾಸಮಾಡಲು ಆಶಿಸುವ ವಿದ್ಯಾರ್ಥಿಗಳಿಗೆ ಕೆಲ ಸಂಸ್ಥೆಗಳು, ಗುರುಗಳು ಆಶ್ರಯಕೊಟ್ಟು ಪರಂಪರೆಯನ್ನು ಮುಂದೆ ತರಲು ಕಾರಣೀಕರ್ತರಾಗಿದ್ದಾರೆ. ಇಂತಹ ಪ್ರಯತ್ನಗಳು ಮುಂದುವರೆದರೆ ಮಾತ್ರ ಉತ್ತಮ ಬೆಳವಣಿಗೆ ಆಗುವುದು.

ವಿಶ್ವವಿದ್ಯಾನಿಲಯಗಳಲ್ಲಿಯೂ ಸಂಗೀತ ಕಲಿಯುವ ವ್ಯವಸ್ಥೆಗೆ ಅಲ್ಪ ಪ್ರಯತ್ನ ಮಾಡುತ್ತಲಿದೆ. ಇದು ಇನ್ನೂ ಹೆಚ್ಚಾಗಬೇಕು. ಸಂಶೋಧನೆ ನಿರಂತರವಾಗಿ ನಡೆಯುತ್ತಲೇ ಇರಬೇಕು. ಸಂಶೋಧನಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದಂತಹ ಪ್ರೋತ್ಸಾಹಕ ಯೋಜನೆಗಳನ್ನು ಕಾರ್ಯಗತಗೊಳಿಸಬೇಕು.

ಸಂಗೀತ ಗುರುಕುಲ ಪದ್ದತಿಯಂತೆ ಇದುವರೆಗೂ ನಡೆದುಕೊಂಡುಬಂದಿದೆ. ಗುರುಕುಲದಾಸ ಅಥವಾ

ಘರಾನಾದ ಉತ್ತಮ ಶಿಕ್ಷಣವ್ಯವಸ್ಥೆ ಇಲ್ಲದಿದ್ದಲ್ಲಿ, ಗುರುಕುಲ ಹಾಗೂ ಗುರುಶಿಷ್ಯ ಭಾವನೆ ಅಳಿದುಹೋಗುತ್ತದೆ. ಇದನ್ನು ಉಳಿಸಿಕೊಂಡು ಹೋಗಲು ಇಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗಿದೆ.

ಆಕಾಶವಾಣಿಯಲ್ಲಿ ಸಂಗೀತಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕು. ರೇಡಿಯೋ ಸಂಗೀತ ಸಮ್ಮೇಲನಗಳಂತಹ ಅನೇಕ ಸಮ್ಮೇಲನಗಳಲ್ಲಿ ಶಾಸ್ತ್ರೀಯಸಂಗೀತದ ಪ್ರಸಾರವಾಗುತ್ತಿರುವುದು ಆಕಾಶವಾಣಿಯ ಪ್ರೋತ್ಸಾಹಕ್ಕೆ ನಿದರ್ಶನವಾಗಿದೆ. ಗ್ರಾಮೀಣಭಾಗದ ಜನತೆಗೂ ಶಾಸ್ತ್ರೀಯ ಸಂಗೀತದಂತಹ ವಿದ್ಯೆಯನ್ನು ಕಲಿಯಲು ಅವಕಾಶ ದೊರೆಯಬೇಕು. ಗುರುಸಾನ್ನಿಧ್ಯದಲ್ಲಿದ್ದುಕೊಂಡು ವಿವಿದ ರಾಗಗಳ ಪರಿಚಯ ಮಾಡಿಕೊಂಡು ಸಂಗೀತದ ಸೂಕ್ಷ್ಮಾಸೂಕ್ಷ್ಮಗಳ ಅಭ್ಯಾಸವನ್ನು ವಿದ್ಯಾರ್ಥಿ ಮಾಡಬೇಕು. ದಿನಕ್ಕೆ ೮ ರಿಂದ ೧೦ ತಾಸುಗಳ ರಿಯಾಜಮಾಡಿದರೆ ಆತ ಒಬ್ಬ ಕಲಾಕಾರನಾಗಬಹುದು. ಶ್ರಮವಿಲ್ಲದೇ ಶಾಸ್ತ್ರೀಯಸಂಗೀತವನ್ನು ಕಲಿಯುವುದು ಸಾಧ್ಯವಿಲ್ಲ. ಗುರುಭಕ್ತಿ, ಪ್ರಾಮಾಣಿಕತೆ, ನಿಷ್ಠೆ ಮತ್ತು ಸತತ ಅಭ್ಯಾಸಮಾಡಿದಾಗ ಮಾತ್ರ ಒಬ್ಬ ವ್ಯಕ್ತಿ ಉತ್ತಮ ಕಲಾಕಾರನಾಗಬಹುದು. ಕಲಾಕಾರನಾದ ನಂತರ ಅನೇಕ ಚಟಗಳಿಂದ ಆತ ಮುಕ್ತವಿರುವುದೂ ಅವಶ್ಯವಾಗಿದೆ. ಹೆಸರುಗಳಿಸುವುದು ಕಷ್ಟವಾದರೂ ಸುಲಭವೇ ಆಗಬಹುದು. ಆದರೆ ಹೆಸರನ್ನು ಕೆಡಿಸಿಕೊಳ್ಳುವುದು ಅಷ್ಟೇ ಸುಲಭ. ಇವೆಲ್ಲದರ ಬಗೆಗೂ ಜಾಗರೂಕನಾಗಿ ವಿದ್ಯಾರ್ಥಿ ಸಂಗೀತ ಅಭ್ಯಾಸವನ್ನು ಮಾಡಬೇಕಾಗುತ್ತದೆ.

ಸಂಗೀತಗಾರನ ಗುಣದೋಷಗಳು

ಶಾರಂಗದೇವನು ತನ್ನ ಸಂಗೀತರತ್ನಾಕರ ಎಂಬ ಗ್ರಂಥದಲ್ಲಿ ಸಂಗೀತಗಾರನ ಗುಣದೋಷಗಳನ್ನು ವಿವರಿಸಿದ್ದಾರೆ. ಸಂಗೀತ ಕಲಾವಿದ (ಶಾಸ್ತ್ರೀಯ) ನಾಗಲು ಅವಾಜ್ ಒಂದೇ ಚೆನ್ನಾಗಿದ್ದರೆ ಸಾಲದು. ಸಂಗೀತಗಾರರ ಯೋಗ್ಯತೆ ಹಾಗೂ ಲೋಕಪ್ರಿಯತೆಯು ಅವರ ಮಂಚಪ್ರದರ್ಶನ (ಸಂಗೀತ ಕಛೇರಿ) ಗಳ ಸಫಲತೆಯನ್ನು ಅವಲಂಬಿಸಿದೆ. ಪ್ರಭಾವಿ ವ್ಯಕ್ತಿತ್ವ ಕಲಾವಿಷಯಗಳ ಶಾಸ್ತ್ರೀಯ ಸಮ್ಯಕ್‌ಜ್ಞಾನ ಹಾಗೂ ಜನಾಬಿರುಚಿಗೆ ಅನುಸರಿಸಿದ ಕಲಾಪ್ರದರ್ಶನದಂತಹ ಸರ್ವಸಾಮಾನ್ಯ ಗುಣಗಳು ಗಾಯಕ ವಾದಕರಿಗೆ ಇರಲೇಬೇಕಾಗುವುದು.

೧* ಸಫಲ ಗಾಯಕರಾಗಲು ಕೇವಲ ಸುಸ್ವರ, ಧ್ವನಿಯೊಂದಿದ್ದರೆ ಸಾಲದು. ಅಭ್ಯಾಸವು ಕಲಾಮಂದಿರದ ಅಡಿಗಲ್ಲಾಗಿದೆ. ಗುರುಮುಖವಾಗಿ ಪ್ರತ್ಯಕ್ಷ ಜ್ಞಾನಾರ್ಜನೆ ಸ್ವಪ್ರಯತ್ನದಿಂದ ಮಾಡಿದ ಪರಿಶ್ರಮ (ರಿಯಾಜ್) ಮತ್ತು ನಿದಿದ್ಯಾಸ ಹೀಗೆ ತ್ರಿವಿದವರ್ಗದಿಂದ ಕಲೆಯ ವ್ಯಾಸಂಗವನ್ನು ಮಾಡಬೇಕಾಗುತ್ತದೆ. ಕಲಾತ್ಮಕ ಭಾವಪರಿಪೋಷಣೆಯು ಶಾಸ್ತ್ರೀಯ ಆಧಾರಗಳೊಡನೆ ಸುಸಂಗತವಿರಬೇಕಾಗುವುದು. ಸಾಹಿತ್ಯ ಶಾಸ್ತ್ರ ಮತ್ತು ಭಾವ ಪರಿಪೋಷಕ ಕಂಠ ಸಂಯೋಜನೆಗಳ ತ್ರಿವೇಣಿ ಸಂಗಮದಲ್ಲಿ ಸ್ವತಹಗಾಯಕನು ಮೀಯುವನು. ಅಲ್ಲದೇ ರಸನಿರ್ಮಿತಿಯಲ್ಲಿ ಶ್ರೋತೃಗಳನ್ನೂ ಸಮಾದಿಸ್ಥಗೊಳಿಸುವನು. ಸಾಹಿತ್ಯದ ರಸಾನುಭೂತಿ ಸ್ವರಗಳ ಭಾವಾನ್ವೇಷಣೆ ಹಾಗೂ ಇವೆರಡೂಕ್ರಿಯೆಗಳ ಭಾವನಾತ್ಮಕ ಪರಿಪಕ್ವತೆಯು ಗಾಯಕನ ಮುಖದ ಮೇಲೆ ಕಾಣಲ್ಪಡಬೇಕು. ಕೆಲ ವೇಳೆಯಲ್ಲಿ ಅಂಗಬಲಿನವೂ ರಸಪರಿಪೋಷಕವೆಂದು ನಿಶ್ಚಯಿಸಲ್ಪಡುವುದು.

ಸಂಗೀತಂ ಮೋಹಿನಿ ರೂಪಮಿತ್ಯಾಹುಃ ಸತ್ಯಮೇವ ತತ್।

ಯೋಗ್ಯರಸಭಾವ ಭಾಷಾರಾಗಪ್ರಬುವೆ ಸಾಧನೈ।

ಗಾಯಕಃ ಶ್ರೋತ್ರ ಮನಸಿ ನಿಯಲಂ ಜನಯೇಲ್ ಫಲಮ್।

ಅಂದರೆ ಅರ್ಥಃ ಯೋಗ್ಯ, ರಸ, ಭಾವ ಮತ್ತು ಭಾಷಾಂಗ ಇವುಗಳ ಉಚಿತ ಸಾಧನೆಯನ್ನು ಮಾಡುವ ಗಾಯಕನ ಗಾಯನವು ಮೋಹಿನಿ ಸ್ವರೂಪದ್ದಾಗಿದ್ದು. ಶ್ರೋತೃಗಳ ಮನವನ್ನು ಮೋಹಿಸುತ್ತದೆ. ಲಕ್ಷ್ಯ ಸಂಗೀತದಲ್ಲಿಯು ಈ ಶ್ಲೋಕದಲ್ಲಿಯ ವಿಧಾನವು ಮೇಲಿನ ಸಂಗತಿಗೆ ಪುಷ್ಟಿಯನ್ನೀಯುತ್ತದೆ.

೨* ಬಾಷಾಽವ್ಯಕ್ತಾ ಹಾವಭಾವಾಃ ಪ್ರತಿಯಂತೆ ವಿಸಂಗತಾಃ

ವ್ಯಸ್ತಾಶ್ಚೇಷ್ಟಾಸ್ತಥಾಽಽಕ್ರೋಶಾಃ ಕೇವಲಮ್ ಕರ್ಕಶಾ ಮತಾಃ

ಏತಾದ್ಗಾಯನಾನ್ನಸ್ಯಾತ್ ಪರಿಣಾಮೋಽ ಹ್ಯಬೀಪ್ಸಿತ ಃ

ತತೋ ಹಾಸ್ಯರಸಸ್ಯೈವ ಕೇವಲಮ್ ಸ್ಯಾತ್ ಸಮುಧ್ಭವಃ

(ಲಕ್ಷ್ಯ ಸಂಗೀತ ಶಾಸ್ತ್ರ) ಅಂದರೆ,

ಕರ್ಕಶ ಧ್ವನಿಯಿಂದ ಬೇಕಾದಂತೆ ಕೂಗಾಡುವ ಮತ್ತು ವಿಚಿತ್ರ ಹಾಸ್ಯಾಸ್ಪದ ಹಾವಭಾವ ಮಾಡುವುದರಿಂದ

ಅಡಿಟಿಪ್ಪಣಿಃ ೧* ಸಂಗೀತಗಾರನ ಗುಣದೋಷಗಳ ಬಗೆಗಿನ ಹಿರಿಯ ಕಲಾಕಾರರ ಸಂದರ್ಶನದಿಂದ ....

೨* ಲಕ್ಷ್ಯಸಂಗೀತದ ಶ್ಲೋಕವನ್ನಾಧರಿಸಿ .....

ಶ್ರೋತೃಗಳಿಗೆ ಕೇವಲ ಹಾಸ್ಯರಸದ ಪ್ರತೀತಿಯುಂಟಾಗುವದೆಂದು ಉಪರೋಕ್ತ ಶ್ಲೋಕದ ಅರ್ಥವಾಗಿದೆ. ಸಂಗೀತ ರತ್ನಾಕರ ಗ್ರಂಥದಲ್ಲಿ ಗಾಯಕರ ಗುಣದೋಷಗಳ ವಿವೇಚನೆಯಿದೆ.

ಗುಣಗಳು

ಹೃದ್ಯಶಬ್ದಃ ಸುಖಾರಿರೊ ಗ್ರಹಮೋಕ್ಷ ವಿಚಕ್ಷಣಃ

ರಾಗರಾಗಾಂಗ ಭಾಷಾಂಗ ಕ್ರಿಯಾಂಗೋಪಾಂಗ ಕೋವಿದಃ

ಪ್ರಬಂದ ಗಾನ ನಿಷ್ಣಾತೋ ವಿವಿದಾಲಾಪ್ತಿತತ್ವವಿತ್

ಸರ್ವಸ್ಥಾನೋಚ್ಛ ಗಮಕೆಷ್ವನಾಯಾಸಲ ಸದ್ಗತಿ

ಆಯುತ್ತ ಕಂಠಸ್ತಾಲಜ್ಞಃ ಸಾವಧಾನೋ ಜಿತಶ್ರಮಃ

ಶುದ್ಧ ಛಾಯಾಲಗಾಬಿಜ್ಞಃ ಸರ್ವಕಾಕು ವಿಶೇಷವಿತ್

ಅಪಾರಸ್ಥಾಯ ಸಂಚಾರಃ ಸರ್ವದೋಷ ವಿವರ್ಜಿತಃ

ಕ್ರಿಯಾಪರೋಽ ಜಸ್ರಲಯಃ ಸುಷಟೊ ಧಾರಣಾನ್ವಿತ್ಃ

ಸ್ಪರ್ಜನ್ನಿರ್ಜನವನೋ ಹಾರಿರಹಃ ಕ್ರದ್ ಭಜನೋದ್ ದುರಃ

ಸುಸಂಪ್ರದಾಯೋಗೀತಜ್ಞೈರ್ಗೀಯತೇ ಗಾಯನಾರ್ಗಿಣೇಃ

ಸಂಗೀತಗಾರನ ಗುಣದೋಷಗಳ ಬಗ್ಗೆ ಸಂಗೀತರತ್ನಾಕರದಲ್ಲಿ ಬಹುಮೊದಲೇ ತಿಳಿಸಲಾಗಿದೆ. ಸಂಗೀತಕಲಾಕಾರರು ಈ ಗುಣದೋಷಗಳನ್ನು ತಿಳಿದುಕೊಂಡು 'ಮಂಚಪ್ರದರ್ಶನ' ಸಮಯದಲ್ಲಿ ದೋಷಗಳು ಬಾರದಂತೆ ಲಕ್ಷ್ಯವಹಿಸುವದು ಅವಶ್ಯವಾಗಿದೆ. ಆದರೆ ಇಂದಿನ ಅಗ್ರಗಣ್ಯ ಕಲಾಕಾರರಲ್ಲೂ ಕೆಲವು ದೋಷಗಳಿರುವುದನ್ನು ನಾವು ಕಾಣಬಹುದಾಗಿದೆ. ಹಂಸಕ್ಷೀರನ್ಯಾಯದಂತೆ ಉತ್ತಮವಾದುದನ್ನು ಸ್ವೀಕರಿಸುವುದು ಬೆಳವಣಿಗೆಪರ ಕಾಳಜಿ ಇರುವ ಸಂಗೀತಗಾರನ ಲಕ್ಷಣವಾಗಿದೆ. ಇಂದು ಸಂಗೀತಾಭ್ಯಾಸ ಮಾಡುವ ಸಂಗೀತ ವಿದ್ಯಾರ್ಥಿಗಳು ಇವುಗಳೆಲ್ಲದರಕಡೆ ಲಕ್ಷ್ಯಕೊಟ್ಟು ಅಭ್ಯಾಸಮಾಡಿದಲ್ಲಿ ಮಾತ್ರ ಉತ್ತಮ ಸಂಗೀತಗಾರರಾಗಬಹುದು.

ಶಾಸ್ತ್ರೀಯ ಸಂಗೀತದ ವಿಕಾಸ ಕ್ರಮ

ಸಾವಿರಾರು ವರ್ಷಗಳ ಕಾಲದ ತಪಶ್ಚರ್ಯೆ ಮತ್ತು ಸಂಶೋಧನಾತ್ಮಕ ಪ್ರಯೋಗಗಳು, ಅಧ್ಯಯನ ಹಾಗೂ ಅನಂತ ಕಾಲದಿಂದ ಆಗುತ್ತಿರುವ ಸತತ ಸಂಸ್ಕಾರ , ವಿಚಾರಮಂಥನ ಮತ್ತು ಪ್ರಯತ್ನಪೂರ್ವಕವಾಗಿ ಮಾಡಿದ ಪರಿಶ್ರಮದಿಂದ ಶಾಸ್ತ್ರೀಯ ಕಲೆಯು ಬಹುರಂಗಿರೂಪದಿಂದ ಅಲಂಕೃತವಾಗಿ ಸಾಕಾರಗೊಂಡಿದೆ. ಸಾವಿರಾರು ವರ್ಷಗಳ ತಪಶ್ಚರ್ಯೆ ಮತ್ತು ಸಂಶೋಧನಾತ್ಮಕ ಪ್ರಯೋಗಗಳೇ ಇಂದಿನ ಶಾಸ್ತ್ರೀಯ ಸಂಗೀತದ ವಿಕಾಸ ಹಾಗೂ ಬೆಳವಣಿಗೆಗೆ ಕಾರಣವಾಗಿದೆ. ಪರಿವರ್ತನೆ ಹಾಗೂ ಬದಲಾವಣೆಗಳು ಬೆಳವಣಿಗೆಯ ದೃಷ್ಟಿಯಲ್ಲಿ ಸ್ವಾಭಾವಿಕವಾಗಿದೆ. ಜಾಗತಿಕ ಪರಿವರ್ತಯೊಂದಿಗೆ ಸಂಗೀತಕಲೆಯಲ್ಲಿಯೂ ಪರಿವರ್ತನೆ ಆಗುತ್ತಲೇ ಸಾಗಿರುವದು ಸ್ವಾಭಾವಿಕವೆ ಆಗಿದೆ. ಜನಪದಸಂಗೀತದ ರೂಪದಿಂದ ಅವತರಿಸಿ ಶಾಸ್ತ್ರೀಯ ಸ್ವರೂಪದಲ್ಲಿ ಪರಿವರ್ತಿತವಾದ ಸಂಗೀತಕಲೆಯ ವಿಕಾಸದ ಬಗೆಗೆ ತಿಳಿದುಕೊಳ್ಳುವುದು ಅಧ್ಯಯನಕ್ಕೆ ಯೋಗ್ಯವಾಗಿದೆ. ಜನಪದ ಸಂಗೀತವು ಸಾಮಾನ್ಯರ ಸಹಜ ಆಸೆ ಆಕಾಂಕ್ಷೆಗಳನ್ನು ಬಿಂಬಿಸುವ ಸಂಗೀತವಾಗಿದೆ. ಸಂಗೀತ ಶಾಸ್ತ್ರದಲ್ಲಿ ಅನಿಬಿಜ್ಞರಾದವರ ಹಾಡುಗಾರಿಕೆಯಲ್ಲಿ ಸ್ವರ, ಶ್ರುತ್ಯಂತರ ತಾಲ- ನಿಯಮ ಇತ್ಯಾದಿಗಳ ಸಮ್ಯಕ್‌ಜ್ಞಾನವು ಕಂಡುಬರುವುದು. ಅಬಿಜಾತ ತತ್ವವು ಸಂಗೀತ ಕಲೆಯ ಮೂಲವಾಗಿದೆ. ಅನುಕರಣೆ ಮತ್ತು ಸಂಸ್ಕಾರಗಳೊಂದಿಗೆ ಮಾನವನು ವಂಶಾನುವಂಶದಿಂದ ಈ ಕಲೆಯನ್ನು ಪೋಶಿಸಿರುವನು. ಪ್ರತಿಭಾವಂತ ಕಲಾಕಾರರು ಮತ್ತು ವಿಚಾರವಂತರು ಅದರಲ್ಲಿ ವೈಚಿತ್ಯ ಮತ್ತು ವೈವಿಧ್ಯದ ಏಕಸೂತ್ರತೆಯನ್ನು ಸಾದಿಸಲು ಪ್ರಯತ್ನಪಟ್ಟರು. ಏಕಸೂತ್ರತೆಯಿಂದಲೇ ನಿಯಮಬದ್ಧ ಶಾಸ್ತ್ರೀಯ ಸಂಗೀತವು ಉದ್ಭವಿಸಿತು.

ಸಹಜ ಸರಳವಾದ ಗೀತರಚನೆ, ಅದಕ್ಕನುಗುಣವಾಗುವಂತೆ ನಿಯೋಜಿಸಿದ ಸರಳಸ್ವರಗಳ ಉಪಯೋಗ, ದೃತಲಯದಲ್ಲಿರುವ ಹಾಡುಗಳ ಜೋಡಣೆಗಳೊಡನೆ ನಿಯುಕ್ತವಾದ ಜನಪದಸಂಗೀತವು ಜನರನ್ನಾಕರ್ಷಿಸಿ ಬಹುಬೇಗ ಲೋಕಪ್ರಿಯತೆಯನ್ನು ಗಳಿಸಿತು. ಜನಪದ ಸಂಗೀತ ಮತ್ತು ಶಾಸ್ತ್ರೀಯ ಸಂಗೀತಗಳೆರಡರಲ್ಲಿ ಅನೇಕ ಕಡಗಳಲ್ಲಿ ಸಾಮ್ಯವಿರುವುದು ಕಂಡುಬರುತ್ತದೆ. ಇಷ್ಟೇ ಅಲ್ಲದೆ ಪೂರ್ವ ರಚಿತವಾದ ಅನೇಕ ರಾಗಗಳಲ್ಲಿ ಪ್ರಚಲಿತ ದುನ್‌ಗಳು ಪ್ರತಿಬಿಂಬಿತವಾದದ್ದು ಸ್ಪಷ್ಟವಾಗುವುದು. ಈ ಎರಡೂ ಗಾನಪದ್ಧತಿಗಳಲ್ಲಿ

ಕೂಡುತೆಗೆದುಕೊಳ್ಳುವುದು ಅವ್ಯಾಹತವಾಗಿ ಸಾಗಿರುತ್ತದೆ. ಪ್ರಚಲಿತ ಅನೇಕರಾಗಗಳ ಪೂರ್ವ ಪೀಠಿಕೆಯ ಜನಪದ ಸಂಗೀತದ ದುನಗಳಲ್ಲಿಯೂ ಇರುವದು ನಮಗೆ ಕಂಡುಬರುತ್ತದೆ. ಉದಾಃ ಸಾರಂಗ, ಪೀಲು, ಬಿಹಾರಿ, ಪಹಾಡಿ, ಮಾಂಡ ಇತ್ಯಾದಿಗಳು. ಇದರಿಂದ ಇಂತಹ ರಾಗಗಳಲ್ಲಿ ಜನಪದ ಗೀತೆಗಳ ಅಂಗದಿಂದಾಗುವ ಸ್ವರವಿಸ್ತಾರಗಳನ್ನನುಸರಿಸುವುದು ಅಪರಿಹಾರ್ಯವೇ ಆಗಿದೆ. ಈ ಸಂಗತಿ ನಿಜವಾದರೂ ಸಹ ಜನಪದಸಂಗೀತ ಮತ್ತು ಶಾಸ್ತ್ರೀಯ ಸಂಗೀತಗಳೆರಡರ ಬೆಳವಣಿಗೆಗಳಾದದ್ದು ಪರಸ್ಪರ ವಿರುದ್ಧವಾದ ವಾತಾವರಣದಲ್ಲಿಯೇ ಆಗಿದೆ. ಜನಪದ ಸಂಗೀತದಲ್ಲಿ ಶಾಸ್ತ್ರ ನಿಯಮಗಳ ಯಾವುದೇ ಆಧಾರವನ್ನು ಗ್ರಹಿಸುವ ಬುದ್ಧಿಪೂರ್ವಕ ಪ್ರಯತ್ನವಿರುವದಿಲ್ಲ. ಶಾಸ್ತ್ರೀಯ ಭಾವೋತ್ಕರ್ಷದ ಉತ್ಕಟ ಸಾಧನವೆಂದರೆ ಸ್ವರಮಾಧ್ಯಮ, ಇದು ಜನಪದ ಸಂಗೀತದಲ್ಲಿ ಸಂಯಮಾತೀತ ಭಾವೋತ್ಕರ್ಷವು ಶಬ್ದಾರ್ಥಯುಕ್ತ ಗೀತೆಗಳ ಮಾಧ್ಯಮದೊಂದಿಗೆ ಸಾದಿಸಲ್ಪಡುವುದು. ಇದಕ್ಕೆ ವೈತಿರಿಕ್ತವಾಗಿ ಶಾಸ್ತ್ರೀಯ ಸಂಗೀತದಲ್ಲಿ ರಾಗ - ನಿಯಮಗಳ ಬಂದನೆಯಿಂದ ಮತ್ತು ವರ್ಣಾಲಂಕಾರಗಳ ಅಲಂಕಾರಗಳಿಂದ ರಾಗವನ್ನು ಅಲಂಕರಿಸಲಾಗುತ್ತದೆ. ಶಾಸ್ತ್ರೀಯಸಂಗೀತದಲ್ಲಿ ಭಾವನಿರ್ಮಿತಿಗೆ ಸ್ವರ ಸಾಮಂಜಸ ಮತ್ತು ಸ್ವರ ಸಾಧನೆಗಳು ಪ್ರಧಾನವಾಗಿದ್ದು ಸಾಹಿತ್ಯವು ಇದರಲ್ಲಿ ಗೌಣವೆನಿಸಿದೆ. ಭಾವನೆಗಳನ್ನು ವ್ಯಕ್ತಪಡಿಸಲು ಮನುಷ್ಯನಿಗೆ ಭಾಷೆಯು ಮಾಧ್ಯಮವಾದಂತೆ, ಕಲಾವಿದನಿಗೆ ತನ್ನಲ್ಲಿಯ ಭಾವನೆಗಳನ್ನು ವ್ಯಕ್ತಪಡಿಸಲು ತನ್ನ ಕಲೆಯೇ ಮಾಧ್ಯಮವಾಗಿದೆ. ಚಿತ್ರ ಕಲಾವಿದನಿಗೆ ಬಣ್ಣ ಕುಂಚಗಳು ಮಾಧ್ಯಮವಾದರೆ ಶಿಲ್ಪಿಗೆ ಕಲ್ಲು ಮತ್ತು ಚಾಣಗಳು ಮಾಧ್ಯಮವಾಗಿದೆ. ಸಂಗೀತಗಾರನಿಗೆ ಸಪ್ತಸ್ವರಗಳೇ ಮಾಧ್ಯಮವಾಗಿದೆ. ಈ ಸಪ್ತಸ್ವರಗಳ ಮೂಲಕ ಸಂಗೀತ ಕಲಾಕಾರ ತನ್ನಲ್ಲಿ ಉಂಟಾದ ಭಾವರಸಗಳನ್ನು ಸರಿಯಾದ ರೀತಿಯಲ್ಲಿ ವೈಕ್ತಪಡಿಸಲು ಸಮರ್ಥನಾಗಿದ್ದಾನೆ. ಸಂಗೀತದಲ್ಲಿ ಸಪ್ತಸ್ವರಗಳು ಅಂತರ್ಗತವಾಗಿ, ಶುದ್ಧ ಹಾಗು ವಿಕೃತ ಸ್ವರಗಳೂ ಸೇರಿ ಒಟ್ಟೂ ೧೨ ಸ್ವರಗಳ ಸಹಾಯಕೋರುವ ಸಂಗೀತ ಕಲಾವಿದನಿಗೆ ತನ್ನ ಭಾವನೆಗಳನ್ನು ಇತರರೂ ಅನುಭವಿಸಿ ಇತರರೂ ಆನಂದ ಪಟ್ಟಾಗ ಮಾತ್ರ ಸಂಗೀತಕಾರ್ಯಕ್ರಮ ಯಶಸ್ವಿಯಾಗುತ್ತದೆ. ಬಹುಜನ ಹಿತಾಯ ಬಹುಜನ ಸುಖಾಯ ಎಂಬ ಆಕಾಶವಾಣಿಯ ಘೊಷಣೆಯಂತೆ ಸಂಗೀತವು ಬಹುಜನರಿಗೆ ಹಿತವಾಗಿ ಹಾಗೂ ಬಹುಜನರಿಗೆ ಸುಖವಾಗಿ ಇರುವದು.

ಕಲಾಕಾರನಿಗೆ ತಾನು ಪ್ರಸ್ತುತ ಪಡಿಸುವ ರಾಗ, ತಾಳದ ಜೋಡಣೆ ಹಾಗೂ ಮಂಚಪ್ರದರ್ಶನದ ಬಗೆಗೆ ಅರಿವಿರಬೇಕಾಗುತ್ತದೆ. ಮಂಚಪ್ರದರ್ಶನದಲ್ಲಿ ಸಂಗೀತಗಾರ ರಂಗದೇವತೆಯನ್ನು ಒಲಿಸಿಕೊಳ್ಳಬೇಕಾಗುತ್ತದೆ. ಭಕ್ತಿ - ಭಾವಗಳಿಂದ ಆತ ತನ್ನ ಕಾರ್ಯಕ್ರಮವನ್ನು ಪ್ರದರ್ಶಿಸಬೇಕು. ಸಂಗೀತದ ಮೂಲಕ ರಸಭಾವಾಭಿವ್ಯಕ್ತಿ ಮಾಡುವಾಗ ಕಲಾಕಾರನು ಪ್ರತಿಯೊಂದು ಸ್ವರದ ರಸಭಾವವನ್ನು ಸ್ವಭಾವ ಮತ್ತು ಗುಣಧರ್ಮಗಳನ್ನು ಮೊದಲು ಅರಿತುಕೊಳ್ಳುವುದು ಅವಶ್ಯವಾಗಿದೆ.

ರಾಜ್ಯ ಪ್ರಶಸ್ತಿ ವಿಜೇತ ಖ್ಯಾತ ಸಂಗೀತಗಾರ ಪಂ. ಗಣಪತಿ ಭಟ್ಟ
ಅಮೇರಿಕದಲ್ಲಿ ಸಂಗೀತಕಾರ್ಯಕ್ರಮ ನೀಡುತ್ತಿರುವುದು



ಟಿಪ್ಪಣಿ: ಶಾಸ್ತ್ರೀಯಸಂಗೀತದ ವಿಕಾಸದ ಬಗೆಗಿನ ಪ್ರೌಢಲೇಖನ ಹಾಗೂ ಲೇಖಕರ ಚಿಂತನದಿಂದ ....

ಅಧ್ಯಾಯ ೧೭

ಉತ್ತರಕನ್ನಡ ಜಿಲ್ಲೆಯ ಪ್ರಮುಖ ಸಂಗೀತಗಾರರು
ಜಿಲ್ಲೆಯ ಹಾಗೂ ದೇಶದ ಪ್ರಮುಖ
ಸಂಗೀತಗಾರರ ಭಾವಚಿತ್ರಗಳು

ಉತ್ತರಕನ್ನಡ ಜಿಲ್ಲೆಯ ಪ್ರಮುಖ ಸಂಗೀತಗಾರರು

೧. ಪಂಃ ಜಿ. ಎಸ್. ಹೆಗಡೆ ಸಂಗೀತ ವಿದ್ಯಾಲಯ		ಬೆಳ್ಳೇಕೇರಿ, ಯಡಳ್ಳಿ .
೨. ಪಂಃ ಆರ್. ಟಿ. ಹೆಗಡೆ	ಗಾಯಕರು	ಶೀಗೇಹಳ್ಳಿ, ಸಿರ್ಸಿ
೩. ಶ್ರೀ ಕಮಲಾಕರ ಭಟ್ಟ .	”	ಕೆರೆಕೈ, ಸಿರ್ಸಿ
೪. ಶ್ರೀ ಗಣಪತಿ ಭಟ್ಟ,	”	ಹಾಸಣಗಿ , ಯಲ್ಲಾಪುರ
೫. ಶ್ರೀ ಶ್ರೀಪಾದ ಹೆಗಡೆ ,	”	ಕಂಪ್ಲೆ ಯಲ್ಲಾಪುರ
೬. ಶ್ರೀ ಜಿ. ಆರ್. ಭಟ್ಟ	”	ಬಾಳೆಗದ್ದೆ, ಹೊನ್ನಾವರ
೭. ಶ್ರೀ ಎಂ. ವಿ. ಹೆಗಡೆ, ಸಾಯೀ ಸಂಗೀತ ವಿದ್ಯಾಲಯ		ಸಿರ್ಸಿ
೮. ಶ್ರೀ ಆರ್. ವಿ. ಹೆಗಡೆ	ಬೀನ್‌ವಾದಕರು,	ಸಿರ್ಸಿ
೯. ಶ್ರೀಮತಿ ಶೈಲಾ ಮಂಗಳೂರು,	ಗಾಯಕಿ,	ಸಿರ್ಸಿ
೧೦. ಶ್ರೀ ಸಂಜೀವ ವ್ಯತದಾರ	ತಬ್ಲಾ ವಾದಕರು	ಸಿರ್ಸಿ
೧೧. ಶ್ರೀ ಬಿಜಾಪುರೆ ,	ಹಾರ್ಮೋನಿಯಂ ವಾದಕರು	ಸಿರ್ಸಿ
೧೨. ಶ್ರೀ ಶಂಭು ಭಟ್ಟ	ಬಾನ್ಸುರಿ ವಾದಕರು	ಕಡತೋಕಾ,
೧೩. ಶ್ರೀ ಪರಮೇಶ್ವರ ಹೆಗಡೆ,	ಗಾಯಕರು	ಕಲಭಾಗ, ಹೊನ್ನಾವರ
೧೪. ಶ್ರೀ ಶಾಂತಾರಾಮ ಹೆಗಡೆ,	”	ಕನೇವಹಳ್ಳಿ
೧೫. ಶ್ರೀ ಪ್ರಭಾಕರ ಭಟ್ಟ	”	ಕೆರೆಕೈ , ಸಿರ್ಸಿ
೧೬. ಶ್ರೀಮತಿ ಜ್ಯೋತಿ ದೇವಗುಡಿ	ರುದ್ರವೀಣೆ ವಾದಕರು	
೧೭. ಶ್ರೀ ಕೃಷ್ಣಮೂರ್ತಿ ಭಟ್ಟ,	ಗಾಯಕರು	ಬೊಮ್ಮನ ಹಳ್ಳಿ,
೧೮. ಶ್ರೀ ಶ್ರೀಪಾದರಾವ್ ಕಲ್ಗುಂಡಿಕೊಪ್ಪ	ತಬ್ಲಾವಾದಕರು ,	ಸಿರ್ಸಿ
೧೯. ಶ್ರೀ ಲಕ್ಷ್ಮೀಶ್ ರಾವ್ ಕಲ್ಗುಂಡಿಕೊಪ್ಪ ,	ತಬ್ಲಾವಾದಕರು	
೨೦. ಶ್ರೀ ಪ್ರಕಾಶ ಚಕ್ರವರ್ತಿ,	ಬಾನ್ಸುರಿ ವಾದಕರು	
೨೧. ಶ್ರೀ ಶ್ರೀಪಾದ ಹೆಗಡೆ,		ಸೋಮನಮನೆ , ಸಿರ್ಸಿ
೨೨. ಶ್ರೀ ನಾಗಭೂಷಣ ಹೆಗಡೆ ,	ಗಾಯಕರು	ಬಾಳೆಹದ್ದ
೨೩. ಶ್ರೀ ಶ್ರೀಪತಿ ಹೆಗಡೆ	ಗಾಯಕರು	ಶೀಗೇಮನೆ
೨೪. ಶ್ರೀ ಜಿ. ಜಿ. ಹೆಗಡೆ ಹಿತ್ಲಳ್ಳಿ	ತಬ್ಲಾವಾದಕರು	
೨೫. ಶ್ರೀ ಗಜಾನನ ಹೆಗಡೆ	ತಬ್ಲಾವಾದಕರು	ಗಿಳಿಗುಂಡಿ, ಸಿರ್ಸಿ
೨೬. ಶ್ರೀ ಗುರುಪ್ರಸಾದ ಹೆಗಡೆ .	ಹಾರ್ಮೋನಿಯಂ ವಾದಕರು	
೨೭. ಶ್ರೀಮತಿ ವತ್ಸಲಾ ಮಾವಾರಿ,	ಗಾಯಕರು	
೨೮. ಶ್ರೀಮತಿ ಲಲಿತಾ ಹಿರೇಗಂಗೆ ,	ಗಾಯಕರು	ಸಿರ್ಸಿ
೨೯. ಶ್ರೀಮತಿ ವರದಾ ಹೆಗಡೆ	ಆಲೇಸರ ಗಾಯಕಿ	ಸಿರ್ಸಿ
೩೦. ಶ್ರೀ ಎನ್. ಎನ್. ದೇವ	ತಬ್ಲಾವಾದಕರು	ಸಿರ್ಸಿ
೩೧. ಶ್ರೀ ಚಿದಾನಂದ ದೇವರಮನೆ	ಗಾಯಕರು	ಸಿರ್ಸಿ
೩೨. ಶ್ರೀ ಸತೀಶ ಭಟ್ಟ	”	ಮಂಚಿಕೇರಿ
೩೩. ಕು. ರೇಖಾ ಹೆಗಡೆ	”	ಬಾಳೇಹದ್ದ
೩೪. ಕು. ಪ್ರೀತಿ ಹೆಗಡೆ	”	ಹಾಲಳ್ಳಿ , ಹಾಸಣಗಿ

೩೫. ಶ್ರೀಮತಿ ಲತಾ ಉಡಗೋಣಿ	ಗಾಯಕರು	ಯಲ್ಲಾಪುರ
೩೬. ಶ್ರೀಮತಿ ವಾಣಿ ಹರ್ಡೀಕರ್	”	ಯಲ್ಲಾಪುರ ಉ.ಕ.
೩೭. ಶ್ರೀ ಜಿ. ಆರ್. ಹೆಗಡೆ	ತಬ್ಲಾವಾದಕರು	ಸಿರ್ಸಿ
೩೮. ಶ್ರೀ ಮೋಹನ ಹೆಗಡೆ	ತಬ್ಲಾವಾದಕರು	ಹುಣಸೇಕೊಪ್ಪ ಸಿರ್ಸಿ
೩೯. ಶ್ರೀ ಎಸ್. ಎನ್. ಹೆಗಡೆ	ತಬ್ಲಾವಾದಕರು	ಹೊನ್ನಾವರ
೪೦. ಶ್ರೀ ಗೋಪಾಲಕೃಷ್ಣ ಹೆಗಡೆ	ತಬ್ಲಾವಾದಕರು	ಕಲಭಾಗ
೪೧. ಶ್ರೀ ಅನಂತಮೂರ್ತಿ	ತಬ್ಲಾವಾದಕರು	ಗುಣವಂತೆ
೪೨. ಶ್ರೀ ಜಿ.ಕೆ. ಹೆಗಡೆ	ತಬ್ಲಾ ವಾದಕರು	ವಂದೂರು
೪೩. ಶ್ರೀ ರಾಜು ಹೆಬ್ಬಾರ್	ತಬ್ಲಾ ವಾದಕರು	ಕರ್ಕಿ
೪೪. ಶ್ರೀಮತಿ ಸಂಪದಾ ಭಟ್ಟ	ಗಾಯಕಿ	ಹೊನ್ನಾವರ
೪೫. ಶ್ರೀಮತಿ ತಾರಾ ಭಟ್ಟ	ಗಾಯಕಿ	ಹೊನ್ನಾವರ
೪೬. ಕುಮಾರಿ ಗಾಯತ್ರಿ ಕಲ್ಯಾಣಪುರ	ಗಾಯಕಿ	ಹೊನ್ನಾವರ
೪೭. ಶ್ರೀ ಸುಬ್ರಾಯ ಭಂಡಾರಿ	ಬಾನ್ಸುರಿ ವಾದಕರು	”
೪೮. ಶ್ರೀ ಮಹೇಶ ಮಹಾಲೆ	ಗಾಯಕರು	ಅಂಕೋಲಾ
೪೯. ಕುಮಾರಿ ವಂದನಾ ಮತ್ತು ರಂಜನಾ ಹೆಗಡೆ	”	ಕೆರೆಮನೆ

೫೦. ಶ್ರೀ ಲಕ್ಷ್ಮೀನಾರಾಯಣ ಹೆಗಡೆ, ತಬ್ಲಾವಾದಕರು, ಸ್ನೇಹಕುಂಜ, ಕಾಸರಕೋಡ

ಜಿಲ್ಲೆಯ ಹೊರಗೆ ಹೋಗಿ ಸಂಗೀತ ಸಾಧನೆ ಮಾಡಿದ ಜಿಲ್ಲೆಯ ಕಲಾಕಾರರು.

೧. ಪಂಃ ಎಸ್. ಸಿ. ಆರ್. ಭಟ್ಟ, ತಾನಸೇನ ಪ್ರಶಸ್ತಿ ವಿಜೇತರು, ಮುಂಬೈ
೨. ಪಂಃ ದಿನಕರ ಕಾಯ್ಕಿಣಿ, ಭಾರತೀಯ ವಿದ್ಯಾಭವನ ಕಲಾ ಅಕಾಡೆಮಿ ಮುಂಬೈ
೩. ಶ್ರೀಮತಿ ಅನುರಾಧಾ ಪೋಡ್ವಾಲಾ
೪. ಶ್ರೀಮತಿ ಲಲಿತಾ ಉಭಯಕರ್ , ಬೆಂಗಳೂರು
೫. ಶ್ರೀಮತಿ ಸುಗುಣಾ ಚಂದಾವರಕರ್, ಬಾಗಿಲಕೋಟೆ
೬. ಶ್ರೀ ರಘುಪತಿ ಹೆಗಡೆ, ಬೆಂಗಳೂರು
೭. ಶ್ರೀ ವಿನಾಯಕ ಚಿತ್ತಾರ, ಸಿತಾರಿಸ್ಟ ಮುಂಬೈ
೮. ಶ್ರೀ ಎಮ್.ಟಿ. ಭಾಗ್ವತ, ಉಡುಪಿ

ಜಿಲ್ಲೆಯ ಹೊರಗೆಹೋಗಿ ಸಂಗೀತಸಾಧನೆ ಮಾಡಿದ ಇನ್ನೂ ಅನೇಕ ಗಣ್ಯರು ದೇಶದ ಅಷ್ಟೇಅಲ್ಲದೇ ವಿದೇಶಗಳಲ್ಲಿಯೂ ಹೋಗಿ ನೆಲೆಸಿದ್ದಾರೆ. ಎಲ್ಲರ ಮಾಹಿತಿಗಳೂ ಸ್ಪಷ್ಟವಾಗಿ ಲಭ್ಯವಿರದಕಾರಣ ಕೆಲವರನ್ನು ಮಾತ್ರ ಹೆಸರಿಸಿದೆ. ಸಂಗೀತ, ಸಂಸ್ಕೃತಿಗಳನ್ನು ನಾಡಿಗೆ ಉಣಬಡಿಸಲು ಇಂತಹ ಸಂಗೀತಗಾರರ ಅವಶ್ಯಕತೆ ಪ್ರಸ್ತುತ ಅಗತ್ಯವಾಗಿದೆ.

ಜಿಲ್ಲೆಯ ಪ್ರಮುಖ ಕಲಾಕಾರರ ಭಾವಚಿತ್ರ





ಬಳ್ಳಾರಿಯಲ್ಲಿ ಸಂಗೀತಕಾರ್ಯಕ್ರಮ

ಕೃಷ್ಣಮೂರ್ತಿ ಭಟ್ಟ



'ಪದ್ಮಭೂಷಣ' ಪಂ. ಬಸವರಾಜ ರಾಜಗುರು




ಶ್ರೀ ಜಿ. ಎಸ್. ಹೆಗಡೆ, ಬೆಳ್ಳೆಕೇರಿ



ಶ್ರೀ ಪರಮೇಶ್ವರ ಹೆಗಡೆ ಅವರಿಂದ
ಸಂಗೀತ ಕಾರ್ಯಕ್ರಮ




22 ಡಿಸೆಂಬರ 1991 : ಶ್ರೀ ಶ್ರೀಪಾದ ಹೆಗಡೆ ಕಂಪ್ಲಿ ಗಾಯನ, ಶ್ರೀ ವಸಂತ ಕನಕಾಪುರ ಹಾರ್ಮೋನಿಯಂ ಶ್ರೀ ಗೋಪಾಲಕೃಷ್ಣ ಹೆಗಡೆ ತಬ್ಲಾ



1986 ಫೆಬ್ರುವರಿ 23 : ಘರಾಣೆಗಳ ಪ್ರಾತ್ಯಕ್ಷಿಕೆ ಕುರಿತಾಗಿ ಡಾ। ಬಿಂದುಮಾಧವ ಪಾಠಕ, ಡಾ। ವಿನಾಯಕ ತೊರವಿ, ಶ್ರೀ ಕೆರೆಮನೆ ಮಹಾಬಲ ಹೆಗಡೆ, ಡಾ। ಗಂಗಾಧರ ಸಿಕೋಡಿ, ಪ್ರೊ. ಬಿ. ಡಿ. ಪಾಟೀಲ



12 ಅಕ್ಟೋಬರ 1989 : ಡಾ। ಗಂಗೂಬಾಯಿ ಹಾನಗಲ್ ಅವರಿಗೆ ಸನ್ಮಾನ.
ಶ್ರೀ ಕರಿಮನೆ ಶಂಭು ಹೆಗಡೆ ಮಾತನಾಡುತ್ತಿದ್ದಾರೆ.



ದಿ|| ಮೋಹನ್ ರಾವ್ ಚಿಕ್ಕರಮನೆ



ಶ್ರೀ ಕೆ. ವಿ. ಸುಬ್ಬಣ್ಣನವರು ದೀಪ ಬೆಳಗಿ 1992 ರ ಸ್ಮೃತಿ ಸಂಗೀತ
ಸಮ್ಮೇಳನವನ್ನು ಉದ್ಘಾಟಿಸುತ್ತಿರುವುದು.



1993 ರ ಸ್ಮೃತಿ ಸಂಗೀತ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಶಿವರಾಮಕಾರಂತ
ಇವರು ಮಾತನಾಡುತ್ತಿರುವುದು.

ಹಿಂದೂಸ್ತಾನಿ ಸಂಗೀತಗಾರರು



ಉಸ್ತಾದ್ ನತ್ಥನಖಾನ್



ಪಂ. ಭಾಸ್ಕರ ಬುವಾ ಬಖಲೆ



ಶ್ರೀಮತಿ ಕೇಸರಿಬಾಯಿ ಕೇರಕರ



ಪಂ. ಓಂಕಾರನಾಥ ಠಾಕೂರ



ಪಂ. ಗುರುರಾವ್ ದೇಶಪಾಂಡೆ



ಶ್ರೀಮತಿ ಸಿದ್ಧೇಶ್ವರಿದೇವಿ

ಹಿಂದೂಸ್ತಾನಿ ಸಂಗೀತಗಾರರು




ಬೇಗಮ್ ಅಖ್ತರ್




ಪ್ರೊ. ಆರ್. ಪಿ. ಹೂಗಾರ




ಪಂ. ಆರ್. ವಿ. ಶೇಷಾದ್ರಿಗವಾಯಿ



ಪಂ. ಸಿದ್ಧರಾಮ ಜಂಬಲದಿನ್ನಿ



ಪಂ. ಚಂದ್ರಶೇಖರ ಪುರಾಣಿಕಮಠ



ಪಂ. ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ


ಹಿಂದೂಸ್ತಾನಿ ಸಂಗೀತಗಾರರು




ಡಾ. ಬಿಂದುಮಾಧವ ಪಾಠಕ್



ಪಂ.ನಾಗೇಶ ಗಣೇಶ ದಿವಾಣ



ರಾಜೀವ ತಾರಾನಾಥ



ಬಿಸ್ಮಿಲ್ಲಾಖಾನ್




ಪಂ. ಪನ್ನಾಲಾಲ ಘೋಷ



ಶೇಷಗಿರಿ ಹಾನಗಲ್



ಬಸವರಾಜ ಬೆಂಡಿಗೇರಿ




ಪ್ರೊ. ಕೆ. ಎಸ್. ಹಡಪದ

ಹಿಂದೂಸ್ತಾನಿ ಸಂಗೀತಗಾರರು




ಪಂ. ಸಂಗಮೇಶ್ವರ ಗುರವ




ಪಂ. ಅರ್ಜುನಸಾ ನಾಕೋಡ




ಪ್ರೊ. ಅಜ್ಜಣ್ಣ ಪಾಟೀಲ




ಉಸ್ತಾದ ಅಲ್ಲಾವುದ್ದೀನ್ ಖಾನ್



ಎ. ಕರೀಮ್ ಖಾನ್



ಅಲಿ ಅಕ್ಬರ್ ಖಾನ



ಪಂ. ಅರವಿಂದ ಪಾರಿಖ್




ಸಂಗೀತ ಪದ್ಧತಿ : ಭಾತಖಂಡೆ



ದಿ|| ನತ್ಥನ್ ಖಾನ್ ಸಾಹೇಬ



ಉಸ್ತಾದ್ ದಿ|| ಫಯಾಝು ಖಾನ ಸಾಹೇಬ



ಪಂ| ರಾಮ ರಾವ್ ನಾಯಕ



ದಿ। ಉಸ್ತಾದ ಖಾದಿಂ ಹುಸೇನ ಖಾನ



ಶ್ರೀ ವೆಂಕಟಪ್ಪನವರು [[illegible]]

ಅಧ್ಯಾಯ ೧೮

ಉ.ಕ. ಜಿಲ್ಲೆಯ ಪಾಪ್ ಸಂಗೀತ ಪಾಠಶಾಲೆ

ಉತ್ತರ ಕನ್ನಡ ಜಿಲ್ಲೆಯ ಪಾಪ್ ಸಂಗೀತ ಶಾಲೆಗಳು

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ , ಸಿರ್ಸಿ , ದಾಂಡೇಲಿ, ಸಿದ್ದಾಪುರ ಮುಂತಾದ ಕೆಲನಗರದಲ್ಲಿ ಪಾಪ್ ಸಂಗೀತದ ಒಲವಿರುವ ಸಂಗೀತಗುರುಗಳು ಕಾಣಸಿಗುತ್ತಾರೆ. ಆದರೆ ಪಾಪ್ ಸಂಗೀತ ಹಾಗೂ ಡಾನ್ಸ್‌ನ್ನು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಗೆ ಕಡಿಮೆ ಇಲ್ಲ. * ಆದರೆ ಈ ವಿದ್ಯಾರ್ಥಿಗಳು ಶಾಲೆಗೆ ಹೋಗಿ ವಿಧಿಬದ್ಧವಾಗಿ ಇಂತಹ ಸಂಗೀತ ಹಾಗೂ ಡಾನ್ಸನ್ನು ಕಲಿಯುತ್ತಿಲ್ಲ. ಬದಲಾಗಿ ಸಿನೇಮಾ ಟಿ.ವಿ. ಮುಂತಾದ ಪ್ರಸಾರ ಮಾಧ್ಯಮದ ಮೂಲಕ ಧ್ವನಿ ಮುದ್ರಿಸಿಕೊಂಡು ಅದೇ ರೀತಿಯ ಅನುಕರಣೆ ಮಾಡಿ ಡಾನ್ಸ್ ಮಾಡುವವರ ಸಂಖ್ಯೆಯೇ ಅಧಿಕಾವಾಗಿದೆ. ಇಂತಹ ಅನುಕರಣೆಯನ್ನು ಹೆಚ್ಚಾಗಿ ಕಾಲೇಜ ವಿದ್ಯಾರ್ಥಿಗಳು ಮಾಡುತ್ತಾರೆ. ಕಾಲೇಜಿನ ವಾರ್ಷಿಕೋತ್ಸವದ ಸಂದರ್ಭದಲ್ಲಿ ಇಂತಹ ಅನುಕರಣೆಯ ಧ್ವನಿಸುರಳಿಯ ಜೊತೆಗೆ ಪಾಪ್ ಡಾನ್ಸನ್ನು ಮಾಡುವುದು ಕಂಡುಬರುತ್ತದೆ. ಪೂರ್ವಸಿದ್ಧತೆಯ ಬಗೆಗೆ ಅವರಲ್ಲಿ ಪ್ರಶ್ನಿಸಿದಾಗ ನಮಗೆ ಅವರ ಆಸಕ್ತಿ , ಅನುಕರಣಾ ವಿಧಾನದ ಬಗೆಗಿನ ಸತ್ಯ ತಿಳಿಯುತ್ತದೆ. ಗುರುವಿಲ್ಲದ ಇಂತಹ ವಿದ್ಯೆಗಳು ಬಹಳದಿನ ಮುಂದುವರಿಯಲಾರದು. ವ್ಯಸನದ ದಾಸರಾಗಿ ಇಂತಹ ವಿದ್ಯಾರ್ಥಿಗಳು ಜೀವನ ಸಾಗಿಸುತ್ತಿರುವುದನ್ನು ಕಂಡಾಗ ಯುವಪೀಳಿಗೆ ಕುಡಿಯಲ್ಲೇ ಹಾಳಾಗುತ್ತದೆಯಲ್ಲ ಎಂಬ ಸಂಕಟ ಪ್ರಜ್ಞಾವಂತ ನಾಗರಿಕರಿಗೆ ಬರದೇ ಇರಲಾರರು. ಕೆಟ್ಟ ಮೇಲೆ ಬುದ್ದಿ ಬಂತು ಎಂಬಂತೆ ಕಾಲೇಜಿನ ವಿದ್ಯಾಭ್ಯಾಸವನ್ನು ಸರಿಯಾಗಿ ಮಾಡದೇ ಅತ್ತ ಪಾಪ್ ಡಾನ್ಸ್‌ನ್ನು ವಿಧಿವತ್ತಾಗಿ ಕಲಿಯದೇ ತ್ರಿಶಂಕು ಸ್ಥಿತಿಯಲ್ಲಿ ಇಂತಹ ಜನರು ಕಾಲ ಕಳೆಯುತ್ತಿದ್ದಾರೆ. ಇಂತಹ ಜನರಿಂದ ಸುಸವ್ಯ ಜನಾಂಗ ಹೇಗೆ ನಿರ್ಮಾಣವಾಗಲು ಶಕ್ಯ, ಕಾಲೇಜುಗಳ ಗ್ಯಾದರಿಂಗನಲ್ಲಿ ಮಾತ್ರ ಹಿರೋಗಳಾಗುವ ಇವರು ಅಭ್ಯಾಸದಲ್ಲಿ ಜಿರೋ ಆಗಿರುವದು ಬೇಸರದ ವಿಷಯ ಇಂತಹವರಿಗೆ ಬುದ್ಧಿವಾದ ಹೇಳುವ ಉಪನ್ಯಾಸಕರು, ನಾಗರಿಕರು ಹೆಚ್ಚಾಗಿ ಮಾದಕ ದ್ರವ್ಯದಂತಹ ದುಶ್ಚಟಕ್ಕೆ ಬಲಿಯಾಗಬೇಡಿ ಎಂದು ಬೋಧಿಸಿದರೂ ಕೇಳುವ ಸ್ಥಿತಿಯಲ್ಲಿ ಇಂತಹ ವಿದ್ಯಾರ್ಥಿಗಳಿರುವುದಿಲ್ಲ ಇಂತಹ ಪ್ರವೃತ್ತಿಗೆ ಕೊನೆ ಎಂದು ? ವಿಚಾರಿಸಬೇಕು.

ಉತ್ತರಕನ್ನಡ ಜಿಲ್ಲೆಯಲ್ಲಿನ ಪಾಪ್ ಸಂಗೀತಶಾಲೆಗಳು ನಿಷ್ಠಾವಂತ ವಿದ್ಯಾರ್ಥಿಗಳು ಸಿಗದೇ

ಅಡಿಟಿಪ್ಪಣಿ: * ಜಿಲ್ಲೆಯ ಪಾಪ್ ಸಂಗೀತ ಸಂಸ್ಕೃತಿಯ ಬಗೆಗೆ ಲೇಖಕರ ಅಭಿಪ್ರಾಯವನ್ನಾಧರಿಸಿ ......

ಜೀರ್ಣಾವಸ್ಥೆಯಲ್ಲಿರುವುದು ಕಂಡುಬರುತ್ತದೆ. ಹಿಂದುಸ್ತಾನೀಸಂಗೀತದ ಪಾಠಶಾಲೆಯಂತೆ ಅನೇಕ ವರ್ಷಗಳಿಂದ ನಡೆದುಕೊಂಡುಬಂದು ಪರಂಪರೆಯನ್ನು ಪಾಲಿಸುತ್ತ ಬಂದ ಪಾಪ್ ಸಂಗೀತ ಶಾಲೆಗಳು ವಿರಳವೇ ಆಗಿದೆ. ನಾಯಿಕೊಡೆಗಳಂತೆ ಕೆಲ ಪ್ರದೇಶಗಳಲ್ಲಿ ಇಂತಹ ಶಾಲೆಗಳು ಪ್ರಾರಂಭವಾದರೂ, ಸುಸಜ್ಜಿತವಾಗಿ ಮುಂದುವರೆದುಕೊಂಡುಬಂದಿರುವ ಶಾಲೆಗಳು ಬಹಳ ವಿರಳ. ಇದಕ್ಕೆಲ್ಲ ಕಾರಣಗಳಿಲ್ಲದಿಲ್ಲ.

ಮುಖ್ಯ ಕಾರಣಗಳು :-

೧. ಪಾಪ್ ಸಂಗೀತದಲ್ಲಿ ಉತ್ತಮತರಬೇತುಗೊಳಿಸುವ ಗುರು ಇಲ್ಲದೇ ಇರುವುದು

೨. ಆಸಕ್ತರಿಗೆ ಸರಿಯಾದ ಗುರು ದೊರಕದೇ ಇರುವುದು

೩. ವಿದ್ಯಾರ್ಥಿಗಳು ಸರಿಯಾದ ಕ್ರಮದಲ್ಲಿ ಅಭ್ಯಾಸ ಮಾಡದೇ ಇರುವುದು

೪. ವ್ಯಸನಿಗಳಾಗಿ ಸಮಾಜದಲ್ಲಿ ಗೌರವಕಳೆದುಕೊಂಡಿರುವುದು.

೫. ಪಾಪ್ ಸಂಸ್ಕೃತಿ ಜಿಲ್ಲೆಯಲ್ಲಿ ಇರದೇ ಇರುವುದು.

ಇಂತಹ ಅನೇಕ ಕಾರಣಗಳಿಂದ ಜಿಲ್ಲೆಯಲ್ಲಿನ ಪಾಪ್ ಸಂಗೀತ ಶಾಲೆಗಳು ಜೀರ್ಣಾವಸ್ಥೆಯಲ್ಲಿವೆ. ಆದರೆ ಮೈಕೆಲ್ ಜಾಕ್ಸನ್ ನ ಸಂಗೀತವನ್ನು ಆಲಿಸುವವರ ಸಂಖ್ಯೆ ಇದ್ದೇ ಇದೆ.

ಆರ್ಕೆಸ್ಟ್ರಾದ ಹಾವಳಿ ಈ ಜಿಲ್ಲೆಯಲ್ಲಿ ಅಲ್ಲಲ್ಲಿ ಕಾಣಸಿಗುತ್ತದೆ. (Film Song) ಚಿತ್ರಗೀತೆಗಳನ್ನು ಆರ್ಕೆಸ್ಟ್ರಾದಲ್ಲಿ ಹಾಡುವ ಅನೇಕ ಗಾಯಕರು ಇಲ್ಲಿ ಸಿಗುತ್ತಾರೆ. ಹೊನ್ನಾವರದ ಮಂಜುನಾಥ ಕೃಪಾದಲ್ಲಿ ನಡೆಯುವ ಆರ್ಕೆಸ್ಟ್ರಾ ತರಬೇತಿಯಲ್ಲಿ ಅನೇಕ ಯುವಗಾಯಕರು ಹಾಡುತ್ತಾರೆ. ಸಿರ್ಸಿ ಸಿದ್ದಾಪುರ ಮುಂತಾದ ಶಹರಗಳಲ್ಲಿಯೂ ಇಂತಹ ತರಬೇತಿ ಕೇಂದ್ರಗಳಿವೆ. ಆದರೆ ನಮಗೆ Classical Base (ಶಾಸ್ತ್ರೀಯ ಸಂಗೀತದ ತಳಹದಿ) ಇಲ್ಲ ಎಂಬ ಸತ್ಯವನ್ನು ಅವರೇ ಒಪ್ಪಿಕೊಳ್ಳುತ್ತಾರೆ. ಈಗಾಗಲೇ ಆರ್ಕೆಸ್ಟ್ರಾದಲ್ಲಿ ಸಮಾರಂಭಗಳಲ್ಲಿ ಹಾಡುತ್ತ ಬಂದ ಇವರಿಗೆ ಶಾಸ್ತ್ರೀಯ ಸಂಗೀತದ ಬಗೆಗೆ ಗೌರವವಿದ್ದರೂ ಕಲಿಯುವ ತಾಳ್ಮೆ ಇಲ್ಲವಾಗಿದೆ.

ಉತ್ತರಕನ್ನಡ ಜಿಲ್ಲೆಯಲ್ಲಿನ ಪಾಪ್ ಸಂಗೀತಶಾಲೆಗಳೂ ಉತ್ತಮವಾಗಿಯೇ ಕಾರ್ಯನಿರ್ವಹಿಸುತ್ತಿವೆ.

ಅಧ್ಯಾಯ ೧೯

ದೇಶದ ಸಂಗೀತ ನಕ್ಷೆಯಲ್ಲಿ ಉ.ಕ. ಜಿಲ್ಲೆ

೧. ಭಾರತೀಯ ಸಂಗೀತದ ಬೆಳವಣಿಗೆ

೨. ದೇಶದ ಸಂಗೀತ ನಕ್ಷೆಯಲ್ಲಿ ಕರ್ನಾಟಕ

೩. ದೇಶದ ಸಂಗೀತ ನಕ್ಷೆಯಲ್ಲಿ ಉ.ಕ. ಜಿಲ್ಲೆ

ದೇಶದ ಸಂಗೀತ ನಕ್ಷೆಯಲ್ಲಿ ಉತ್ತರ ಕನ್ನಡ ಜಿಲ್ಲೆ

೧. ಭಾರತೀಯ ಸಂಗೀತದ ಬೆಳವಣಿಗೆ :-

ಭಾರತೀಯ ಸಂಗೀತದ ಬೆಳವಣಿಗೆಯಲ್ಲಿ ಕರ್ನಾಟಕದ ಪಾತ್ರ ದೊಡ್ಡದು. ಅನೇಕ ಸಂಗೀತ ಗ್ರಂಥ ರಚಿತವಾದುದು ಕರ್ನಾಟಕದಲ್ಲಿಯೇ ಮತ್ತು ಕರ್ನಾಟಕ ದೇಶೀಯರಿಂದಲೇ ಎಂಬುದು ಗಮನಾರ್ಹವಾಗಿದೆ. ಈ ಶತಮಾನವನ್ನು ಎರಡು ಭಾಗವಾಗಿ ವಿಂಗಡಿಸಬೇಕಾಗಿದೆ. ೨೦ ನೇ ಶತಮಾನದ ಪೂರ್ವಾರ್ಧ ಮತ್ತು ಸ್ವಾತಂತ್ರ್ಯ ಬಂದ ನಂತರದ ಕಾಲ. ಈ ಎರಡೂ ಕಾಲಗಳಲ್ಲಿ ಸಂಗೀತ ಕ್ಷೇತ್ರದಲ್ಲಿ ಆಗಿರುವ ಕಾರ್ಯಕಲಾಪಗಳಲ್ಲಿ ವ್ಯತ್ಯಾಸವಿದೆ. ನಾವು ಕರ್ನಾಟಕ ಮತ್ತು ಅದರ ಸಂಸ್ಕೃತಿಯ ಬಗೆಗೆ ಎಷ್ಟು ಹೆಮ್ಮೆಪಟ್ಟಿಕೊಂಡರೂ ಕನ್ನಡ ನಾಡು ಒಂದು ಏಕೀಕೃತ ಪ್ರದೇಶವಾಗಿ ಕೂಡಿಕೊಂಡಿದುದು ಈಗ ಈಡ ವರ್ಷಗಳಿಂದಲೇ ಅದಕ್ಕೆ ಪೂರ್ವ ನಾಲ್ಕಾರು ರಾಜ್ಯಗಳಲ್ಲಿ ಹಂಚಿಹೋಗಿದ್ದವು. ಇದರ ಪರಿಣಾಮ ಜನಗಳ ಮನೋಭಾಷೆ ಮತ್ತು ಕಲೆಯ ಬೆಳವಣಿಗೆ ಎರಡರ ಮೇಲೆಯೂ ಸಾಕಷ್ಟಾಯಿತು. ತುಂಗಭದ್ರೆಯಿಂದ ಉತ್ತರಕ್ಕೆ ಜನಗಳ ದೃಷ್ಟಿಯೆಲ್ಲಾ ಬೊಂಬಾಯಿಯ ಕಡೆಗೆ. ದಕ್ಷಿಣಕ್ಕೆ ಮೈಸೂರು ಅಲ್ಲಿಯದೇ ಒಂದು ಪ್ರಕಾರ. ದ. ಕನ್ನಡ ಮತ್ತು ಬಳ್ಳಾರಿ ಕಡೆಯವರ ದೃಷ್ಟಿ ಮದರಾಸಿನಕಡೆಗೆ, ಮಿಕ್ಕ ಭಾಗಗಳವರದು ಸ್ವಲ್ಪ ತ್ರಿಶಂಕು ನೀತಿಯೇ. ಇದು ಸಾಂಸ್ಕೃತಿಕ ಕ್ಷೇತ್ರದ ಮೇಲೆ ಬಹು ಪರಿಣಾಮವನ್ನುಂಟುಮಾಡಿತು.

* ಈ ಶತಮಾನದ ಪೂರ್ವಾರ್ದದಲ್ಲಿ ಕರ್ನಾಟಕದ ಸಂಗೀತ ಕ್ಷೇತ್ರದಲ್ಲಿ ಆದ ಬಹುಪರಿಣಾಮಕಾರೀ ಬದಲಾವಣೆ ಎಂದರೆ ಹಿಂದೂಸ್ತಾನಿ ಸಂಗೀತದ ಪ್ರವೇಶ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಒಂದು ಮಹತ್ವದ ಸಾಧನೆಗಳಿಸುವಂತಹ ಮಹತ್ಸಾದನೆ. ಈ ಶತಮಾನದ ಆದಿಯವರೆಗೆ ಕರ್ನಾಟಕದ ಎಲ್ಲಾ ಭಾಗದಲ್ಲಿಯೂ ಪ್ರಚಾರದಲ್ಲಿದ್ದ ಸಂಗೀತ ಪದ್ಧತಿ ಒಂದೇ, ಅದು ಕರ್ನಾಟಕ ಸಂಗೀತ ಪದ್ಧತಿ. ಉತ್ತರ ಕರ್ನಾಟಕದ ರಾಮದುರ್ಗ , ಜಮಖಂಡಿ ಅಕ್ಕಲುಕೋಟೆ ಮುಂತಾದ ಮಹಾರಾಷ್ಟ್ರದ ರಾಜರಿದ್ದ ಸಂಸ್ಥಾನಗಳಲ್ಲಿ ಸ್ವಲ್ಪ ಹಿಂದೂಸ್ತಾನೀ ಸಂಗೀತವು ಪ್ರಚಾರದಲ್ಲಿತ್ತು. ಮಹಾರಾಷ್ಟ್ರದಲ್ಲಿ ಬಾಲಕೃಷ್ಣಬುವಾ , ವಿಷ್ಣು ದಿಗಂಬರ ಪಲೂಸ್ಕರರು, ಭಾಸ್ಕರಬುವಾ ಮುಂತಾದವರ ಪ್ರಯತ್ನದ ಫಲವಾಗಿ ಸಂಗೀತಕಲೆಯ ಪುನರುದ್ಧಾರದ ಪ್ರಭಾವ

ಅಡಿಟಿಪ್ಪಣಿ: * ಲೇ. ಬಿ.ವಿ.ಕೆ. ಶಾಸ್ತ್ರಿ, ಸಂಗೀತರತ್ನ ಪಂ. ಮಲ್ಲಿಕಾರ್ಜುನ ಮನ್ಸೂರರ ಅಭಿನಂದನಾ ಗ್ರಂಥದಲ್ಲಿ ಪುಟ ೧೫೦

ಕರ್ನಾಟಕಕ್ಕೂ ಮುಟ್ಟಿತು. ಧಾರವಾಡದಲ್ಲಿ ಸ್ವಲ್ಪಕಾಲ ನೆಲಸಿದ್ದ ಭಾಸ್ಕರಬುವಾ ಹುಬ್ಬಳ್ಳಿ ಧಾರವಾಡಗಳಿಗೆ ಬಂದು ಹೋಗುತ್ತಿದ್ದ ಅಬ್ದುಲ್ ಕರಿಂ ಖಾನ್, ಕೊಲ್ಲಾಪುರದಲ್ಲಿ ನೆಲೆಸಿದ ಅಲ್ಲಾದಿಯಾಖಾನ್, ರಾಮಕೃಷ್ಣಬುವಾ ವಜೆ, ಪ್ರಸಿದ್ಧ ವೈಣಿಕ ಮುರಾದಖಾನ್ ಹೀಗೆ ಅನೇಕ ಸಂಗೀತ ವಿದ್ವನ್ಮಣಿಗಳ ಪ್ರಭಾವದಿಂದ ಉತ್ತರ ಕರ್ನಾಟಕದಲ್ಲಿ ಬಿತ್ತಲ್ಪಟ್ಟ ಹಿಂದೂಸ್ತಾನೀ ಸಂಗೀತವು ಸಮೃದ್ಧಿಯಾಗಿ ಬೆಳೆದು ಉತ್ತಮ ಫಲಭರಿತವಾಯಿತು. ಅಲ್ಲದೇ ರಾಷ್ಟ್ರೀಯ ಮಟ್ಟದಲ್ಲಿ ಮಾನ್ಯ ಮಾಡಲ್ಪಟ್ಟ ಅನೇಕ ಕಲಾವಿದರನ್ನು ನಿರ್ಮಿಸಿತು. ದಕ್ಷಣದಲ್ಲಿ ಮೈಸೂರು ರಾಜ್ಯದಲ್ಲಿ ಪಟ್ಟಕ್ಕೆ ಬಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯು ಕರ್ನಾಟಕ ಸಂಗೀತದ ಸುವರ್ಣಕಾಲವಾಗಿ ಪರಿಣಮಿಸಿತು. ಗೇಯ, ವಾದ್ಯ, ಪ್ರಬಂಧ ಮುಂತಾದ ನಾನಾ ಮುಖಗಳಲ್ಲಿ ಸಂಗೀತವು ಸಮೃದ್ಧಿಯಾಗಿ ಬೆಳೆಯಿತು. ಸಂಗೀತದ ಈ ಸುದೀರ್ಘಕಾಲ ಸುಮಾರು ೧೯೪೭ ರ ವರೆಗೆ ಏಕಪ್ರಕಾರವಾಗಿ ಒಡೆದುಕೊಂಡು ಬಂದಿತೆನ್ನಬಹುದು. ಸ್ವಾತಂತ್ರ್ಯಾನಂತರ ಭಾರತದ ಒಟ್ಟೂ ಸಂಗೀತಪರಂಪರೆಯ ಪರಿಚಯವು ಆಗಲಾರಂಬಿಸಿದ ಮೇಲೆ ಕರ್ನಾಟಕದಲ್ಲಿ ಹಿಂದಿನಿಂದ ಬೆಳೆದ ಪರಂಪರೆ ಮತ್ತು ಇಂದು ಲಭ್ಯವಿರುವ ವೈಶಿಷ್ಟ್ಯ ಇವುಗಳ ಅರಿವುಂಟಾಗಲಾರಂಬಿಸಿತು.

ಯಾವುದೇ ಕಲೆಗಾಗಲಿ ಅದಕ್ಕೆ ಸಂಬಂಧಿಸಿದ ಚರಿತ್ರೆ, ಪರಂಪರೆಗಳು ಇರಬೇಕಾದದ್ದು ಅನಿವಾರ್ಯ. ಸಂಗೀತ ಕಲೆಗೂ ಕೂಡ ಈ ಮಾತು ಅಕ್ಷರಶಹ ಅನ್ವಯವಾಗಿದೆ. ಏಕೆಂದರೆ ಅನೇಕ ಶಾಸ್ತ್ರಜ್ಞರು ತಮ್ಮ ಕಾಲದಲ್ಲಿ ಕಲೆಯ ಮುಖಾಂತರ ಪಡೆದ ಅನುಭವವನ್ನು ಮುಂದಿನ ಪೀಳಿಗೆಯ ಮಾರ್ಗದರ್ಶನಕ್ಕಾಗಿ ಉಲ್ಲೇಖಿಸಿ, ಮಹದುಪಕಾರ ಮಾಡಿದ್ದಾರೆ. ಭಾರತೀಯ ಸಂಗೀತದಲ್ಲಿ ಉತ್ತರಾದಿ ಅಥವಾ ಹಿಂದುಸ್ತಾನೀ ಮತ್ತು ದಕ್ಷಿಣಾದೀ ಅಥವಾ ಕರ್ನಾಟಕೀ ಎಂಬ ಎರಡು ಮುಖ್ಯವಾದ ಶೈಲಿಗಳು ಬೆಳೆದುಬಂದಿರುವುದು ಸರ್ವವೇದ್ಯ. ಈ ಎರಡೂ ಪದ್ಧತಿಗಳೂ ಭಾರತೀಯ ಸಂಗೀತ ಮಹಾವೃಕ್ಷದ ಎರಡು ಶಾಖೆಗಳೆಂಬುದನ್ನು ತಿಳಿದಿರಲೇಬೇಕಾದದ್ದು ಅಗತ್ಯವಾಗಿದೆ. ಇವೆರಡೂ ಬೇರೆ ಬೇರೆ ಎಂಬ ಮಾತಾಗಲಿ ಅಥವಾ ಎರಡೂ ಒಂದೇ ಎಂದು ವಾದ ಮಾಡುವದಾಗಲಿ ಅರ್ಥಶೂನ್ಯ. ಅಂದರೆ ಇವೆರಡರಲ್ಲಿ ಬೆಳೆದುಬಂದಿರುವ ವೈವಿಧ್ಯಪೂರ್ಣ ಕಲೆಯನ್ನು ಆಯಾ ದೃಷ್ಟಿಯಿಂದಲೇ ಸವಿಯುವ ಮನೋಧರ್ಮವನ್ನು ಬೆಳೆಸಿಕೊಳ್ಳುವುದು ಭಾರತೀಯರಿಗೆ ಅದರಲ್ಲೂ ಕನ್ನಡಿಗರಿಗೆ ಅತ್ಯವಶ್ಯಕವಾಗಿದೆ. ನಮ್ಮ ಕನ್ನಡನಾಡಿನಲ್ಲಿ ಇಡಿಯ ರಾಷ್ಟ್ರಕ್ಕೆ ಹೆಸರಾದ

ಹಿಂದುಸ್ತಾನೀ ಹಾಗೂ ಕರ್ನಾಟಕೀಯ ಉಭಯ ಪದ್ಧತಿಗಳ ವಿದ್ವಾಂಸರು ಈ ಹಿಂದೆ ಆಗಿಹೋಗಿದ್ದಾರೆ. ಈಗಲೂ ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಇವರೆಲ್ಲ ನಾಡಿನ ಕಲಾಧ್ವಜವನ್ನು ಮೆರೆಸುತ್ತಿದ್ದಾರೆ.

೧* ಭಾರತೀಯ ಸಂಗೀತದ ಇತಿಹಾಸ ಕಾಲವನ್ನು ಅತಿ ಪ್ರಾಚೀನಕಾಲ, ಪ್ರಾಚೀನಕಾಲ, ಮಧ್ಯಕಾಲ, ಆಧುನಿಕ ಕಾಲ ಎಂದು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು. ಕ್ರಿ. ಪೂ. ೨೦೦೦ ವರ್ಷಗಳಿಂದ ೧೦೦೦ ವರ್ಷಗಳವರೆಗೆ ಅತಿ ಪ್ರಾಚೀನ ಕಾಲವೆಂದೂ, ಕ್ರಿ.ಶ. ೧೦೦೦ ವರ್ಷಗಳಿಂದ ಕ್ರಿ. ಶ. ೮೦೦ ವರ್ಷಗಳವರೆಗೆ ಪ್ರಾಚೀನ ಕಾಲವೆಂದೂ, ಕ್ರಿ.ಶ. ೮೦೦ ವರ್ಷಗಳಿಂದ ೧೮೦೦ ರ ವರೆಗೆ ಮಧ್ಯಕಾಲವೆಂದೂ ಅನಂತರ ಕ್ರಿ.ಶ. ೧೮೦೦ ದಿಂದೀಚಿನ ಕಾಲವನ್ನು ಆಧುನಿಕ ಕಾಲವೆಂದೂ ತಿಳಿಯಲಾಗಿದೆ. ಅನೇಕ ದೇಶಗಳಲ್ಲಿ ಸಂಗೀತವು ಇನ್ನೂ ಶೈಶಾವಸ್ತೆಯಲ್ಲಿದ್ದಾಗ ಭಾರತೀಯ ಸಂಗೀತವು ಪರಿಷ್ಕೃತ ರೂಪವನ್ನು ಪಡೆದಿದ್ದಿತೆಂಬುದು ಶಾಸ್ತ್ರಗಳ, ಗ್ರಂಥಗಳ ಅಧ್ಯಯನದಿಂದ ವಿದಿತವಾಗುತ್ತದೆ.

ಪ್ರಕೃತಿಯು ಉತ್ತರ ಮತ್ತು ದಕ್ಷಿಣ ಭಾರತವನ್ನು ವಿಂಧ್ಯಪರ್ವತದ ಮೂಲಕ ಪ್ರತ್ಯೇಕಿಸಿದೆ. ಹಿಂದಿನಿಂದಲೂ ಈ ಎರಡೂ ಭಾಗಗಳ ಸಂಸ್ಕೃತಿಯು ಭಿನ್ನವಾಗಿದ್ದವು. ಗಾನಪದ್ಧತಿಯಲ್ಲಿಯೂ ಈ ರೀತಿಯಾದ ಪ್ರತ್ಯೇಕತೆ ಇದ್ದು ದಕ್ಷಿಣಭಾರತದಲ್ಲಿ ತಮೀಳು ಸಂಗೀತವು ಬಳಕೆಯಲ್ಲಿದ್ದುದು ಶಿಲಪ್ಪಧಿಕಾರಂ ಮೊದಲಾದ ಗ್ರಂಥಗಳಲ್ಲಿ ಸಂಗೀತದ ಬಗೆಗೆ ಇರುವ ಉಲ್ಲೇಖಗಳಿಂದ ತಿಳಿದುಬರುತ್ತದೆ. ಇಷ್ಟೇ ಅಲ್ಲದೇ ಭಾರತದಲ್ಲಿ ಅನೇಕ ಬಗೆಯ ದೇಶೀಯ ಗಾನಪದ್ಧತಿಯೂ ರೂಡಿಯಲ್ಲಿತ್ತೆಂದು ಕೆಲವು ಪ್ರಾಚೀನ ರಾಗಗಳ ಹೆಸರಿನಿಂದ ತಿಳಿದುಬರುತ್ತದೆ. ಭರತ, ಮತಂಗನೇ ಮೊದಲಾದ ಲಾಕ್ಷಣಿಕರು ಸಂಗೀತದಲ್ಲಿ ಗ್ರಂಥಗಳನ್ನು ರಚಿಸಿ ಒಂದೇ ರೀತಿಯಾದ ಸಂಗೀತವು ಭಾರತದಾದ್ಯಂತ ಹರಡಲು ಶ್ರಮಿಸಿದರೆಂದರೆ ತಪ್ಪಾಗಲಾರದು. ಅನೇಕ ದೇಶೀಯ ರಾಗ, ಮತ್ತು ತಾಳಗಳು ಹೊಸರೂಪವನ್ನು ತಳೆದು ಕ್ರಮೇಣ ಶಾಸ್ತ್ರೀಯವೆನ್ನಿಸಿದವು. ೨*ಮಹಮದೀಯರು ನಮ್ಮ ದೇಶವನ್ನು ಆಕ್ರಮಿಸಿ ರಾಜ್ಯಸ್ಥಾಪನೆ ಮಾಡಿದಂದಿನಿಂದ ಪ್ರಾಚೀನ ಭಾರತೀಯ ಸಂಸ್ಕೃತಿಗೆ ಸಂಕರವುಂಟಾಯಿತು. ಈ ಸಂಕರವು ಕೇವಲ ಉತ್ತರ ಭಾರತಕ್ಕೆ ಸೀಮಿತವಾಗಿ ಸದಬಿರುಚಿಯುಳ್ಳ ಭಾರತೀಯರು ತಮಗೆ ಮೆಚ್ಚುಗೆಯಾದ ವಿಷಯಗಳನ್ನು ತಮ್ಮ ಸಂಸ್ಕೃತಿಯೊಡನೆ ಹೊಂದಿಸಿ ಒಂದು ನವೀನ

ಅಡಿಟಿಪ್ಪಣಿಃ ೧* ಲೇ. ಆರ್.ವಿ. ಶೇಷಾದ್ರಿ ಗವಾಯಿ, ಸಂಗೀತರತ್ನ ಸಂ. ಎಂ.ಎಸ್.ಸುಂಕಾಪುರ ಪುಟ ೧೯೪
೨* ಗಾನಕಲೆ ರಾಳ್ಳಪಲ್ಲಿ ಅನಂತಕೃಷ್ಣಶರ್ಮ ಅವರ ಲೇಖನವನ್ನಾಧರಿಸಿ, ಸಂಗೀತರತ್ನ ಸಂ. ಎಂ.ಎಸ್.ಸುಂಕಾಪುರ ಪುಟ ೧೬೫

ರೂಪವನ್ನು ಕೊಡಲು ಪ್ರಯತ್ನಿಸಿದರು. ಮಹಮ್ಮದೀಯರು ಸಂಗೀತಕಲೆಯ ಪೋಷಕರಾಗಿ ಪಾರ್ಸಿ, ಅರಬ್ಬೀ ದೇಶಗಳ ಸಂಗೀತಗಾರರನ್ನು ತಮ್ಮಲ್ಲಿಗೆ ಬರಮಾಡಿಕೊಂಡು ತನ್ಮೂಲಕ ಅವರ ಪದ್ಧತಿಗಳು ಸ್ವತಂತ್ರವಾಗಿ ಹರಡಲು ಅನುಕೂಲವಾಯಿತು. ಭಾರತೀಯರ ಮೆಚ್ಚುಗೆಗೆ ಪಾತ್ರವಾದ ಅವರ ಸಂಗೀತವು ನಮ್ಮ ಸಂಗೀತದೊಡನೆ ಬೆರೆತು ಒಂದು ಹೊಸಪದ್ಧತಿಯು ಏರ್ಪಟ್ಟು ಹಿಂ. ಸಂಗೀತವೆನಿಸಿತು.

ಮಾನವನಲ್ಲಿ ಅಂತರ್ಗತವಾಗಿರುವ ಮೃದು, ಕೋಮಲ ಭಾವನೆಗಳನ್ನು ಹೊಡೆದೆಬ್ಬಿಸಿ ಸೌಂದರ್ಯೋಪಾಸನೆಯ ಮೂಲಕ ಆನಂದವನ್ನೀಯುವುದೇ ಲಲಿತಕಲೆ. ಲಲಿತಕಲೆಗಳಲ್ಲೆಲ್ಲಾ ಸಂಗೀತವೇ ಅತ್ಯಂತ ಪ್ರಾಚೀನವಾದುದು. ಹಾಗೂ ಪ್ರಭಾವಶಾಲಿಯಾದುದು. ಸಂಗೀತದಲ್ಲಿ ಮಾನವನು ತನ್ನ ಅನುಭವಗಳನ್ನು ಮಾನಸಿಕಾವಸ್ಥೆಯನ್ನು ನಾದವಿನ್ಯಾಸದ ಮೂಲಕ ವ್ಯಕ್ತಪಡಿಸಲು ಸಮರ್ಥನಾಗಿದ್ದಾನೆ. ಕಲೆಯು ತನ್ನತನವನ್ನು ಉಳಿಸಿಕೊಂಡು ಪ್ರಗತಿಹೊಂದಲು ಶಾಸ್ತ್ರವು ಬಹುಮಟ್ಟಿಗೆ ಅವಶ್ಯ. ಕಲೆಯು ಹುಟ್ಟಿದ ಮೇಲೆ ಶಾಸ್ತ್ರವು ಹುಟ್ಟುವುದಾದರೂ ಕಲೆ ಮತ್ತು ಶಾಸ್ತ್ರಗಳು ಒಂದನ್ನೊಂದು ಅವಲಂಬಿಸಿ ಮುಂದುವರಿಯುತ್ತವೆ. ಸಂಗೀತಕಲೆಯ ಸ್ವರೂಪವನ್ನು ಬಾಹ್ಯವಾಗಿ ಪರಿಚಯಿಸುವುದು ಅಸಾಧ್ಯವಾದರೂ ಶಾಸ್ತ್ರ ಗ್ರಂಥಗಳು ಅದರ ಸ್ವರೂಪವನ್ನು ತಕ್ಕಮಟ್ಟಿಗೆ ವ್ಯಕ್ತಪಡಿಸಲು ಪ್ರಯತ್ನಿಸಿ ಯಶಸ್ವಿಯಾಗಿದೆ. ಸಂಗೀತ ಪರಂಪರೆಯು ವಿದ್ವಾಂಸರು ನೀಡುವ ಲಕ್ಷ್ಯಗಳಿಂದ (Practical) ಶಿಷ್ಯಪರಂಪರೆಗಳಿಂದ ಉಳಿದಿದೆ ಎನ್ನುವುದಾದರೂ ಪ್ರಾಯಶಃ ಸಂಗೀತದ ಸಮಗ್ರ ಸ್ವರೂಪವು ಬಹುಮಟ್ಟಿಗೆ ಉಳಿದು ಬಂದಿರುವುದು ಸಂಗೀತದ ಲಕ್ಷ್ಯ (Practial) ಲಕ್ಷಣ (Theory) ಗ್ರಂಥಗಳ ಮೂಲಕವೆನ್ನಬಹುದಾಗಿದೆ. ಲಕ್ಷ್ಯದಲ್ಲಿ ಉದ್ಭವಿಸುವ ಸಂಶಯವನ್ನು ನಿವಾರಿಸಲು ಶಾಸ್ತ್ರವು ತಕ್ಕಮಟ್ಟಿಗೆ ಸಹಕರಿಸುತ್ತದೆ. ಇಂದು ನಾವು ಕೇಳಿ ಆನಂದಿಸುವ ಸಂಗೀತಕ್ಕೆ ಶತಶತಮಾನಗಳ ಹಿನ್ನೆಲೆಯಿದೆ. ಸಹೃದಯರ ಮೆಚ್ಚುಗೆಗೆ ಪಾತ್ರವಾಗುವ ಲಕ್ಷ್ಯ ಸಂಗೀತದ ನಾದ ಮಾದುರ್ಯವೂ ಶಾಸ್ತ್ರ ಗ್ರಂಥಗಳ ಕೆಲವು ಅಮೂಲ್ಯ ತತ್ವಗಳೂ ಯಾವ ಕಾಲಕ್ಕೂ ಉಳಿದುಕೊಳ್ಳುತ್ತವೆ ಎಂಬ ಸಂಗತಿಯು ೨೦೦೦ ವರ್ಷಗಳ ಸಂಗೀತದ ಇತಿಹಾಸವನ್ನು ಪರಿಶೀಲಿಸಿದಾಗ ಮನದಟ್ಟಾಗುತ್ತದೆ. *

ಅಡಿಟಿಪ್ಪಣಿ: * ಭಾರತೀಯ ಸಂಗೀತದ ಇತಿಹಾಸದ ವಿವಿಧ ಲೇಖನ ಹಾಗೂ ಚಿಂತನವನ್ನಾಧರಿಸಿ......

ದೇಶದ ನಕ್ಷೆಯಲ್ಲಿ ಕರ್ನಾಟಕ

ಏಕೀಕರಣವಾದ ಮೇಲೆ ಸಂಗೀತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಡೆದ ಒಂದು ಸಂಗತಿ ಎಂದರೆ ಸಂಗೀತನಾಟಕ ಅಕಾಡೆಮಿಯ ಸ್ಥಾಪನೆ. ಅದರ ಅಸ್ತಿತ್ವದಿಂದ ಇಲ್ಲಿಯವರೆಗೆ ನಡೆದ ಮುಖ್ಯ ಕಾರ್ಯಕ್ರಮವೆಂದರೆ ಪ್ರತಿ ವರ್ಷದ ಪ್ರಶಸ್ತಿ ಪ್ರಧಾನ ಸಮಾರಂಭ. ಅಶಕ್ತ ಕಲಾವಿದರಿಗೆ ಅಲ್ಪ ವಿಶ್ರಾಂತಿವೇತನ ಸಾಂಸ್ಕೃತಿಕ ವೃಂದಗಳನ್ನು ಭಾರತದ ವಿವಿಧ ನಗರಗಳಿಗೆ ತೆಗೆದುಕೊಂಡು ಹೋಗಿ ಕಲಾಪ್ರದರ್ಶನ ನೀಡಿರುವುದು. ಕಲೆಯ ಒಟ್ಟೂ ಅಭಿವೃದ್ಧಿಗೆ ಅಕಾಡೆಮಿಯಿಂದ ವಿಶೇಷವಾದ ಸೇವೆ ಇನ್ನೂ ಆಗಬೇಕಾಗಿದೆ.

* ಸಂಗೀತ ಕ್ಷೇತ್ರದಲ್ಲಿ ಈ ಎರಡುದಶಕಗಳಲ್ಲಿ ಆಗಿರುವ ಇನ್ನೊಂದು ಬದಲಾವಣೆ ಎಂದರೆ ವಿಶ್ವವಿದ್ಯಾಲಯದಲ್ಲಿ, ಸಂಗೀತ ಶಿಕ್ಷಣ, ಪದವಿ ಶಿಕ್ಷಣದ ವ್ಯವಸ್ಥೆ ಮಾಡಿದ್ದು ಅನೇಕ ವಿದ್ಯಾರ್ಥಿಗಳು ತೇರ್ಗಡೆಯಾಗಿ ಹೋಗಿದ್ದಾರೆ. ಆದರೆ ಸಂಗೀತಕ್ಕೆ ಇದರಿಂದ ಏನು ಸಹಾಯವಾಗಿದೆ ನೋಡಬೇಕಷ್ಟೆ. ತೇರ್ಗಡೆಯಾದ ಬಹುಮಂದಿವಿದ್ಯಾರ್ಥಿಗಳು ಸಂಗೀತಶಾಸ್ತ್ರದ ಬಗ್ಗೆ ಹಾಗೂ ಕಾರ್ಯಕ್ರಮನೀಡಲೂ ಅಸಮರ್ಥರಾಗಿದ್ದಾರೆ. ಸಂಗೀತವೂ ಒಂದು ಕಲೆ. ಕೇವಲ ಶೇಕಡಾ ನೂರು ಅಂಕಕೊಟ್ಟು ತೇರ್ಗಡೆಯಾಗುವುದೊಂದೇ ಉದ್ದೇಶವಲ್ಲವೆಂಬುದು ಇಂತಹ ಸಂಸ್ಥೆಗಳಲ್ಲಿ ಕಾರ್ಯವೆಸಗುವ ಮುಖ್ಯಸ್ಥರಿಗೂ ಸಂಬಂಧಿತರಿಗೂ ಅರಿವಿಲ್ಲವೆಂದರೆ ವಿಷಾದವೇ ಆಗುವುದು. ಇಂದಿನ ಸಂಗೀತ ಪದವಿ ತರಗತಿಗಳಾಗಲು ಹಿಂದಿನ ಅನೇಕ ಗಣ್ಯ ಸಂಗೀತಗಾರರ ಪರಿಶ್ರಮದ ಫಲವಿದೆ. ಉದಾಃ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪಂಃ ಮಲ್ಲಿಕಾರ್ಜುನ ಮನ್ಸೂರ್‌ರ ಸಾಧನೆಯ ಫಲವಾಗಿ ಇಂದು ಸಂಗೀತವಿಭಾಗವು ವಿಶ್ವವಿದ್ಯಾಲಯ ಮಟ್ಟದಲ್ಲಿ ಅಸ್ತಿತ್ವದಲ್ಲಿರಲು ಕಾರಣವಾಗಿದೆ. ಹಂಪೆಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಗೀತವಿಭಾಗ ಪ್ರಾರಂಭವಾಗಲು ಅಂದಿನ ಕುಲಪತಿ ಡಾಃ ಚಂದ್ರಶೇಖರ ಕಂಬಾರರ ಪ್ರಯತ್ನವಿರುವದನ್ನು ನೆನಪಿಸಬಹುದು.

ಇನ್ನು ರಾಷ್ಟ್ರಮಟ್ಟದಲ್ಲಿ ಕರ್ನಾಟಕದ ಉ.ಕ. ಜಿಲ್ಲೆಯ ಪ್ರಭಾವ ಹೇಗಿದೆ? ಚರ್ಚಿಸಲೇಬೇಕು. ಕಳೆದ ಎರಡು ದಶಕಗಳಲ್ಲಿ ಭಾರತದಿಂದ ವಿದೇಶಗಳಿಗೆ ಅನೇಕ ಸಾಂಸ್ಕೃತಿಕ ವೃಂದಗಳು ಹೋಗಿವೆ. ಅನೇಕ

ಕಲಾವಿದರನ್ನು ಪ್ರತ್ಯೇಕವಾಗಿ ಕಾರ್ಯಕ್ರಮ ನೀಡಲು ಭಾರತ ಸರ್ಕಾರ ಕಳುಹಿಸಿದೆ. ಹಾಗೆಯೇ ವಿದೇಶಗಳ ವಿಶ್ವವಿದ್ಯಾಲಯಗಳಲ್ಲಿ ಸಂಗೀತಶಿಕ್ಷಣ ನೀಡಲು ಅನೇಕ ಕಲಾವಿದರುಗಳು ಆಹ್ವಾನಿಸಲ್ಪಟ್ಟಿದ್ದಾರೆ. ಇದರಲ್ಲಿ ಉ.ಕ. ಜಿಲ್ಲೆ ಕೊನೆಗಿರಲಿ ಕರ್ನಾಟಕದಿಂದ ಎಷ್ಟುಮಂದಿ ಆಹ್ವಾನಿಸಲ್ಪಟ್ಟಿದ್ದಾರೆ? ಇದು ನಿಧಾನವಾಗಿ ಚಿಂತಿಸಬೇಕಾದ ಸಂಗತಿ. ಈ ಯೋಜನೆಗಳಲ್ಲಿ ಕರ್ನಾಟಕವು ಗಣನೆಗೇ ಬಂದಿಲ್ಲ. ಇದಕ್ಕೆ ಕಾರಣವೇನು?

ಕರ್ನಾಟಕವು ತನ್ನ ವೈಶಿಷ್ಟ್ಯವನ್ನು ವೃದ್ಧಿಸಿಕೊಂಡು ರಾಷ್ಟ್ರ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಗಣ್ಯಸ್ಥಾನಪಡೆಯಬೇಕಾದಲ್ಲಿ ನಮ್ಮಲ್ಲಿ ಅನೇಕ ಬದಲಾವಣೆ ಹಾಗೂ ಸುಧಾರಣೆಗಳು ಆಗಲೇಬೇಕಾಗಿದೆ. ಮೊದಲು ನಮ್ಮರಾಜ್ಯ, ಅದರ ಸಂಗೀತ ಪರಂಪರೆ, ಘರಾನಾ ಹಾಗೂ ಉತ್ತರಾದೀ ದಕ್ಷಿಣಾದೀ ಸಂಗೀತ ಇವುಗಳ ಬಗ್ಗೆ ಸಮಗ್ರ ಕಲ್ಪನೆಯನ್ನು ಬೆಳೆಸಿಕೊಳ್ಳಬೇಕು. ಅಭಿಮಾನ ಬೆಳೆಸಿಕೊಳ್ಳುವ ರಾಜ್ಯದ ನಾನಾ ಪ್ರದೇಶದವರೂ, ಎರಡೂ ಪದ್ಧತಿಯ ಅಭಿಮಾನಿಗಳೂ ಪರಸ್ಪರ ಹೆಚ್ಚುಹೆಚ್ಚಾಗಿ ಬೆರೆಯಬೇಕು. ವಿಚಾರವಿನಿಮಯ ಮಾಡಿಕೊಳ್ಳ ಬೇಕು. ಒಂದೊಂದು ಸಂಗೀತ ಪದ್ಧತಿಯನ್ನು ಸಹೃದಯತೆಯಿಂದ ಅರಿತು ಅನುಭವಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ವಿದ್ವಾಂಸರು ಹಾಗೂ ಪಂಡಿತರುಗಳೂ ಸಹ ಕೇವಲ ಸಂಗೀತ ಮನರಂಜನೆ ಅಥವಾ ವೃತ್ತಿಯ ಸಾಧನವಲ್ಲ, ಅದು ದಿವ್ಯವಾದ ಕಲೆ ಎಂಬುದನ್ನು ಮನಗಾಣಬೇಕು. ಹಾಗೂ ಅದರ ಪ್ರಚಾರ ತಮ್ಮ ಧರ್ಮವೆಂಬುದನ್ನು ಮರೆಯಬಾರದು.

ಕಲಾವಿದರನ್ನು ಗುರುತಿಸಿ, ಸತ್ಕರಿಸಿ, ಪ್ರಶಸ್ತಿ ನೀಡುವುದು ಸಮಾಜದ ಕರ್ತವ್ಯ. ಈ ಪ್ರಶಸ್ತಿ ಪ್ರಧಾನ ಸಮಾರಂಭ ಕೇವಲ ಆಡಂಬರಿಕವಾಗಿದೆ. ಅವರ (ಕಲಾವಿದರು) ಜ್ಞಾನಬಂಡಾರವನ್ನು ಜನಸಾಮಾನ್ಯರಿಗೆ ತಿಳಿಸಲು ಮುಖಂಡರು ಕಾಳಜಿ ವಹಿಸಬೇಕು. ಇದು ಅಕಾಡೆಮಿಗಳು ವಿಶ್ವವಿದ್ಯಾಲಯ ಮುಂತಾದ ಸಂಸ್ಥೆಗಳ ಕರ್ತವ್ಯ ಹಾಗೂ ಜವಾಬ್ದಾರಿಯಾಗಿದೆ. ರಾಷ್ಟ್ರಮಟ್ಟದ ಮಾನ್ಯತೆಯ ಬಗೆಗೆ ಹೇಳಬೇಕಾದಲ್ಲಿ ಕಲಾವಿದರದಷ್ಟೇ ಜವಾಬ್ದಾರಿ ಸಾರ್ವಜನಿಕರಲ್ಲೂ ಇದೆ ಎನ್ನಬಹುದು. ಈ ಕುರಿತು ವಿಧಾನಸಭೆ, ವಿಧಾನ ಪರಿಷತ್ ಹಾಗೂ ಜನನಾಯಕರೂ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು. ಸಮಾನತೆ ಜೇಷ್ಠತೆ ಎಲ್ಲದಕ್ಕೂ ಪ್ರಾಧಾನ್ಯತೆಯನ್ನು ಕೊಡಬೇಕು.

ಟಿಪ್ಪಣಿ: ಜಿಲ್ಲೆಯ ಸಂಗೀತಪರಂಪರೆ ಹಾಗೂ ದೇಶದಮಟ್ಟದಲ್ಲಿ ಅದಕ್ಕಿರುವ ಸ್ಥಾನಮಾನದ ಕುರಿತು ಲೇಖಕರ ಚಿಂತನದಿಂದ ......

ಉತ್ತರ ಕನ್ನಡ ಜಿಲ್ಲೆಯೇ ಆಗಲಿ ಕರ್ನಾಟಕವೇ ಆಗಲಿ ಇಲ್ಲಿನ ಕಲಾವಿದರು ರಾಷ್ಟ್ರಮಟ್ಟದಲ್ಲಿ ತಮ್ಮ ಖ್ಯಾತಿಯನ್ನುಗಳಿಸಲು ಅವರ ಪ್ರತಿಭೆ ಮತ್ತು ಶಕ್ತಿಯಿಂದಲೇ ಎಂಬುದನ್ನು ಮರೆಯಲಾಗದು. ಉತ್ತಮ ಕಲಾಕಾರರ ಜೀವನಚರಿತ್ರೆಯನ್ನು ನೋಡಿದಾಗ ನಮಗೆ ಈ ಸಂಗತಿ ತಿಳಿಯದೇಇರದು. ಒಟ್ಟಿನಲ್ಲಿ ಕರ್ನಾಟಕದಲ್ಲಿ ಸಂಗೀತ ಕಲೆಯು ಈ ಶತಮಾನದ ಪೂರ್ವಾರ್ದದಲ್ಲಿ ಪ್ರಗತಿ ಪಥದಲ್ಲಿ ನಡೆದು ಒಳ್ಳೆಯ ಸ್ಥಾನವನ್ನು ಪಡೆಯಿತು. ಏಕೀಕರಣವಾದ ಮೇಲೆ ಮೊದಲುಸಾಧಿಸಿದ ಪ್ರಗತಿಯನ್ನು ಸಾಧಿಸಲಾಗಲಿಲ್ಲವೆನ್ನಬಹುದು. ಇದನ್ನು ಸರಿಪಡಿಸಲು ಕಲಾವಿದರು ಕಲಾಭಿಮಾನಿಗಳು ಎಲ್ಲರೂ ಒಮ್ಮನಸ್ಸಿನಿಂದ ಸೇರಿ ಸಂಗೀತವೆಂಬ ಭವ್ಯತೇರನ್ನು ಮುಂದೆಳೆಯಬೇಕಾಗಿದೆ.

ಸಂಗೀತದ ಘರಾನೆಗಳಿಂದ ನಾವು ಕಲಿಯಬೇಕಾದ ಹಾಗೂ ಗಮನಿಸಬೇಕಾದ ಅಂಶಗಳು ಅನೇಕ ಇವೆ. ಘರಾನೆಯ ಗಾಯಕರು ಇತರರಘರಾನೆಯನ್ನು ಹಳಿಯುವುದನ್ನು ಬಿಟ್ಟು ಇತರರ ಘರಾನೆಯ ಉತ್ತಮಾಂಶಗಳನ್ನು ತೆಗೆದುಕೊಂಡು ತನ್ನ ಸ್ವಂತಿಕೆಯನ್ನು ಬೆಳೆಸಿಕೊಳ್ಳಬೇಕಾಗಿದೆ. ಜ್ಞಾನಬಂಡಾರಕ್ಕೆ ಸಂಗೀತಗಾರರ ಅನುಭವಗಳನ್ನು ಸೇರಿಸುವುದರಿಂದ ಜನಸಾಮಾನ್ಯರೂ ಕೂಡ ಸಂಗೀತದ ಆಳ (ಅಂದರೆ ಬದುಕಿನ ಆಳ) ವನ್ನು ತೆಗೆದುಕೊಳ್ಳುವುದರಿಂದ ಜೀವನದ ಮಹತ್ವದ ಅರಿವಾಗುತ್ತದೆ. ಅನೇಕ ಹಿರಿಯ ಸಂಗೀತ ಕಲಾಕಾರರ ಜೀವನ ಚರಿತ್ರೆಯನ್ನು ನೋಡಿದಾಗ ಅವರ ಭಕ್ತಿ, ಶ್ರದ್ಧೆ, ಅರ್ಪಣಾಭಾವ ಜೀವನದ ಏರು ಪೇರುಗಳ ಬಗ್ಗೆ ಮತ್ತು ಸಮಾಜ ಸಂಗೀತಗಾರರನ್ನು ಕಾಣುವ ಬಗ್ಗೆ ಸಂಗೀತಗಾರರು ಸಮಾಜವನ್ನು ನೋಡುವ ಪರಿ, ಇವುಗಳ ಸಮಗ್ರ ಕಲ್ಪನೆಗಳು ಬರಲು ನೆರವಾಗುವುದು. ಪಂಃ ಬೀಮಸೇನ ಜೋಷಿಯವರ ಗಾಯನ, ಬದುಕನ್ನು ನೋಡಿದಾಗ ಎಂತಹವರಿಗಾದರೂ ರೋಮಾಂಚನವಾಗದೇ ಇರದು. ಕಲಾವಿದ ಪಟ್ಟಿರುವ ಕಷ್ಟ, ಶ್ರೇಯಸ್ಸು, ಏಳಿಗೆ, ಬದುಕು, ಸಂಗೀತ ಇವೆಲ್ಲ ತಿಳಿಯಲು ಹಾಗೂ ಅಧ್ಯಯನಕ್ಕೆ ಯೋಗ್ಯವಾದವುಗಳು. ಕಲಾಕಾರನಿಂದ ಗಾಯನಕ್ಕೆ ಕಳೆಬರುವುದು.

ಇಂದು ನಾಡಿನ ಅಗ್ರಮಾನ್ಯ ಕಲಾವಿದರೆಲ್ಲ ಗುರುಶಿಷ್ಯ ಪರಂಪರೆ, ಘರಾನೆಗಳ ಮೂಲಕವೇ ಹೆಸರು ಗಳಿಸಿರುತ್ತಾರೆ. ಪಂಃ ಭೀಮಸೇನಜೋಷಿ, ಡಾಃ ಗಂಗೂಬಾಯಿ ಹಾನಗಲ್, ಪಂಃ ಡಿ. ಬಸವರಾಜ ರಾಜಗುರು

ಪಂಃ ದಿಃ ಮಲ್ಲಿಕಾರ್ಜುನ ಮನ್ಸೂರ್ , ಪಂಃ ದಿಃ ಕುಮಾರ ಗಂಧರ್ವ ಮುಂತಾದ ಕಲಾಕಾರರೆಲ್ಲ ದೇಶದ ಅಷ್ಟೇ ಅಲ್ಲ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಸಂಗೀತದ ಖ್ಯಾತಿಯನ್ನು ಬೆಳೆಸಿದ್ದಾರೆ. ಭಾರತೀಯ ಸಂಸ್ಕೃತಿ, ಭಾರತೀಯ ಸಂಗೀತದ ಮಹತ್ವವನ್ನು ನಾಡಿಗೇ ಉಣಿಸಿದ್ದಾರೆ. ಭಾರತೀಯ ಸಂಗೀತವನ್ನು ಭಾರತೀಯ ಕಲೆಯನ್ನು ಎತ್ತರಕ್ಕೆ ಏರಿಸಿದ ಕರ್ನಾಟಕದ ಕಲಾವಿದರೆಲ್ಲ ತಮ್ಮ ಸ್ವಪ್ರತಿಭೆಯಿಂದಲೇ ಶಾಸ್ತ್ರೀಯ ಸಂಗೀತದ ಅಗ್ರಜರೆಂದು ಗುರುತಿಸಿಕೊಂಡಿರುವರು. ಕಿರಾಣಾ ಘರಾನೆಯ ಪ್ರತಿಪಾದಕಿ ಡಾಃ ಪ್ರಭಾ ಅತ್ರೆ, ಆಗ್ರಾಘರಾನೆಯ ಪ್ರತಿಪಾದಕ ಹಾಗೂ ತಾನಸೇನ್ ಪ್ರಶಸ್ತಿ ವಿಜೇತ ಪಂಃ ರಾಮರಾವ್ ನಾಯಕ್, ಮತ್ತು ಪಂಃ ಎಸ್. ಸಿ. ಆರ್. ಭಟ್, ಪಂಃ ರಾಜನ್ ಹಾಗೂ ಸಾಜನ್ ಮಿಶ್ರಾ, ದ್ರುಪದ್ ಗಾಯಕಿಯ ಡಾಗೂರ್ ಬಂದುಗಳು ಗ್ವಾಲಿಯರ್ ಗಾಯಕಿ ಶ್ರೀಮತಿ ಮಾಲಿನಿ ರಾಜೂರ್‌ಕರ್, ಖ್ಯಾತ ಗಾಯಕಿ ದಿಃ ಶ್ರೀಮತಿ ಮಾಣಿಕ ವರ್ಮಾ, ಕಿರಾಣಾಘರಾನೆಯ ಪಂಃ ಸಂಗಮೇಶ್ವರ ಗುರವ್ ಜಯಪುರ ಶೈಲಿಯ ಪಂಃ ಪಂಚಾಕ್ಷರೀ ಸ್ವಾಮಿ ಮತ್ತಿಗಟ್ಟಿ, ಗಾಯಕ ಪಂಃ ಸಿ. ಆರ್ ವ್ಯಾಸ್, ಪಂಃ ಜಿತೇಂದ್ರ ಅಭಿಷೇಕಿ ಇನ್ನೂ ಅನೇಕ ಹಿರಿಯ ಶಾಸ್ತ್ರೀಯ ಕಲಾಕಾರರೆಲ್ಲ ಇಂದು ಭಾರತೀಯ ಸಂಸ್ಕೃತಿ ಹಾಗೂ ಕಲೆಯ ಮಹತ್ವವನ್ನು ಶಾಸ್ತ್ರೀಯ ಗಾಯನದ ಮೂಲಕ ಬಿತ್ತರಿಸಿ ರಾಷ್ಟ್ರ ಖ್ಯಾತರಾಗಿದ್ದಾರೆ. ಇನ್ನೂ ಅನೇಕ ಕಲಾಕಾರರೂ ತಮ್ಮ ಪ್ರತಿಭೆಯನ್ನು ಶಾಸ್ತ್ರೀಯ ಗಾಯನದ ಮೂಲಕ ರಾಷ್ಟ್ರಖ್ಯಾತರಾಗಿದ್ದಾರೆ. ಪಂಃ ಪ್ರಭಾಕರ ಕಾರೇಕರ್ ಅಜಯ ಪೋಹನಕರ್, ಪಂಃ ಗಣಪತಿ ಭಟ್ಟ ಶ್ರೀ ಪರಮೇಶ್ವರ ಹೆಗಡೆ ಶ್ರೀಮತಿ ಶ್ಯಾಮಲಾ ಭಾವೆ, ಅಶ್ವಿನಿ ಬಿಡೆ ದೇಶಪಾಂಡೆ, ಪೂರ್ಣಿಮಾ ಭಟ್ಟ, ಕೃಷ್ಣಾಹಾನಗಲ್, ಆರತೀ ಅಂಕಲೇಕರ್, ಶ್ರುತಿ ಸಡೊಲೀಕರ, ಬೇಗಂ ಪರವೀನ್ ಸುಲ್ತಾನ್, ದಿಲ್‌ಶಾದ್‌ಖಾನ್, ಡಾಃ ಬಿ.ಡಿ. ಪಾಠಕ್ (ಭೀನವಾದಕರು) ಕೈವಲ್ಯಕುಮಾರ್ ಗುರವ್, ಶ್ರೀ ಶ್ರೀಪಾದ ಹೆಗ್ಡೆ, ಶ್ರೀ ಎಂ ವೆಂಕಟೇಶ್ ಕುಮಾರ್, ಶ್ರೀ ವೆಂಕಟೇಶ ಗೋಡಕಿಂಡಿ, ಶ್ರೀಪತಿ ಪಾಡಿಗಾರ, ಮಾದವಗುಡಿ, ಬಾಲಚಂದ್ರ ನಾಕೋಡ್, ಪಂಃ ಅರ್ಜುನ್‌ಸಾ ನಾಕೋಡ್ ಮುಂತಾದವರು ಅವರು ಉತ್ತಮ ಮೌಲ್ಯದ ಕಲಾಕಾರರಾಗಿದ್ದಾರೆ.

ಶಾಸ್ತ್ರೀಯ ಸಂಗೀತವು ಸಾಧನೆಯಿಂದ ಬರುವಂತಹದು. ಸಾಧನೆ ಇಲ್ಲದೇ ಸಿದ್ಧಿ ಇಲ್ಲ. ಗಾಯಕ ನಾದವನು ಸೂರ್ ಜಗತ್ತಿನಲ್ಲಿ ಲೀನವಾಗಿ ರಾಗ ತಾಲಗಳಲ್ಲಿ ತನ್ಮಯತೆಯನ್ನು ಸಾಧಿಸಬೇಕಾಗುತ್ತದೆ.

ಶಾಸ್ತ್ರೀಯ ಸಂಗೀತದ ಅಧ್ಯಯನದಿಂದ ವೈದ್ಯಕೀಯವಾಗಿ, ಆರೋಗ್ಯಶಾಸ್ತ್ರದ ಮೇಲೆಯೂ ಪರಿಣಾಮ ಬೀರಿರುವುದು ಅಧ್ಯಯನದಿಂದ ವ್ಯಕ್ತವಾಗಿದೆ. ಗಿಡ, ಮರಗಳು ಪಶು ಪಕ್ಷಿಗಳು ಶಾಸ್ತ್ರೀಯ ಸಂಗೀತದ ಆಸ್ವಾದನೆಯಿಂದ ಬೆಳೆಯುತ್ತಿದೆ ಎನ್ನಲಾಗಿದೆ. ಸ್ವರ ಮತ್ತು ವಿಜ್ಞಾನ (science & swara) ಇವುಗಳ ಅಧ್ಯಯನದಿಂದ ಅನೇಕ ಉಪಯುಕ್ತ ಅಂಶಗಳು ಗೊತ್ತಾಗಿದೆ. ಇವುಗಳ ಕ್ರಮಬದ್ಧತೆಯ ಬಗೆಗೆ ಅನೇಕರು ಪ್ರಶ್ನಿಸಿದರೂ ಸಹ ಸೂಕ್ಷ್ಮವಾಗಿ ವಿಚಾರಿಸಿದಾಗ ಇದರ ಸತ್ಯಾಸತ್ಯತೆಯ ಅರಿವು ಪ್ರಶ್ನಿಸಿದವರಿಗೂ ಆಗದೇ ಇರದು. ಇದರ ಬಗೆಗೂ ಸಂಶೋಧನೆ ನಡೆಯುತ್ತಲೇ ಇದೆ. ಉತ್ತಮ ಅಭಿರುಚಿಯನ್ನು ಬಳೆಸಲು ಶಾಸ್ತ್ರೀಯ ಸಂಗೀತ ಉತ್ತಮವಾದ ಮಾರ್ಗವಾಗಿದೆ. ಇಂದಿನ ಯುವಕರು ಶಾಸ್ತ್ರೀಯ ಸಂಗೀತದತ್ತ ಒಲವು ತೋರುತ್ತಿರುವ ಸಂಗತಿ ಒಳ್ಳೆಯ ಬೆಳವಣಿಗೆಯಾಗಿದೆ. ಘರಾನೆಗಳ ಬಗ್ಗೆ ಅಭಿರುಚಿ ಬೆಳೆಸಲು ಅನೇಕ ಘರಾನಾ ಗಾಯಕರುಗಳ ಕಾರ್ಯಕ್ರಮವನ್ನು ಕೇಳಿದಾಗ ಘರಾನೆಯ ಮಹತ್ವ ಆಳದ ಬಗ್ಗೆ ಕಲ್ಪನೆಬರುತ್ತದೆ. ಶಾಸ್ತ್ರೀಯ ಸಂಗೀತವು ಗುರುಮುಖೇನ ವಿದ್ಯೆಯಾಗಿದ್ದು ಗುರುಗಳಿಂದ ಕ್ರಮಬದ್ಧವಾದ ಪಾಠಮಾಡಿಸಿಕೊಂಡಾಗ ಅದು ಕಾರ್ಯಪ್ರವೃತ್ತವಾಗುತ್ತದೆ. ಅನುಭವಗಳು ವಿದ್ಯೆಯ, ವ್ಯಕ್ತಿಯ ಮಹತ್ವದಿಂದ ರಾಗದ standard (ಎತ್ತರ) ವನ್ನು ಹೇಳಬಹುದು. ಪ್ರತಿಯೊಂದು ರಾಗಕ್ಕೂ ಜೀವವಿದೆ. ಆ ರಾಗಗಳಿಗೆ ಜೀವತುಂಬುವ ಕೆಲಸವನ್ನು ಕಲಾವಿದನಾದವನು ಮಾಡುತ್ತಾನೆ. ಹಿಂದುಸ್ತಾನೀ ಸಂಗೀತವು ಪ್ರಹರಗಳನ್ನಾದರಿಸಿದ್ದು ಈ ಪ್ರಹರಗಳಲ್ಲಿ ಸೂಕ್ತವಾದ ರಾಗಗಳನ್ನು ಪ್ರಸ್ತುತಪಡಿಸಿದಾಗ ಮಾತ್ರ ಅದಕ್ಕೆ ಕಳೆ ಹಾಗೂ ಶೋಭೆ ಬರುತ್ತದೆ. ಗುರುಮುಖೇನ ಬೆಳಿಗ್ಗೆ, ಮಧ್ಯಾಹ್ನ , ಸಂಜೆ ಈ ರೀತಿಯಾಗಿ ಅಭ್ಯಾಸ ಮಾಡಿದಾಗ ಪ್ರತಿಯೊಂದೂ ಸ್ವರದ ಅಂತರ, ಮಹತ್ವವನ್ನು ಅರಿತಾಗ, ಮಂಚಪ್ರದರ್ಶನದಲ್ಲಿ ತನ್ನ ಕಲೆಯ ಪ್ರದರ್ಶನವನ್ನು ಪ್ರದರ್ಶಿಸಿದಾಗ ಮಾತ್ರ ಕಲಾಕಾರನಿಗೆ ಸಂಗೀತದ ಸಿದ್ಧಿಯ ಬಗೆಗೆ ಅರಿವಾಗುತ್ತದೆ. ಸಂಗೀತಗಾರನಿಗೆ ಅಹಂಬಾವ ಸಲ್ಲದು. ಅಹಂಕಾರದಿಂದ ಆತನು ನಾಶವಾಗುವ ಮುಂದೆ ಸಂಗೀತಕಲೆಯೂ ಅವಸಾನದತ್ತ ನಡೆಯುತ್ತದೆ.

ರಾಜಾಶ್ರಯದಿಂದ ಸಂಗೀತಗಾರರನ್ನು ಹೊರದಬ್ಬಿದಾಗ, ಸಂಗೀತಗಾರ ಹೊಟ್ಟೆಪಾಡಿಗಾಗಿ, ಮರ್ಯಾದಿತಮಾರ್ಗದಲ್ಲಿ ಸಾಗಲಾರದೇ ಅನ್ಯ ಮಾರ್ಗಗಳನ್ನು ಹಿಡಿದುವನ್ನು ನಾವು ಗತಕಾಲದ ಸಂಗೀತ

ಇತಿಹಾಸದಲ್ಲಿ ನೋಡಿದ್ದೇವೆ. ಮೊಹಮ್ಮದ್ ಬಿನ್ ತುಘಲಕನು ಸಂಗೀತ ವಿರೋದಿಯಾಗಿದ್ದು ಆತ ತನ್ನ ಆಸ್ಥಾನದಲ್ಲಿದ್ದ ಸಂಗೀತಗಾರರನ್ನು ಹೊರಹಾಕಿದ. ದಾರಿಕಾಣದೇ ಸಂಗೀತಗಾರರು ಸಂಗೀತಾಸಕ್ತರ ಮನೆಗಳಲ್ಲಿ ಸೇರಿಕೊಂಡರು. ತುಘಲಕನ ಈ ನೀತಿಯನ್ನು ಪ್ರತಿಭಟಿಸಿ ಸಂಗೀತಗಾರರೆಲ್ಲ ಮುಷ್ಕರ ಹೂಡಿ ನಾವು ಸಂಗೀತದ ಶವಯಾತ್ರೆಗೆ ಹೋಗುತ್ತಿದ್ದೇವೆ, ತುಘಲಕ್‌ನ ಕಾಲದಲ್ಲಿ ಸಂಗೀತದ ಅವಸಾನವಾಗಿದೆ ಎಂದು ಘೋಷಣೆಯನ್ನು ಕೂಗುತ್ತ ಬೀದಿಯಲ್ಲಿ ಮೆರವಣಿಗೆಗೆ ಹೊರಟ ಸಂದರ್ಭದಲ್ಲಿ ಈ ಸಂಗೀತಗಾರರನ್ನು ಕಂಡು ತುಘಲಕನು 'ಸತ್ತ ಸಂಗೀತಗಾರರ ಶವವನ್ನು ಆಳವಾದ ಕುಳಿಯನ್ನು ತೋಡಿ ಹೂತುಬಿಡಿ ಅದು ಇನ್ನೆಂದಿಗೂ ಹುಟ್ಟಿಬಾರದಿರಲಿ' ಎಂದು ಆಜ್ಞಾಪಿಸಿದನಂತೆ. ಇಂತಹ ಸಂಗೀತವಿರೋದಿ ಅರಸರನ್ನು ನಾವು ಹಿಂದಿನ ಕಾಲದಲ್ಲಿ ಕಂಡಿದ್ದೇವೆ. ಅಂತೆಯೇ ಶ್ರೇಷ್ಠ ಅರಸು ಅಕ್ಬರ್‌ನ ಕಾಲದಲ್ಲಿ ಸಂಗೀತದ ಸುವರ್ಣಯುಗ ಎಂದೆನಿಸಿ ಸಮಾಜದಲ್ಲಿ ಸಂಗೀತಕ್ಕೆ ಉತ್ತಮ ಸ್ಥಾನ ಸಿಕ್ಕಿದ್ದನ್ನು ನಾವು ನೋಡಿದ್ದೇವೆ. ಇದನ್ನೆಲ್ಲ ಅವಲೋಕಿಸಿದಾಗ ನಮಗೆ ಕಾಲಚಕ್ರದ ಅರಿವಾಗದೇ ಇರದು. ಇದಕ್ಕೆಲ್ಲ ಕಾರಣವಿರದೇ ಇಲ್ಲ. ಸಂಗೀತಗಾರ ತನ್ನ ಅಹಂಕಾರಭಾವದಿಂದ, ಕಳಪೆ ಮಟ್ಟದ ರಂಜನೆಯ ಸಲುವಾಗಿ ಅನೇಕ ದುರ್ಮಾರ್ಗಗಳನ್ನು ಹಿಡಿದುದನ್ನು ಇತಿಹಾಸದಿಂದ ನಾವು ತಿಳಿಯಬಹುದಾಗಿದೆ. ವಿಲಾಸೀ ಸಂಗೀತಗಾರರೂ ಆಗಿಹೋಗಿದ್ದಾರೆ. ಸ್ವಾಮಿ ಹರಿದಾಸರಂಥ ಶ್ರೇಷ್ಠ ಮಟ್ಟದ ಸಂಗೀತಗಾರರೂ ಆಗಿಹೋಗಿದ್ದಾರೆ. ಸ್ವಾಮೀ ಹರಿದಾಸರಷ್ಟು ಚಾರಿತ್ರ್ಯವಂತ ಸಂಗೀತಗಾರನಾಗದೇ ಹೋದರೂ ಚಾರಿತ್ರ್ಯವಂತ ಸಂಗತಗಾರನಾದರೆ ಅದುವೇ ಆತ ಸಮಾಜಕ್ಕೆ ಕೊಡುವ ಕೊಡುಗೆ ಎನ್ನಬಹುದು. ಸಂಗೀತ ವಿಲಾಸಕ್ಕಾಗಿ ಅಲ್ಲ ವಿಕಾಸಕ್ಕಾಗಿ. ಸಾಧನೆ ಕಡಿಮೆ ಆದಾಗ ರಂಜನೆಯ ದೃಷ್ಟಿಯಲ್ಲಿ ಕಾರ್ಯಕ್ರಮಕ್ಕೆ ರಂಗುತರಲು ಕಲಾಕಾರ ವಾಮಮಾರ್ಗ ಹಿಡಿಯುವ ಬದಲು ಸಾಧನೆಯಿಂದ ಪ್ರಾಮಾಣಿಕ ಪ್ರಯತ್ನಮಾಡಿ ಹಾಡಿದರೆ ಅದುವೇ ನಿಜವಾದ ಜೀವನದ ಹುಡುಕಾಟಕ್ಕೆ ನಾಂದಿಯಾಗಬಹುದು. ಕಲಾಕಾರ ತನ್ನ ಇತಿಮಿತಿಯಲ್ಲಿ ರಾಗದಚೌಕಟ್ಟಿನಲ್ಲಿ ರಾಗವನ್ನು ರಂಜಿಸಿ ಪ್ರಸ್ತುತಪಡಿಸಿದಾಗ, ಸಂಗೀತದ ಆನಂದ ಶ್ರೋತ್ರುಗಳಿಗೇ ಆಗದೇ ಇರದು. ಇದಕ್ಕೆ ಸಮಚಿತ್ತ ಸಮಾಧಾನ ಹಾಗೂ ಪ್ರಸನ್ನತೆಯ ಕಳೆಯು ತನ್ನ ಹಾಡಿನಲ್ಲಿ ಆತ ಕಂಡುಕೊಳ್ಳಬೇಕಾಗುತ್ತದೆ. ಇದಕ್ಕೆಲ್ಲ ಆತನಿಗೆ ಮನಶಾಂತಿ ಇರಬೇಕಾಗುತ್ತದೆ.

ದೇಶದ ಸಂಗೀತ ನಕ್ಷೆಯಲ್ಲಿ ಉತ್ತರ ಕನ್ನಡ ಜಿಲ್ಲೆ

ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಯನ್ನು ಕಾಯ್ದುಕೊಳ್ಳುವ ಜೊತೆಗೆ ವಿವಿಧ ಜನಾಂಗ, ಪ್ರಾಂತಗಳ ಸಂಬಂಧ ಸುಧಾರಣೆಯ ಜವಾಬ್ದಾರಿ ಸಂಗೀತಗಾರರ ಮೇಲಿದೆ. ಉತ್ತಮಸಂಗೀತ ಹಾಗೂ ಉತ್ತಮ ಸಂಗೀತಗಾರ ದೇಶ ಭಾಷೆ ಪ್ರಾಂತ್ಯಗಳನ್ನು ಮೀರಿ ಬೆಳೆಯುತ್ತಾನೆ. ಸಂಗೀತವಂತೂ ಭಾಷೆಯ ಹಂಗಿಲ್ಲದೇ ಬೆಳೆದ ಭಾವಭಾಷೆಯಾಗಿದೆ. ಉತ್ತಮ ಭಾವನೆಗಳ ಬೆಸುಗೆಯ ಮೂಲಕ ರಾಗದ ಆಲಾಪವನ್ನು ಸಂಗೀತಗಾರ ಹೆಣೆಯುತ್ತಾನೆ.

ಉ.ಕ. ಜಿಲ್ಲೆ ಶಾಸ್ತ್ರೀಯಸಂಗೀತ ಕ್ಷೇತ್ರದಲ್ಲಿ ನೆರೆಜಿಲ್ಲೆಗಳ ಹಾಗೂ ಸಂಗೀತದ ಗಂಡುನೆಲ ಎಂದೆನಿಸಿಕೊಂಡ ಧಾರವಾಡ ಜಿಲ್ಲೆಯೊಂದಿಗೂ ಸಹ ತನ್ನ ಸ್ಥಾನವನ್ನು ಕಾಯ್ದುಕೊಂಡುಬಂದಿದೆ. ಇಲ್ಲಿಯ ಅನೇಕ ಕಲಾಕಾರರು ಇಂದು ದೇಶ-ವಿದೇಶಗಳಿಗೂ ಹೋಗಿ ತಮ್ಮ ಸಂಗೀತ ಕಾರ್ಯಕ್ರಮಗಳನ್ನು ನೀಡಿ ತಮ್ಮ ಸಂಗೀತದ ಕಂಪನ್ನು ವಿಸ್ತರಿಸಿದ್ದಾರೆ. ಜಿಲ್ಲೆಯ ಹೆಮ್ಮೆಯ ಕಲಾಕಾರರಾದ ಪಂಃ ಗಣಪತಿ ಭಟ್ಟ ಹಾಸಣಗಿ ಹಾಗೂ ಪಂಃ ಪರಮೇಶ್ವರ ಹೆಗಡೆ ಕಲಬಾಗ ಇವರೀರ್ವರೂ ೧೯೯೯ ರಲ್ಲಿ ಅಮೇರಿಕಾದೇಶಕ್ಕೆ ಹೋಗಿ ತಮ್ಮ ಸಂಗೀತ ಸುಧೆಯನ್ನು ಹರಿಸಿದ್ದಾರೆ. ಇವರೀರ್ವರೂ ದೇಶದ ಅಗ್ರಪಂಕ್ತಿ ಸಂಗೀತಗಾರ ಪದ್ಮಭೂಷಣ ಪಂಃ ಡಾಃ ಬಸವರಾಜ ರಾಜಗುರು ಅವರ ಶಿಷ್ಯರು ಎಂಬುದು ಉಲ್ಲೇಖನೀಯ. ಶ್ರೀ ಶ್ರೀಪಾದ ಹೆಗಡೆ , ಶಾಂತಾರಾಮ ಹೆಗಡೆ, ಕೃಷ್ಣಮೂರ್ತಿ ಭಟ್ಟ ಪಂಃ ಕಮಲಾಕರ ಭಟ್ಟ, ರಘುಪತಿ ಹೆಗಡೆ ಮುಂತಾದ ಅನೇಕ ಕಲಾಕಾರರು ದೇಶದ ಅನೇಕ ಕಡೆಗಳಲ್ಲಿ ತಮ್ಮ ಶಾಸ್ತ್ರೀಯಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದಾರೆ. ಸಂಗೀತ ನಿಂತನೀರಲ್ಲ. ಅದು ಹರಿಯುವ ಝರಿಯಾಗಬೇಕು. ಗಾಯಕ ಇನ್ನೊಬ್ಬ ಗಾಯಕನ ಹಾಡನ್ನು ಕೇಳಬೇಕು. ಉತ್ತಮ ಸಾಧನೆ ಮಾಡಿದ ಸಂಗೀತಗಾರರನ್ನು ಸಂಗೀತಜ್ಞರನ್ನು ಎಲ್ಲರೂ ಗೌರವಿಸಬೇಕು. ಇಂತಹ ವಾತಾವರಣ ತಾಲೂಕಿನಿಂದ ಹಿಡಿದು ಜಿಲ್ಲಾ ಮಟ್ಟಗಳೊಳಗೊಂಡಂತೆ ದೇಶ ವಿದೇಶ ಮಟ್ಟದಲ್ಲಿಯೂ ಬೆಳೆದು ಬರಬೇಕು. ಜಿಲ್ಲೆಯ ಕಲಾಕಾರರು ಇತರ ಜಿಲ್ಲೆಗಳಿಗೆಹೋಗಿ ತಮ್ಮ ಕಲಾಪ್ರತಿಭೆಯ ಪರಿಚಯ ಮಾಡಿಕೊಡಬೇಕು. ದೇಶದ ಮಟ್ಟದ ಸಂಗೀತಗಾರರು ಇತರ ದೇಶಗಳಿಗೆ ಹೋಗಿ ತಮ್ಮ ಸಂಗೀತ ಸಾಧನೆಯ

ಪ್ರತಿಭೆಯ ಪರಿಚಯಮಾಡಿಕೊಡಬೇಕು. ಈ ಪ್ರಕ್ರಿಯೆ ಪರಸ್ಪರ ನಡೆಯುತ್ತಿದ್ದಾಗ ವಿಶ್ವವೇ ಒಂದು ಮನೆ ಆಗುವುದರಲ್ಲಿ ಸಂಶಯವಿಲ್ಲ. ಅದಕ್ಕಾಗಿಯೇ ಹೇಳುವದುಂಟು. ಉತ್ತಮ ಸಂಗೀತಗಾರರು ವಿಶ್ವಕುಟುಂಬಿಗಳೆಂದು. ದೇಶಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಈಗ ನಡೆಸಿಕೊಂಡು ಬರುತ್ತಿರುವ ಸಂಸ್ಕೃತಿ ಉತ್ಸವಗಳು ಜನರ ಉತ್ಸವವಾಗಬೇಕು. ಅದು ಬರೀ ರಾಜಕೀಯ ಹಾಗೂ ಅಧಿಕಾರಿಗಳ ಉತ್ಸವವಾದರೆ ಪ್ರಯೋಜನವಿಲ್ಲ. ಕಲಾಕಾರರ ಆಯ್ಕೆಯಲ್ಲೂ ಪಾರದರ್ಶಕತೆ ಇರಬೇಕು. ಅಲ್ಲಿ ರಾಜಕಾರಣ ಸಲ್ಲ. ದುರ್ದೈವದ ಸಂಗತಿ ಎಂದರೆ ದೇಶದಲ್ಲಿನ ಎಷ್ಟೋ ಉತ್ಸವಗಳು ರಾಜಕೀಯ ಉತ್ಸವವೇ ಆಗುತ್ತಿರುವುದು ಕಲಾಪ್ರಕಾರದ ಉನ್ನತಿಗೆ, ಯಶಸ್ಸಿಗೆ ಮಾರಕವಾಗಿದೆ. ಕ್ಷುಲ್ಲಕ ರಾಜಕೀಯ ಪವೃತ್ತಿಗೆ ಕಡಿವಾಣ ಹಾಕಿದಾಗ ಮಾತ್ರ ಕಲೆ, ಕಲಾವಿದ, ಕಲಾಪ್ರಕಾರ ಉತ್ತಮವಾಗಿ ಬೆಳೆದು ಉತ್ತಮ ಬೆಳವಣಿಗೆಗೆ ಸಹಕಾರಿಯಾದೀತು.

ಉ.ಕ. ಜಿಲ್ಲೆಯಲ್ಲಿ ಕರಾವಳೀ ಉತ್ಸವ, ಯಲ್ಲಾಪುರ ಉತ್ಸವ, ಬನವಾಸಿ ಉತ್ಸವ, ಗಡಿನಾಡ ಉತ್ಸವ ಹೀಗೆ ಇಲ್ಲಿ ಅನೇಕ ಸರಕಾರಿಉತ್ಸವಗಳು ಜರುಗುತ್ತವೆ.

ಇಂತಹ ಉತ್ಸವಗಳಲ್ಲಿ ಜಿಲ್ಲೆಯ ಉತ್ತಮ ಕಲಾಕಾರರನ್ನೊಳಗೊಂಡಂತೆ ದೇಶದ ಉತ್ತಮ ಪಂಕ್ತಿಯ ಕಲಾಕಾರರಿಗೂ ಅವಕಾಶವನ್ನೀಯಬೇಕು. ಬರೀ ರಾಜಕೀಯ ಶಿಪಾರಸ್ಸಿನ ಮೇಲೆ ಆಯ್ಕೆಯಾಗುವ ಕಲಾಕಾರರು, ಕಲಾಪ್ರಕಾರದ ವಸ್ತುನಿಷ್ಟೆಯನ್ನರಿಯದ ರಾಜಕಾರಣಿಗಳು ಇಂತಹವರ ಕೈಗೊಂಬೆಯಾಗಿ ಕಲಾಪ್ರಕಾರ ಸೊರಗುವ ಸ್ಥಿತಿ ಉಂಟಾಗಬಾರದು. ರಾಜಕಾರಣಿಗಳ, ಅಧಿಕಾರಿಗಳ ಬ್ರಷ್ಟಾಚಾರದಿಂದ ಕಲಾ ಪ್ರಪಂಚವು ಮಲೀನವಾಗುತ್ತಲಿದೆ. ಇಂತಹ ಪರಿಸ್ಥಿತಿ ತಲೆದೂರದಂತೆ ಬುದ್ಧಿಜೀವಿಗಳು, ಸಮಾಜ ಸೇವಕರು ಅಧಿಕಾರಿಗಳು ಎಲ್ಲರೂ ಜವಾಬ್ದಾರಿಯಿಂದ ವರ್ತಿಸಿದರೆ ಮಾತ್ರ ಇಂತಹ ಉತ್ಸವಕ್ಕೆ ಅರ್ಥಬರುತ್ತದೆ. ಉ.ಕ. ಜಿಲ್ಲೆಯಲ್ಲಿ ಕಲಾಕಾರರು ಹಾಗೂ ಇಲ್ಲಿ ನಡೆಸುವ ಉತ್ಸವಗಳ ಮೂಲಕ, ದೇಶದ ಸಂಗೀತ ನಕ್ಷೆಯಲ್ಲಿಯೂ ಜಿಲ್ಲೆ ತನ್ನದೇ ಆದ ಸ್ಥಾನವನ್ನು ಕಂಡುಕೊಂಡಿದೆ.

ಟಿಪ್ಪಣಿ: ಪ್ರೌಢ ಲೇಖನದ ಹಾಗೂ ಲೇಖಕರ ಅಭಿಪ್ರಾಯವನ್ನಾಧರಿಸಿ ......



1 ದಿಲ್‌ರುಬಾ 2 ನಾದಸ್ವರ ವಾದ್ಯಗಳು 3 ವೀಣೆ 4 ಪಿಟೀಲು 5 ಬಾಸುರಿ. ಕೊಳಲು 6 ಮೃದಂಗ 7 ತಂಬೂರಿ 8 ಹಾರ್ಮೋನಿಯಂ
9 ಕರಡಿವಾದ್ಯ, ಡಮರು 10 ತಬಲಾ 11 ಗೆಜ್ಜೆ, ತಾಳ

ಸಂಗೀತ ವಾದ್ಯಗಳು

ಭಾರತೀಯ ಸಂಗೀತ ವಾದ್ಯಗಳ ಚರಿತ್ರೆ ಅತ್ಯಂತ ಪ್ರಾಚೀನವಾಗಿದೆ. ವೇದಪೂರ್ವಕಾಲದಿಂದ ಆಧುನಿಕ ಕಾಲದವರೆಗೆ ವಿವಿದ ವಾದ್ಯಗಳ ಉಲ್ಲೇಖವು ನಮಗೆ ದೊರಕುತ್ತದೆ. ವೇದಪೂರ್ವಕಾಲದಲ್ಲಿ ಆಗ್ಸಾ ಎಂಬ ಪಾಷಾಣ ವಾದ್ಯದ ಉಲ್ಲೇಖವು ದೊರಕುತ್ತದೆ. ಈ ವಾದ್ಯದ ಸಹಾಯದಿಂದ ಆದಿಮಾನವನು ಬೇಟೆಯಾಡುವಾಗ ಪಶು ಪಕ್ಷಿಗಳನ್ನು ಸ್ಥಿತಪ್ರಜ್ಞರನ್ನಾಗಿ ಮಾಡಿ ಅವುಗಳ ಬೇಟೆಯಾಡುತ್ತಿದ್ದನು.

* ಸಿಂದೂನದಿಯ ಸಂಸ್ಕೃತಿಯಲ್ಲಿ ಯಾವ ಯಾವ ವಾದ್ಯಗಳು ಪ್ರಚಾರದಲ್ಲಿದ್ದವು ಎನ್ನುವುದು ನಮಗೆ ಮಹೆಂಜೋದಾರೋ ಹಾಗೂ ರಪ್ಪಾದಲ್ಲಿಯ ಉತ್‌ಖನನದಿಂದ ದೊರಕಿದ ಕಲಾತ್ಮಕ ಮೂರ್ತಿಗಳಿಂದ ತಿಳಿದುಬರುತ್ತದೆ. ವೈದಿಕಯುಗದಲ್ಲಿ ಪ್ರಚಾರದಲ್ಲಿದ್ದ ವಿವಿಧ ವಾದ್ಯಗಳಉಲ್ಲೇಖ ನಮಗೆ ವೇದಗಳಲ್ಲಿ ದೊರೆಯುತ್ತದೆ. ದುಂದುಬಿ, ವಾಣ , ಪಾಟಿ , ಗೋಧಾ, ಪಿಂಗ ಗರ್ಗರ ವೇಣು , ವೀಣಾ ತುಣುವ, ಭೂಮಿದುಂದುಬಿ ಮುಂತಾದ ವಾದ್ಯಗಳ ಉಲ್ಲೇಖವು ನಮಗೆ ವೇದ ಹಾಗೂ ಉಪನಿಶತ್‌ಗಳಲ್ಲಿ ಸಿಗುತ್ತವೆ. ಭರತನ ನಾಟ್ಯ ಶಾಸ್ತ್ರ, ಹಾಗೂ ಸಾರಂಗದೇವನ ಸಂಗೀತ ರತ್ನಾಕರ ಕೃತಿಗಳಲ್ಲಿ ವಿವಿದ ವಾದ್ಯಗಳ ಉಲ್ಲೇಖವು ದೊರಕುತ್ತದೆ. ಭಾರತದಲ್ಲಿ ಮುಸಲ್ಮಾನರು ಹಾಗೂ ವಿದೇಶಿಯರ ಆಕ್ರಮಣದಿಂದ ಭಾರತೀಯ ಸಂಸ್ಕೃತಿ ಅಷ್ಟೇ ಅಲ್ಲ ಸಂಗೀತ ವಾದ್ಯಗಳಲ್ಲಿಯೂ ಕೆಲವು ಪರಿವರ್ತನೆಗಳು ಹಾಗೂ ಹೊಸ ಆವಿಷ್ಕಾರಗಳು ಕಂಡುಬರುತ್ತವೆ. ಭಾರತೀಯ ವಾದ್ಯಗಳಲ್ಲಿ ಸಾಮಾನ್ಯವಾಗಿ ೪ ಶ್ರೇಣಿಗಳನ್ನು ಮಾಡಲಾಗಿದೆ. ೧. ತತ್, ೨. ಸುಶೀರ ೩. ಅವನದ್ ೪. ಘನ. ತತ್ ವಾದ್ಯಗಳೆಂದರೆ ತಂತಿವಾದ್ಯಗಳು ಇವುಗಳಲ್ಲಿ ತತ್ ಹಾಗೂ ವಿತತ್ ಎಂದು ಎರಡು ಪ್ರಕಾರಗಳು. ಯಾವ ವಾದ್ಯಗಳ ತಂತಿಗಳನ್ನು ಕೈಬೆರಳಿನಿಂದ ಮೀಟಲಾಗುತ್ತಿದೆಯೋ ಅವುಗಳಿಗೆ ತತ್ ವಾದ್ಯಗಳೆನ್ನುತ್ತಾರೆ. ಉದಾ ವೀಣಾ, ಸಿತಾರ್, ತಾನಪುರ ಸರೋದ ಮುಂತಾದವು. ಯಾವ ವಾದ್ಯವನ್ನು ಬಿಲ್ಲಿನಿಂದ ತೀಡಿ ಘರ್ಷಣೆಯಿಂದ ಸ್ವರೋತ್ಪನ್ನಮಾಡಲಾಗುತ್ತದೆಯೋ ಅವುಗಳಿಗೆ ವಿತತ್ ವಾದ್ಯಗಳೆಂದೂ ಹೆಸರು. ಉದಾಃ ಸಾರಂಗಿ , ದಿಲ್‌ರುಬಾ, ವಿಟೀಲು ಮುಂತಾದವು. ೨. ಸುಶೀರ ವಾದ್ಯಗಳು ಗಾಳಿಯಿಂದ ಊದಿಬಾರಿಸುವ ವಾದ್ಯಗಳು. ಉದಾಃ ಶಹನಾಯ್ , ಶಂಖ , ಕಹಳೆ, ಕೊಳಲು, ಕ್ಲೇರಿಯೊನೆಟ್ ವಾದ್ಯಗಳು.

ಅಡಿಟಿಪ್ಪಣಿಃ * ಜ್ಞಾನಗಂಗೋತ್ರಿ ಅಧ್ಯಾಯ ೫ ಸಂಗೀತವಾದ್ಯಗಳನ್ನು ಉಲ್ಲೇಖಿಸಿ .....

೨. ಅವನದ್ ವಾದ್ಯಗಳು ಚರ್ಮದ ಹೊದಕೆಯುಳ್ಳ ಎಲ್ಲಾ ವಾದ್ಯಗಳು ಉದಾಃ ತಬ್ಲಾ, ಮೃದಂಗ, ಡೋಲಕ್ ನಗಾರಿ, ಡಮರು ಮುಂತಾದವು ೩. ಘನವಾದ್ಯಗಳು ಮಣ್ಣಿನಿಂದ ಅಥವಾ ದಾತುವಿನಿಂದ ತಯಾರಿಸಲ್ಪಟ್ಟವುಗಳು. ಉದಾಃ ಘಂಟೆ, ಜಲತರಂಗ, ಜಾಗಟೆ.

<u>ತಬಲಾ</u>

ಗಾಯನ ಕಲೆಯೊಂದಿಗೆ ವಾದನ ಕಲೆಯೂ ಪ್ರಾರಂಭದಿಂದಲೂ ಬೆಳೆದುಬಂದಿದೆ. ಮೊದಲು ಧ್ರುಪದ್ ಗಾಯನಕ್ಕೆ ಪಖಾವಜ್ ಅಥವಾ ಮೃದಂಗವನ್ನು ಉಪಯೋಗಿಸುತ್ತಿದ್ದರು. ಆದರೆ ಕಾಲಗತಿಸಿದಂತೆ ಮೃದಂಗದಲ್ಲಿ ಪರಿವರ್ತನೆ ಹೊಂದಿ ತಬ್ಲಾ ವಾದ್ಯವು ಹಿಂದುಸ್ತಾನೀ ಗಾಯಕರಿಗೆ, ವಾದಕರಿಗೆ ಪಕ್ಕವಾದ್ಯವಾಗಿ ಬಳಕೆಯಾಗಿ ಇಂದು ತಬ್ಲಾವಾದನವು ಅತ್ಯಂತ ಜನಪ್ರಿಯ ಪಕ್ಕವಾದ್ಯ ಹಾಗೂ ಸ್ವತಂತ್ರವಾಗಿ ನುಡಿಸುವ ಸೋಲೋ ವಾದ್ಯವಾಗಿ ಬೆಳೆದುಬಂದಿದೆ. ಇದರ ಆವಿಷ್ಕಾರವನ್ನು ಕುರಿತು ಹಲವಾರು ಅಭಿಪ್ರಾಯಗಳಿವೆ.

೧. * ಸುಪ್ರಸಿದ್ಧ ಸಂಗೀತಜ್ಞನಾದ ಅಮೀರ್ ಖುಸ್ರೋ ಪ್ರಪ್ರಥಮವಾಗಿ ತಬ್ಲಾ ವಾದ್ಯವನ್ನು ಆವಿಷ್ಕರಿಸಿದನೆಂದು ಹೇಳಲಾಗಿದೆ.

೨. ಪ್ರಾಚೀನ ಕಾಲದ ದರ್ದರ ಹೆಸರಿನ ವಾದ್ಯದಆಧಾರದ ಮೇಲೆ ತಬಲಾದ ಆವಿಷ್ಕಾರವಾಯಿತೆಂದೂ ಹೇಳಲಾಗುತ್ತದೆ.

೩. ಅರಬ್ಬೀ ಭಾಷೆಯ ತಬ್ಲ (ನಗಾರಿ) ಶಬ್ದದಿಂದ ತಬಲಾದ ಹೆಸರು ಬಳಕೆಯಲ್ಲಿ ಬಂತು. ಹಾಗೂತಬಲಾ ವಾದ್ಯದ ಆವಿಷ್ಕಾರವಾಯಿತೆಂದು ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

೪. ಭಾರತೀಯ ಪುರಾತನ ಮಂಗಳವಾದ್ಯವಾದ ಸಂಬಾಳ ವಾದ್ಯವೇ ಆಧುನಿಕ ತಬ್ಲಾದ ಮೂಲ ಸ್ಫೂರ್ತಿಯಾಗಿದೆ.

೫. ಪರಮಾತ್ಮನ ಕೈಯಲ್ಲಿ ಡಮರು ವಾದ್ಯವೇ ಎಲ್ಲ ಚರ್ಮವಾದ್ಯಗಳಿಗೆ ನೆಲೆಯಾಗಿವೆಯೆಂದೂ, ಆದ್ದರಿಂದ ತಬ್ಲಾ ವಾದ್ಯದ ನಿರ್ಮಾಣಕ್ಕೆ ಶಿವನ ಕೈಡಮರುವೇ ಮೂಲವೆಂದೂ ಆಧ್ಯಾತ್ಮಿಕಚಿಂತನೆಯಲ್ಲಿ ತಿಳಿಸಲಾಗಿದೆ.

ಅಡಿಟಿಪ್ಪಣಿಃ * ತಬಲಾವಾದ್ಯದ ಉತ್ಪತ್ತಿಯ ವಿವಿಧ ಲೇಖನವನಾನಧರಿಸಿ ......

ಹೀಗೆ ಅನೇಕ ಅಭಿಪ್ರಾಯಗಳಿವೆ. ತಬ್ಲಾ ವಾದ್ಯದ ಆವಿಷ್ಕಾರದ ವಿಚಾರದಲ್ಲಿ ದಿಲ್ಲಿಯ ಸುಪ್ರಸಿದ್ಧ ಪಖಾವಜ ವಾದ್ಯ ಕಲಾವಿದರಾದ ಉಸ್ತಾದ ಸುಧಾರಖಾ ದಾಢೀ ಅವರ ಹೆಸರು ಹೆಚ್ಚು ಅಧಿಕಾರವಾಣಿಯಲ್ಲಿ ಕೇಳಿಬರುತ್ತದೆ.

* ಉಸ್ತಾದ ಸುದಾರ್‌ಖಾ ದಾಡೀ ಅವರು ಅಕಬರ ಬಾದಷಹನ ಸಮಕಾಲೀನರಾಗಿದ್ದಾರು. ಇವರ ಕಾಲಕ್ಕೆ ಭಗವಾನ್‌ದಾಸ್ ಎಂಬ ಹೆಸರಿನ ಇನ್ನೋರ್ವ ಸುಪ್ರಸಿದ್ಧ ಪಖಾವಜ್ ಕಲಾವಿದರಿದ್ದು ಸುಧಾರ್‌ಖಾ ದಾಢೀ ಹಾಗೂ ಬಗವಾನ್ದಾಸ್ ಈರ್ವರ ನಡುವೆ ಸ್ಪರ್ಧೆ ನಡೆದು ಸುಧಾರ್‌ಖಾ ದಾಢೀ ಅವರು ಸೋತುಹೋದರು. ನಿರಾಶೆಗೊಂಡು ಕೋಪದಿಂದ ಮನೆಗೆಬಂದು ತಮ್ಮ ಪಖಾವಜ್ ವಾದ್ಯವನ್ನು ಖಡ್ಗದಿಂದ ನಡುವೆ ತುಂಡರಿಸಿ ಇನ್ನೆಂದೂ ಪಖಾವಜ ಮೇಲೆ ಕಯ್ಯಾಡಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರಂತೆ. ಸಂಪೂರ್ಣ ಸಂಗೀತಕ್ಕೆ ತಮ್ಮನ್ನು ಸಮರ್ಪಿಸಿಕೊಂಡ ಅವರಲ್ಲಿಯ ಪ್ರತಿಭೆ ಅವರನ್ನು ಸುಮ್ಮನೆ ಕೂಡ್ರಲು ಕೊಡಲಿಲ್ಲ. ಕೊನೆಗೆ ತುಂಡರಿಸಿದ ಪಖಾವಜದ ಎರಡೂ ತುಂಡುಗಳನ್ನು ನಿಲ್ಲಿಸಿ ಅವುಗಳ ಮೇಲೆಯೇ ಭಾರಿಸತೊಡಗಿದರು. ಪಖಾವಜದ ಮೇಲೆ ನಿರಾಶೆಗೊಂಡು ಸುಧಾರಖಾ ದಾಢೀ ಅವರು ಹೀಗೆ ಹೊಸತೊಂದು ವಾದ್ಯವನ್ನು ಕಂಡುಹಿಡಿದರು. ಪಖಾವಜ್ ಬೋಲ್ ವರ್ಣಗಳಲ್ಲಿ ಬದಲಾವಣೆ ಮಾಡಿಕೊಂಡು ಹೊಸವಾದ್ಯದ ಮೇಲೆ ಭಾರಿಸತೊಡಗಿದರು. ಇದೇ ತಬ್ಲಾ ಎಂಬ ಹೆಸರಿನಿಂದ ಸುಪ್ರಸಿದ್ಧವಾಯಿತು ಮತ್ತು ಸಂಗೀತ ಪ್ರಪಂಚದಲ್ಲಿ ಕಲಾವಿದರಿಂದ ಪಂಡಿತರುಗಳಿಂದ ಮನ್ನಣೆಪಡೆದು ಜನಪ್ರಿಯವಾದ್ಯವಾಯಿತು. ಸುದಾರಖಾ ದಿಲ್ಲಿಯ ನಿವಾಸಿಗಳಾಗಿದ್ದರಿಂದ ಅವರ ತಬಲಾವಾದನ ಶೈಲಿಗೆ ದಿಲ್ಲಿ ಘರಾಣಾ ಎಂಬ ಹೆಸರು ಬಂತು. ತಬ್ಲಾ ವಾದನದಲ್ಲಿಯೂ ಘರಾನೆಗಳು ಅಸ್ತಿತ್ವದಲ್ಲಿದೆ. ಮುಖ್ಯವಾದ ಘರಾನೆಗಳಲ್ಲಿ,

೧. ಪೂರಬ್ ಬಾಜ್ ಘರಾನೆ

೨. ಫರೂಖಾಬಾದ್ ಘರಾನೆ

೩. ಅಜರಾಡಾ ಘರಾನೆ

೪. ಬನಾರಸ್ ಘರಾನೆ

ಅಡಿಟಿಪ್ಪಣಿ: * ತಬ್ಲಾವಾದನದ ಆವಿಷ್ಕಾರದ ಬಗೆಗಿರುವ ಲೇಖನವನ್ನಾಧರಿಸಿ.....

ದಿಲ್ಲಿ ಘರಾನೆಯ ಮೂಲದಿಂದಲೇ ಈ ಎಲ್ಲ ಘರಾನೆಗಳು ಹುಟ್ಟಿಕೊಂಡು ಬಂದಿವೆ. ತಬ್ಲಾದ ಮೇಲ್ಕಾಣಿಸಿದ ನಾಲ್ಕು ಘರಾನೆಗಳಿಗೆ ಹೊರತಾಗಿ ಪಂಜಾಬ್ ಘರಾನೆ ಎಂಬ ಘರಾನೆಯೂ ಇದ್ದು ಇದು ಮೇಲಿನ ನಾಲ್ಕು ಘರಾಣೆಗಳಿಗಿಂತಲೂ ವಿಶಿಷ್ಟವಾಗಿ ಹಾಗೂ ಸ್ವತಂತ್ರ್ಯ ಶೈಲಿಯ ತಬಲಾ ಘರಾನೆಯಾಗಿವೆ.

ತಬಲಾದ ವರ್ಣಗಳು : ತಬ್ಲಾದ ಮೇಲೆ ಬಾರಿಸಲಾಗುವ ಧಾ ದಿನ್ ಧಾ , ತಾ ಮುಂತಾದ ಅಕ್ಷರಗಳಿಗೆ ತಬ್ಲಾ ವರ್ಣಗಳೆನ್ನುವರು. ತಬ್ಲಾದಲ್ಲಿ ಇಂತ ಹತ್ತು ವರ್ಣಗಳಿದ್ದು ಅವುಗಳಲ್ಲಿಯ ಆರು ವರ್ಣಗಳು ತಬ್ಲಾದ ಮೇಲೆಯೂ ಎರಡು ವರ್ಣಗಳು ಡಗ್ಗಾದ ಮೇಲೆಯೂ ಮತ್ತು ಇನ್ನುಳಿದ ಎರಡು ವರ್ಣಗಳು ಏಕಕಾಲಕ್ಕೆ ತಬ್ಲಾ ಹಾಗೂ ಡಗ್ಗಾಗಳ ಮೇಲೆಯೂ ನುಡಿಸಲಾಗುತ್ತದೆ.

ತಾಲದ ಹತ್ತು ಪ್ರಾಣಗಳು : ಕಾಲೋ ಮಾರ್ಗಃ ಕ್ರಿಯಾಂಗಾನಿ ಗ್ರಹೋ ಜಾತಿಕಲಾಲಯಾಃ

ಯತಿ ಪ್ರಸ್ತಾರ ಕಶ್ಯೇತಿ ತಾಲ ಪ್ರಾಣಃ ದಶಮ್ಯೆತಾಃ

ಎಂಬಂತೆ ತಾಲದಲ್ಲಿ ಮಾರ್ಗ ಕ್ರಿಯಾ, ಅಂಗ, ಗ್ರಹ, ಜಾತಿ, ಕಲಾ , ಲಯ ಯತಿ, ಪ್ರಸ್ತಾರ ಎಂಬ ಹತ್ತು ವಿಶೇಷ ಗುಣಗಳಿವೆ. ಇವುಗಳನ್ನು ತಾಲದ ಪ್ರಾಣವೆಂದಿದ್ದಾನೆ. ಹಿಂದುಸ್ತಾನೀ ಸಂಗೀತ ಪದ್ಧತಿಗಿಂತ ಇದು ಕರ್ನಾಟಕ ಸಂಗೀತ ಪದ್ದತಿಯಲ್ಲಿ ಪ್ರಚಾರದಲ್ಲಿದೆ.


ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಅವನದ್ ವಾದ್ಯದ ಮಹತ್ವ ವಿಶೇಷವಾಗಿದೆ. ಈ ವಾದ್ಯಗಳನ್ನು ಕಟ್ಟಿಗೆ ಇಲ್ಲವೇ ಕೈಯಿಂದ ಬಾರಿಸುತ್ತಿದ್ದರು. ವೈದಿಕ ಕಾಲದಲ್ಲಿ ದುಂದುಬಿ , ಅದಂಬ, ಭೂಮಿದುಂದುಬಿ ಮತ್ತು ವಾಮಸ್ಪತಿ ಇತ್ಯಾದಿ ವಾದ್ಯಗಳು ಪ್ರಚಾರದಲ್ಲಿದ್ದವು. ಈಗಿನ ತಬಲಾದ ರೂಪವು ಸಂಬಾಲದ ಸುಧಾರಿತರೂಪ ಇರಬಹುದು ಎಂದು ಕಂಡುಬರುತ್ತದೆ. ಸಂಬಾಲ ಈ ವಾದ್ಯವು ಈಗಲೂ ಭಾರತೀಯರಲ್ಲಿ ಪ್ರಚಾರದಲ್ಲಿದೆ.

ಐತಿಹಾಸಿಕ ದೃಷ್ಟಿಕೋನದಲ್ಲಿ ಅವಲೋಕಿಸಿದಾಗ ಕ್ರಿ.ಶ. ೧೧ ನೇ ಶತಮಾನದಲ್ಲಿ ಮುಸಲ್ಮಾನರು ಭಾರತವನ್ನು ಪ್ರವೇಶಿಸಿದರು. ಅಂದು ಪಾರಸಿಯ ಜನರಲ್ಲಿ ಪ್ರಚಾರದಲ್ಲಿದ್ದ ತಬ್ಲಾ ವಾದ್ಯದ ಆಧಾರವನ್ನು ತೆಗೆದುಕೊಂಡು ಮುಸಲ್ಮಾನರು ತಬ್ಲ ಶಬ್ದಕ್ಕೆ ತಬಲಾ ಎಂದು ಕರೆದರು. ಪಾರ್ಶಿಯ ತಬ್ಲದ ಆಧಾರದ ಮೇಲೆ

ತಬಲಾ ವಾದ್ಯದ ನಿರ್ಮಾಣವಾಯಿತೆನ್ನಲಾಗಿದೆ.

ಪಾಶ್ಚಾತ್ಯ ವಿದ್ವಾಂಸ ಮಿಃ ಸ್ಟೇಟೋ ಇವರ ಹೇಳಿಕೆಯ ಮೇರೆಗೆ India is the first for Origin of Music. The names such Nabala and other likewise are taken from barbanions tongues. ಅಂದರೆ ಸಂಗೀತದ ಆವಿಷ್ಕಾರವನ್ನು ಭಾರತವೇ ಮೊದಲು ಪಡೆದುದಾಗಿದೆ. ನಬಲಾ ಎಂಬ ವಾದ್ಯವು ಏಶಿಯಾ ಖಂಡದ ಕಾಡು ಜನರಲ್ಲಿ ಪ್ರಚಾರದಲ್ಲಿತ್ತು. ಈ ನಬಲಾ ವಾದ್ಯಕ್ಕೆ ತಬಲಾ ಎಂದಿರಬೇಕೆಂದು ನಂಬಲಾಗಿದೆ. ಇನ್ನೊಬ್ಬ ವಿದ್ವಾಂಸರ ಪ್ರಕಾರ ಅಕ್ಬರನ ಕಾಲದಲ್ಲಿದ್ದ ಸುಧಾರಖಾನ್‌ರಿಂದ ಆವಿಷ್ಕಾರ ಆಯಿತೆನ್ನಲಾಗಿದೆ. ಇವರೆ ಮುಂದೆ ತಬ್ಲಾ ಶಾಸ್ತ್ರ ವಿಕಾಸ ಮಾಡಿರುವುದು ತಿಳಿದು ಬರುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಅನೇಕ ತಬಲಾ ವಿದ್ಯಾಲಯಗಳು, ತಬಲಾ ಕಲಾಕಾರರು ಸೃಷ್ಟಿಯಾಗುತ್ತಲಿದ್ದಾರೆ. ಸಂಗೀತದ ಹಾಗೂ ಇತಿಹಾಸದ ತಿಳುವಳಿಕೆಯನ್ನು ಮಾಡಿಕೊಂಡು ತಬಲಾ ಅಭ್ಯಾಸ ಮಾಡಿದಾಗ ಅದೊಂದು ಉತ್ತಮ ಅಧ್ಯಯನವಾಗುವದು.



ತಬಲಾ ಡಗ್ಗಾ

ತಬಲಾ: 1) ಶಾಹಿ (ಮಶಿ) 2) ಒಳ (ಮೈದಾನ) 3) ಕಿನಾರೆ (ಚಾಟು) ಹಾಗೂ ಗಜ್ಜ 4) ಕಳಶ 5) ವಾದಿ (ಬಾರ್) 6) ಗಠ್ಠ 7) ತಳದ ಬಳೆ
ಡಗ್ಗಾ: 1) ಮೈದಾನ್ 2) ಶಾಹಿ 3) ಕಳಶ ಹಾಗೂ ಬಾರ್

ಸಂಗೀತದಲ್ಲಿ ತಾಲ ಲಯಗಳ ಮಹತ್ವ

ಸಂಗೀತದಲ್ಲಿ ಸ್ವರ ಮತ್ತು ಲಯಗಳು ಬಹುಮಹತ್ವದ ಅಂಶಗಳಾಗಿವೆ. "ಶ್ರುತಿರ್ಮಾತಾ ಲಯಃ ಪಿತಃ" ಎಂದು ಹೇಳುವಂತೆ ಶ್ರುತಿ ಮತ್ತು ಲಯಗಳು ಸಂಗೀತದಲ್ಲಿ ಬಹುಮಹತ್ವದ ಅಂಶಗಳಾಗಿವೆ. ಇವು ಸಂಗೀತವೆಂಬ ಮನೆತನಕ್ಕೆ ತಾಯಿತಂದೆಗಳಿದ್ದಂತೆ. ಸಂಗೀತದಲ್ಲಿಯ ರಂಜಕತೆಯೂ ಈ ಎರಡು ಅಂಶಗಳನ್ನೇ ಅವಲಂಬಿಸಿದ್ದು ತಾಲ ಮತ್ತು ಶ್ರುತಿಗಳ ಪರಿಪೂರ್ಣ ಜ್ಞಾನವು ಮೊಕ್ಷ ಮಾರ್ಗಕ್ಕೆ ಹೆದ್ದಾರಿಯಾಗಿದೆ. ಯಜ್ಞವಲ್ಕ್ಯ ಸ್ಮೃತಿ ತಿಳಿಸುವಂತೆ

೧* ವೀಣಾವಾದನ ತತ್ವಜ್ಞ ಶ್ರುತಿ ಜಾತಿ ವಿಶಾರದಃ

ತಾಲಜ್ಞಶ್ಚಾ ಪ್ರಯಾಸೇನ ಮೋಕ್ಷಮಾರ್ಗ ಸಗಚ್ಛತಿ

ಅಂದರೆ ತಾಲ ಹಾಗೂ ಶ್ರುತಿಗಳ ಪರಿಪೂರ್ಣ ಜ್ಞಾನವು ಮೋಕ್ಷ ಮಾರ್ಗಕ್ಕೆ ಹೆದ್ದಾರಿಯಾಗಿದೆ. ಈ ಮಾತು ಸಂಗೀತದಲ್ಲಿ ತಾಲ ಹಾಗೂ ಶ್ರುತಿಗಳ ಮಹತ್ವವನ್ನು ಎತ್ತಿ ತೋರಿಸುತ್ತದೆ.

೨* ತಾಲಕ್ಕೆ ಮೂಲ ಲಯವೇ ಆಧಾರವಾಗಿದೆ. ಈ ತಾಲ ಲಯದ ಆಧಾರದಮೇಲೆಯೇ ಇಡೀ ವಿಶ್ವಜೀವನವೇ ನಿಂತಿದೆ. ಗ್ರಹಗ್ರಹಗಳ ಬ್ರಮಣ ಗತಿಗಳಲ್ಲಿ ಕಿಂಚಿತ್ ವ್ಯತ್ಯಾಸವಾದರೂ ಸ್ವಲ್ಪ ಹೆಚ್ಚು ಕಡಿಮೆಯಾದರೂ ಪ್ರಳಯವೇ ಆಗುತ್ತದೆ. ಅಂತೆಯೇ ತಾಲ, ಲಯ, ಶ್ರುತಿಗಳಿಲ್ಲದ ಸಂಗೀತ ಪ್ರಳಯ ಗೀತವಾಗುವುದರಲ್ಲಿ ಸಂಶಯವಿಲ್ಲ. ಈ ಸೃಷ್ಟಿಯ ಹುಟ್ಟಿನೊಂದಿಗೆ ಮೂಲವಾಗಿ ಲಯವು ಹುಟ್ಟಿಕೊಂಡು ಸಾಗಿ ಬಂದು ಈ ವಿಶ್ವ ಜೀವನವನ್ನೇ ತಾಲ ಹಾಗೂ ಲಯಗಳಲ್ಲಿ ನಡೆಸುತ್ತದೆ.

ಜಗತ್ತಿನ ಪ್ರತಿಯೊಂದು ವಸ್ತುವಿನ ಗತಿಯಲ್ಲಿ ಲಯವಿದೆ. ಪ್ರತಿಯೊಂದು ವಸ್ತು ಹುಟ್ಟುತ್ತಲೂ ಆ ವಸ್ತುವಿನಲ್ಲಿ ಕಾಲದ ಒಂದು ಸಮ್ಮಿಶ್ರಣವು ಉಂಟಾಗುತ್ತದೆ. ನಾವು ನಡೆದಾಡುವಾಗ ನಮಗೆ ಅರಿವಿಲ್ಲದಂತೆಯೇ ಈ ತಾಲ ಲಯಗಳ ಹಿತಮಿತ ಬಳಕೆಯು ನಮ್ಮ ಇಡೀ ಜೀವನದುದ್ದಕ್ಕೂ ನಡೆದಿರುತ್ತದೆ. ಇದರಲ್ಲಿ ಕಿಂಚಿತ್ ವ್ಯತ್ಯಾಸವಾದರೂ ನಾವು ಕುಂಟುತ್ತೇವೆ. ಹಾಗೆಯೇ ಒಂದು ಶಬ್ದೋಚ್ಚಾರಣೆಯಲ್ಲಿಯ, ಅಕ್ಷರಾಕ್ಷರಗಳಲ್ಲಿಯ

ಅಡಿಟಿಪ್ಪಣಿಃ ೧* ಯಜ್ಞವಲ್ಕ್ಯ ಸ್ಮೃತಿಯ ಶ್ಲೋಕವನ್ನಾಧರಿಸಿ ......
೨* ಪ್ರೊ. ಎ. ಯು. ಪಾಟೀಲರು ಸಂಗೀತದಲ್ಲಿ ತಾಲಲಯಗಳ ಮಹತ್ವವನ್ನು ಸಂಗೀತಶಾಸ್ತ್ರ ದರ್ಪಣದಲ್ಲಿ ವಿವರಿಸುತ್ತಾ .....

ಅಂತರದಲ್ಲಿ ಲಯವು ಹೊಯ್ದಾಡಿದಾಗ ಶಬ್ದಾರ್ಥಕ್ಕೆ ಕೊಡಲಿಯ ಏಟು ಬಿದ್ದು ಎಲ್ಲವೂ ಅನರ್ಥವಾಗುತ್ತದೆ. ಸಾಮಾನ್ಯವಾಗಿ ನಮ್ಮ ಜೀವನದ ತಾಲವೇ ತಪ್ಪಿದಂತಿದೆ ಎನ್ನುತ್ತೇವೆ. ಈ ಮಾತಿನಲ್ಲಿ ಆಳವಾದ ಅರ್ಥ ಹುದುಗಿದ್ದು ಮಾನವನ ಜೀವನದಲ್ಲಿಯ ತಾಲ-ಲಯದ ಮಹತ್ವವನ್ನು ಎತ್ತಿತೋರಿಸುತ್ತದೆ.

*ರಂಜಕತೆಯ ದೃಷ್ಟಿಯಿಂದ ನಾವು ಸಂಗೀತದಲ್ಲಿ ಲಯವನ್ನು ಒಂದು ನಿಶ್ಚಿತ ಮಾತ್ರೆಗಳ ಗಣನೆಯಿಂದ ಕಾಲಚಕ್ರದಲ್ಲಿ ಬಂದಿಸುತ್ತೇವೆ. ಈ ಗಣನೆಯ ಮಾಪನಕ್ಕೆ ತಾಲ ಎನ್ನಲಾಗಿದೆ. ರಾಗಾಲಾಪನೆಯನ್ನು ತಾಲವು ಒಂದು ಖಚಿತ ನಿಟ್ಟುಗಳಿಗೆ ಒಳಪಡಿಸಿದಾಗ ರಾಗದ ಭಾವರಸ ಪ್ರವಾಹವು ಒಂದು ಖಚಿತ ಲಯದ ಗತಿಯಲ್ಲೇ ನಡೆದು ರಾಗದ ರಂಜಕತೆಯನ್ನು ವರ್ಧಿಸುತ್ತದೆ.

ಲಯವು ಸಂಗೀತದ ಪ್ರಾಣವಾಗಿದೆ. ಈ ಲಯದ ವಿಶಿಷ್ಟ ಗತಿಗಳನ್ನು ತಾಲದಲ್ಲಿ ಬಂದಿಸಿ ಕಲಾವಿದನು ರಾಗ, ಸ್ವರವಿಸ್ತಾರದ ಭಾವಮಂದಿರವನ್ನು ಕಟ್ಟುತ್ತಾನೆ. ರಾಗ ರಚನಾಕ್ರಮವು ವಿಶ್ವಸಂಗೀತಕ್ಕೆ ಭಾರತೀಯ ಹೆಮ್ಮೆಯ ಕೊಡುಗೆಯಾಗಿದ್ದು ತಾಲವು ಈ ರಚನಾಕ್ರಮದ ಪ್ರಾಣವಾಗಿದೆ. ಕಂಠ ಸಂಗೀತದಲ್ಲಿಯಂತೆ ತಂತಿವಾದ್ಯ ಮತ್ತು ನೃತ್ಯಕಲೆಗಳಲ್ಲಿಯೂ ತಾಲವು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಸಿತಾರದಲ್ಲಿ ಗತ್, ಜೋಡ, ಜಾಲ ಮತ್ತು ನೃತ್ಯಕಲೆಯ ತತ್ಕಾರ ಮತ್ತು ಪರನ್, ಬೋಲ್ಬಾವ ಮುಂತಾದವುಗಳು ತಾಲ ಲಯದ ಅತ್ಯಂತ ನಿಕಟವರ್ತಿಯಾದ ಅಂಗಾಂಶಗಳಾಗಿವೆ.

ಹೀಗೆ ನಾವು ಸಂಗೀತದ ಯಾವುದೇ ಪ್ರಕಾರವನ್ನು ಪರಿಶೀಲಿಸಿದರೆ ನಮಗೆ ತಾಲ ಹಾಗೂ ಲಯಗಳು ಸಂಗೀತದ ಅವಿಭಾಜ್ಯ ಅಂಗಗಳೆಂದು ಮೊದಲಿನಿಂದಲೂ ಮನ್ನಿಸಲ್ಪಡುತ್ತ ಬಂದುದನ್ನು ನಾವು ಕಾಣುತ್ತೇವೆ. ಬಜನ್ ಗೀತ , ಕೀರ್ತನ, ಜಾನಪದ ಗೀತಗಳ ಪ್ರಕಾರಗಳಲ್ಲಿ ಡೋಲಕ್, ಖಜರಿ, ಝಾಂಝು, ಕರತಲಾದಿಗಳ ಮುಖಾಂತರ ಭಾವರಸವು ಸಮರ್ಥ ರೀತಿಯಲ್ಲಿ ವ್ಯಕ್ತವಾಗುತ್ತದೆಂಬ ಅಂಶವು ಅನುಭವದ ಮಾತಾಗಿದೆ.

ಸಂಗೀತವು ಮಾನವನ ಜೀವನದ ಅವಿಭಾಜ್ಯ ಅಂಗವೂ ಆಗಿದೆ. ಜೀವನದ ಅನೇಕ ಅನುಭವಗಳು ಮೇಲಿನ ಮಾತನ್ನು ಸಮರ್ಥಿಸುತ್ತದೆ. ಸಂಗೀತದ ದೃಷ್ಟಿಯಲ್ಲಿ ತಾಲ ಲಯಗಳು ಗಾಯನದ ಹಾಗೂ ವಾದನದ ಅವಿಭಾಜ್ಯ ಅಂಗವಾಗಿದೆ.

ಅಡಿಟಿಪ್ಪಣಿ: * ಪ್ರೊ. ಎ.ಯು. ಪಾಟೀಲರು ತಾಲಲಯಗಳ ಮಹತ್ವವನ್ನು ಸಂಗೀತಶಾಸ್ತ್ರ ದರ್ಪಣದಲ್ಲಿ ವಿವರಿಸುತ್ತಾ .....

ಅಧ್ಯಾಯ ೨೧

ಉತ್ತರಕನ್ನಡ ಜಿಲ್ಲೆಯ ಪ್ರಮುಖ ಪತ್ರಿಕೆಗಳು
ಆಕಾಶವಾಣಿ, ದೂರದರ್ಶನದ ಮರುಪ್ರಸಾರಕೇಂದ್ರಗಳು

ಉತ್ತರಕನ್ನಡ ಜಿಲ್ಲೆಯ ಪ್ರಮುಖ ಪತ್ರಿಕೆಗಳು

ಕಲೆ, ಸಾಹಿತ್ಯಗಳ ಕ್ಷೇತ್ರದಲ್ಲಿ ವಿಮರ್ಶೆಗೆ ಹಿರಿಯ ಸ್ಥಾನವಿದೆ. ನಾಟಕವಿರಲಿ, ನರ್ತನ ಇರಲಿ, ಸಂಗೀತವೇ ಇರಲಿ ಅದನ್ನು ತೂಗಿನೋಡಿ ಬೆಲೆಕಟ್ಟುವವನು ವಿಮರ್ಶಕ. ಸಂಗೀತಗಾರರೇ ಇರಲಿ ಸಾಹಿತಿಗಳೇ ಇರಲಿ ಇವರುಗಳ ಪ್ರದರ್ಶನಗಳ ಬಗೆಗೆ ಬಂದಿರುವ ವಿಮರ್ಶಕನ ಮೆಚ್ಚುಗೆಗಳಿಸಲು ಇವರ ತವಕ ಇದ್ದದ್ದೆ. ವಿಮರ್ಶಕ ವ್ಯಕ್ತಿ ನಿಷ್ಠನಾಗದೇ ವಸ್ತುನಿಷ್ಠನಾದಾಗ ಮಾತ್ರ ಒಳ್ಳೆಯ ವಿಮರ್ಶೆಯನ್ನು ಬರೆಯಬಹುದು.

* ಶಾಸ್ತ್ರೀಯ ಕಲೆ ಸಾಹಿತ್ಯಗಳ ಪರಿಜ್ಞಾನ, ಸಮಕಾಲೀನ ಪ್ರಜ್ಞೆ, ಇತಿಹಾಸದ ಅರಿವು, ಇತರ ಕಲಾಕಾರರ ಪರಿಚಯ ಮುಂತಾದ ವಿಷಯಗಳು ವಿಮರ್ಶಕನಿಗೆ ಇರಲೇಬೇಕು. ಈ ಬಗೆಯ ವಿದ್ವತ್ತು ಬಹಳ ಕಡಿಮೆಯೇ ಎಂದರೆ ತಪ್ಪಿಲ್ಲ. ಆದ್ದರಿಂದಲೇ ಶ್ರೇಷ್ಠ ವಿಮರ್ಶಕರ ಸಂಖ್ಯೆ ಚಿಕ್ಕದು ಎನ್ನಬಹುದು. ಪತ್ರಿಕೆಗಳಲ್ಲಿ ನಿಯತಕಾಲಿಕಗಳಲ್ಲಿ ವಿಮರ್ಶೆಗಳು ಯಾವಾಗಲೂ ಪ್ರಕಟವಾಗುತ್ತದೆ. ಇವುಗಳಲ್ಲಿ ಕೃತಿಯನ್ನು ಅಭ್ಯಸಿಸಿ ಬರೆದ ವಿಮರ್ಶೆಗಳೂ ಇರುತ್ತವೆ ಮತ್ತು ಬರಿಯ ಹೊಗಳಿಕೆಯಿಂದ ಕೂಡಿದ ವಿಮರ್ಶೆ ಇಲ್ಲವೇ ಬರೀ ತೆಗಳಿಕೆಯಿಂದ ಕೂಡಿದ ವಿಮರ್ಶೆಗಳೂ ಇರುತ್ತವೆ. ಮುಖ್ಯವಾಗಿ ಎಲ್ಲ ವಿಮರ್ಶಕರಲ್ಲೂ ಬೇಕಾದ ಗುಣ ಸಹೃದಯತೆ, ಹಾಗೆ ನೋಡಿದರೆ ಸಹೃದಯತೆ ಎಲ್ಲರಲ್ಲೂ ಇರಬೇಕು. ಸಹೃದಯರಾದ ಪ್ರೇಕ್ಷಕರು, ಸಹೃದಯರಾದ ಶ್ರೋತೃಗಳು, ಸಹೃದಯರಾದ ವಾಚಕರು, ಎಂದೆಲ್ಲ ಹೇಳುವುದಿಲ್ಲವೆ ? ಅಂತೆಯೇ ವಾಸ್ತವವಾಗಿ ಸಹೃದಯತೆ ಸಂಸ್ಕಾರದ ಲಕ್ಷಣ ಕೂಡ.

ಒಳ್ಳೆಯ ವಿಮರ್ಶಕನಿಂದಲೂ ಒಮ್ಮೊಮ್ಮೆ ತಪ್ಪು ಸಂಭವಿಸಬಹುದು. ನೋಡುವ ದೃಷ್ಟಿ ದೋಷಪೂರ್ಣವಾಗಿ ಮೂಲಕೃತಿ ಪರಂಪರೆಯ ಅರಿವಿಲ್ಲದೆಯೇ ಆತ ಅಪಚಾರ ಎಸಗಬಹುದು. ಕೆಲ ವಿಮರ್ಶಕರು ತಮ್ಮ ಬರವಣಿಗೆಯಿಂದ ಇತಿಹಾಸಕಾರರ ಮಟ್ಟಕ್ಕೆ ಏರಬಹುದು. ಉದಾಹರಣೆಗೆ ಖ್ಯಾತ ಕಲಾ ವಿಮರ್ಶಕ ಸಿಂಹಳೀಯ ಆನಂದ ಕುಮಾರ ಸ್ವಾಮಿ ಇವರು ಅಗ್ನೇಯ ಏಷ್ಯದ ರಾಷ್ಟ್ರಗಳ ಅದರಲ್ಲೂ ಇಡೋನೇಶಿಯಾದ ಕಲೆ ಬೆಳಕಿಗೆ ಬಂದದ್ದು ಇವರ ಹರಿತವಾದ ಬರವಣಿಗೆಯ ಮೂಲಕವೇ ಎನ್ನಬಹುದು.

ಸಹೃದಯತೆಯಿಂದ ಮಾತ್ರ ಕಲಾವಿದನ ಬದುಕು ಹಸನವಾಗುತ್ತದೆ. ಎನ್ನುವುದಕ್ಕೆ ರವೀಂದ್ರರ ದೃಷ್ಟಾಂತ ನಮ್ಮ ಮುಂದಿದೆ. ರವೀಂದ್ರನಾಥ ಠಾಕೋರರು ತಮ್ಮ ಗೀತಾಂಜಲಿಯ ಇಂಗ್ಲೀಷ ಭಾಷಾಂತರದ

ಅಡಿಟಿಪ್ಪಣಿ : * ಲೇಖಕರ ವಿಚಾರವನ್ನಾಧರಿಸಿ ......

ಹಸ್ತಪ್ರತಿಯೊಡನೆ ಇಂಗ್ಲೆಂಡಿಗೆ ಹೋದರು. ಸ್ನೇಹಿತ ರೊಥೆನ್‌ಸ್ಟೀನ್‌ಗೆ ಅದನ್ನು ಕೊಟ್ಟರು. ಆತ ಅದನ್ನು ತನ್ನ ಕವಿಮಿತ್ರರಾದ ಯುವಕ ಯೇಟ್ಸ (yeats) ಗೆ ದಾಟಿಸಿದ. ಯೇಟ್ಸ ಹಸ್ತಪ್ರತಿಯನ್ನೋದಿ ಸಂತೋಷಪಟ್ಟ.

ನಾನು ಜೀವನದುದ್ದಕ್ಕೂ ಕನಸು ಕಾಣುತ್ತಿದ್ದ ಜಗತ್ತನ್ನು ಈ ಗೀತೆಗಳು ತೋರಿಕೊಡುತ್ತವೆ. ಅಂದು ರೊಥೆನ್ಸಸ್ಟೀನ್‌ನ ಮನೆಯಲ್ಲಿ ಸಹೃದಯಗೋಷ್ಠಿ ನಡೆಯಿತು. ಗೀತಾಂಜಲಿಯನ್ನು ಯೇಟ್ಸ ರಾಗವಾಗಿ ತನ್ನ ಮದುರ ಕಂಠದಿಂದ ಓದಿದ ಎಜ್ರಾ ಪೌಂಡ್ ನೆರದಿದ್ದ ಯುವಕರಲ್ಲಿ ಒಬ್ಬವ. ಹೀಗೆ ಆರಂಭವಾದ ಮೆಚ್ಚುಗೆಯ ಅಲೆ ನೋಬೆಲ್ ಪಾರಿತೋಷಕ ಸಮಿತಿಯವರೆಗೆ ಮುಟ್ಟಿತು. ಪ್ರಪ್ರಥಮ ಬಾರಿಗೆ ಏಷ್ಯಾ ಖಂಡದ ಒಬ್ಬ ಕವಿಗೆ ನೋಬೆಲ್ ಪಾರಿತೋಷಕ ಪ್ರಾಪ್ತವಾಯಿತು.

ಒಳ್ಳೆಯ ವಿಮರ್ಶೆಯಿಂದ ಕಲಾವಿದರು, ಸಾಹಿತಿಗಳಿಗೆ ಮಾತ್ರವಲ್ಲ, ಸಾಮಾನ್ಯರಿಗೂ ಲಾಭವಿದೆ. ಸಮಾಜದಲ್ಲಿ ಸದಬಿರುಚಿ ಮಾಡಲು ಅಂಥಹ ವಿಮರ್ಶೆ ಕಾರಣವಾಗುತ್ತದೆ. ಕಲಾವಿದರು, ಸಾಹಿತಿಗಳು ಸ್ವತಹ ತಮ್ಮ ಕೃತಿಗಳ ಬಾಗೆಗಿನ ವಿಮರ್ಶನಶಕ್ತಿ ಬೆಳೆಸಿಕೊಂಡರೆ ಅವರ ಕೃತಿಗಳು ಉತ್ತಮವಾಗುತ್ತದೆ. ಸಂಗೀತಗಾರ ತನ್ನ ಸಂಗೀತದ ಮೊದಲ ಶ್ರೋತೃ ತಾನಾದಾಗ ಮಾತ್ರ ಆತನ ಹಾಡು ಸುಧಾರಿಸುತ್ತದೆ. ಒಳ್ಳೆಯ ವಿಮರ್ಶಕರು ಆ ಕೃತಿಗಳ ವಿಮರ್ಶೆ ಮಾಡಿದಾಗ ಮತ್ತು ಮೌಲ್ಯ ಮಾಪನ ಮಾಡಿದರೆ ಕಲೆ ಸಾಹಿತ್ಯಗಳ ಪ್ರಗತಿಗೆ ಅಂಥಹ ವಿಮರ್ಶೆ ಸಹಾಯಕವಾಗುತ್ತದೆ.

ಹಿಂದೆ ದೇವಸ್ಥಾನದಲ್ಲೊ ರಾಜನ ಆಸ್ಥಾನದಲ್ಲೊ ನರ್ತನ ಹಾಗೂ ಗಾಯನ ಏರ್ಪಟ್ಟಾಗ ಅದನ್ನು ನೋಡಿ ಆನಂದಿಸುವ ಜನರ ಸಂಖ್ಯೆ ಸೀಮಿತವಾಗಿರುತ್ತಿತ್ತು . ಆದರೆ ಈಗ ಹಾಗಲ್ಲ ಚಂದ್ರನ ಮೇಲಿನ ಮಾನವನ ನರ್ತನವನ್ನು ಭೂಲೋಕದ ಕೋಟ್ಯಾಂತರ ಜನರು ಟೆಲಿವಿಷನ್ ಮೂಲಕ ನೋಡಬಹುದು. ಹಿಂದೆ ಗಾಯನ ಗಾಯಕನೊಂದಿಗೆ ಮರೆಯಾಗುತ್ತಿತ್ತು. (ನೆನಪನ್ನು ಮಾತ್ರ ಉಳಿಸಿ) ಈಗ ವಿಜ್ಞಾನದ ನೆರವಿನಿಂದ ಯಾವ ಧ್ವನಿಯನ್ನು ಬೇಕಾದರೂ ಸೆರೆಹಿಡಿಯಬಹುದು. ರಾಗತರಂಗಗಳನ್ನು ಧ್ವನಿಸುರುಳಿಯ ಮೂಲಕ ಬಂದಿಸಿ ಅದನ್ನು ಅಜರಾಮರವಾಗಿ ಇಡಬಹುದು. ಉತ್ತಮ ಕಲಾಕಾರರ ಕೃತಿಗಳನ್ನು ರಕ್ಷಿಸಿ, ಉಳಿಸುವುದು ಅವಶ್ಯವಾಗಿದೆ. ಅಂತೆಯೇ ಉತ್ತಮ ಕಲಾಕಾರರ ಸಂಗೀತಕ್ಕೆ ಒಳ್ಳೆಯ ಪ್ರಚಾರವನ್ನು ಪತ್ರಿಕೆಗಳು

ಸಂಘ ಸಂಸ್ಥೆಗಳು ಕೊಟ್ಟು ಅದನ್ನು ಪೋಷಿಸಿದಾಗ ಮಾತ್ರ ಅಂತಹ ಸಂಗೀತ, ಕಲಾಕೃತಿ ಬೆಳೆದು ಉಳಿಯಲು ಸಾಧ್ಯ.

ಉತ್ತರ ಕನ್ನಡ ಜಿಲ್ಲೆಯ ಅನೇಕ ದಿನಪತ್ರಿಕೆಗಳು ಸಂಗೀತ, ಸಾಹಿತ್ಯದ ಬಗೆಗೆ ಉತ್ತಮವಾದ ಲೇಖನವನ್ನು ಪ್ರಕಟಿಸುತ್ತವೆ. ಜನಸಾಮಾನ್ಯರ ತಿಳುವಳಿಕೆಗೆ ನೀಟಕುವಂತೆ ಸುದ್ದಿ ಮಾಧ್ಯಮದಲ್ಲಿ ಸರಳ ಸುಂದರ ಶೈಲಿಯಲ್ಲಿ ಲೇಖನವನ್ನು ಪ್ರಕಟಿಸುತ್ತವೆ. ಜಿಲ್ಲೆಯ ದಿನಪತ್ರಕೆಗಳಲ್ಲಿ ಮುಖ್ಯವಾಗಿ ಸಂಗೀತದ ಸಾಹಿತ್ಯದ ಬಗೆಗೆ ಲೇಖನಗಳನ್ನು ಪ್ರಕಟಿಸಿ, ಶ್ರೋತ್ರುಗಳಿಗೆ ಸಂಗೀತ, ಸಾಹಿತ್ಯಗಳ ಜ್ಞಾನ ವರ್ದನೆಗೆ ಸಹಾಯಕಾರಿಯಾಗುತ್ತಲಿವೆ.

ಉತ್ತರಕನ್ನಡ ಜಿಲ್ಲೆಯ ಪ್ರಮುಖ ದಿನಪತ್ರಿಕೆಗಳು.

೧. ಜನಮಾಧ್ಯಮ

೨. ಲೋಕಧ್ವನಿ

೩. ಧ್ಯೇಯನಿಷ್ಟ ಪತ್ರಕರ್ತ

೪. ಆಚಾರ

೫. ಕರಾವಳಿ ಮುಂಜಾವು

೬. ಮುನ್ನಡೆ

೭. ನಾಗರಿಕ ವಾರಕ್ಕೊಮ್ಮೆ ಪ್ರಕಟವಾಗುತ್ತಿರುವ ಪತ್ರಿಕೆ ಮುಂತಾದವುಗಳು ಪ್ರಮುಖವಾಗಿವೆ.

ಒಂದು ಗಾದೆಮಾತಿದೆ. ಸಾಹಿತ್ಯದ ಬಗೆಗೆ ಸಂಗೀತ ಮತ್ತಿತರ ಕಲೆಗಳ ಬಗೆಗೆಗ ಏನನ್ನೂ ತಿಳಿಯದವನು ಬಾಲ, ಕೋಡುಗಳಿಲ್ಲದ ಪ್ರಾಣಿಯೇ ಸರಿ. ಬರೀ ಪ್ರಾಣಿ ಅಲ್ಲ ಬಾಲವಿಲ್ಲದ ಕೋಡುಗಳಿಲ್ಲದ ಪ್ರಾಣಿ. ಆಡುವ ಮಾತು ಮಾನಸಿಕ ಅನುಭವದ ಸಂಕೇತ. ಬರೆಯುವ ಪದ ಆಡುವ ಮಾತಿನ ಸಂಕೇತ. ಇಂದು ಗ್ರೀಕ ಕಲ್ಪನೆ ಬರಹದ ರೂಪದಲ್ಲಿ ಕಂಡುಬರುವ ಪದದ ಮಹತ್ವವನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಬರಹ ಬೇರೆ, ಸಾಹಿತ್ಯಬೇರೆ, ಸಂಗೀತ ನೃತ್ಯ , ಚಿತ್ರಕಲೆ , ಶಿಲ್ಪ, ವಾಸ್ತುಶಿಲ್ಪಗಳಿಗೆ ತಮ್ಮದೇ ಆದ ಖಚಿತ ಭಾಷೆಗಳಿವೆ. ಇಡುವ ಹೆಜ್ಜೆ ಮೀಟುವ ತಂತಿ ಬರೆಯುವಲೇಖನ, ಜೋಡಿಸುವ ಇಟ್ಟಿಗೆ, ಬಾಣದ ಏಟು ಇವು ನಿರ್ದಿಷ್ಟ ಫಲ

ನೀಡುತ್ತದೆ. ಆದರೆ ಸಾಹಿತ್ಯದಲ್ಲಿ ಅಕ್ಷರ ಪದಗಳನ್ನು ಬೇರೆ ಬೇರೆ ಉದ್ದೇಶಗಳಿಗಾಗಿ ಬಳಸುತ್ತಾರೆ. ಜನರ ಭಾಷೆಯ ಪ್ರಯೋಜನ ಒಂದಲ್ಲ ಹಲವು. ಆ ಭಾಷೆಯನ್ನು ಉಪಯೋಗಿಸಿ ಸಾಹಿತ್ಯ ಸೃಷ್ಟಿಸಬೇಕು. ಮನುಷ್ಯ ಮಾತನಾಡಲು ಕಲಿತಂದಿನಿಂದಲೂ ಒಂದು ಬಗೆಯ ಸಾಹಿತ್ಯ ಸೃಷ್ಟಿಯಾಗಿರಲೇ ಬೇಕು. ಅಜ್ಜಿ ಮೊಮ್ಮಗನಿಗೆ, ತಾಯಿ ಕಂದನಿಗೆ ಹೇಳಿರುವ ಕಥೆಗಳು, ಅವರು ಹಾಡಿರುವ ಸೋಭಾನ ಪದ ಲಾಲೀಪದಗಳೆಲ್ಲ ಸಾಹಿತ್ಯವೇ. ಆ ಬಗೆಯ ಜಾನಪದ ಸಾಹಿತ್ಯದ್ದು ಪ್ರಾಚೀನ ಪರಂಪರೆ ಸಾಹಿತ್ಯಕೃತಿ ಜನರ ಗಮನ ಸೆಳೆಯುವುದು ಬರಹ ರೂಪದಲ್ಲಿ ಮುಖ್ಯವಾಗಿ ಪುಸ್ತಕರೂಪದಲ್ಲಿ ಪ್ರಕಟವಾದಾಗ ಎನ್ನಬಹುದು. ಪ್ರಾಚೀನ ಕಾಲದಿಂದ ಈಗಿನವರೆಗೆ ಗ್ರಂಥಗಳೆಂದರೆ ಜನರಿಗೆ ಕುತೂಹಲ ಮತ್ತು ಭಕ್ತಿ. ಈ ಪುಸ್ತಕಗಳು ಬರಹಗಳು, ಸಾಮಾನ್ಯ ಮನುಷ್ಯರ ಮೇಲಷ್ಟೇ ಅಲ್ಲ ಮಾನವ ಶ್ರೇಷ್ಟರ ಮೇಲೂ ಪ್ರಭಾವ ಬೀರಬಲ್ಲದು. ' ಅನ್ ಟು ದಿ ಲಾಸ್ಟ' ಗಾಂದೀಜಿಯವರಿಗೆ ಮಾರ್ಗದರ್ಶನ ಮಾಡಿದ ಪುಟ್ಟ ಪುಸ್ತಕ, ಈ ಜಗತ್ತಿನಲ್ಲಿ ಒಳ್ಳೆಯ ಜೊತೆಗಾರರ ಅಭಾವವನ್ನು ಒಳ್ಳೆಯ ಪುಸ್ತಕ ತುಂಬಿಕೊಡುತ್ತದೆ ಎಂದು ಮಹಾತ್ಮಾಗಾಂದಿ ಹೇಳಿದ್ದಾರೆ. ಜನನಾಯಕ, ವಿಜ್ಞಾನಿ ಸಂಗೀತಗಾರ, ಸಾಹಿತಿ, ಹೀಗೆ ಎಲ್ಲರನ್ನೂ ಮರಳುಗೊಳಿಸಿರುವ ಮಂತ್ರಶಕ್ತಿ ಪುಸ್ತಕದಲ್ಲಿದೆ.

ಉತ್ತರಕನ್ನಡ ಜಿಲ್ಲೆಯ ಬಹುತೇಕ ಪತ್ರಿಕೆಗಳು ಇಲ್ಲಿನ ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೂ ಒಂದು ಅಂಕಣವನ್ನು ಮೀಸಲಿಟ್ಟಿದೆ. ಜನಮಾಧ್ಯಮ, ಲಕೋಕಧ್ವನಿಯಂತಹ ದಿನಪತ್ರಿಕೆಗಳಲ್ಲಿ ಸಂಗೀತದ ಪ್ರಸಾರ ಪ್ರಚಾರದ ದೃಷ್ಟಿಯಲ್ಲಿ ಉತ್ತಮ ಪುಯತ್ನದಿಂದ ಕೂಡಿದ ಲೇಖನಗಳನ್ನು ಪ್ರಕಟಿಸುತ್ತೇವೆ. ಸುದ್ದಿ ಮಾದ್ಯಮಗಳೂ ಇಂದಿನ ದಿನಗಳಲ್ಲಿ ವಿಷಯ ತಿಳಿಸುವ ಪ್ರಬಲವಾದ ಮಾಧ್ಯಮವಾದುದರಿಂದ ಇಂತಹ ಮಾದ್ಯಮಗಳಲ್ಲಿ ಬರುವ ಸುದ್ದಿಗಳಿಂದ ಜನರು ಪ್ರಭಾವಿತರಾಗುತ್ತಾರೆ. ಉತ್ತಮ ಸಂಗೀತ, ಪರಂಪರೆ, ಸಂಗೀತಗಾರರು ಪ್ರಸ್ತುತ ಪಡಿಸಿರುವ ರಾಗಗಳು ಹಾಗೂ ಸಂಗೀತ ಪಾಠಶಾಲೆಗಳ ಬಗೆಗೂ ಇಂತಹ ಪತ್ರಿಕೆಗಳು ಲೇಖನವನ್ನು ಪ್ರಕಟಿಸುತ್ತೇವೆ. ಜಿಲ್ಲೆಯಲ್ಲಿ ನಡೆಯುವ ಸಂಗೀತ ಕಾರ್ಯಕ್ರಮವಿರಲಿ, ಹೊರಜಿಲ್ಲೆಗಳಿಂದ ಬರುವ ಉತ್ತಮ ಸಂಗೀತಗಾರರ ಕಾರ್ಯಕ್ರಮಗಳಿರಲಿ, ಪಂಃ ಭಾತಖಾಂಡೆಯ ನೊಟೇಶನ್ ಪದ್ಧತಿ ರವೀಂದ್ರ ಸಂಗೀತದ ಲಕ್ಷಣಗಳು ಆಶಯಗಳನ್ನೊಳಗೊಂಡಂತೆ ಜಗತ್ತಿನ ಎಲ್ಲ ಸಂಗೀತದ ಬಗೆಗಿನ ಮಾಹಿತಿಗಳನ್ನು ಕಾರ್ಯಕ್ರಮ

ವಿವರಗಳನ್ನು ಇಂತಹ ಪತ್ರಿಕೆಗಳು ಪ್ರಕಟಿಸಿ ತನ್ಮೂಲಕ ಜನತೆಗೆ ಸಂಗೀತದ ಆಸಕ್ತಿ, ಕಾಳಜಿ, ಜ್ಞಾನವರ್ಧನೆಗೆ ಅವಕಾಶ ಮಾಡಿಕೊಟ್ಟಿವೆ. ಉ.ಕ. ಜಿಲ್ಲೆಯಲ್ಲಿ ಪ್ರಕಟಗೊಂಡ ಮೊದಲ ದಿನಪತ್ರಿಕೆ ಹವ್ಯಕ ಹಿತಭೋದ. ಕರ್ಕಿಯ ಸೂರಿ ವೆಂಕಟ್ರಮಣ ಶಾಸ್ತ್ರಿಗಳು ಈ ಪತ್ರಿಕೆಯ ಸಂಪಾದಕರಾಗಿದ್ದರು. ಅಂದಿನ ದಿನಗಳಲ್ಲಿಯೇ ಈ ಪತ್ರಿಕೆ ಉತ್ತಮ ಹೆಸರನ್ನು ಗಳಿಸಿತ್ತು.

<u>ಉತ್ತರಕನ್ನಡ ಜಿಲ್ಲೆಯ ಕಲಾಕಾರರು ಹಾಗೂ ಸಂಗೀತದ ಲೇಖನಗಳನ್ನು ಪ್ರಕಟಪಡಿಸಿರುವ ಕೆಲವು ವಿವರಗಳು</u>

ಮುಂದಿನ ಪುಟಕ್ಕೆ.....

ಖಲೀಲ ಜಿಬ್ರಾನ್ ದೃಷ್ಟಿಯಲ್ಲಿ "ಗೀತ ಸಂಗೀತ ಮತ್ತು ಸ್ವರ"

ಮಹಾನ್ ಕವಿ, ದಾರ್ಶನಿಕ ಚಿತ್ರಕಾರ ಮತ್ತು ಸಂಗೀತಜ್ಞ ಖಲೀಲ್ ಜಿಬ್ರಾನ್‌ರ ಸಂಗೀತದ ಬಗ್ಗೆ ವಿಚಾರಧಾರೆ ಹೇಗಿತ್ತು ಅವರ ಕೆಲವು ಅಮೂಲ್ಯ ಉಕ್ತಿ ಮುತ್ತುಗಳು ಹೀಗಿವೆ.

ಹೃದಯದ ಗೀತೆಗಳನ್ನು ಹಾಡುವ ಗಾಯಕನನ್ನು ಪಡೆಯದಿದ್ದಾಗ ಜೀವನವು ತನ್ನ ಬುದ್ಧಿ ಶಕ್ತಿಯಿಂದ ಮಾತನಾಡುವ ಯಾವುದಾದರು ದಾರ್ಶನಿಕರನನ್ನು ಹುಟ್ಟಿಸುತ್ತದೆ.

ಆನಂದಿತ ಹೃದಯಗಳೊಡನೆ ಆನಂದಮಯ ಗೀತೆಗಳನ್ನು ಅದರೊಂದಿಗೆ ಸೇರಿ ಹಾಡುವ ಆ ದುಃಖೀ ಹೃದಯ ಎಷ್ಟೊಂದು ಒಳ್ಳೆಯದಾಗಿರುತ್ತದೆ.

ಸ್ಫೂರ್ತಿ ಸದಾ ಹಾಡುತ್ತಿರುತ್ತದೆ. ಅದು ಎಂದೂ ವರ್ಣನೆ ಮಾಡುವದಿಲ್ಲ.

ನಾವು ಸ್ವತಃ ನಿದ್ದೆ ಹೋಗಲು ಬಹುಶಃ ನಾವು ಮಕ್ಕಳಿಗೆ ಜೋಗುಳ ಹಾಡುತ್ತೇವೆ

ನಮ್ಮ ಮೌನ ಭಾಗಗಳನ್ನು ಹಾಡಲು ಹಚ್ಚುವನೇ ಮಹನ್ ಗಾಯಕ.

ಚಟ್ಟೆಯು ಪ್ರೇಮ ಗೀತವನ್ನು ಹಾಡುತ್ತದೆ. ಆದರೆ ಅದು ತನ್ನ ಹೊಟ್ಟೆಯನ್ನು ಮುಳ್ಳಿನಿಂದ ಚುಚ್ಚಿಸಿಕೊಳ್ಳುತ್ತದೆ. ವಾಸ್ತವಿಕವಾಗಿ ನಾವೆಲ್ಲಾ ಹೀಗೆ ಮಾಡುತ್ತೇವೆ. ಇಲ್ಲದಿದ್ದರೆ ನಾವು ಹೇಗೆ ಹಾಡಬಲ್ಲೆವು

ಉನ್ಮತ್ತ ಮನುಷ್ಯನು ನಿಮ್ಮ ತಾಯಿ ಅಥವಾ ನನಗಿಂತ [illegible] ಸಂಗೀತಜ್ಞನೇನೂ ಅಲ್ಲ, ಕೇವಲ ಅವನ ವಾದ್ಯ ಯಂತ್ರ ಬೇಸರವಾಗಿದೆ, ಎಂದರ್ಥ.

ನಿಮ್ಮ ಗಾಯನದಿಂದ ಹಸಿದ ವ್ಯಕ್ತಿಗೆ ಹೊಟ್ಟೆ ತುಂಬಿದಷ್ಟು ಆನಂದ.

ಹೃದಯವನ್ನು ಆಹ್ಲಾದಿತಗೊಳಿಸುವ ಸದಿಚ್ಛೆಯೇ ಕವಿತೆ. ಮನಸ್ಸಿನಲ್ಲಿ ಆ ಹಾಡುವ ಕವಿತೆಯೇ ಸದಿಚ್ಛೆ.

–ಎಲ್.ಎಸ್.ಹೆಗಡೆ ಪುಟ್ಟನಮನೆ
(ಅನುವಾದ ಸಂಗೀತ ಮಾಸ ಪತ್ರಿಕೆಯಿಂದ)

ಸಂ. ಶಾ. ಸಂ. ವಾರ್ಷಿಕೋತ್ಸವದಲ್ಲಿ ಉಮಾಕಾಂತ ಭಟ್ಟ

ಭಾವ, ರಾಗ, ತಾಳ ಭಾರತವಾಗಿದೆ

ಶಿರಸಿ ಮೇ 21- ಶಿರಸಿಯ ಸನಾತನ ಶಾಸ್ತ್ರೀಯ ಸಂಗೀತ ವಿದ್ಯಾಲಯದ ವಾರ್ಷಿಕೋತ್ಸವವು ಮೇ 15 ರ ದು ಸಾಮ್ರಾಟ ಹೊಟೆಲ್‌ನ ವಿನಾಯಕ ಹಾಲ್‌ನಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷರಾದ ವಿದ್ವಾನ ಉಮಾಕಾಂತ ಕೃಷ್ಣ ಭಟ್ ಕೆರೆಕೈ ಅವರು ತಮ್ಮ ಭಾಷಣದಲ್ಲಿ ಮಾತನಾಡುತ್ತ ಸಂಗೀತ ಮತ್ತು ಸಂಸ್ಕೃತ ಎರಡೂ ಪುರಾತನವಾದದು. ಭರತಮುನಿಯ ಹೆಸರು ಪಡೆದ ಈ ದೇಶವು ಭಾವ ರಾಗ ತಾಳಗಳ ಸಂಗಮದಿಂದಾಗಿ ಭಾರತವಾಗಿದೆ. ಸಂಗೀತ ಕಲೆಯನ್ನು ಸಾಧನೆಯಿಂದ ಗಳಿಸಬೇಕು. ಇದು ಆರ್ಥಿಕ ಲಾಭಕ್ಕಿಂತಲ ಆತ್ಮೋದ್ಧಾರಕ್ಕೆ ಅವಶ್ಯ. ಈ ವಿದ್ಯಾಲಯದ ಪ್ರಾಚಾರ್ಯರಾದ ಕಮಲಾಕರ ಭಟ್ಟರು ಈ ದಿಸೆಯಲ್ಲಿ ಮುಂದುವರಿಯುತ್ತಿರುವರು ನಮಗೆಲ್ಲರಿಗೆ ಹೆಮ್ಮೆಯ ಸಂಗತಿಯೆಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಪತ್ರಕರ್ತ ವಿನಾಯಕ ರಾ ಹೆಗಡೆ ಅವರು ಮಾತನಾಡಿ ಪವಿತ್ರವಾದ ಈ ಸಂಗೀತ ಕಲೆಗೆ ಸಮಾಜ ಹಾಗೂ ಸರಕಾರ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಬೇಕು, ಕಮಲಾಕರ ಭಟ್ಟರು ಈ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆಂದು ತಿಳಿಸಿದರು.

ಅಂದು ನಡೆದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದಲಿ ಭಾಸ್ಕರ ಹೆಗಡೆ, ಚಿಪಗೇರಿ ವಿ. ಭಾ ಭಟ್ಟ ಸುಮಾ ಭಟ್ಟ ಡಿ ಕೆ ಮರ್ಖಂಡಿ ಶ್ರೀರಂಗ ಹೆಗಡೆ ಕೆ ಸಿ ಹೆಗಡೆ ಮುಂತಾದವರು ಮಧ್ಯಾಹ್ನದ ಅಧಿವೇಶನದಲ್ಲಿ ಭಾಗವಹಿಸಿದರು.

ರಾತ್ರಿಯ ಅಧಿವೇಶನದ ಸಭಾಕಾರ್ಯಕ್ರಮದ ನಂತರ ಕಿರಣ ಭಟ್ಟ, ಗಾಯನ ಚಿದಾನಂದ ದೇವರಮನಿ ಗಾಯನ ಸಂತೋಷ ಚಂದಾವರಕರ ಸೋಬದ ವಿದ್ವಾನ್ ಬಿ ನಾರಾಯಣಪ್ಪ ಅವರಿಂದ ಅಪರೂಪದ ವಿಚಿತ್ರ ವೀಣಾ ವಾದನ ಗಾಯನ ಪಿಟೀಲು ವಾದನ ಭೀಮಸೇನ ಮರೋಳ ಅವರಿಂದ ತಬಲಾ ಸೋಲೋ ಹಂಪಿ ವಿಶ್ವವಿದ್ಯಾಲಯದ ಪ್ರಾಚಾರ್ಯರೂ ಕರ್ನಾಟಕ ಕಲಾಕರ ಪ್ರಶಸ್ತಿ ವಿಜೇತ ಜಿ ಎಸ್ ಹೆಗಡೆ ಬೆಳ್ಳೆಕೇರಿ ಅವರ ಶಿಷ್ಯರೂ ಆದ ಕಮಲಾಕರ ಭಟ್ಟ ಅವರಿಂದ ಗಾಯನ ಕಾರ್ಯಕ್ರಮ ನಡೆಯಿತು.

ತಬಲಾ ಸಾಥದಾರರಾಗಿ ಕೆ. ಅರುಣ ಭಟ್ಟ ಮಂಜುನಾಥ ಭಟ್ಟ ನೆಬ್ಬೂರು, ಭೀಮಸೇನ ಮರೋಳ ಸಂತೋಷ ಚಂದಾವರಕರ ವಿಘ್ನೇಶ್ವರ ಹೆಗಡೆ ಹಾಗೂ ಹಾರ್ಮೋನಿಯಂ ಸಾಥಿದಾರರಾಗಿ ಕಿರಣ ಭಟ್ಟ ಗಣೇಶ ಹೆಗಡೆ ಮರ್ಖಂಡಿ ಕೆ ಸಿ ಹೆಗಡೆ ಭಾಗವಹಿಸಿದರು.

ಕಾಗೇರಿಯ ಸುಬ್ರಾಯ ಹೆಗಡೆ ಅವರು ಸ್ವಾಗತಿಸಿದರು. ವಿದ್ವಾನ್ ಉಮಾಕಾಂತ ಭಟ್ಟರು ದೀಪ ಬೆಳಗಿಸಿ ಉದ್ಘಾಟಿಸಿದರು, ಕೆ ಸಿ ಹೆಗಡೆ ಕಾರ್ಯಕ್ರಮ ನಿರ್ವಹಿಸಿದರು ಮತ್ತು ಕೊನೆಯಲ್ಲಿ ವಂದಿಸಿದರು.

ಹಾರ್ಮೋನಿಯಂ ವಾದಕ ಬೋರ್ಕರ್ ಹೊನ್ನಾವರದಲ್ಲಿ ಗೌರವಪೂರ್ಣ ಸನ್ಮಾನ

ಹೊನ್ನಾವರ 14 ಮೇ. ಅಂತರ್ ರಾಷ್ಟ್ರೀಯ ಹಾರ್ಮೋನಿಯಂ ವಾದಕ ಸಂಗೀತ [illegible] ಬೋರ್ಕರರನ್ನು ಇತ್ತೀಚೆಗೆ ಪ್ರಾ. ಯಕ್ಷಗಾನ ಪಟು ರಾಷ್ಟ್ರಪ್ರಶಸ್ತಿ ವಿಜೇತ ಮಹಾಬಲ ಹೆಗಡೆಯವರು ಫಲತಾಂಬೂಲ ನೆನಪಿನ ಕಾಣಿಕೆಯನ್ನಿತ್ತು, ಶಾಲು ಹೊದಿಸಿ ಗೌರವಿಸಿದರು.

ಸಂಗೀತ ಕಾರ್ಯಕ್ರಮವನ್ನು ಮುಂಬೈನ ಯುವ ಕಲಾವಿದ ಕು. [illegible] ಆರಂಭವಾಯಿತು. ಭಕ್ತಿಗೀತೆ, ಭಜನ್ [illegible] ಸೋಲೋ ಕಾರ್ಯಕ್ರಮವನ್ನಿತ್ತರು. ಇವರು ಬೋರ್ಕರರ ಶಿಷ್ಯ, ಭರತನ ತಂದೆ ಮೋಹನ ಬಳವಳ್ಳಿ, ತಬಲಾ ಸಾಥ್ ನೀಡಿದರು.

ಉಸ್ತಾದ್ ಫಿರೋಜ್ ದಸ್ತೂರ [illegible] ಮುಂಬೈನ ವಿನಾಯಕ ಪ್ರಭು ರಾಗ ಪೂರಿಯಾ ಬಾಗೇಶ್ರೀ [illegible] ಬಹಾರ್ ನಾಟ್ಯ ಗೀತೆಗಳನ್ನು ಪ್ರಸ್ತುತಪಡಿಸಿದರು. ಗಾಯನ ಭೀಮಸೇನ ಜೋಷಿಯವರ ಅನುಕರಣೆ ಕಂಡುಬರುತ್ತಿತ್ತು. ಮುಂಬೈನ ರೋಹಿದಾಸ್ ಪರಬ್ ತಬಲಾ ನೀಡಿದರು.

ನಂತರ ಅಂತರ್‌ರಾಷ್ಟ್ರೀಯ ಹಾರ್ಮೋನಿಯಂ ವಾದಕ ಪಂ. ತುಳಸಿದಾಸ ಬೋರ್ಕರ್ ಹಾರ್ಮೋನಿಯಂ ಸೋಲೋ ಸಂಗೀತ ಪ್ರೇಮಿಗಳ ಹೃದಯ ಬಡಿದೆಬ್ಬಿಸಿತು. ರಾಗ ಯಮನ್, ತಿಲಕದೇಸ್ ದುನ್‌ಗಳನ್ನು ಪ್ರಸ್ತುತಪಡಿಸಿ ಬೈರವಿಯೊಂದಿಗೆ ಕಾರ್ಯಕ್ರಮ ಮುಗಿಸಿದರು. ಮುಂಬೈನ ಖ್ಯಾತ ತಬ್ಲಾವಾದಕ ಪಂ|ತಾರನಾಥರ ಹಿರಿಯಶಿಷ್ಯ ಮೋಹನಬಳವಳ್ಳಿ ತಬಲಾಸಾಥ್ ನೀಡಿದರು.

ಹೊನ್ನಾವರದ ಸಂಗೀತ ಗೆಳೆಯರ ಬಳಗದ ಅಧ್ಯಕ್ಷ ಆರ್.ಡಿ. [illegible] ಸ್ವಾಗತಿಸಿದರು. ಪ್ರೊ. [illegible] ಭಟ್ [illegible] ಮಾಡಿದರು, ಬಳಗದ ಸಲಹೆಗಾರ ಕೃಷ್ಣಮೂರ್ತಿ ಭಟ್ ಪರಿಚಯ ಮಾಡಿದರು ಕಾರ್ಯದರ್ಶಿ ರಾಜು ಹೆಬ್ಬಾರ ಕಾರ್ಯಕ್ರಮ ನಿರ್ವಹಿಸಿದರು, ಗೋಪಾಲಕೃಷ್ಣ ಹೆಗಡೆ ವಂದಿಸಿದರು.

ಸಂಸ್ಕೃತಿಯ ಅಧಃಪತನ, ವಿದೇಶಿ ಸಂಸ್ಕೃತಿಯ ಅನುಕರಣೆ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಇಂತಹ ಸಂಗೀತ ಕಾರ್ಯಕ್ರಮಗಳು ಶಾಸ್ತ್ರೀಯ ಸಂಗೀತ ಪ್ರೇಮಿಗಳಿಗೆ ಮರುಭೂಮಿಯಲ್ಲಿ ಓಯಾಸಿಸ್ ಕಂಡಷ್ಟು ಆನಂದವಾಯಿತು.

–(ಘವ[illegible] ಕಾಂಚಿಕೇರಿ)

ಹುಬ್ಬಳ್ಳಿ: ರಶೀದ್ ಖಾನ್ ಅಭಯಂಕರ ಗಾಯನ

ಹುಬ್ಬಳ್ಳಿ ಮಾ 16

ಹುಬ್ಬಳ್ಳಿ ಆರ್ಟ್ಸ್ ಸರ್ಕಲ್ ಹಾಗೂ ದಿ.ಅಕ್ಯಾಡಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ಇವರ ಸಂಯುಕ್ತಾಶ್ರಯದಲ್ಲಿ ಮಾ.19ರಿಂದ ಮಾ 21ರವರೆಗೆ ಹುಬ್ಬಳ್ಳಿಯ ಸವಾಯಿ ಗಂಧರ್ವ ಕಲಾ ಮಂದಿರದಲ್ಲಿ ಪ್ರತಿ ದಿನ ಸಂಜೆ 6-30 ಗಂಟೆಗೆ ಸಂಗೀತ ಸಮ್ಮೇಳನ ಏರ್ಪಡಿಸಲಾಗಿದೆ.

ಸಮಾರಂಭವನ್ನು ಖ್ಯಾತ ಗಾಯಕರಾದ ಡಾ.ಗಂಗೂಬಾಯಿ ಹಾನಗಲ್ ಉದ್ಘಾಟಿಸುವರು. [illegible] ಅತಿಥಿಗಳಾಗಿ ಹುಬ್ಬಳ್ಳಿ-ಧಾರವಾಡದ ಪೋಲೀಸ ಆಯುಕ್ತರಾದ ಬಿ.ಬಿ. ಕೊಕಟನೂರ ಹಾಗೂ ಶಾಸಕರಾದ ಅಶೋಕ ಕಾಟವೆ ಆಗಮಿಸುವರು.

ಮಾ.19 ರಂದು ಕುಮಾರಿ ಮಂಜುಳಾ ಕುಲಕರ್ಣಿ ಅವರಿಂದ ಗಾಯನ ಹಾಗೂ ಖ್ಯಾತ ವಾಯಲಿನ ವಾದಕರು ಹಾಗೂ ಹಿರಿಯ ಕಲಾವಿದರಾದ ಡಾ.ಎಮ್.ರಾಜು ಅವರಿಂದ ವಾಯಲಿನವಾದನ ಇರುತ್ತದೆ.

ಮಾ.20ರಂದು ಗಾಯನ ಶ್ರೀಮತಿ ನೀರ್ಮಲ್ [illegible] ಹಾಗೂ ಖ್ಯಾತ ಕಲಾವಿದ ಅಶ್ವಿನಿ ಬಿಡೆ ದೇಶಪಾಂಡೆ ಅವರಿಂದ ಗಾಯನ ಏರ್ಪಡಿಸಲಾಗಿದೆ. ಮಾ.21 ರಂದು [illegible] ಅವರಿಂದ ಗಾಯನ ಖ್ಯಾತ ಗಾಯಕ ಉಸ್ತಾದ್ ರಶೀದ ಖಾನ್ ಅವರಿಂದ ಗಾಯನ ಏರ್ಪಡಿಸಲಾಗಿದೆ, ಎಂದು ಹುಬ್ಬಳ್ಳಿ ಆರ್ಟ್ಸ್ ಸರ್ಕಲ್‌ದ ಕಾರ್ಯದರ್ಶಿ ಬಿ ಜಿ. ಹಾವ[illegible] ತಿಳಿಸಿದ್ದಾರೆ,

Classical vocalist Bhat leaves listeners spellbound



Krishanmoorthy Bhat singing at a function organised by Sorabh, a cultural organisation. Anantamoorthy and Nagaraj Hegde are accompanying him on tabla and harmonium respectively

VARIOUS cultural programmes were hosted by Sourabh, a music organisation in the neighbouring taluks of Kumta. Among them was a Hindustani classical vocal recital at BAd near Honnavar by a budding artiste Krishnamurthy Bhat, who is presently working as a music lecturer at SDM College, Honnavar.

Bhat started his vocal recital with Raag Bheempalas. The songs *Avato Badider* in Vilambit and *Dhuman Chayo Shyam* transported the audience to a different world of classical music.


He mesmerised music lovers with his bhajans which were sung in raagas of *Shobhavari* and *Patadeep*. Listeners were left spellbound by a bhajan of Tulsidas. He concluded his recital with a bhajan of Brahmananda, which was in Raag Bhairavi.

Anantamoorthy Shastri, tabla lecturer of SDM College, Honnavar accompanied Bhat on tabla with his masterful strokes. Nagaraj Hegde, a budding artiste was on Harmonium to make the programme a complete entertainment.

--M G HEGDE

Indian Express.

Bright future for promising young singer



In the University campus you might have seen a lean, not-so-tall person with specs and a gentle smile lighting up his face. He represented Karnatak University at the national level and was selected as one of the four best artistes in Hindustani music. This is Krishnamurthy Bhat, an up-and-coming artiste. This year he has bagged many first prizes in music.

Krishnamurthy hails from a remote village of Uttar Kannada, where in his early years of childhood he started singing. Born with music-instinct he used to sing for local dramas too. Having a deep urge to learn classical music, he started learning it under Mr.Shripad Hegde when he was in PUC. When he entered M. M Arts and Science College, Sirsi for his B.A. he took music as his minor subject and started to take training under Mr.Ganapati Bhat, a renowned artiste who is a disciple of Pandit Basavaraj Rajaguru. Here his art started to bloom. He developed his 'Khayal'. He did his 'Sangeet Ratna' from Karnatak University and now he is in M.Music final year.

With his smooth, sharp and attractive voice he presents the ragas with traditional beauty, decorating them with special Tana Baz.

When asked about his success, rather grand success, he says, "Of course I am happy with this, but not with the standard of my music. I have to go deep into the sea of music and have lots to do with my Riyaz."

This honesty and humility is the growing point for any artiste and he knows it very well.

In all the youth fetivals only ten minutes time is given for Classical Music and even at the National level competition that was held at Nagpur this year this was the case. About this he says, " Though it is possible to present music within this time limit, if they give at least fifteen minutes it would be better."

With all his talent devoted to music, he wants to be a good music lecturer so that he can train many young artistes. He firmly adds, "I will remain an artiste".

It is nothing but talent and Riyaz that have made him a representative artiste. Though he comes from a remote village where opportunities are lacking, he has achieved great heights. In this respect he is a model to those who aspire to make a mark in any field.

Rekha Hegde

ಕಡತೋಕಾದಲ್ಲಿ ಇಂದು ಸಂಗೀತ ಸಂಧ್ಯಾ ಕಾರ್ಯಕ್ರಮ

ಹೊನ್ನಾವರ ಫೆ 19- ತಾಲೂಕಿನ ಕಡತೋಕಾದ ಪ್ರೊ ಶಂಭು ಭಟ್ಟರ ಮನೆಯಲ್ಲಿ ಫೆ 20 ರಂದು ಸಂಜೆ 4-30 ಕ್ಕೆ ಸಂಗೀತ ಸಂಧ್ಯಾ ಕಾರ್ಯಕ್ರಮ ನಡೆಯಲಿದೆ ಅಧ್ಯಕ್ಷತೆಯನ್ನು ಹಿರಿಯ ವಕೀಲ ಎಸ್. ಪಿ ಕಾಮತ ವಹಿಸುವರು.

ಹಿರಿಯ ಕಲಾವಿದರಾದ ಪಂ. ಗಣಪತಿ ಬಟ್ಟ ಹಾಸಣಗಿ. ಉಸ್ತಾದ ರಫೀಕ್ ಖಾನ್ ಮಂಗಳೂರು(ಸಿತಾರ) ಹಾರ್ಮೋನಿಯಂನ್ನು ಬೆಳಗಾಂ ರವೀಂದ್ರ ಕಾಟೋಟಿ, ತಬಲಾ ವನ್ನು ಧಾರವಾಡದ ರವಿಕೂಡ್ಲ ಹಾಗೂ ಕಲಭಾಗದ ಗೋಪಾಲ ಕೃಷ್ಣ ಹೆಗಡೆ ಬಾರಿಸುವರು.

ಉತ್ತರಕನ್ನಡ ಜಿಲ್ಲೆಯ ಆಕಾಶವಾಣಿ ಹಾಗೂ ದೂರದರ್ಶನ ಮರು ಪ್ರಸಾರ ಕೇಂದ್ರಗಳು

ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ಆಕಾಶವಾಣಿ ಕೇಂದ್ರಗಳೇ ಇರಲಿಲ್ಲ. ಸಮೀಪದ ಆಕಾಶವಾಣಿ ಧಾರವಾಡಕೇಂದ್ರದಿಂದಲೇ ಜಿಲ್ಲೆಯ ಜನತೆ ಸುದ್ದಿ ಪ್ರಸಾರಗಳನ್ನು ಕೇಳುತ್ತ ಬಂದಿದ್ದಾರೆ. ಜಿಲ್ಲೆಯಲ್ಲಿ ಆಕಾಶವಾಣಿ ಕೇಂದ್ರ ಇಲ್ಲದಿರುವುದನ್ನು ಗುರುತಿಸಿ ಕೇಂದ್ರಸರ್ಕಾರವು ಅಲ್ಪ ಸಾಮರ್ಥ್ಯದ ಟ್ರಾನ್ಸ್‌ಮೀಟರ್‌ವುಳ್ಳ ಆಕಾಶವಾಣಿ ಕೇಂದ್ರವನ್ನು ಮಂಜೂರುಮಾಡಿದೆ. ಜಿಲ್ಲೆಯ ಕೇಂದ್ರಸ್ಥಳವಾದ ಕಾರವಾರದಲ್ಲಿ ೧೯೯೦ ರ ನಂತರ ಆಕಾಶವಾಣಿ ಕಾರವಾರ ಕೇಂದ್ರವು ಕಾರ್ಯಾರಂಭಮಾಡಿದೆ. ಕಡಿಮೆ ಸಾಮರ್ಥ್ಯವುಳ್ಳ ಆಕಾಶವಾಣಿಕೇಂದ್ರ ಇದಾಗಿರುವದರಿಂದ ಮತ್ತು ಎಫ್. ಎಮ್. ಸ್ಟೇಶನ್‌ನಲ್ಲಿ ಮಾತ್ರ ಆಕಾಶವಾಣಿಯ ಕಾರ್ಯಕ್ರಮವನ್ನು ಕೇಳುವ ವ್ಯವಸ್ಥೆ ಇರುವದರಿಂದ ಜಿಲ್ಲೆಯಲ್ಲಿನ ಬಹುತೇಕ ಜನತೆ ಈ ಕೇಂದ್ರದ ಕಾರ್ಯಕ್ರಮವನ್ನು ಕೇಳುವ ಅವಕಾಶದಿಂದ ವಂಚಿತರಾಗಿದ್ದಾರೆ. ಆಕಾಶವಾಣಿ ಕಾರವಾರ , ಕಾರವಾರದಿಂದ ಕೇವಲ ೧೫ ಕಿ. ಮೀ. ದಿಂದ ೩೦ ಕಿ.ಮೀ. ವರೆಗೆ ಮಾತ್ರ ಆಕಾಶವಾಣಿ ಕಾರ್ಯಕ್ರಮವನ್ನು ಕೇಳಬಹುದು. ಎಫ್. ಎಮ್. ಸ್ಟೇಶನ್ ಆಗಿರುವದರಿಂದ ಕೇವಲ ಎಫ್. ಎಮ್. ಬೇಂಡ್ ಇರುವ ರೇಡಿಯೋದಲ್ಲಿ ಮಾತ್ರ ಈ ಕೇಂದ್ರದ ಕಾರ್ಯಕ್ರಮವನ್ನು ಆಲಿಸಬಹುದಾಗಿದೆ.

ಸಂಗೀತ ವಿಭಾಗ ಕಾರವಾರ ಆಕಾಶವಾಣಿಯಲ್ಲಿ ಇಲ್ಲದಿರುವದರಿಂದ ಜಿಲ್ಲೆಯ ಬಹುತೇಕ ಶಾಸ್ತ್ರೀಯ ಹಾಗೂ ಸುಗಮ ಸಂಗೀತ ಕಲಾಕಾರರು ಧಾರವಾಡ ಆಕಾಶವಾಣಿ ಕೇಂದ್ರಕ್ಕೆ ಹೋಗಿ ತಮ್ಮ ಕಾರ್ಯಕ್ರಮವನ್ನು ಕೊಟ್ಟು ಬರುತ್ತಾರೆ. ಕಥೆ, ಕವನ, ಭಾಷಣ, ಭಜನೆ ಮುಂತಾದ ಕಾರ್ಯಕ್ರಮಗಳನ್ನು ಈ ಕೇಂದ್ರದಲ್ಲಿ ಧ್ವನಿ ಮುದ್ರಿಸಿಕೊಳ್ಳುತ್ತಾರೆ ಹಾಗೂ ಅದರ ಪ್ರಸಾರವನ್ನು ಮಾಡುತ್ತಾರೆ. ಆಕಾಶವಾಣಿ ಕಾರವಾರದಲ್ಲಿ ಉತ್ತಮ ಕ್ರಿಯಾಶೀಲ ಸಿಬ್ಬಂದಿಗಳಿದ್ದು ಇಲ್ಲಿ ಆಯೋಜಿಸಿದ ಕಾರ್ಯಕ್ರಮಗಳು ರಾಷ್ಟ್ರಮಟ್ಟದ ಆಕಾಶವಾಣಿ ಸ್ಪರ್ಧೆಯಲ್ಲಿಯೂ ಭಾಗವಹಿಸಿ ವಿಜೇತರಾಗಿ ಬಹುಮಾನಗಳಿಸಿದ ಉದಾಹರಣೆಗಳೂ ಇವೆ. ನಾಟಕ, ಭಾಷಣ, ರಸಪ್ರಶ್ನೆ, ಸಂಗೀತ ಮುಂತಾದ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೋಸ್ಕರ

ನಡೆಸಿಕೊಟ್ಟು ಅವರನ್ನು ಪ್ರೋತ್ಸಾಹಿಸುವ ಕ್ರೀಯಾಶೀಲಯೋಜನೆಯನ್ನು ಈ ಆಕಾಶವಾಣಿ ಕೇಂದ್ರ ಹೊಂದಿದೆ. ಶ್ರೀ ಜಿ. ಕೆ. ರವೀಂದ್ರಕುಮಾರ, ಚೇತನಕುಮಾರ ನಾಯಕ, ಶಾಂತನಾಯಕ ಮುಂತಾದ ಕ್ರೀಯಾಶೀಲ ಸಿಬ್ಬಂದಿಗಳು ಈ ಕೇಂದ್ರದಲ್ಲಿ ಕೆಲಸಮಾಡುತ್ತಿದ್ದಾರೆ. ಇವರೆಲ್ಲರ ಪರಿಶ್ರಮದಿಂದಲೇ ಜಿಲ್ಲೆಯಲ್ಲಿನ ಜನಸಾಮಾನ್ಯನೂ ಅರ್ಹತೆ ಹೊಂದಿದರೆ ಆಕಾಶವಾಣೀಕೇಂದ್ರಕ್ಕೆ ಹೋಗಿ ತನ್ನ ಕಾರ್ಯಕ್ರಮವನ್ನು ನಡೆಸಿಕೊಡುವಂತಹ ವಾತಾವರಣ ನಿರ್ಮಾಣವಾಗಿದೆ.

ಕಾರವಾರ ಆಕಾಶವಾಣಿ ಕೇಂದ್ರದ ಈಗಿರುವ ಸಾಮರ್ಥ್ಯವನ್ನು ದ್ವಿಗುಣಗೊಳಿಸಿದರೆ ಮಾತ್ರ ಇಲ್ಲಿ ಪ್ರಸಾರಮಾಡುವ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಕೇಳಬಹುದಾಗಿದೆ. ಹಾಗಾದಾಗ ಮಾತ್ರ ಇಲ್ಲಿಯ ಆಕಾಶವಾಣಿಯ ಕಾರ್ಯಕ್ರಮವನ್ನು ಜನತೆ ಕೇಳಬಹುದಾಗಿದೆ. ಹಾಗೇ ಆಗಲಿ ಎಂದು ಆಶಿಸೋಣ.

ದೂರದರ್ಶನ ಮರುಪ್ರಸಾರ ಕೇಂದ್ರಗಳು


ಜಿಲ್ಲಾ ಕೇಂದ್ರಸ್ಥಳವಾದ ಕುಮಟಾ, ಭಟ್ಕಳ, ಸಿರ್ಸಿ ಹಾಗೂ ಕಾರವಾರಗಳಲ್ಲಿ ದೂರದರ್ಶನ ಮರುಪ್ರಸಾರ ಕೇಂದ್ರಗಳು ಸ್ಥಾಪನೆಯಾಗಿವೆ. ದೆಹಲಿಯಿಂದ ಪ್ರಸಾರವಾಗುವ ಕಾರ್ಯಕ್ರಮವನ್ನು ಹಾಗೂ ಬೆಂಗಳೂರು ಕೇಂದ್ರದಿಂದ ಪ್ರಸಾರವಾಗುವ ಕಾರ್ಯಕ್ರಮವನ್ನು ಈ ಕೇಂದ್ರಗಳು ಮರುಪ್ರಸಾರ ಮಾಡುತ್ತವೆ. ಜಿಲ್ಲೆಯಲ್ಲಿ ಡಿಶ್ ಟೆಲಿವಿಶನ್ ಹೊಂದಿದ ಅನೇಕರು ಡಿ.ಡಿ. ೧, ಡಿ.ಡಿ.೯ ಹಾಗೂ ಉದಯ ಟಿ.ವಿ.ಗಳು ಬಿತ್ತರಿಸುವ ಕಾರ್ಯಕ್ರಮಗಳನ್ನು ನೋಡಬಹುದಾಗಿದೆ. ಜಿಲ್ಲೆಯಲ್ಲಿ ಒಂದು ದೂರದರ್ಶನಕೇಂದ್ರ ಅವಶ್ಯವಾಗಿದ್ದು ಮುಂದಿನ ದಿನಗಳಲ್ಲಾದರೂ ಇದು ಕಾರ್ಯಾರಂಭ ಮಾಡಲಿ ಎಂಬುದು ಆಶಯವಾಗಿದೆ.

ಜಿಲ್ಲೆಯ ಅನೇಕ ಕಲಾಕಾರರು ಇಂದು ರೇಡಿಯೋ ಹಾಗೂ ದೂರದರ್ಶನಗಳ ಮೂಲಕ ಪ್ರಸಿದ್ಧಿ ಪಡೆದಿದ್ದಾರೆ ಹಾಗೂ ಮನೆಮಾತಾಗಿದ್ದಾರೆ. ಇಂದಿನ ದೂರದರ್ಶನಗಳು ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಯನ್ನು ಬಿಂಬಿಸುವ ಶಾಸ್ತ್ರೀಯ ಸಂಗೀತ ನೃತ್ಯ ಮುಂತಾದ ಕಲೆಗಳ ಪ್ರಸಾರವನ್ನು ಅಧಿಕವಾಗಿ ಮಾಡಿದಾಗ ಮಾತ್ರ ಉತ್ತಮಸಮಾಜ, ಸಂಸ್ಕಾರ, ಸಂಸ್ಕೃತಿ ನೆಲೆಗೊಳ್ಳುವದು.


ಅಧ್ಯಾಯ ೨೨

ಉತ್ತರಕನ್ನಡ ಜಿಲ್ಲೆಯ ಪ್ರಮುಖ ಅಂಕಿಅಂಶಗಳು

ಉತ್ತರಕನ್ನಡ ಜಿಲ್ಲೆಯ ನಕ್ಷೆ



ಉತ್ತರಕನ್ನಡ ಜಿಲ್ಲೆಯ ನಕ್ಷೆ



೧. ಸಾಮಾನ್ಯ

ಅ. ನಂ.	ತಾಲೂಕು	ಉಪ ವಿಭಾಗಗಳು	ಹೋಬಳಿಗಳು	ಗ್ರಾಮಪಂಚಾಯತಗಳು ಸಂಖ್ಯೆ	ಸ್ಥಾನ	ಪಟ್ಟಣ ಪಂಚಾಯತ ಗಳು	ತಾಲೂಕ ಪಂಚಾಯತ ಗಳು	ಜಿಲ್ಲಾ ಪಂಚಾಯತ ಸ್ಥಾನಗಳು	ಗ್ರಾಮಗಳು ೧೯೯೧ ರ ಜನಗಣತಿ ಜನವಸತಿ ಇರುವ	ಜನವಸತಿ ಇರದ	ಉಪಗ್ರಾಮ ಗಳು ಮಜರೆಗಳು	ಪಟ್ಟಣ ಮತ್ತು ನಗರ ಸಮೂಹಗಳು	ಪುರಸಭೆಗಳು ನಗರಸಭೆಗಳು
೧	೨	೩	೪	೫	೬	೭	೮	೯	೧೦	೧೧	೧೨	೧೩	೧೪
೧.	ಅಂಕೋಲಾ	-	೪	೧೯	೨೦೪	-	೧೧	೩	೮೪	೨	೨೫೧	೧	೧
೨.	ಭಟ್ಕಳ	೧	೨	೧೬	೨೫೦	-	೧೧	೪	೬೦	೧	೨೭೨	೧	೧
೩.	ಹಳಿಯಾಳ	-	೪	೨೦	೨೦೨	-	೧೧	೩	೧೧೨	೨೧	೧೭	೩	೨
೪.	ಹೊನ್ನಾವರ	-	೩	೨೪	೩೩೫	-	೧೩	೫	೯೨	೧	೭೮೩	೧	೧
೫.	ಕಾರವಾರ	೧	೪	೧೯	೨೩೩	-	೧೧	೩	೫೫	೨	೩೩೫	೩	೧
೬.	ಕುಮಟಾ	೧	೪	೨೦	೨೭೯	-	೧೧	೪	೧೧೪	೫	೩೧೫	೧	೧
೭.	ಮುಂಡಗೋಡ	-	೨	೧೩	೧೪೨	೧	೧೧	೩	೮೪	೧೦	೨೩೬	-	-
೮.	ಸಿದ್ದಾಪುರ	-	೩	೨೧	೨೦೯	೧	೧೧	೪	೧೯೯	೨	೧೧೨೭	-	-
೯.	ಶಿರಸಿ	೧	೪	೨೮	೨೮೭	-	೧೧	೪	೨೨೬	೧	೮೮೮	೧	೧
೧೦.	ಸುಪಾ	-	೩	೧೫	೧೨೬	-	೧೧	೨	೧೧೬	೭	೩೨೪	೧	-
೧೧.	ಯಲ್ಲಾಪುರ	-	೨	೧೪	೧೩೫	೧	೧೧	೩	೧೨೭	-	೯೦೨	೨	-
	ಒಟ್ಟೂ ಮೊತ್ತ	೪	೩೫	೨೦೯	೨೦೪೨	೩	೧೨೩	೩೮	೧೨೬೯	೫೨	೫೪೫೦	೧೪	೮

ಅಡಿಟಿಪ್ಪಣಿ: ಉತ್ತರ ಕನ್ನಡ ಜಿಲ್ಲೆಯ ಅಂಕಿಅಂಶಗಳ ನೋಟ ೧೯೯೭-೯೮ ಡಿ.ಇ. ಎಸ್. ಸಂಖ್ಯೆ ೬೩/೧೯೯೯ ಜಿಲ್ಲಾ ಸಾಂಖ್ಯಿಕ ಕಛೇರಿ ಕಾರವಾರ

ಅ. ನಂ.	ತಾಲೂಕು	ವಿದ್ಯುಚ್ಛಕ್ತಿಒದಗಿಸಲ್ಪಟ್ಟ ಪಟ್ಟಣಗಳು	ಗ್ರಾಮಗಳು	ಉಪಗ್ರಾಮಗಳು	ನೀರಾವರಿ ಪಂಪ್ ಸೆಟ್ಟುಗಳು	ಪೋಲೀಸ ಠಾಣೆಗಳ ಮತ್ತು ಹೊರವಲಯ ಠಾಣೆಗಳು	ಅಗ್ನಿಶಾಮಕ ಠಾಣೆಗಳು	ಕಾರಾಗೃಹಗಳು (ಲಾಕಪ್‌ಗಳು ಸೇರಿ)	ನ್ಯಾಯಬೆಲೆ ಅಂಗಡಿಗಳು ನಗರ	ಗ್ರಾಮೀಣ	ಒಟ್ಟು
೧	೨	೧೫	೧೬	೧೭	೧೮	೧೯	೨೦	೨೧	೨೨	೨೩	೨೪
೧.	ಅಂಕೋಲಾ	೦೧	೦೦೮೪	೦೦೫೪	೦೧೮೨೫	೦೩	-	೧	೦೩	೦೨೭	೦೩೦
೨.	ಭಟ್ಕಳ	೦೧	೦೦೬೩	೦೦೬೮	೦೨೭೭೯	೦೩	೧	೧	೦೮	೦೨೫	೦೩೩
೩.	ಹಳಿಯಾಳ	೦೩	೦೧೦೪	೦೦೯೫	೦೧೦೯೪	೦೫	-	೧	೧೮	೦೨೪	೦೪೨
೪.	ಹೊನ್ನಾವರ	೦೧	೦೦೯೫	೦೦೮೪	೦೬೫೦೯	೦೩	-	೧	೦೪	೦೩೭	೦೪೧
೫.	ಕಾರವಾರ	೦೩	೦೦೫೫	೦೦೭೫	೦೧೪೫೦	೦೫	೧	೧	೧೮	೦೪೨	೦೬೦
೬.	ಕುಮಟಾ	೦೧	೦೧೧೨	೦೧೧೪	೦೪೧೨೧	೦೪	-	೧	೦೬	೦೩೮	೦೪೪
೭.	ಮುಂಡಗೋಡ	–	೦೦೭೭	೦೦೩೦	೦೦೫೦೬	೦೩	-	-	–	೦೨೬	೦೨೬
೮.	ಸಿದ್ದಾಪುರ	–	೦೧೯೪	೦೨೪೫	೦೧೫೯೭	೦೨	-	೧	–	೦೩೪	೦೩೪
೯.	ಶಿರಸಿ	೦೧	೦೨೨೫	೦೨೧೩	೦೩೬೩೪	೦೭	೧	೧	೦೮	೦೪೦	೦೪೮
೧೦.	ಸುಪಾ	೦೧	೦೧೦೮	೦೦೪೨	೦೦೨೨೨	೦೫	-	-	–	೦೧೯	೦೧೯
೧೧.	ಯಲ್ಲಾಪುರ	೦೨	೦೧೨೭	೦೨೪೮	೦೧೩೬೦	೦೩	-	೧	–	೦೩೧	೦೩೩
ಒಟ್ಟೂ ಮೊತ್ತ		೧೪	೧೨೪೪	೧೨೬೮	೨೫೦೯೭	೪೩	೩	೯	೬೫	೩೪೩	೪೦೮

ಅಡಿಟಿಪ್ಪಣಿ: ಅಹಲ್ಯಾ ಎಸ್. ಭಟ್, ನಿರ್ದೇಶಕರು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

ಅ. ನಂ.	ತಾಲೂಕು	ಪಡಿತರ ಚೀಟಿದಾರರು							ಚಿತ್ರಮಂದಿರಗಳು			ವೀಡಿಯೋ ಮಂದಿರಗಳು	ಮುದ್ರಣಾಲಯಗಳು
		ಹಸಿರು ತ್ರಿವರ್ಣ ಕಾರ್ಡುದಾರರು	ಕೇಸರಿ ಕಾರ್ಡು ದಾರರು	ಪಟ್ಟಣದ ಹಸಿರು ಕಾರ್ಡುದಾರರು	ಕೊಳಚೆ ಪ್ರದೇಶದ ಹಸಿರು ಕಾರ್ಡುದಾರರು	ಇತರೇ ಫೋಟೋ ಕಾರ್ಡುದಾರರು	ಪೋಲೀಸ್ ಕಾರ್ಡುದಾರರು	ಒಟ್ಟು	ಖಾಯಂ	ಸಂಚಾರಿ	ಒಟ್ಟು		
೧·	೨	೨೫	೨೬	೨೭	೨೮	೨೯	೩೦	೩೧	೩೨	೩೩	೩೪	೩೫	೩೬
೧	ಅಂಕೋಲಾ	೦೧೫೩೨೯	೦೩೮೪೧	೦೪೨೯	—	೦೨೪೩೪	೦೦೫೯	೦೨೨೦೯೨	೦೧	-	೦೧	-	
೨	ಭಟ್ಕಳ	೦೧೮೧೭೦	೦೩೩೩೩	—	೦೪೮೨	೦೫೩೪೯	೦೦೯೯	೦೨೭೪೩೩	೦೨	೧	೦೩	-	೧೧
೩.	ಹಳಿಯಾಳ	೦೦೭೪೪೧	೦೨೯೯೦	೦೬೬೯	೧೮೯೪	೧೩೩೫೬	೦೧೯೨	೦೩೬೫೪೨	೦೩	-	೦೩	೨	೧೪
೪.	ಹೊನ್ನಾವರ	೦೨೪೯೦೮	೦೪೮೨೭	೦೪೦೮	೦೨೦೭	೦೩೧೯೨	೦೦೫೬	೦೩೩೫೯೮	೦೨	೧	೦೩	೧	೦೭
೫.	ಕಾರವಾರ	೦೧೪೮೮೨	೦೭೫೨೧	—	೦೦೭೮	೧೧೬೭೨	೦೬೩೫	೦೩೪೭೮೮	೦೪	-	೦೪	-	೦೭
೬.	ಕುಮಟಾ	೦೧೮೬೪೨	೦೫೪೫೭	—	—	೦೪೮೯೨	೦೦೮೦	೦೨೯೦೭೧	೦೧	೨	೦೩	-	೦೩
೭.	ಮುಂಡಗೋಡ	೦೧೫೪೧೪	೦೩೩೩೦	—	—	—	೦೦೪೦	೦೧೮೭೮೪	೦೧	-	೦೧	೧	೦೩
೮.	ಸಿದ್ದಾಪುರ	೦೧೩೪೫೮	೦೪೯೫೫	—	—	—	೦೦೪೦	೦೧೮೪೫೩	-	೨	೦೨	-	೦೫
೯.	ಶಿರಸಿ	೦೧೫೩೦೬	೦೭೪೬೮	—	೦೦೪೦	೦೯೭೨೩	೦೧೬೦	೦೩೨೬೯೭	೦೩	೧	೦೪	೨	೧೬
೧೦.	ಸುಪಾ	೦೦೭೭೬೧	೦೨೬೪೯	—	—	—	೦೦೭೫	೦೧೦೪೮೫	-	-	-	-	-
೧೧.	ಯಲ್ಲಾಪುರ	೦೦೦೬೨೦	೦೪೬೩೨	—	—	—	೦೦೪೦	೦೧೫೨೯೨	೦೧	-	೦೧	೧	೦೪
	ಒಟ್ಟೂ ಮೊತ್ತ	೧೭೧೯೩೧	೫೧೦೦೩	೧೫೦೬	೨೭೦೧	೫೦೬೧೮	೧೪೭೬	೨೭೯೨೩೫	೧೮	೭	೨೫	೭	೯೭

೨. ವಿಸ್ತೀರ್ಣ ಮತ್ತು ಜನಸಂಖ್ಯೆ

ಕ್ರ. ನಂ.	ತಾಲೂಕು	ಕುಡಿಯುವ ನೀರಿನ ಪೂರೈಕೆ: ಕೈಪಂಪ ಬಾವಿಗಳು: ವರ್ಷದಲ್ಲಿ ಕೊರೆದ ಕೈಪಂಪುಗಳು	ಕೈಪಂಪ ಬಾವಿಗಳು: ಒಟ್ಟಾರೆ ಕೈಪಂಪು ಬಾವಿಗಳು	ಒಟ್ಟಾರೆ: ಕೊಳವೆನೀರು ಸರಬರಾಜು ಯೋಜನೆಗಳು	ಒಟ್ಟಾರೆ: ಚಿಕ್ಕ ನೀರು ಸರಬರಾಜು ಯೋಜನೆಗಳು	ವಿಸ್ತೀರ್ಣ (ಚ.ಕಿ.ಮಿ. ಗಳಲ್ಲಿ)	ಜನಸಂಖ್ಯೆ: ಗ್ರಾಮೀಣ	ಜನಸಂಖ್ಯೆ: ನಗರ	ಜನಸಂಖ್ಯೆ: ಒಟ್ಟು	ಗಂಡಸರು: ಗ್ರಾಮೀಣ	ಗಂಡಸರು: ನಗರ	ಗಂಡಸರು: ಒಟ್ಟು
೧	೨	೩೭	೩೮	೩೯	೪೦	೪೧	೪೨	೪೩	೪೪	೪೫	೪೬	೪೭
೧.	ಅಂಕೋಲಾ	೦೨೪	೦೪೪೦	೦೩೨	೦೩೨	೦೦೯೧೯	೦೭೭೮೦೧	೦೧೩೫೦೯	೦೦೯೧೩೧೦	೦೩೯೯೨೨	೦೦೬೭೬೩	೦೪೬೬೮೫
೨.	ಭಟ್ಕಳ	೦೨೫	೦೩೩೯	೦೦೯	೦೨೩	೦೦೩೪೯	೦೯೭೫೩೯	೦೩೧೪೭೮	೦೧೨೯೦೦೭	೦೪೮೩೧೨	೦೧೫೫೨೫	೦೬೩೮೩೭
೩.	ಹಳಿಯಾಳ	೦೩೭	೦೭೦೪	೦೩೫	೦೫೦	೦೦೮೪೭	೦೭೦೨೯೪	೦೭೬೭೭೦	೦೧೪೭೦೬೪	೦೩೬೨೮೫	೦೩೯೩೦೮	೦೭೫೫೯೩
೪.	ಹೊನ್ನಾವರ	೦೨೭	೦೫೨೬	೦೨೪	೦೩೭	೦೦೭೫೫	೧೨೯೬೫೦	೦೧೬೧೯೨	೦೧೪೫೮೪೨	೦೬೪೬೧೮	೦೦೬೧೭೧	೦೭೨೭೮೭
೫.	ಕಾರವಾರ	೦೨೫	೦೪೩೨	೦೧೯	೦೩೩	೦೦೭೩೨	೦೭೯೪೧೬	೦೬೦೮೬೬	೦೧೪೦೨೮೨	೦೪೦೦೧೫	೦೩೧೫೫೯	೦೭೧೬೭೪
೬.	ಕುಮಟಾ	೦೪೧	೦೫೫೪	೦೩೯	೦೩೭	೦೦೫೮೨	೧೦೭೯೬೩	೦೨೬೧೮೧	೦೧೩೪೧೪೪	೦೫೪೫೫೦	೦೧೩೨೮೧	೦೬೭೮೩೧
೭.	ಮುಂಡಗೋಡ	೦೨೦	೦೫೩೭	೦೩೪	೦೫೦	೦೦೬೬೮	೦೭೫೦೪೬	—	೦೦೭೫೦೪೬	೦೩೯೬೮೯	—	೦೩೯೬೮೯
೮.	ಸಿದ್ದಾಪುರ	೦೦೪	೦೫೫೫	೦೮೧	೦೨೫	೦೦೮೫೯	೦೯೧೬೪೬	—	೦೦೯೧೬೪೬	೦೪೬೪೫೬	—	೦೪೬೪೫೬
೯.	ಶಿರಸಿ	೦೦೨	೦೯೫೦	೦೫೧	೦೩೮	೦೧೩೨೦	೧೦೨೦೪೦	೦೫೦೮೯೫	೦೧೫೨೯೩೫	೦೫೨೦೯೪	೦೨೬೧೨೦	೦೭೮೩೧೪
೧೦.	ಸುಪಾ	೦೩೬	೦೩೪೨	೦೩೨	೦೧೯	೦೧೮೯೦	೦೪೩೪೪೭	೦೦೩೩೭೧	೦೦೪೬೮೧೮	೦೨೨೧೯೮	೦೦೧೭೪೨	೦೨೩೯೪೦
೧೧.	ಯಲ್ಲಾಪುರ	೦೨೨	೦೯೧೯	೦೧೩	೦೪೦	೦೧೩೦೧	೦೫೦೯೦೨	೦೧೫೨೫೪	೦೦೬೮೧೫೬	೦೨೫೯೯೫	೦೦೭೮೯೬	೦೩೩೮೯೧
ಒಟ್ಟು ಮೊತ್ತ		೨೬೩	೬೨೯೮	೩೬೯	೩೮೪	೧೦೨೯೧	೯೨೫೭೭೪	೨೯೪೫೧೬	೧೨೨೦೨೬೦	೪೭೦೩೩೨	೧೫೦೩೬೫	೬೨೦೬೯೭

ಅ. ನಂ.	ತಾಲೂಕು	ಹೆಂಗಸರು ಗ್ರಾಮೀಣ	ಹೆಂಗಸರು ನಗರ	ಹೆಂಗಸರು ಒಟ್ಟು	ಕೆಲಸಗಾರರು (೧೯೯೧)	ಕೆಲಸಗಾರರಲ್ಲದವರು (೧೯೯೧)
೧	೨	೪೮	೪೯	೫೦	೫೧	೫೨
೧.	ಅಂಕೋಲಾ	೦೩೭೮೭೯	೦೦೬೭೬೪	೦೪೪೬೨೫	೦೩೩೩.೨೮	೦೫೭೯೮೨
೨.	ಭಟ್ಕಳ	೦೪೯೨೨೭	೦೧೫೯೫೩	೦೬೫೧೮೦	೦೩೬೧೧೩	೦೯೨೯೦೪
೩.	ಹಳಿಯಾಳ	೦೩೪೦೦೯	೦೩೭೪೬೨	೦೭೧೪೭೧	೦೫೩೩೯೨	೦೯೩೬೭೨
೪.	ಹೊನ್ನಾವರ	೦೬೫೦೩೪	೦೦೮೦೨೧	೦೭೩೦೫೫	೦೪೬೧೪೨	೦೯೯೭೦೦
೫.	ಕಾರವಾರ	೦೩೯೩೦೧	೦೨೯೩೦೭	೦೬೮೬೦೮	೦೪೪೩೮೯	೦೯೫೮೯೩
೬.	ಕುಮಟಾ	೦೫೩೪೧೩	೦೧೨೯೦೦	೦೬೬೩೧೩.	೦೪೬೦೭೯	೦೮೮೦೬೫
೭.	ಮುಂಡಗೋಡ	೦೩೫೩೫೭	–	೦೩೫೩೫೭	೦೩೦೯೦೪	೦೪೪೧೪೨
೮.	ಸಿದ್ದಾಪುರ	೦೪೫೧೯೦	–	೦೪೫೧೯೦	೦೩೬೮೮೩	೦೫೪೭೬೩
೯.	ಶಿರಸಿ	೦೪೯೮೪೬	೦೨೪೭೭೫	೦೭೪೬೨೧	೦೬೦೭೧೮	೦೯೨೨೧೭
೧೦.	ಸುಪಾ	೦೨೧೨೪೯	೦೦೧೬೨೯	೦೨೨೮೭೮	೦೧೭೧೪೩	೦೨೯೬೭೫
೧೧.	ಯಲ್ಲಾಪುರ	೦೨೪೯೦೭	೦೦೭೩೫೮	೦೩೨೨೬೫	೦೨೪೪೫೧	೦೪೧೮೦೫
ಒಟ್ಟೂ ಮೊತ್ತ		೪೫೫೪೧೨	೧೪೪೧೬೧	೫೯೯೫೭೩	೪೨೯೫೪೨	೭೯೦೭೧೮

ಕ್ರ. ಸಂ.	ತಾಲೂಕು	೧೯೯೧ರ ಗಣತಿ ಹರಿಜನರು ಗ್ರಾಮೀಣ	ಹರಿಜನರು ನಗರ	ಹರಿಜನರು ಒಟ್ಟು	ಗಿರಿಜನರು ಗ್ರಾಮೀಣ	ಗಿರಿಜನರು ನಗರ	ಗಿರಿಜನರು ಒಟ್ಟು	ಜನಸಾಂದ್ರತೆ ಪ್ರತಿ ಚ.ಕಿ.ಮಿ.ಗೆ ೧೯೯೧	ದಶಕದ ಜನಸಂಖ್ಯೆಯ ಬೆಳವಣಿಗೆಯ ಪ್ರಮಾಣ (೧೯೮೧-೯೧ಶೇ)	ಲಿಂಗ ಪ್ರಮಾಣ
೧	೨	೫೩	೫೪	೫೫	೫೬	೫೭	೫೮	೫೯	೬೦	೬೧
೧.	ಅಂಕೋಲಾ	೦೪೮೭೬	೦೨೨೯೦	೦೭೧೬೫	೦೦೧೫	೦೦೦೧	೦೦೦೧೬	೦೯೯	೧೩	೦೯೫೬
೨.	ಭಟ್ಕಳ	೧೧೫೧೬	೦೦೪೯೭	೧೨೦೦೩	೭೩೧೯	೦೨೨೮	೦೭೫೪೭	೩೭೦	೩೩	೧೦೨೧
೩.	ಹಳಿಯಾಳ	೦೪೪೮೭	೦೭೭೧೫	೧೨೨೦೨	೦೩೦೦	೦೪೧೨	೦೦೭೧೨	೧೭೪	೧೧	೦೯೪೫
೪.	ಹೊನ್ನಾವರ	೦೬೮೯೫	೦೦೬೧೯	೦೭೫೧೪	೦೦೧೨	೦೦೧೦	೦೦೦೨೨	೧೯೩	೧೪	೧೦೦೪
೫.	ಕಾರವಾರ	೦೨೧೯೪	೦೨೭೯೧	೦೪೯೮೫	೦೦೭೭	೦೧೪೩	೦೦೨೨೦	೧೯೨	೧೨	೦೯೫೭
೬.	ಕುಮಟಾ	೦೬೪೩೫	೦೧೭೮೭	೦೮೨೨೨	೦೦೦೩	೦೦೩೪	೦೦೦೩೭	೨೩೦	೧೪	೦೯೭೮
೭.	ಮುಂಡಗೋಡ	೧೦೬೭೩	–	೧೦೬೭೩	೦೪೬೩	–	೦೦೪೬೩	೧೧೨	೨೮	೦೮೯೧
೮.	ಸಿದ್ದಾಪುರ	೦೬೨೧೩	–	೦೬೨೧೩	೦೦೭೬	–	೦೦೦೭೬	೧೦೭	೦೮	೦೯೭೩
೯.	ಶಿರಸಿ	೦೯೩೮೪	೦೭೧೯೬	೧೬೫೮೦	೦೨೯೪	೦೨೦೭	೦೦೫೦೧	೧೧೬	೧೩	೦೯೫೩
೧೦.	ಸುಪಾ	೦೨೬೪೯	೦೦೩೭೧	೦೩೦೨೦	೦೪೦೧	೦೦೩೬	೦೦೪೩೭	೦೨೫	೧೦	೦೯೫೬
೧೧.	ಯಲ್ಲಾಪುರ	೦೨೧೬೯	೦೧೨೩೩	೦೩೪೦೨	೦೧೧೪	೦೦೨೩	೦೦೧೩೭	೦೫೧	೧೦	೦೯೫೨
ಒಟ್ಟು ಮೊತ್ತ		೬೭೪೯೧	೨೪೪೯೯	೯೧೯೯೦	೯೦೭೪	೧೦೯೪	೧೦೧೬೮	೧೧೯	೧೪	೯೬೬

೩. ಸಾರಿಗೆ ಮತ್ತು ಸಂಪರ್ಕ

ಅ. ನಂ.	ತಾಲೂಕು	ನೋಂದಣಿಯಾದ ಮೋಟಾರು ವಾಹನಗಳು						ರೈಲುಮಾರ್ಗಗಳು			
		ಮೋಟಾರು ಸೈಕಲ್ಲುಗಳು	ಮೋಟಾರು ಕಾರುಗಳು	ಸರಕು ವಾಹನಗಳು	ಇತರೇ ವಾಹನಗಳು	ಆಟೋ ರಿಕ್ಷಾಗಳು	ಒಟ್ಟು	ಮೀಟರ್ ಗೇಜ್	ಬ್ರಾಡ್ ಗೇಜ್	ಒಟ್ಟು	ರೈಲ್ವೆ ನಿಲ್ದಾಣಗಳು
೧	೨	೨೦೭	೨೦೮	೨೦೯	೨೧೦	೨೧೧	೨೧೨	೨೧೩	೨೧೪	೨೧೫	೨೧೬
೧.	ಅಂಕೋಲಾ	೦೧೬೮೮	೦೦೯೭	೦೫೨೭	೦೧೬೭	೦೦೭೪	೦೨೫೫೩	—	೦೨೪	೦೨೪	೦೨
೨.	ಭಟ್ಕಳ	೦೪೯೩೪	೦೩೮೭	೦೨೩೬	೦೨೫೭	೦೫೪೫	೦೬೩೫೯	—	೦೨೪	೦೨೪	೦೨
೩.	ಹಳಿಯಾಳ	೦೩೫೩೨	೦೩೦೮	೦೫೬೦	೦೪೫೭	೦೧೦೫	೦೪೯೬೨	೨೮	—	೦೨೮	೦೩
೪.	ಹೊನ್ನಾವರ	೦೩೪೧೦	೦೧೫೦	೦೩೫೯	೦೨೦೪	೦೦೧೨	೦೪೨೩೫	—	೦೩೧	೦೩೧	೦೨
೫.	ಕಾರವಾರ	೦೮೮೧೫	೦೮೮೧	೧೪೧೩	೦೭೭೬	೦೬೩೩	೧೨೫೧೮	—	೦೨೬	೦೨೬	೦೨
೬.	ಕುಮಟಾ	೦೫೧೯೭	೦೧೮೮	೦೩೫೯	೦೨೬೬	೦೧೫೯	೦೬೧೬೯	—	೦೨೬	೦೨೬	೦೨
೭.	ಮುಂಡಗೋಡ	೦೧೩೬೯	೦೧೨೬	೦೦೯೧	೦೩೪೭	೦೦೩೦	೦೧೯೬೩	—	—	—	—
೮.	ಸಿದ್ದಾಪುರ	೦೨೬೯೦	೦೦೪೨	೦೧೭೮	೦೧೮೨	೦೦೫೧	೦೩೧೪೩	—	—	—	—
೯.	ಶಿರಸಿ	೦೯೦೬೦	೦೪೫೫	೦೬೫೦	೧೬೦೭	೦೪೬೧	೧೨೨೩೩	—	—	—	—
೧೦.	ಸುಪಾ	೦೦೩೨೯	೦೦೦೯	೦೦೧೭	೦೦೩೦	—	೦೦೩೮೫	೨೦	—	೦೨೦	೦೨
೧೧.	ಯಲ್ಲಾಪುರ	೦೨೨೪೨	೦೧೦೮	೦೧೧೧	೦೨೯೨	೦೦೬೨	೦೨೮೧೫	—	—	—	—
ಒಟ್ಟು ಮೊತ್ತ		೪೩೨೬೬	೨೭೫೧	೪೫೦೧	೪೫೮೫	೨೨೩೨	೫೭೩೩೫	೪೮	೧೩೧	೧೭೯	೧೫

ಅ. ನಂ.	ತಾಲೂಕು	ರಸ್ತೆಗಳ ಉದ್ದಳತೆ (ಕಿ.ಮಿ.)											
		ರಾಷ್ಟ್ರೀಯ ಹೆದ್ದಾರಿ	ರಾಜ್ಯ ಹೆದ್ದಾರಿ	ಮುಖ್ಯ ರಸ್ತೆಗಳು	ಇತರೇ ಜಿಲ್ಲಾ ರಸ್ತೆಗಳು	ಹಳ್ಳಿ ರಸ್ತೆಗಳು	ಟಡಿಬಿಗಳು	ಅರಣ್ಯ ರಸ್ತೆಗಳು	ನೀರಾವರಿ ಇಲಾಖೆ ರಸ್ತೆಗಳು	ಮುನಸಿಪಾಲಟಿ ರಸ್ತೆಗಳು	ಪಂಚಾಯತ ರಸ್ತೆಗಳು	ಒಟ್ಟು	ಪಕ್ಕಾ ರಸ್ತೆಗಳು
೧	೨	೨೧೭	೨೧೮	೨೧೯	೨೨೦	೨೨೧	೨೨೨	೨೨೩	೨೨೪	೨೨೫	೨೨೬	೨೨೭	೨೨೮
೧.	ಅಂಕೋಲಾ	೦೨೭	೦೪೨	೦೬೩	೦೨	೦೧೭೨	೦೦೦೪	೦೨೬	೦೨	೦೦೭	ಲಭ್ಯವಿಲ್ಲ	೦೩೪೫	೦೨೪೯
೨.	ಭಟ್ಕಳ	೦೨೪	—	೦೪೪	—	೦೧೫೯	೦೦೭೦	೦೦೧	೦೫	೦೦೭		೦೩೧೦	೦೧೬೨
೩.	ಹಳಿಯಾಳ	—	೦೬೫	೦೭೩	೦೩	೦೧೪೧	೦೦೯೩	೧೨೫	೧೩	೧೦೩		೦೬೧೬	೦೩೧೯
೪.	ಹೊನ್ನಾವರ	೦೩೨	೦೪೫	೦೭೮	—	೦೧೯೦	೦೦೮೪	೦೦೫	೦೫	೦೩೩		೦೪೭೩	೦೩೦೭
೫.	ಕಾರವಾರ	೦೩೭	೧೦೪	೦೩೫	೦೨	೦೧೩೪	೦೦೧೧	೦೭೮	೦೩	೦೬೦		೦೪೬೪	೦೨೫೩
೬.	ಕುಮಟಾ	೦೩೧	೦೬೨	೦೭೬	—	೦೧೬೬	೦೦೫೯	೦೦೪	೦೨	೦೩೩		೦೪೩೩	೦೨೬೪
೭.	ಮುಂಡಗೋಡ	—	೦೭೦	೦೪೮	—	೦೧೮೫	೦೦೩೯	೦೬೨	೧೬	೦೧೮		೦೪೩೮	೦೨೭೮
೮.	ಸಿದ್ದಾಪುರ	—	೧೧೫	೦೩೧	—	೦೩೨೪	೦೨೯೮	೦೦೨	—	೦೩೮		೦೮೦೮	೦೩೪೫
೯.	ಶಿರಸಿ	—	೦೯೪	೧೩೮	೦೯	೦೨೬೦	೦೨೯೦	೦೦೪	೦೨	೦೮೫		೦೮೮೨	೦೫೦೮
೧೦.	ಸುಪಾ	೦೧೬	೦೯೬	೧೬೬	೧೨	೦೧೬೮	೦೨೪೪	೦೯೮	—	—		೦೮೦೦	೦೪೦೩
೧೧.	ಯಲ್ಲಾಪುರ	—	೧೩೮	೦೪೯	—	೦೩೧೦	೦೨೪೧	೦೪೩	—	—		೦೭೮೧	೦೪೩೮
ಒಟ್ಟು ಮೊತ್ತ		೧೬೭	೮೩೧	೮೦೧	೨೮	೨೨೧೦	೧೪೩೩	೪೪೮	೪೮	೩೮೪	೫೭೩	೬೩೫೦	೩೫೨೬

ಅ. ನಂ.	ತಾಲೂಕು	ಭಾರೀ ಸೇತುವೆಗಳು	ಅಂಚೆ ಕಛೇರಿಗಳು	ತಂತಿ ಕಛೇರಿಗಳು	ಟಪಾಲ ಪೆಟ್ಟಿಗೆಗಳು	ಟೆಲಿಫೋನು ವಿನಿಮಯ ಕೇಂದ್ರಗಳು	ಬಳಕೆಯಲ್ಲಿರುವ ಟೆಲಿಫೋನುಗಳು	ಸಾರ್ವಜನಿಕ ದೂರವಾಣಿ ಕಛೇರಿಗಳು
೧	೨	೨೨೯	೨೩೦	೨೩೧	೨೩೨	೨೩೩	೨೩೪	೨೩೫
೧.	ಅಂಕೋಲಾ	೦೧	೦೩೯	೦೦೭	೦೦೭೨	೦೦೫	೦೧೯೮೯	೦೨೦
೨.	ಭಟ್ಕಳ	–	೦೨೮	೦೨೨	೦೦೮೯	೦೦೬	೦೪೬೬೩	೦೫೭
೩.	ಹಳಿಯಾಳ	೦೩	೦೩೭	೦೧೪	೦೧೧೧	೦೦೫	೦೩೨೧೬	೦೩೫
೪.	ಹೊನ್ನಾವರ	೦೩	೦೬೧	೦೪೧	೦೧೭೭	೦೦೫	೦೪೨೧೨	೦೫೩
೫.	ಕಾರವಾರ	೦೨	೦೫೩	೦೩೨	೦೧೬೩	೦೦೩	೦೬೮೦೪	೧೨೩
೬.	ಕುಮಟಾ	೦೧	೦೫೬	೦೪೦	೦೧೪೭	೦೧೦	೦೪೩೭೭	೦೪೪
೭.	ಮುಂಡಗೋಡ	–	೦೨೨	೦೦೯	೦೯೧	೦೦೮	೦೧೦೮೦	೦೦೫
೮.	ಸಿದ್ದಾಪುರ	೦೧	೦೫೬	೦೦೮	೦೧೫೭	೦೦೯	೦೧೫೯೮	೦೦೩
೯.	ಶಿರಸಿ	೦೧	೦೭೯	೦೨೮	೦೧೮೬	೦೧೮	೦೫೪೭೨	೦೪೮
೧೦.	ಸುಪಾ	೦೪	೦೨೫	೦೦೬	೦೦೮೦	೦೦೫	೦೦೪೭೮	೦೦೨
೧೧.	ಯಲ್ಲಾಪುರ	೦೧	೦೩೮	೦೧೩	೦೧೪೧	೦೧೦	೦೧೩೮೬	೦೦೩
ಒಟ್ಟು ಮೊತ್ತ		೧೭	೪೯೪	೨೩೦	೧೪೧೪	೧೦೩	೩೫೨೭೫	೪೧೩

೪. ಶಿಕ್ಷಣ

ಅ. ನಂ.	ತಾಲೂಕು	ಸಾಕ್ಷರತೆಯ ಪ್ರಮಾಣ (ಶೇ.) ೧೯೯೧ ರ ಗಣತಿ			ಶಿಶುವಿಹಾರಗಳು			ಪ್ರಾಥಮಿಕ		
						ವಿದ್ಯಾರ್ಥಿಗಳು			ವಿದ್ಯಾರ್ಥಿಗಳು	
		ಗಂಡಸರು	ಹೆಂಗಸರು	ಒಟ್ಟು	ಶಾಲೆಗಳು	ಗಂಡು	ಹೆಣ್ಣು	ಶಾಲೆಗಳು	ಗಂಡು	ಹೆಣ್ಣು
೧	೨	೨೩೬	೨೩೭	೨೩೮	೨೩೯	೨೪೦	೨೪೧	೨೪೨	೨೪೩	೨೪೪
೧.	ಅಂಕೋಲಾ	೭೮	೫೬	೬೭	೦೮೯	೦೧೩೮೩	೦೧೨೨೪	೦೧೫೬	೦೦೮೮೨೬	೦೦೭೪೭೬
೨.	ಭಟ್ಕಳ	೭೧	೫೨	೬೧	೦೩೪	೦೧೩೩೮	೦೧೧೭೧	೦೧೫೬	೦೧೩೨೧೬	೦೧೩೦೦೦
೩.	ಹಳಿಯಾಳ	೭೧	೪೮	೬೦	೦೬೧	೦೧೩೮೦	೦೧೨೮೫	೦೧೫೯	೦೧೩೬೨೬	೦೧೨೪೩೮
೪.	ಹೊನ್ನಾವರ	೭೭	೫೭	೬೭	೦೮೬	೦೧೫೫೬	೦೧೪೯೦	೦೨೭೬	೦೧೫೧೭೬	೦೧೩೬೫೪
೫.	ಕಾರವಾರ	೮೫	೬೭	೭೬	೦೭೦	೦೨೧೯೧	೦೨೦೪೪	೦೨೦೭	೦೧೨೬೩೧	೦೦೦೧೩೧
೬.	ಕುಮಟಾ	೮೦	೫೯	೭೦	೦೫೦	೦೧೨೯೮	೦೧೧೬೭	೦೨೧೬	೦೧೨೬೯೭	೦೧೧೫೨೦
೭.	ಮುಂಡಗೋಡ	೬೩	೪೧	೫೨	೦೩೯	೦೧೧೭೪	೦೧೦೨೬	೦೧೨೪	೦೦೭೨೯೩	೦೦೬೧೮೭
೮.	ಸಿದ್ದಾಪುರ	೭೯	೬೦	೭೦	೦೫೩	೦೧೨೫೪	೦೧೧೮೧	೦೨೧೨	೦೦೮೬೮೯	೦೦೮೪೨೬
೯.	ಶಿರಸಿ	೮೧	೬೭	೭೪	೦೬೫	೦೧೯೫೨	೦೧೭೫೨	೦೨೮೨	೦೧೨೮೬೩	೦೧೧೬೦೯
೧೦.	ಸುಪಾ	೬೭	೪೨	೫೫	೦೧೭	೦೦೭೪೨	೦೦೬೫೬	೦೧೬೩	೦೦೪೮೮೩	೦೦೪೧೮೭
೧೧.	ಯಲ್ಲಾಪುರ	೭೫	೫೮	೬೬	೦೨೫	೦೦೯೪೯	೦೦೮೪೧	೦೧೭೩	೦೦೬೯೦೦	೦೦೬೪೭೫
ಒಟ್ಟೂ ಮೊತ್ತ		೭೬	೫೭	೬೭	೫೮೯	೧೫೨೧೭	೧೩೮೩೭	೨೧೨೪	೧೧೬೭೯೪	೧೦೬೧೦೧

ಕ್ರ. ನಂ.	ತಾಲ್ಲೂಕು	ಪ್ರೌಢ			ಶಿಕ್ಷಕರ ತರಬೇತಿ ಮತ್ತು ಶಿಕ್ಷಣ ಬೋಧನೆಗಳು			ದೈಹಿಕ ಶಿಕ್ಷಣ ಶಾಲೆಗಳು			ಕಿರಿಯ ಮಹಾವಿದ್ಯಾಲಯಗಳು		
			ವಿದ್ಯಾರ್ಥಿಗಳು			ವಿದ್ಯಾರ್ಥಿಗಳು			ವಿದ್ಯಾರ್ಥಿಗಳು			ವಿದ್ಯಾರ್ಥಿಗಳು	
		ಶಾಲೆಗಳು	ಗಂಡು	ಹೆಣ್ಣು	ಶಾಲೆಗಳು	ಗಂಡು	ಹೆಣ್ಣು	ಕಾಲೇಜುಗಳು	ಗಂಡು	ಹೆಣ್ಣು	ಸಂಖ್ಯೆ	ಗಂಡು	ಹೆಣ್ಣು
೧.	೨	೨೪೫	೨೪೬	೨೪೭	೨೪೮	೨೪೯	೨೫೦	೨೫೧	೨೫೨	೨೫೩	೨೫೪	೨೫೫	೨೫೬
೧.	ಅಂಕೋಲಾ	೦೨೧	೦೧೮೨೮	೦೧೬೦೨	೧	೪೧	೦೭೭	೧	೦೩೩	೦೭	೦೧	೦೦೨೪	೦೦೨೯
೨.	ಭಟ್ಕಳ	೦೪೧	೦೨೦೮೪	೦೦೭೫೩	-	—	—	-	—	—	೦೨	೦೧೯೮	೦೦೭೯
೩.	ಹಳಿಯಾಳ	೦೨೧	೦೩೪೨೨	೦೩೦೬೫	-	—	—	-	—	—	೦೬	೦೭೩೯	೦೭೩೫
೪.	ಹೊನ್ನಾವರ	೦೨೨	೦೩೦೩೬	೦೨೮೭೫	-	—	—	೧	೦೩೫	೦೫	೦೬	೦೩೬೨	೦೩೨೬
೫.	ಕಾರವಾರ	೦೪೦	೦೪೦೪೨	೦೩೪೭೮	-	—	—	೧	೦೩೬	೦೪	೦೨	೦೩೯೬	೦೩೦೮
೬.	ಕುಮಟಾ	೦೨೫	೦೩೦೬೮	೦೨೪೬೦	೧	೫೧	೦೬೭	-	—	—	೦೧	೦೧೧೮	೦೧೦೯
೭.	ಮುಂಡಗೋಡ	೦೧೨	೦೦೯೫೯	೦೦೭೭೨	-	—	—	-	—	—	೦೩	೦೨೦೫	೦೧೪೧
೮.	ಸಿದ್ದಾಪುರ	೦೨೨	೦೧೮೯೫	೦೧೬೦೦	-	—	—	-	—	—	೦೨	೦೧೦೩	೦೧೧೪
೯.	ಶಿರಸಿ	೦೨೭	೦೩೨೮೪	೦೩೧೩೪	-	—	—	-	—	—	೦೩	೦೩೫೭	೦೪೮೧
೧೦.	ಸುಪಾ	೦೧೨	೦೦೭೩೭	೦೦೪೨೬	-	—	—	-	—	—	—	—	—
೧೧.	ಯಲ್ಲಾಪುರ	೦೧೩	೦೧೫೨೭	೦೧೧೫೬	-	—	—	-	—	—	೦೨	೦೩೧೮	೦೨೯೦
	ಒಟ್ಟು ಮೊತ್ತ	೨೨೯	೨೫೮೮೨	೨೨೩೩೧	೨	೯೨	೧೪೪	೩	೧೦೪	೧೬	೨೮	೨೮೨೦	೨೭೧೨

ಅ. ನಂ.	ತಾಲೂಕು	ಪಾಲಿಟೆಕ್ನಿಕ್‌ಗಳು ಮತ್ತು ಇಂಜಿನಿಯರಿಂಗ ಶಾಲೆಗಳು			ಇಂಜಿನಿಯರಿಂಗ			ಬಿ. ಎಡ್			ಕಾನೂನು			ಸಾಮಾನ್ಯ ಶಿಕ್ಷಣ		
			ವಿದ್ಯಾರ್ಥಿಗಳು			ವಿದ್ಯಾರ್ಥಿಗಳು			ವಿದ್ಯಾರ್ಥಿಗಳು			ವಿದ್ಯಾರ್ಥಿಗಳು			ವಿದ್ಯಾರ್ಥಿಗಳು	
		ಶಾಲೆಗಳು	ಗಂಡು	ಹೆಣ್ಣು	ಇಂಜಿನಿಯರಿಂಗ ಶಾಲೆಗಳು	ಗಂಡು	ಹೆಣ್ಣು	ಕಾಲೇಜುಗಳು	ಗಂಡು	ಹೆಣ್ಣು	ಕಾಲೇಜುಗಳು	ಗಂಡು	ಹೆಣ್ಣು	ಕಾಲೇಜುಗಳು	ಗಂಡು	ಹೆಣ್ಣು
೧	೨	೨೫೭	೨೫೮	೨೫೯	೨೬೦	೨೬೧	೨೬೨	೨೬೩	೨೬೪	೨೬೫	೨೬೬	೨೬೭	೨೬೮	೨೬೯	೨೭೦	೨೭೧
೧.	ಅಂಕೋಲಾ	–	—	—	-	—	-	-	–	—	-	—	–	೦೧	೦೮೬೮	೦೮೨೬
೨.	ಭಟ್ಕಳ	೦೧	೦೨೭೫	೦೧೬	೧	೭೬೯	-	-	–	—	-	—	–	೦೧	೦೭೮೨	೦೩೫೬
೩.	ಹಳಿಯಾಳ	೦೨	೦೧೫೧	—	-	—	-	-	–	—	-	—	–	೦೨	೦೫೮೭	೦೫೬೮
೪.	ಹೊನ್ನಾವರ	೦೧	೦೧೧೭	—	-	—	-	-	–	—	೧	೦೨೮	೦೭	೦೧	೦೮೪೪	೦೮೪೨
೫.	ಕಾರವಾರ	೦೪	೦೪೭೮	೦೬೪	-	—	-	೧	೫೨	೦೪೦	-	—	–	೦೬	೨೦೦೦	೧೪೫೦
೬.	ಕುಮಟಾ	೦೧	೦೪೯೭	೦೬೨	-	—	-	೧	೩೧	೦೬೯	-	—	–	೦೨	೧೧೯೮	೧೦೭೬
೭.	ಮುಂಡಗೋಡ	–	—	—	-	—	-	-	–	—	-	—	–	೦೧	೦೧೭೧	೦೧೯೮
೮.	ಸಿದ್ದಾಪುರ	–	—	—	-	—	-	-	–	—	-	—	–	೦೨	೦೩೦೪	೦೧೯೮
೯.	ಶಿರಸಿ	೦೨	೦೩೮೪	೦೩೦	-	—	-	-	–	—	೧	೧೯೬	೪೪	೦೨	೧೩೪೦	೧೨೦೮
೧೦.	ಸುಪಾ	–	—	—	-	—	-	-	–	—	-	—	–	–	–	–
೧೧.	ಯಲ್ಲಾಪುರ	–	—	—	-	—	-	-	–	—	-	—	–	೦೧	೦೨೪೭	೦೧೭೯
	ಒಟ್ಟೂ ಮೊತ್ತ	೧೧	೧೯೦೨	೧೭೨	೧	೭೬೯	-	೨	೮೩	೧೦೯	೨	೨೨೪	೫೧	೧೯	೮೪೪೧	೬೭೯೯

೫ ಇತರೇ ಅಭಿವೃದ್ಧಿ ಕಾರ್ಯಕ್ರಮಗಳು

ಅ. ನಂ.	ತಾಲೂಕು	ಪ್ರಯೋಜನ ಪಡೆದವರ ಸಂಖ್ಯೆ: ಸಮಗ್ರ ಗ್ರಾಮೀಣ ಅಭಿವೃದ್ಧಿ ಯೇಜನೆ	ಪ್ರಯೋಜನ ಪಡೆದವರ ಸಂಖ್ಯೆ: ಡ್ವಾಕ್ರಾ	ಪ್ರಯೋಜನ ಪಡೆದವರ ಸಂಖ್ಯೆ: ಟ್ರೈಸಂ ಯೋಜನೆ (ತರಬೇತಿ ಪಡೆದ ಅಭ್ಯರ್ಥಿಗಳು)	ಸ್ಥಾಪಿಸಲ್ಪಟ್ಟ ಜೈವಿಕ ಅನಿಲ ಯಂತ್ರಗಳು	ಜವಾಹರ ರೋಜಗಾರ ಯೋಜನೆ: ಸೃಷ್ಟಿಸಿದ ಮಾನವ ದಿನಗಳು (ಲಕ್ಷಗಳಲ್ಲಿ)	ಜವಾಹರ ರೋಜಗಾರ ಯೋಜನೆ: ಉಪಯೋಗಿಸಿದ ಆಹಾರ ಧಾನ್ಯಗಳು (ಮೆ.ಟನ್ನುಗಳಲ್ಲಿ)	ವಿತರಿಸಿದ ಸುಧಾರಿತ ಬೆಲೆಗಳು
೧	೨	೨೯೪	೨೯೫	೨೯೬	೨೯೭	೨೯೮	೨೯೯	೩೦೦
೧.	ಅಂಕೋಲಾ	೦೪೫೮	೦೨೨	೦೮೫	೦೦೯	೦.೭೦	-	೦೨೨೫
೨.	ಭಟ್ಕಳ	೦೬೮೭	೦೦೬	೦೭೫	೧೬೧	೧.೩೫	-	೦೩೦೦
೩.	ಹಳಿಯಾಳ	೦೪೦೦	೦೦೬	೦೬೦	೧೯೧	೦.೭೯	-	೦೩೦೦
೪.	ಹೊನ್ನಾವರ	೦೯೩೯	೦೦೬	೧೦೬	೦೦೯	೦.೮೨	-	೦೨೭೫
೫.	ಕಾರವಾರ	೦೪೬೫	೦೦೫	೦೮೮	೦೦೨	೦.೫೫	-	೦೨೫೦
೬.	ಕುಮಟಾ	೦೮೯೮	೦೦೬	೦೯೭	೦೦೬	೦.೮೦	-	೦೨೭೫
೭.	ಮುಂಡಗೋಡ	೦೬೩೦	೦೦೬	೦೬೫	೦೮೪	೦.೫೯	-	೦೦೭೫
೮.	ಸಿದ್ದಾಪುರ	೦೪೩೯	೦೦೬	೦೮೦	೦೭೪	೦.೬೪	-	೦೧೫೦
೯.	ಶಿರಸಿ	೦೬೮೯	೦೦೬	೦೮೦	೧೦೬	೧.೦೮	-	೦೩೫೦
೧೦.	ಸುಪಾ	೦೦೪೪	೦೦೩	೧೦೦	೦೦೪	೦.೪೧	-	೦೦೦೦
೧೧.	ಯಲ್ಲಾಪುರ	೦೩೮೦	೦೦೫	೦೯೩	೦೪೮	೦.೫೮	-	೦೦೦೦
ಒಟ್ಟೂ ಮೊತ್ತ		೬೧೨೯	೧೭೭	೯೩೦	೬೯೪	೮.೩೧	-	೨೫೦೦

ಕ್ರ. ಸಂ.	ತಾಲೂಕು	ಹಂಚಿದ ಮನೆ ನಿವೇಶನಗಳು	ಜನವಸತಿ ಕಾರ್ಯಕ್ರಮದಲ್ಲಿ ಕಟ್ಟಲ್ಪಟ್ಟ ಮನೆಗಳು: ನಿರ್ಮಲ ಗ್ರಾಮ ಯೋಜನೆ	ಅಂಬೇಡ್ಕರ ವಸತಿ	ಆಶ್ರಯ	ಇಂದಿರಾ ಆವಾಜ (೧೯೯೬-೯೭)	ಕೊಳಚೆ ಅಭಿವೃದ್ಧಿ ಯೋಜನೆಯಲ್ಲಿ ಕಟ್ಟಲ್ಪಟ್ಟ ಮನೆಗಳು ೧೯೯೮ ರ ಅಂತ್ಯದವರೆಗೆ
೧	೨	೩೦೧	೩೦೨	೩೦೩	೩೦೪	೩೦೫	೩೦೬
೧.	ಅಂಕೋಲಾ	೦೧೫೨	೦೨೮೩	೦೦೭೫	೦೨೧೬	೦೨೩	—
೨.	ಭಟ್ಕಳ	೦೦೫೮	೦೨೪೨	೦೨೮೫	೦೨೫೯	೦೭೮	—
೩.	ಹಳಿಯಾಳ	೦೭೨೪	೦೪೫೩	೦೧೨೪	೦೨೪೦	೦೦೧	೩೫೧
೪.	ಹೊನ್ನಾವರ	೦೧೯೭	೧೦೦೫	೦೧೯೦	೦೨೫೩	೦೩೦	—
೫.	ಕಾರವಾರ	೦೦೩೨	೦೨೨೬	೦೦೩೫	೦೨೦೭	೦೧೯	೦೫೪
೬.	ಕುಮಟಾ	೦೪೨	೦೩೮೦	೦೨೨೨	೦೨೫೨	೦೩೫	—
೭.	ಮುಂಡಗೋಡ	೦೨೬೮	೦೪೧೨	೦೨೭೫	೦೩೧೩	೦೫೪	—
೮.	ಸಿದ್ದಾಪುರ	೦೧೫೫	೦೨೫೬	೦೧೭೦	೦೩೩೬	೦೪೦	—
೯.	ಶಿರಸಿ	೦೭೧೩	೦೫೪೯	೦೧೨೫	೦೨೯೫	೦೬೦	—
೧೦.	ಸುಪಾ	೦೧೨೪	೦೪೯೭	೦೦೬೮	೦೨೬೭	೦೪೬	—
೧೧.	ಯಲ್ಲಾಪುರ	೦೮೨೨	೦೯೬೨	೦೦೭೦	೦೨೮೦	೦೧೯	—
	ಒಟ್ಟು ಮೊತ್ತ	೩೬೭೪	೫೨೬೫	೧೬೪೦	೨೯೧೮	೪೧೫	೪೦೫

ಕ್ರ. ಸಂ.	ತಾಲೂಕು	ಕೊಳಚೆ ಪ್ರದೇಶದ ಅಭಿವೃದ್ಧಿ ಯೋಜನೆ ವ್ಯಾಪ್ತಿಗೊಳಗಾದ ಜನಸಂಖ್ಯೆ ೧೯೯೭-೯೮	ಅರಣ್ಯ ಇಲಾಖೆಯವರು ನೆಟ್ಟ ಸಸಿಗಳು (ಲಕ್ಷ ಸಂಖ್ಯೆಗಳಲ್ಲಿ)	ಸ್ಥಾಪಿಸಿದ ಸಣ್ಣ ಕೈಗಾರಿಕಾ ಘಟಕಗಳು — ಚಾಲ್ತಿ ವರ್ಷಗಳಲ್ಲಿ			ಸ್ಥಾಪಿಸಿದ ಸಣ್ಣ ಕೈಗಾರಿಕಾ ಘಟಕಗಳು — ೩೧-೩-೧೯೯೮ ರ ಅಂತ್ಯದೊಳಗೆ			ವಯಸ್ಕರ ಶಿಕ್ಷಣ
				ಸಂಖ್ಯೆ	ಬಂಡವಾಳ (ಲಕ್ಷ ರೂ.ಗಳಲ್ಲಿ)	ಉದ್ಯೋಗ	ಸಂಖ್ಯೆ	ಬಂಡವಾಳ (ಲಕ್ಷ ರೂ.ಗಳಲ್ಲಿ)	ಉದ್ಯೋಗ	ಕೇಂದ್ರ ಅನುದಾನಿತ ಶಿಕ್ಷಣ ನಿಲಯಗಳು
೧	೨	೩೦೭	೩೦೮	೩೦೯	೩೧೦	೩೧೧	೩೧೨	೩೧೩	೩೧೪	೩೧೫
೧.	ಅಂಕೋಲಾ	—	೦೭	೦೦೮೬	೦೨೩೮	೦೬೩೭	೦೩೦೮	೦೭೯[illegible]	೦೨೮೩೧	—
೨.	ಭಟ್ಕಳ	—	೦೪	೦೧೫೬	೦೧೦೪	೦೩೫೪	೦೪೫೯	೦೭೦೬	೦೨೯೨೨	—
೩.	ಹಳಿಯಾಳ	೪೬೫	೧೧	೦೦೧೫	೦೦೮೪	೦೨೭೮	೦೩೨೪	೦೨೬೪	೦೧೯೮೩	೧೭
೪.	ಹೊನ್ನಾವರ	—	೦೬	೦೨೦೬	೦೧೨೧	೦೮೨೬	೦೭೯೮	೦೯೨೮	೦೪೭೮೨	—
೫.	ಕಾರವಾರ	೨೨೦	೦೩	೦೨೦೨	೦೨೫೨	೦೬೪೧	೦೮೦೨	೧೨೭೫	೦೧೫೪೨	೦೪
೬.	ಕುಮಟಾ	—	೦೮	೦೨೧೪	೦೨೯೮	೦೬೩೪	೦೭೧೭	೧೭೦೧	೦೫೦೪೬	—
೭.	ಮುಂಡಗೋಡ	—	೦೪	೦೦೭೮	೦೦೧೨	೦೧೫೬	೦೧೭೨	೦೧೭೧	೦೦೭೪೦	೦೯
೮.	ಸಿದ್ದಾಪುರ	—	೦೮	೦೦೯೭	೦೦೫೯	೦೨೨೬	೦೨೨೯	೦೨೦೨	೦೧೦೮೧	—
೯.	ಶಿರಸಿ	—	೦೬	೦೨೨೦	೦೧೫೧	೦೬೫೪	೦೬೮೪	೦೬೭೮	೦೩೯೮೮	—
೧೦.	ಸುಪಾ	—	೧೧	೦೦೨೩	೦೦೮೬	೦೦೯೨	೦೧೧೨	೦೧೨೧	೦೦೬೬೯	—
೧೧.	ಯಲ್ಲಾಪುರ	—	೦೫	೦೦೬೭	೦೦೨೫	೦೧೫೪	೦೨೧೬	೦೧೫೩	೦೦೯೮೭	೦೭
	ಒಟ್ಟು ಮೊತ್ತ	೬೮೫	೭೩	೧೪೬೪	೧೪೩೦	೪೬೫೨	೪೮೨೧	೬೯೯೭	೨೯೫೭೧	೩೭

[illegible]

೬ ಇತರೇ ಮಾಹಿತಿಗಳು

ಅ. ನಂ.	ತಾಲೂಕು	ಯುವಕ ಮಂಡಳಗಳು	ಯುವತಿ ಮಂಡಳಗಳು	ಮಹಿಳಾ ಮಂಡಳಗಳು	ಅಂಗನವಾಡಿ ಕೇಂದ್ರಗಳು	ವೀಕ್ಷಣಾಲಯ (ರಿಮ್ಯಾಂಡ ಹೋಮ)	ಸ್ವೀಕಾರ ಕೇಂದ್ರಗಳು (ರಿಸೇಪಶನ್ ಸೆಂಟರ)	ಶಿಶುಪಾಲನಾ ಕೇಂದ್ರಗಳು	ಮಹಿಳಾಮಂಡಳ ಫೆಡರೇಶನ್‌ಗಳು	ನಿರ್ಗತಿಕ ಅನಾಥ ಮಕ್ಕಳ ಕುಟೀರಗಳು
೧	೨	೩೦೬	೩೦೭	೩೦೮	೩೦೯	೩೨೦	೩೨೧	೩೨೨	೩೨೩	೩೨೪
೧.	ಅಂಕೋಲಾ	೦೧೦೫	೦೨೨	೦೩೦	೦೧೦೦	-	-	೦೨	೦೧	೧
೨.	ಭಟ್ಕಳ	೦೦೬೬	೦೧೯	೦೨೫	೦೧೨೮	-	-	—	೦೧	-
೩.	ಹಳಿಯಾಳ	೦೧೧೯	೦೨೦	೦೫೧	೦೦೯೪	-	-	೦೧	೦೧	-
೪.	ಹೊನ್ನಾವರ	೦೧೫೧	೦೩೪	೦೩೯	೦೧೪೬	-	-	೧೪	೦೧	೨
೫.	ಕಾರವಾರ	೦೧೨೯	೦೨೯	೦೩೦	೦೦೦೧	೧	೧	೦೩	೦೧	೧
೬.	ಕುಮಟಾ	೦೧೫೦	೦೩೩	೦೩೫	೦೧೨೯	-	-	೦೧	೦೧	-
೭.	ಮುಂಡಗೋಡ	೦೦೭೮	೦೧೪	೦೪೨	೦೦೭೫	-	-	೦೩	೦೧	-
೮.	ಸಿದ್ದಾಪುರ	೦೧೧೪	೦೪೭	೦೪೭	೦೦೯೧	-	-	೦೨	೦೧	-
೯.	ಶಿರಸಿ	೦೨೦೬	೦೭೮	೦೩೪	೦೧೫೩	-	-	೦೧	೦೧	-
೧೦.	ಸುಪಾ	೦೦೪೩	೦೧೪	೦೭೧	೦೧೦೦	-	-	—	೦೧	-
೧೧.	ಯಲ್ಲಾಪುರ	೦೧೦೧	೦೪೨	೦೩೩	೦೦೮೫	-	-	—	೦೧	೧
ಒಟ್ಟು ಮೊತ್ತ		೧೨೬೨	೩೫೨	೪೩೭	೧೨೦೨	೧	೧	೨೭	೧೧	೫

ಅ. ನಂ.	ತಾಲೂಕು	ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳು				ಹಿಂದುಳಿದ ವರ್ಗದವರ ವಿದ್ಯಾರ್ಥಿ ನಿಲಯಗಳು			
		ಸರ್ಕಾರಿ		ಅನುದಾನ ಪಡೆಯುತ್ತಿರುವ		ಸರ್ಕಾರಿ		ಅನುದಾನ ಪಡೆಯುತ್ತಿರುವ	
		ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ	ಮೆಟ್ರಿಕ್ಪೂರ್ವ	ಮೆಟ್ರಿಕ್ ನಂತರ	ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ	ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ
೧	೨	೨೧೫	೨೧೬	೨೧೭	೨೧೮	೨೧೯	೨೨೦	೨೨೧	೨೨೨
೧.	ಅಂಕೋಲಾ	೦೨	-	೧	-	೦೬	-	-	-
೨.	ಭಟ್ಕಳ	೦೨	-	-	-	೦೨	-	-	-
೩.	ಹಳಿಯಾಳ	೦೪	-	-	-	೦೩	೨	-	-
೪.	ಹೊನ್ನಾವರ	೦೨	-	-	-	೦೭	-	೧	-
೫.	ಕಾರವಾರ	೦೨	-	-	-	೦೪	೨	-	-
೬.	ಕುಮಟಾ	೦೨	-	-	-	೦೫	೨	-	-
೭.	ಮುಂಡಗೋಡ	೦೩	-	-	-	೦೪	೧	೪	-
೮.	ಸಿದ್ದಾಪುರ	೦೩	-	-	-	೦೬	-	-	-
೯.	ಶಿರಸಿ	೦೩	-	-	-	೦೪	೧	-	-
೧೦.	ಸುಪಾ	೦೧	-	-	-	೦೫	-	-	-
೧೧.	ಯಲ್ಲಾಪುರ	೦೩	-	-	-	೦೬	೧	-	-
ಒಟ್ಟುಮೊತ್ತ		೨೭	-	೧	-	೫೨	೯	೫	-

ಅ. ನಂ.	ತಾಲೂಕು	ವಿಧವಾ ಪಿಂಚಣಿದಾರರು	ವೃದ್ದಾಪ್ಯ ವೇತನದಾರರು	ಅಂಗವಿಕಲ ವೇತನ ಪಡೆಯುವವರು	ಸರಾಯಿ ಅಂಗಡಿಗಳು	ಮದ್ಯದ ಅಂಗಡಿಗಳು	ಬಳಸುತ್ತಿರುವ ರಸಾಯನ (ಸಾ.ಲೀ)			ಡೀಸೆಲ್ ಪಂಪಸೆಟ್ಟುಗಳು
							ಸರಾಯಿ	ಮದ್ಯ	ಬೀರ	
೧	೨	೩೩೩	೩೩೪	೩೩೫	೩೩೬	೩೩೭	೩೩೮	೩೩೯	೩೪೦	೩೪೧
೧.	ಅಂಕೋಲಾ	೦೧೭೨೯	೦೩೯೩	೧೦೭೭	೦೨೩	೦೦೯	೦೨೩೯	೦೧೪	೦೦೭೦	೦೨೭೯
೨.	ಭಟ್ಕಳ	೦೧೦೧೧	೦೪೧೨	೦೭೫೫	೦೩೨	೦೦೭	೦೨೫೪	೦೧೫	೦೧೨೪	-
೩.	ಹಳಿಯಾಳ	೦೧೨೩೩	೦೭೫೪	೦೮೧೯	೦೩೭	೦೧೭	೦೧೭೨	೦೩೪	೦೧೨೦	೦೦೯೫
೪.	ಹೊನ್ನಾವರ	೦೧೫೩೩	೦೪೫೫	೦೯೭೫	೦೩೭	೦೧೫	೦೨೩೪	೦೧೮	೦೧೨೦	೦೯೮೮
೫.	ಕಾರವಾರ	೦೧೫೭೪	೦೩೬೧	೦೮೬೭	೦೩೪	೦೧೪	೦೦೬೫	೦೧೭	೦೧೮೦	೦೧೬೦
೬.	ಕುಮಟಾ	೦೨೨೨೨	೦೫೮೨	೧೩೦೮	೦೩೩	೦೧೭	೦೩೪೭	೦೨೨	೦೧೨೬	೦೪೯೭
೭.	ಮುಂಡಗೋಡ	೦೦೪೩೬	೦೧೪೯	೦೨೮೭	೦೩೭	೦೦೪	೦೧೩೭	೦೦೬	೦೦೨೯	೦೦೦೯
೮.	ಸಿದ್ದಾಪುರ	೦೦೪೦೧	೦೨೫೯	೦೬೦೭	೦೪೫	೦೦೬	೦೧೧೮	೦೦೮	೦೦೫೧	೦೦೩೮
೯.	ಶಿರಸಿ	೦೧೦೮೯	೧೦೭೨	೦೭೫೯	೦೩೮	೦೧೮	೦೪೫೭	೦೩೧	೦೧೪೫	೦೧೮೦
೧೦.	ಸುಪಾ	೦೦೪೮೨	೦೧೭೩	೦೨೩೫	೦೧೨	೦೦೧	೦೦೫೯	೦೦೧	೦೦೦೫	೦೦೪೦
೧೧.	ಯಲ್ಲಾಪುರ	೦೦೫೮೦	೦೫೬೨	೦೪೫೪	೦೧೬	೦೦೮	೦೦೮೨	೦೧೨	೦೦೪೫	೦೫೮೩
ಒಟ್ಟೂಮೊತ್ತ		೧೨೨೯೦	೫೨೭೨	೮೧೪೩	೩೪೪	೧೧೬	೨೧೬೪	೧೭೮	೧೦೧೫	೨೮೬೯

2 ಪಟ್ಟಣಗಳು

ಅ. ನಂ.	ಪಟ್ಟಣಗಳು	ವಿಧ	ಜನಸಂಖ್ಯೆ
೧.	ದಾಂಡೇಲಿ	ನಗರಸಭೆ	೫೨೭೦೧
೨.	ಕಾರವಾರ	ನಗರಸಭೆ	೫೧೦೨೨
೩.	ಅಂಕೋಲಾ	ಪುರಸಭೆ	೧೩೫೦೯
೪.	ಭಟ್ಕಳ	ಪುರಸಭೆ	೩೧೪೭೮
೫.	ಹಳಿಯಾಳ	ಪುರಸಭೆ	೧೮೦೦೫
೬.	ಹೊನ್ನಾವರ	ಪುರಸಭೆ	೧೬೧೯೨
೭.	ಕುಮಟಾ	ಪುರಸಭೆ	೨೬೧೮೧
೮.	ಶಿರಸಿ	ನಗರಸಭೆ	೫೦೮೯೫
೯.	ಅಂಬಿಕಾನಗರ	ಘೋಷಿತ ಪ್ರದೇಶ	೦೬೦೬೪
೧೦.	ಬಿಣಗಾ	ಘೋಷಿತ ಪ್ರದೇಶ	೦೭೨೮೧
೧೧.	ಕದ್ರಾ	ಘೋಷಿತ ಪ್ರದೇಶ	೦೨೫೬೩
೧೨.	ಗಣೇಶಗುಡಿ	ಘೋಷಿತ ಪ್ರದೇಶ	೦೩೩೭೧
೧೩.	ಮಾಗೋಡ	ಘೋಷಿತ ಪ್ರದೇಶ	೦೦೭೯೮
೧೪.	ಯಲ್ಲಾಪುರ	ಮಂಡಳ ಪಂಚಾಯತ	೧೪೪೫೬

೮. ಜಿಲ್ಲಾ ಆದಾಯ (೯೫-೯೬) ಲಕ್ಷ ರೂ.ಗಳಲ್ಲಿ

	ಚಾಲ್ತಿ ಬೆಲೆಯಲ್ಲಿ	ಸ್ಥಿರಬೆಲೆಯಲ್ಲಿ (೧೯೮೦-೮೧ ರ ಬೆಲೆಗಳಲ್ಲಿ)
೧. ಕೃಷಿ ಮತ್ತು ಪಶುಪಾಲನಾ	೦೩೧೨೬೯	೦೮೪೩೭
೨. ಅರಣ್ಯ ಮತ್ತು ಮರ ಕತ್ತರಿಸುವುದು	೦೦೬೨೫೧	೦೦೬೯೩
೩. ಮೀನುಗಾರಿಕೆ	೦೦೫೬೦೪	೦೦೬೫೭
೪. ಗಣಿ ಮತ್ತು ಕಲ್ಲು ಅಗೆತ	೦೦೦೪೬೯	೦೦೦೭೬
೫. ತಯಾರಿಕೆ	೦೧೦೭೬೭	೦೨.೨೦೧
೬. ವಿದ್ಯುಚ್ಛಕ್ತಿ ಅನಿಲ ಮತ್ತು ನೀರು ಸರಬರಾಜು	೦೦೨೫೭೯	೦೦೬೮೫
೭. ರೈಲ್ವೆ	೦೦೦೨೨೭	೦೦೦೪೪
೮. ಇತರ ರೀತಿಯ ಸಾರಿಗೆ ಮತ್ತು ಸಂಗ್ರಹಣೆ	೦೦೭೯೧೯	೦೨೦೦೫
೯. ಸ್ಟೋರೇಜ	೦೦೦೧೫೪	೦೦೦೩೮
೧೦. ಸಂಪರ್ಕ	೦೦೨೧೫೬	೦೦೩೯೨
೧೧. ವ್ಯಾಪಾರ,ವಸತಿ ಮತ್ತು ಉಪಹಾರ ಗೃಹಗಳು	೦೧೬೨೭೦	೦೪೧೩೫
೧೨. ಬ್ಯಾಂಕು ಉದ್ಯಮ ಮತ್ತು ವಿಮೆ	೦೦೬೮೯೫	೦೨೦೪೯
೧೩. ಸ್ಥಿರಾಸ್ತಿ ವಾಸಗೃಹಗಳ ಒಡೆತನ ಮತ್ತು ವ್ಯವಹಾರದ ಸೇವೆಗಳು	೦೦೫೫೮೪	೦೧೯೬೭
೧೪. ಸಾರ್ವಜನಿಕ ಆಡಳಿತ	೦೦೫೭೬೩	೦೧೪೮೫
೧೫. ಇತರ ಸೇವೆಗಳು	೦೦೭೫೨೪	೦೧೯೫೮
ಒಟ್ಟು ಆದಾಯ	೧೨೬೮೬೩	೩೨೫೭೯
ತಲಾ ಆದಾಯ ರೂ.ಗಳಲ್ಲಿ	೯೭೦೭	೨೪೯೩

ಅಧ್ಯಾಯ ೨೩

ರಾಗ

೧. ಸಮಾಜದಲ್ಲಿ ಸಂಗೀತದ ಸ್ಥಾನಮಹತ್ವ

೨. ಸಂಗೀತ ನಾಟಕ ಅಕಾಡಮಿ

ರಾಗ

ರಾಗವು ಭಾರತೀಯ ಸಂಗೀತದ ಆತ್ಮವಾಗಿದೆ. ಜಗತ್ತಿನ ಸಂಗೀತ ಪ್ರಪಂಚಕ್ಕೆ ಭಾರತವು ಕೊಟ್ಟ ಒಂದು ಅಮೋಘ ಕೊಡುಗೆಯೇ ರಾಗವಾಗಿದೆ. ರಾಗದ ವ್ಯಾಖ್ಯೆಯನ್ನು ಹಾಗೂ ರಾಗದ ಪರಿಭಾಷೆಯನ್ನು ನಮ್ಮ ಪುರಾತನ ಸಂಗೀತ ಗ್ರಂಥಗಳಾದ 'ಸಂಗೀತ ರತ್ನಾಕರ ' ಹಾಗೂ ಸಂಗೀತ ಪಾರಿಜಾತಗಳಲ್ಲಿ ಈ ಕೆಳಗಿನಂತೆ ತಿಳಿಸಿದ್ದಾರೆ.

ಯೋ ಸೌ ಧ್ವನಿ ವಿಶೇಷಸ್ತು ಸ್ವರವರ್ಣ ವಿಭೂಷಿತಃ

ರಂಜಕೋ ಜನ ಚಿತ್ತಾಸಾಂ ಸ ರಾಗ ಕಥಿತೋ ಬುಧೈ ಃ

- ಸಂಗೀತ ರತ್ನಾಕರ

ರಂಜಕ ಸ್ವರ ಸಂದರ್ಭೋ ಸ ರಾಗ ಇತ್ಯಭಿದೀಯತೆ ಃ

- ಸಂಗೀತ ಪಾರಿಜಾತ

ಅಂದರೆ ಕೇಳುಗರ ಮನಸ್ಸಿಗೆ ಆನಂದವನ್ನುಂಟುಮಾಡುವ ಸ್ವರವರ್ಣಗಳ ಖಾಸ ರಚನೆಗೆ ರಾಗವೆನ್ನುವರು. ರಂಜಯತಿ ಇತಿ ರಾಗಾಃ ಎಂಬಂತೆ ರಾಗವು ಶ್ರೋತೃಗಳ ಮನಸ್ಸಿಗೆ ಆಹ್ಲಾದವನ್ನುಂಟುಮಾಡುವುದು.

ಇನ್ನು ಚತುರ್ದಂಡೀ ಪ್ರಕಾಶಿಕಾದಲ್ಲಿ * 'ರಂಜಯತಿ ಮನಾಂ ನೀತಿ ರಾಗಾಸ್ತೇ ದಶಲಕ್ಷಣಾಃ' ಎಂದು ಪಂಃ ವೆಂಕಟಮುಖಿ ಅಭಿಪ್ರಾಯಿಸುತ್ತಾರೆ. ನಮ್ಮ ಸಂಗೀತಶಾಸ್ತ್ರಕಾರರು ರಾಗದ ಲಕ್ಷಣಗಳನ್ನು ಕುರಿತು ಗ್ರಹ, ಅಂಶ, ನ್ಯಾಸ, ಅಪನ್ಯಾಸ, ಸನ್ಯಾಸ , ವಿನ್ಯಾಸ, ಅಲ್ಪತ್ವ , ಬಹುತ್ವ, ಮಂದ್ರ ಮತ್ತು ತಾರ ಎಂಬ ಹತ್ತು ಲಕ್ಷಣಗಳನ್ನು ಹೇಳಿದ್ದಾರೆ. ರಾಗದ ಈ ದಶಲಕ್ಷಣಗಳಲ್ಲಿ ಕೇವಲ ಕೆಲವು ಮಾತ್ರ ಪರಿವರ್ತಿತ ಸ್ವರೂಪದಲ್ಲಿ ಪ್ರಚಾರದಲ್ಲಿದ್ದರೂ ಆದುನಿಕ ಸಂಗೀತದಲ್ಲಿ ರಾಗಲಕ್ಷಣಗಳು ಈ ಕೆಳಗಿನಂತೆ ಬಳಕೆಯಲ್ಲಿದೆ.

೧. ರಂಜಕತೆ ರಾಗದಲ್ಲಿ ಅವಶ್ಯಬೇಕು.

೨. ರಾಗದಲ್ಲಿ ಅತಿ ಕಡಿಮೆ ಎಂದರೂ ಐದು ಸ್ವರಗಳಿರಬೇಕು.

೩. ಪ್ರತಿಯೊಂದು ರಾಗವು ಒಂದು ನಿರ್ದಿಷ್ಟ ಥಾಟಕ್ಕೆ ಸೇರಿದೆ.

ಅಡಿಟಿಪ್ಪಣಿಃ * ಚತುರ್ದಂಡಿ ಪ್ರಕಾಶಿಕಾ ಲೇ. ಪಂ. ವೆಂಕಟಮುಖಿ ಅವರ ಲೇಖನವನ್ನಾಧರಿಸಿ ....

[illegible]

೪. ಷಡ್ಜವು ಎಲ್ಲಾ ಸ್ವರಗಳಿಗೂ ಮೂಲಾಧಾರವಾದುದರಿಂದ ಯಾವ ರಾಗದಲ್ಲೂ ಯಾವ ಕಾಲದಲ್ಲೂ ಅದು ವರ್ಜಿತ ಸ್ವರವಾಗುವುದಿಲ್ಲ.

೫. ಪ್ರತಿಯೊಂದು ರಾಗಕ್ಕೂ ಆರೋಹ, ಅವರೋಹ , ವಾದಿ , ಸಂವಾದಿ , ಪಕ್ಕಡ್, (ಮುಖ್ಯಾಂಗ) ಹಾಡುವ ಪ್ರಹರಗಳು ಅವಶ್ಯವಾಗಿ ಬೇಕು. ಈ ಸೂತ್ರಕ್ಕೆ ಅಪವಾದವಾಗಿ ಕೆಲ ರಾಗಗಳು ಹುಟ್ಟಿಕೊಂಡಿವೆ. ಉದಾಃ ಲಲಿತ, ಕೇಧಾರ, ಭಂಕಾರ ಮುಂತಾದವುಗಳು

ಹಿಂದೂಸ್ತಾನೀ ಸಂಗೀತದಲ್ಲಿ ಒಟ್ಟು ಹತ್ತು ಥಾಟ್‌ಗಳಿವೆ. ಒಂದು ಥಾಟದಲ್ಲಿ ಒಂಬತ್ತು ಜಾತಿಗಳಿಂದ ೪೮೪ ರಾಗಗಳು ಹುಟ್ಟುತ್ತವೆ. ಅಂದರೆ ೪೮೪ X ೧೦ = ೪೮೪೦ ರಾಗಗಳು ಹುಟ್ಟುತ್ತವೆ. ಇನ್ನು ಕರ್ನಾಟಕೀ ಸಂಗೀತದಲ್ಲಿ ೭೨ ಮೇಳಕರ್ತರಾಗಗಳಿಂದ ೪೮೪ X ೭೨ = ೩೪೮೪೮ ರಾಗಗಳು ಹುಟ್ಟುತ್ತವೆ. ಇವಲ್ಲದೇ ವಾದಿಸ್ವರದ ಸ್ಥಾನಪಲ್ಲಟದಿಂದಾಗಿ ಇನ್ನೂ ಅನೇಕ ರಾಗಗಳು ಹುಟ್ಟಿಕೊಳ್ಳುತ್ತದೆ.

ರಂಜಯಂತಿ ಮನಾಂನೇತಿ ರಾಗಾಸ್ತೆ ದಶಲಕ್ಷಣಾಃ
ಲಕ್ಷಣಾನಿ ದಶೋಕ್ತಾನಿ ಲಕ್ಷ್ಯಂತೆ ತಾವದಿತಃ

ಚತುರ್ದಂಡಿ ಪ್ರಕಾಶಿಕಾ

ಚತುರ್ದಂಡೀ ಪ್ರಕಾಶಿಕಾದ ಅಭಿಪ್ರಾಯದಂತೆ ರಂಜಕತೆಯ ಅಂಶವನ್ನು ರಾಗದಲ್ಲಿ ಗಮನಿಸಿ ನಮ್ಮ ಪುರಾತನರು ರಾಗದ ಹತ್ತು ಲಕ್ಷಣಗಳನ್ನು ಕುರಿತುಹೇಳಿದ್ದಾರೆ. ೧. ಗ್ರಹ, ೨. ಅಂಶ, ೩. ನ್ಯಾಸ, ೪. ತಾರ, ೫. ಮಂದ್ರ, ೬. ಅಪನ್ಯಾಸ, ೭. ಸನ್ಯಾಸ, ೮. ವಿನ್ಯಾಸ, ೯. ಅಲ್ಪತ್ವ , ೧೦. ಬಹುತ್ವ ಇವುಗಳನ್ನು ರಾಗದಲ್ಲಿ ಪರಿಪಾಲಿಸಬೇಕಾಗುತ್ತದೆ. ಈ ಹತ್ತು ಲಕ್ಷಣಗಳಲ್ಲಿ ಅಲ್ಪತ್ವ ಮತ್ತು ಬಹುತ್ವ ಶಬ್ದಗಳ ಪರಿಭಾಷೆ ಹಾಗೂ ಅವುಗಳ ಬಳಕೆ ಸರ್ವಪ್ರಥಮವಾಗಿ ಸಾರಂಗದೇವನ ಸಂಗೀತ ರತ್ನಾಕರದಲ್ಲಿ ೧೩ ನೇ ಶತಮಾನದಲ್ಲಿ ಬಳಕೆಯಾದುದು ಕಂಡುಬರುತ್ತದೆ. ಈ ಅಲ್ಪತ್ವ ಮತ್ತು ಬಹುತ್ವ ಸಿದ್ದಾಂತವು ಎಲ್ಲಾ ರಾಗಗಳಿಗೂ ಅನ್ವಯಿಸುವುದು ಕಠಿಣ.

ಸದಾಶಿವನ ಪಂಚಮುಖಗಳಿಂದ ಮೂಲವಾಗಿ ಐದು ರಾಗಗಳು ಮೊದಲು ಹುಟ್ಟಿಕೊಂಡವು. ಪೂರ್ವ

ಮುಖದಿಂದ ಬೈರವರಾಗ, ಪಶ್ಚಿಮ ಮುಖದಿಂದ ಹಿಂಡೋಲಿ, ಉತ್ತರ ಮುಖದಿಂದ ಮೇಘರಾಗ ದಕ್ಷಿಣ ಮುಖ ದಿಂದ ದೀಪಕರಾಗ ಮತ್ತು ಆಕಾಶ ಮುಖದಿಂದ ಶ್ರೀ ರಾಗಗಳು ಹುಟ್ಟಿಕೊಂಡವು. ಇವೇ ಮುಂದೆ ಅನೇಕ ರಾಗರಾಗಿಣಿಗಳಿಗೆ ಮೂಲವಾದವು.

ಗಾಯನ ವಾದನಗಳಲ್ಲಿ ಕಲಾವಿದರು ಸ್ವರ-ರಾಗ-ತಾಲ ಹಾಗೂ ಲಯಗಳ ಮೇಲೆ ಪ್ರತಿಭಾಪೂರ್ಣ ಹಿಡಿತವನ್ನಿರಿಸಿಕೊಂಡು ರಾಗದಲ್ಲಿಯ ರಸ-ಭಾವಗಳ ಎರಿಳಿತಗಳ ಅವಶ್ಯಕತೆಗಳಿಗನುಗುಣವಾಗಿ ಸಹಕರಿಸಿದಲ್ಲಿ ಅವರವರ ಕಲೆಯಲ್ಲಿ ಪ್ರತಿಭೆ ತಾನೇತಾನಾಗಿ ಅರಳುತ್ತದೆ. ಇದಕ್ಕೆಲ್ಲ ಮೂಲಸೂತ್ರವಾಗಿ ಲಯವು ಸಂಗೀತದುದ್ದಕ್ಕೂ ಹಾಸು ಹೊಕ್ಕಾಗಿ ರಾಗರಸ - ಭಾವಗಳ ಅಭಿವ್ಯಕ್ತಿಯಲ್ಲಿ ಹಿರಿದಾದ ಪಾತ್ರವನ್ನು ರಸವತ್ತಾಗಿ ಸಂಗೀತದಲ್ಲಿ ಪ್ರದರ್ಶಿಸಲು ತಾಲಗಳಲ್ಲಿಯ ವೈವಿಧ್ಯಗಳು ಹೆಚ್ಚು ಸಹಾಯಕಾರಿಯಾಗುತ್ತವೆ.

* ಸಂಗೀತವು ಮಾನವನ ಜೀವನಾಡಿಯಾಗಿದ್ದು ಇತರರ ಸುಖ ದುಃಖಗಳ ಸಮ ಭಾವನೆನೆಗಳನ್ನು ಆತನಲ್ಲಿ ಉದ್ದೀಪನ ಮಾಡಿ ಮನದ ಉನ್ಮಾದ, ಉದ್ದೇಶಗಳನ್ನು ಶಮನಗೊಳಿಸಿ ಆತನ ಹೃದಯವನ್ನು ಹಿಗ್ಗಿಸಿಸುತ್ತದೆ. ಇಲ್ಲಿ ರಾಗ-ತಾಲ ಎರಡೂ ಅಂಗಗಳೂ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಸಂಗೀತವೆಂಬ ಸಮುದ್ರದಲ್ಲಿ ರಾಗವೆಂಬ ಹಡಗಕ್ಕೆ ತಾಲವೇ ಚುಕ್ಕಾಣಿಯಾಗಿದೆ.

ಬ್ರಹದ್ದೇಶಿಯಲ್ಲಿ ಮತಂಗ ಮುನಿಯು ಯಾವುದು ಸ್ವರವರ್ಣಗಳಿಂದ ಅಲಂಕ್ರತವಾಗಿ ಜನರ ಮನಸ್ಸನ್ನು ರಂಜಿಸಬಲ್ಲದೋ ಅದೇ ರಾಗಲಾಪ್ತಿ, ರೂಪಕಾಲಾಪ್ತಿಯ ಕ್ರಮಗಳ (ರಾಗಾಲಾಪ್ತಿ ಇಂದಿನ ರಾಗಾಲಾಪನೆ) ಗಮಕ ಮತ್ತು ದೇಶೀಯ ಪ್ರಬಂಧಗಳು (ಸಂಗೀತ ರಚನೆ) ಹಾಗೂ ಅವುಗಳ ಸ್ವರೂಪವು ಕಂಡುಬರುತ್ತದೆ. ಮತಂಗನು ರಾಗಸಂಗೀತದ ಪಿತಾಮಹನೆನಿಸಿದ್ದಾನೆ. ದೇಶಿಯ ಪ್ರಭಂಧಗಳಲ್ಲಿ ಕೆಲವೆಡೆ ಕನ್ನಡ ಪದಗಳ ಬಳಕೆಯೂ ಇದೆ. ಎಂಬುದು ತಿಳಿದುಬಂದಿದೆ.

ಅಡಿಟಿಪ್ಪಣಿ : * 'ರಾಗ' ದ ಬಗೆಗಿನ ವಿವಿಧ ಲೇಖನವನ್ನಾಧರಿಸಿ ....

* ಗಾನಕಲಾಮಂಜರಿ ಸಂಪುಟ 1 ಕರ್ನಾಟಕ ಸಂಗೀತ - ಲೇ. ಡಾ. ವಿ. ರಾಘವನ್

[illegible]

[illegible]

[illegible]

[illegible]

[illegible]

ಸಮಾಜದಲ್ಲಿ ಸಂಗೀತದ ಸ್ಥಾನ ಮಹತ್ವ

ಮಾನವಕುಲದ ಆದಿಯಿಂದಲೇ ಸಂಗೀತ ಕಲೆಯ ಅಸ್ತಿತ್ವಕಂಡುಬರುತ್ತದೆ. ಶಿಕ್ಷಿತ, ಅಶಿಕ್ಷಿತ ಸಭ್ಯ, ಅಸಭ್ಯ ಜನಾಂಗಗಳಲ್ಲೂ ಕೂಡ ಸಂಗೀತವನ್ನು ಕಾಣಬಹುದು. ಕಲೆಗಳಲ್ಲಿ ಮುಖ್ಯವಾಗಿ ಕರ್ಣಾನಂದವನ್ನುಂಟುಮಾಡುವ ಸಂಗೀತ ಕಲೆಯಿಂದ ಮಾನವನು ಬಹಳ ಪ್ರಭಾವಿತನಾದನು. ಈ ಕಲೆಯನ್ನು ತನ್ನ ಜೀವನದ ಎಲ್ಲ ಸಂದರ್ಭಗಳಲ್ಲೂ ತನ್ನ ಸಂತೋಷಕ್ಕಾಗಿಯೂ ತಾನು ಬಾಳುತ್ತಿರುವ ಸಮಾಜದ ಕಲ್ಯಾಣಕ್ಕಾಗಿಯೂ ಉಪಯೋಗಿಸಿಕೊಂಡನು. ಪ್ರಪಂಚದ ಎಲ್ಲ ಜನಾಂಗಗಳಲ್ಲಿ ಸಂಗೀತವು ಚೈತನ್ಯವನ್ನುಂಟುಮಾಡುವ ಕಲೆಯಾಗಿದೆ.

ಸಂಗೀತ ಮನುಷ್ಯನ ಜೀವನದಲ್ಲಿ ಬಹಳ ಮಹತ್ವವಾದ ಸ್ಥಾನವನ್ನು ಪಡೆದಿದೆ. ಮಾನವ ಸಂಗೀತದೊಡನೆ ಹುಟ್ಟುತ್ತಾನೆ. ಸಾಮಾನ್ಯವಾಗಿ ಹಿಂದಿನ ಕಾಲದಲ್ಲಿ ಮಗುವಿನ ಜನನವಾದೊಡನೆ ಶಂಖನಾದ ತುತ್ತೂರಿ ಮೊದಲಾದ ವಾದ್ಯ ಘೋಷಗಳಿಂದ ಅದನ್ನು ಜನರಿಗೆ ತಿಳಿಸುತ್ತಿದ್ದರು. ಅವನ ಅಂತ್ಯವೂ ಸಂಗೀತದೊಡನೆ ಪರ್ಯವಸನವಾಗುತ್ತಿತ್ತು. ಮನುಷ್ಯ ದಿನವಿಡೀ ಕೆಲಸಮಾಡಿ ಕಷ್ಟಪಟ್ಟು ಬಳಲಿದಾಗ ಸಂಗೀತ ಅವನಿಗೆ ಕ್ಷಿಪ್ರದಲ್ಲಿಯೇ ವಿಶ್ರಾಂತಿ ಕೊಡುತ್ತದೆ. ಗ್ರಾಮೋಫೋನ್ ರೇಡಿಯೊ, ಟೆಲಿವಿಶನ್, ಸಿನೇಮಾ, ನಾಟಕ, ಸಂಗೀತಸಭೆ ಮುಂತಾದವು ಮನುಷ್ಯನ ಅಭಿರುಚಿಗೆ ತಕ್ಕಂತೆ ಯಾವುದಾದರೂ ಒಂದು ರೀತಿಯ ಸಂಗೀತವನ್ನು ಮನರಂಜನೆಯನ್ನೇ ಒದಗಿಸುತ್ತದೆ. ಇದರಿಂದ ಅವನ ದೈಹಿಕ ಮತ್ತು ಮಾನಸಿಕ ಆಯಾಸ ನಿವಾರಣೆಯಾಗಿ ತನ್ನ ಕರ್ತವ್ಯದ ಬಗೆಗೆ ತನ್ನ ನಿತ್ಯದ ಕಾರ್ಯಕ್ಕೆ ಹೊಸಹುರುಪಿನಿಂದ ಅವನು ಸಿದ್ಧನಾಗುತ್ತಾನೆ.

* ಸಂಗೀತವು ಮನುಷ್ಯನ ಆನಂದಕ್ಕಾಗಿ, ಮಾನಸಿಕ ಸ್ವಾಸ್ಥ್ಯಕ್ಕಾಗಿ, ಆತ್ಮೋನ್ನತಿಗಾಗಿ ಇದು ಒಂದು ಶ್ರೇಷ್ಠಮಾರ್ಗವೆಂಬುದನ್ನು ಆತನು ಮನಗಂಡನು. ಸಂಗೀತ ಒಂದು ಪರಿಷ್ಕೃತ ಕಲಾರೂಪವನ್ನು ಪಡೆಯುವುದಕ್ಕೆ ಬಹಳ ಮೊದಲಿನಿಂದಲೂ ಆದಿಮಾನವ ತನ್ನ ಜೀವಮಾನದ ರಸಮಯ ಸನ್ನಿವೇಶಗಳನ್ನು ಸಂಗೀತವಾದ್ಯ, ನೃತ್ಯಗಳ ಮೂಲಕ ಪ್ರಕಟಪಡಿಸುತ್ತಿದ್ದನು. ಕುಟುಂಬದ ಪ್ರತಿಯೊಂದು ವಿಶೇಷ ಸಂದರ್ಭಗಳಲ್ಲೂ ಗ್ರಾಮದ ಜನರೆಲ್ಲಸೇರಿ ಸಂಗೀತವಾದ್ಯದೊಡನೆ ಹಾಡಿ, ನಲಿಯುತ್ತಿದ್ದರು. ಇಂದಿಗೂ ಸಾರ್ವಜನಿಕ ಸಮಾರಂಭ ಕುಟುಂಬದ

ಅಡಿಟಿಪ್ಪಣಿ: * ಸಂಗೀತದ ಇತಿಹಾಸವನ್ನಾಧರಿಸಿ ....

ಸಮಾರಂಭಗಳಲ್ಲಿ ಸಂಗೀತ ವಾದ್ಯದೊಡನೆ ಸಂತೋಷವ್ಯಕ್ತಪಡಿಸುವದನ್ನು ನಾವು ಕಾಣಬಹುದಾಗಿದೆ. ನೃತ್ಯ, ಗೇಯನಾಟಕ, ಜನಪದ ನೃತ್ಯ, ಕರಗ, ಬೀದಿನಾಟಕ, ಯಕ್ಷಗಾನ ಮುಂತಾದ ಆಟಗಳಲ್ಲೂ ಸಂಗೀತ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಯಕ್ಷಗಾನ ಕುಣಿತದ ನಡುವೆ ನಾಟಕದ ಘಟನೆಯ ಮಧ್ಯೆ ಸಂಗೀತವಿದ್ದಾಗ ಮಾತ್ರ ಅದೂ ಇನ್ನು ಹೆಚ್ಚಾಗಿ ಶೋಭಿಸುವುದು. ಹಳ್ಳಿಗರು ಕೆಲಸ ಮಾಡುವಾಗಲೂ, ಉತ್ಸಾಹದಿಂದ ಹಾಡುತ್ತಾರೆ. ಇದರಿಂದ ಅವರು ಕೆಲಸದ ದಣಿ ಆರಿಸಿಕೊಳ್ಳುತ್ತಾರೆ. ಹಳ್ಳಿಗಳಲ್ಲಿ ದಿನದ ಕೆಲಸ ಮುಗಿದ ನಂತರ ಊರನವರೆಲ್ಲ ಒಂದೆಡೆ ಸೇರಿ ಕೋಲಾಟ, ಸಾಮೂಹಿಕ ಗಾನಗಳ ಮೂಲಕ ಸಂತೋಷದಿಂದ ಕಾಲಕಳೆಯುತ್ತಾರೆ.

ಇನ್ನು ಧಾರ್ಮಿಕ ಕ್ಷೇತ್ರದಲ್ಲಿಯೂ ಸಂಗೀತದ ಪಾತ್ರವನ್ನು ನಾವು ಕಂಡುಕೊಳ್ಳಬಹುದು. ಮಾನವ ಪಂಚಭೂತಗಳನ್ನು ಮತ್ತು ಪ್ರಕೃತಿಯ ವಿಶೇಷ ಶಕ್ತಿಗಳನ್ನು ಆರಾಧನೆ ಮಾಡುತ್ತಿದ್ದ ಕಾಲದಲ್ಲಿ ತನ್ನ ಭಾವನೆಗಳನ್ನು ಸಂಗೀತದ ಮೂಲಕ ಹೊರಗೆಡಹಿದನು. ವೇದಕಾಲದಲ್ಲಿ ಉದಾತ್ತ, ಅನುದಾತ್ತ ಹಾಗೂ ಸ್ವರಿತವೆಂಬ ಮೂರು ಸ್ವರಗಳ ಉಲ್ಲೇಖವು ಇತ್ತೆಂಬುದು ತಿಳಿದುಬರುತ್ತದೆ. ಸಾಮವೇದವನ್ನು ಸಂಗೀತದ ವೇದವೆಂದೆ ಕರೆಯಲಾಗುತ್ತಿತ್ತು. ಹೆಚ್ಚಿನ ದೇವಾಲಯಗಳಲ್ಲಿ ನಾಗಸ್ವರ ವಿದ್ವಾಂಸರೂ ಸಂಗೀತವಿದ್ವಾಂಸರೂ ಸಂಗೀತ ಸೇವೆ ಸಲ್ಲಿಸುತ್ತಿದ್ದರು. ಅವರ ಉದರ ರಕ್ಷಣೆಗೆ ವಾರ್ಷಿಕ ವೇತನ ಭೂಮಿಗಳನ್ನು ಕೊಡಲಾಗುತ್ತಿತ್ತು. ನವಸಂಧಿಕಾಲದಲ್ಲಿ ದೇವರಿಗೆ ವಿಶೇಷ ಪೂಜಾದಿಗಳನ್ನು ಸಲ್ಲಿಸಲಾಗುತ್ತಿತ್ತು. ಇದರ ಉದ್ದೇಶ ಈ ಉತ್ಸವ ಮಹೋತ್ಸವಗಳು ಯಾವ ತೊಂದರೆಯಿಲ್ಲದೆಯೇ ಸುಸೂತ್ರವಾಗಿ ನಡೆಯಬೇಕಾಗಿತ್ತು. ಮಹಾವಾಗ್ಗೇಯಕಾರರು ಇಂತಹ ಉತ್ಸವಗಳಿಗಾಗಿ ಭಕ್ತೀ ಸಂಗೀತದ ಅನೇಕ ಗೇಯ ರಚನೆಗಳನ್ನೂ ರಚಿಸಿರುವುದು ವೇದ್ಯವಾಗಿದೆ.

ರಾಜಕೀಯ ಕ್ಷೇತ್ರದಲ್ಲಿಯೂ ಸಂಗೀತ ಬಹಳ ಉನ್ನತ ಸ್ಥಾನವನ್ನೇ ಹೊಂದಿದೆ. ನಮ್ಮ ದೇಶದ ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವಗಳಲ್ಲಿ ದೇಶಭಕ್ತಿಗೀತೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಸಂಗೀತದೊಂದಿಗೆ ವಿಲೀನವಾಗಿ ಹೆಚ್ಚು ಆಕರ್ಷಕವಾಗಿ ಆಚರಿಸಲ್ಪಡುತ್ತದೆ. ಹಿಂದೆ ಮೈಸೂರು ತಂಜಾವೂರು, ವಿಜಯನಗರ ಮುಂತಾದ ಸಂಸ್ಥಾನಗಳಲ್ಲಿ ಅನೇಕ ಶ್ರೇಷ್ಠ ಸಂಗೀತ ವಿದ್ವಾಂಸರನ್ನು ತಮ್ಮ

ಆಸ್ಥಾನದಲ್ಲಿರಿಸಿಕೊಂಡು ಅವರಿಗೆ ವಿಶೇಷ ಗೌರವ ಕಾಣಿಕೆಯನ್ನು ಸಲ್ಲಿಸುತ್ತಿದ್ದರು. ದೇಶಕ್ಕೆ ಗಂಡಾಂತರಕಾರೀ ಅಪಾಯಬಂದಾಗ ಸಂಗೀತವಾದ್ಯದ ರಣಕಹಳೆಯ ನಿರ್ದೇಶನದಲ್ಲಿ ವೈರಿಗಳನ್ನು ಸದೆಬಡಿಯುತ್ತಿದ್ದರು. ರಣರಂಗದಲ್ಲಿ ಸುಶ್ರಾವ್ಯಗಾಯನ ಕೇಳಿಬರುವುದು ದುರ್ಲಬ. ಈ ಯುದ್ಧ ಸಂಗೀತವೂ ಸಹ ಅಷ್ಟೆ ಪ್ರಭಾವಶಾಲಿ ಶಕ್ತಿಶಾಲಿಯಾಗಿರುತ್ತದೆ. ಇದರಲ್ಲಿ ಸೈನಿಕರನ್ನು ಹುರಿದುಂಬಿಸುವ ಲಯಪ್ರಧಾನ ಸಂಗೀತವಿರುತ್ತದೆ. ಶಂಖ, ಕೊಂಬು, ಕಹಳೆ ನಗಾರಿ ಮುಂತಾದ ವಾದ್ಯಗಳು ತಮ್ಮ ನಾದಪುಷ್ಟಿಯಿಂದ ನವಚೈತನ್ಯವನ್ನು ತುಂಬುತ್ತವೆ. ಈ ವಾದ್ಯಗಳ ಧ್ವನಿ ರಣರಂಗದ ಶಬ್ದಗಳನ್ನು ಮೀರಿ ಕೇಳಿಸುವಂತಿದ್ದು ಸೈನಿಕರು ಧೈರೋತ್ಸಾಹಗಳಿಂದ ಯುದ್ಧಮಾಡಲು ಸ್ಪೂರ್ತಿ ಕೊಡುತ್ತದೆ. ಯುದ್ಧದ ಆದಿ ಹಾಗೂ ಅಂತ್ಯ ವಾದ್ಯಸಂಗೀತದಿಂದಲೇ ಸೂಚಿತವಾಗುತ್ತಿತ್ತು. ಯುದ್ಧ ಲಾಣೆಗಳಲ್ಲಿ ಆಯಾಸ ನಿವಾರಣೆಗಾಗಿ ಎಲ್ಲರೂ ಹಾಡುತ್ತ ಕುಣಿಯುತ್ತಿದ್ದರು.

ಸಂಗೀತ ನಾಟಕ ಅಕಾಡೆಮಿ

ಭಾರತದಲ್ಲಿ ಹಿಂದಿನಿಂದಲೂ ಬಂದ ಕಲೆಗಳನ್ನು ಉಳಿಸಿ, ಬೆಳೆಸಿಕೊಂಡು ಬರುವಲ್ಲಿ ಮತ್ತು ಆಧುನಿಕ ಪ್ರವೃತ್ತಿಗಳಿಗೆ ಪ್ರೋತ್ಸಾಹ ನೀಡಲು ಕೇಂದ್ರ ಸರ್ಕಾರದವರು ೧೯೫೩ ರಲ್ಲಿ ಸಂಗೀತ ನಾಟಕ ಅಕಾಡೆಮಿಯನ್ನು ಸ್ಥಾಪಿಸಿದರು. ಜನರಲ್ ಕೌನ್ಸಿಲ್ ವರಿಷ್ಟ ಅಧಿಕಾರಹೊಂದಿರುವ ಮಂಡಲಿ, ಅಕಾಡೆಮಿಯ ಎಲ್ಲ ಕೆಲಸಗಳ ಮೇಲ್ವಿಚಾರಣೆ ಹಾಗೂ ವ್ಯವಹಾರ ಹತೋಟಿಗಳನ್ನು ನೋಡಿಕೊಳ್ಳಲು ಕಾರ್ಯನಿರ್ವಾಹಕ ಮಂಡಳಿ ನೇಮಕವಾಗಿದೆ. ಆರ್ಥಿಕ ಮಂಡಲಿ ಕಾರ್ಯನಿರ್ವಾಹಕ ಮಂಡಲಿಗೆ ಆರ್ಥಿಕ ವಿಷಯಗಳಲ್ಲಿ ಸಹಾಯಮಾಡುತ್ತದೆ.

* ಕಲಾವಿದರು ಸಾಧಿಸಿರುವ ಉತ್ಕೃಷ್ಟಮಟ್ಟದ ಸಾಧನೆಗಳನ್ನು ರಾಷ್ಟ್ರೀಯ ಹಂತದಲ್ಲಿ ವಿವೇಚಿಸಿ ನೋಡಿ ಅರ್ಹರಾದವರಿಗೆ ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಗಳನ್ನು ನೀಡುತ್ತದೆ. ಸಂಗೀತ, ನೃತ್ಯ, ನಾಟಕಗಳಲ್ಲಿ ಒಂದೊಂದರಲ್ಲೂ ೪ ಪ್ರಶಸ್ತಿಗಳನ್ನು ಕೊಡುವ ಪದ್ಧತಿಯನ್ನು ಹಾಕಿಕೊಂಡಿದೆ. ಸಮಾರಂಭದ ಅಧ್ಯಕ್ಷತೆಯನ್ನು ಭಾರತದ ರಾಷ್ಟ್ರಪತಿಯವರು ವಹಿಸಿ ಪ್ರಶಸ್ತಿ ಪ್ರಧಾನ ಮಾಡುತ್ತಾರೆ. ಅಕಾಡೆಮಿಯವರು 3 ದಿನಗಳ ಸಂಗೀತ ನೃತ್ಯ ಉತ್ಸವಗಳನ್ನು ಏರ್ಪಡಿಸುತ್ತಾರೆ. ಪ್ರಶಸ್ತಿ ವಿಜೇತ ಕಲಾಕಾರರು ಉತ್ಸವದಲ್ಲಿ ಭಾಗವಹಿಸುತ್ತಾರೆ.

ಅಡಿಟಿಪ್ಪಣಿ: ಜ್ಞಾನಗಂಗೋತ್ರಿ ಅಧ್ಯಾಯ 5 ಕಲೆ, ಸಾಹಿತ್ಯ ಸಂಪುಟ ....

[illegible]

[illegible]

[illegible]

[illegible]

[illegible]

ಸಂಗೀತ ನೃತ್ಯಗಳಲ್ಲಿನ ವಿದ್ವಾಂಸರಾದ ಕೆಲವರನ್ನು ಅಕಾಡೆಮಿಯ ಸದಸ್ಯರನ್ನಾಗಿ ಮಾಡಿಕೊಳ್ಳುತ್ತಾರೆ. ಅಕಾಡೆಮಿಯಲ್ಲಿ ಒಂದು ಗ್ರಂಥಭಂಡಾರವಿದೆ. ಧ್ವನಿಮುದ್ರಿಕೆಗಳ ಭಂಡಾರವೂ ಇದೆ. ಧ್ವನಿಮುದ್ರಿಸಿಕೊಳ್ಳುವ ಕಾರ್ಯಾಗಾರವಿದೆ. ಅಕಾಡೆಮಿಯವರು ತಮಗೆ ಬೇಕಾದ ಧ್ವನಿಮುದ್ರಣ ಮಾಡಿಕೊಳ್ಳುವುದರ ಜೊತೆಗೆ ಆಸಕ್ತರಾದ ಸಾಂಸ್ಕೃತಿಕ ಸಂಘಗಳೂ ವ್ಯಕ್ತಿಗಳೂ ಬಂದು ಧ್ವನಿಮುದ್ರಿಸಿಕೊಳ್ಳುವ ಸೌಕರ್ಯವನ್ನು ಕಲ್ಪಿಸಿದ್ದಾರೆ. ವಿದೇಶಿ ಸಂಸ್ಥೆಗಳು ಮತ್ತು ಘನವಿದ್ವಾಂಸರುಗಳಿಗೆ ಪುನಃ ಧ್ವನಿಮುದ್ರಿಸಿಕೊಳ್ಳುವ ಅವಕಾಶ ನೀಡಲಾಗಿದೆ. ಅಕಾಡೆಮಿ ಸಂಗೀತ, ನೃತ್ಯ, ನಾಟಕಗಳ ವಿವಿಧ ಮುಖಗಳನ್ನು ಕುರಿತಾದ ಪುಸ್ತಕಗಳ ಪ್ರಕಟಣೆಯಲ್ಲಿ ಆಸಕ್ತಿವಹಿಸುತ್ತದೆ. ತಾನು ಪುಸ್ತಕವನ್ನು ಪ್ರಕಟಿಸುವುದಲ್ಲದೇ ಅಪ್ರಕಟಿತ ಪಸ್ತಾವನೆ ಪ್ರಕಟಣೆಗೆ ನೆರವಾಗುತ್ತದೆ. ಸಂಗೀತ ನೃತ್ಯ ನಾಟಕ ಸಂಘಗಳಿಗೆ ಆರ್ಥಿಕ ಸಹಾಯವನ್ನು ಅಕಾಡೆಮಿ ನೀಡುತ್ತದೆ. ಸಂಗೀತ ನಾಟಕ ಅಕಾಡೆಮಿ ೧೯೬೫ ನವೆಂಬರದಿಂದ ತ್ರೈಮಾಸಿಕ ಪತ್ರಿಕೆಯೊಂದನ್ನು ಹೊರತರುತ್ತಿದೆ.

ಸಂಗೀತ , ನೃತ್ಯ, ನಾಟಕ ಸಂಘಗಳಿಗೆ ಆರ್ಥಿಕ ಸಹಾಯವನ್ನು ಅಕಾಡೆಮಿ ನೀಡುತ್ತದೆ. ದ್ವೈಮಾಸಿಕ ಪತ್ರಿಕೆ ನ್ಯುಸ್‌ಬುಲೆಟಿನ್‌ನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಕುರಿತು ಸುದ್ದಿಗಳಿರುತ್ತದೆ. ಅಕಾಡೆಮಿಯು ನಾಲ್ಕು ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತದೆ. ಜನಪದ ಸಂಗೀತ ನೃತ್ಯ, ನಾಟಕಗಳ ವೀಕ್ಷಣೆ ಮತ್ತು ದಾಖಲೆ ಮಾಡುವುದು ಒಂದು ಯೋಜನೆ. ಇದರ ಅಂಗವಾಗಿ ಸಾಂಪ್ರದಾಯಿಕ ಮತ್ತು ಜನಪದ ಕಲೆಗಳ ವ್ಯವಸ್ಥಿತ ದಾಖಲೆ ಆಗಿದೆ. ಎರಡನೆಯದು ಅಕಾಡೆಮಿಯ ವಸ್ತು ಸಂಗ್ರಹಾಲಯದ ಅಭಿವೃದ್ಧಿ, ಸಂಗೀತ ವಿಜ್ಞಾನದಲ್ಲಿ ಸಂಶೋಧನೆ ಮಾಡುವ ವಿಭಾಗ ಮೂರನೆಯದು ಇದಕ್ಕಾಗಿ ಚಿಕ್ಕ ಪ್ರಯೋಗಾಲಯದ ಅಗತ್ಯವಾದ ಮೂಲ ಉಪಕರಣಗಳನ್ನಿಟ್ಟಿದ್ದಾರೆ. ನಾಲ್ಕನೇಯದಾಗಿ ಸಂಗೀತ ನೃತ್ಯಗಳಲ್ಲಿ ಉಪಾಧ್ಯಾಯರಾಗುವವರಿಗೆ ವಿಶೇಷ ತರಬೇತಿಕೊಡಲು ಏರ್ಪಾಡಾಗಿದೆ. ಅಕಾಡೆಮಿ ವತಿಯಿಂದ ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾ ಕಥಕ್ ಕೇಂದ್ರ ಮತ್ತು ಜವಾಹರಲಾಲ್ ನೆಹರೂ ಮಣಿಪುರಿ ನೃತ್ಯ ಅಕಾಡೆಮಿ ನಡೆಯುತ್ತದೆ.

[illegible]

[illegible]

ಅಧ್ಯಾಯ ೨೪

ಸಂಗೀತ ಚಿಕಿತ್ಸೆಯ ಬಗೆಗಿನ ಒಂದು ಅಧ್ಯಯನ

ಸಂಗೀತ ಚಿಕಿತ್ಸೆಯ ಬಗೆಗಿನ ಒಂದು ಅಧ್ಯಯನ

ನಿಸರ್ಗದತ್ತ ಸಂಗೀತ

ಸಂಗೀತದ ಸಪ್ತಸ್ವರಗಳು ಮೂಲತಃ ಪ್ರಕೃತಿಯ ಶಿಶುಗಳು. ಹರಿವ ತೊರೆ, ಸುಂಯನೆ ಬೀಸುವ ಗಾಳಿ, ಪ್ರಾಣಿ- ಪಕ್ಷಿಗಳ ಧ್ವನಿಯ ಇಂಚರ ಸಪ್ತಸ್ವರಗಳಲ್ಲಿ ಅಡಗಿವೆ. ಹೀಗಾಗಿ ಸಂಗೀತದಿಂದ ಹೊಮ್ಮುವ ಶಬ್ದ ತರಂಗವು ಸುತ್ತಲಿನ ಪ್ರಕೃತಿಯ ಮೇಲೆ ಪರಿಣಾಮ ಬೀರಲೇಬೇಕಲ್ಲವೇ? ತಾನ್ ಸೇನರು ದೀಪಕ ರಾಗ ಹಾಡಿ ದೀಪ ಹೊತ್ತಿಸಿ, ಮಲ್ಹಾರಿ ರಾಗದಿಂದ ಮಳೆ ಬರಿಸಿದ್ದು ಕೇಳಿದ್ದೇವೆ. ಮತಂಗ ಮಹಾಮುನಿಯು ವೀಣೆ ನುಡಿಸಿ ಕಲ್ಲು ಕರಗಿಸಿದ್ದನ್ನು ಬಲ್ಲೆವು. ತ್ಯಾಗರಾಜರು ಜ್ಯೋತಿ ಸ್ವರೂಪಿಣಿ ರಾಗವನ್ನು ಹಾಡಿ ದೀಪ ಹೊತ್ತಿಸಿದಾಗ, ರಾಗದ ಏರಿಳಿತಕ್ಕೆ ಸರಿಯಾಗಿ ಅದರ ಪ್ರಕಾಶವನ್ನು ಹೆಚ್ಚು ಕಡಿಮೆ ಮಾಡಿರುವುದು, ಬಿಲಹರಿ ರಾಗದ 'ನಾ ಜೀವ ಧರಾ' ಹಾಡಿ ಮೃತ ವ್ಯಕ್ತಿಯನ್ನು ಬದುಕಿಸಿದ್ದು ಪ್ರಚಲಿತವಾಗಿದೆ. ಅವರೇ ಇನ್ನೊಮ್ಮೆ ಭಕ್ತರು ದೇವರಿಗರ್ಪಿಸಿದ ಸ್ವರ್ಣಕಾಣಿಕೆಯನ್ನು ಕದ್ದೊಯ್ಯಲು ಬಂದ ಡಕಾಯಿತರನ್ನು 'ಮುಂದುವೆನಕ' ಎಂಬ ಕೃತಿಯನ್ನು ದರ್ಬಾರ್ ರಾಗದಲ್ಲಿ ಹಾಡಿ ಮನಪರಿವರ್ತಿಸಿ ಹಿಮ್ಮೆಟ್ಟಿಸಿದ್ದರು. ಸಂಗೀತ ಸುಧೆ ಸವಿದು ತೆನೆ ಭಾರವಾಗಿ ಬಳುಕಿದ್ದು, ಹಸು ಹೇರಳವಾಗಿ ಹಾಲು ಸುರಿಸಿದ್ದು ಇದೀಗ ವಿಜ್ಞಾನವೂ ಒಪ್ಪಿಕೊಂಡ ಮಾತು.

ಸಂಗೀತದ ಹುಟ್ಟು ಹಾಗೂ ವಿಭಜನೆ

ಈ ವಿಶ್ವದ ಮೊತ್ತ ಮೊದಲು ಸಂಗೀತಗಾರ 'ಓಂ' ಕಾರದಿಂದ ಜಗತ್ ಸೃಷ್ಟಿಗಾರಂಭಿಸಿದ ಬ್ರಹ್ಮದೇವ. ಸಾಮವೇದದ ಉಪವೇದವೆನಿಸಿರುವ ಗಂಧರ್ವವೇದವು ಸಂಗೀತಮಯವಾಗಿದೆ. ಸಂಗೀತದಲ್ಲಿ ಸ್ವರಗಳು ಏಸು ಸ ರಿ (ನೀರಿನಲ್ಲಿ ತಡೆ ಇಲ್ಲದೆ ತೇಲಿ) ಗ ಮ (ಸೇರುವ) ಪ ದ (ಸ್ಥಾನ) ಹಾಗೂ ನಿ (ಅದನ್ನು ನೀಡುವಂಥದು). ಸರಿಗಮ ಪದನಿ ಎಂಬ ಸಪ್ತಸ್ವರಗಳಿಂದ ಕೂಡಿದ ಸಂಗೀತವು ಈ ಸಂಸಾರ ಸಾಗರವನ್ನು (ರೋಗವನ್ನೂ) ಸುಲಭವಾಗಿ ದಾಟಿಸಿ ಮುಕ್ತಿಯನ್ನು (ಸ್ಥಾನ) ಕೊಡುವ ಸಾಮರ್ಥ್ಯ ಹೊಂದಿದೆ ಎಂದು ನಮ್ಮ ಪೂರ್ವಜರೇ

[illegible]

[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

[illegible]

[illegible]
[illegible]
[illegible]
[illegible]
[illegible]

ಹೇಳಿದ್ದಾರೆ. "ತಂಬೂರಿ ಮೀಟಿದವ ಭವಾಬ್ಧಿ ದಾಟಿದವ..." ಎಂದು ದಾಸರೂ ಹೇಳಿದರಲ್ಲ.

"ವೇದಗಳ ಅನಂತರ ಸಂಗೀತಕ್ಕೆ ಸಂಬಂಧಿಸಿದ ಬಹಳ ಪ್ರಾಚೀನ ಗ್ರಂಥವೆಂದರೆ ಭರತನ ನಾಟ್ಯ ಶಾಸ್ತ್ರ ಇದಕ್ಕಿಂತ ಹೆಚ್ಚು ಸ್ಪಷ್ಟವಾಗಿ ಸಂಗೀತಕ್ಕೆ ಮೀಸಲಾದ ಪ್ರಮಾಣ ಗ್ರಂಥವೆಂದರೆ ಮತಂಗನ ಬೃಹದ್ದೇಶಿ (ನಾಲ್ಕು-ಐದನೆಯ ಶತಮಾನ) ಸುಮಾರು ೧೩-೧೪ ನೆಯ ಶತಮಾನದಲ್ಲಿ ಭಾರತೀಯ ಸಂಗೀತವು ಎರಡು ಪದ್ಧತಿಗಳಾಗಿ ಸೀಳಿಕೊಂಡಿತೆನ್ನಬಹುದು. ಅಲ್ಲಾವುದ್ದೀನನ ಕಾಲದಲ್ಲಿ ಪರ್ಷಿಯನ್ ಕವಿ ಮತ್ತು ಸಂಗೀತ ವಿದ್ವಾಂಸನಾಗಿದ್ದ ಅಮೀರ್ ಖುಸ್ರೊ ತನ್ನ ದೇಶದ ರಾಗಗಳನ್ನೂ ನಮ್ಮ ದೇಶದ ರಾಗಗಳನ್ನೂ ಸಮನ್ವಯ ಮಾಡಿ ಹಲವಾರು ಹೊಸ ರಾಗಗಳನ್ನು ಸೂಚಿಸಿದನು. ಹೀಗೆ ಪರಕೀಯ ಪ್ರಭಾವದಿಂದ ಪ್ರಾರಂಭವಾದ ಪದ್ಧತಿ ಮೊಗಲರ ಆಳ್ವಿಕೆಯಲ್ಲಿ ಚೆನ್ನಾಗಿ ಬೇರೂರಿತು. ನಮ್ಮ ಸಂಗೀತ ಉತ್ತರಾದಿ, ದಕ್ಷಿಣಾದಿಗಳೆಂಬ ಪದ್ಧತಿಗಳಾಗಿ ಕವಲೊಡೆಯಿತು. ಇವೆರಡೂ ಪದ್ಧತಿಗಳು ಬೇರೆ ಬೇರೆಯಾದರೂ ಶಾಸ್ತ್ರಪ್ರಕ್ರಿಯೆ ಎರಡಕ್ಕೂ ಸಾಮಾನ್ಯವೇ ಆಗಿದೆ. ಇವೆರಡಕ್ಕೂ ಕನ್ನಡಿಗರು ಆಚಾರ್ಯ ಪುರುಷರಾಗಿದ್ದರೆಂಬುದು ಗಮನಾರ್ಹ"

ಸಾವಿರಾರು ವರ್ಷಗಳಷ್ಟು ಪುರಾತನ ಆಯುರ್ವೇದ ವೈದ್ಯಕೀಯ ಪದ್ಧತಿಯಲ್ಲಿ ನಾದ ಚಿಕಿತ್ಸೆಯು ರೂಢಿಯಲ್ಲಿದ್ದ ಬಗ್ಗೆ ಉಲ್ಲೇಖ ಸಿಗುತ್ತದೆ. ಅನಂತರದ ಸಂಗೀತ ಗ್ರಂಥಗಳು ಅದರ ಗುಣ-ಮೌಲ್ಯಗಳನ್ನು ಎತ್ತಿ ಹೇಳುತ್ತವೆಯಾದರೂ ಅದರ ಚಿಕಿತ್ಸಕ ಕ್ರಮಗಳು ತೆರೆಮರೆಯಲ್ಲೇ ಉಳಿದವು.

ರಾಗ ಗುಣ- ಲಕ್ಷಣಗಳ ಹಿನ್ನೆಲೆ

ಹಾಗೆಯೇ ನಮ್ಮ ಪೂರ್ವಜರಿಗೆ ನಿರ್ದಿಷ್ಟ ದೇವತೆಗಳನ್ನು ಪ್ರಸನ್ನಗೊಳಿಸಲು ಸೂಕ್ತವಾದ ವಿಶಿಷ್ಟ ರಾಗಗಳ ಪರಿಚಯ ಕೂಡ ಇದ್ದಿತ್ತು. ನಿರ್ದಿಷ್ಟವಾದ ಸ್ವರಸಂಚಾರಗಳಿಂದ ಕೂಡಿದ ರಾಗವು ಇಂಥದೆ ರಸ ವನ್ನು ಅಭಿವ್ಯಕ್ತಿಸುತ್ತದೆ ಎಂದು ರಾಗಗಳನ್ನು ವಿಂಗಡಿಸಿದರು. ಉದಾಹರಣೆಗೆಃ ಗಣೇಶನಿಗೆ ಹಂಸಧ್ವನಿ ರಾಗ ಪ್ರೀತಿ. ಗಣೇಶ ವಿದ್ಯಾಭಿಮಾನಿ ದೇವತೆ. ವಿದ್ಯೆ ಮಿದುಳು. ಮಿದುಳನ್ನು ಉತ್ತೇಜಿಸುವ ಶಕ್ತಿ ಹಂಸಧ್ವನಿಗಿದೆಯೇ ? ಒತ್ತಡವನ್ನು ಸಡಿಲಿಸಿ ಮನಸ್ಸನ್ನು ಪ್ರಫುಲ್ಲವಾಗಿಸುವ ಶಕ್ತಿ ಆ ರಾಗದಲ್ಲಿ ಅಡಗಿದೆ ಎಂಬ ಅರಿವಿಲ್ಲದೇ ಆನಂದ

ಭೈರವಿ ಎಂಬ ಹೆಸರನ್ನಿಟ್ಟರೆ ? ಅಷ್ಟೇ ಅಲ್ಲದೆ ರಾಗಗಳನ್ನು ಹಾಡಬೇಕಾದ ಸಮಯವನ್ನೂ ನಿರ್ಧರಿಸಿದ್ದರು. ಅಂದರೆ, ಸಂಗೀತದ ಆಂತರಿಕ ಶಕ್ತಿ ಹಾಗೂ ಅದು ಪ್ರಕೃತಿಯ (ಕಾಸ್ಮಿಕ್ ಎನರ್ಜಿ) ಸಹಯೋಗದೊಂದಿಗೆ (ಕಾಲಗುಣದೊಂದಿಗೆ ನಿರ್ದಿಷ್ಟ ಭಾವದ ಸಮರ್ಪಕ ಅಭಿವ್ಯಕ್ತಿಯು) ಮನುಷ್ಯನ ಮೇಲೆ ಬೀರುವ ಪರಿಣಾಮದ ಪರಿಜ್ಞಾನ ಅವರಿಗೆ ಚೆನ್ನಾಗಿದ್ದಿತಲ್ಲವೆ?

ಅಲ್ಲಿಂದ ಮುಂದೆ ಬೆಳಕಿಗೆ ಬಂದ ಸಂತರು ದಾಸರು, ವಾಗ್ಗೇಯಕಾರರು ಹಾಗೂ ಶರಣರು ಸಂಗೀತವನ್ನು ಭಕ್ತಿಮಾರ್ಗದಲ್ಲಿ ಕೊಂಡೊಯ್ದರು. ದೇವರನ್ನು ಒಲಿಸುವುದೊಂದೇ ಅವರ ಪರಮ ಗುರಿಯಾಯಿತು. ಇನ್ನುಳಿದಂತೆ ರಾಜಾಶ್ರಯದಲ್ಲಿದ್ದ ಸಂಗೀತ ವಿದ್ವಾಂಸರು ರಾಜನನ್ನು ಪ್ರಸನ್ನಗೊಳಿಸುವುದರಲ್ಲಿ, ಜನರನ್ನು ತಮ್ಮ ವಿದ್ವತ್ತಿನಿಂದ ರಂಜಿಸುವುದರಲ್ಲಿ ನಿರತರಾದರು. ಈ ನಡುವೆ ನಮ್ಮ ಪುರಾತನ ಸಂಗೀತ ಸಂಸ್ಕೃತಿಯಲ್ಲಿ ಇದ್ದ ಚಿಕಿತ್ಸಕ ಪ್ರವೃತ್ತಿಯು ಹಿಂದುಳಿಯಿತು. ಯಥಾ ಪ್ರಕಾರ ಸಂಗೀತವನ್ನು ತಮ್ಮದೇ ಆದ ನಿಟ್ಟಿನಲ್ಲಿ ಕೂಲಂಕಷ ಅಧ್ಯಯನ ಮಾಡಿ ಪಾಶ್ಚಾತ್ಯ ವಿಜ್ಞಾನಿಗಳು 'ನಾದ ಚಿಕಿತ್ಸೆ 'ಯನ್ನು ಬೆಳಕಿಗೆ ತರಬೇಕಾಯಿತು ಎಂದರೆ ಭಾರತೀಯರಾದ ನಮಗೆ ವಿಷಾದವಾಗದೇ ಮತ್ತೇನು ?

ಇಂದಿನ ದಿನಗಳಲ್ಲಿ ಸಂಗೀತ ಗಳಿಸಿಕೊಂಡ ಪ್ರಾಶಸ್ತ್ಯ

ಇತ್ತೀಚಿನ ಕೆಲವು ವರ್ಷಗಳಲ್ಲಿ ವಿಶ್ವಾದ್ಯಂತ ಸುದ್ದಿ ಮಾಡುತ್ತಿರುವ ಈ ಸಂಗೀತ ಚಿಕಿತ್ಸೆಯು ಯಾವುದೇ ಒಂದು 'ಪದ್ಧತಿ' ಗೆ ಸೀಮಿತವಾಗಿಲ್ಲ. ಮೊದಲೇ ತಿಳಿಸಿರುವಂತೆ ಪೂರ್ವ-ಪಶ್ಚಿಮವೆನ್ನದೆ ವಿಶ್ವದ ಎಲ್ಲ ಬಗೆಯ ಸಂಗೀತಕ್ಕೂ ಮೂಲತಃ ಒಂದೇ ಸೆಲೆಯಾದ್ದರಿಂದ ಸಂಗೀತವನ್ನು ಚಿಕಿತ್ಸೆಗೆ ಬಳಸುವಾಗ ರಾಗ-ಲಯಗಳಿಗೆ ಸಂಬಂಧಿಸಿದಂತೆ ಕೆಲವು ಮೂಲಭೂತವಾದ ನಿಯಮಗಳನ್ನು ಅನುಸರಿಸಬೇಕಾಗುತ್ತದೆ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈಚೆಗೆ ಸಂಗೀತ ಚಿಕಿತ್ಸೆಯು ವೈಜ್ಞಾನಿಕವಾಗಿ ಯಶಸ್ವಿಯಾಗಿದೆ. ಅಮೆರಿಕಾ, ಸ್ವಿಟ್ಜರ್ ಲ್ಯಾಂಡ್, ಇಂಗ್ಲಂಡ್, ಬ್ರೆಜಿಲ್, ಜರ್ಮನಿ ಮುಂತಾದ ರಾಷ್ಟ್ರಗಳಲ್ಲಿ ಸಂಗೀತ ಚಿಕಿತ್ಸೆಯು ಈಗಾಗಲೇ ಪ್ರಗತಿ ಸಾಧಿಸಿದೆ. ಆಧುನಿಕ ಭಾರತದಲ್ಲಿ ಅದಿನ್ನೂ ಶೈಶವಾವಸ್ಥೆಯಲ್ಲೇ ಇದೆ. ಚೆನ್ನೈಯಲ್ಲಿ

ಡಾಃ ಎಂ. ಬಾಲಮುರಳಿಕೃಷ್ಣ, ಕುನ್ನೆಕುಡಿ ವೈದ್ಯನಾಥನ್, ಮಹಾರಾಷ್ಟ್ರದ ಕೆಲವು ವೈದ್ಯರುಗಳು, ಮೈಸೂರಿನ ಪೂಜ್ಯ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ರಾಗ ಚಿಕಿತ್ಸೆಗೆ ಪ್ರಾಧಾನ್ಯ ಕೊಟ್ಟಿದ್ದಾರೆ. ದೇಶಾದ್ಯಂತ ಇನ್ನು ಕೆಲವು ಖಾಸಗಿ ಚಿಕಿತ್ಸಾಲಯಗಳಲ್ಲಿ ಸಂಗೀತ ಚಿಕತ್ಸೆಯನ್ನು ಪೂರಕ ಚಿಕಿತ್ಸೆಯಾಗಿ ಬಳಸಲಾಗುತ್ತಿದೆ. ಪಂಡಿತ್ ಅರುಣ್ ಕುಮಾರ್ ದೇವ್‌ನಾಥ್ ಹಾಗೂ ಅವರ ಪತ್ನಿ ಸಂಘಮಿತ್ರಾರವರು ಅಮೆರಿಕೆಯಲ್ಲಿದ್ದುಕೊಂಡು ಕಿರಾನಾ ಘರಾನಾ ಶೈಲಿಯ ಭಾರತೀಯ ಸಂಗೀತ ಚಿಕಿತ್ಸಾಲಯನ್ನು ಯಶಸ್ವಿಯಾಗಿ ನಡೆಸುತ್ತಿರುವುದು ಹೆಮ್ಮೆಯ ಸಂಗತಿ.

ಸಂಗೀತ ಚಿಕಿತ್ಸೆ ಎಂದರೇನು ? ಹಾಗೂ ಅದರ ಪರಿಣಾಮ

ಸಂಗೀತ ಚಿಕಿತ್ಸೆಗೆ ರೋಗಿಯ ಎಕ್ಸ್- ರೇ, ಇ.ಸಿ.ಜಿ ಯಾವುದೂ ಬೇಕಿಲ್ಲ. ಆಹಾರದ ಪಥ್ಯವಿಲ್ಲ. ಕಹಿ ಗುಳಿಗೆಯ ಕಾಟವಿಲ್ಲ. ನಿಮ್ಮ ತೊಂದರೆಗಳನ್ನು ತಿಳಿದುಕೊಂಡು ವೈದ್ಯರು (ಸಂಗೀತ ತಜ್ಞರು) ನಿಮಗೆ ಹೊಂದಿಕೆಯಾಗುವ ರಾಗವನ್ನು ಕೇಳುವಂತೆ ಸೂಚಿಸುತ್ತಾರೆ. ದಿನದಲ್ಲಿ ಇಂತಿಷ್ಟು ಹೊತ್ತು ಆ ಸಂಗೀತವನ್ನು ಆಲಿಸುವುದೇ ಆ ದಿನದ 'ಡೋಸ್'! ಕಾಯಿಲೆಯ ತೀವ್ರತೆಯನ್ನು ಅನುಸರಿಸಿ ಔಷಧಿಯ ಜತೆಜತೆಗೆ ಈ ಚಿಕಿತ್ಸೆಯನ್ನು ನೀಡಲಾಗುತ್ತದೆ. ಆ ಬಾಲವೃದ್ಧರಾದಿಯಾಗಿ ಎಲ್ಲರಿಗೂ ಹಿತಕಾರಿ ಚಿಕಿತ್ಸೆ ಇದು.

ಸಂಗೀತವು ನಮ್ಮ ಶರೀರದ ಚಿಕಿತ್ಸೆಗಿಳಿಯುವುದು ಕಿವಿಯ ಮೂಲಕ. ಮಿದುಳು ಹಾಗೂ ಶರೀರಕ್ಕೆ ಶಕ್ತಿ ನೀಡುವಂತೆ ನಮ್ಮ ಕಿವಿಯ ರಚನೆ ಇದೆ. ನಮ್ಮ ಕಿವಿಯ ಗೂಡು (ಕ್ಲಾಕಿಯಾ) ಶಬ್ದತರಂಗಗಳನ್ನು ಗ್ರಹಿಸಿ ಅದರ ಯಾಂತ್ರಿಕ ಶಕ್ತಿಯನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸಿ ಮಿದುಳಿಗೆ ತಲುಪಿಸುತ್ತದೆ. ಅಂದರೆ, ನಾವು ಕೇಳುವ ಪ್ರತಿಯೊಂದ ಶಬ್ದತರಂಗವೂ ವಿದ್ಯುತ್ ಶಕ್ತಿಯಾಗಿಯೇ ನಮ್ಮ ಶರೀರವನ್ನು ಪ್ರವೇಶ ಮಾಡುತ್ತದೆ.

ಸಂಗೀತ ಚಿಕಿತ್ಸೆಯ ಮೂಲಕ ಮಿದುಳಿನ ಮೇಲೆ ಪರಿಣಾಮ

ಹೀಗೆ ಮಿದುಳಿನ ಒಳ ಸೇರಿದ ವಿದ್ಯುತ್ ಸಂಕೇತಗಳು ಮಿದುಳಿನ ಮೂಲ ದಂಟಿನ ಮೂಲಕ ಹಾಯ್ದು ಹೋಗುತ್ತವೆ. ಈ ಹಂತದಲ್ಲಿ ಸಂಗೀತವು ಹೈಪೋತಾಲಮಸ್ ಮುಂತಾದ ಮನಸ್ಸಿನ ಭಾವನಾತ್ಮಕ ನೆಲೆಯನ್ನು

[illegible]

ನಿಯಂತ್ರಿಸುವ ಮಿದುಳ ದಂಟನ್ನು ಆವರಿಸಿರುವ ಲಿಂಬಿಕ್ ಸಿಸ್ಟಮ್‌ನ್ನು ಉತ್ತೇಜಿಸುತ್ತದೆ. ಕೆಲವು ಬಗೆಯ ಸಂಗೀತವನ್ನು ಕೇಳಿದಾಗ ದುಃಖ/ಸಂತೋಷ/ಹತಾಶೆ ಅನುಭವಿಸುವುದಕ್ಕೆ ಇದೇ ಕಾರಣ. ಸಂಗೀತಕ್ಕೂ ಹಾರ್ಮೋನುಗಳ ಸಮತೋಲನಕ್ಕೂ ಸಂಬಂಧ ಬೆಳೆದುದು ಹೀಗೆಯೇ.

ಇಲ್ಲಿಂದ ಮುಂದೆ ನಾದ ತರಂಗವು ಮೇಲ್ಮುಖವಾಗಿ ಹರಿದು ಸುಪ್ತಪ್ರಜ್ಞೆಯ ಹಂತದಲ್ಲಿರುವ ಧ್ವನಿನಿಯಂತ್ರಣ ಕೇಂದ್ರವನ್ನು ತಲುಪುತ್ತದೆ. ಅಲ್ಲಿ ಈ ತರಂಗಗಳ ಸಂಜ್ಞೆಯನ್ನು ಅರ್ಥೈಸಿಕೊಳ್ಳಲಾಗುತ್ತದೆ. ಬ್ರೈನ್ ಮ್ಯಾಪಿಂಗ್ ತಾಂತ್ರಿಕತೆಯಿಂದಾಗಿ ಮಿದುಳಿನಲ್ಲಿ ಸಂಗೀತದ ನಡೆಯನ್ನು ಪತ್ತೆಹಚ್ಚಲು ಸಾಧ್ಯ. ನಿಮ್ಮ ಸ್ಟೀರಿಯೋ ರೆಕಾರ್ಡರ್‌ನಲ್ಲಿ ನಿರಂತರ ಕುಣಿಯುವ ಬಣ್ಣಬಣ್ಣದ ಮಿಣುಕು ದೀಪಗಳು (ಸೆಕ್ಟ್ರಮ್ ಅನಲೈಸರ್) ಒಳಗಿರುವ ಕ್ಯಾಸೆಟ್ಟಿನ ಸಂಗೀತದ ಆರೋಹಣ/ ಅವರೋಹಣ, ಸ್ವರಗಳ ತೀವ್ರತೆ ಇತ್ಯಾದಿ ವಿವರಗಳನ್ನು ತಿಳಿಸುವಂತೆಯೇ ಈ ಯಂತ್ರವೂ ಸಂಗೀತವನ್ನು ಆಲಿಸುವವನ ಮಿದುಳಿನಲ್ಲಿ ಉಂಟಾಗುವ ಅತಿ ಸೂಕ್ಷ್ಮ ಬದಲಾವಣೆಯನ್ನೂ ತಿಳಿಸುತ್ತದೆ.

ಸಂಗೀತವನ್ನು ಆಲಿಸುವುದರಿಂದ ನಮ್ಮ ಶಬ್ದ ಭಂಡಾರ, ಗಣಿತ, ವಿವಿಧ ಪಾಠೇತರ ಚಟುವಟಿಕೆಗಳಲ್ಲೂ ಚುರುಕುತನ ಸಾಧಿಸಬಹುದು. ಈ ನಿಟ್ಟಿನಲ್ಲಿ ವಿಜ್ಞಾನಿಗಳು ಸಂಗೀತವನ್ನು ಶಾಲಾ ಮಕ್ಕಳಲ್ಲಿ ಪ್ರಯೋಗಿಸಿ ಯಶಸ್ವಿಯಾಗಿದ್ದಾರೆ.

ಸಂಗೀತವು ನಮ್ಮ ಸಂವೇದ್ಯ ಸಾಮರ್ಥ್ಯದ ಮೇಲೆ ಅತ್ಯುತ್ತಮ ಪರಿಣಾಮ ಬೀರುತ್ತದೆಂದು ನರವಿಜ್ಞಾನಿಗಳ ಅಂಬೋಣ. ವಿಲಿಯಮ್ ಕಾಲ್ ವಿನ್‌ನಂಥ ವಿಜ್ಞಾನಿಗಳು ಹೇಳುವಂತೆ, ಸಂಗೀತದ ತರಂಗಗಳು ಮಿದುಳಿನ ಕೆಲವು ಭಾಗಗಳಲ್ಲಿ ಹಾಯ್ದುಹೋಗುತ್ತಾ ಆ ಮೂಲಕ ಅವುಗಳಿಗೆ ಉತ್ತೇಜನ ನೀಡುತ್ತವೆ. ಇದರಿಂದ ಕೇಳುಗನ ಬುದ್ಧಿ ಚುರುಕಾಗುತ್ತ ಹೋಗುತ್ತದೆ. ಇ.ಇ.ಜಿ. (ಇಲೆಕ್ಟ್ರೋ ಎನ್ಸೆಫೆಲೋ ಗ್ರಾಫ್) ಯಂತ್ರವು ನಾದ ತರಂಗವು ಮಿದುಳಿನ ವಿವಿಧ ಭಾಗಗಳನ್ನು ಉತ್ತೇಜನಗೊಳಿಸುವುದನ್ನು ತೋರಿಸಬಲ್ಲದು.

ನಾದ ತರಂಗಗಳು ಮಿದುಳಿನ ಎಡ-ಬಲಗಳ ಮೇಲೆ (ಲೆಫ್ಟ್ ಹೆಮಿಸ್ಫಿಯರ್ ಹಾಗೂ ರೈಟ್

ಹೆಮಿಸ್ಫಿಯರ್) ನೇರ ಪರಿಣಾಮ ಬೀರಬಲ್ಲವು. ಭಾಷಾಜ್ಞಾನ, ತಾರ್ಕಿತ ಬುದ್ಧಿ ಹಾಗೂ ಕ್ರಿಯಾತ್ಮಕತೆಯನ್ನು ಇದು ಬೆಳೆಸುತ್ತದೆ. ಶರೀರವನ್ನು ಮಿದುಳೇ ನಿಯಂತ್ರಿಸುತ್ತಿರುವಂತೆಯೇ ಇತರ ಭಾಗಗಳಲ್ಲಿ ತಲೆದೋರುವ ತೊಂದರೆಗಳನ್ನು ನಿವಾರಿಸಬಲ್ಲದು.

ಸ್ವರ ಲಕ್ಷಣಗಳು ಮನಸ್ಸಿನಲ್ಲಿ ಮೂಡಿಸುವ ಕಲ್ಪನೆಯನ್ನು ಅನುಸರಿಸಿ ಅದರ ಶ್ರವ್ಯಗುಣವನ್ನು ಕುಶಲ ಚಿತ್ರಗಾರನು ದೃಶ್ಯವಾಗಿ ಪರಿವರ್ತಿಸಿದ್ದಾನೆ. ಇಲ್ಲಿ ಪುರುಷಭಾವಗಳಾದ ವೀರ್ಯ, ಸಾಹಸ ಬಿಂಬಿಸುವ ಸ್ವರವು ಪುರುಷ (ಅಭಿಮಾನ ದೇವತೆ) ಯಾಗಿ, ಮಾರ್ದವತೆ, ಕೋಮಲತೆ, ರತಿ- ಇವು ಸ್ತ್ರೀರೂಪ ತಾಳಿವೆ. ಹಾಗೆಯೇ ಇತರ ವಸ್ತುಗಳೂ, ಇಂಥ ಸಪ್ತಸ್ವರಗಳ ಮೈಸೂರು ಶೈಲಿಯ ಚಿತ್ರಗಳು ಅಧ್ಯಯನಕ್ಕೆ ಎಡೆಮಾಡಿಕೊಟ್ಟಿದೆ.



ವರ್ಣಚಿತ್ರ ಕೃಪೆ : ಶ್ರೀ ತತ್ವನಿಧಿ (ಮುಮ್ಮಡಿ ಕೃಷ್ಣರಾಜ ಒಡೆಯರ್)

ವೈದ್ಯಕೀಯ ಚಿಕಿತ್ಸೆಯಲ್ಲಿ ನೋವು ನಿವಾರಕ ಬಾಮ್ ಆಗಿ ಸಂಗೀತ

ದಂತವೈದ್ಯರೊಬ್ಬರ ಚಿಕಿತ್ಸಾಲಯದಲ್ಲಿ ಸಂಗೀತವನ್ನು ಕೆಳುತ್ತಾ ಹಲ್ಲು ಕೀಳಿಸಿಕೊಳ್ಳುವ ವ್ಯವಸ್ಥೆ ಇದೆ! ಇದರಿಂದ ಹಲ್ಲು ಕಿತ್ತ ಅನಂತರ ಕಾಣಿಸಿಕೊಳ್ಳುವ ನೋವು ಬಹಳ ಕಡಿಮೆಯಾಯಿತಂತೆ. ರೋಗಿಯ ಕಳವಳ, ವಾಂತಿ ಮಾಡಿಕೊಳ್ಳುವ ರಂಪಾಟ ಇತ್ಯಾದಿ ತೊಂದರೆಗಳು ಮಂಗಮಾಯವಾದುವಂತೆ. ವೈದ್ಯರಿಗೂ ಚಿಕಿತ್ಸೆ ನೀಡುವ ಪ್ರಕ್ರಿಯೆಯ ಅವಧಿ ಕಡಿಮೆ ತಗಲಿತಂತೆ.

ಆಶ್ಚರ್ಯವಾದರೂ ನಿಜವೇ. ಸಂಗೀತ ಕೇಳುವುದರಿಂದ ಮನುಷ್ಯನ ರಕ್ತಸಂಚಾರ ನಿರಾಳವಾಗಿ, ನೋವು ಹೆಚ್ಚಿಸಲು ಕಾರಣವಾದ ಕಳವಳ ಸ್ತಿಮಿತಕ್ಕೆ ಬಂದು ಬಿಗಿದ ಸ್ನಾಯುಗಳು ಸಡಿಲಗೊಳ್ಳುತ್ತವೆ. ಉಸಿರಾಟ ಸರಾಗವಾಗುತ್ತದೆ. ಅಷ್ಟೇ ಅಲ್ಲದೆ ಸಂಗೀತವು ಮಿದುಳಿನ ಮೇಲೆ ಪರಿಣಾಮ ಬೀರಿ ನೋವನ್ನು ತಡೆಹಿಡಿಯಬಲ್ಲುದೆಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

ಅಮೆರಿಕದ 'ಪೇಯ್ನ್' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿರುವಂತೆ, 'ಕೇಸ್ ವೆಸ್ಟರ್ನ್ ರಿಸರ್ವ್ ಯೂನಿವರ್ಸಿಟಿ'ಯ ಸಂಶೋಧಕರು ಸಂಗೀತದ ಮಹತ್ವವನ್ನು ಇನ್ನಷ್ಟು ಪ್ರಚಾರಪಡಿಸಿದರು. ಇವರೆನ್ನುವಂತೆ ಪ್ರಧಾನ ಶಸ್ತ್ರಚಿಕಿತ್ಸೆಯ ಅನಂತರ ಔಷದೋಪಚಾರದೊಂದಿಗೆ ರೋಗಿಗೆ ಸಂಗೀತವನ್ನು ಕೇಳಿಸುವುದರಿಂದ ಯಾವುದೇ ನೋವಿನ ಗುಳಿಗೆಗಿಂತಲೂ ಮಿಗಿಲಾಗಿ ವೇದನೆಯನ್ನು ನಿವಾರಿಸಬಲ್ಲದು. ನೋವು ನಿವಾರಕ ಗುಳಿಗೆಗಳು ಉಚಿತವಾಗಿ ಕೊಡುವ 'ಸೈಡ್ ಎಫೆಕ್ಟ್' ಯಾರಿಗೆ ಬೇಕು?

ವೈದ್ಯಕೀಯವಾಗಿ ಶಸ್ತ್ರಕ್ರಿಯೆಯ ಅನಂತರ ಸಂಗೀತ ಚಿಕಿತ್ಸೆಯ ಪ್ರಯೋಗ

• ಮಹಿಳೆಯರ ಕೆಲವು ಸಮಸ್ಯೆಗಳಾದ ಪಂಚ್ ಬಯೋಪ್ಸಿ, ಗರ್ಭಪಾತ, ಪ್ರಸವಗಳಂಥ ತೀಕ್ಷ್ಣ ನೋವಿನಿಂದ ಕೂಡಿದ ಕ್ಷಣಗಳಲ್ಲೂ ಒಳ್ಳೆಯ ಸಂಗೀತ ಕೋಳುವುದರಿಂದ ನೋವು ಉಪಶಮನವಾಗುತ್ತದೆಂದು ತಿಳಿಯಲಾಗಿದೆ. ಕ್ಯಾನ್ಸರ್ ರೋಗಿಗಳು ತತ್ಸಂಬಂಧಿ ಔಷದಿಯೊಂದಿಗೆ ಸಂಗೀತವನ್ನೂ ದಿನಕ್ಕೆರಡು ಬಾರಿಯಂತೆ

ಅಡಿಟಿಪ್ಪಣಿ: * ಮನೋರಮಾ ಹೆಜಮಾಡಿ ಅವರ ಲೇಖನವನ್ನಾಧರಿಸಿ ತರಂಗ 26 ಆಗಸ್ಟ್ 99

[illegible]

[illegible]

[illegible]

[illegible]

[illegible]

[illegible]

[illegible]

ಕೇಳುವ ಮೂಲಕ ತಮ್ಮ ನೋವಿನ ತೀಕ್ಷ್ಣತೆಯನ್ನು ಹಗುರಗೊಳಿಸಿಕೊಂಡಿದ್ದಾರೆ. ತೀವ್ರ ಸುಟ್ಟ ಗಾಯದೊಂದಿಗೆ ಒಳರೋಗಿಯಾಗಿ ಬಂದವರಿಗೆ ಔಷಧಿಯ ಜತೆಗೆ ಸಂಗೀತವೂ ಸಾಂತ್ವನ ಹೇಳಿದೆ. ಅಸ್ತಮಾ, ಕಿಡ್ನಿ ತೊಂದರೆಗಳೂ ಸಹ ಸಂಗೀತದಿಂದ ಗುಣಾತ್ಮಕ ಪ್ರಯೋಜನ ಹೊಂದಿವೆ.

ಶಸ್ತ್ರಚಿಕಿತ್ಸೆಗೆ ಒಳಪಟ್ಟ ರೋಗಿಗಳು ಅನುಭವಿಸುವ ತೀವ್ರತರ ನೋವು ಗಾಯಮಾಯಲೂ ಬಿಡುವುದಿಲ್ಲ. ಹಸಿವು-ನಿದ್ದೆಗೂ ತಡೆಯಾಗಿ ರೋಗಿಯನ್ನು ಇನ್ನಷ್ಟು ಆತಂಕಕಾರಿ ಸ್ಥಿತಿಗೆ ಕೊಂಡೊಯ್ಯಬಲ್ಲದು. ಕಿವಿಗಾನಿಸಿ ಕೇಳಲು ಅನುಕೂಲವಾಗುವ ಹೆಡ್ ಫೋನ್ ಈ ನಿಟ್ಟಿನಲ್ಲಿ ಹೆಚ್ಚು ಉಪಕಾರಿ. ಅದು ಇಂಪಾದ ನಾದವನ್ನು ನೇರವಾಗಿ ನಿಮ್ಮ ಕಿವಿಯೊಳಗೆ ಹರಿಯಬಿಡುವುದಲ್ಲದೆ ಹೊರಗಿನ ಶಬ್ದಗಳನ್ನೂ ತಡೆಯಬಲ್ಲದು.

<u>ನಿರೋಧಕ ಶಕ್ತಿ ಬೆಳೆಸುವ ಚೈತನ್ಯ ಕೊಡುವ ಸಂಗೀತ</u>

ಪಾಠ ಮಾಡುವ ಮೇಷ್ಟ್ರು ದಡ್ಡ ಮಕ್ಕಳಿಗೆ ಕೂಗಿ ಕೂಗಿ ಕಲಿಸಿ ಬೇಗ ಸಾಯುತ್ತಾರೆಂಬ ಮಾತಿದೆ. ಎಷ್ಟು ಸತ್ಯವೋ ತಿಳಿಯದು. ಆದರೆ ಹಾಡುಗಾರನಿಗೆ ಆಯಸ್ಸು ಹೆಚ್ಚುತ್ತದೆ ಎಂಬುದು ಮಾತ್ರ ಸತ್ಯ. ಹಾಗೆಂದು ವಿಜ್ಞಾನಿಗಳು ಹೇಳುತ್ತಾರೆ. ಇದು ಅವರ ಮಾನಸಿಕ ಪರಿವರ್ತನೆ ಇರಬಹುದು ಅಥವಾ ದಿನನಿತ್ಯವೂ ಸಂಗೀತ ಅಭ್ಯಾಸ ಮಾಡಿದಾಗ ಸಂಗೀತವು 'ಟಾನಿಕ್' ನಂತೆ ಕೆಲಸ ಮಾಡಿರಲೂ ಬಹುದು.

ನಮ್ಮ ದೇಹದಲ್ಲಿ ರೋಗನಿರೋಧ ಶಕ್ತಿಯು ದೈವದತ್ತ. ಈ ಶಕ್ತಿಗೆ ಪೂರಕವಾಗಿ ಕೆಲಸ ಮಾಡುವ ಹೆಲ್ಪರ್ ಟಿಸೆಲ್ಸ್, ಫಾಗೋಸಿಟ್ಸ್, ಗ್ರಾನ್ಯುಲೋಸಿಟ್ಸ್ ನ್ಯೂಟ್ರೋಫಿಲ್ಸ್, ಮೆಸೆಂಜರ್ ಮೋಲೆಕ್ಯೂಲ್ಸ್‌ಗಳು ಕಾಯಿಲೆಗಳ ವಿರುದ್ಧ ಹೋರಾಡುವ ಸೇನಾದಳದ ವೀರ ಯೋಧರು! ಈ ನಿರೋಧ ಶಕ್ತಿಯನ್ನು ಹ್ರಾಸಗೊಳಿಸುವ ವೈರಿಗಳನ್ನು ಹೊಡೆದೋಡಿಸುವ ಕ್ರಿಯೆಯನ್ನು ನಿರ್ವಹಿಸುವ ಮಿದುಳಿನ ಭಾಗವು (ಲಿಂಬಿಕ್ ಸಿಸ್ಟಮ್) ನಮ್ಮ ಭಾವನಾತ್ಮಕ ನೆಲೆಯನ್ನು ನಿಯಂತ್ರಿಸಿ, ಜತೆಗೆ ಸಂಗೀತವನ್ನು ಗ್ರಹಿಸುವ ಕಾರ್ಯವನ್ನೂ ನಿರ್ವಹಿಸುತ್ತದೆ. ಇದರಿಂದಾಗಿ ಸಂಗೀತವನ್ನು ಕೇಳುವ ಮೂಲಕ ನಿರೋಧ ಶಕ್ತಿಯು ಪುಷ್ಟಿಗೊಳ್ಳುತ್ತಾ ಹೋಗಬಲ್ಲುದು.

ಜರ್ಮನಿಯ ವಿಜ್ಞಾನಿಯೊಬ್ಬ ಆರೋಗ್ಯವಂತರಿಗೆ ಅವರು ಇಷ್ಟಪಡುವ ಸಂಗೀತವನ್ನು ಕೇಳಿಸಿ, ಅನಂತರ

[illegible]

[illegible]

[illegible]

[illegible]

[illegible]

[illegible]

ಅವರ ರಕ್ತವನ್ನು ಪರೀಕ್ಷಿಸಿದನು. ಅವರ ರಕ್ತದಲ್ಲಿ ನಿರೋಧ ಶಕ್ತಿಯ ಉತ್ಪತ್ತಿಗೆ ಅಗತ್ಯವಾದ ಇಂಟರ್ ಲ್ಯೂಕಿನ್-೧ ಹೆಚ್ಚಾಗಿರುವುದು ಕಂಡುಬಂದಿತು. ಜತೆಗೆ ಒತ್ತಡವನ್ನು ಪ್ರತಿಬಿಂಬಿಸುವ ಕಾರ್ಟಿಸೋಲ್ ಹಾರ್ಮೋನುಗಳ ಮಟ್ಟ ಗಮನಾರ್ಹವಾಗಿ ಕುಸಿದಿತ್ತು!* ಡಾ ರವಿಶಂಕರ್ ಅವರ ಸಿತಾರ್ ವಾದನವನ್ನು ಕೇಳಿದವರಲ್ಲಿ ನಿರೋಧ ಶಕ್ತಿಯನ್ನು ವಿರೋಧಿಸುವ ಮೂರು ಬಗೆಯ ಹಾರ್ಮೋನುಗಳು ನಾಪತ್ತೆಯಾಗಿದ್ದವು! ಇದೊಂದು ವೈದ್ಯಕೀಯ ರಂಗದಲ್ಲಿ ಇಂಪಾದ ಶುಭ ಸೂಚನೆಯಲ್ಲವೆ!

ವರ್ಣಚಿತ್ರ ಕೃಪೆ : ಶ್ರೀ ತತ್ವನಿಧಿ (ಮುಮ್ಮಡಿ ಕೃಷ್ಣರಾಜ ವಡೆಯರ್)



ಅಡಿಟಿಪ್ಪಣಿ: * ಮನೋರಮಾ ಹೆಜಮಾಡಿ ಅವರ ಲೇಖನವನ್ನಾಧರಿಸಿ ತರಂಗ 26 ಆಗಸ್ಟ್ 99

ಯಾವ ಬಗೆಯ ಸಂಗೀತ ಚಿಕಿತ್ಸೆಗೆ ಸೂಕ್ತ

ಸಂಗೀತ ಕೇಳಿ ರೋಗ ನಿವಾರಣೆ! ಯಾರಿಗೆ ತಾನೆ ಬೇಡವಾದೀತು ? ಆದರೆ ಯಾವ ಥರದ ಸಂಗೀತ ಕೇಳಬೇಕು? ಯಾವುದನ್ನು ಕೇಳಬಾರದು ?

ಸುಶ್ರಾವಂ ಸಂಗೀತ ಮಾಕರ್ಣ್ಯ ಭವೇದ್ಯಃ

ಪುಲಕಾನ್ವಿತಃ |

ಆನಂದಾಶ್ರುಕಣಾಕೀರ್ಣ ಸೋಽಯಂ ರಸಿಕ

ಗಾಯಕಃ ||

ನೀರಸಂ ಸರಸಂ ಕುರ್ವನ್ನಿರ್ಭಾವಂ ಭಾವ

ಸಂಯುತಂ |

ಶ್ರೋತೃಶ್ಚಿತ್ತಂ ಪರಿಜ್ಞಾಯ ಯೋಗಾಯೇತ್

ಸತುಭಾವುಕಃ ||

ಚೇತೋಹರೇಣ ಗೀತೇನ ವಿದಿತ್ವಾ

ಶ್ರೋತೃರಾಶಯಂ|

ರಂಗಂಗೀತೇ ವಿಧತ್ರೇ ಯೋ ರಂಜಕಃ

ಸೋಽಭಿಧೀಯತೇ ||

ಪಾರ್ಶ್ವದೇವನು 'ಸಂಗೀತ ಸಮಯಸಾರ' ದಲ್ಲಿ ಹೇಳಿರುವಂಥ ರಸಿಕ, ಭಾವುಕ ಹಾಗೂ ರಂಜಕ (ಗಾಯಕರ) ಗಾಯನವು ಉತ್ತಮವಾದ ಸಂಗೀತವಾಗಬಲ್ಲುದು. ಸರಳವಾಗಿ ಹೇಳುವುದಾದರೆ, ಸಂಗೀತವು ಕೇಳುವ ಕಿವಿಗಳಿಗೆ ಹಿತವಾಗಿರಲಿ. ಮುದುಡಿದ ಮನಸ್ಸನ್ನು ಸಾಂತ್ವನಗೊಳಿಸುವಂತಿರಲಿ.

ಮೂಲತಃ ಸಂಗೀತ ಒಂದೇ ಆದರೂ ಕಾಲಾನುಸಾರ ಅದು ಕವಲೊಡೆಯುತ್ತ, ಬೆಳೆಯುತ್ತ

ವೈವಿಧ್ಯಮಯ ರೂಪತಾಳುತ್ತಿದೆ. ಅಂತೆಯೇ ಭಿನ್ನ ಶೈಲಿಯ, ವಿಭಿನ್ನರಾಗಗಳ ಪರಿಣಾಮಗಳೂ ಒಂದೇ ತೆರನಾಗಿರುವುದು ಸಾಧ್ಯವಿಲ್ಲವಷ್ಟೇ?

ಸಂಗೀತ ಚಿಕಿತ್ಸೆಯನ್ನು ಸಂಬಂಧಪಟ್ಟ ತಜ್ಞರಿಂದ ಪಡೆಯುವಾಗ ಅವರ ಸಲಹೆಯನ್ನೆ ಅನುಸರಿಸುವದು ಒಳ್ಳೆಯದು. ಅದಲ್ಲದೇ ನಿಮಗೆ ನೀವೇ ಸಂಗೀತವನ್ನು ಆರಿಸಿಕೊಳ್ಳುವಾಗ ಅದರ ಗತಿ, ಧ್ವನಿಯ ತೀವ್ರತೆ , ವೇಗ, ಹಾಡುಗಾರಿಕೆ/ ವಾದ್ಯ ಸಂಗೀತ, ಶೈಲಿ, ಸ್ಥಾಯಿ (ತಾರಕ ಮಂದ್ರ), ನಾದ ಸ್ವರೂಪ ಹಾಗೂ ಸಂಯೋಜನೆ ಇವೆಲ್ಲವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ , ಇವುಗಳ ವ್ಯತ್ಯಾಸ ಉಂಟು ಮಾಡುವ ಪರಿಣಾಮವು ವಿಭಿನ್ನವಾದುದು.

ವೇಗ ಗತಿಯ ಸ್ವರಸಂಯೋಜನೆಯುಳ್ಳ ಸಂಗೀತ ಹಾಗೂ ತಾರಕ ಸ್ಥಾಯಿಯ ನಾದವು ಉತ್ತೇಜಕ ಸಂಗೀತ. ರಕ್ತದ /ಮಾನಸಿಕ ಒತ್ತಡ ಇರುವವರಿಗೆ ಇದು ಒತ್ತಡವನ್ನು ಹೆಚ್ಚಿಸಬಹುದು. ಹಾಗೆಯೇ ಮಂದ್ರ ಸ್ಥಾಯಿಯ ಮೃದು ನಡೆಯ ಸಂಗೀತವು ಸಾಂತ್ವನಗೊಳಿಸುವಂತಿರುತ್ತದೆ. ಹಾಡುಗಾರಿಕೆಯೋ ಅಥವಾ ವಾದ್ಯ ಸಂಗೀತ ಸೂಕ್ತವೋ ಎಂಬುದು ನಿಮ್ಮ ಅಭಿರುಚಿಗೆ ಬಿಟ್ಟದ್ದು. ಅದು ತಿಳಿಯದಿದ್ದರೆ ಎರಡನ್ನು ಪ್ರಯೋಗಿಸಿ ನೋಡಿ, "ಯಾರೂ ಹಿತವರು..." ಎಂದು ನೀವೇ ಕಂಡುಕೊಳ್ಳಿ.!

ಸಂಗೀತದ ಶೈಲಿ ಹಾಗೂ ಸಂಯೋಜನೆಯ ಮಟ್ಟವು ಇದೇ ಮಾರ್ಗವನ್ನು ಅನುಸರಿಸುತ್ತದೆ. ಒಂದು ನಿಮಿಷಕ್ಕೆ ೭೦-೮೦ ಘಾತ ಬರುವ ಸಂಗೀತದ ಗತಿ ಸಾಮಾನ್ಯವಾಗಿ ಎಲ್ಲರಿಗೂ ಹಿತವನ್ನುಂಟುಮಾಡಬಲ್ಲುದೆಂದು ಸಂಶೋಧನೆ ಸಿದ್ಧಪಡಿಸಿದೆ. (ನೋಸ್ಟಾಲ್ಜಿಯಾ? ತಾನು ಗರ್ಭದಲ್ಲಿದ್ದಾಗ ಕೇಳಿ ಒಪ್ಪಿಕೊಂಡ ಹೃದಯಬಡಿತದ ಸವಿನೆನಪು ಹಿತತರುತ್ತದೆಯೇ?) ಅಂತೂ ನಿಮಗೆ ಇಷ್ಟವಾಗುವ ಸಂಗೀತವನ್ನೇ ಕೇಳಿಕೊಳ್ಳುವದು ಅತ್ಯವಶ್ಯ. ಮನಸ್ಸಿಗೆ ಒಗ್ಗಿಕೊಳ್ಳದ ಸಂಗೀತವನ್ನು ಪ್ರಯತ್ನಪೂರ್ವಕವಾಗಿ ಕೇಳಿದರೆ ಅದು ವಿರುದ್ಧ ಪರಿಣಾಮವನ್ನು ಬೀರಬಹುದು.

ಸಂಪ್ರದಾಯಗಳ ಮಹತ್ವ

ತ್ರಿಸಂಧ್ಯಾ ಕಾಲಗಳಲ್ಲಿ ಮನೆಯೊಳಗೆ ಶಂಖನಾದ ಮಾಡಿದರೆ ಭೂತ ಪ್ರೇತಗಳು ಬರುವುದಿಲ್ಲ ಎನ್ನುತ್ತಾರೆ. ಸಂಪ್ರದಾಯಸ್ಥರು ಪೂಜಾ ಕಾಲದಲ್ಲಿ ಬಾರಿಸುವ ಜಾಗಟೆಯ ಸದ್ದು, ದೊಡ್ಡ ತಾಳಗಳ ಝೇಂಕಾರ ಹಾಗೂ ದೇವಾಲಯಗಳ ಘಂಟೆಗಳಿಂದ ಹೊಮ್ಮುವ ನಾದವು ಕೇಳುವಷ್ಟು ದೂರಕ್ಕೆ ದುಷ್ಟಶಕ್ತಿಗಳು ಓಡಿಹೋಗುತ್ತವೆ ಎನ್ನುತ್ತಾರೆ. ವಾಸ್ತವದಲ್ಲಿ 'ಓಂ'ಕಾರದ ನಾದ ಹೊಮ್ಮಿಸುವ ಈ ಶಬ್ದಗಳಿಂದ ಸುತ್ತಮುತ್ತಲ ಬ್ಯಾಕ್ಟೀರಿಯಾಗಳು ನಾಶವಾಗುತ್ತವೆಂದು ಇಂದಿನ ವಿಜ್ಞಾನ ಹೇಳುತ್ತಿವೆ. ಇಗರ್ಜಿಯ ದೊಡ್ಡ ಘಂಟೆಯು ಈ ಸಂಬರ್ಧದಲ್ಲಿ ನೆನಪಿಗೆ ಬರುತ್ತದೆ. ಶಾಲೆಗಳ 'ಢಣ ಢಣ ಘಂಟೆ' ಯೂ ಜ್ಞಾನಾರ್ಜನೆಗೆ ಪ್ರೇರೇಪಿಸುವ ನಾದ ಹೊಮ್ಮಿಸುತ್ತಿದೆಯೇ ?

ಇವುಗಳಿಗೆ ಬಹಳ ಹತ್ತಿರವಾದ ಇನ್ನೊಂದು ನಾದ ತಂಬೂರಿಯದು. ತಾನ್ ಪೂರದ ನಿರಂತರ ನಾದವು ತಲೆಯೊಳಗೆ ಹರಿದಾಡಿ, ನರ ನಾಡಿಗಳೊಂದಿಗೆ ಮಾತನಾಡಿ ಓಲೈಸಿದಂಥ ಅನುಭವವಾಗುತ್ತದೆ. ಓಂಕಾರದಂತ ದೀರ್ಘನಾದವನ್ನು ಹೊಮ್ಮಿಸುವ ಇಂಥ ನಾದಗಳಿಗೆ ಇತರ ಗಾಯನ/ ವಾದ್ಯಗಳಿಗಿಂತಲೂ ಭಿನ್ನವಾದ , ಮೇಲುಸ್ತರದ ಅನುಭವ ಕೊಡುವ ಶಕ್ತಿ ಇದೆ. ಮಿದುಳಿನ ಮೂಲಕವಾಗಿ ಶರೀರದೊಳಗೂ ಈ ನಾದವು ಇತರ ಸಂಗೀತಕ್ಕಿಂತ ಹೆಚ್ಚು ಪ್ರಭಾವಶಾಲಿಯಾಗಿ ಕೆಲಸ ನಿರ್ವಹಿಸಬಲ್ಲದೆಂಬುದು ಈಗಾಗಲೇ ಸಿದ್ಧವಾಗಿದೆ. ಮತ್ತೆ ನಮ್ಮ ಸಂಸ್ಕೃತಿಯ ಬಗ್ಗೆ ಹೆಮ್ಮೆ ಎನಿಸುತ್ತಿದೆ. ದಿನನಿತ್ಯ ಪೂಜಾ ಕಾರ್ಯಕ್ರಮಗಳಲ್ಲಿ ಭಜನೆ,ತಾಳ,ಜಾಗಟೆ, ಶಂಖ ಧ್ವನಿಗಳಿಂದ ದೇವರನ್ನು ಪ್ರೀತಿಗೊಳಿಸಿ ತನ್ಮೂಲಕ ತಮ್ಮ ಮನಸ್ಸು - ಶರೀರಗಳನ್ನು ಪವಿತ್ರವಾಗಿಟ್ಟುಕೊಳ್ಳುತ್ತ ಆರೋಗ್ಯವಂತರಾಗಿ ನೆಮ್ಮದಿಯಿಂದ ಬಾಳಿದ ನಮ್ಮ ಹಿರಿಯರು ಧನ್ಯರಲ್ಲವೇ? ನಮ್ಮ ಹಿರಿಯರ ಅನುಸರಣೆ ಹಾಗೂ ಅನುಕರಣೆ ಮಾಡಿಯಾದರೂ ತಿಳಿದುಕೊಳ್ಳುವುದು ಅವಶ್ಯ.

ವಿವಿಧ ಶೈಲಿಯ ಸಂಗೀತಗಳಲ್ಲಿ ಶಾಸ್ತ್ರೀಯ ಸಂಗೀತವೇ ಚಿಕಿತ್ಸೆಗೆ ಹೆಚ್ಚು ಪರಿಣಾಮಕಾರಿ ಎಂದು ತಜ್ಞರ ಅಭಿಪ್ರಾಯ. ಅದರಲ್ಲಿ ಕ್ರಮಬದ್ಧವಾಗಿ ಅಳವಡಿಸಿರುವ ಸ್ವರಗಳ ಮೇಳವೋ ಒಂದಕ್ಕೊಂದು ಪೂರಕವಾದ

ಧ್ವನಿ (ರಾಗರಸ) ಹೊಮ್ಮಿಸುವ ಶುದ್ಧತೆಯೋ, ಶ್ರುತಿ-ತಾಳಬದ್ಧತೆಯೋ ಈ ಸತ್ಪರಿಣಾಮಕ್ಕೆ ಕಾರಣವಿರಬಹುದು. ಹಾಗೆಯೇ ಹಾಡುಗಾರಿಕೆಗಿಂತಲೂ ಕರಾರುವಕ್ಕಾಗಿ ಶ್ರುತಿ ಸೇರಿಸಿದ, ಸ್ವರಸ್ಥಾನಗಳ ಪರಿಶುದ್ಧತೆಯುಳ್ಳ ವಾದ್ಯ ಸಂಗೀತವು ಚಿಕಿತ್ಸೆಗೆ ಹೆಚ್ಚು ಪರಿಣಾಮಕಾರಿ ಎಂಬ ವಾದವೊಂದಿದೆ. ಭರತನಿಗೆ ಸಂಗೀತದಲ್ಲಿ ಸಪ್ತಸ್ವರಗಳ ಸ್ಥಾನವನ್ನು ನಿರ್ಧರಿಸಲು ಸಹಕರಿಸಿದ್ದು ಈ ತಂತಿಯೇ ಎಂಬೂದೂ ಗಮನಾರ್ಹ.

* ವೀಣೆಯಂ ಕೈಗಿತ್ತು ಬಾಲಕರ ವದನದೊಳ್

ವಾಣಿ ತಾಂ ನೆಲೆಸಿದಳೋ ಗಾನದೇವತೆಯ

ಮೈ

ಗಾಣಿಕೆಯೋ ಮೋಹನದ ತನಿಸರವೋ

ಸೊಗಯಿಸುವ

ಕರ್ಣಾಮೃತವೋ ಪೇಳೆನೆ.

ಎಂಬುದಾಗಿ ವರಕವಿ ಲಕ್ಷ್ಮೀಶನು ಜೈಮಿನಿ ಭಾರತದಲ್ಲಿ ವೀಣೆಯ ನಾದ ಮಾಧುರ್ಯವನ್ನು ವರ್ಣಿಸಿದ್ದಾನೆ. ಬಹುಶಃ ಅದಕ್ಕೇ ಇರಬೇಕು. ವೀಣೆ, ಸಿತಾರ್, ಗಿಟಾರ್, ವಯೋಲಿನ್ ಮೆಂಡೋಲಿನ್ ಪಿಯಾನೋ ಹಾರ್ಪ್ ಮೊದಲಾದ ತಂತಿವಾದ್ಯಗಳು ಜ್ಞಾನಾರ್ಜನೆಗೆ ಪುಷ್ಟಿ ನೀಡುವ ತೀಕ್ಷ್ಣಮತಿ ಮತ್ತು ಸ್ಮರಣಶಕ್ತಿಯನ್ನು ಹೆಚ್ಚಿಸಬಲ್ಲವೆಂಬ ನಂಬಿಕೆ ಹುಟ್ಟಿಕೊಂಡಿದೆ. (ವಿದ್ಯಾದೇವಿ ಶಾರದೆಯ ಕೈಯಲ್ಲಿ ಸಂಗೀತವಾದ್ಯವಿರುವುದೂ ಇದನ್ನೇ ಪುಷ್ಟೀಕರಿಸುತ್ತಿದೆ.)

ಸಮೂಹ ವಾದ್ಯ ಸಂಗೀತವಾದರೆ, ಅದರ ಸಂಯೋಜನೆಯು ಗೋಜಲು ಗೋಜಲವಾಗಿರದೆ, ವಾದ್ಯಗಳು ಹೆಚ್ಚು ಸಂಖ್ಯೆಯಲ್ಲಿರದೆ ಸಂಗೀತ ಮೃದುವಾಗಿದ್ದರೆ ಪರಿಣಾಮವೂ ಅಷ್ಟೇ ಸೌಮ್ಯವಾಗಿರುತ್ತದೆ. ಒಂಟಿ ವಾದ್ಯ ಸಂಗೀತವಾದರೆ ಅತ್ಯುತ್ತಮ. ಅದು ಮನಸ್ಸನ್ನು ಚುರುಕಾಗಿಟ್ಟು ಕ್ರಿಯಾತ್ಮಕತೆಯನ್ನು ಬೆಳೆಸುತ್ತದೆ.

ಪಾಶ್ಚಾತ್ಯ ಶಾಸ್ತ್ರೀಯ ಸಂಗೀತ ದಿಗ್ಗಜರಾದ ಮೊಜಾರ್ಟ್, ಹೈಡನ್, ಸಿ.ಪಿ.ಇ. ಬಾಕ್.ರೇವರ್ ಮುಂತಾದವರ ಸಂಗೀತವು ಮಾಂತ್ರಿಕ ಚಿಕಿತ್ಸಕ ಗುಣ ಹೊಂದಿರುವುದು ತಿಳಿದು ಬಂದಿದೆ. ಹಾಗೆಯೆ

ಅಡಿಟಿಪ್ಪಣಿ: * ವರಕವಿ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ .....

ಮಧ್ಯಪೂರ್ವದ ಆರ್ಕೆಸ್ಟ್ರಾಗಳು, ಕಾಂಬೋಡಿಯಾದ ಕೋರ್ಟ್ ಸಂಗೀತ ಹಾಗೂ ಭಾರತದ ಶಾಸ್ತ್ರೀಯ ಸಂಗೀತಗಳಿಗೆ ಅದ್ಭುತ ಶಕ್ತಿ ಇದೆ ಎಂಬುದನ್ನು ಇಂದು ಜಗತ್ತೇ ಒಪ್ಪಿ ತಲೆದೂಗುತ್ತಿದೆ.

ಯೋಗ ಸಾಧನೆಯ ಒಂದೊಂದೇ ಮಜಲನ್ನು ದಾಟಿ ಸಮಾಧಿ ಸ್ಥಿತಿ ತಲುಪುವಂತೆ, ಒಂದು ಒಳ್ಳೆಯ ಸಂಗೀತವನ್ನು ಕಿವಿಗೊಟ್ಟು ಕೇಳುವಷ್ಟರಲ್ಲೇ ಸಮಾಧಿ ಸ್ಥಿತಿ ತಲುಪಿ ಬಿಡಬಹುದು. ಧ್ಯಾನಕ್ಕೆ ಪೂರಕವಾಗಿದೆ ಉತ್ತರಾದಿ ಸಂಗೀತ.

ಭಾರತೀಯ ಸಂಗೀತಗಳಲ್ಲಿ ರಾಗ, ಭಾವ, ತಾಳ ನಿಖರತೆಯುಳ್ಳ, ಲವಲವಿಕೆಯಿಂದ ಸಾಗುವ ಕರ್ನಾಟಕ ಸಂಗೀತವು ನರಮಂಡಲವನ್ನು ಗುಣಾತ್ಮಕವಾಗಿ ಪ್ರಚೋದಿಸಿ ಅದರ ಮೇಲೆ ಗುರುತರವಾದ ಪರಿಣಾಮವನ್ನು ಬೀರಬಲ್ಲುದು ಎಂದು ಟ್ಯೂನ್ ಯುವರ್ ಬ್ರೈನ್ ಲೇಖಕಿ ಎಲಿಜಬೆತ್ ಮೈಲ್ಸ್ ಹೇಳುತ್ತಾರೆ.

ಶಾಸ್ತ್ರೀಯ ಸಂಗೀತದಲ್ಲಿ ವಿಭಿನ್ನರಾಗದ ಜೀವರಸವು ವಿವಿಧ ರೋಗಗಳ ಚಿಕಿತ್ಸೆಯಲ್ಲಿ ಪರಿಣಾಮಕಾರಿ ಎನಿಸಿದೆ. ಉದಾಹರಣೆಗೆ ಮೋಹನರಾಗ, ಕಾಂಬೋಜಿ, ಬೇಹಾಗ್ ಕನಾದನಾಮಕ್ರಿಯೆ, ತೋಡಿ ಹಾಗೂ ಆನಂದ ಭೈರವಿಗಳು ಏರಿದ ರಕ್ತದ ಒತ್ತಡವನ್ನು ಹಾಗೆಯೇ ಹಿಂದೋಳ, ಭೂಪಾಳಿ, ವಸಂತ, ಕಾನಡ, ನೀಲಾಂಬರಿ, ಅಸಾವೇರಿಗಳು ಮನಸ್ಸನ್ನು ತಹಬಂದಿಗೆ ತರುತ್ತವೆಂದು ತಜ್ಞರು ಹೇಳುತ್ತಾರೆ. ಮುತ್ತುಸ್ವಾಮಿ ದೀಕ್ಷಿತರ ನವಗ್ರಹ ಕೃತಿಗಳು ಉದರಶೂಲೆ ನಿವಾರಿಸುವ ಹಿನ್ನೆಲೆಯಲ್ಲಿ ಹುಟ್ಟಿಕೊಂಡವಂತೆ. ಮೂರ್ಛೆರೋಗವನ್ನು ನಿಯಂತ್ರಿಸಲು ಸಾರಂಗ ರಾಗವು ಸಹಕಾರಿ. ತೋಡಿ ಹಾಗೂ ಶಿವರಂಜಿನಿ ರಾಗಗಳು ಮಾನಸಿಕ ರೋಗಿಯ ಚಿಕಿತ್ಸೆ ಮಾಡಬಲ್ಲವೆಂದು ಸಂಗೀತ ತಜ್ಞರು ಹೇಳುತ್ತಾರೆ. ಧನಶ್ರೀ, ಮೇಘ, ಮೋಹನ, ಅಭೋಗಿ ಮುಂತಾದ ರಾಗಗಳು ಮೈ-ಮನಸ್ಸುಗಳಿಗೆ ಹೊಸ ಹುರುಪು ತುಂಬಬಲ್ಲವು.

ರಕ್ತಿರಾಗಗಳ ವಿಳಂಬಕಾಲದ ಕೃತಿಗಳು ಮನಸ್ಸನ್ನು ನವಿರಾಗಿ ಸವರಿ ಸಾಂತ್ವನಗೊಳಿಸಿದರೆ ಮಧ್ಯಮ ಕಾಲದ ಚೈತನ್ಯಪೂರ್ಣ ರಾಗಗಳು ಕುಗ್ಗಿದ ಮನಸ್ಸನ್ನು ಉತ್ಸಾಹದ ಬುಗ್ಗೆಯಾಗಿ ಪರಿವರ್ತಿಸಬಲ್ಲವು.

ಭಜನ್, ದೇಶಭಕ್ತಿಗೀತೆಗಳು, ಭಾವಗೀತೆಗಳ ರಾಗ ಸಂಯೋಜನೆಯು ಅವುಗಳ ಸಾಹಿತ್ಯಕ್ಕನುಗುಣವಾದ

ರಾಗರಸ ಹೊಮ್ಮಿಸುವಂತಿದ್ದು, ನಮ್ಮ ಭಾವನೆಯನ್ನು ಬಡಿದೆಬ್ಬಿಸುವ /ಶಾಂತಗೊಳಿಸುವ ವಿಭಿನ್ನ ಸಾಮರ್ಥ್ಯ ಹೊಂದಿರುವುದು ಸಾಮಾನ್ಯರಿಗೂ ಅನುಭವವೇದ್ಯ. ಹಾಗೆಯೇ ಕಾಲಕ್ಕೆ ಅನುಗುಣವಾಗಿ ಸುಪ್ರಭಾತ (ಲವಲವಿಕೆ ಮೂಡಿಸುವ), ಪ್ರಾರ್ಥನೆ (ಭಕ್ತಿರಸದಿಂದ ಏಕಾಗ್ರತೆ- ಚೈತನ್ಯ ತುಂಬುವ), ಜೋಗುಳದ ರಾಗಗಳ (ನಿದ್ದೆಗೆ ಪ್ರೇರೇಪಿಸುವ) ವ್ಯತ್ಯಾಸವನ್ನು ನಿರ್ಲಕ್ಷಿಸುವಂತಿಲ್ಲ.

ಸಂಗೀತ ಚಿಕಿತ್ಸೆ ಪಡೆಯಲು ಸಂಗೀತ ಜ್ಞಾನ ಇರಬೇಕೇ ?

ಖಂಡಿತವಾಗಿಯೂ ಇಲ್ಲ. ಸಂಗೀತ ಚಿಕಿತ್ಸೆಯು ರೋಗಿಯ ಮೇಲೆ ಪರಿಣಾಮ ಬೀರಲು ಕೇಳುವವನಿಗೆ ಸಂಗೀತ ಜ್ಞಾನವಿರಬೇಕೆಂದೇನೂ ಇಲ್ಲ. ನಮಗೆ ತಿಳಿದಿರಲಿ ಬಿಡಲಿ, ಹೊಮ್ಮುವ ನಾದವು ತಾನು ಮಾಡುವ ಎಲ್ಲ ಕೆಲಸವನ್ನೂ ಚಾಚೂ ತಪ್ಪದೆ ಮಾಡುತ್ತದೆ. ನಮಗೆ ಸಂಗೀತ ಜ್ಞಾನವಿದ್ದರೆ ಪ್ರಾಯಃ ಹೆಚ್ಚು ಚೆನ್ನಾಗಿ ಆಸ್ವಾದಿಸಬಲ್ಲಿರಿ. ಅಥವಾ ಇದಕ್ಕೆ ಅಪಮಾನವಾಗಿ, ಆ ಪಾಪದ ಸಂಗೀತಗಾರ ನಿಮ್ಮ ಟೀಕೆಗೊಳಗಾಗುತ್ತ, ಚಿಕಿತ್ಸೆ ಹಿಂದುಳಿಯಲೂ ಬಹುದು !

ನಮ್ಮ ಪೂರ್ವಿಕರು ಮಂತ್ರೋಚ್ಚಾರಣೆಯ ಮೂಲಕ ಭಗವಂತನನ್ನು ಮುಟ್ಟಬಲ್ಲವರಾಗಿದ್ದರು. ಹೋಮ-ಹವನಾದಿಗಳಲ್ಲಿ ಆಹುತಿ ನೀಡುವಾಗ ಅವರು ಉಚ್ಚರಿಸುವ ಮಂತ್ರವು ಆಯಾ ದೇವತೆಗಳನ್ನು ರಿಜಿಸ್ಟರ್ಡ್ ಟಪಾಲಿನಂತೆ ನೇರವಾಗಿ, ಖುದ್ದಾಗಿ ತಲುಪುತ್ತಿತ್ತು. ತನ್ಮೂಲಕ ಅವರಲ್ಲಿ ದೈವಕೃಪೆಯೆಂಬ ಹೆಸರಿನ ವಿಶಿಷ್ಟ ಶಕ್ತಿ ಸಂಚಯವಾಗುತ್ತಿತ್ತು. ನಾದ + ಲಯ+ ಶಬ್ದಾಲಂಕಾರಗಳಿಂದ ತುಂಬಿದ ಮಂತ್ರಾರ್ಥಕ್ಕೆ ಸರ್ವಶಕ್ತನಾದ ಭಗವಂತನನ್ನೇ ಸಂಪ್ರೀತಗೊಳಿಸುವ ಶಕ್ತಿ ಇದ್ದರೆ, ಅಂಥ ನಾದವು ನಮ್ಮ ನರನಾಡಿಗಳನ್ನು ತಲುಪಿ, ಅವುಗಳನ್ನು ಜಾಗೃತಗೊಳಿಸಿ, ಸಾತ್ವಿಕ ಪ್ರಚೋದನೆ ನೀಡುವುದು ವಿಶೇಷವೇನಲ್ಲ ಎನಿಸುತ್ತದೆ.

ನಮ್ಮ ಪುರಾತನ ಆಯುರ್ವೇದ ವೈದ್ಯಕೀಯ ಪದ್ಧತಿಯಲ್ಲಿ ಹಾಸುಹೊಕ್ಕಾಗಿದ್ದ ನಾದ ಚಿಕಿತ್ಸೆಯು ಈಗ ಮತ್ತೆ ಬೆಳಕಿಗೆ ಬಂದಿದೆ. ಸಂಗೀತ ಪುರಾತನವಾದರೂ ಅದನ್ನು ಧ್ವನಿಮುದ್ರಣಗೊಳಿಸಿ, ಬೇಕೆಂದಾಗ, ಬೇಕಿದ್ದಲ್ಲಿಗೆ ಕೊಂಡೊಯ್ದು ಕೇಳುವ ಸೌಲಭ್ಯ ಈಗ ಇದೆ. ಸುಲಭದಲ್ಲಿ ಸೌಖ್ಯ ನೀಡುವ ಈ ಸಾತ್ವಿಕ ಚಿಕಿತ್ಸೆಯ ಅಧ್ಯಯನ, ಪ್ರಯೋಜನ ಹೆಚ್ಚು ಹೆಚ್ಚಾಗಿ ಆಗಬೇಕಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಗೀತಚಿಕಿತ್ಸೆಯ ಅಲೆ

ಉತ್ತರಕನ್ನಡ ಜಿಲ್ಲೆಯ ಅನೇಕ ಕಡೆ ಈಗ ಸಂಗೀತ ಚಿಕಿತ್ಸೆಯ ಚರ್ಚೆ ಕೇಳಿಬರುತ್ತಿದೆ. ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ಕಾಸರಕೋಡಿನ ಸ್ನೇಹಕುಂಜದ ವಿವೇಕಾನಂದ ಆಸ್ಪತ್ರೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಸಂಗೀತ ಉತ್ಪತ್ತಿ ನಡೆಯುತ್ತಿದೆ. ದಿ. ಡಾಃ ಕುಸುಮ ಸೊರಬರು ಇಲ್ಲಿ ಕಲಿಯುವ ವೈದ್ಯಕೀಯ ವಿದ್ಯಾರ್ಥಿಗಳು ಅಂಗವಿಕಲ ಮಕ್ಕಳು ಹಾಗೂ ಸಾರ್ವಜನಿಕವಾಗಿಯೂ ಸಂಗೀತ ಕಲಿಯುವ ವ್ಯವಸ್ಥೆ ಮಾಡಿದ್ದಾರೆ. ಶ್ರೀ ಕೃಷ್ಣಮೂರ್ತಿ ಭಟ್ಟರನ್ನು ಡಾಃ ಕುಸುಮ ಸೊರಬರು ೧೯೯೬ ರಿಂದ ಸಂಗೀತಪಾಠ ಹಾಗೂ ಚಿಕಿತ್ಸೆಗೆ ನೇಮಿಸಿದ್ದಾರೆ. ಅನೇಕ ಅಂಗವಿಕಲ ಹಾಗೂ ಬುದ್ಧಿಮಾಂದ್ಯ ಮಕ್ಕಳೂ ಸಂಗೀತ ಚಿಕಿತ್ಸೆಗೆ ಹಾಗೂ ಕಲಿಕೆಗೆ ಒಳಗಾಗಿ ತಮ್ಮ ಕಾಯಿಲೆಯಿಂದ ಗುಣಮುಖರಾಗುತ್ತಿರುವುದು ಅಧ್ಯಯನದಿಂದ ವ್ಯಕ್ತವಾಗಿದೆ. ಸಂಗೀತಚಿಕಿತ್ಸೆಯನ್ನು ಗಂಭೀರವಾಗಿ ಸ್ವೀಕರಿಸಿ ಅದನ್ನು ಪ್ರಚಾರ ಹಾಗೂ ಪ್ರಸಾರ ಮಾಡುವಲ್ಲಿ ಜಿಲ್ಲೆಯಲ್ಲಿನ ಕಾಸರಕೋಡಿನಂತಹ ಸಂಘಸಂಸ್ಥೆಗಳು ಮುಂದಾಗಬೇಕು. ಜಿಲ್ಲೆಯ ಅನೇಕ ಕಡೆ ಸಂಗೀತಚಿಕಿತ್ಸೆಯ ಮಹತ್ವ ತಿಳಿದು ಸಂಗೀತಚಿಕಿತ್ಸಾಲಯ ಪ್ರಾರಂಭಿಸುವ ಚರ್ಚೆ ನಡೆಯುತ್ತಿದೆ. ಉತ್ತಮ ಆರೋಗ್ಯ, ನೆಮ್ಮದಿಗಳನ್ನು ಕಾಯ್ದುಕೊಂಡು ಬರಲು ಇಂತಹ ಸಂಗೀತ ಚಿಕಿತ್ಸಾಲಯಗಳು ಬೆಳೆದು ಬರಬೇಕಾಗಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ ಸಂಗೀತ ಚಿಕಿತ್ಸೆಯನ್ನು ಅಭಿವೃದ್ಧಿಪಡಿಸಲು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಂಗೀತದ ಬಳಕೆ ಗಣನೀಯವಾಗಿ ಕಂಡುಬಂದಿರುವುದು ಶುಭಸೂಚನೆ.

ದೈನಂದಿನ ಟಾನಿಕ್ ಆಗಿ ಸಂಗೀತ

ನಾವು ದಿನವೂ ಕೊಂಚ ಸಮಯವನ್ನು ಸಂಗೀತಕ್ಕಾಗಿ ಮೀಸಲಿಡುವುದು ಹಲವು ರೀತಿಯಲ್ಲಿ ಉತ್ತಮ ಅಭ್ಯಾಸ ಆಗಬಲ್ಲದು. ನಸುಕಿನಲ್ಲೆದ್ದು ಕೆಲಸಕ್ಕೆ ತೊಡಗುವ ಮುನ್ನ ಸಂಗೀತ ಕೇಳುವುದರಿಂದ ಮನಸ್ಸು ಪ್ರಫುಲ್ಲವಾಗಿದ್ದು ಆ ದಿನದ ಕೆಲಸಕಾರ್ಯಗಳು ಸಲೀಸಾಗಿ ನಡೆದುಕೊಂಡು ಹೋಗುತ್ತವೆ. ದಿನವಿಡೀ ದುಡಿದು ದಣಿದ ದೇಹ ಮನಸ್ಸುಗಳಿಗೆ ರಾತ್ರಿ ಪುನಃ ಅರ್ಧ ತಾಸು ಕೇಳುವ ಸಂಗೀತ ಒಂದು ರಿಯಲ್ ರಿಫ್ರೆಶ್‌ಮೆಂಟ್.

ಟಿಪ್ಪಣೀ: ಲೇಖನಕೃಪೆ ಮನೋರಮಾ ಹೆಜಮಾಡಿ

ದಿನವೂ ಸಂಗೀತವನ್ನು ಹಾಡುವ ಇಲ್ಲವೇ ನುಡಿಸುವ ಅಥವಾ ಕೊನೆಯಪಕ್ಷ ಕೇಳುವ ಅಭ್ಯಾಸ ಮಾಡುವದರಿಂದ

- ನಮ್ಮ ಮನಸ್ಸು ನಿರಾಳವಾಗುತ್ತದೆ
- ಸ್ಮರಣ ಶಕ್ತಿ ಬೆಳೆಯುತ್ತದೆ.
- ಬುದ್ಧಿ ಚುರುಕಾಗುತ್ತದೆ.
- ನಾಲಿಗೆ ನುಡಿ ಸ್ಪಷ್ಟವಾಗುತ್ತದೆ.
- ಕ್ರಿಯಾಶೀಲತೆ ಹೆಚ್ಚುತ್ತದೆ.
- ರೋಗ ನಿರೋಧಕಶಕ್ತಿ ಬೆಳೆಯುತ್ತದೆ.
- ನಂಜುಕಾರಕ ಹಾರ್ಮೋನ್‌ಗಳು ನಾಶಹೊಂದುತ್ತವೆ.
- ಸಂಗೀತ ಚಟವಾಗಿ ಬೆಳೆದೀತೆಂಬ ಭಯಬೇಡ ಬದಲಾಗಿ ಚಟಗಳನ್ನು ಓಡಿಸುವ ಟಾನಿಕ್ ಸಂಗೀತದಲ್ಲಿದೆ.
- ಇವೆಲ್ಲ ಕಾರಣಗಳಿಂದ ಆಯಸ್ಸು ವೃದ್ಧಿಯಾಗುತ್ತದೆ.

ಇಷ್ಟೆಲ್ಲ ಅನುಕೂಲವಿರುವ ಸುಮಧುರ ರೋಗಹರ ಸಂಗೀತಚಿಕಿತ್ಸೆಯನ್ನು ಬೆಳೆಸುವ, ಉಳಿಸುವ ಕಾರ್ಯ ಚುರುಕಾಗಿ ಆಗಬೇಕಾಗಿದೆ.

ಗ್ರಂಥ ಋಣ

- ಇಂಡಿಯನ್ ಆರ್ಟ್ಸ್ ಇನ್ ರಿಲೇಶನ್ ಟು ಕಲ್ಚರ್ - ಭೂಪೇಂದ್ರನಾಥ್ ದತ್
- ಭಾರತೀಯ ಕಾವ್ಯ ಮಿಮಾಂಸೆ - ತೀ೯ನಂ. ಶ್ರೀ
- ದ ಮ್ಯುಸಿಕಲ್ ಹೆರಿಟೇಜ್ ಆಫ್ ಇಂಡಿಯಾ- ಎಂ.ಆರ್. ಗೌತಮ
- ದಿ ಹಿಂದೂ ವಿವ್ಯೂ ಆಪ್ ಆರ್ಟ್ಸ್ - ಮುಲ್ಕರಾಜ್ ಆನಂದ
- ಜ್ಞಾನಗಂಗೋತ್ರಿ ಭಾಗ ೫ ಕಲೆ , ಸಾಹಿತ್ಯ ಸಂಪುಟ
- ಸಂಗೀತಶಾಸ್ತ್ರ ದರ್ಪಣ ಪ್ರೊ. ಎ.ಯು. ಪಾಟೀಲ
- ಭಾರತೀಯ ಸಂಗೀತ ಚರಿತ್ರೆ - ಡಾಃ ಬಿ.ಡಿ. ಪಾಠಕ್
- ಹಿಂದುಸ್ಥಾನಿ ಸಂಗೀತಗಾರರು - ಪ್ರೊ. ಸಿದ್ದರಾಮಯ್ಯ ಮಠಪತಿ
- ಕವಳಪೇಳಿ - ಡಾಃ ಎನ್. ಆರ್. ನಾಯಕ್
- ಭಾರತೀಯ ಕಲೆ - ಅ.ನ . ಕೃಷ್ಣರಾಯ್
- ಫೈನ್ ಆರ್ಟ್ಸ್ ಇನ್ ಏನ್ಷಿಯಂಟ್ ಇಂಡಿಯಾ - ಅನಿಲ್ ಬರನ್ ಗಂಗೋಲಿ
- ಕಂಪರೇಟಿವ್ ಸ್ಟಡಿ ಆಫ್ ದಿ ಲೀಡಿಂಗ್ ಮ್ಯೂಸಿಕ್ ಸಿಸ್ಟಮ್ ಆಫ್ ದ 15^{th},16^{th}, 17^{th}, 18^{th}, ಸೆಂಚೂರಿ - ಪಂ. ವಿ. ಎನ್. ಭಾತ್ಖಾಂಡೆ
- ರಾಗಾಸ್ ಎಂಡ್ ರಾಗಿಣೀಸ್ ಸನ್ಯಾಲ್ ಅಮಿಯಾನಾತ್
- ಉತ್ತರಕನ್ನಡ ಜಿಲ್ಲೆಯ ಜಾನಪದ ಕಲೆಗಳು- ಗೋಪಾಲಕೃಷ್ಣ ಪಿ. ನಾಯ್ಕ
- ಸುಮಧುರ ರೋಗಹರ ಸಂಗೀತ ಚಿಕಿತ್ಸೆ - ತರಂಗ ೨೬ ಅಗಸ್ಟ್ ೧೯೯೯ - ಲೇ: ಮನೋರಮಾ ಹೆಜಮಾಡಿ